ನಿಮ್ಮ
ಮುದ್ರಣ ಕೆಲಸಗಳನ್ನು
"ಕೊಡಗು"
ಪ್ರೆಸ್ಸಿನಲ್ಲೇ
ಮುದ್ರಿಸಿರಿ.

Reg No. M. 1550

ಕೊಡಗು

ಪ್ರತಿಶುಕ್ರವಾರ ಪ್ರಕಟಿಸಲ್ಪಡುವುದು.

ಸಂಪಾದಕ:— ಪಿ. ಐ. ಬೆಳ್ಯಪ್ಪ.

ತಾ. ೨೨—೭—೧೯೩೮.

ವಾರ್ಷಿಕ ಚಂದಾ ರೂ. ೩-೮-೦

ಸಂಪುಟ ೧೮] [ಸಂಚಿಕೆ ೮

THE CANARA BANKING CORPORATION, UDIPI, Ltd.

(Incorporated in British India.)

Estd. 1906.

BRANCHES:

1. Byndoor,
2. Coondapoor.
3. Erode,
4. Madras,
5. Mangalore, Car Street,
6. Mangalore, Bunder,
7. Malpe,
8. Mercara,
9. Mettupalayam,
10. Mysore,
11. Sagar,
12. Saklaspur,
13. Salem,
14. Shimoga,
15. Shirva,
16. Tellicherry,
17. Thirthahalli,
18. Virarajendrapet,
19. Vellore,
20. Udipi.

TOTAL RESOURCES EXCEED Rs. 62 LAKHS.

Udipi,
20th June 1938.

52-33

V. R. Kamath, B. A., LL. B.,
Ag. Manager.

ಧನ್ವಂತರಿ ಸಹಾಯ ಔಷಧಾಲಯ.

ವೀರಾಜಪೇಟೆ, (ದ. ಕೊಡಗು).

ಆಯುರ್ವೇದ ಶಾಸ್ತ್ರ ಪ್ರಕಾರ ತಯಾರಿಸಲ್ಪಟ್ಟ ಎಲ್ಲಾ ಔಷಧಗಳು ನ್ಯಾಯವಾದ ಕ್ರಯಕ್ಕೆ ವಿಕ್ರಯಿಸಲ್ಪಡುತ್ತೆ. ನಮ್ಮ ವೈದ್ಯ ಶಾಲೆಯು ರೋಗಿಗಳನ್ನು ಪರೀಕ್ಷೆ ಮಾಡಿ ಔಷಧಿ ಕೊಟ್ಟು ಕೆಲವು ಮದರಾಸಿನಿಂದ ಸರ್ಟಿಫಿಕೇಟ್ ಪಡೆದಿರುತ್ತದೆ. ದೂರದಲ್ಲಿರುವ ಮಹನೀಯರು ಅವರ ಕಾಯಿಲೆಯ ವಿವರವನ್ನು ತಿಳಿಸಿದಲ್ಲಿ ತಕ್ಕ ಔಷಧಿ ಕಳುಹಿಸಿ ಕೊಡಲಾಗುತ್ತೆ. 12 ವರ್ಷದ ಕಾಲ ಯಿಂದ ವೈದ್ಯ ಶಾಲೆಯು ಪ್ರಚಾರದಲ್ಲಿರುತ್ತೆ.

ಜ್ವರ ಸಂಹಾರ ಸುದರ್ಶನ.

ಈ ಔಷಧಿಯು ತ್ರಿ ದೋಷ ಕೋಪದಿಂದುಂಟಾಗುವ ಸರ್ವಜ್ವರವನ್ನು ಗುಣಪಡಿಸುತ್ತೆ. 13 ಪ್ರಕಾರದ ಸನ್ನಿಯನ್ನೂ, ಶೀತಜ್ವರ, ಮೈ ಆಲಸ್ಯ, ತಲೆನೋವು, ಬಾಯಾರಿಕೆ, ಉಬ್ಬಸ, ಕೆಮ್ಮಲು, ಪಾಂಡುರೋಗ, ಹೃದ್ರೋಗ, ಕಾಮಾಲೆ, ಜಿನ್ನೆ ಉಟು, ಸೊಂಟ, ಮಂಡಿ, ಪಕ್ಕೆಗಳು—ಈ ಭಾಗಗಳ ನೋವನ್ನು ಗುಣಪಡಿಸುವುದು.

ಉಪಯೋಗದ ಕ್ರಮ:—ದೇಹ ಪ್ರಕೃತಿಯನ್ನನುಸರಿಸಿ ಒಂದರಿಂದ ಎರಡು ಡೋಸುಗಳ ವರೆಗೆ ಒಮ್ಮೆ ತೆಗೆದುಕೊಳ್ಳುವದು. 8 ಡೋಸುಗಳ ಕುಪ್ಪಿಗೆ ರೂ. 1-0-0. ಟಪ್ಪಾಲು ಹಾಸಲು ಪ್ರತ್ಯೇಕ.

4

ಪಿ. ಕೆಚ್. ರಾಮುಣ್ಣಿ ವೈದ್ಯರ್.

ಮಾರಾಟಕ್ಕೆ ತಯಾರಾಗಿವೆ.

ಸಹಕಾರ ಸಂಘಗಳ ಮತ್ತು ಪದಸ ಭಂಡಾರಗಳಲ್ಲಿರಬೇಕಾದ ರಿಜಿಸ್ಟರುಗಳು ಅಂದರೆ—**ಜಮಾ, ಖರ್ಚು, ಸಾಲ ಮೂಲದ** ರಿಜಿಸ್ಟರು, **ಸಾಲದ** ರಿಜಿಸ್ಟರು, ಮೆಂಬರು ರಿಜಿಸ್ಟರು. ಶೇರು ರಿಜಿಸ್ಟರು, **ಡಿಪಾಜಿಟ್ಟು** ರಿಜಿಸ್ಟರು, **ಕೋರ್ಟು ಖರ್ಚು, ಆರ್ಬಿಟ್ರೇಶನ್** ರಿಜಿಸ್ಟರುಗಳೂ ಅಲ್ಲದೆ ಸಂಘದ ಪ್ರತಿಯೊಬ್ಬ ಮೆಂಬರನಲ್ಲಿಯೂ ಇರಬೇಕಾದ ಸಂಘಗಳ ಕಾನೂನು ಪ್ರಕಾರ ತಯಾರಿಸಲ್ಪಟ್ಟಿರುವ ಪಾಸು ಪುಸ್ತಕಗಳೂ, ಬೈಲಾ ಪುಸ್ತಕಗಳೂ, ರಶೀತಿ ಪುಸ್ತಕಗಳೂ, ಓಚರ್ ಪುಸ್ತಕಗಳೂ ಅಲ್ಲದೆ ಜಮ್ಮಮಂಜೂರಾತಿ, ಕುಟುಂಬದ ಒಪ್ಪಿಗೆ, ಸಾಲದ ಅರ್ಜಿ, ಪದಸಭಂಡಾರದ ಖರಾರು, ಸ್ಟೋರ್ ಕೀಪರ್ ಬಾಂಡು ಮತ್ತು ದಾನಾ ಫಾರಮುಗಳೂ ಸುಲಭ ದರದಲ್ಲಿ ದೊರೆಯುತ್ತವೆ. ಖುದ್ದು ಬರಲಿಕ್ಕೆ ಸಾಧ್ಯವಿಲ್ಲದವರು ಆರ್ಡರು ಕೊಟ್ಟಲ್ಲಿ ವಿ. ಪಿ. ಮೂಲಕ ಕಳುಹಿಸಲಾಗುವುದು. ಹೆಚ್ಚಿನ ವಿಷಯಗಳಿಗೆ ಕೆಳಗಿನ ಅಡ್ರೆಸಿಗೆ ಬರೆಯಿರಿ.

ಮೇನೇಜರ್,
'ಕೊಡಗು' ಲಿಮಿಟೆಡ್,
ಮಡಿಕೇರಿ.

ವೈದ್ಯಶಾಲಾ, ನಂಜನಗೂಡು.

ದಕ್ಷಿಣ ಭಾರತ

ಸಿದ್ಧ ಆಯುರ್ವೇದೀಯೌಷಧ [illegible]

ಜೀವರತ್ನಗಳು

ಶ್ರೀಕರ ಕಸ್ತೂರಿ ಮಾತ್ರೆ.

ಶೀಘ್ರ ಗುಣದಾಯಕವುಳ್ಳ ಈ ಮಾತ್ರೆಗಳು ನಿತ್ಯಾರೋಗ್ಯ ಕಾಪಾಡುವುದಕ್ಕೂ, ಕೆಮ್ಮು, ನೆಗಡಿ, ಜ್ವರ, ಸನ್ನಿ ರೋಗಗಳಿಗೂ ಅದ್ಭುತ ಬೆಲೆ 0 4 0, 0 2 0

ಶ್ರೀಕರ ಬಾಲಸಂಜೀವಿನಿ

ಮಕ್ಕಳ ಸಂಬಂಧೀ, ಅಜೀರ್ಣ, ವಾಯು. [illegible] 0 1 0

ನಮ್ಮ ರಿಜಿಸ್ಟರ್ಡ್

ನಂಜನಗೂಡು ಹಲ್ಲಿನ ಪುಡಿಯನ್ನು

ಉಪಯೋಗಿಸಿ ಅನುಕರಣಗಳಿಗೆ ಮೋಸಹೋಗಬೇಡಿರಿ.

ಜ್ವರಕೇಸರಿ

ಎಲ್ಲಾ ವಿಧವಾದ ಜ್ವರಗಳನ್ನು ಜಾಗ್ರತೆ ಗುಣಪಡಿಸುವ ಅದ್ಭುತ ಶಕ್ತಿಯುಳ್ಳ ಮಾತ್ರೆ. ಬೆಲೆ 0 8-0, 0-4-0.

ಸುಕುಮಾರತೈಲ

5

ಶಿಲು ಹೆಚ್ಚಿದ ಹಾಗೆಲ್ಲಾ ಉಂಟಾಗುವ ತಲೆ ನೋವು, ಒತ್ತಡೆ ನೋವು, ತಲೆ ಕ ಮುಂತಾದ ಸಮಸ್ತ ನೇತ್ರ, ಶಿರೋವ್ಯಾಧಿಗಳಿಗೂ ಸಂಜೀವನ. ಬೆಲೆ 1 0 0

ಪ್ರೊಪ್ರೈಟರ್-ಭಿಷಗ್ರತ್ನ ಆಯುರ್ವೇದ ವಿದ್ವಾನ್, ಬಿ. ವಿ. ಪಂಡಿತ್.

ಉತ್ತಮ ಸಮಾಚಾರ ಜ್ಞಾನಭಂಡಾರ!

ವ್ಯಾಪಾರಸ್ಥರೇ

ನಿಮ್ಮ ಸಾಮಾನುಗಳಿಗೆ ಗಿರಾಕಿ ಬೇಕೇ?

ಹಾಗಾದರೆ

ಕೊಡಗು ಜಿಲ್ಲೆಯ ಪ್ರತಿ ಹಳ್ಳಿಗಳಲ್ಲಿಯೂ ಮತ್ತು ಕರ್ನಾಟಕದ ಪ್ರಾಂತ್ಯಗಳಲ್ಲಿಯೂ ಪ್ರಚಾರವಿರುವ

"ಕೊಡಗು"

ವಾರ ಪತ್ರಿಕೆಯಲ್ಲಿ ಜಾಹೀರಾತುಗಳನ್ನು ಕೊಟ್ಟು ಪ್ರಯೋಜನ ಪಡೆಯಿರಿ.

ಜಾಹಿರಾತಿನ ದರಗಳು.

ಕಾಲ.	1 ಪುಟಕ್ಕೆ.	1 ಕಲಮಿಗೆ.	½ ಕಲಮಿಗೆ.	¼ ಕಲಮಿಗೆ
1 ವರ್ಷಕ್ಕೆ -	ರೂ. 180	ರೂ. 55.	ರೂ. 35	ರೂ. 22
6 ತಿಂಗಳಿಗೆ—	„ 100.	„ 35.	„ 22.	„ 13
3 ತಿಂಗಳಿಗೆ	„ 60	„ 20.	„ 13.	„ 8.
1 ತಿಂಗಳಿಗೆ—	„ 25.	„ 10.	„ 6.	„ 4.

ನಿರ್ಭಯವಾದ ಟೀಕೆ ಟಿಪ್ಪಣಿಗಳು— ಉದಾತ್ತವಾದ ಲೇಖನಗಳು— ವಿವಿಧ ಸಮಾಚಾರ ಸಂಗ್ರಹಗಳು ಇರುವ

'ಕೊಡಗು' ವಾರ ಪತ್ರಿಕೆಗೆ

ನೀವೇಕೆ ಚಂದಾದಾರರಾಗಬಾರದು?

ನಿಮ್ಮ ಕರ್ತವ್ಯ.

ಪ್ರತಿಯೊಬ್ಬ ಮನುಷ್ಯನು ವಿವಾಹಿತನಿರಲಿ, ಅವಿವಾಹಿತನಿರಲಿ, ಧನವಂತನಿರಲಿ, ಧನಹೀನನಿರಲಿ, ಆತನ ರಕ್ಷಣೆಗೊಳಪಟ್ಟ ಕೆಲವರಿದ್ದೇ ಇರುವರು. ಈತನ ಮರಣಾನಂತರವೂ ಅಂಥವರು ಸುಖಿಗಳಾಗಿರುವಂತೆ ದಾರಿ ತೋರಿಸಿ ಕೊಡುವದು ಇವನ ಆದ್ಯ ಕರ್ತವ್ಯ.

ಇಂಥಾ ನಿಮ್ಮ ಕರ್ತವ್ಯ ಸಾಧನೆಗೆ "ಓರಿಯಂಟಲ್" ಸಹಕಾರಿ.



(ಓರಿಯಂಟಲ್ ಬಿಲ್ಡಿಂಗ್ಸ್, ಸೌತ್ ಪರೇಡ್ ಬೆಂಗಳೂರು)

61 ವರ್ಷಗಳಿಂದಲೂ "ಓರಿಯಂಟಲ್ ಪೋಲಿಸಿಗಳು" ಸಾವಿರಾರು ಅನಾಥ ಕುಟುಂಬಗಳನ್ನು ಅವುಗಳ ಕಷ್ಟದಿಂದ ಉದ್ಧರಿಸಿವೆ.

ಕ್ರಮೇಣ ಪ್ರತಿಯೊಬ್ಬನೂ ವಿಮಾ ಮಾಡಲಶಕ್ತನಾಗಬಹುದಾದ್ದರಿಂದ ನಿಮ್ಮ ಕರ್ತವ್ಯವನ್ನು ಮಾಡಲು ತಪ್ಪಬೇಡಿರಿ.

"ಓರಿಯಂಟಲ್"ನಲ್ಲಿ ವಿಮಾ ಮಾಡಿ, ನಿಮ್ಮ ರಕ್ಷಣದಲ್ಲಿರುವವರ ಜೀವನವನ್ನು ಭದ್ರಪಡಿಸಿರಿ.

ಹೆಚ್ಚಿನ ಮಾಹಿತಿಗೆ ಕೆಳಗಿನ ಅಡ್ರೆಸ್ಸಿಗೆ ಬರೆಯಿರಿ—

ಓರಿಯಂಟಲ್

ಸರಕಾರದ ಭದ್ರತೆಯುಳ್ಳ ಜೀವ ವಿಮೆ ಕಂಪೆನಿ.

ಸ್ಥಾಪಿತವಾದ್ದು 1874.] ಹೆಡ್ ಆಫೀಸು—ಬೊಂಬಾಯಿ

ಪ್ರತಿನಿಧಿಗಳೂ, ಶಾಖೆಗಳೂ ಇಂಡಿಯಾದಲ್ಲೆಲ್ಲಾ ಇರುವರು.

ಮೆ. ಎಂ. ಹೆಚ್. ಕೃಷ್ಣಮೂರ್ತಿ, (ಇನ್ಸ್‌ಪೆಕ್ಟರ್, ಮೈಸೂರು.)

ಮೆ. ಎಲ್. ಎಫ್. ಸಿ. ವಾಸ್, (ಇನ್ಸ್‌ಪೆಕ್ಟರ್, ಮಡಿಕೇರಿ.)

ಮೆ. ಬಿ. ಶೇಷಾದ್ರಿ, ಬಿ. ಇನ್ಸ್‌ಪೆಕ್ಟರು, ಶಿವಮೊಗ್ಗಾ.

12-23

Printed & Published by P. I. Belliappa, at 'Kodagu' Press Mercara for 'Kodagu' Ltd.

ಇಂಡಿಯೊದ ಪ್ರಮುಖ ಟಾನಿಕ್

ಆತಂಕನಿಗ್ರಹ

— ಮಾತ್ರೆಗಳು —

ಮಲಬದ್ಧತೆ, ಮನೋದೌರ್ಬಲ್ಯ, ನರಗಳ ಹೀನತೆ ಇವನ್ನು ಗುಣಪಡಿಸಿ, ಆರೋಗ್ಯಕಾರಿಯಾದ ಹಸಿವು ಹುಟ್ಟಿಸಿ ರಕ್ತಶುದ್ಧಿ ಮಾಡುತ್ತದೆ.

ಈ ಮಾತ್ರೆಗಳು ಉತ್ತಮ ಬಲವರ್ಧಕವಾಗಿರುತ್ತವೆ. ಲಕ್ಷಾಂತರ ಜನರಿದನ್ನು ಉಪಯೋಗಿಸುತ್ತಿರುವರು. ಒಂದು ಡಬ್ಬಿ ಉಪಯೋಗಿಸಿ ನೋಡಿ. ಮೂವತ್ತೆರಡು ಮಾತ್ರೆಗಳ ಡಬ್ಬಿ ಒಂದಕ್ಕೆ ಒಂದು ರೂಪಾಯಿ ಮಾತ್ರ.

ಹೆಚ್ಚಿನ ವಿವರಕ್ಕೆ ಧರ್ಮಾರ್ಥ ಹಾಗೂ ಟಪ್ಪಾಲು ಹಾಸಲು ವಿನಹ ಕಳುಹಿಸಲ್ಪಡುವ ನಮ್ಮ

ಕಾಮಶಾಸ್ತ್ರವನ್ನೋದಿರಿ

ಆತಂಕ ನಿಗ್ರಹ ಫಾರ್ಮಸಿ, ಚಿಕ್ಕಪೇಟೆ ಚೌಕ,-

52-5 ಬೆಂಗಳೂರು ಸಿಟಿ.

ಅನೇಕ ವರ್ಷಗಳಿಂದ ಅನುಭವಪಟ್ಟು ಪ್ರಖ್ಯಾತಿ ಹೊಂದಿದ

ಕರ್ಕೆ ಕಂಪನಿ

ಸುಪ್ರಸಿದ್ಧ ಜ್ವರದ ಗುಳಿಗೆ

ಇದು ಛಳಿಜ್ವರ, ಚಾತುರ್ಥಿ ಜ್ವರ, ವಿಷಮ ದಿನ ಬರುವ ಜ್ವರ, ಮಲೇರಿಯಾ ಜ್ವರ ಇತ್ಯಾದಿ ನಾನಾತರದ ಜ್ವರಗಳ ಮೇಲೆ ತಕ್ಷಣವೇ ಗುಣ ಸಂಜೀವಿನಿಯಂತಿದೆ! ಬಾಟ್ಲಿಗೆ 1 ರೂ. 4 ಬಾಟ್ಲಿಗೆ 3 ರೂ. 12 ಬಾಟ್ಲಿಗೆ 8 ರೂ. ವಿ. ಪಿ. ಖರ್ಚು ಬೇರೆ

ಗಣೇಶ. ರಾಮಚಂದ್ರ ಕರ್ಕೆ.
ಮತ್ತು ಕಂಪನಿ,

(52-32) ಗಿರಗಾಂವ, ಮುಂಬಯಿ ೪.

ನೋಟೀಸು.

ಈ ಕೆಳಗಿನ ಮಹನೀಯರು 'ಕೊಡಗು' ಪತ್ರಿಕೆಯ ಚಂದಾ ಹಣವನ್ನು ವಸೂಲು ಮಾಡಲು ಒಪ್ಪಿಕೊಂಡದ್ದರಿಂದ ಅವರನ್ನು ಏಜೆಂಟರುಗಳಾಗಿ ನೇಮಿಸಿ ಅವರಿಗೆ ನಮ್ಮ ರಶೀತಿ ಪುಸ್ತಕಗಳು ಕೊಡಲಾಗಿದೆ. ಕೆಳಗಿನ ಸಬ್ ಏಜೆಂಟರುಗಳಿಗೆ ಏಜೆಂಟರವರ ಜವಾಬ್ದಾರಿಕೆ ಮೇಲೆ ರಶೀತಿ ಪುಸ್ತಕಗಳು ಕೊಡಲಾಗಿದೆ. ದಯವಿಟ್ಟು ಚಂದಾದಾರರೆಲ್ಲರೂ ಅವರಿಗೆ ಅನುಕೂಲವಿರುವ ಸ್ಥಳದಲ್ಲಿ ನಮ್ಮ ಚಂದಾವನ್ನು ಪಾವತಿ ಮಾಡಿ ರಶೀತಿ ಪಡೆಯಬೇಕಾಗಿ ಕೋರಿಕೆ.

ಕೊಡಗಿನ ಎಲ್ಲಾ ಭಾಗಗಳಿಗೆ.

ಮು. ಮುಕ್ಕಾಟಿರ ಜೋಯಪ್ಪನವರು.
ಬಾಚಮ್ಮನ ಶರ್ಮನವರು.

ಸಬ್ ಏಜೆಂಟರುಗಳು.

ವಿರಾಜಪೇಟೆ—ಮು. ಪುಂಡೀರಂಡ ನೋಣಯ್ಯನವರು
ಅಮ್ಮತ್ತಿ—ಸಿದ್ದಾಪುರ— ಮು. ಐನಂಡ ಪೂವಪ್ಪನವರು
ಪೊನ್ನಂಪೇಟೆ—ಮು ಬಿ. ಕೆ. ಮುದ್ದಯ್ಯನವರು.
ಹುದಿಕೇರಿ—ಮು. ಅಜ್ಜನಮಾಡ ಪೂವಪ್ಪನವರು ಮತ್ತು ಮು.
[illegible] ಪೂವಯ್ಯನವರು
ಸುಂಟಿಕೊಪ್ಪ—ಮು. ಅಪ್ಪಚೆಟ್ಟೋಳಂಡ ಪೊನ್ನಯ್ಯನವರು
ಸೋಮವಾರಪೇಟೆ—ಮು. ಕೆ. ಚಂಗಪ್ಪನವರು
ಶಾಪೋರ್ಟ್—ಮು. ಚಿಕ್ಕಂಡ ಬ್ರುಮ್ಮ ಪೂವಪ್ಪನವರು.
(ನಾಪೋಕ್ಲು ಸ್ಟೋರ್ಸ್)

ಸಿದ್ದಾಪುರ—ಸ್ಕಿಂಪ್ಲೆಟ್ ರಶೀತಿ ಕೊಂಡಿಕೊಳ್ಳದೆ ಯಾರೂ ಹಣ ಕೊಡಬಾರದಾಗಿ ಈ ಮೂಲಕ ತಿಳಿಸಲಾಗಿದೆ.

ಮ್ಯಾನೇಜರ್.
'ಕೊಡಗು' ಲಿಮಿಟೆಡ್, ಮಡಿಕೇರಿ.

The Bombay Mutual Life Assurance Society Ltd.,

Head Office:-BOMBAY. Estd. 1871.

ಬೊಂಬೇ ಮ್ಯೂಚುವಲ್.

1871ರಿಂದಲೂ ಪ್ರತಿ ವರ್ಷ ಬಲಗೊಳ್ಳುತ್ತಿದೆ.

ಈ ವರ್ಷ ಅನೇಕ [illegible] ಕೆಲಸ ಕಾರ್ಯಗಳನ್ನು ಮಾಡಿದೆ. ಜನಾದರಣೆಯನ್ನೂ, ನಂಬಿಕೆಯನ್ನೂ ಗಳಿಸಿಕೊಂಡಿದೆ. ಕಳೆದ 66 ವರ್ಷಗಳಿಂದಲೂ [illegible] ರಕ್ಷಣೆಗಳನ್ನೊದಗಿಸುತ್ತಿದೆ.

1937ರಲ್ಲಿ ಮಾಡಿದ ಉದ್ಯೋಗ ರೂ. 2,33,15,500.
1937ರಲ್ಲಿ ಪೂರ್ತಿಯಾದ ಉದ್ಯೋಗ ರೂ. 2,01,02,000.

ಎಂಡೋಮೆಂಟ್ ವಿಮಾ ಪತ್ರದ ಮೇಲೆ 1000ಕ್ಕೆ ವರ್ಷಕ್ಕೆ 21ರಂತೆಯೂ, ಹೋಲ್ ಲೈಫ್ ವಿಮಾ ಪತ್ರಗಳಿಗೆ 31ರಂತೆಯೂ ಬೋನಸು ಹಂಚಲಾಗಿದೆ.

ದಿ ಬೊಂಬೇ ಮ್ಯೂಚುವಲ್ ಲೈಫ್ ಅಶ್ಯೂರೆನ್ಸ್
ಸೊಸೈಟಿ ಲಿಮಿಟೆಡ್,
12, ಸೌತ್ ಪೆರೇಡ್, ಬೆಂಗಳೂರು.

ಚಿಕ್ಕ ಮಕ್ಕಳ
ಮುಖ
ಕಾಂತಿಗೆ

ಎಳೇ ಮಕ್ಕಳ ಸ್ನಾನಕ್ಕೆ ಮೈಸೂರು ಗಂಧದ ಸಾಬೂನು ಅತ್ಯುತ್ಕೃಷ್ಟವಾದದ್ದು. ಕೆನೆಯಂತಿರುವ ಅದರ ಉತ್ತಮ ನೊರೆಯು ಸೂಕ್ಷ್ಮವಾದ ಚರ್ಮಕ್ಕೆ ವಿನೋದ ಸಾಸಿಯನ್ನುಂಟುಮಾಡಿ ಕೊಳೆಯನ್ನೆಲ್ಲಾ ತೆಗೆದುಹಾಕುತ್ತದೆ. ಚಿಕ್ಕ ಮಕ್ಕಳಿಗೆ ಸುವಾಸನೆಯುಳ್ಳ ಈ ಗಂಧದ ಸಾಬೂನಿನಲ್ಲಿ ಸ್ನಾನಮಾಡುವುದೆಂದರೆ ಅತೀ ಪ್ರೀತಿ. ಇಂದೇ ಒಂದು ಸಾಬೂನನ್ನು ಕೊಂಡುಕೊಳ್ಳಿರಿ.

ಮೈಸೂರು ಗಂಧದ ಸಾಬೂನು

ಎಲ್ಲಾ ಅಂಗಡಿಗಳಲ್ಲೂ ಸಿಕ್ಕುತ್ತವೆ.

ಗವರ್ನಮೆಂಟ್ ಸೋಪ್ ಫ್ಯಾಕ್ಟರಿ, ಬೆಂಗಳೂರು.

52-19)

ಸಾಲದ ಭಾರವನ್ನು ತಮ್ಮ ತಲೆಯಲ್ಲಿರಿಸಿ ಅವರ ಜೀವನವನ್ನು ನೋಡುವದು ಯಾವನೊಬ್ಬ ಪಕ್ಷಮಾತ್ರದವನಿಗೆ ಇಷ್ಟವಿರುವುದಿಲ್ಲ. ಬದಾಗಿ ಮಾಡಿರುವ ಶಿಫಾರಸ್ಸನ್ನು ಸೆಂಟ್ರಲ್ ಬ್ಯಾಂಕ್ ವಿಚಾರಣಾ ಕಮಿಟಿಯ ಡೈರೆಕ್ಟರಗಳು ಅನುಮೋದಿಸುವದಲ್ಲ. ಹಳ್ಳಿಯತನದ ಅಕ್ಕಿನಲ್ಲಿ ವಿಶೇಷ ಕರಗಳನ್ನು ಹೋರಿಸಬೇಕೆಂಬ ಸಲಹೆಗಳನ್ನು ಕೊಟ್ಟಿರುವರು. [ಸಂ.ಸ.

'ಒತ ಜನರ ಸೇವಕ.'

— —

ಕಾಂಗ್ರೆಸ್ ಮಹಿಮೆಯರಿತು ಸದಸ್ಯರಾಗಿ ಸೇರಿರಿ.

ಸಂಯುಕ್ತ ಪ್ರಾಂತದ ಬುದಾನ್ ಎಂಬ ಊರಲ್ಲಿ ಅಲ್ಲಿಯ ಮುನ್ಸಿಪಾಲಿಟಿಯಲ್ಲಿ 215 ಮಂದಿ ಭೂಡಮಾಲಿಗಳಿರುವರು. ಇವರು ಪಗಾರು ಹೆಚ್ಚಿಸಬೇಕೆಂದು ಈ ಕಳೆದ ಹತ್ತು ದಿನಗಳಿಂದ ಮುಷ್ಕರ ಆರಂಭಿಸಿರುವರು. ಆದರೆ ಈಗಿನ ಕಾಲದಲ್ಲಿ ಈ ಬೆದರಿಕೆಗೆ ಹೆದರುವರೇ? ನಾಗರೀಕರು ಸ್ವಯಂ ಸೇವಕ ದಳವನ್ನೇರ್ಪಡಿಸಿ ತಾವೇ ಕಸಗುಡಿಸುತ್ತಿರುವರು. ಮುನ್ಸಿಫಲ್ ಕೌನ್ಸಿಲರೂ ಸಹ ಈ ಕೆಲಸಕ್ಕೆ ಆಕರ್ಷಿಸಲ್ಪಟ್ಟಿದ್ದಾರೆ. ಇದರ ಕಾರಣವಾದರೂ ಏನು? ಈ ಮೊದಲು ಕಾಂಗ್ರೆಸ್ ಮಂತ್ರಿಗಳೇ ಆದರ್ಶಪ್ರಾಯರಾಗಿ ವರ್ತಿಸಿದ್ದರ ಪರಿಣಾಮ. ಇಂದು ಕಾಂಗ್ರೆಸು ಯಾವ ವಿಧದಲ್ಲೂ ಅನುಸರಿಸಲ್ಪಡತಕ್ಕದ್ದೇ ಆಗಿರುವದು. ಕಾಂಗ್ರೆಸು ಇಂದು ಬಲ್ಲಿದ ಬಡವರಲ್ಲಿರುವ ಭೇದವನ್ನು ಹೋಗಲಾಡಿಸಿ ಎಲ್ಲರಲ್ಲೂ ಸಮಾನತ್ವವನ್ನು ಹರಡಿ ನಿರಂಕುಶಾಧಿಕಾರವನ್ನು ಬದಿಗೊತ್ತಿ ಮುಂದರಿಯುತ್ತಿರುವ ಸಂಸ್ಥೆ. ಭಾರತ ಮಾತೆಯ ಹಾಗೂ, ಜಗತ್ತಿನ ಬಿಕ್ಕಟ್ಟಿನ ಸಮಸ್ಯೆಯನ್ನು ಪರಿಹರಿಸಲು ಇಂದು ಹೊರಟಿರುವ ಏಕ ಮಾತ್ರ ಸಂಸ್ಥೆಯೇ ಕಾಂಗ್ರೆಸು. ಈಗಾಗಲೇ ಇಲ್ಲಿ ಕಾಂಗ್ರೆಸು ಸದಸ್ಯರನ್ನು ಸೇರಿಸುವ ಕೆಲಸವು ಪ್ರಾರಂಭಿಸಲ್ಪಡುವದು. ಎಲ್ಲರೂ ಕಾಂಗ್ರೆಸ್ಸಿನ ಮಹತ್ವವನ್ನರಿತು ಕಾಂಗ್ರೆಸ್ ಸದಸ್ಯರಾಗಿ ದೇಶದ ಕಲ್ಯಾಣವನ್ನು ಬಯಸಬೇಕಾಗಿದೆ.

—

ಡಾ. ಮೋಕ್ಸ್ಯಾಸ್ ಎಬ್ರಹಾಮ್
ದಂತ ವೈದ್ಯರು.
(ಪೀಯರ್ಸ್‌ಲೆಸ್ಲಿ ಬಂಗ್ಲೆ)
(ಸ್ಟೆಸ್ಸರ್ಡ್ ಹತ್ತಿರ)
ಮಡಿಕೇರಿ.

ಚಾತ್ಮಿ.

ಚಾತ್ಮಿದಾರರು ಎಮ್ಮ ಲ ನ್ಯಾಯ ಗಳಿಗೆ ಪತ್ರಿಕಾಕರ್ತರು ಜವಾಬ್ದಾರರಲ್ಲ. [ಕೊ. ಸಂ.

—

ಫ್ರೇಜರ್‌ಪೇಟೆ ನೋಟಿಫೈಡ್ ಏರ್ಯ.

ಆಯ್ಯಾ,

ಫ್ರೇಜರ್‌ಪೇಟೆ ನೋಟಿಫೈಡ್ ಏರ್ಯದ ವಿಷಯವು ಬಹಳ ವಿಷಾದಕರವಾಗಿದೆ. ಅದರ ಮೆಂಬರುಗಳು ಚುನಾಯಿಸಲ್ಪಡದೆ ಸರ್ಕಾರದವರಿಂದ ನಾಮಿನೇಟ್ ಆಗಿ ನೇಮಕವಾಗುವುದರಿಂದಲೇ ಅಲ್ಲಿನ ವೈಸ್ ಪ್ರೆಸಿಡೆಂಟರು ಮೆಂಬರುಗಳ ಸವಾಲುಗಳಿಗೆ ಮನಸ್ಸು ಜವಾಬು ಕೊಡುತ್ತಿರುವರೆಂದು ಕಂಡುಬರುತ್ತದೆ.

ಕಳೆದ 18 ತಿಂಗಳುಗಳಿಂದ ಮುಸಲ್ಮಾನರ ಬೀದಿಯಲ್ಲಿನ ಗಲೀಜು ಸ್ಥಿತಿಯನ್ನು ಚರ್ಚಿಸಿ ಸಾಕಾಯಿತು. ಕಳೆದ ಮಾರ್ಚಿ ತಿಂಗಳಲ್ಲಿ ನಡೆದ ಮುನಿಸಿಪಲ್ ಮೀಟಿಂಗಿನಲ್ಲಿ ಮಿ. ಇಸ್ಮಾಯಿಲ್ ರಾವುತರು ಈ ವಿಷಯದಲ್ಲಿ ಸವಾಲು ಮಾಡಿದರು. ಅದಕ್ಕೆ ವೈಸ್ ಪ್ರೆಸಿಡೆಂಟರು 'ಮುಸಲ್ಮಾನರ ಬೀದಿಯು ಬಹಳ ಗಲೀಜಾಗಿರುವುದೇನೋ ನಿಜ. ನೀವು ಒಬ್ಬ ಮೆಂಬರಾಗಿದ್ದುಕೊಂಡು ಅದರ ನೈರ್ಮಲ್ಯಕ್ಕೆ ತಕ್ಕ ಪ್ರಯತ್ನವನ್ನು ಮಾಡಬೇಕಾದದು ನಿಮ್ಮ ಕರ್ತವ್ಯ' ಎಂದು ಉತ್ತರ ಕೊಟ್ಟರು. ಮುನ್ಸಿಪಲ್ ನಾಮಿನೇಟೆಡ್ ಮೆಂಬರುಗಳು ಬೀದಿಗಳ ಸಫಾಯಿಯನ್ನು ಮಾಡಿಸಬೇಕೊ, ಅಥವಾ ಸ್ವಾಮಿನಿಷ್ಠರಾದ ನಗರೊಡನೆ ಹೋರಾಡಿ ಅವರಿಂದ ರಸ್ತೆಗಳನ್ನು ಸಫಾಯಿ ಮಾಡಿಸಬೇಕೋ ಎಂಬ ವಿಷಯವು ಸ್ಪಷ್ಟವಾಗಿ ನನ್ಗೆ ವೈಸ್ ಪ್ರೆಸಿಡೆಂಟರ ಮಾತ್ನಿಂದ ಅರ್ಥವಾಗಿಲ್ಲ. ಹಾಗಿದ್ದ ಪಕ್ಷದಲ್ಲಿ ನಿವಾಸಿಗಳ ಮೇಲೆ ತೆರಿಗೆ ಹಣವೂ ಏಕೆ? ಮತ್ತು ಬೀದಿಗಳನ್ನು ಗುಡಿಸುವವರನ್ನು ಸಂಬಳಕೊಟ್ಟು ನೇಮಕಮಾಡಿರುವುದೇಕೆ?

ಕಳೆದ ಮೇ ತಾ. 11 ರಲ್ಲಿ ನಡೆದ ಮೀಟಿಂಗಿನಲ್ಲಿ ಈ ಚರ್ಚೆಯು ಬಂತು. 1936ರಲ್ಲಿ ಈ ಬೀದಿಯ ಸಫಾಯಿ ಮತ್ತು ರಿಪೇರಿಗೋಸ್ಕರ ಬಜೆಟ್ಟಿನ ಸೆಂಕ್ಷನ್ ಆದ 50 ರೂಪಾಯಿಗಳ ಉಪಯೋಗದ ವಿಷಯವಾಗಿ ಮೆಂಬರುಗಳಿಂದ ಸವಾಲು ಹಾಕಲ್ಪಟ್ಟಿತು ಮತ್ತು ಈ ಹಣವು ಯಾವ ವಿಧವಾಗಿ ಖರ್ಚಾಯಿತೆಂದು ಕೇಳಲ್ಪಟ್ಟಿತು. ಅದಕ್ಕೆ ವೈಸ್ ಪ್ರೆಸಿಡೆಂಟರವರು 'ಈ ವಿಷಯವನ್ನು ಕೇಳಲು ನೀವು ಯಾರು? ನಿಮಗೆ ಯಾವ ಸಂಬಂಧವೂ ಇಲ್ಲ' ಎಂದು ಉತ್ತರ ಕೊಟ್ಟರು. ವೈಸ್ ಪ್ರೆಸಿಡೆಂಟರ ಈ ರೀತಿಯ ಹೇಳಿಕೆಯು ನನಗೆ ಆಶ್ಚರ್ಯವನ್ನುಂಟುಮಾಡಿತು. ಎತ್ತು ಈ ರೀತಿಯಾದ ಸವಾಲುಗಳನ್ನು ಮಾಡಲು ನಾನು ಅರ್ಹನಾಗದೇ ಹೋದರೆ ನಾನು ಮೆಂಬರಾಗಿದ್ದು ಪ್ರಯೋಜನವೇನು? ಇದಕ್ಕಿಂತ ನಾನೆ ಮೀಟಿಂಗಿನಿಂದ ಎದ್ದು ಹೋಗುವುದೇ ಒಳ್ಳೆಯದಲ್ಲವೆ? ಎಂದು ಉತ್ತರ ಕೊಟ್ಟೆನು. ಅದಕ್ಕೆ ವೈಸ್ ಪ್ರೆಸಿಡೆಂಟರವರು 'ಮೀಟಿಂಗನ್ನು ಬಿಟ್ಟು ಹೊರಟು ಹೋಗುವದು' ಎಂದು ಅಪ್ಪಣೆ ಕೊಟ್ಟರು. ಈ ರೀತಿಯಾಗಿ ವೈಸ್ ಪ್ರೆಸಿಡೆಂಟರವರು ಹೇಳಲು ಅವರಿಗೆ ಅಷ್ಟು ಹಕ್ಕು ಬಾಧ್ಯತೆ ಏನಿರುತ್ತದೆ! ಮತ್ತು ಒಂದು ಕಡೆ ಸೆಂಕ್ಷನ್ ಆದ ಹಣವನ್ನು ಹೇಳದೆ ಬೇರೆ ಸ್ವೇಚ್ಛೆಯಾಗಿ ಮತ್ತೊಂದು ಕಡೆ ಉಪಯೋಗಿಸಲು ಅವರಿಗೆ ಯಾವ ಅಧಿಕಾರವಿದೆ?

ಇದಕ್ಕೆ ಪ್ರತಿಕಾರವಾಗಿ ನಾನು ಜನಾಮೆಯನ್ನು ಕಳುಹಿಸಿದೆನು. ಯಾವ ಪಬ್ಲಿಕ್ ವಿಚಾರಣೆಯಾಗಿ ನನ್ನ ತೀರ್ಪು ಮಾಡಬೇಕೆಂದು ಕೇಳಿದರೂ ಕೊಡಗು ಕಮಿಷನರ್ ಸಾಹೇಬರು ಯಾವುದನ್ನೂ ವಿಚಾರಿಸದೆ ರಾಜಿನಾಮೆಯನ್ನು ಮಂಜೂರು ಮಾಡಿರು. ಪಬ್ಲಿಕ್ ವಿಚಾರಣೆಯನ್ನು ನಡೆಸಿದರೆ ಈ ನೋಟಿಫೈಡ್ ಏರ್ಯದ ಮಾತುಗಳೆಲ್ಲಾ ಬಹಿರಂಗವಾಗಬಹುದೆಂದು ಕಾರಣವು ಹೇಳದ ಹಾಗೆ ಕಾಣುತ್ತೆ.

ಖರ್ಚು ಮಾಡಿದ ಹಣಕ್ಕೆ ದಾಖಲೆಗಳೂ ಒಯಲಿಗೆ ಬರುವಂ ಹಣವನ್ನು ಖರ್ಚಿಗಾಗಿ ಮಂಜೂರು ಮಾಡುವ ಮುನ್ಸಿಪಲ್ ಮೆಂಬರುಗಳು ಸವಾಗಿದೆಯೋ ಏನಹ ಅದು ಯಾತಕ್ಕೆ? ಹೇಗೆ? ಮತ್ತು ಎಷ್ಟು ಖರ್ಚಾಯಿತೆಂದು ಕೇಳಲು ಅಪ್ಪಣೆ ಇಲ್ಲ.

ಮುಸಲ್ಮಾನರ ಬೀದಿಯ ಅವಸ್ಥೆಯನ್ನು ಹೇಳಲು ಅಸಹನೀಯವಾಗಿದೆ. ಈ ಸ್ಥಳದ ವಿಷಯವಾಗಿ ಯುಕ್ತರಾದ ಕ್ರಮವನ್ನು ಕೈಕೊಳ್ಳಲು ಅಸಾಧ್ಯ. ಯಾಗಿದ್ದ ಪಕ್ಷದ ಜಾಗವನ್ನು ಮುನ್ಸಿಪಾಲಿಟಿಯಿಂದ ಹಾಕಬೇಕಾದದೇಕೆ? ಇಲ್ಲಿಯ ಜನರು ತೆರಿಗೆಯನ್ನು ಕೊಡದೆ ಬೇರೆಯವರಿಗೆ ನೋಡೋಣ, ನನ್ನನುಗಳು ಹೇಳಿದೆ. ಅಂತ್ಯಕ್ಕೆ ಅವರ ಆಸ್ತಿಪಾಸ್ತಿ ಹರಾಜು ಮಾಡಿಸಿ ತೆರಿಗೆಯನ್ನು ಉಸಾಡಿಕೊಳ್ಳಲಾಗುತ್ತದೆ. ಅಸ್ಥಳಕ್ಕೆ ಮುನಿಸಿಪಾಲಿಟಿಯಿಂದ ಏನು ಪ್ರಯೋಜನ ಮಾಡಬೇಕೆಂದು ಕೇಳಿದರೆ ವೈಸ್‌ಪ್ರೆಸಿಡೆಂಟರವರು ಹೇಳಲು ನನಗೆ ಯಾವ ಅಧಿಕಾರವಿದೆಯೆಂದು ಮಾತಾಡಿಸುತ್ತಾರೆ.

ಸರ್ಕಾರಿ ಉದ್ಯೋಗಸ್ಥರು ಈ ಜಾಗದಲ್ಲಿ ಅವರ ರಾಜು ರೂ ಬಹಳ ಕೆಲಸಗಾರನೆಂದು ಅತಿಗೆ ಸೇರಿ ವೈಸ್‌ಪ್ರೆಸಿಡೆಂಟರವರ ಮುಖಸ್ತುತಿಯನ್ನು ಪಡೆಸಿಕೊಳ್ಳುತ್ತಾರೆ. ಅವರೆ ಉರು ಯಾವಾಗಲೂ ತಿರುಗಾಡದಲ್ಲಿ ಎನ್ನ ಕೆಲಸವನ್ನು ಮುನ್ಸಿಪಲ್ ಬರುಗಳೇ ಮಾಡಲೆಂಬ ನಿರೀಕ್ಷೆ ವೈಸ್‌ಪ್ರೆಸಿಡೆಂಟರವರು ಇಟ್ಟುಕೊಳ್ಳುತ್ತಿರುವುದು ಬಹಳ ಶೋಚನೀಯವಾಗಿರುತ್ತದೆ.

ಪ. ಸಿ. ಸಿ

ಧಾತುಪುಷ್ಟಿ ಲೇಹ

(ಸುವರ್ಣ, ಸಾಬಾಮಿಶ್ರಿ, ಕಸ್ತೂರಿ ಮಿಶ್ರ)

ಇದು ಬಲಹೀನರಿಗೆ ಅತ್ಯದ್ಭುತವಾದ ಶಕ್ತಿವರ್ಧಕ ರಸಾಯನ, ಸ್ವಪ್ನಾವಸ್ಥೆ, ಶರೀರದ ಉಷ್ಣತೆ, ಧಾತು ಮೂತ್ರದೊಡನೆ ಹೋಗುವಿಕೆ, ಸೊಂಟ ನೋವು ಕೈಕಾಲು ಬಚ್ಚುವುದು, ಮಲಬದ್ಧತೆ, ಒಳಜ್ವರ, ಅಜೀರ್ಣ ಇವುಗಳನ್ನು ಹೋಗಲಾಡಿಸಿ, ಹಸಿವನ್ನೂ, ಜೀರ್ಣಶಕ್ತಿಯನ್ನೂ ಹೆಚ್ಚಿಸುವುದು. ಎಲ್ಲಾ ನರಗಳ ದೌರ್ಬಲ್ಯವನ್ನು ಹೋಗಲಾಡಿಸಿ ವೀರ್ಯವೃದ್ಧಿಯನ್ನು ಉಂಟುಮಾಡುತ್ತದೆ.

ಬಾಟ್ಲಿ 1ರ ರೂ. 3-8-0.

ಮಲೇರಿಯಾ ನಿವಾರಿಣಿ

ಇದು ಚಳಿ ಜ್ವರ, ಚಾತುರ್ಥಿಕ ಜ್ವರ, ದಿನ ಬಿಟ್ಟು ಬರುವ ಜ್ವರ, ಮಲೇರಿಯಾ ಜ್ವರ, ಇನ್‌ಫ್ಲುಯೆಂಜಾ ಇತ್ಯಾದಿ ನಾನಾ ತರದ ಜ್ವರಗಳ ಮೇಲೆ ರಾಮಬಾಣ.

ಬಾಟ್ಲಿ 1ರ ರೂ. 1-8-0; ಸಣ್ಣ ಬಾಟ್ಲಿ ರೂ. 0-13-0.

ಸ್ಪ್ಲೀನ್ ಮಿಕ್ಷರ್

ಜ್ವರಗೆಡ್ಡೆ, ಆಗಾಗ ಜ್ವರ ಬರುವಿಕೆ, ಪಿತ್ತವಿಕಾರ, ಅರುಚಿ, ಅಗ್ನಿಮಾಂದ್ಯ, ಅರಕ್ತತೆ, ಮಲಬದ್ಧತೆ ಮುಂತಾದವುಗಳನ್ನು ಹೋಗಲಾಡಿಸಿ ಶಕ್ತಿಯನ್ನು ಉಂಟುಮಾಡುವುದು. ಬಾಟ್ಲಿ 1ರ ರೂ. 1-2-0.

ಬಾಲಗ್ರಹ ಗುಟಿಕೆ

ಮಕ್ಕಳ ಜ್ವರ, ಕಫ, ಕೆಮ್ಮು, ಉಬ್ಬಸ, ಮಲಬದ್ಧತೆ, ಎದೆಯಲ್ಲಿ ಗುರುಗುರು ಶಬ್ದ, ಜ್ವರ, ಮೂರ್ಛೆ ಇವುಗಳಿಗೆಲ್ಲಾ ರಾಮಬಾಣ. ಬಾಟ್ಲಿ 1ರ 0-10-0.

ಎಲ್ಲಾ ನಮೂನೆಯ ಔಷಧಿಗಳು ನಮ್ಮಲ್ಲಿ ದೊರೆಯುತ್ತವೆ. ಕೆಟಲಾಗಿಗೆ ಬರೆಯಿರಿ. (12 1)

ಎಸ್. ಗಣಪಯ್ಯ ಎಂಡ್ ಸನ್ಸ್,

ಆಯುರ್ವೇದಿಕ್ ಫಿಜಿಸಿಯನ್ಸ್, ರಥ ಬೀದಿ, ಮಂಗಳೂರು.

ಔಷಧಿ ಸಿಕ್ಕುವ ಸ್ಥಳ:—ಮಂಗಳೂರು ಸ್ಟೋರ್ಸ್, ಮಡಿಕೇರಿ. ಬಿ. ಬಿ. ಕಾಮತ್, ಮಡಿಕೇರಿ. ಬಿ. ಪುಟ್ಟಯ್ಯ ಶೆಟ್ಟಿ ಎಂಡ್ ಸನ್ಸ್, ಸೋಮವಾರಪೇಟೆ. ಎ. ಎಸ್. ಮಾದಯ್ಯ, ಕುಂಪಕೊಪ್ಪ. ಘಂಡರ್ ಪ್ರಭು, ಸುಳ್ಯ. [1]

ಒಂದೆ ವಿವರಿಸಿರುವಂತೆ ಬ್ರಿಟಿಷ್ ಇಂಡಿಯಾ ಪ್ರಾಂತ್ಯಗಳಲ್ಲಿನ ವ್ಯವಸಾಯಗಾರರು ಮಾಡಿರುವ ಸಾಲದ ಮೊತ್ತವು [illegible]0 ಕೋಟಿಯ ಹತ್ತಿರಕ್ಕೆ ತಲಪುವುದು. ಈ ಅಂದಾಜು ಆಟಗಾರಿಕೆಯ ತಪಾಸಣೆ ಹೊತುಗಳಲ್ಲ. ನಿಜವಾದ ಸಂಗತಿ [illegible]ಗಿರುವುದು. ಇತ್ತೀಚಿನ ವರ್ಷಗಳ ಪಂಜಾಬು ಪ್ರಾಂತ್ಯದ ಸಾಲದ ಲೆಕ್ಕ ಹಳ್ಳಿಯ ರೈತರುಗಳಿಗೆ ಕಣ್ಣಿಗೆ ಕಾಣುತ್ತೆ ಕೊಟ್ಟಿರುವದು. ಇಡೀ ಇಂಡಿಯಾ[illegible] ಈ ರೀತಿ ಹೆಚ್ಚುತ್ತಿರುವದೆಂಬುದಕ್ಕೆ [illegible]ನೂ ಸಂಶಯವಿಲ್ಲ. ಹೊರಲಾಗದ ಸಾಲದ ಹೊರೆಯು ವ್ಯವಸಾಯಗಾರರನ್ನು ತಲೆಯೆತ್ತದಂತೆ ಕುಗ್ಗಿಸುತ್ತಿರುವುದು. ಇದಕ್ಕೆ 21ನೇ ಇಸವಿಯಿಂದ ಧವಸ ಧಾನ್ಯಗಳ ಧಾರಣೆಯು ಬಿದ್ದು ಹೋಗಿರುವ ಕಾರಣವೆಂದು ತಿಳಿಯಲ್ಪಟ್ಟಿರುತ್ತೆ. 29ನೇ ಅಕ್ಟೋಬರಿನಿಂದ ಸಾಲದ ಬಾಧೆಯು ಬಹಳ ಜೋರಾಗಿರುವುದೆಂದು ತಿಳಿಯುತ್ತಿದೆ. ಈ ಸಾಲಗಳಿಗೆ ಕಾರಣವೇನು ಎಂಬುದನ್ನು ಪರಿಶೀಲಿಸಿ ನೋಡೋಣ.

ಸಾಲದ ಕಾರಣಗಳು.

ಸಾ[illegible] ನಿಜವಾಗಿ ದಾಗ ಸಾಲವಿಲ್ಲದೆ ಇರುವುದೇ ಸಂಪತ್ತಿನ ಮೂಲ ಕಾರಣವಾಗಿರುತ್ತೆ ಎಂಬುದು ನಿಜವು ಮತ್ತು ಸತ್ಯವಾದದ್ದು. ಕಾರಣ ಮೇಲೆ ಹೇಳಿರುವ ಸಾಲದಿಂದ ಇಂಡಿಯಾ ದೇಶದ ಬಡ ರೈತರುಗಳ ಬಡತನವನ್ನೂ, ದರಿದ್ರಾವಸ್ಥೆಯನ್ನೂ ವಿವರಣೆ ಮಾಡಿದಂತಾಯಿತು. ಇದನ್ನು ಮನಸಿನಲ್ಲಿ ನೆನಪು ಇಟ್ಟುಕೊಂಡು ಈಗ ಹಳ್ಳಿಯ ರೈತರುಗಳ ಬಡತನಕ್ಕೆ ಕಾರಣಗಳು ಏನೆಂಬುದನ್ನು ವಿಚಾರಿಸಿ ಅವರ ನಿಜವಾದ ಕಾರಣವನ್ನು ನಮಗಾಗುವಂತೆ ತಿಳಿದುಕೊಳ್ಳುವುದೇ ಪ್ರತಿಯೊಬ್ಬ ಬಡ ರೈತನ ಮುಖ್ಯ ಕರ್ತವ್ಯವಾಗಿರುತ್ತದೆ.

(1) ಕೃಷಿಯಿಂದಲೇ ಜೀವನ ನಡೆಸಬೇಕಾಗಿರುವ ರೈತರುಗಳ ಮಿತಿ ಮೀರಿದ ವೃದ್ಧಿ.

(2) ಅನೇಕ ರೀತಿಯಲ್ಲಿ ಭಿನ್ನ ಭಿನ್ನವಾಗಿ ಹೊಲ ಗದ್ದೆಗಳನ್ನು ಪಾಲು ಮಾಡಿ, ಸಣ್ಣ ತುಂಡುಗಳಾದ ಭೂಮಿಗಳ ಬೆಳೆಯಿಂದ ಆಗುವ ನಷ್ಟ.

(3) ಹಳ್ಳಿಯ ಕೈಗಾರಿಕೆಗಳು ವಿಫಲವಾಗಿ ಕಣ್ಣಿಗೆ ಕಾಣದಂತೆ ಮಾಯವಾಗಿ ಹೋಗಿರುವಿಕೆ. ಅಲ್ಲದೆ ವ್ಯವಸಾಯದ ಕೆಲಸಗಳನ್ನು ಬಿಟ್ಟು ಇತರ ವಿರಾಮ ಕಾಲಗಳಲ್ಲಿ ಬೇರೆ ಬೇರೆ ಕಸಬುಗಳು ಇಲ್ಲದೆ ರೈತರುಗಳಿಗೆ ಜೀವನಕ್ಕೆ ಸಾಕಷ್ಟು ಉತ್ಪತ್ತಿಯ ಆದಾಯ ಇಲ್ಲದಿರುವಿಕೆ.

(4) ರೈತರುಗಳ ಅನಾರೋಗ್ಯತೆ-ಕೆಲವು ಋತುಗಳಲ್ಲಿ ರೈತರುಗಳು ಹೊಲಗಳಲ್ಲಿ ಕೆಲಸ ಮಾಡಬೇಕಾಗಿರುವ ಸಮಯಗಳಲ್ಲಿ ಮಲೇರಿಯಾ ಮೊದಲಾದ ನಾನಾ ವಿಧಗಳಾದ ರೋಗಗಳು ಬಂದು, ಅಂಥಾ ಒಳ್ಳೆಯ ಸಮಯಗಳಲ್ಲಿ ಕೆಲಸ ಮಾಡಲು ರೈತರುಗಳಲ್ಲಿರುವ ಶಕ್ತಿ, ಹುಮ್ಮಸ್ಸು, ಅವರ ಬಲಿಕೆಗಳನ್ನು ಬಹಳ ಮಟ್ಟಿಗೆ ಕುಗ್ಗಿಸಿ, ನಿರ್ಬಲರನ್ನಾಗಿ ಮಾಡಿ ಸೋಮಾ[illegible]

ಇಂಡಿಯಾ ದೇಶದ
ಬಡ ರೈತರ ಸಾಲದ ಕಾರಣಗಳು.

● ● ●

[illegible]ರಿಕೆಯನ್ನು ಅಭಿವೃದ್ಧಿಪಡಿಸುವುದರಿಂದ ಜಮೀನುಗಳು ವ್ಯವಸಾಯವಿಲ್ಲದೆ ಬಂಜರಾಗುವವು.

(5) ಫಸಲುಗಳ ಅಭಿವೃದ್ಧಿ. ಇಂಡಿಯಾ ದೇಶದಲ್ಲಿ ವ್ಯವಸಾಯ ಮಾಡುವ ರೈತರುಗಳು ಮಳೆಯನ್ನು ಸುರಿಸುವ ಇಂದ್ರ ದೇವನೊಡನೆ ಜೂಜು ಆಡುತ್ತಿರುವರು ಎಂಬುದನ್ನು ಡಾರ್ಲಿಂಗ್ ಸಾಹೇಬರು ಸಾರಿರುವರಲ್ಲದೆ, ಇಂಡಿಯಾ ದೇಶದ ವಾಯುಗುಣವಾದ ಮಳೆಗಾಲವು ಮನಸೋ ಇಚ್ಛೆ ವ್ಯಾಪಾರವನ್ನು ನಡೆಸುವ ನಿರಂಕುಶ ಪ್ರಭುವಾದ ರಾಜನೆಂದು ಗಾಢವಾಗಿ ಬರೆದಿರುತ್ತಾನೆ. ಐದು ವರ್ಷವೆಂಬ ವೃತ್ತ ಮಂಡಲದಲ್ಲಿ, ಒಂದು ವರ್ಷದಲ್ಲಿ ಸುಭಿಕ್ಷದ ಬೆಳೆ, ಒಂದು ವರ್ಷ ನಿಕೃಷ್ಟವಾದ ಬೆಳೆ. ಉಳಿದ ಮೂರು ವರ್ಷಗಳಲ್ಲಿ ಒಳ್ಳೆಯದು ಅಲ್ಲ, ಕೆಟ್ಟದ್ದು ಅಲ್ಲದ ಸರ್ವಸಾಧಾರಣವಾದ ಬೆಳೆಯಾಗುವದು ಎಂಬದಾಗಿ ಹೇಳಲ್ಪಟ್ಟಿರುವದು.

ಸುಭಿಕ್ಷೆಯ ಕಾಲದ ಬೆಳೆಯ ವರ್ಷದಲ್ಲಿ ಮಾತ್ರ ರೈತರುಗಳು ಸಾಲ ಮಾಡದೆ ಇರಬಹುದಲ್ಲದೆ ಉಳಿದ ನಾಲ್ಕು ವರ್ಷಗಳಲ್ಲಿ ಸಾಲ ಮಾಡಲೇ ಬೇಕಾಗಿರುವದರಿಂದ ಶ್ರೀಮಂತರುಗಳ ದಾಸಾನುದಾಸರಾಗುತ್ತಾ ಬರುವದು ವಿಶ್ವಸನೀಯವಾದ ಸಂಗತಿಯಾಗಿರುತ್ತೆ.

(6) ಕ್ಷಾಮ-ದನ ಕರುಗಳ ರೋಗಗಳಿಂದ ಸಂಭವಿಸುವ ನಷ್ಟಗಳು [illegible] ರೋಗ[illegible] ರಲು ಜೀವನೋಪಾಯಕ್ಕೆ [illegible] ಮಾಡುತ್ತಿರುವದು [illegible] ಮುಖ್ಯವಾದ ಕಾರಣವಾಗಿರುವದು. ವ್ಯವಸಾಯಕ್ಕೆ ಅತ್ಯಗತ್ಯವಾದ [illegible] ಕರುಗಳನ್ನು ಪುನಹ ಪುನಹ ಕೊಂಡುಕೊಳ್ಳುವುದಕ್ಕೋಸ್ಕರ ಪರಸ್ಪರ ಸಹಕಾರ [illegible] ದ ಹೆಚ್ಚಾಗಿ ಸಾಲ ಮಾಡುತ್ತಿರುವುದು ಪ್ರತ್ಯಕ್ಷವಾದ ಸಾಕ್ಷಿಯಾಗಿರುವದು.

(7) ಡಿಪ್ರಿಸಿಯೇಶನ್ (ಸವೆಯುವಿಕೆ)-ನೇಗಿಲು ಮೊದಲಾದ ವ್ಯವಸಾಯಕ್ಕೆ ಬೇಕಾದ ಸಾಮಾನುಗಳ ಮತ್ತು ಎತ್ತು, ಎಮ್ಮೆ, ಕೋಣ, ಹಸು, ಕರು, ಇವುಗಳಿಂದುಂಟಾಗುವ ಪ್ರತಿ ವರ್ಷಗಳ ನಷ್ಟದ ಬಾಬಿಗೆ, ಹಣವನ್ನು ಶೇಖರಿಸಿ ತೇವಣಾತಿ ಮಾಡದೆ ಇರುವದೇ ರೈತರ ಸಾಲಕ್ಕೆ ಮತ್ತೊಂದು ಕಾರಣವಾಗಿರುತ್ತೆ. [illegible]ನೆಕರುಗಳು ಉಪಯೋಗಕ್ಕೆ ಬಾರದ ಸಮಯದಲ್ಲಿ ಬೇರೆ ಹೊಸದಾಗಿ ಕೊಂಡುಕೊಳ್ಳಲು ತನ್ನ ಸ್ವಂತ ಸಂಪಾದನೆಯ ಹಣವಿಲ್ಲದೇ ಇರುವುದರಿಂದ ಸಾಲ ಮಾಡಿದ ಹೊರತು ಬೇರೆ ಏನೂ ಉಪಾಯಗಳಿಲ್ಲದೆ ಸಾಲಗಾರರಾಗಬೇಕಾದ್ದರಿಂದ ಅಸಲು ಬಂಡವಾಳವೇ ವ್ಯಯವಾಗುತ್ತಿರುವದು. ಬಡರೈತರು ಧನಿಕರಂತೆ ಜೀವಿಸಬೇಕೆಂಬ ದುರ್ಬುದ್ಧಿಯ[illegible] ಉತ್ಕಟವಾದ [illegible]ಆಸೆಗಳು ಬಹಳ ಸ್ವಲ್ಪ ಮಟ್ಟಿಗೆ ಸಾಲಕ್ಕೆ ಕಾರಣವಾಗಿರುವುದು.

ಮದುವೆಗೋಸ್ಕರ ತನ್ನ ಸಂಸಾರ ಖರ್ಚಿನ ಪತ್ರಗಳಲ್ಲಿ ಬೇರೆ ಹಣ ಕೂಡಿಸಲು ಕಷ್ಟತರವಾದ ಕೆಲಸವಾಗಿದೆ. ಹೊಸದಾಗಿ ದನಕರುಗಳನ್ನು ಕೊಂಡುಕೊಳ್ಳಲು ಹಣವಿಲ್ಲದೆ ಹೋಗುವದರಿಂದ ರೈತರ ಸಾಲ ದಿನೇ ದಿನೇ ಅಭಿವೃದ್ಧಿಯಾಗುವುದಕ್ಕೆ ಮೂಲಕಾರಣವಾಗಿರುವದು.

(8) ಮಹಾಯುದ್ಧಗಳಲ್ಲಿ ಹುಟ್ಟಿದ ಸ್ಥಿತಿ. ಇಂಡಿಯಾ ದೇಶದ ರೈತರುಗಳ ಸರಕುಗಳನ್ನು [illegible] ರೈತರುಗಳ ಧನ ಸಂಪತ್ತನ್ನು ನಾಶಪಡಿಸಿ ಅವರ ಆರ್ಥಿಕ ಸ್ಥಿತಿಯನ್ನು ಕುಗ್ಗಿಸುತ್ತಿರುವುದು.

(9) ರೈತರುಗಳ ಮುಂದಾಲೋಚನೆ [illegible] ಬೇಕಾದ ಸೌಕರ್ಯಗಳನ್ನು ಒದಗಿಸಿಕೊಳ್ಳಲು ಪ್ರಯತ್ನಪಡದೆ ಆಲಸ್ಯರಾಗಿರುವಿಕೆ ಯೂ ಅತೃಪ್ತಿ.

ರೈತರುಗಳ [illegible] ಕೆಲಸಗಳಲ್ಲಿ [illegible] ಮತ್ತು ಮುಂದುಗಾರಿಕೆ, ಸಹವಾಸ ದೋಷ ಇವುಗಳೇ ರೈತರುಗಳ [illegible] ಹೇಳಬಹುದು.

ಏನೇ ಬರಲಿ [illegible] ಗುತ್ತಾ ಅವರನ್ನು ಮನಸ್ಸಿಗೆ ಬಂದ ಹಾಗೆ [illegible] ಎಂದು [illegible] ಇರಲು ಆಗುವುದಿಲ್ಲ. ಇಂಥಾ ದುರಭ್ಯಾಸದ [illegible] ಇಲ್ಲವೆಂದು ಹೇಳುವ[illegible] ಇಂಡಿಯಾ ದೇಶದ ಜನರು [illegible] ಜೀವನ [illegible] ಕೆಲವು ಮದುವೆ [illegible] ಕಾಲಗಳಲ್ಲಿ [illegible] ಮಾಡಲು ಹಿಂತೆಗೆಯು[illegible] ಸಂಶಯವಿಲ್ಲ. 1875ನೇ ಇಸವಿಯಲ್ಲಿ ದಕ್ಷಿಣ ರೈತರ ತನಿಖೆ ಕಾರ್ಯ ಮಂಡಲಿಯ ಕಾರ್ಯದರ್ಶಿಯವರು ಮದುವೆ ಕಾಲಗಳಲ್ಲಿ ಮಿತಿಮೀರಿ ಖರ್ಚು ಮಾಡುವದರಿಂದಲೇ ರೈತರು ಸಾಲಗಾರರಾಗುವುದಕ್ಕೆ ಮುಖ್ಯ ಕಾರಣವೆಂದು ಒಪ್ಪುವುದಿಲ್ಲ. ಅವರು ಹೇಳುವುದೇನೆಂದರೆ-'ಮುಂದಿನ ಸುಖಕ್ಕೆ ಬಾಧಕಗಳಾದ ಕೆಲಸ ಕಾರ್ಯಗಳನ್ನು ನಿವಾರಿಸುವ ಯಾ ಹೋಗಲಾಡಿಸುವ ಪ್ರಯತ್ನಗಳನ್ನು ಮಾಡದೆ ತಿಳುವಳಿಕೆ ಇಲ್ಲದ ಜನ ಮಾಡಿಸಿ[illegible]ಯೂ, ಮುಂದಾಲೋಚನೆ ಇಲ್ಲದೆ ಮುಂದು ಬರುವ ಲಾಭದ ಕಡೆ ದೃಷ್ಟಿ ಇಡದೆ, ಯದ್ವಾ ತದ್ವಾ ಹೆಚ್ಚಿನ ದರದ ಬಡ್ಡಿಯ ಹಣವನ್ನು ತತ್ಕಾಲಿಕದ ಕೆಲಸಕ್ಕೆ ಖರ್ಚು ಮಾಡಲು ಹಿಂತೆಗೆಯದೆ ಇರುವದೇ ಕಾರಣವೆಂದು ಹೇಳುವರು.

ಕುಟುಂಬದ ಉದರಭರಣಾರ್ಥವಾಗಿ, ಪದೇ ಪದೇ ಮಾಡುವ ಸಾಲ ಬಿತ್ತನೆ ಬೀಜಗಳಿಗಾಗಿಯೂ, ಎತ್ತು, ಎಮ್ಮೆ, ಕೋಣ, ದನಕರುಗಳಿಗಾಗಿಯೂ ಮಾಡುವ ವರ್ಷಂಪ್ರತಿಯ ಸಣ್ಣ ಪುಟ್ಟ ಸಾಲಗಳೇ ರೈತರನ್ನು ಸಾಲವೆಂಬ ಗುಲಾಮಗಿರಿಯಲ್ಲಿ ಹನುಮಂತನ ಬಾಲದಂತೆ ಸುತ್ತಿರುವದು ಎಂದು ಹೇಳಿದರೆ ಅತಿಶಯೋಕ್ತಿಯಾಗುವುದಿಲ್ಲ. ಕೇವಲ ಮದುವೆ ಮುಂಜಿಗಳ ಖರ್ಚಿನಿಂದ ಸಾಲ ಹೆಚ್ಚುತ್ತಿರುವದೆಂದು ಹೇಳುವದು ಮೂರ್ಖತನವೇ ಹೊರತು ನಿಜವಾದ ಕಾರಣ ಎಂದು ಒಪ್ಪಿಕೊಳ್ಳಲು ಆಗುವುದಿಲ್ಲ. ಹ್ಯಾಗೂ ಇವುಗಳಿಗಾಗಿ ಮಾಡುವ ಅಗಾಧವಾದ ಸಾಲಗಳನ್ನು ತೀರಿಸಿ ಋಣ ಮುಕ್ತನಾಗಲು ಸಾಧ್ಯವೇ ಇಲ್ಲವೆಂಬುದಕ್ಕೆ ಅನೇಕ ಉದಾಹರಣೆಗಳು ಇರುವವು. ಇವುಗಳಲ್ಲದೆ ಮುಂದುಗಾರಿಕೆಯ ಹೆಚ್ಚುಗಳು ಇತ್ತೀಚಿನ ಎಲ್ಲರಿಗೂ ಗೋಚರವಾಗುವಂತೆ ದಿನೇ ದಿನೇ ಹೆಚ್ಚುತ್ತಿರುವದು.

(10) ಪಿತ್ರಾರ್ಜಿತವಾದ ಸಾಲಗಳು-ದಕ್ಷಿಣದ ರೈತರುಗಳ ವಿಚಾರಣಾ ಕರ್ತರು ಹೇಳುವುದೇನೆಂದರೆ, ಈಗ ಇರುವ ಋಣ ಬಾಧೆಗೆ ಪಿತ್ರಾರ್ಜಿತಗಳಾದ ಸಾಲಗಳೇ ಮುಖ್ಯ ಕಾರಣವೆಂದೂ, ತಂದೆಯಿಂದ ಮಗನಿಗೆ ವಂಶಪಾರಂಪರ್ಯವಾಗಿ ಸಾಲವು ಹೆಗಲೇರಿಕೊಂಡು ಬರುತ್ತಿರುವದೂ ಎಂದು. ಕಾನೂನು ನ್ಯಾಯಗಳ ತಿಳುವಳಿಕೆ ಇಲ್ಲದಿರುವುದೇ ಪಿತ್ರಾರ್ಜಿತವಾದ ಸಾಲದ ಭಾರವು ರೈತರುಗಳ ಹೆಗಲೇರಲು ಕಾರಣ. ಸತ್ತುಹೋದ ತಂದೆಯು ಸಾಲಕ್ಕಾಗಿ ಈಡು ಆಧಾರ ಮಾಡಿರುವ ಆಸ್ತಿಗಳ ಮೇಲೆ ಸಾಲ ಕೊಟ್ಟವನಿಗೆ ಹಕ್ಕು ಇರುವುದಲ್ಲದೆ, ಈಡು ಮಾಡದೇ ಇರುವ ಆಸ್ತಿಗಳ ಮೇಲೆ ಏನೂ ಹಕ್ಕು ಬಾಧ್ಯತೆ ಇಲ್ಲ. ತಂದೆಯು ಮಾಡಿದ ಸಾಲವನ್ನು ಮಗನು ತೀರಿಸುವದು ಬಹಳ ಗೌರವತೆ ಎಂದು ತಿಳಿದುಕೊಂಡಿರುವರು. ಪಿತ್ರಾರ್ಜಿತ ಸಾಲಗಳನ್ನು ತೀರಿಸುವದು ಒಳ್ಳೆಯ ನಡತೆಯು, ಧರ್ಮ ಎಂದು ಅನಾದಿಯಾಗಿ ಬಂದ ಪದ್ಧತಿಯಾಗಿರುವದು. ಈ ಸಾಲಗಳ ವಿಷಯವಾಗಿ ರೈತರುಗಳಿಗೆ ಇರತಕ್ಕ ಹಕ್ಕು ಬಾಧ್ಯತೆಗಳ ತಿಳುವಳಿಕೆಯನ್ನುಂಟು ಮಾಡುವದು ಅತ್ಯಾವಶ್ಯಕವಾಗಿರುವದು. ಕಾಯಿದೆ ಕಾನೂನುಗಳನ್ನು ಚೆನ್ನಾಗಿ ತಿಳಿದುಕೊಳ್ಳದೆ 'ಧರ್ಮಗೊಡ್ಡು ವಿನಂತೆ' ಪ್ರವರ್ತಿಸಬಾರದು ಎಂಬ ತಿಳುವಳಿಕೆಯನ್ನು ಉಂಟು ಮಾಡುವದು ಅತ್ಯಾವಶ್ಯವಾಗಿರುತ್ತೆ.

ಹಳ್ಳಿಗರು ದಿವಾಳಿತನದ ಸುಲಭವಾದ ಕಾನೂನುಗಳನ್ನು ಹಳ್ಳಿಯ ಸ್ಥಿತಿಗೆ ತಕ್ಕಂತೆ ಬಹಳ ಜಾಗರೂಕತೆಯಿಂದ ತಿಳುವಳಿಕೆಗೆ ಕೊಡಬೇಕು. ವ್ಯವಸಾಯದ ತನಿಖೆ ಕಾರ್ಯದರ್ಶಿಗಳು ರೈತರೆಲ್ಲರೂ ದಿವಾಳಿಯಾಗಲು ಪ್ರಯತ್ನಿಸುವುದನ್ನು ನೋಡಲು ಯಾರೂ ಅಪೇಕ್ಷಿಸುವುದಿಲ್ಲ. ಮತ್ತು ಅನೇಕ ರೈತರುಗಳು ಸಾಲವಂತರಾಗಿಯೇ ಹುಟ್ಟಿ, ಸಾಲವಂತರಾಗಿಯೇ ಬೆಳೆದು, ಸಾಲಗಾರರಾಗಿ ಸಾಯುತ್ತಿರುವುದು ಬಹಳ ಶೋಚನೀಯವಾದ ಸಂಗತಿ. [illegible]

ಡಿಸ್ಟ್ರಿಕ್ಟ್ ಬೋರ್ಡ್ ಮೀಟಿಂಗು.

(ಹಿಂದಿನ ಪುಟದಿಂದ ಸಾಗಿದ್ದು.)

29. ಬೋರ್ಡಿನ ಅಧ್ಯಕ್ಷರ, ಉಪಾಧ್ಯಕ್ಷರ ಮತ್ತು ಮೆಂಬರುಗಳ ಭತ್ಯವನ್ನು ಕ್ಲುಪ್ತಪಡಿಸುವ ಬಗ್ಗೆ ಚೀಫ್ ಕಮಿಷನರವರ ಪತ್ರದಲ್ಲಿ-ಅಧ್ಯಕ್ಷರಿಗೆ ಮೈಲೇಜ್ 6 ಆಣೆ, ದಿನ ಭತ್ಯ 5 ರೂ; ಉಪಾಧ್ಯಕ್ಷರಿಗೆ ಮೈಲೇಜ್ 6 ಆಣೆ ದಿನ ಭತ್ಯ 4 ರೂ. ಮತ್ತು ಉದ್ಯೋಗಸ್ಥರಲ್ಲದ ಮೆಂಬರುಗಳಿಗೆ ಮೈಲೇಜ್ 3 ಆಣೆ ದಿನ ಭತ್ಯ 2 ರೂ. ಹೇರಿಯೂ, ಮೆಂಬರುಗಳು ಮೈಲೇಜ್ ಮತ್ತು ಬಸ್ಸ್ ಛಾರ್ಜ + ದಿನ ಭತ್ಯ-ಇದರಲ್ಲಿ ಯಾವುದು ಕಡಿಮೆಯಾಗುವದೋ ಅದನ್ನು ತೆಗೆದುಕೊಳ್ಳಬೇಕೆಂದು ಸೂಚಿಸಿದ್ದನ್ನು ಅಂಗೀಕರಿಸಿದ್ದಲ್ಲದೆ ಬಸ್ಸ್ ಇಲ್ಲದ ಸ್ಥಳಗಳಿಂದ ಪ್ರಯಾಣ ಮಾಡುವವರಿಗೆ ಮೈಲೇಜು ಕೊಡುವಂತೆ ಮಾಡಬೇಕೆಂದು ಚೀಫ್ ಕಮಿಷನರನ್ನು ಕೇಳಿಕೊಳ್ಳುವಂತೆ ತೀರ್ಮಾನವಾಯಿತು.

30. ಅಸಿಸ್ಟೆಂಟ್ ಕಮಿಷನರವರ ಶಿಫಾರಸ್ಸು ಮೇರೆ ದೋಯಿಕೇರಿಯ ನಿವಾಸಿಗಳ ಉಪಯೋಗಕ್ಕಾಗಿ ತೆಗೆಸುವ ಬಾವಿಗೆ ರೂ. 100 ಕೊಡಲು ತೀರ್ಮಾನವಾಯಿತು.

31. ಅಸಿಸ್ಟೆಂಟ್ ಕಮಿಷನರವರ ಶಿಫಾರಸ್ಸು ಮತ್ತು ಮಿ. ಸಿ. ಪೂಣಚ್ಚನವರ ಒತ್ತಾಸೆ ಮೇರೆ ಗ್ರಾಮಾಭಿವೃದ್ಧಿ ಫಂಡಿನಿಂದ ಕುಂಬಳದಾಳು ಶಾಲೆಗೆ ತೆಗೆಸುವ ಬಾವಿಗೆ ರೂ. 100 ಬೋರ್ಡಿನಿಂದ ಕೊಡಲು ತೀರ್ಮಾನವಾಯಿತು.

32. ಕಮಿಷನರವರ ಶಿಫಾರಸ್ಸು ಮತ್ತು ಮಿ. ಬಿ. ಮಾಚಯ್ಯನವರ ಒತ್ತಾಸೆ ಮೇರೆ ಭಾಗಮಂಡಲದಿಂದ ನಾಪೋಕ್ಲಿಗೆ ಹೋಗುವ ರಸ್ತೆಯ ರಿಪೇರಿಗಾಗಿ 200 ರೂಪಾಯಿಯ ಒಳಗೆ ತನಿಖೆ ನಡಿಸಿದ ನಂತರ ಕೊಡಲು ತೀರ್ಮಾನವಾಯಿತು.

33. ಕಮಿಷನರವರ ಶಿಫಾರಸ್ಸು ಮತ್ತು ಮಿ. ಕೆ. ಗಣಪತಿಯವರ ಒತ್ತಾಸೆ ಮೇರೆ ಗ್ರಾಮಾಭಿವೃದ್ಧಿ ಫಂಡಿನಿಂದ ಮಾಡಲ್ಪಡುವ ನಿಸ್ಕಲಿ ಕೆರೆಯ ರಸ್ತೆಗೆ ರೂ 300 ಕೊಡಬಹುದೆಂದು ತೀರ್ಮಾನವಾಯಿತು.

34. ಅಸಿಸ್ಟೆಂಟ್ ಕಮಿಷನರವರ ಶಿಫಾರಸ್ಸು ಮೇರೆ ಕೂಡಿಗೆ ಉತ್ತಮ ಜೀವನ ಸಂಘಕ್ಕೆ ಗ್ರಾಮಸ್ಥರ ಉಪಯೋಗಕ್ಕಾಗಿ 4 ದೀಪಗಳನ್ನು ಪಡೆದುಕೊಡಲು ರೂ. 25 ಮಂಜೂರುಮಾಡಲಾಯಿತು.

35. ಎಕ್ಸಿಕ್ಯುಟಿವ್ ಇಂಜಿನೀಯರವರ ಶಿಫಾರಸ್ಸು ಮೇರೆ ಹುದಿಕೇರಿ ತಾಲೂಕು ಕಛೇರಿ ರಿಪೇರಿ ಬಗ್ಗೆ 300 ರೂಪಾಯಿ ಕೊಡಲು ತೀರ್ಮಾನವಾಯಿತು.

36. ಸೋಮವಾರಪೇಟೆ ಆಸ್ಪತ್ರೆಗೆ ಒಂದಕ್ಕೆ 48 ರೂ. ಕ್ರಯದ 14 ಮಂಚಗಳನ್ನು ಕೊಡಬೇಕೆಂಬ ಸಿವಿಲ್ ಸರ್ಜನರವರ ಶಿಫಾರಸ್ಸಿನ ಮೇರೆ 3 ಮಂಚಗಳಿಗಾಗಿ ರೂ. 144 ಮಂಜೂರಾಯಿತು.

37. ಮಿ. ಸಿ. ಯಂ. ಪೂಣಚ್ಚನವರ ಸೂಚನೆ ಮೇರೆ ಮೂರ್ನಾಡು ಆಸ್ಪತ್ರೆಗೆ ಹಾಸಿಗೆಗೆ ರೂ. 20 ತಲದಿಂಬ ಮತ್ತು 3 ರೂ. ಮಕ್ಕಳಿಗೆ ಎಲೋನ್ಸಿನ ಒಬ್ಬ ಡೇಕ್ಟರರ ಪರ್ಸನ್ನು ನೇಮಿಸಿ [illegible]

38. ಮಿ. ಸಿ. ಯಂ. ಪೂಣಚ್ಚನವರ ಸೂಚನೆ ಮೇರೆ ಮೂರ್ನಾಡಿನ ಇಂಡಿಯನ್ ಆಫೀಸರ್ಸ್ ಕ್ವಾರ್ಟರ್ಸ್ಸನ್ನು ಆಪಾವ ಯೋಜನೆ ಇಲ್ಲದ ವಾರ್ಡಿಗೆ ಮಾಡಲು ಬಿಟ್ಟುಕೊಡುವಂತೆ ಸರ್ಕಾರವನ್ನು ಕೇಳಿಕೊಳ್ಳಲು ತೀರ್ಮಾನವಾಯಿತು.

39. ಮಿ. ಸಿ. ಯಂ. ಪೂಣಚ್ಚನವರ ಸೂಚನೆ ಮೇರೆ ಗಾಳಿಬೀಡು ಹೊಳೆಗೆ ಗಾಳಿಬೀಡು ಸ್ಕೂಲಿನ ಹತ್ತಿರ ಒಂದು ಪಾಲ ಹಾಕಲು ರೂ. 20 ಮಂಜೂರಾಯಿತು.

40. ಮಿ. ಸಿ. ಯಂ. ಪೂಣಚ್ಚನವರ ಸೂಚನೆ ಮೇರೆ ಸರ್ಕಾರವು ಈಗ ಬೋರ್ಡಿಗೆ ಕೊಡುತ್ತಿರುವ ವಂತಿಗೆಯ ಜೊತೆಗೆ 5000 ರೂಪಾಯಿಗಳಿಗೆ ಕಮ್ಮಿ ಇಲ್ಲದ ಗ್ರಾಂಟನ್ನು ಕೊಡುವಂತೆ ಸರ್ಕಾರವನ್ನು ಕೇಳಿಕೊಳ್ಳಲು ತೀರ್ಮಾನವಾಯಿತು.

41. ಮಿ. ಸಿ. ಯಂ. ಪೂಣಚ್ಚನವರ ಸೂಚನೆಯಂತೆ ಪ್ರಾಂತೀಯ ಸರ್ಕಾರಕ್ಕೆ 'ಸೇನಿಟೇಷನ್ ಮತ್ತು ವೇಕ್ಸಿನೇಷನ್' ಇಲಾಖೆಗೆ ಬೋರ್ಡಿನಿಂದ ಕೊಡಲ್ಪಡುವ ವಂತಿಗೆಯನ್ನು ನಿಲ್ಲಿಸಬೇಕೆಂದು ಸರಕಾರವನ್ನು ಕೇಳಲು ತೀರ್ಮಾನವಾಯಿತು.

42. ಮಿ. ಕೆ. ಯಸ್. ಗಣಪತಿಯವರ ಸೂಚನೆ ಮೇರೆ ಚೆಟ್ಟಿಮಾನಿ ಶಾಲೆಗೆ ಡಿಪ್ಯುಟಿ ಇನ್ಸ್‌ಪೆಕ್ಟರವರು ಶಿಫಾರಸ್ಸು ಮಾಡಿದರೆ ಒಬ್ಬ ವಾಲಂಟೀಯರ್ ಟೀಚರನ್ನು ನೇಮಿಸಲು ತೀರ್ಮಾನವಾಯಿತು.

43. ಮಿ. ಕೆ. ಯಸ್. ಗಣಪತಿಯವರ ಸೂಚನೆ ಮೇರೆ ಇನ್ನು ಮುಂದಕ್ಕೆ ಡಿ. ಬೋರ್ಡಿನ ಜವಾನರಿಗೆ ಕೈಮಗ್ಗದ ಖಾದಿಯ ಉಡುಪುಗಳನ್ನೇ ಕೊಡುವಂತೆ ತೀರ್ಮಾನವಾಯಿತು.

44. ಮಿ. ಚೆಟ್ಟೋಳಿಂಡ ಮಾಚಯ್ಯನವರ ಸೂಚನೆ ಮೇರೆ ಕರಡ ಸ್ಕೂಲಿನಿಂದ ಅರಪಟ್ಟು ಗ್ರಾಮಕ್ಕಾಗಿ ಬಾವಲಿ, ಕೈಕಾಡು ರೋಡಿಗೆ 2 ಮೈಲು ದೂರದ ಹೊಸ ರಸ್ತೆ ಮಾಡಿಸಲು ರೂ. 50 ಮಂಜೂರಾಯಿತು.

45. ಮಿ. ಚೆಟ್ಟೋಳಿಂಡ ಮಾಚಯ್ಯನವರ ಸೂಚನೆ ಮೇರೆ ತಂತಿಪ, ಬೇತ್ರಿ ಮತ್ತು ಚಾಮು ಹೊಳೆಗಳಿಗೆ ಪಾಲ ಹಾಕಿಸಲು ರೂ. 25 ಮಂಜೂರಾಯಿತು.

46. ಸಂಪಾಜೆಯಲ್ಲಿ ಇಡೀ ವರ್ಷ ಹೆಂಗಸು ಆಸ್ಪತ್ರೆ ಇರಬೇಕೆಂಬ ಪತ್ರವನ್ನು ಓದಿ ಮಂಜೂರುಮಾಡಲಾಯಿತು.

47. ಮಿ. ಸಿ. ಯಂ. ಪೂಣಚ್ಚನವರ ಸೂಚನೆ ಮೇರೆ ಬೈಸಾ ಎಂಬ್ಯುಲೆನ್ಸ್ ಫಂಡಿಗೆ ರೂ. 25 ಮಂಜೂರುಮಾಡಲಾಯಿತು.

48. ಮಿ. ಯಸ್. ಯನ್. ರಾಮಶೆಟ್ಟಿಯವರ ಸೂಚನೆ ಮೇರೆ ಮದ್ರಾಸಿನ ಸ್ಥಳೀಯ ಆಡಳಿತೆ ಇಲಾಖೆಯ ಮಂತ್ರಿಗಳಾದ ಮಾನ್ಯ ಗೋಪಾಲ ರೆಡ್ಡಿಯವರು ತಾ. 19ರಲ್ಲಿ ಮಡಿಕೇರಿಗೆ ಬರುವಾಗ ಅವರಿಗೆ ಒಂದು ಬಿನ್ನವತ್ತಳೆಯನ್ನರ್ಪಿಸುವಂತೆ ತೀರ್ಮಾನಿಸಿ, ಇದರ ತಯಾರಿಕೆ ಬಗ್ಗೆ ಶ್ರೀಯುತರುಗಳಾದ ಪಿ. ಐ. ಬೆಳ್ಯಪ್ಪ, ಸಿ. ಯಂ. ಪೂಣಚ್ಚ ಮತ್ತು ಯಂ. ಯಸ್. ಸೋಮಯ್ಯನವರುಗಳಿಂದ ಕೂಡಿದ ಒಂದು ಸಬ್ ಕಮಿಟಿಯ ನೇಮಕಮಾಡಲಾಯಿತು.

ತನಿಖೆ ಬಗ್ಗೆ ಇಡಲ್ಪಟ್ಟ ಠರಾವುಗಳು.

1. ಪೊನ್ನಂಪೇಟೆ ಶಾಪೂರು ರಸ್ತೆಯಿಂದ ನಡಿಕೇರಿ ಗ್ರಾಮಕ್ಕೆ ಹೋಗುವ 2 ಮೈಲು ರಸ್ತೆಗೆ ರೂ. 50 ಮಂಜೂರು ಮಾಡುವ ವಿಷಯ. ಸೂಚಕರು ಕಾಳಮಾಡ ಗಣಪತಿಯವರು.

2. ಪೊನ್ನಂಪೇಟೆ ಹುದಿಕೇರಿ ರಸ್ತೆಯಿಂದ ಬೇಗೂರು ಚೇಣಿವಾಡ ಗ್ರಾಮಕ್ಕೆ ಹೋಗುವ ರಸ್ತೆಗೆ ರೂ 500 ಕೊಡುವ ವಿಷಯ. ಸೂಚಕರು ಮಿ. ಕಾಳಮಾಡ ಗಣಪತಿಯವರು.

3. ಜನಾರ್ದನ ಹಳ್ಳಿಯ ಸ್ವಂತ ಶಾಲೆಗೆ ಗ್ರಾಂಟು ಕೊಡಬೇಕೆಂಬ ವಿಷಯ.

4. ಕೋಣಗೇರಿ ರಸ್ತೆಯ ಬದಿಯಲ್ಲಿರುವ ಕೆರೆಯ ರಿಪೇರಿಗೆ ರೂ. 100 ಕೊಡಬೇಕೆಂಬ ವಿಷಯ. ಸೂಚಕರು ಕಾಳಮಾಡ ಗಣಪತಿಯವರು.

5. ಕುತ್ತುನಾಡು ಜನರಿಗೆ ಹುದಿಕೇರಿ ಸಂತೆಗೆ ಹೋಗಲು ಅನುಕೂಲವಾಗುವಂತೆ ಕುತ್ತುನಾಡು ಹೊಳೆಗೆ ಒಂದು ತಂತಿ ಹಗ್ಗವನ್ನು ಕೊಡುವ ವಿಷಯ. ಸೂಚಕರು ಮಿ. ಕಾಳಮಾಡ ಗಣಪತಿಯವರು.

6. ಕುಂದ ಶಾಲೆಗೆ ಒಂದು ಬಾವಿ ತೋಡಲಿಕ್ಕಾಗಿ ರೂ. 400 ಮಂಜೂರು ಮಾಡುವ ವಿಷಯ. ಸೂಚಕರು ಅಜ್ಜಿಕುಟ್ಟಿರ ಪೊನ್ನಪ್ಪನವರು.

7. ಮಾಯಮುಡಿ ಶಾಲೆಯ ಬಾವಿ ರಿಪೇರಿಗಾಗಿ ರೂ. 100 ಕೊಡುವ ವಿಷಯ. ಸೂಚಕರು ಅಜ್ಜಿಕುಟ್ಟಿರ ಪೊನ್ನಪ್ಪನವರು.

8. ಅಗಿನ ಭಾಗಮಂಡ್ಲ ಶಾಲೆಯನ್ನು ಹೈಯರ್ ಎಲಿಮೆಂಟರಿ ಶಾಲೆಯಾಗಿ ಮಾಡುವ ವಿಷಯ. ಸೂಚಕರು ಮಿ. ಕೆ. ಎಸ್. ಗಣಪತಿಯವರು

9. ಕೊಟ್ಟೆಯದು ಹೈಯರ್ ಎಲಿಮೆಂಟರಿ ಶಾಲೆಯಲ್ಲಿ ಚಿತ್ರದ ಕೆಲಸದ ತರಗತಿಯನ್ನು ತೆರೆಯುವ ವಿಷಯ. ಸೂಚಕರು ಮಿ. ಕೆ. ಯಸ್. ಗಣಪತಿಯವರು.

10. ಕೋಳಕೇರಿ ರಸ್ತೆಯ ರಿಪೇರಿಗಾಗಿ ರೂ. 50 ಕೊಡಬೇಕೆಂಬ ಮಿ. ಚೆಟ್ಟೋಳಿಂಡ ಮಾಚಯ್ಯನವರ ಠರಾವನ್ನು ತನಿಖೆಗೆ ಇಡಲಾಗಿದೆ. ಸಕೇಸ.]

ಬಾತ್ಮಿ.

ಮುಜ್ರಾಯಿ ಇಲಾಖಾ ಕಮಿಟಿ ಮೆಂಬರರ ಚುನಾವಣೆ.

ಅಯ್ಯಾ,

ಕೊಡಗು ಮುಜ್ರಾಯಿ ಇಲಾಖೆಗೆ ಸೇರಿದ ದೇವಸ್ಥಾನಗಳ ಕಮಿಟಿಯಲ್ಲಿ ಕಿಗ್ಗಟ್ಟುನಾಡು ತಾಲೋಕಿನ ಕೊಡಗರ ಪರ ಖಾಲಿ ಇದ್ದ ಸ್ಥಳಕ್ಕೆ ಈ ತಾ. 6 ರಲ್ಲಿ ವೀರಾಜಪೇಟೆಯಲ್ಲಿ ಚುನಾವಣೆ ನಡೆಯಿತು. ಕಿಗ್ಗಟ್ಟುನಾಡು ತಾಲೋಕಿನವರ ಪರ ಚುನಾವಣೆಯು ಆ ತಾಲೋಕಿನ ಹೊರಗೆ ಇರುವ ವೀರಾಜಪೇಟೆಯಲ್ಲಿ ನಡೆದದ್ದು ಆಶ್ಚರ್ಯವೇ ಸರಿ. ಇದಕ್ಕಿಂತ ಮುಖ್ಯವಾದ ಡಿಸ್ಟ್ರಿಕ್ಟ್ ಬೋರ್ಡು ಮತ್ತು ಕೌನ್ಸಿಲು ಚುನಾವಣೆಗಳು ಕಿಗ್ಗಟ್ಟುನಾಡಿನೊಳಗೇ ಗೋಣಿಕೊಪ್ಪಲು, ಪೊನ್ನಂಪೇಟೆ, ಹುದಿಕೇರಿ ಮತ್ತು ಶ್ರೀಮಂಗಲದಲ್ಲಿ ನಡೆಯುವಾಗ್ಯೆ ಮುಜ್ರಾಯಿ ಇಲಾಖೆ ಚುನಾವಣೆ ವೀರಾಜಪೇಟೆಯಲ್ಲಿ ನಡೆಯಲು ಕಾರಣವೇನು? ಕಿಗ್ಗಟ್ಟುನಾಡಿನವರಿಗೆ ವೀರಾಜಪೇಟೆಗೆ ಬರಲು ಎಷ್ಟು ತೊಂದರೆ ಇದೆ? ಆ ತಾಲೋಕಿನ ಮಧ್ಯಸ್ಥಳದಲ್ಲಿ ಓಟು ತೆಗೆದರಲ್ಲವೇ ಅಲ್ಲಿಯ ಜನರಿಗೆಲ್ಲಾ ಚುನಾವಣೆಯಲ್ಲಿ ಭಾಗವಹಿಸಲು ಅನುಕೂಲ. ಈಗಿನ ಚುನಾವಣೆ ಮೇರೆ ಕಿಗ್ಗಟ್ಟುನಾಡು ತಾಲೋಕಿನ ಪರ ಮೆಂಬರನ್ನು ಎಡೆನಾಲ್ಕುನಾಡಿನವರು ಆರಿಸಿದಂತಾಯಿತು. ಅಲ್ಲದೆ ಓಟು ಕೊಡುವಾಗ್ಯೆ ತಾನು ಓಟು ಕೊಡುವ ಉಮೇದುವಾರರ ಹೆಸರನ್ನು ಬಹಿರಂಗವಾಗಿ ಹೇಳಬೇಕಾಗಿದೆ. ಇದು ಗುಟ್ಟಿನ ನ್ಯಾಯವಾದ ಓಟಾಗಲಿಲ್ಲ. ದಾಕ್ಷಿಣ್ಯದ ಓಟಾಯಿತು. ಓಟನ್ನು ಗುಟ್ಟಿನಲ್ಲಿ ಗುರುತು ಮಾಡುವಂಥಾಗಬೇಕು. ಇದು ಮಾತ್ರವಲ್ಲ, ಈ ಚುನಾವಣೆಯಲ್ಲಿ ಮಧ್ಯಾಹ್ನದ ವರೆಗೆ ಕೊಡಗರನ್ನೇ ಓಟು ಕೊಡಲು ಬಿಟ್ಟು, ನಂತರ ಕೊಡಗೇತರ ಹಿಂದೂಗಳನ್ನೂ ಓಟು ಕೊಡಲು ಬಿಟ್ಟದ್ದರ ಕಾರಣವೇನು? ಇವನ್ನೆಲ್ಲಾ ವಿಚಾರಿಸಿ, ದೇವಸ್ಥಾನ ಕಮಿಟಿಯವರು ಈ ಕೊರತೆಗಳನ್ನು ಪರನೆ ಹೋಗಲಾಡಿಸುವರಾಗಿ ಕೋರಿಕೆ.

'ಕಿಗ್ಗಟ್ಟುನಾಡಿನವ.'

ಸೂಚನೆ:-'ಸಹಕಾರಿ ಸಂಸ್ಥೆಯೂ ಉದ್ಯೋಗಸ್ಥರೂ' 'ಕುತ್ತುನಾಡು ಹೊಳೆ' ಮತ್ತು 'ಅಮ್ಮತ್ತಿ ನಾಡಿನವರು' ಶ್ರೀ. ಪಿ. ಐ. ಬೆಳ್ಯಪ್ಪನವರಿಗೆ ಕೊಟ್ಟ ಬಿನ್ನಹ ಪತ್ರ'ವನ್ನು ಪ್ರಕಟಿಸಬೇಕೆಂದು ಅಲ್ಲಿಯ ಸ್ವಾಗತಾಧ್ಯಕ್ಷರು ಕಳುಹಿಸಿದ ಬಾತ್ಮಿ ಇತ್ಯಾದಿಗಳನ್ನು ಸ್ಥಳಸಂಕೋಚದಿಂದ ಈ ವಾರ ಪ್ರಕಟಿಸಲಾಗಲಿಲ್ಲ. ಅವನ್ನು ಬರುವ ವಾರ ಪ್ರಕಟಿಸಲಾಗುವುದು.

ಸಂ. ಕೊ.]

ಚೈನಾದ ವಿಷಮ ಪರಿಸ್ಥಿತಿ.

ಜಪಾನೀಯರು ದಕ್ಷಿಣಕ್ಕೆ ಒತ್ತಿ ಬಂದ ಹಾಗೆ ಚೀನೀಯರು ಯಂಗ್‌ಸೀ ನದಿಯಲ್ಲಿ ಒಳಪ್ರಾಂತಕ್ಕೆ ಹೋಗಿ ವಾಸಿಸಲು ಯತ್ನಿಸುತ್ತಿದ್ದಾರೆ. ಒಂದು ಕಡೆ ನದಿಯ ಅಪೂರ್ವ ನೆರೆ, ಇನ್ನೊಂದು ಕಡೆ ಸಿಡಿಮದ್ದಿನ ಚೆಲ್ಲಾಟಗಳಿಂದ ಸೋತು ಸುಣ್ಣಾಗಿ ಹಾಂಕೋದಿಂದ ಇಚಾಂಗಕ್ಕೆ ಕಡಿದ 350 ಮೈಲು ಉದ್ದದ ಹೊಸ ಮಾರ್ಗದಲ್ಲಿ 30 ಮೈಲು ಉದ್ದದ ಒಂದು ಸಂಗಡವು ಹೋಗುತ್ತಿರುವುದನ್ನು ಕಂಡವರಿರುವರು. ಕತ್ತೆ, ಕುದುರೆ ರಿಕ್ಷಾ, ಎತ್ತು ಬಂಡಿ ಇತ್ಯಾದಿ ಹಲವು ವಾಹನಗಳ ಮೇಲೆ ತಮ್ಮ ಅಳಿದುಳಿದ ಸೊತ್ತನ್ನು ಹೊರಿಸಿ, ಹೆಂಗಸರು ಮಕ್ಕಳು ಕೂಡ ದಾರಿಯಲ್ಲಿ ಆ ಸಾಮಾನನ್ನು ಹರಡಿ ಅದರ ಮೇಲೆಯೇ ನಿದ್ದೆಹೋಗುವ ಪ್ರವಯಪ್ರಾಣಿಕ ನೋಟವು ಅಪರೂಪದ್ದು, ಅಸಂಖ್ಯಾತ ಜನರು ದೋಣಿಗಳನ್ನು ಕಟ್ಟಿಯುತ್ತಾ ಯಂಗ್‌ಸೀ ನದಿಯ ದಂಡೆಯ ಮೇಲೆ ಬಂದು ಸೇರಿರುವರು. ಇವರೆಲ್ಲ ಒಳ ಪ್ರಾಂತದಲ್ಲಿ ಹೊಸ ಭಾಗಗಳಲ್ಲಿ ವಸತಿ ಮಾಡಿ, ಅದರಲ್ಲಿ ಕೃಷಿಯಿಂದ ಜೀವನ ಮಾಡುವ ಆಶೆಯಿಂದ ಹೊರಟವರು.

ಳೆದ ವಾರ ಕತ್ತಲೆಕಾನ ಮೂರೂರು ಗ್ರಾಮ ದ ಮೆ. ಚಾಟ್ಟೀರ ಕಾರ್ಯಪ್ಪನವರೂ ಮತ್ತು ಈ ತಾ. 13 ರಲ್ಲಿ ಮೆ. ಪುಟ್ಟಿಚಂ ಡ ಪೊನ್ನಪ್ಪನವರ ಪತ್ನಿಯವರೂ ಶಿವಾ ಧೀನರಾದರೆಂದು ತಿಳಿಸಲು ವಿಷಾದಿಸು ತ್ತೇವೆ.

ಮೆ. ಸಿ. ಬಿ. ಬೆಳ್ಯಪ್ಪನವರು ಡಿಸ್ಟ್ರಿಕ್ಟ್ ಬೋರ್ಡಿನ ಅಧ್ಯಕ್ಷರಾಗಿ ಆರಿಸಲ್ಪಟ್ಟ ಕಾರಣ, ಅಮ್ಮತ್ತಿನಾಡಿನವರು ಈ ತಾ. 2 ರಲ್ಲಿ ಅಮ್ಮತ್ತಿ ಶಾಲೆಯಲ್ಲಿ ಸೇರಿ ಅವರಿಗೊಂದು ಬಿನ್ನಹ ಪತ್ರವನ್ನು ಅರ್ಪಿಸಿ, ಟೀ ಪಾರ್ಟಿಯನ್ನು ಕೊಟ್ಟರೆಂದೂ, ತಾ. 6 ರಲ್ಲಿ ಹೆಬ್ಬಾಲೆ ಗ್ರಾಮಸ್ಥರು ಅವರಿಗಾಗಿ ಒಂದು ಸತ್ಕಾರ ಕೂಟವನ್ನು ನಡೆಸಿದರೆಂದೂ ತಿಳಿಯಬರುತ್ತದೆ.

ಅಸಿಸ್ಟೆಂಟ್ ಕಮಿಷನರವರ ಆಫೀಸಿನಲ್ಲಿ ಶಿರಸ್ತೆದಾರರಾದ ಮೆ. ಪಳಂಗಂಡ ತಿಮ್ಮಯ್ಯನವರು ತಮ್ಮ ರಜವನ್ನು ೬ ತಿಂಗಳು ಮುಂದುವರಿಸಿದ್ದರಿಂದ ಆ ಸ್ಥಳಕ್ಕೆ ಜ್ಯುಡಿಶಿಯಲ್ ಶಿರಸ್ತೆದಾರರಾಗಿದ್ದ ಮೆ. ಪಂಡುರಾವ್‌ರವರನ್ನೂ, ವೀರಾಜಪೇಟೆ ಅಬ್ಕಾರಿ ಸಬ್ ಇನ್ಸ್‌ಪೆಕ್ಟರಾಗಿದ್ದ ಶ್ರೀ ಕೇಂದ್ರಿಮಾಡ ಗಣಪತಿಯವರನ್ನು ಜ್ಯುಡಿಶಿಯಲ್ ಶಿರಸ್ತೆದಾರರಾಗಿಯೂ, ಮೆ. ಅಪ್ಪಚ್ಚೀರ ರವರನ್ನು ವೀರಾಜಪೇಟೆ ಅಬ್ಕಾರಿ ಸಬ್ ಇನ್ಸ್‌ಪೆಕ್ಟರಾಗಿಯೂ ನೇಮಿಸಿರುವರಾಗಿ ತಿಳಿಯಬರುತ್ತೆ.

ಮದ್ರಾಸು ಸರ್ಕಾರದ ಸ್ಥಳೀಯ ಸ್ವರಾಜ್ಯ ಸಂಸ್ಥೆಗಳ ಇಲಾಖೆಯ ಮಂತ್ರಿಗಳಾದ ಶ್ರೀಮಾನ್ ಬಿ. ಗೋಪಾಲ ರೆಡ್ಡಿಯವರು ಈ ತಾ. 19 ರಲ್ಲಿ ಕಣ್ಣಾನೂರಿನಿಂದ ವೀರಾಜಪೇಟೆ ಮಡಿಕೇರಿ ಮಾರ್ಗವಾಗಿ ಮಂಗಳೂರಿಗೆ ಹೋಗುವರೆಂಬ ವರ್ತಮಾನವಿತ್ತು. ಆದರೆ ಖಾಸಗಿ ಕೆಲಸ ಸಂಬಂಧ ಅವರು ತಮ್ಮ ಮಲಬಾರು ಮತ್ತು ದಕ್ಷಿಣ ಕನ್ನಡ ಪ್ರವಾಸವನ್ನು ತಕ್ಕಾಲ ವಜಾ ಮಾಡಿರುವ ಕಾರಣ ತಾ. 19 ರಲ್ಲಿ ಕೊಡಗಿಗೆ ಬರುವುದಿಲ್ಲವೆಂದು ತಿಳಿಯಬರುತ್ತದೆ.

ನಾಲ್ಕು ಕರ ಹಾಕಿದ ಹಸು!

ಪೊನ್ನಂಪೇಟೆನಾಡು ಮಾಯಮುಡಿ ಗ್ರಾಮದ ಮೆ. ಅಪಟ್ಟೀರ ಬಿದ್ದಪ್ಪನವರ ಹಸುವೊಂದು ಈ ತಾ. 8 ರ ರಾತ್ರಿ ನಾಲ್ಕು ಕರಗಳನ್ನು ಹಾಕಿದ ವಿಶೇಷ ವಾರ್ತೆ ಬಂದಿದೆ. ಆ ಹಸುವು ಆ ದಿನ ಸಾಯಂಕಾಲ ಒಂದು ಹೆಣ್ಣು, ಒಂದು ಗಂಡು-ಹೀಗೆ ಎರಡು ಕರಗಳನ್ನು ಹಾಕಿದ್ದನ್ನು ಕೊಟ್ಟಿಗೆಯಲ್ಲಿ ಕಂಡಿದ್ದರು. ಮರುದಿನ ಬೆಳಿಗ್ಗೆ ನೋಡುವಾಗ್ಗೆ ಪುನಹ ಒಂದು ಹೆಣ್ಣು, ಮತ್ತೊಂದು ಗಂಡು ಕರವನ್ನು ಹಾಕಿದ್ದಿತು; ಆದರೆ 2 ಹೆಣ್ಣು ಕರಗಳು ಸತ್ತು ಹೋದವು. ಉಳಿದ 2 ಗಂಡು ಕರಗಳು ಚೆನ್ನಾಗಿವೆ. ಚಿಕ್ಕ ಗಾತ್ರದ ಇದೇ ಹಸ ಮೂರು ವರ್ಷಗಳ ಹಿಂದೆ 2 ಕರಗಳನ್ನೂ, 1½ ವರ್ಷದ ಹಿಂದೆ ಒಂದು ಕರವನ್ನೂ ಹಾಕಿದ್ದಿತೆಂದು ತಿಳಿಯಬರುತ್ತದೆ.

ಹಿಂದೂದೇಶ.

ಈ ತಿಂಗಳಲ್ಲಿ ಬಂಗಾಳದ ಸರ್ಕಾರದವರು 111 ಡೆಟೆನ್ಯೂಗಳನ್ನು ಬಿಡುಗಡೆ ಮಾಡಿರುವರು.

ಚೀನಾ ದೇಶಕ್ಕೆ ಔಷಧ ಸಹಾಯ ಕಳುಹಿಸಲೆಂದು ತೆರೆಯಲಾದ ಚೈನಾ ಫಂಡಿಗೆ, ಇದಾಗಲೇ ರೂ. 11,153 ಸಂಗ್ರಹಿಸಲಾಗಿದೆ.

ಮದ್ರಾಸಿನಲ್ಲಿ ಇನ್ನು ಮುಂದೆ ಸ್ತ್ರೀ ಕೈದಿಗಳನ್ನು ಕರೆದುಕೊಂಡು ಹೋಗಲು ಸ್ತ್ರೀ ಕಾನ್‌ಸ್ಟೇಬಲುಗಳನ್ನು ನಿಯಮಿಸಬೇಕೆಂದು ಯೋಚಿಸುತ್ತಿರುವರು.

ರಾಷ್ಟ್ರಪತಿಗಳಾದ ಸುಭಾಶಚಂದ್ರರಿಗೆ ಇನ್‌ಫ್ಲುಯೆಂಜಾ ಜ್ವರವಾದ್ದರಿಂದ ಸಂಪೂರ್ಣ ವಿಶ್ರಾಂತಿಯು ಅವಶ್ಯವೆಂದು ಡಾಕ್ಟರರು ಸಲಹೆ ಕೊಟ್ಟಿದ್ದಾರೆ.

ಬಳ್ಳಾರಿ, ಕಡಪ, ಕರ್ನೂಲ್, ಅನಂತಪುರ, ಜಿಲ್ಲೆಗಳಲ್ಲಿರುವ ಕ್ಷಾಮ ಬಾಧೆಯ ನಿವಾರಣೆಗಾಗಿ ಧರ್ಮಾವರದಲ್ಲಿ ಒಂದು ಯಜ್ಞವನ್ನು ಮಾಡಲಿರುವರು.

ಜೋಧಪುರ ಸರ್ಕಾರದವರು ಸಂಸ್ಥಾನದ ಎಲ್ಲಾ ಸ್ಕೂಲುಗಳಲ್ಲಿಯೂ ನೂಲುವುದು ಮತ್ತು ನೇಯುವುದು ಇವನ್ನು ಕಲಿಸಲು ಏರ್ಪಡಿಸಿರುತ್ತಾರೆ.

ಬ್ರಹ್ಮಪುತ್ರ ನದಿಗೆ ನೆರೆ ಬಂದು ಪೂರ್ವ ಬಂಗಾಳದಲ್ಲಿಯ ಲಕ್ಷಗಟ್ಟಲೆ ಜನರು ಮನೆ ಮಾರು ಕಳೆದುಕೊಂಡು ನಿರಾಧಾರಿಗಳಾಗಿದ್ದಾರೆ. ಬ್ರಹ್ಮಪುತ್ರ ನದಿಯು ಇನ್ನೂ ಏರುತ್ತಿದೆ.

ಹಿಂದುಸ್ಥಾನೀ ಭಾಷಾ ವಿರುದ್ಧ ಚಳವಳಿ ಹೂಡುವವರ ನಾಯಕರಾದ ಶ್ರೀ. ಸ್ವಾಮಿ ಅರುಣಗಿರಿ ನಾಥರ್ ಎಂಬವರು, ಒಂದು ವರ್ಷದ ಕಠಿಣ ಸಜೆಗೆ ಗುರಿಮಾಡಲ್ಪಟ್ಟಿದ್ದಾರೆ.

ಕಾಂಗ್ರೆಸ್ ವರ್ಕಿಂಗ್ ಕಮಿಟಿಯ ಸಭೆ, ರಾಷ್ಟ್ರಪತಿಗಳ ಅನಾರೋಗ್ಯದ ದೆಸೆಯಿಂದ ಜುಲೈ 23 ಕ್ಕೆ ಹಿಂದುವರಿಯಾಗಿ ನಿಶ್ಚಯಿಸಿದೆ. ಮಹಾತ್ಮಾಜಿಯವರ ಒಪ್ಪಿಗೆಗಾಗಿ, ಶ್ರೀ. ಸುಭಾಸ್ ಭೋಸರು, ಅವರಿಗೆ ಈ ವಿಚಾರವನ್ನು ತಿಳಿಸಿದ್ದಾರೆ.

ಮೈಸೂರಿನಲ್ಲಿ 'ಪ್ರಜಾಶಕ್ತಿ' ಎಂಬ ಹೆಸರಿನಿಂದ ಪ್ರಕಟವಾಗುತ್ತಿದ್ದ 'ಪ್ರಜಾಮತ' ಪತ್ರಿಕೆಯ ಸುಮಾರು 300 ಪ್ರತಿಗಳನ್ನು ಅಲ್ಲಿಯ ಸ್ಥಳೀಯ ಮಂಡಿಯಿಂದ ನಗರ ಪೋಲೀಸರು ವಶಪಡಿಸಿಕೊಂಡರು. ಸಂಸ್ಥಾನದಲ್ಲೆಲ್ಲಾ 'ಪ್ರಜಾಶಕ್ತಿ' ಗೆ ಬಹಿಷ್ಕಾರ ಹಾಕಲಾಗಿದೆ.

ಪೇಶಾವರದ ಡಿಸ್ಟ್ರಿಕ್ಟ್ ಬೋರ್ಡು, ಅದಕ್ಕೆ ಸಂಬಂಧಿಸಿದ ಎಲ್ಲಾ ಶಾಲೆ, ಆಫೀಸು, ಆಸ್ಪತ್ರೆ, ಕಟ್ಟಡಗಳ ಮೇಲೆ, ರಾಷ್ಟ್ರಧ್ವಜವನ್ನು ಹಾರಿಸುವಂತೆ ಮತ್ತು ಆ ಕಟ್ಟಡಗಳೊಳಗೆ ಗಡಿನಾಡಿನ ಗಾಂಧಿ ಗಾಫರ್ ಖಾನರ ಭಾವಚಿತ್ರವನ್ನಿರಿಸುವಂತೆ, ಒಂದು ಠರಾವು ಪಾಸುಮಾಡಿದೆ.

ಸಂಪದ್ಭಾವನಾತ್ಮಕವಾಗಿ, ಬಹು ಸಂಖ್ಯಾತರು, ಫೆಡರೇಶನಿನ ಯೋಜನೆಯನ್ನು ಸ್ವೀಕರಿಸುವಂತಾದರೆ, ಕಾಂಗ್ರೆಸ್ ಪ್ರೆಸಿಡೆಂಟರಾದ ಶ್ರೀ. ಸುಭಾಷ್ ಚಂದ್ರಭೋಸರವರು, ತಮ್ಮ ಆ ಸ್ಥಾನಕ್ಕೆ ರಾಜಿನಾಮೆ ಕೊಡಬಹುದು ಎಂದೂ, ಆ ಯೋಜನೆಯ ವಿರುದ್ಧ ಅವರು ಪ್ರಬಲವಾದ ಚಳವಳಿ ಹೂಡಬಹುದೆಂದೂ ಅವರದೇ ಒಂದು ಪ್ರಕಟಣೆಯಿಂದ ವ್ಯಕ್ತವಾಗುತ್ತದೆ.

ಸುಮಾರು 50 ರಿಂದ 60 ಸಾವಿರದವರೆಗೆ, ಸಂಯುಕ್ತ ಪ್ರಾಂತ್ಯದಲ್ಲಿ ಕೂಲಿಗಾರರಿರುವರಾಗಿಯೂ, ಅವರಿಗೆ ಪ್ರೌಢ ವಿದ್ಯಾಭ್ಯಾಸವನ್ನೀಯುವ ಏರ್ಪಾಡನ್ನು ಸರಕಾರವು, ತುರ್ತಾಗಿ ಕೈಕೊಳ್ಳಬೇಕಾಗಿಯೂ ಆ ಜಾತಿಯ ಜನರು ಕಳೆದ ವಾರ 'ಪ್ರೌಢ ವಿದ್ಯಾಭ್ಯಾಸದ ದಿನ' ವನ್ನು ಆಚರಿಸಿ, ಠರಾವು ಮಾಡಿದರು.

ಅಲ್ಪ ಸಂಬಳದ ಕೆಲಸಗಾರರು-ಮೇಲಿನ ದರ್ಜೆಯ ಸಂಬಳದ ತರಗತಿಗೆ ಟ್ರಾನ್ಸ್‌ಫರ್ ಮಾಡಲ್ಪಟ್ಟು ಆ ಅವಧಿ ಮುಗಿದೊಡನೆಯೇ, ಅದೇ ಬದಲಿ ಕೆಲಸದ ಸಂಬಳದ ಮೇಲೆ, ರಜೆ ಪಡೆಕೊಳ್ಳುತ್ತಿರುವರು. ಇದು ಸಾರ್ವಜನಿಕ ಹಿತದೃಷ್ಟಿಯಿಂದ ಅನ್ಯಾಯವಾದದ್ದು. ಆದುದರಿಂದ ಮುಂದೆ ಇಂತಹ ವಿಚಾರದಲ್ಲಿ, ರಜೆಗೆ ಅನುಮತಿ ಕೊಡುವವರು ಹೆಚ್ಚಾದ ಜಾಗ್ರತೆ ವಹಿಸಬೇಕು,-ಎಂದು ಮದ್ರಾಸ್ ಸರಕಾರವು ಸೂಚಿಸಿದೆ.

ಬೀಹಾರ್ ಸರಕಾರವು, ಹಜಾರಿಬಾಗ್ ಸೆಂಟ್ರಲ್ ಜೈಲಿನಲ್ಲಿ, ಪ್ರೌಢ ವಿದ್ಯಾಭ್ಯಾಸವನ್ನು, ಕೈದಿಗಳಿಗೆ ಕೊಡಲು ಆರಂಭಿಸಿದೆ. 'ಬಿ' ಕ್ಲಾಸಿನ ಅನೇಕ ವಿದ್ಯಾವಂತರು, ಉಪಾಧ್ಯಾಯರಾಗಿ ಕೆಲಸ ಮಾಡಲು, ಮುಂದೆ ಬಂದಿದ್ದಾರೆ. ಕೈದಿಗಳಿಗೆ ಸ್ಲೇಟು, ಪುಸ್ತಕ ಮುಂತಾದ ಬೇಕಾದ ವಸ್ತುಗಳನ್ನು ಒದಗಿಸಿ ಕೊಡಲಾಗಿದೆ. ಪ್ರತಿಯೊಬ್ಬನಿಗೂ, ದಿನಕ್ಕೆ ಎರಡು ತಾಸುಗಳ ಅಭ್ಯಾಸವನ್ನು ಕೊಡಿಸಲಾಗುತ್ತಿದೆ. ಈಗ ಕಲಿಯಲು ಮುಂದಾದವರ ಸಂಖ್ಯೆ 300.

ವಿದೇಶ

ತಾ. 12 ರಲ್ಲಿ 18 ಜಪಾನಿನ ವಿಮಾನಗಳು ವಾಂಗ್‌ಚಂಗಪಟ್ಟಣದ ಮೇಲೆ 100 ಬಾಂಬುಗಳನ್ನು ಎಸೆದವು. 200 ಜನರು ಮೃತರಾದರು. ಹುವೆ ಪ್ರಾಂತೀಯ ಆಸ್ಪತ್ರೆಯ ಮೇಲೆ ಬಾಂಬು ಹಾಕಿದ್ದರಿಂದ ಅದರ ಒಂದು ಭಾಗವು ಮುರಿದು ಬಿದ್ದು; ಅಲ್ಲಿದ್ದ ಸಿಬ್ಬಂದಿಯವರೂ, ಅನೇಕ ಕಾಯಿಲೆಯವರೂ ಮಣ್ಣಿನೊಳಗೆ ಹೂಳಲ್ಪಟ್ಟರು.

14 ರಿಂದ 21 ವಯಸ್ಸಿನ ಚೀನದ ಹೆಣ್ಣು ಮಕ್ಕಳನ್ನು ಹಾಂಕಾಂಗದಲ್ಲಿ ಗುಲಾಮರೆಂದು ಮಾರಾಟ ಮಾಡುವ ವ್ಯಾಪಾರ ನಡೆದಿದೆ. ಅವರನ್ನು 8½ ಪೌಂಡಿನಿಂದ 17 ಪೌಂಡಿನ ವರೆಗೆ ಮಾರುವರು. ಈ ವ್ಯಾಪಾರವು ಗುಪ್ತ ರೀತಿಯಿಂದ ನಡೆದಿದ್ದು ಹೆಣ್ಣು ಮಕ್ಕಳನ್ನು ಕದ್ದು, ಮುಚ್ಚಿ ಮನೆಗಳಿಂದ ಹಿಡಿಸಿಕೊಂಡು ಹೋಗಿ ಕೊರಳಲ್ಲಿ ಬೆಲೆಯ ಚೀಟಿ ಕಟ್ಟಿ ಬಿಡುವರು.

ಪಂ. ಜವಹರಲಾಲ ನೆಹರೂಗಳು ಬಹಳವಾಗಿ ದಣಿದಿರುವರು. ಕಳೆದ ಗುರುವಾರ ಲಂಡನ್ ನಗರದ ಕ್ವಿನ್ಸ್ ಹಾಲ್‌ನಲ್ಲಿ ಭಾಷಣ ಮಾಡಿದರು. ಚೈನಾ ಔಷಧ ಸಹಾಯ ನಿಧಿಗಾಗಿ 200 ಪೌನುಗಳನ್ನು ಸಂಗ್ರಹಿಸಿದರು. ಅದೇ ದಿನ, ಜವಹರಲಾಲರ ಸಹಿಯಿದ್ದ ಗಾಂಧಿಟೋಪಿಯೊಂದು, 7 ಪೌನುಗಳಿಗೆ ಮಾರಾಟವಾಯಿತು.

ಲಂಡನ್ನಿಗೆ ತೆರಳಿರುವ ಶ್ರೀ. ಜವಹರ್‌ಲಾಲರು ಅಲ್ಲಿಗೆ ಪ್ರವೇಶಿಸಿದಂದಿನಿಂದ, ಅವರನ್ನು ನೋಡಲೂ, ಮಾತನಾಡಲೂ ಬರುವ ಮಂದಿಯ ಸಂಖ್ಯೆ ಅತ್ಯಧಿಕವಾಗಿ, ಅವರಿಗೆ ಎಳ್ಳಷ್ಟೂ ವಿರಾಮವಿಲ್ಲದಾಗಿದೆ. ಒಂದೆಡೆ, ಟೆಲಿಫೋನಿನ ಕರೆಗಳಿಗಾಗಿ ಗಮನವೀಯಲು ಅದನ್ನು ಕೈಯಲ್ಲೇ ಹಿಡಿದುಕೊಂಡಿದ್ದು, ಉತ್ತರಿಸುತ್ತಾ ಇರಬೇಕಾಗಿದೆ. ಇನ್ನೊಂದೆಡೆ ಭೇಟಿಗಳ ಕಾಟ; ಭಾಷಣಗಳ ಮೇಳಾಟ. ಪಂಡಿತರು ಇದರಿಂದ ತುಂಬಾ ಬಳಲಿರುವರು.

ಮಡಿಕೇರಿ ಮುನ್ಸೀಫ್ ಕೋರ್ಟಿನಲ್ಲಿ.

1938ನೇ ಇಸವಿ ಓ. ಮಿ. ನಂ. 100.

ಅರ್ಜಿದಾರ. ಪಟ್ಟಮಾಡ ಕೆ. ಅಪ್ಪಯ್ಯ.

V. S.

ಎದ್ರಿ-ಪಟ್ಟಮಾಡ ನಂಜಪ್ಪ.

ಮೇಲ್ಕಂಡ ಅರ್ಜಿದಾರನು ಪೌತಾದ ಪಟ್ಟಮಾಡ ಕುಶಾಲಪ್ಪನವರಿಗೆ ಸನ್ ಲೈಫ್ ಇನ್ಸೂರೆನ್ಸ್ ಕಂಪೆನಿಯಿಂದ ಬರಬೇಕಾದ 78-4-0 ರೂಪಾಯಿಗಳ ವಸೂಲಾತಿ ಬಗ್ಗೆ ತನಗೆ 1925ನೇ ಇಸವಿ XXXIXನೇ ನಂಬರು ಆಕ್ಟ್ ಮೇರೆ ಸರ್ಟಿಫಿಕೇಟು ಕೊಡಿಸಿ ಕೊಡಬೇಕಾಗಿ ಈ ಕೋರ್ಟಿಗೆ ಅರ್ಜಿದಾಸ್ತು ಮಾಡಿರುವುದರಿಂದ ಸದರಿ ಅರ್ಜಿ ಮೇರೆ ಅರ್ಜಿದಾರನಿಗೆ ಯಾಕೆ ಸರ್ಟಿಫಿಕೇಟು ಕೊಡ ಕೂಡದೆಂಬುದಕ್ಕೆ ಸಬೂಬು ತೋರಿಸಲು ತಾರೀಕು 5-8-1938ಕ್ಕೆ ಹಿಯರಿಂಗ್ ಇಟ್ಟಿರುತ್ತದೆಯಾದ್ದರಿಂದ ತಕರಾರುದಾರರು ಸದರಿ ದಿನ ಹಗಲು 11 ಗಂಟೆಗೆ ಹಾಜರಾಗಿ ತಮ್ಮ ತಕರಾರುಗಳನ್ನು ಹೇಳಿಕೊಳ್ಳತಕ್ಕದ್ದು.

ಪಿ. ಯಂ. ನಾಣಯ್ಯ,
(ಮುನ್ಸೀಫ್, ಮಡಿಕೇರಿ.)

ತಾ. 7-7-1638.

ಪ್ರಕಟಣೆ.

ಹೊಸೂರು ಗ್ರಾಮದ ಶ್ರೀ. ಪಂದ್ಯಂಡ ಬೆಳ್ಯಪ್ಪನವರ ಬಾಗದಿಂದ ತಾರೀಕು 18-6-38ರ ಸಾಯಂಕಾಲ 5 ಗಂಟೆ ಸಮಯಕ್ಕೆ ಈ ಕೆಳಗೆ ಕೊಟ್ಟಿರುವ ಗುರ್ತುಗಳಿರುವ ಒಂದು ಹಸ ಮತ್ತು ಅದರ ನಾಲ್ಕು ತಿಂಗಳ ಕರ ಸಹ ಪರಾರಿಯಾಗಿವೆ. ಪತ್ತೆ ಹಚ್ಚಿ ಈ ಕೆಳಗಿನ ಅಡ್ರೆಸಿಗೆ ತಿಳಿಸಿದವರಿಗೆ 2 ರೂಪಾಯಿ ಬಹುಮಾನ ಕೊಡಲಾಗುವುದು.

1. ಬೂದು ವರ್ಣದ 1 ಅಡಿ ಉದ್ದದ ಬಾಚ ಕೋಡಿನ ಸುಮಾರು 3 ಅಡಿ ಎತ್ತರದ ಹಸ.

2. ಕೆಂಪು ವರ್ಣದ ಹೊಟ್ಟೆಯ ಅಡಿಯಲ್ಲಿ ಮತ್ತು ಮುಖದಲ್ಲಿ ಬಿಳಿ ಪಟ್ಟೆ ಇರುವ ಹೆಣ್ಣು ಕರ.

ಪಂದ್ಯಂಡ ಬೆಳ್ಯಪ್ಪನವರ
ವಾರ ಮಾಡುವ ಗೌಡುಗಳ
ಬಳ್ಳಡ್ಕ ಬೋಜಪ್ಪ,
ಹೊಸೂರು ಗ್ರಾಮ,
ಅಮ್ಮತ್ತಿ.

ಕೊಡಗು

ಜುಲೈ ತಾರೀಖು ೧೫ನೇ ಶುಕ್ರವಾರ ೧೯೩೮.

ಸಂಯುಕ್ತ ರಾಜ್ಯಾಂಗ ಘಟನೆ.

ಕಾಂಗ್ರೆಸು ಪಾರ್ಟಿಯವರು ಪ್ರಾಂತೀಯ ಸರ್ಕಾರಗಳಲ್ಲಿ ಅಧಿಕಾರ ಸ್ವೀಕಾರ ಮಾಡಿ ಒಂದು ವರ್ಷವಾಯಿತು. ಈ ಒಂದು ವರ್ಷ ಕಾಲದಲ್ಲಿ ಕಾಂಗ್ರೆಸ್ಸಿನವರು ಅಧಿಕಾರಕ್ಕೆ ಬಂದ ಏಳು ಪ್ರಾಂತ್ಯಗಳಲ್ಲಿ ಜನರಿಗೆ ಪ್ರಯೋಜನಕರವಾದ ಹಲವು ಹೊಸ ಕಾರ್ಯಗಳು ಮೊದಲ್ಗೊಂಡಿವೆಯೆಂಬುದರಲ್ಲಿ ಸಂಶಯವಿಲ್ಲ. ರಾಜಕೀಯ ಕೈದಿಗಳ ಬಿಡುಗಡೆಯ ವಿಷಯದಲ್ಲಿ ಖಂಡಿತಾ ಮುಂದುವರಿದಿದೆ. ಇದರ ಪರಿಣಾಮವಾಗಿ ಕಾಂಗ್ರೇಸೇತರ ಮಂತ್ರಿ ಮಂಡಳಿಗಳಿರುವ ಪ್ರಾಂತ್ಯಗಳಲ್ಲೂ ಕೂಡ ರಾಜಕೀಯ ಕೈದಿಗಳ ಬಿಡುಗಡೆಯು ನಿರೀಕ್ಷಣೆ ಮಾಡಿದ್ದಕ್ಕಿಂತ ಹೆಚ್ಚು ಸರಾಗವಾಗಿ ನಡೆಯುತ್ತಿದೆ. ಕಾಂಗ್ರೆಸು ಮಂತ್ರಿ ಮಂಡಳಿಗಳು ಮಾಡಿದ ರಚನಾತ್ಮಕ ಕಾರ್ಯಗಳಿಂದ ದೇಶದಲ್ಲಿ ಮುಖ್ಯವಾಗಿ ಗ್ರಾಮಾಂತರಗಳಲ್ಲಿ ಕಾಂಗ್ರೆಸ್ಸಿನ ಶಕ್ತಿಯು ಹೆಚ್ಚುತ್ತಲಿದೆ ಎಂಬುದನ್ನು ಯಾರೂ ಅಲ್ಲಗಳೆಯಲಾರರು. ಈಗ ಕಾಂಗ್ರೆಸು ಸಂಸ್ಥೆಯ ಮುಂದೆ ನಿಂತಿರುವ ಪ್ರಾಮುಖ್ಯವಾದ ಪ್ರಶ್ನೆಯೆಂದರೆ–ಫೆಡರೇಶನ್ ಅಂದರೆ ಸಂಯುಕ್ತ ರಾಜ್ಯಘಟನೆಯ ಹೋರಾಟವಾಗಿದೆ. ಇದಕ್ಕಾಗಿ ಕಾಂಗ್ರೆಸಿನ ಹಾಗೂ ದೇಶದ ಶಕ್ತಿ ಸಾಧನಗಳನ್ನೆಲ್ಲಾ ಕೇಂದ್ರೀಕರಿಸಬೇಕಾದದ್ದು ಅತ್ಯವಶ್ಯ.

ಈ ವಿಚಾರದಲ್ಲಿ ಕಾಂಗ್ರೆಸ್ಸಿನವರೊಳಗೆ ಸ್ವಲ್ಪ ಭಿನ್ನಾಭಿಪ್ರಾಯ ಹುಟ್ಟುವ ಚಿಹ್ನೆಗಳು ತೋರುತ್ತಿವೆ. ಆದರೆ ಇದಕ್ಕೆ ಹೆಚ್ಚಿನ ಅವಕಾಶ ಕೊಡುವುದು ಯುಕ್ತವಲ್ಲ ಮತ್ತು ಅದಕ್ಕೆ ಕಾರಣವೂ ಇಲ್ಲ. ಕಳೆದ ಹರಿಪುರ ಕಾಂಗ್ರೆಸು ಮಹಾ ಸಭೆಯಲ್ಲಿ ಫೆಡರೇಶನಿನ ಸಂಬಂಧ ಕಾಂಗ್ರೆಸ್ಸಿನ ಧೋರಣೆಯು ಬಹು ಸ್ಪಷ್ಟ ಮಾಡಲ್ಪಟ್ಟಿದೆ. ಅಲ್ಲಿ ಪಾಸಾದ ಠರಾವಿನ ಮೇರೆ ಕಾಂಗ್ರೆಸು ಫೆಡರೇಶನಿನ ಅಭಿಪ್ರಾಯವನ್ನೇ ತಿರಸ್ಕರಿಸುವುದಿಲ್ಲ; ಆದರೆ ಇಂಡಿಯಾ ಸರ್ಕಾರದ 1935ನೇ ಆಕ್ಟಿನಲ್ಲಿ ಸೂಚಿಸಿರುವ ಫೆಡರೇಶನನ್ನು ತಿರಸ್ಕರಿಸುತ್ತದೆ. ಅದಕ್ಕೆ ಮುಖ್ಯ ಕಾರಣಗಳಾವವೂ ಇವಾಗಿವೆ. ಈ ಸಂಯುಕ್ತ ರಾಜ್ಯಘಟನೆಯು ಪರದೇಶೀಯರಿಂದ ನಮ್ಮ ಮೇಲೆ ಹೊರಿಸಲ್ಪಡುವದಾಗಿದೆ. ದೇಶದ ರಕ್ಷಣೆ, ಪರರಾಷ್ಟ್ರಗಳ ಸಂಬಂಧ ಮುಂತಾದ ಪ್ರಾಮುಖ್ಯ ವಿಷಯಗಳ ಜವಾಬ್ದಾರಿಯು ಈ ಫೆಡರಲ್ ಸರ್ಕಾರಕ್ಕೆ ಇರುವುದಿಲ್ಲ. ಇದು ಸಂಸ್ಥಾನಗಳಲ್ಲಿಯ ಪ್ರಜೆಗಳ ಪ್ರತಿನಿಧಿತ್ವವನ್ನು ಬ್ರಿಟಿಷ್ ಇಂಡಿಯಾದ ಪ್ರಜಾಪ್ರತಿನಿಧಿತ್ವದೊಂದಿಗೆ ಹೋಲಿಸಲಾಗದಂತೆ ಮಾಡುತ್ತದೆ: ಅಂದರೆ ಫೆಡರಲ್ ಎಸೆಂಬ್ಲಿಗೆ ಬ್ರಿಟಿಷ್ ಪ್ರಾಂತ್ಯಗಳಿಂದ ಚುನಾಯಿತ ಪ್ರತಿನಿಧಿಗಳು ಕಳುಹಿಸಲ್ಪಡುವಾಗ್ಯೆ ಆಳ್ವಿಕ ಅರಸರುಗಳು ತಮ್ಮ ಸಂಸ್ಥಾನಗಳ ಪರವಾಗಿ ಪ್ರತಿನಿಧಿಗಳನ್ನು ನೇಮಿಸುವರು. ಈ ಕೊರತೆಗಳಿರುವ ವರೆಗೆ ಕಾಂಗ್ರೆಸು ಫೆಡರಲ್ ರಚನೆಯನ್ನು ಎಂದಿಗೂ ಒಪ್ಪಿಕೊಳ್ಳಲಾರದು. ಬದಲು, ಬ್ರಿಟಿಷ್ ಸರ್ಕಾರದವರು ಈ ಕೊರತೆಗಳನ್ನು ನೀಗಿದರೆ ಫೆಡರೇಶನನ್ನು ಕಾಂಗ್ರೆಸು ತಿರಸ್ಕರಿಸಲು ಕಾರಣವಿರುವುದಿಲ್ಲ.

ಈ ಸಂಬಂಧವಾಗಿಯೇ ವೈಸರಾಯರಾದ ಲಾರ್ಡ್ ಲಿನ್ಲಿತ್ ಗೌರವರು ಈಗ ಇಂಗ್ಲೆಂಡಿಗೆ ಹೋಗಿರುವುದಾಗಿದೆ. ಇದನ್ನು ಕುರಿತು ಚರ್ಚೆಯುವಾಗ್ಯೆ ಇಂಗ್ಲೆಂಡಿನ ಪ್ರಾಮುಖ್ಯ ಪತ್ರಿಕೆಯೊಂದು–'ಈ ರಚನೆಯನ್ನು ಇಂಡಿಯಾದ ಮೇಲೆ ಬಲಾತ್ಕಾರದಿಂದ ಹೊರಿಸುವುದರ ಬದಲು ರಾಜಿ ಮಾತುಗಳಿಂದ ಹಿಂದೀಯರ ಸಮ್ಮತಿಯನ್ನು ಪಡೆಯುವುದು ಉತ್ತಮ' ವೆಂದು ಸೂಚಿಸಿದೆ. ಇದು ಅಲ್ಲಿಯ ಸರ್ಕಾರದ ನಿಜವಾದ ಅಭಿಪ್ರಾಯವಾಗಿದ್ದರೆ ಫೆಡರೇಶನನ್ನು ಹಿಂದೀಯರಿಗೆ ಒಪ್ಪುವಂತೆ ಮಾಡುವುದು ಬ್ರಿಟಿಷ್ ಸರ್ಕಾರಕ್ಕೆ ಅಸಾಧ್ಯವಾದ ವಿಷಯವೇನೂ ಅಲ್ಲ. ಆದರೆ ರಾಜಿ ಒಪ್ಪಂದದಿಂದ ಸಮ್ಮತಿಯನ್ನು ಪಡೆಯಲಿಕ್ಕಾಗಿ ದುಂಡು ಮೇಜು ಪರಿಷತ್ತುಗಳ ಕಾಲ ತಳ್ಳುವಂಥ ವಿಧಾನವನ್ನು ತ್ಯಜಿಸಬೇಕು. ಶೀಘ್ರದಲ್ಲೇ ಹಿಂದೀಯ ಮುಖಂಡರೊಡನೆ ಮಾತುಕತೆ ನಡೆಸಿ, ಜನರಿಗೆ ಒಪ್ಪಿಗೆಯಾಗುವ ರೀತಿಯಲ್ಲಿ ಬದಲಾವಣೆಗಳನ್ನು ಮಾಡಬೇಕು. ಈಗ ಸೂಚಿಸಿರುವ ರಚನೆಯನ್ನು ಸ್ವಲ್ಪ ಕಾಲ ಜಾರಿಗೆ ತಂದ ವಿನಹ ಅದರಲ್ಲಿ ಬದಲಾವಣೆ ಮಾಡಲಾಗುವುದಿಲ್ಲವೆಂದು ಬ್ರಿಟಿಷ್ ಪಾರ್ಲಿಮೆಂಟಿನವರು ವಾದಿಸುವುದರಿಂದ ಪ್ರಯೋಜನವಿಲ್ಲ. ಹಿಂದೂಸ್ಥಾನದಲ್ಲಿ ಅನಾವಶ್ಯಕ ಚಳವಳಿಗೆ ಎಡೆ ಕೊಡದೆ, ಇಂಡಿಯಾದ ಸ್ನೇಹವನ್ನು ಉಳಿಸಿಕೊಳ್ಳುವ ಇಚ್ಛೆಯು ಬ್ರಿಟನಿಗಿದ್ದರೆ ಹೆಚ್ಚಿನ ತೊಂದರೆ ಇಲ್ಲದೆ ಪಾರ್ಲಿಮೆಂಟಿನಲ್ಲಿ ಹೊಸ ಆಕ್ಟಿನಲ್ಲಿ ಬೇಕಾದ ಬದಲಾವಣೆಗಳನ್ನು ಮಾಡಿಕೊಳ್ಳಬಹುದು.

ಈ ಮಧ್ಯೆ ಕಾಂಗ್ರೆಸ್ಸಿನವರೊಳಗೂ ರಾಷ್ಟ್ರೀಯ ಪಕ್ಷದವರೊಳಗೂ "ಭಿನ್ನಾಭಿಪ್ರಾಯಕ್ಕೆ ಎಡೆ ಕೊಡದೆ ಒಗ್ಗಟ್ಟನ್ನು ಸಾಧಿಸಿಕೊಳ್ಳಬೇಕಾಗಿದೆ. ಈ ಸಂಗತಿಯು ಬೇಗನೆ ವಾರ್ಧಾದಲ್ಲಿ ನಡೆಯಲಿಕ್ಕಿರುವ ಕಾಂಗ್ರೆಸ್ ವರ್ಕಿಂಗ್ ಕಮಿಟಿಯಲ್ಲಿ ಚರ್ಚಿಸಲ್ಪಡುವುದರಿಂದ ಈ ಸಂಬಂಧ ಕಾಂಗ್ರೆಸ್ಸಿನವರೊಳಗೆ ಕಾಣಿಸುತ್ತಿರುವ ಭಿನ್ನಾಭಿಪ್ರಾಯವು ಹೋಗಲಾಡಿಸಲ್ಪಡುವುದರಲ್ಲಿ ಸಂಶಯವಿಲ್ಲ.

ಟ್ರಾವಂಕೋರಿನಲ್ಲಿ ಘೋರ ಅತ್ಯಾಚಾರ.

ಟ್ರಾವಂಕೋರ್ ಸಂಸ್ಥಾನದ ಕಾಂಗ್ರೆಸ್ ಮಹಾ ಸಭೆಯು ಕಳೆದ ಶನಿವಾರ ಚಂಗಾನಚೇರಿಯಲ್ಲಿ ನಡೆಯುತ್ತಿದ್ದಾಗ ಪೋಲೀಸರು ಭಯಂಕರವಾಗಿ ಲಾಠೀ ಹಲ್ಲೆ ನಡೆಸಿ, ಸಭೆಯನ್ನು ಚದರಿಸಿದರು.

ಈ ಕುರಿತು ಪತ್ರಿಕಾ ಪ್ರತಿನಿಧಿಯು ಸಂಸ್ಥಾನೀ ಕಾಂಗ್ರೆಸ್ ವರ್ಕಿಂಗ್ ಕಮಿಟಿಯ ಸದಸ್ಯರಾದ ಶ್ರೀ. ಮಾಧವರಾಯರನ್ನು ಬೆಟ್ಟಿಯಾಗಿ ವಿಚಾರಿಸಲು ಅವರು ಹೀಗೆಂದರು:–

ಚಂಗಾನಚೇರಿಯಲ್ಲಿ ನನ್ನ ಅಧ್ಯಕ್ಷತೆಯಲ್ಲಿ ಮಹಾ ಸಭೆಯು ಸೇರಲು ಏರ್ಪಾಡುಗಳಾಗಿದ್ದುವು. ಆದರೆ ಸಭೆ ಸೇರುವ ಮೊದಲೇ ಪೋಲೀಸರು ಬಂದು ಕೂಡಿದ್ದ ಜನಗಳ ಮೇಲೆ ನಿರ್ದಯವಾಗಿ ಲಾಠೀ ಚಾರ್ಜು ಮಾಡಿ ಸಭೆಯನ್ನು ಸೇರಗೊಡಲಿಲ್ಲ.

ಕಾಂಗ್ರೆಸ್ ಮುಖಂಡರು ಭಾಷಣ ಮಾಡಲು ವೇದಿಕೆಯನ್ನೇರುತ್ತಲೇ ಕೆಲವು ಜನ ಪುಂಡರು ಗದ್ದಲ ಮಾಡಿದರು. ಕೂಡಲೇ ಪೋಲೀಸ್ ಇನ್ಸ್ಪೆಕ್ಟರರು ಮುಂದೆ ಬಂದು ಶಾಂತಿ ಭಂಗವಾಗುವದೆಂಬ ಶಂಕೆ ಇರುವದರಿಂದ ಸಭೆಯನ್ನು ಅಷ್ಟಕ್ಕೆ ನಿಲ್ಲಿಸಲು ಆಜ್ಞೆ ಮಾಡಿದರು. ಜನರು ಶಾಂತತೆಯಿಂದ ಇರಬೇಕೆಂದು ಕಾಂಗ್ರೆಸು ಮುಖಂಡರು ವಿನಂತಿ ಮಾಡಿಕೊಂಡರು.

ಅಷ್ಟರಲ್ಲಿಯೇ ಆಯುಧಪಾಣಿಗಳಾದ 30-40 ಮಂದಿ ಪೋಲೀಸರು ಬಂದು ಭಾಷಣ ವೇದಿಕೆಯನ್ನು ಸುತ್ತುವರಿದು ವೇದಿಕೆಯ ಮೇಲಿದ್ದ ಮುಖಂಡರ ಮೇಲೆ ಬಲವಾದ ಲಾಠೀ ಪ್ರಯೋಗ ಮಾಡಿದರು. ಕೆಲವರನ್ನು ಕೂತಲ್ಲಿಂದ ಎಳೆದರು. ಆದರೂ ಮುಖಂಡರು ಕದಲದೇ ಇರಲಾಗಿ ಅವರ ಮೇಲೆ ಕಲ್ಲುಗಳನ್ನೆಸೆಯಲಾಯಿತು. 25 ಮಿನಿಟುಗಳ ತನಕ ಕಲ್ಲಿನ ಸುರಿಮಳೆ ಸಾಗಿತು.

ಇಷ್ಟರಲ್ಲೇ ವೇದಿಕೆಗೆ ಸ್ವಲ್ಪ ದೂರದಲ್ಲೇ ಕುಳಿತಿದ್ದ ಜನ ಸಮೂಹವು ಎದ್ದು ನಿಂತು ವೇದಿಕೆಯ ಕಡೆಗೆ ಬರಲು ಸಿದ್ಧವಾಯಿತು. ಪೋಲೀಸರು ಈ ಜನವೃಂದದ ಮೇಲೆ ಯಥೇಚ್ಛವಾಗಿ ಲಾಠೀ ಚಾರ್ಜು ಮಾಡಿದರು. ಕೆಲವು ಪುಂಡರು ಒಂದೇ ಸವನೆ ಕಲ್ಲೆಸೆಯಲಾರಂಭಿಸಿದ್ದರಿಂದ ಹಲವರಿಗೆ ಗಾಯ ಆಯಿತು.

ಶಾಂತಿ ಭಂಗವಾಗುವದೆಂದು ಬೆದರಿ, ಜನರು ತಮ್ಮ ತಮ್ಮ ಮನೆಗೆ ಹೋಗಬೇಕೆಂದು ಮುಖಂಡರು ಪ್ರಾರ್ಥಿಸಿಕೊಂಡರು. ಪೋಲೀಸರಲ್ಲಿ 2-3 ಜನರಿಗೆ ಕಲ್ಲಿನ ಏಟುಗಳು ಬಿದ್ದವೆ. ಲಾಠೀ ಚಾರ್ಜಿನಿಂದ 500 ಜನರು ಗಾಯಗೊಂಡು ನೆಲಕ್ಕುರುಳಿದರು.

ಗುಂಪು ಸೂಡಿದ್ದ ಪುಂಡರನ್ನು ಕ್ಷಮೆ ಮಾಡಿ ಪಟ್ಟ ನಾಗರಿಕರಿಂದ ಸಾವಿರಾರು ಜನರು ಈ ಸಭೆಯನ್ನು ಶಾಂತವಾಗಿ ನಡೆಸಗೊಡಬೇಕಾದದ್ದು ಪೋಲೀಸರ ಹಾಗೂ ಸರಕಾರದ ಕರ್ತವ್ಯವಾಗಿದ್ದಿತು. ಆದರೆ ಸರಕಾರವು ಹಾಗೆ ಮಾಡಲಿಲ್ಲ. ಜನತೆಯಲ್ಲುಂಟಾದ ಈ ಘೋರತರ ಕಳವಳದಿಂದ ಟ್ರಾವಂಕೋರದಲ್ಲಿ ಬೇಗನೆ ಉಗ್ರ ಸ್ವರೂಪದ ದಿನಗಳು ಪ್ರಾಪ್ತವಾಗಲಿವೆ ಎನ್ನಬಹುದು.

ಪಿಳಿದೇಶಿ.

ಈ ತಾ. 8 ರಿಂದ ತಾ. 15 ರ ವರೆಗೆ ಮಡಿಕೇರಿಯಲ್ಲಿ 5 ಇಂಚು 18 ಸೆಂಟು ಮಳೆಯಾಗಿದೆ.

ಮಿ. ಯಸ್. ಯಸ್. ರಾಮಶೆಟ್ಟಿಯವರು ಡಿಸ್ಟ್ರಿಕ್ಟ್ ಬೋರ್ಡಿನ ಉಪಾಧ್ಯಕ್ಷರಾಗಿ ಆರಿಸಲ್ಪಟ್ಟಿರುವರು.

ಈ ವಾರ ವೀರಾಜಪೇಟೆಯಲ್ಲಿ ಭತ್ತ ಗಾಡಿಯೊಂದಕ್ಕೆ 45 ರೂಪಾಯಿ ವರೆಗೆ ಕ್ರಯವಿತ್ತೆಂದು ತಿಳಿಯಬರುತ್ತದೆ.

ಚಕ್ರವರ್ತಿಯವರ ಕ್ಷಯನಿವಾರಣೆ ಫಂಡಿಗೆ ಕೊಡಗಿನಲ್ಲಿ ರೂ. 2,417-9-4 ಜಮೆಯಾಗಿದೆಯೆಂದು ತಿಳಿಯಬರುತ್ತದೆ.

ಮಡಿಕೇರಿ ಹೈಸ್ಕೂಲು ಮಳೆಗಾಲದ ರಜಕ್ಕಾಗಿ ಈ ತಾ. 22 ರಿಂದ 2 ವಾರಗಳ ರಜೆಯಲ್ಲಿ ಮುಚ್ಚಲ್ಪಡುವದೆಂದು ತಿಳಿಯಬರುತ್ತೆ.

ಕೊಡಗು ಡಿಸ್ಟ್ರಿಕ್ಟ್ ಬೋರ್ಡಿನ ಬಜೆಟ್ ಮೀಟಿಂಗು ಈ ತಾ. 8 ಮತ್ತು 9 ರಲ್ಲಿ ಮಡಿಕೇರಿ ಕೌನ್ಸಿಲ್ ಹಾಲ್‌ನಲ್ಲಿ ನಡೆಯಿತು.

ಈ ತಾ. 14 ರಲ್ಲಿ ಫ್ರೇಜರ್‌ಪೇಟೆ ಕ್ಯಾಂಪಿಗೆ ಹೋಗಿರುವ ಕಮಿಷನರವರು ತಾ. 21 ರಲ್ಲಿ ವಾಪಸು ಮಡಿಕೇರಿಗೆ ಬರುವರೆಂದು ತಿಳಿಯಬರುತ್ತದೆ.

ರೆಡ್ ಕ್ರಾಸ್ ಸಂಘದ ಕೊಡಗು ಲೋಕಲ್ ಸೆಂಟರಿನ ಕಮಿಟಿ ಮೀಟಿಂಗೊಂದು ಈ ತಾ. 9 ರಲ್ಲಿ ಮಡಿಕೇರಿಯಲ್ಲಿ ಕಮಿಷನರವರ ಅಧ್ಯಕ್ಷತೆಯಲ್ಲಿ ನಡೆಯಿತು.

ಮೂರು ವಾರ ರಜೆಯಲ್ಲಿ ಇಂಗ್ಲೆಂಡಿಗೆ ಹೋಗಿದ್ದ ಕೊಡಗಿನ ಸಿವಿಲ್ ಸರ್ಜನರವರು ತಮ್ಮ ರಜೆಯನ್ನು ಒಂದು ವಾರ ಹೆಚ್ಚಿಸಿಕೊಂಡಿರುವರೆಂದು ತಿಳಿಯಬರುತ್ತದೆ.

ಉತ್ತರ ಕೊಡಗು ಎಡವನಾಡು ರೇಂಜಿನಲ್ಲಿ ತೊಂದರೆ ಕೊಡುತ್ತಿದ್ದ 'ಯಲ್ಲೂರ್ ರೋಗ್' ಎಂಬ ಪುಂಡಾನೆಯನ್ನು ತಾ. 2-7-38 ರಲ್ಲಿ ಮಿ. ಬಿ. ಸಿದ್ದಣ್ಣನವರು ಮತ್ತು ಮಿ. ದಾಸಪ್ಪನವರು ಗುಂಡುಹೊಡೆದು ಕೊಂದಿರುವರಾಗಿ ತಿಳಿಯಬರುತ್ತೆ.

ಕೊಡಗು ಜಿಲ್ಲಾ ಕಾಂಗ್ರೆಸು ಕಮಿಟಿಯ ಮೀಟಿಂಗೊಂದು ಈ ತಾ. 13 ರಲ್ಲಿ ವೀರಾಜಪೇಟೆಯಲ್ಲಿ ಕಮಿಟಿಯ ಪ್ರೆಸಿಡೆಂಟರಾದ ಮಿ. ಐನಂಡ ಕಾರ್ಯಪ್ಪನವರ ಅಧ್ಯಕ್ಷತೆಯಲ್ಲಿ ನಡೆಯಿತು. ಇದರ ವಿವರವು ಬರುವ ವಾರ ಪ್ರಕಟಿಸಲಾಗುವುದು.

ವೀರಾಜಪೇಟೆ ಆಸ್ಪತ್ರೆಯ ಅಸಿಸ್ಟೆಂಟ್ ಸರ್ಜನರಾದ ಡಾ. ಕೋದಂಡ ಕಾರ್ಯಪ್ಪನವರು ಈ ತಾ. 7 ರಲ್ಲಿ ತಮ್ಮ ಹುದ್ದೆಯ ಚಾರ್ಜನ್ನು ಡಾ. ಯಂ. ನಿ. ತಾಯಿಯುರವರಿಗೆ ಕೊಟ್ಟು, ಯಂ. ಬಿ. ಬಿ. ಯಸ್. ಪರೀಕ್ಷೆಗೆ ಓದಲಿಕ್ಕಾಗಿ ಮದ್ರಾಸಿಗೆ ಹೋಗಿರುವರಾಗಿ ತಿಳಿಯುತ್ತೇವೆ.

ಈ ತಾ. 8 ರಲ್ಲಿ ಕಾವಾಡಿ ಗ್ರಾಮದ ಮಿ. ಕುಂಞಾಯಿಂಡ ಚಂಗಪ್ಪನವರು,

ಕೊಡಗು ಡಿಸ್ಟ್ರಿಕ್ಟ್ ಬೋರ್ಡ್ ಬಡ್ಜೆಟ್ ಮೀಟಿಂಗು.

ಹೊಸ ಡಿಸ್ಟ್ರಿಕ್ಟ್ ಬೋರ್ಡಿನ ಪ್ರಥಮ ಬಡ್ಜೆಟ್ ಮೀಟಿಂಗು ಈ ತಿಂ. 8 ನು 9 ರಲ್ಲಿ ಕೌನ್ಸಿಲ್ ಹಾಲಿನಲ್ಲಿ ನಡೆಯಿತು. ಬೋರ್ಡಿನ ಪ್ರೆಸಿಡೆಂಟರಾದ ಪಿ. ಪಿ. ಐ. ಬೆಳ್ಯಪ್ಪನವರು ಅಧ್ಯಕ್ಷರಾಗಿದ್ದರು. ಯೂರೋಪಿಯನ್ ಪ್ಲಾಂಟರ ಮೆಂಬರುಗಳಾದ ಮಿ. ಮಾರಿಸ್‌ರವರು ಮತ್ತು ಮಿ. ಬ್ರಮೂಲ್ಸ್‌ರವರೂ, ನೇಮಿತ ಮೆಂಬರಾದ ಮಿ. ಅಬ್ದುಲ್ ರಹಮಾನ್‌ರವರೂ ಗೈರುಹಾಜರಾಗಿದ್ದರು. ಉಳಿದ 16 ಮೆಂಬರುಗಳು ಹಾಜರಿದ್ದರು. ಅನೇಕ ಪ್ರೇಕ್ಷಕರೂ ನೆರೆದಿದ್ದರು.

ತಾ. 8 ರ ಬೆಳಿಗ್ಗೆ 11 ಗಂಟೆಗೆ ಸರಿಯಾಗಿ ಮೀಟಿಂಗು ಪ್ರಾರಂಭವಾಯಿತು. ಪ್ರಾರಂಭದಲ್ಲಿ 'ವಂದೇ ಮಾತರಂ' ರಾಷ್ಟ್ರಗೀತೆಯು ಹಾಡಲ್ಪಟ್ಟಿತು. ಮೆಂಬರುಗಳು, ಪ್ರೇಕ್ಷಕರೂ—ಎಲ್ಲರೂ ಎದ್ದು ಮೌನವಾಗಿ ನಿಂತಿದ್ದರು.

ಪ್ರಥಮದಲ್ಲಿ ಕಳೆದ ಎರಡು ಮೀಟಿಂಗುಗಳ ಪ್ರೊಸೀಡಿಂಗ್ಸ್ ಓದಿ ಒಪ್ಪಲಾಯಿತು. ನಂತರ ಬಡ್ಜೆಟ್ಟಿನ ಚರ್ಚೆಯು ಪ್ರಾರಂಭವಾಯಿತು. ಈ ಮೊದಲೆ ಪ್ರಿಂಟು ಮಾಡಿ ಮೆಂಬರುಗಳಿಗೆ ಕಳುಹಿಸಲ್ಪಟ್ಟಿದ್ದ ಅಂದಾಜು ಬಡ್ಜೆಟ್ಟಿನ ಪ್ರತಿಯೊಂದು ವಿಷಯವೂ ಅಧ್ಯಕ್ಷರಿಂದ ಓದಲ್ಪಟ್ಟು ಬೋರ್ಡಿನವರ ಅಭಿಪ್ರಾಯ ತಿಳಿಯಲ್ಪಟ್ಟಿತು. ಆದಾಯದಲ್ಲಿ—ಕಂದಾಯ ಮಾಫಿ ಬಿಟ್ಟಲ್ಲಿ ಸೆಸ್ಸನ್ನೂ ದಾಮಾಶಾಮಿ ಮೇರೆ ಮಾಫಿ ಬಿಟ್ಟ ಕಾರಣ ಸೆಸ್ಸಿನ ಉತ್ಪತ್ತಿಯಲ್ಲಿ ರೂ. 5,600 ಕಡಿಮೆ ಅಂದಾಜು ಮಾಡಲಾಯಿತು.

ಖರ್ಚಿನ ಬಾಬುಗಳಲ್ಲಿ—ಬೋರ್ಡಿನ ನೌಕರರಿಗೆ ಮನೆಕಟ್ಟಲು ಅಡ್ವಾನ್ಸಿಗಾಗಿ ಇಟ್ಟಿದ್ದ ರೂ. 2000 ವಜ ಮಾಡಲಾಯಿತು. ಸ್ಟೇಶನರಿ ಮತ್ತು ಪ್ರಿಂಟಿಂಗಿನ ವೆಚ್ಚದಲ್ಲಿ ರೂ. 200, ಮಿಸಲೇನಿಯಸ್ ಪಬ್ಲಿಕ್ ಇಂಪ್ರೂವ್‌ಮೆಂಟ್ಸಿನ ವೆಚ್ಚದಲ್ಲಿ ರೂ. 500, ಪಿ. ಡಬ್ಲ್ಯು. ಇಲಾಖೆಯ ಚಾರ್ಜಿನಲ್ಲಿರುವ ಕೆಲಸಗಳ ವೆಚ್ಚದಲ್ಲಿ ರೂ. 1700 ಮತ್ತು ವಿದ್ಯಾ ಇಲಾಖೆಯ ಸಾಮಾನುಗಳ ಕ್ರಯ ಮತ್ತು ರಿಪೇರಿ ಖರ್ಚಿನಿಂದ ರೂ. 300 ಕಡಿಮೆ ಮಾಡಲಾಯಿತು. ಗ್ರಾಮಾಂತರ ರಸ್ತೆಗಳ ರಿಪೇರಿಯ ಖರ್ಚಿನಲ್ಲಿ ರೂ. 1000, ಪ್ರಯಾಣದ ಭತ್ಯದಲ್ಲಿ (ಕಳೆದ ವರ್ಷದ ಮೆಂಬರುಗಳ ಭತ್ಯವನ್ನೂ, ಚುನಾವಣೆ ಸಂಬಂಧ ಉದ್ಯೋಗಸ್ಥರ ಭತ್ಯವನ್ನೂ ಈ ವರ್ಷ ಕೊಡಬೇಕಾದ ಕಾರಣ) ರೂ. 500 ಹೆಚ್ಚಿಸಲಾಯಿತು.

ಮಿ. ಯಸ್. ಯನ್. ರಾಮಶೆಟ್ಟಿಯವರು ಸರ್ವಸಮ್ಮತದಿಂದ ಬೋರ್ಡಿನ ಉಪಾಧ್ಯಕ್ಷರಾಗಿ ಆರಿಸಲ್ಪಟ್ಟರು.

ಮಿ. ಹೆಚ್. ಯಂ. ಪುಪ್ಪಣ್ಣನವರು ಕಾಂಗ್ರೆಸ್ ಎಕ್ಸೈಸ್ ಕಮಿಟಿಗೆ ಬೋರ್ಡಿನ ಪ್ರತಿನಿಧಿಯಾಗಿ ಆರಿಸಲ್ಪಟ್ಟರು.

ಸರ್ಕಾರದಿಂದ ವಂತಿಗೆ ಹೆಚ್ಚಿಸಲು ಕೋರಿಕೆ.

ಚಿಕಿತ್ಸಾ ಅಂಬ್ಯುಲೆನ್ಸ್ ಫಂಡಿಗೆ ಧನ ಸಹಾಯ.

ಮಂಜೂರಾದ ಬಡ್ಜೆಟ್ ಠರಾವುಗಳು

1. ಇನ್ನು ಮುಂದೆ ಬೋರ್ಡಿನ ಸರ್ವಿಸಿಗೆ ನೇಮಿಸಲ್ಪಡುವ ಆಯುರ್ವೇದ ಡಾಕ್ಟರುಗಳಿಗೆ ಮದ್ರಾಸಿನಲ್ಲಿರುವಂತೆ ರೂ. 40-3-2-70 ದರದ ಸಂಬಳವನ್ನು ಇಡಬೇಕು.

2. ಬೋರ್ಡಿನ ಪರವಾಗಿ ಶಾಲಾ ಡೆಪ್ಯುಟಿ ಇನ್‌ಸ್ಪೆಕ್ಟರವರ ಆಫೀಸಿನಲ್ಲಿಯ (ಇನ್ನು ಮುಂದೆ ನೇಮಿಸಲ್ಪಡುವ) ಗುಮಾಸ್ತನಿಗೆ ಸರ್ಕಾರದಲ್ಲಿರುವಂತೆ ರೂಪಾಯಿ 30-2-2-50 ದರದ ಸಂಬಳವಿಡಬೇಕು.

3. ಬೋರ್ಡಿನ ಮೀಟಿಂಗಿನಲ್ಲಿ ಯಾವದಾದರೂ ಒಂದೇ ತರಹದ ಕೆಲಸಗಳಿಗೆ ಒಟ್ಟಾಗಿ ಇಡುವ ಮೊಬಲಗನ್ನು ಪ್ರತಿಯೊಂದು ಕೆಲಸಕ್ಕೆ ಪ್ರತ್ಯೇಕವಾಗಿ ಮಂಜೂರು ಮಾಡುವ ಅಧಿಕಾರ ಅಧ್ಯಕ್ಷರಿಗೆ ಇರಬೇಕು ಎಂಬ ಮದ್ರಾಸಿನ ಎಕೌಂಟೆಂಟ್ ಜನರಲರವರ ಸಲಹೆಯನ್ನು ಒಪ್ಪಲಾಯಿತು.

4. ಮಿ. ಹೆಚ್. ಯಂ. ಪುಪ್ಪಣ್ಣನವರ ಸೂಚನೆ ಮೇರೆ ಶನಿವಾರಸಂತೆ ಆಸ್ಪತ್ರೆಗೆ ಮಾಹೆಯಾನ 20 ರೂ. ತಲಬು ಮತ್ತು 3 ರೂ. ಮನೆಬಾಡಿಗೆ ಎಲೋವೆನ್ಸಿನಲ್ಲಿ ಒಬ್ಬ ಪ್ರೊಬೇಷನರಿ ನರ್ಸನ್ನು ನೇಮಿಸುವಂತೆ ತೀರ್ಮಾನಿಸಲಾಯಿತು.

5. ಮಿ. ಪುಪ್ಪಣ್ಣನವರ ಸೂಚನೆ ಮೇರೆ ಹೆಬ್ಬಾಲೆಯಿಂದ ಹುಣಗಲ್ಲಿಗೆ ರಸ್ತೆ ಮಾಡಿಸಲು ರೂ. 50 ಮಂಜೂರಾಯಿತು.

6. ಮಿ. ಅಜ್ಜಿಕುಟ್ಟಿರ ಪೊನ್ನಪ್ಪನವರ ಸೂಚನೆ ಮೇರೆ ಬಗ್ಗೂರು ಶಾಲೆಗೆ ಈ ಜುಲೈ 1 ರಿಂದ ತಿಂಗಳಿಗೆ 10 ರೂಪಾಯಿ ಹೆಚ್ಚಿನ ಗ್ರಾಂಟು ಕೊಡುವಂತೆ ತೀರ್ಮಾನಿಸಲಾಯಿತು.

7. ಮಿ. ರಾಮಶೆಟ್ಟಿಯವರ ಸೂಚನೆ ಮೇರೆ—ಹೆಬ್ಬಾಲೆ ಗ್ರಾಮದಲ್ಲಿ ಹೊಳೆಯಿಂದ ಗ್ರಾಮಕ್ಕೆ ಕುಡಿಯಲು ನೀರು ತರಲಿಕ್ಕೆ ಗ್ರಾಮಾಭಿವೃದ್ಧಿ ಫಂಡಿನ ವಂತಿಗೆಯಿಂದ ನಡಿಸುವ ಕೆಲಸಕ್ಕೆ ಬೋರ್ಡಿನಿಂದ ರೂ. 1,400 ಕೊಡುವಂತೆ ಮಂಜೂರಾಯಿತು.

8. ಮಿ. ಸಿಂಗೂರು ಮಾದಪ್ಪನವರ ಸೂಚನೆ ಮೇರೆ—ಕೂಡಿ ರಸ್ತೆಯನ್ನು ಮೈಸೂರು ಗಡಿಯ ವರೆಗೆ ಮುಂದುವರಿಸಲು ರೂ. 125 ಕೊಡುವಂತೆ ತೀರ್ಮಾನಿಸಲಾಯಿತು.

9. ಮಿ. ಸಿಂಗೂರು ಮಾದಪ್ಪನವರ ಸೂಚನೆ ಮೇರೆ ಶನಿವಾರಸಂತೆ ನ್ಯಾಯಗೆ ಶಾಲೆಯಲ್ಲಿ ಚರ್ಕದಿಂದ ನೂಲುವ ತರಗತಿಯೊಂದನ್ನು ತೆರೆಯಲು 150 ರೂಪಾಯಿ ಮಂಜೂರಾಯಿತು.

10. ಮಿ. ಪಿ. ಐ. ಬೆಳ್ಯಪ್ಪನವರು ಈ ಮೊದಲು ಕಳುಹಿಸಿದ್ದ ಠರಾವು ಮೇರೆ ಅಮ್ಮತ್ತಿ ಕೊಂಡಂಗೇರಿ ರಸ್ತೆಯ ಒಂಟಿಯಂಗಡಿಯಿಂದ ವೀರಾಜಪೇಟೆ—ಸಿದ್ದಾಪುರ ರಸ್ತೆಯು ಅಂಬಲಗೆರೆ ಬಳಿ ಸಂಯೋಜಿಸುವ 2 ಮೈಲು ದೂರದ ರಸ್ತೆಯನ್ನು ರಿಪೇರಿ ಮಾಡಲು 50 ರೂ. ಕೊಡಲು ತೀರ್ಮಾನವಾಯಿತು.

11. ಮಿ. ಪಿ. ಐ. ಬೆಳ್ಯಪ್ಪನವರು ಈ ಮೊದಲು ಕಳುಹಿಸಿದ ಠರಾವಿನ ಮೇರೆ ಭಾಗಮಂಡಲದ ಬಾವಲಿ ಗ್ರಾಮದ ಶಾಲೆಯನ್ನು ಡಿ. ಬೋರ್ಡಿಗೆ ತೆಗೆದುಕೊಳ್ಳಬೇಕೆಂಬ ವಿಚಾರ ಶಾಲಾ ಇನ್ಸ್‌ಪೆಕ್ಟರವರ ಪರಿಶೀಲನೆಗೆ ಬಿಡಲಾಯಿತು.

12. ಮಿ. ಮಂಡೇಪಂಡ ಸೋಮಯ್ಯನವರ ಸೂಚನೆ ಮೇರೆ ಕೆದಮುಳ್ಳೂರು ಶಾಲೆಗೆ ತಾರೀಕು 1-7-38 ರಿಂದ ತಿಂಗಳಿಗೆ 10 ರೂ. ಗ್ರಾಂಟು ಕೊಡಲು ತೀರ್ಮಾನವಾಯಿತು.

13. ಮಿ. ಮಂಡೇಪಂಡ ಸೋಮಯ್ಯನವರ ಸೂಚನೆ ಮೇರೆ ಬಿಟ್ಟಂಗಾಲ ಶಾಲೆಗೆ ತಾರೀಕು 1-7-38 ರಿಂದ ತಿಂಗಳಿಗೆ 10 ರೂ. ಗ್ರಾಂಟು ಕೊಡುವಂತೆ ತೀರ್ಮಾನವಾಯಿತು.

14. ಮಿ. ಮಂಡೇಪಂಡ ಸೋಮಯ್ಯನವರ ಸೂಚನೆ ಮೇರೆ ಆರಮೇರಿ ಹರಿಜನ ಶಾಲಾ ಕಟ್ಟಡಕ್ಕಾಗಿ ರೂ. 260 ಮಂಜೂರ್ಮಾಡಲಾಯಿತು.

15. ಮಿ. ಚೆಟ್ಟಿಮಾಳಂಡ ಮಾಚಯ್ಯನವರ ಸೂಚನೆ ಮೇರೆ ಬಲ್ಲಮಾವಟಿ ಹೆಮ್ಮಾವು ರಸ್ತೆಯನ್ನು ಎರಡು ಮೈಲು ಮುಂದರಿಸಲು 60 ರೂಪಾಯಿ ಮಂಜೂರ್ಮಾಡಲಾಯಿತು.

16. ಮಿ. ಚೆಟ್ಟಿಮಾಳಂಡ ಮಾಚಯ್ಯನವರ ಸೂಚನೆ ಮೇರೆ ನೆಲಜಿ ಶಾಲೆಗೆ ಒಂದು ವೆರಾಂಡ ಕಟ್ಟಿಸಲಿಕ್ಕಾಗಿ ರೂ. 139-2-0 ಮಂಜೂರ್ಮಾಡಲಾಯಿತು.

17. ಮಿ. ಚೆಟ್ಟಿಮಾಳಂಡ ಮಾಚಯ್ಯನವರ ಸೂಚನೆ ಮೇರೆ ಚೈಯ್ಯಂಡಾಣೆ ಶಾಲೆಯಲ್ಲಿ 6 ನೇ ತರಗತಿಯನ್ನು ತೆರೆಯುವಂತೆಯೂ, ಅಲ್ಲಿಗೆ ಒಬ್ಬ ವಾಲಂಟಿಯರ್ ಟೀಚರನ್ನು ನೇಮಕ ಮಾಡುವಂತೆಯೂ ತೀರ್ಮಾನವಾಯಿತು.

18. ಮಿ. ಎಸ್. ಎನ್. ರಾಮಶೆಟ್ಟಿಯವರ ಸೂಚನೆಯಂತೆ ಗ್ರಾಮಾಭಿವೃದ್ಧಿ ಫಂಡಿನಿಂದ ತ್ಯಾಗತ್ತೂರು ಗ್ರಾಮದಲ್ಲಿ ತೆಗೆಯುವ ಬಾವಿಗೆ, ಗ್ರಾಮಸ್ಥರು ಕೆಲಸದ ರೂಪದಲ್ಲಿ 50 ರೂಪಾಯಿ ಸಲ್ಲಿಸಿದರೆ ಬೋರ್ಡಿನಿಂದ 50 ರೂಪಾಯಿ ಕೊಡಲು ತೀರ್ಮಾನಿಸಲಾಯಿತು.

19. ಚೀಫ್ ಕಮಿಷನರವರು ತಾ. 28-12-37 ರ ತಮ್ಮ ಪತ್ರದಲ್ಲಿ ಸಲಹೆಕೊಟ್ಟ ಮೇರೆ ಸರಕಾರಿ ನೌಕರಿಗೆ ಇಟ್ಟ ವಿದ್ಯಾಯೋಗ್ಯತೆಯನ್ನೇ ಡಿಸ್ಟ್ರಿಕ್ಟ್ ಬೋರ್ಡಿನ ನೌಕರಿಗೂ ಅಂಗೀಕರಿಸಲಾಯಿತು.

20. ತಾಕೇರಿ ಶಾಲೆಯನ್ನು ಕಟ್ಟಿಸಿದ ಮಿ. ಗಳಿಯದ ಬೈರಪ್ಪ ಮತ್ತು ಪುಟ್ಟಯ್ಯನವರ ಹೆಸರಿನಲ್ಲಿ ಶಿಲಾಶಾಸನವನ್ನು ಇಡಲು 26 ರೂಪಾಯಿಗಳನ್ನು ಮಂಜೂರ್ಮಾಡಬೇಕೆಂಬ ಶಾಲಾ ಡಿಪ್ಯುಟಿ ಇನ್ಸ್‌ಪೆಕ್ಟರವರ ಕೋರಿಕೆಯನ್ನು ಸಲ್ಲಿಸುವಂತೆ ತೀರ್ಮಾನವಾಯಿತು.

21. ಮಡಿಕೇರಿ ನಾಡಿನ ಅರಕಾಡು ಸ್ಕೂಲಿಗೆ ಗ್ರಾಂಟು ಕೊಡಬೇಕೆಂಬ ಪತ್ರದ ಮೇರೆ ತಾ. 1-7-38 ರಿಂದ ತಿಂಗಳಿಗೆ 10 ಕೊಡುವಂತೆ ತೀರ್ಮಾನಿಸಲಾಯಿತು.

22. ಮಿ. ಕಾಕಮಾಡ ಗಣಪತಿಯವರ ಸೂಚನೆ ಮೇರೆ, ನೆಮ್ಮಲೆ ಗ್ರಾಮಸ್ಥರಿಗೆ ಒಂದು ಬಾವಿ ತೆಗೆಯಲು ಗ್ರಾಮಸ್ಥರು 150 ರೂಪಾಯಿ ಸಂಗ್ರಹಿಸಿದರೆ ಬೋರ್ಡಿನಿಂದ ರೂ. 150 ಕೊಡಲು ತೀರ್ಮಾನವಾಯಿತು.

23. ಮಿ. ಪಿ. ಐ. ಬೆಳ್ಯಪ್ಪನವರು ಈ ಮೊದಲು ಕಳುಹಿಸಿದ ಠರಾವು ಮೇರೆ ವೀರಾಜಪೇಟೆ—ಗೋಣಿಕೊಪ್ಪಲು ರಸ್ತೆಯ 8 ನೇ ಮೈಲು 4 ಫರ್ಲಾಂಗಿನಿಂದ ಕೈಕೇರಿ ಮಾರ್ಗವಾಗಿ ಕಳತ್ತುಮಾಡಿಗೆ ಹೋಗುವ ರಸ್ತೆಯ ರಿಪೇರಿಗಾಗಿ ರೂ. 100 ಮಂಜೂರ್ಮಾಡಲಾಯಿತು.

24. ಮಿ. ಅಜ್ಜಿಕುಟ್ಟಿರ ಪೊನ್ನಪ್ಪನವರ ಸೂಚನೆ ಮೇರೆ ಆರಮನೆಪಾಣೆಯಿಂದ ಲಕ್ಷ್ಮಣತೀರ್ಥ ಹೊಳೆ ದಾಟಿ ನಿಟ್ಟೂರಿಗೆ ಹೋಗುವ ರಸ್ತೆಯ ರಿಪೇರಿಗೆ 50 ಕೊಡಲು ತೀರ್ಮಾನವಾಯಿತು.

25. ಮಿ. ಅಜ್ಜಿಕುಟ್ಟಿರ ಪೊನ್ನಪ್ಪನವರ ಸೂಚನೆ ಮೇರೆ ಗೋಣಿಕೊಪ್ಪ—ಅಮ್ಮತ್ತಿ ರಸ್ತೆಯಲ್ಲಿ ಅತ್ತೂರಿನಲ್ಲಿ ಸಿಕ್ಕುವ ತೋಡಿಗೆ ಒಂದು ಪಾಲ ಹಾಕಲು ರೂ. 10 ಮಂಜೂರಾಯಿತು.

26. ಮಿ. ಯಸ್. ಎನ್. ರಾಮಶೆಟ್ಟಿಯವರ ಸೂಚನೆ ಮೇರೆ ತ್ಯಾಗತ್ತೂರು ರಸ್ತೆಯ ರಿಪೇರಿಗಾಗಿ ರೂ. 10 ಮಂಜೂರ್ಮಾಡಲಾಯಿತು.

27. ಬೋರ್ಡಿನ ಮೀಟಿಂಗಿನ ಕಾರ್ಯಕಲಾಪಗಳು ಇಂಗ್ಲಿಷಿನಲ್ಲಿ ನಡೆಯಬೇಕೆಂದೂ, ಇಂಗ್ಲಿಷ್ ಭಾಷಾಪಾಂಡಿತ್ಯವಿಲ್ಲದವರು ಅಧ್ಯಕ್ಷರ ಅನುಮತಿ ಮೇರೆ ಕನ್ನಡದಲ್ಲಿ ಮಾತಾಡಬಹುದೆಂದೂ, ಅಧ್ಯಕ್ಷರು ಉಪಾಧ್ಯಕ್ಷರನ್ನಾಗಲೀ, ಬೇರೆ ಯಾವ ಮೆಂಬರನ್ನಾಗಲೀ ಅದನ್ನು ಸಭೆಗೆ ತಿಳಿಯುವ ಭಾಷೆಯಲ್ಲಿ ಭಾಷಾಂತರಿಸಲು ಕರೆಯಬಹುದೆಂದೂ ಡಿಸ್ಟ್ರಿಕ್ಟ್ ಫಂಡ್ ಮ್ಯಾನ್ಯುವಲಿನ ರೂಲ್ 9 ಕ್ಕೆ ಚೀಫ್ ಕಮಿಷನರವರು ಸೂಚಿಸಿದ ತಿದ್ದುಪಡಿಯನ್ನು 'ಬೇರೆ ಯಾವ ಮೆಂಬರನ್ನಾಗಲೀ' ಆದ ನಂತರ 'ಅಥವಾ ಕ್ಲಾರ್ಕರನ್ನಾಗಲೀ' ಎಂಬ ಶಬ್ದವನ್ನು ಸೇರಿಸಿ ಅಂಗೀಕರಿಸಲಾಯಿತು.

28. 1938-39 ನೇ ವರ್ಷದಲ್ಲಿ ಕೊಡಗಿನ ಟೋಲ್‌ಗೇಟುಗಳ ಹರಾಜಿನ ಆದಾಯ ರೂ. 10065ನ್ನು ಮಂಜೂರು ಮಾಡಲಾಯಿತು.

(ಉಳಿದ ಭಾಗ ಮುಂದೆ)

ಧನ್ವಂತರಿ ಸಹಾಯ ಔಷಧಾಲಯ.
ವೀರಾಜಪೇಟೆ, (ದ. ಕೊಡಗು).

ಆಯುರ್ವೇದ ಶಾಸ್ತ್ರ ಪ್ರಕಾರ ತಯಾರಿಸಲ್ಪಟ್ಟ ಎಲ್ಲಾ ಔಷಧಗಳು ನ್ಯಾಯವಾದ ಕ್ರಯಕ್ಕೆ ವಿಕ್ರಯಿಸಲ್ಪಡುತ್ತೆ. ನಮ್ಮ ವೈದ್ಯ ರಾಯರು ಕಾಯಿಲಸ್ಥರನ್ನು ಪರೀಕ್ಷೆ ಮಾಡಿ ಔಷಧಿ ಕೊಟ್ಟು ಕೆಲವು ಮಹನೀಯರಿಂದ ಸರ್ಟಿಫಿಕೇಟ್ ಪಡೆದಿರುತ್ತಾರೆ. ದೂರದಲ್ಲಿರುವ ಮಹನೀಯರು ಅವರ ಕಾಯಿಲೆಯ ವಿವರವನ್ನು ಬರೆಸಿದಲ್ಲಿ ತಕ್ಕ ಔಷಧಿ ಕಳುಹಿಸಿ ಕೊಡಲಾಗುತ್ತೆ. 12 ವರ್ಷದ ಅನುಭವ ಹಿರಿಯ ವೈದ್ಯ ಶಾಲೆಯು ಪ್ರಾರಂಭದಲ್ಲಿರುತ್ತೆ.

ಜ್ವರ ಸಂಹಾರ ಸುದರ್ಶನ.

ಈ ಔಷಧಿಯು ತ್ರಿ ದೋಷ ಕೋಪದಿಂದುಂಟಾಗುವ ಸರ್ವಜ್ವರವನ್ನು ಗುಣಪಡಿಸುತ್ತೆ. 13 ಪ್ರಕಾರದ ಸನ್ನಿಯನ್ನು, ಶೀತಜ್ವರ, ಮೋಹಾಲಸ್ಯ, ತಲೆನೋವು, ಬಾಯೊರಿಕೆ, ಉಬ್ಬಸ, ಕೆಮ್ಮಲು, ಪಾಂಡುರೋಗ, ಪ್ಲೀಹರೋಗ, ಕಾಮಾಲೆ, ಬೆನ್ನು ನೋವು, ಸೊಂಟ, ಮಂಡಿ, ಪಕ್ಕೆಗಳು—ಈ ಭಾಗಗಳ ನೋವನ್ನು ಗುಣಪಡಿಸುವುದು.

ಉಪಯೋಗದ ಕ್ರಮ:-ಜೀರ್ಣ ಪ್ರಕೃತಿಯನ್ನನುಸರಿಸಿ ಒಂದರಿಂದ ಎರಡು ಪಿನ್ನುಗಳ ವರೆಗೆ ಒಮ್ಮೆ ತೆಗೆದುಕೊಳ್ಳುವದು. 8 ಔನ್ಸುಗಳ ಬುಡ್ಡಿಗೆ ರೂ. 1-0-0. ಅಂಚೆ ಸಾಗಲು ಪ್ರತ್ಯೇಕ.

3 ಸಿ. ಬೆಟ್. ರಾಮಣ್ಣ ವೈದ್ಯರ್.

ADVERTISE
IN
"KODAGU"
The OLDEST WEEKLY of COORG.

ದಿ ಗಾರ್ಡಿಯನ್ ಆಫ್ ಇಂಡಿಯಾ ಇನ್ಸೂರೆನ್ಸ್ ಕಂಪೆನಿ ಲಿಮಿಟೆಡ್,
ಮದ್ರಾಸು.

ಟ್ರಾವಂಕೂರು ನ್ಯಾಶನಲ್ ಮತ್ತು ಕ್ವಿಲಾನ್ ಬ್ಯಾಂಕ್-ಇದು ತನ್ನ ವಹಿವಾಟುಗಳನ್ನು ನಿಲ್ಲಿಸಿದ್ದರಿಂದ ಈ ಕಂಪೆನಿಗೆ ಏನಾದರೂ ಹಾನಿ ತಟ್ಟಿದೆಯೋ, ತಟ್ಟಿದ್ದರೆ ಎಷ್ಟರ ಮಟ್ಟಿಗೆ ಎಂಬ ವಿಷಯವಾಗಿ ನಮ್ಮ ಪೋಲಿಸಿದಾರರೂ, ಪಾಲುದಾರರೂ ಕಂಪೆನಿಗೆ ಸಂಬಂಧಪಟ್ಟ ಇತರರೂ ತಿಳಿಯಬಯಸಿ ಪ್ರಶ್ನಿಸುತ್ತಿರುವರು.

ಇದಕ್ಕೆ ಉತ್ತರವಾಗಿ ನಾವು ಆಶ್ವಾಸನಾರೂಪವಾಗಿ ಹೀಗೆ ತಿಳಿಸಬಯಸುವೆವು. ಬ್ಯಾಂಕಿನ ವಹಿವಾಟುಗಳನ್ನು ತಾತ್ಕಾಲಿಕವಾಗಿ ನಿಲ್ಲಿಸಿದ್ದರಿಂದ ಕಂಪೆನಿಯ ಸ್ಥಿತಿಯ ಮೇಲೆ ಏನೂ ಪರಿಣಾಮವಾಗುವಂತಿಲ್ಲ. ಈ ಕಂಪೆನಿಯು ಅವಶ್ಯವಿರುವ ಮತ್ತು ಕಾಯಿದೆಗನುಗುಣವಾಗಿರುವ ಠೇವಣಾತಿಯನ್ನು ಕಂಟ್ರೋಲರ್ ಕರೆನ್ಸಿ (ಸರಕಾರ)ಯವರಲ್ಲಿ ಭದ್ರತೆಯಾಗಿಟ್ಟಿದೆ. ಈ ಮೇಲಿನ ಠೇವಣಾತಿಯಲ್ಲದೆ ಕಂಪೆನಿಗೆ ಸರಕಾರಿ ಪತ್ರಗಳ ರೂಪದಲ್ಲಿ ಇತರ ಹಣದ ಆಸರಿಗಳೂ ಇವೆ. ಅಲ್ಲದೆ ಕಂಪೆನಿಯು ವಹಿವಾಟುಗಳನ್ನು ಸುಗಮವಾಗಿ ನಡೆಸಲು ಇತರ ಬ್ಯಾಂಕುಗಳಲ್ಲಿಯೂ ಠೇವಣಾತಿಗಳಿವೆ.

ಆ ಬ್ಯಾಂಕು ತನ್ನ ವಹಿವಾಟನ್ನು ನಿಲ್ಲಿಸುವ ದಿನದಲ್ಲಿ ಅದರಿಂದ ಈ ಬ್ಯಾಂಕಿಗೆ ಸಲ್ಲತಕ್ಕದ್ದು ರೂ. 20,437-10-8 ಎಂದು ಹೇಳಬಯಸುತ್ತೇವೆ. ಈ ಹಣವನ್ನು ನಾವು ಪೂರ್ಣ ಹಿಂತಿರುಗಿ ಹೊಂದುವೆವೆಂದು ಭರವಸೆ ಪಡಲು ಕಾರಣಗಳಿವೆ. ಹೀಗಿರುವದರಿಂದ 'ಗಾರ್ಡಿಯನ್ ಇನ್ಸೂರೆನ್ಸ್ ಕಂಪೆನಿಯು ತನ್ನ ಹಣವನ್ನೆಲ್ಲಾ ಟ್ರಾವಂಕೂರು ಬ್ಯಾಂಕಿನಲ್ಲಿ ಇಟ್ಟಿದೆ. ಅದರಿಂದ ಅದರ ಸ್ಥಿತಿಯು ದುರ್ಭರವಾಗಿದ್ದೆ' ಎಂದು ಹೇಳುವದೆಲ್ಲಾ ಸುಳ್ಳಿನ ಕಂತೆಗಳೇ ಆಗಿವೆ.

ಈ ಮೊದಲೇ ಸ್ಪಷ್ಟೀಕರಿಸಿದಂತೆ ಈ ಕಂಪೆನಿಯ ಇಷ್ಟು ಹಣವು ಆ ಬ್ಯಾಂಕಿನಲ್ಲಿ ಠೇವಣಿ ಆಗಿ ಇದ್ದುದರಿಂದ ಈ ಕಂಪೆನಿಯ ದೃಢತೆ ಯಾ ಭದ್ರತೆಯಲ್ಲಿ ಯಾವ ವಿಧದ ತೊಂದರೆಯೂ ಇಲ್ಲ.

ಈ. ಎ. ಪ್ಯಾಸ್, ಎಸ್ಕ್ವಯರ್,
ಬಿ. ಎಸ್. ಸಿ.
12-5 ಬ್ರಾಂಚ್ ಮೇನೇಜರ್,
ಮಂಗಳೂರು.

[ಚಿಕ್ಕ ಡಾಕ್ಟರ್] **ವೇಪಿನ್** [ರಿಜಿಸ್ಟರ್ಡ್]

ಚರ್ಮವ್ಯಾಧಿಗಳ ವೈರಿ—ಪ್ರತಿ ಒಬ್ಬರ ಸ್ನೇಹಿತ—ಸ್ವದೇಶಿ ವಸ್ತು.

ಇದರ ಲೇಪನದಿಂದ ಕಜ್ಜಿ, ಘಾಯ, ವ್ರಣ, ತಿಸಬು, ನಾರು ಹುಣ್ಣು, ಮೂಲವ್ಯಾಧಿ, ಸುಟ್ಟಿನ ಘಾಯ, ಮೊಡವೆ(Pimples) ಸುಟ್ಟ ಘಾಯ, ಕತ್ತಿ ಘಾಯ, ಕೊಡವಾಳೆ, ಗಜಕರ್ಣ ಇವು ವಾಸಿಯಾಗುವವು. ಇದು ಸುರಿಯುತ್ತಿರುವ ರಕ್ತವನ್ನು ನಿಲ್ಲಿಸಿ ನೋವನ್ನು ನಿವಾರಿಸುವುದು. ಅಲ್ಲದೆ ಇಂದ್ರಜಾಲರೋಗಾದಿಯಲ್ಲಿ ಚೇಳಿನ ವಿಷವನ್ನು ಬಹಿರ್ಗತಪಡಿಸುವುದು. ನಿಮ್ಮಲ್ಲಿ ಒಂದು ಬಾಟ್ಲು ಇದ್ದಲ್ಲಿ ಒಬ್ಬ ಡಾಕ್ಟರೇ ಇದ್ದಂತಾಗುವುದು. ಕ್ರಯ ಬಹಳ ಸುಲಭ. ½ ಔನ್ಸ್ ಬಾಟ್ಲು 1ಕ್ಕೆ ಆಣೆ 0-8-0. ¼ ಔನ್ಸ್ ಬಾಟ್ಲು 1ಕ್ಕೆ ಆಣೆ 0-4-0.

ವಿ. ಸೂ:—ಪೆಟ್ಟು ತಾಗಿದ ಸ್ಥಳದಲ್ಲಿ ವೇಪಿನ್ ಚೆನ್ನಾಗಿ ತಿಕ್ಕುವುದು. ಇಲ್ಲವೇ ಬಟ್ಟೆಯ ಮೇಲೆ ಸವರಿ ಅಂಟಿಸುವುದು. ನಂತರ ಸಾಬೂನಿನಿಂದ ಕೈ ತೊಳೆಯುವುದು. ಇದಲ್ಲದೆ ಇನ್ನೂ ಅನೇಕ ತರಹದ ಔಷಧಿಗಳು ನಮ್ಮಲ್ಲಿವೆ.

ಅಶ್ವಿನ್ ಮ್ಯಾನಿಫ್ಯಾಕ್ಚರಿಂಗ್ ಕಂಪೆನಿ,
ಪಿ. ಬಾ. ಬೆಂಗಳೂರು ಸಿಟಿ.

52-49 **ಲೋಕಲ್ ಏಜೆಂಟ್:—ಹರಿದಾಸ್ ನಂಜುಂಡ ಗುಪ್ತ,**
ಮಡಿಕೇರಿ, (ಕೊಡಗು).

ಯುನಾನಿ ಫಾರ್ಮಸಿಯ ಉತ್ತಮ ಔಷಧಿಗಳು.

ಉಬ್ಬಸ ಸಂಹಾರಿ (Asthma cure) ಕೆಲವು ದಿನಗಳ ಸೇವನೆಯಿಂದ ಉಬ್ಬಸವನ್ನು ಖಾತ್ರಿಯಾಗಿ ಗುಣಪಡಿಸುತ್ತದೆ. 40 ದಿನದ ಔಷಧಿಗೆ ಕ್ರಯ ರೂ. 5-12-0.

ಅಂಬರ್ ಕೂವಲೆಟ್ಟೆ, ಸುಗಂಧಯುಕ್ತ ಆಮ್ಲ ಕೇಶ ತೈಲ ಅಲ್ಲದೆ ಎಲ್ಲಾ ರೋಗಗಳಿಗೂ ಉಪಯೋಗವಾಗುವಂತಿರುವ ಮಾತ್ರೆಗಳೂ, ಚೂರ್ಣಗಳೂ, ಲೇಪಗಳೂ, ತೈಲಗಳೂ ಮತ್ತು ಕೇಶ ತೈಲಗಳೂ ಸಹ ತಯಾರಿರುವುವು.

ಬೇಗನೆ ಬರೆಯಿರಿ:—

ಎಂ. ಎಂ. ಸಿದ್ದೀಕ್,
20 ಪ್ರೊಪ್ರೈಟರ್,
ಯುನಾನಿ ಔಷಧಶಾಲಾ, ಮಡಿಕೇರಿ, ಕೊಡಗು.

ಮಾರಾಟಕ್ಕೆ ತಯಾರಾಗಿವೆ.

ಸಹಕಾರ ಸಂಘಗಳ ಮತ್ತು ದವಸ ಭಂಡಾರಗಳಲ್ಲಿ ಬೇಕಾದ ರಿಜಿಸ್ಟರುಗಳು ಅಂದರೆ—**ಜಮಾ, ಖರ್ಚು, ಸಾಲ ಮೂಲದ** ರಿಜಿಸ್ಟರು, **ಸಾಲದ** ರಿಜಿಸ್ಟರು, **ಮೆಂಬರು** ರಿಜಿಸ್ಟರು, **ಶೇರು** ರಿಜಿಸ್ಟರು, **ಡಿಪಾಜಿಟ್ಟು** ರಿಜಿಸ್ಟರು, **ಕೋರ್ಟು ಖರ್ಚು, ಆರ್ಬಿಟ್ರೇಶನ್** ರಿಜಿಸ್ಟರುಗಳೂ ಅಲ್ಲದೆ ಸಂಘದ ಪ್ರತಿ ಪ್ರತಿಯೊಬ್ಬ ಮೆಂಬರನಲ್ಲಿಯೂ ಇರಬೇಕಾದ ಸಂಘಗಳ ಕಾನೂನು ಪ್ರಕಾರ ತಯಾರಿಸಲ್ಪಟ್ಟಿರುವ ಪಾಸು ಪುಸ್ತಕಗಳೂ, ಬೈಲಾ ಪುಸ್ತಕಗಳೂ, ರಶೀತಿ ಪುಸ್ತಕಗಳೂ, ಓಚರ್ ಪುಸ್ತಕಗಳೂ ಅಲ್ಲದೆ ಜಮ್ಮ ಮಂಜೂರಾತಿ, ಕುಟುಂಬದ ಒಪ್ಪಿಗೆ, ಸಾಲದ ಅರ್ಜಿ, ದವಸಭಂಡಾರದ ಕರಾರು, ಸ್ಟೋರ್ ಕೀಪರ್ ಬಾಂಡು ಮತ್ತು ದಾವಾ ಫಾರಮುಗಳೂ ಸುಲಭ ದರದಲ್ಲಿ ದೊರೆಯುತ್ತವೆ. ಖುದ್ದು ಬರಲಿಕ್ಕೆ ಸಾಧ್ಯವಿಲ್ಲದವರು ಆರ್ಡರು ಕೊಟ್ಟಲ್ಲಿ ವಿ. ಪಿ. ಮೂಲಕ ಕಳುಹಿಸಲಾಗುವುದು. ಹೆಚ್ಚಿನ ವಿಷಯಗಳಿಗೆ ಕೆಳಗಿನ ಅಡ್ರೆಸಿಗೆ ಬರೆಯಿರಿ.

ಮೇನೇಜರ್,
ಕೊಡಗು ಲಿಮಿಟೆಡ್, ಮಡಿಕೇರಿ.

ಕಸ ಮಾರಿ ಕಸವರ!

ಇಂಗ್ಲೆಂಡಿನಲ್ಲಿ ಸೌತ್‌ಗೇಟ್ ಎಂಬಲ್ಲಿ ಪೌರ ಸಭೆಯವರು ಊರಲ್ಲಿ ಬಿದ್ದ ಕಸ-ಕಿಸ್ತೆಗೆ ಹಾಕಿದ ಕಾಗದ, ಚಿಂದಿ, ಹಳೇ ಟಿನ್ನಿನ ಡಬ್ಬಗಳು ಇತ್ಯಾದಿಗಳನ್ನು ಮಾರಿ 4134 ಪೌಂಡು ಲಾಭ ಪಡೆದರು.

ಈ ಕಸವನ್ನು ಆರಿಸಿದ 30 ಜನರಿಗೆ ಆ ಲಾಭದಲ್ಲಿ ಸಾಲುವುದು ಕೇವಲ 15 ಪೌಂಡು 17 ಷಿಲಿಂಗ್‌ನಂತೆ.

ಹೀಗೆ ಕಸದಿಂದಲೂ ಕಸವರ (ಚಿನ್ನ) ಸಂಪಾದಿಸಬಹುದು. ಈ ಪ್ರಪಂಚದಲ್ಲಿ ಅಪ್ರಯೋಜಕವಾದ ವಸ್ತು ಇಲ್ಲವೇ ಇಲ್ಲವೆನ್ನಬಹುದು. ಆದರೆ ಕಸವನ್ನೂ ಕಸವರವಾಗಿಸುವ ಬುದ್ಧಿ ಮಾತ್ರ ಇರಬೇಕು ಅಷ್ಟೆ!

—೦—

12 ತಾಸಿನಲ್ಲಿ ಇಬ್ಬರನ್ನು ವರಿಸಿದ ಮಹಿಳಾಮಣಿ.

ವೆಸಲೋನ ಸ್ಟೋಮಿಟ್ ಎಂಬ 23 ವರ್ಷದ ತರುಣಿಯು ಒಂದೇ ದಿನ ಇಬ್ಬರನ್ನು ವರಿಸಿದಳು. ಒಬ್ಬನ ಹೆಸರು ಹೆನ್ರಿ, ಇನ್ನೊಬ್ಬನ ಹೆಸರು ಜೋಸ್. ಇಬ್ಬರನ್ನು ಸಮಾನವಾಗಿ ಪ್ರೀತಿಸುತ್ತಿದ್ದಳು. ಮೊದಲು ಜೋಸನನ್ನು ಲಗ್ನವಾದಳು. ನಂತರ ಹೆನ್ರಿಯು ಬೇಡಿದ ಕಾರಣದ ಅವನನ್ನು ಲಗ್ನವಾದಳು. ಜಡ್ಜರು ಇವೆರಡೂ ಲಗ್ನವನ್ನು ರದ್ದು ಮಾಡಿ ಆಕೆಯನ್ನು ಒಂದು ಮಹಿಳಾಶ್ರಮದಲ್ಲಿ ಬಂಧಿಯಾಗಿ ಇರಿಸಿದ್ದಾರೆ. ಯಾರ ಮೇಲೆ ಅವಳ ಪ್ರೇಮವು ಅಧಿಕವಿರುವದೆಂದು ನಿರ್ಧರಿಸಿ ಮುಂದೆ ಇಬ್ಬರಲ್ಲಿ ಒಬ್ಬನನ್ನು ವರಿಸೆಂದು ಜಡ್ಜರ ತೀರ್ಮಾನ.

—೦—

ಮರದ ಮೇಲೆ ಮಂಚ.

ಅಲ್ಪ ಕಾರಣಗಳಿಗಾಗಿ ವಿವಾಹ ವಿಚ್ಛೇದ ಮಾಡಲು ಪ್ರಯತ್ನಿಸಿ ವಿಫಲರಾದವರ ಕಥೆಗಳು ಇವೆ. ಆದರೆ ಅತಿ ವಿಚಿತ್ರ ಕಾರಣಕ್ಕಾಗಿ ವಿವಾಹ ವಿಚ್ಛೇದ ಪಡೆದವರೂ ಉಂಟು. ಮಾಂಟಿಕ್ಲೇರ್ (ನ್ಯೂಜರ್ಸಿ ಪ್ರಾಂತ್ಯ)ದಲ್ಲಿ ವಾಸವಾಗಿದ್ದ ಒಬ್ಬನಿಗೆ ಒಂದು ವಿಚಿತ್ರ ಅಭ್ಯಾಸವಿತ್ತು. ಮನೆಯೊಳಗೆ ಮಲಗುವುದೆಂದರೆ ಅವನಿಗೆ ಸರಿಬೀಳುತ್ತಿರಲಿಲ್ಲ. ಮನೆಯ ಆವರಣದಲ್ಲಿದ್ದ ಮರವೊಂದರ ಮೇಲೆ ಅಟ್ಟ (ಹಂದರ) ಕಟ್ಟಿಸಿಕೊಂಡು ಅದರ ಮೇಲೆ ಮಲಗಿದಲ್ಲದೆ ಅವನಿಗೆ ನಿದ್ರೆ ಬರುತ್ತಿದ್ದಿಲ್ಲ. ಅವನು ಎಲ್ಲಾದರೂ ಮಲಗಲಿ, ಆ ಮಾತು ಬೇರೆ—ತನ್ನ ಹೆಂಡತಿ ಕೂಡ ಮರದ ಮೇಲೆ ಮಲಗಬೇಕೆಂದು ಅವನು ಒತ್ತಾಯ ಮಾಡಿದ! ದಿನಾ ಮರ ಹತ್ತಿ ಇಳಿದು ಮರದ ತುದಿಯಲ್ಲಿದ್ದ ಮಂಚದ ಮೇಲೆ ಮಲಗುವುದು ಅವಳಿಗೆ ಸರಿಬೀಳಲಿಲ್ಲ. ಆದ್ದರಿಂದ ಈ ಕಷ್ಟವನ್ನೇ ಕಾರಣಮಾಡಿಕೊಂಡು ವಿವಾಹ ವಿಚ್ಛೇದಕ್ಕೆ ಅರ್ಜಿ ಹಾಕಿದಳು. ದಿನಾ ಮರದ ಮೇಲೆ ಹತ್ತಿ ಅಲ್ಲಿ ಮಲಗುತ್ತಾ ಕೋತಿಗಳಂತೆ ಜೀವನ ನಡೆಸುವುದು ಕಷ್ಟತರವಾದ ಕೆಲಸವೆಂದು ನ್ಯಾಯಾಧೀಶರು ಒಪ್ಪಿ ಅವಳ ಅರ್ಜಿಯಂತೆ, ವಿವಾಹ ವಿಚ್ಛೇದಕ್ಕೆ ಅನುಮತಿ ಕೊಟ್ಟು ಅವಳನ್ನು ಕೋತಿ ಜೀವನದಿಂದ ಪಾರು ಮಾಡಿಸಿದರು!

—೦—

ವಿ ವಿ ಧ ವಿ ಚಾ ರ.

ಯಾರು ಹೆಚ್ಚು ದೊರೆಗಳು?

ಮನುಷ್ಯನೋ? ಮೂಷಿಕವೋ?

ಇಲಿಗೆ ಅಂಜುವಂಥ ಮನುಷ್ಯನನ್ನು ಅತಿ ಪುಕ್ಕರೆಂದು ನಾವು ಅನ್ನುತ್ತೇವಷ್ಟೆ. ಆದರೆ ಹಿಂದುಸ್ತಾನದಲ್ಲಿಯ ಇಲಿಗಳು ಆಧುನಿಕ ಯುದ್ಧೋಪಕರಣಗಳಿಗೆ ಸೊಪ್ಪು ಹಾಕದೆ ತಮ್ಮ ರಾಜ್ಯವನ್ನು ಸ್ಥಾಪಿಸಿದವೆಂಬುದನ್ನು ಕೇಳಿದರೆ ಆಶ್ಚರ್ಯವಾಗದೆ?

ಕರಾಚಿಯಿಂದ 100 ಮೈಲಿ ದೂರದಲ್ಲಿ ಮಾಮಲ್‌ಘೋರ್ ಎಂಬ ವಿಮಾನ ನಿಲ್ದಾಣವಿದೆ. ಅಲ್ಲಿ ಸಾವಿರಾರು ಇಲಿಗಳು ಒಳಗೆ ಹಳ್ಳ ತೋಡಿ ವಿಮಾನಗಳು ಇಳಿದರೆ ಒಳಕ್ಕೆ ಹೂತುಕೊಳ್ಳುವಂತೆ ಮಾಡಿಬಿಟ್ಟಿದ್ದವು!

ಆ ಇಲಿಗಳನ್ನು ಕೊಲ್ಲುವದಕ್ಕಾಗಿ ವಿಮಾನಯಂತ್ರವನ್ನು ಬಿಡಲಾಯಿತು. ಇಲಿಗಳೇನೂ ಸಾಯಲಿಲ್ಲ; ವಿಷ ಹಾಕಿದರು. ಅಲ್ಲಲ್ಲಿ ಬೆಂಕಿ ಹಾಕಲಾಯಿತು. ಆದರೂ ಇಲಿಗಳು ತಮ್ಮ ರಾಜ್ಯವನ್ನು ಬಿಟ್ಟುಕೊಡಲಿಲ್ಲ. ಕೊನೆಗೆ ವೈಮಾನಿಕ ಅಧಿಕಾರಿಗಳು ಹತಾಶರಾಗಿ ಆ ಕ್ಷೇತ್ರವನ್ನೇ ಬಿಟ್ಟು ಬಿಟ್ಟರು! ಈಗ ಅಲ್ಲಿ ಇಲಿಗಳ ರಾಜ್ಯ!

—೦—

ಹತ್ತು ವರ್ಷ ಟಿಕೆಟಿಲ್ಲದೆ ಪ್ರಯಾಣ.

ಜಾರ್ಜೆಸ್ ಸೀಬರ್ಟ್ ಎಂಬಾತನು ಫ್ರೆಂಚ್ ರೈಲ್ವೆ ಗಾಡಿಗಳಲ್ಲಿ ಹತ್ತು ವರ್ಷಗಳ ಕಾಲ ಇದ್ದುಕೊಂಡು ಜೀವನ ಮಾಡಿದ. ರೈಲ್ವೇ ನೌಕರನಾಗಿ ಅಲ್ಲ. ಆದರೆ?

ರೈಲಿನಲ್ಲಿ ಪ್ರಯಾಣ ಮಾಡುವುದು ಅವನ ನೌಕರಿ. ಟಿಕೆಟ್ಟನ್ನು ಮಾಡಿಕೊಂಡು ತಿರುಗಾಡುತ್ತಿದ್ದ. ರೈಲಿನಲ್ಲೇ ಸ್ನಾನ, ಊಟ, ನಿದ್ದೆ! ಇವನಿಗೆ ಸ್ವಂತ ಮೋಟಾ ಟಿಕೆಟ್ಟುಗಳೇ.

ಅವನ ಬಳಿ ಬೇಗನೆ ರೈಲುಗಳ ಗೊಂಚಲಿದ್ದುದರಿಂದ ಎಲ್ಲಿಗೆ ಬೇಕಾದರೂ ಹೋಗಿ ಬರಲು ಅನುಕೂಲವಾಗಿತ್ತು.

ಒಮ್ಮೆ, ಯಾರೋ ಒಬ್ಬಳು ಹುಡುಗಿ ಟಿಕೆಟ್ ಇಲ್ಲದೆ ಪ್ಲಾಟ್‌ಫಾರ್ಮ್ ಮೇಲೆ ನಿಂತು ಯೋಚಿಸುತ್ತಿದ್ದಳು. ಇವನು ಅವಳ ಬಳಿ ಹೋಗಿ, ಅಳಬೇಡ, ಟಿಕೆಟ್ ಕೊಡುತ್ತೇನೆ ಅಂತ ಸಂತೈಸಿ ಮೋಟಾ ಟಿಕೆಟ್ ಹಿಡಿದುಕೊಟ್ಟ.

ಅವಳು ಟಿಕೆಟ್ ನೋಡಿ, ಗುಮಾನಿಪಟ್ಟು ಪೋಲೀಸರಿಗೆ ತಿಳಿಸಿದಳು.

ಸರಿ, ಈಗಲೂ ಅವನಿಗೆ ಕಾಸಿಲ್ಲದೆಯೆ ಸ್ನಾನ ಊಟ ನಿದ್ದೆ ಸಿಕ್ಕುತ್ತಿವೆ; ಆದರೆ ಇವೆಲ್ಲ ಸೆರೆಮನೆಯ ಕಾಣಿಕೆಗಳು.

—೦—

ಭಿಕ್ಷೆಯ ತೆಗೆದುಕೊಂಡದ್ದಕ್ಕೆ ಶಿಕ್ಷೆ.

ಸೇಲಂ ಪಟ್ಟಣದಲ್ಲಿ ಸುಮಾರು ಐದು ಪೋಲೀಸರು ನೆರೆಯ ಮಾವಿನತೋಪನ್ನು ಪಹರೆ ಕಾಯುತ್ತಿದ್ದರೆಂಬ ಆಪಾದನೆಯ ಮೇಲೆ ಒಬ್ಬೊಬ್ಬರಿಗೆ ರೂ. 50 ರಂತೆ ಜುಲ್ಮಾನೆಯನ್ನು ವಿಧಿಸಲ್ಪಟ್ಟಿದೆ. ನಿನ್ನಿನ ಪ್ರಕಟಣೆಯಲ್ಲಿ ಪೋಲೀಸು ಪ್ರಭುತ್ವದವರು ಪೋಲೀಸರು ಭಿಕ್ಷೆ ಪಡೆಯಬಾರದು, ಬಸ್ಸುಗಳಲ್ಲಿ ಹಣವಿಲ್ಲದೇ ಪ್ರಯಾಣಮಾಡುವುದು ಇತ್ಯಾದಿಗಳನ್ನು ಜರಗಿಸಿದರೆ ಜಿಲ್ಲೆಗಳ ಪೋಲೀಸು ಅಧಿಕಾರಿಗಳು ಅಂಥಾ ಕೃತ್ಯಗಳಿಗೆ ಜವಾಬ್ದಾರರಾಗುವರೆಂದು ಎಚ್ಚರಿಸಿರುವರು.

—೦—

ಕೋತಿಯ ಕ್ರೌರ್ಯ.

ಜಾನಪುರದಲ್ಲಿ ಒಂದು ಕೋತಿಯು ಕೆಲ ತಿಂಗಳ ಹಿಂದೆ ಒಂದು ಮನೆಯನ್ನು ಹೊಕ್ಕಿತು. ಅದಕ್ಕೆ ಆ ಮನೆಯವರು ಆಹಾರವಿಕ್ಕಿದರು. ಅಂದಿನಿಂದ ಅದು ಊಟದ ಸಮಯಕ್ಕೆ ಸಾಧಾರಣ ಬರುತ್ತಿತ್ತು; ಅದಕ್ಕೆ ಮನೆಯವರು ಊಟ ಇಕ್ಕುತ್ತಿದ್ದರು. ಒಂದು ದಿನ ಗೃಹಿಣಿಯು ಕೋತಿಗೆ ಅನ್ನವಿಕ್ಕಲು ಮರೆತಳು. ಕೋತಿಗೆ ಕೋಪ ಬಂದು, ತೊಟ್ಟಿಲಲ್ಲಿದ್ದ ಮಗುವನ್ನು ಹಿಡಿದುಕೊಂಡು ಒಂದು ಮರವನ್ನೇರಿ ಕುಳಿತಿತು. ಯಾರು ಎಷ್ಟು ಪ್ರಯತ್ನಿಸಿದರೂ ಮಗುವನ್ನು ಕೆಳಗೆ ತರಲಾಗಲಿಲ್ಲ. ಕೊನೆಗೆ ಒಂದು ಬಟ್ಟಲಲ್ಲಿ ಅನ್ನವನ್ನು ಕೈಯಲ್ಲಿ ತೋರಿಸಲಾಯಿತು. ಅನ್ನವನ್ನು ನೋಡಿ ಅದು ಮಗುವನ್ನು ಕೈಯಿಂದ ಕೆಳಗೆ ಬಿಟ್ಟುಬಿಟ್ಟಿತು! ಮಗುವು ಕೂಡಲೇ ಬಿದ್ದು ಸತ್ತುಹೋಯಿತು.

—೦—

ಮೋಟಾರಿಗೆ ನಿಶ್ಶಬ್ದ 'ಹಾರನ್'ಗಳು.

ಜರ್ಮನಿಯಲ್ಲಿ ಬಸ್ಸು ಲಾರಿ ಮೋಟಾರುಗಳಿಗೆ ನಿಶ್ಶಬ್ದ ಹಾರನ್‌ಗಳನ್ನು ಒದಗಿಸಲಾಗಿದೆ. ಒಂದು ಮೋಟಾರಿನವನು ಇನ್ನೊಂದು ಮೋಟಾರಿನವನಿಗೆ ತಾನು ಮುಂದೆ ಹೋಗುವ ಸೂಚನೆ ಕೊಡಬೇಕಾದರೆ ತನ್ನ ಮೋಟಾರಿನಲ್ಲಿರುವ ಒಂದು ಗುಂಡಿಯನ್ನು ಒತ್ತುತ್ತಾನೆ. ಈ ಗುಂಡಿಯನ್ನು ಒತ್ತುವುದರಿಂದ ಉಂಟಾದ 'ನಿಶ್ಶಬ್ದ ಶಬ್ದವು' ಮುಂದಿನ ಮೋಟಾರಿನವನ ಹತ್ತಿರವಿರುವ 'ಮೈಕ್ರೋಫೋನ್'ನಲ್ಲಿ ಒಂದು ಕರ್ಕಶ ಶಬ್ದವನ್ನುಂಟುಮಾಡುತ್ತದೆ. ಈ ಶಬ್ದವನ್ನು ಕೇಳಿದ ಸಾರಥಿಯು ತನ್ನ ಮೋಟಾರಿನ ಹಿಂದಿರುವ ಕೆಂಪು ದೀಪವನ್ನು ಹಚ್ಚಿ, ತನಗೆ ಕೇಳಿಸಿರುವುದಾಗಿ ಸೂಚಿಸುತ್ತಾನೆ. ಅನಂತರ ಮುಂದಿರುವ ಮೋಟಾರಿನ ಸಾರಥಿಯು ಹಿಂದಿರುವ ಗಾಡಿಯನ್ನು ಮುಂದೆ ಹೋಗುವಂತೆ ತಿಳಿಸಬೇಕಾದರೆ ಹಸರು ದೀಪವನ್ನು ಹಚ್ಚುತ್ತಾನೆ.

—೦—

ಇಂಗ್ಲೆಂಡು ಕೆಳಗೆ ಹೋಗುತ್ತಿದೆ.

ಇಂಗ್ಲೆಂಡಿನ ಕರಾವಳಿಯ ಅನೇಕ ಕಡೆಗಳಲ್ಲಿ ಜನರು ತಮ್ಮ ಮನೆಗಳು ಸಮುದ್ರಪಾಲಾಗದಂತೆ ಹಗಲಿರುಳು ದುಡಿಯುತಿದ್ದಾರೆ. ಅನೇಕ ವರ್ಷಗಳಿಂದ ಅವರು ಈ ರೀತಿ ಹೆಣಗುತಿದ್ದಾರೆ. ಕೆಲವೊಮ್ಮೆ ಬಾರಿ ಅವರು ಸಮುದ್ರದೊಡನೆ ಸೋತದ್ದುಂಟು.

ಈ ಹೋರಾಟವು ಇನ್ನೂ ಬಲವತ್ತರವಾಗಿ ನಡೆಯಬೇಕಾದೀತು. ಸಮುದ್ರವು ಒಂದು ಮಹಾಜಯವನ್ನು ಪಡೆಯುವ ಸಂಭವಗಳು ಉಂಟಾಗಬಹುದು.

ಇಂಗ್ಲೆಂಡಿನ ಮುಖದ ಮೇಲೆ ಅನೇಕ ಬದಲಾವಣೆಗಳಾಗುವವೆಂದು ವಿಜ್ಞಾನಿಗಳೊಬ್ಬರು ಭವಿಷ್ಯವಾಗಿ ನುಡಿದಿರುವರು. ಇಂಗ್ಲೆಂಡು ಕೆಳಗೆ ಹೋಗುತ್ತಿದೆ. ಕಳೆದ 5000 ವರ್ಷಗಳಿಂದ ಅದು ಕೆಳಕ್ಕೆ ಹೋಗುತ್ತಿದೆ ಎಂದು ಅವರ ಅಂಬೋಣ.

—೦—

'ಹುಟ್ಟನ್ನು ಹಲ್ಲು ಹೇಳುವುದು.'

ನಮ್ಮಲ್ಲಿ 'ಕುಲವನ್ನು ನಾಲಿಗೆ ಹೇಳುವುದು' ಎಂಬೊಂದು ಗಾದೆ ಇದೆ. ಮಾತು ನೋಡಿ ಇವನು ಒಳ್ಳೆಯ ಕುಲಕ್ಕೆ ಸೇರಿದವನು, ಅಥವಾ ಹೀನ ಕುಲದವನು ಎಂದು ಗೊತ್ತು ಮಾಡುತ್ತಿದ್ದರು ಹಿಂದೆ. ಈಗಲೂ ಆ ಗಾದೆಯು ಸತ್ಯವಾಗಿಯೇ ಇದೆ!

ಅಮೇರಿಕದಲ್ಲಿ ಹೀಗೆ, ಉಚ್ಚಾರಣೆಯನ್ನು ಕೇಳಿ ಇವನು ಯಾವ ಪ್ರದೇಶದಲ್ಲಿ ಹುಟ್ಟಿದವನು ಎಂಬುದನ್ನು ನಿರ್ಧರಿಸುತ್ತಿದ್ದರು.

ಈಗ ಹಲ್ಲನ್ನು ನೋಡಿ ಅದರಿಂದ ಅವನ ಹುಟ್ಟಿನ ಸ್ಥಳವನ್ನು ಗೊತ್ತುಮಾಡುತ್ತಾರಂತೆ! ಅಮೇರಿಕ ಅಥವಾ ಇನ್ನೂ ನಿರ್ದಿಷ್ಟವಾಗಿ ಹೇಳಬೇಕೆಂದರೆ ಈ ಕ್ಷಣದಲ್ಲಿ ಪತ್ತೆಹಚ್ಚುವ ಸಂಪ್ರದಾಯ.

ಒಬ್ಬ ಸರಕಾರಿ ದಂತವೈದ್ಯನು 1400 ಜನರ ಹಲ್ಲು ಪರೀಕ್ಷೆ ಮಾಡಿ 'ಹಲ್ಲು ಹುಟ್ಟನ್ನು ತಿಳಿಸುತ್ತದೆ' ಎಂಬ ಸಿದ್ಧಾಂತಕ್ಕೆ ಬಂದ.

ಅಮೇರಿಕಾ ಸಂಯುಕ್ತ ಸಂಸ್ಥಾನಗಳ ಪೂರ್ವಭಾಗದಲ್ಲಿರುವವರ ಹಲ್ಲುಗಳು ಶೇಕಡ ನೂರು ಪಾಲು ಕೆಟ್ಟು ಹೋಗಿರುತ್ತವೆ. ಇದಕ್ಕೆ ನ್ಯೂಯಾರ್ಕಿನ ಜೀವನವೇ—ಮುಖ್ಯವು ಆಹಾರ, ಒಳ್ಳೆ ಗಾಳಿಯ ಅಭಾವ, ಮತ್ತು ವ್ಯಾಯಾಮವಿಲ್ಲದಿರೋಣ.

ಕೆಂಕಲ್ಲಿನಲ್ಲಿರುವವರು ಹೊಲಗಳಲ್ಲಿ ಬೆವರು ಹರಿಯ ದುಡಿದು ಕಾಯಕಷ್ಟ ಮಾಡುವುದರಿಂದ, ಸೊಗಸಾದ ಗಾಳಿ ಹಾಗೂ ನಿರ್ಮಲವಾದ ನೀರನ್ನು ಸೇವಿಸುವುದರಿಂದ ಅವರ ಹಲ್ಲುಗಳು ದೃಢವಾಗಿರುತ್ತವೆ.

ಬೆಟ್ಟಗುಡ್ಡಗಳಲ್ಲಿ ವಾಸಿಸುವವರು ಬೇಕಾದಷ್ಟು ಖನಿಜ ಸಂಪತ್ತುಳ್ಳ ಆಹಾರವನ್ನು, ಅದರಲ್ಲೂ ಕ್ಯಾಲ್ಸಿಯಂ ಇರುವ ಆಹಾರವನ್ನು ತಿನ್ನುವುದರಿಂದ, ಅವರ ಹಲ್ಲುಗಳು ಅತ್ಯಂತ ಆರೋಗ್ಯವಾಗಿರುತ್ತವೆ. ಇದು ದಂತವೈದ್ಯನ ತೀರ್ಮಾನ.

—೦—

ಪ್ರಕಟಣೆ.

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್, ಲಿಮಿಟೆಡ್, ಮಡಿಕೇರಿ.
(ಕೋ-ಆಪರೇಟಿವ್ ಸೊಸೈಟೀಸ್ ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ.)

(ಸ್ಥಾಪಿತವಾದದ್ದು 1921ರಲ್ಲಿ)

		ರೂ.	ಆ.	ಪೈ.
ಶೇರ್ ಬಂಡವಾಳ	–	50,000	0	0
ವಸೂಲಾದ ಶೇರ್ ಮೊಬಲಗು	–	45,740	0	0
ಜಮಾಬಂದ ಠೇವಣಾತಿ	–	2,56,747	11	4
ವಸೂಲಾದ ಕ್ಷೇಮನಿಧಿ	–	1,35,875	9	0
ಸೇವಿಂಗ್ಸ್ ಬ್ಯಾಂಕ್ ಡಿಪಾಜಿಟ್ಟು	–	31,017	12	11
ಕ್ರಿಸ್ಟ ಡಿಪಾಜಿಟ್ಟು	–	37,936	13	0

ಈ ಬ್ಯಾಂಕಿನಿಂದ ಕೊಡಗು ದೇಶದ ಸಹಕಾರಿ ಸಂಘಗಳಿಗೇನೇ ಹೆಚ್ಚಾಗಿ ಸಾಲ ಕೊಡತಕ್ಕದ್ದು.

ಒಂದು ಮತ್ತು ಎರಡು ವರ್ಷಗಳ ಅವಧಿಯ ಠೇವಣಾತಿಗಳಿಗೆ ಶೇಕಡ ಕಾಲಿಯೂನ 3½ ದರವಲ್ಲಿಯೂ, ಮೂರು ಅಥವ ಹೆಚ್ಚಿನ ಅವಧಿಯ ಠೇವ ಣಾತಿಗಳಿಗೆ ಶೇಕಡ ಕಾಲಿಯೂನ 4ರ ದರವಲ್ಲಿಯೂ ತಾ. 1-9-1937ರಿಂದ ಬಡ್ಡಿ ದೊರೆಯುತ್ತೆ.

ತಾ. 1-10-1936ರಿಂದ ಬ್ಯಾಂಕಿನಲ್ಲಿ ಕರೆಂಟ್ ಸೇವಿಂಗ್ಸ್ ಬ್ಯಾಂಕ್ ಲೆಕ್ಕವೂ ಮತ್ತು ಕ್ರಿಸ್ಟ ಡಿಪಾಜಿಟ್ ಲೆಕ್ಕವೂ ತೆರೆಯಲ್ಪಟ್ಟಿವೆ. ಇದರ ವಿಷಯ ಹೆಚ್ಚಿನ ವಿವರಗಳಿಗೆ ಬ್ಯಾಂಕು ಆಫೀಸಿಗೆ ಬರೆದುಕೊಂಡಲ್ಲಿ ವಿವರವಾಗಿ ಬರೆದು ತಿಳಿಸಲಾಗುವುದು. ಕ್ರಿಸ್ಟ ಡಿಪಾಜಿಟ್ಟು ಹೊಂದಿಕೊಳ್ಳುವುದನ್ನು ತಾ. 1-4-1937 ರಿಂದ ನಿಲ್ಲಿಸಲಾಗಿದೆ.

ವರ್ಷಕ್ಕೊಂದಾವರ್ತಿ ಕೋ-ಆಪರೇಟಿವ್ ಸಂಘಗಳ ರಿಜಿಸ್ಟ್ರಾರರು ಲೆಕ್ಕ ಆಡಿಟ್ ಮಾಡುತ್ತಾರೆ.

ಪ್ರೆಸಿಡೆಂಟ್:–ಕಂಡ್ಯಂಡ ಎ. ಚಿಣ್ಣಪ್ಪನವರು ಎಂ. ಎಲ್. ಸಿ.
ಟ್ರೆಜರರ್:—ಚೌರೀರ ಎ. ಮಂದಣ್ಣನವರು ಬಿ. ಎ., ಬಿ. ಎಲ್.
ಸೆಕ್ರೆಟರಿ:—ಪುಲಿಯಂಡ ಜಿ. ಐಯ್ಯಪ್ಪನವರು ಬಿ. ಎ., ಬಿ. ಎಲ್.

ತಾ. 1-7-1938

ದಿ ಎಗ್ರಿಕಲ್ಚರಲ್ ಎಂಡ್ ಇಂಡಸ್ಟ್ರಿಯಲ್ ಬ್ಯಾಂಕ್ ಲಿಮಿಟೆಡ್.

(ಬ್ರಿಟಿಷ್ ಹಿಂದುಸ್ಥಾನದಲ್ಲಿ ಸ್ಥಾಪಿತವಾದದ್ದು.)

ಹೆಡ್ ಆಫೀಸು:—"ಲಕ್ಷ್ಮೀನಿವಾಸ" ಬಿಲ್ಡಿಂಗ್ಸ್, ಕುಂದಾಪುರ, ದ. ಕ.

ಪ್ರಕಟಣೆ.

ಕಷ್ಟಪಟ್ಟು ಸಂಪಾದಿಸಿದ ಹಣವನ್ನು ಠೇವಣಾತಿ ಇಟ್ಟು ಈ ಅಪೂರ್ವ ಸುಸಂದರ್ಭವನ್ನು ಉಪಯೋಗಿಸಿಕೊಳ್ಳಿರಿ.

ಅತ್ಯಧಿಕ ಲಾಭ!   **ಇಚ್ಛಿಸಿದಾಗ ಹಣ ಹಿಂದಕ್ಕೆ!**

ದಿ ಎಗ್ರಿಕಲ್ಚರಲ್ ಎಂಡ್ ಇಂಡಸ್ಟ್ರಿಯಲ್ ಬ್ಯಾಂಕಿನ

ಶೇಕಡ 5ರ 5 ವರ್ಷಗಳ "ಕೊರೊನೇಶನ್ ಕ್ಯಾಶ್ ಸರ್ಟಿಫಿಕೇಟುಗಳು" ರೂಪಾಯಿ 8, 20, 40, 80, 200, 400 ಮತ್ತು 800 ಗಳ ಸಣ್ಣಾವರ್ಗದ ಠೇವಣಾತಿಗಳಿಗೆ ಪ್ರಯುಕ್ತವಾದ ರೂ. 10, 25, 50, 100, 250, 500 ಮತ್ತು 1000 ಗಳು.

ಠೇವಣಿ ಕೊಡುವ ತಾರೀಕನ್ನು ಗಮನಿಸಿರಿ. ಹೆಚ್ಚಿನ ಮಾಹಿತಿಯನ್ನು ನಮ್ಮ ಯಾವದಾದರೊಂದು, ಕುಂದಾಪುರ, ಕುಮಟಾ, ಗೋಕರ್ಣ, ಬೈಂದೂರು, ವೀರರಾಜೇಂದ್ರಪೇಟೆ, ಸೋಮವಾರಪೇಟೆ, ಕೋಟೇಶ್ವರ, ಶಿವಮೊಗ್ಗಾ, ತರೀಕೆರೆ ಮತ್ತು ಕಡೂರು ಶಾಖೆಗಳಿಂದ ತಿಳಿದುಕೊಳ್ಳಬಹುದು.

The Agricultural &
52-7   Industrial Bank Ltd

"ZANDU"

ಝಂಡೂರವರ	ಝಂಡೂರವರ
ದ್ರಾಕ್ಷಾಸವ ಮತ್ತು **ಚ್ಯವನಪ್ರಾಶ** — ಇದು ಶಕ್ತಿವರ್ಧಕ ಮತ್ತು ಶ್ವಾಸಕೋಶಗಳ ಕಾಯಿಲೆಗಳಿಗೆ ಅತ್ಯುತ್ತಮ ಔಷಧಿ. ಕ್ಷಯದ ಪ್ರಾರಂಭಾವಸ್ಥೆಯಲ್ಲಿ ದಿವ್ಯವಾದ ಔಷಧ.	**ಕೇಸರಿ ಜೀವನ್** — ಇದು ಎಲ್ಲಾ ತರದ ಅಶಕ್ತತೆಗೆ ದಿವ್ಯವಾದ ಔಷಧ. **ಝಂಡೂ ಆಯೋಡೈಸ್ಡ್ ಸೇರಸಪರಿಲ್ಲಾ** — ಇದು ರಕ್ತಶೋಧಕ ಮತ್ತು ಸ್ತ್ರೀ ಸಂಬಂಧದ ಮೇಹ ವಿಕಾರಗಳಲ್ಲಿ ದಿವ್ಯ ಔಷಧ.

ಝಂಡೂ ಫ್ಲೋಜಿಸ್ಟೈನ್.

ಇದು ನ್ಯುಮೋನಿಯಾ, ಶೋಫ, ಪೆಟ್ಟಿನಿಂದ ಉಂಟಾದ ಗಾಯ, ವಿದ್ರಧಿ (Boils) ಗಳಲ್ಲಿ ಅತ್ಯುಪಯುಕ್ತವಾದದ್ದು.

ಕಟಲಾಗಿಗೆ ಬರೆಯಿರಿ, ಮುಫತ್ತಾಗಿ ಕಳುಹಿಸಲಾಗುತ್ತೆ.

ಮಡಿಕೇರಿ ಸ್ಟೋಕಿಸ್ಟ—
ಡಾ. ಬಿ. ಕೆ. ನಂಜುಂಡೇಶ್ವರ, ಎಲ್. ಎ. ಎಂ. ಎಸ್
(52-49)   ಮತ್ತು ಆಯುರ್ವೇದ ವಿದ್ವಾನ್

ವೀರಾಜಪೇಟೆಯ ಏಜೆಂಟರು–ಕೆ. ಕೃಷ್ಣರಾವ್, ವೀರಾಜಪೇಟೆ. (ದ. ಕೊಡಗು.)

'ಕೊಡಗು' ಪತ್ರಿಕೆಗೆ ಚಂದಾದಾರರಾಗಿರಿ!

ಪೈಲ್‌ಸಾಲ್

(OINTMENT FOR EXTERNAL USE)

PILESOL– ಮೂಲವ್ಯಾಧಿಗೆ (ಹೊರಗೂ ಒಳಗೂ) ದಿವ್ಯೌಷಧಿ.

ಆಪರೇಷನ್ ಇಲ್ಲದೆ ಗುಣವಾಗುತ್ತೆ. ಬ್ರಿಟಿಷ್ ಗವರ್ನಮೆಂಟಿನವರಿಂದ ಇಂಡಿಯಾದಲ್ಲಿಯೂ, ಪರದೇಶದಲ್ಲಿಯೂ ರಿಜಿಸ್ಟರ್ ಮಾಡಲ್ಪಟ್ಟಿದೆ.

ರಕ್ತ ಸೋರುತ್ತಿದ್ದರೂ ಅತಿ ಶೀಘ್ರವಾಗಿ ಗುಣವಾಗುತ್ತದೆ.

ಪೈಲ್‌ಸಾಲ್ ಸಣ್ಣಾಗಿರುತ್ತದೆ. ಇದರ ವರದಿಗಳು ಯಥಾಸ್ಥಾನಕ್ಕೆ ಬರುತ್ತವೆ. ಪ್ರಖ್ಯಾತಿ ಹೊಂದಿದ ಅನೇಕ ಡಾಕ್ಟರುಗಳಿಂದ ಒಳ್ಳೆಯ ಹೆಸರು ಪಡೆದಿದೆ. ... ಆಕ್ರಮಣವಾಗುವುದನ್ನು ಪೈಲ್‌ಸಾಲ್ ಗುಣಪಡಿಸುತ್ತದೆ.

ಯೋಗ್ಯತಾಪತ್ರಗಳು ನಾನಾ ದೇಶಗಳಿಂದ ನಮಗೆ ಬಂದಿರುತ್ತವೆ.

ಈಗಿನ ಒಂದು ಸರ್ಟಿಫಿಕೇಟು

ನಾಪೋಕ್ಲು,

ಅಯ್ಯಾ,

ನಿಮ್ಮ ಪೈಲ್‌ಸಾಲ್ ನನ್ನೊಬ್ಬ ರೋಗಿಗೆ ತುಂಬಾ ಸಹಾಯವಾಗಿದೆ. ಆದ್ದರಿಂದ ದಯವಿಟ್ಟು ನನಗೆ ಮತ್ತೊಂದು ಸೀಸೆಯನ್ನು ವಿ. ಪಿ. ಮೂಲಕ ಕಳುಹಿಸಿಕೊಡಿ. ಮತ್ತೊಬ್ಬನಿಗೆ ಇದರ ಪ್ರಯೋಗವನ್ನು ಮಾಡಬೇಕಾಗಿದೆ.

(ಸಹಿ) ಎಸ್. ಯಂ. ದೇವಯ್ಯ,
ಸಬ್-ಅಸಿಸ್ಟೆಂಟ್ ಸರ್ಜನ್,
23   ನಾಪೋಕ್ಲು, ಕೊಡಗು.

ಉಪಯೋಗಿಸುವ ವಿಧಾನ ಔಷಧದ ಜೋಕೆಯಲ್ಲಿ ಕಳುಹಿಸಲಾಗುತ್ತೆ.

ಕ್ರಯ:—1 ಡಬ್ಬಿಗೆ ರೂ. 5-0-0. ½ ಡಬ್ಬಿಗೆ ರೂ. 2-12-0. ಪೋಸ್ಟೇಜು ಪ್ರತ್ಯೇಕ.

ಬೇಕಾದವರು ಈ ವಿಳಾಸಕ್ಕೆ ಬರೆದು ತರಿಸಿಕೊಳ್ಳಬಹುದು.

ಕ್ಯಾರಾಲ್ ಲೇಬೋರೇಟರಿ (ರಿಜಿಸ್ಟರ್ಡ್), ಬೆಂಗಳೂರು ಸಿಟಿ.

No. M. 1

ಕೊಡಗು

ಪ್ರತಿಶುಕ್ರವಾರ ಪ್ರಕಟಿಸಲ್ಪಡುವುದು.

ಸಂಪಾದಕ:— ಐ. ಬೆಳ್ಳಿಯಪ್ಪ. ವಾರ್ಷಿಕ ಚಂದಾ ರೂ. ೩-೮-೦

ತಾ. ೧೫—೭—೧೯೩೮.

ಸಂಪುಟ ೧೦] [ಸಂಚಿಕೆ ೭.

ನಿಮ್ಮ

ಮುದ್ರಣ ಕೆಲಸಗಳನ್ನು

"ಕೊಡಗು"

ಪ್ರೆಸ್ಸಿನಲ್ಲೇ

ಮುದ್ರಿಸಿರಿ.

Travancore National & Quilon Bank, Ltd.

(INCORPORATED IN TRAVANCORE- 1912.)

(Liability of Members limited.)

Central Office: MADRAS.

With a country wide net work of seventy eight offices make service promt and efficient.

Working Capital over FOUR CRORES.

Open HOME SAVING account and resolve to save mething and invest a lot every year in 5 YEAR% CASH CERTIFICATES

SAVINGS BANK:—accounts opened for sums above Rs5/- and interest allowed on daily balances Withdraws by cheques-Maximum amount withdrawableer week-Rs 250

FIXED DEPOSITS:—accepted for periods from 6 to 24 months at rates which may be ascertained on application.

CURRENT ACCOUNTS:—opened for sums above Rs. 100 and interest allowed on daily credit balances from Rs. 100/- to Rs. 20,000/-

All other kinds of Banking business transacted.

For terms please apply to the central Office or to any of the branches.

K. S. Ramanujam, *General Manager.* 52-41 K. M. Eapen, *Joint Managing Director.* C. P. Mathen, *Managing Director.*

THE CANARA BANKING CORPORATION, UDIPI, Ltd.

(Incorporated in British India.)

Estd. 1906.

BRANCHES:

1. Byadgi,
2. Coondapoor,
3. Erode,
4. Madras
5. Mangalore, Car Street,
6. Mangalore, Bunder,
7. Malpe,
8. Mercara,
9. Mettupalayam,
10. Mysore,
11. Sagar,
12. Saklaspur,
13. Salem,
14. Shimoga,
15. Shirva,
16. Tellicherry,
17. Thirthahalli,
18. Virarajendrapet,
19. Vellore,
20. Udipi.

TOTAL RESOURCES EXCEED Rs. 62 LAKHS.

Udipi, 20th June 1938. 52-33

Y. R. Kamath, B. A., LL. B., Ag. Manager.

ಸದ್ವೈದ್ಯ ಶಾಲಾ. ನಂಜನಗೂಡು.

ದಕ್ಷಿಣ ಭಾರತದ
ಪ್ರಸಿದ್ಧ ಆಯುರ್ವೇದೀಯ ಔಷಧಗಳ ತಯಾರಕರು.

ಜೀವರಕ್ಷಕಗಳು

ಶ್ರೀಕರ ಕಸ್ತೂರಿ ಮಾತ್ರೆ.

ಅಮೋಘ ಗುಣವನ್ನುಳ್ಳ ಈ ಮಾತ್ರೆಗಳು ಎಲ್ಲಾ ರೋಗಗಳನ್ನು ವಾಸಿಮಾಡುವುದಲ್ಲದೆ, ಮಕ್ಕಳ ಕೆಮ್ಮು, ಸಗಣಿ, ಜ್ವರ, ಪಕ್ಕೆ ಶೂಲೆಗಳಿಗೂ ಅಮೃತ. ಬೆಲೆ 0 10. 0 2 0

ಶ್ರೀಕರ ಬಾಲಸಂಜೀವಿನಿ

ಮಕ್ಕಳ ಸುಖಭೇದಿ. ಅಜೀರ್ಣ, ವಾಯು. ಜ್ವರಗಳಿಗೆ ಬೆಲೆ 0 1 0

ನಮ್ಮ ರಿಜಿಸ್ಟರ್ಡ್

ನಂಜನಗೂಡು ಟೂತ್ ಪೌಡರನ್ನು

ಉಪಯೋಗಿಸಿರಿ ಅನುಕರಣಗಳಿಗೆ ಮೋಸಹೋಗಬೇಡಿರಿ.

ಜ್ವರಕೇಸರಿ

ಎಲ್ಲಾ ವಿಧವಾದ ಜ್ವರಗಳನ್ನು ಜಾಗ್ರತೆ ಗುಣಪಡಿಸುವ ಅದ್ಭುತ ಶಕ್ತಿಯುಳ್ಳ ಮಾತ್ರೆ. ಬೆಲೆ 0 8 0, 0 4 0.

ಸುಕುಮಾರತೈಲ

14

ಬಿಸಿಲು ಹೆಚ್ಚಿದ ಕಾಗೆಲ್ಲಾ ಉಂಟಾಗುವ ತಲೆ ನೋವು, ಹುಬ್ಬಿನ ನೋವು, ತಲೆ ಉರಿ ಮುಂತಾದ ಸಮಸ್ತ ನೇತ್ರ, ಶಿರೋವ್ಯಾಧಿಗಳಿಗೂ ಸಂಜೀವನ. ಬೆಲೆ 1 0 0

ಪ್ರೊಪ್ರೈಟರ್ ಭಿಷಗ್ರತ್ನ ಆಯುರ್ವೇದ ವಿದ್ವಾನ್, ಬಿ. ವಿ. ಪಂಡಿತ್.

ಉತ್ತಮ ಪ್ರಚಾರ! ಜ್ಞಾನಭಂಡಾರ!

ವ್ಯಾಪಾರಸ್ಪರ್ಧೆ

ನಿಮ್ಮ ಮಾಲುಗಳಿಗೆ ಗಿರಾಕಿ ಬೇಕೇ?

ಹಾಗಾದರೆ

ಕೊಡಗು ಜಿಲ್ಲೆಯ ಪ್ರತಿ ಹಳ್ಳಿಗಳಲ್ಲಿಯೂ ಮತ್ತು ಕರ್ನಾಟಕದ ಪ್ರಾಂತ್ಯಗಳಲ್ಲಿಯೂ ಪ್ರಚಾರವಿರುವ

"ಕೊಡಗು"

ವಾರ ಪತ್ರಿಕೆಯಲ್ಲಿ ಜಾಹೀರಾತುಗಳನ್ನು ಕೊಟ್ಟು ಪ್ರಯೋಜನ ಪಡೆಯಿರಿ.

ಜಾಹಿರಾತಿನ ದರಗಳು.

ಕಾಲ.	1 ಪುಟಕ್ಕೆ	1 ಕಲಮಿಗೆ.	½ ಕಲಮಿಗೆ.	¼ ಕಲಮಿಗೆ
1 ವರ್ಷಕ್ಕೆ	ರೂ. 150.	ರೂ. 55.	ರೂ. 35.	ರೂ. 22.
6 ತಿಂಗಳಿಗೆ	,, 100.	,, 35.	,, 22.	,, 13
3 ತಿಂಗಳಿಗೆ	,, 60.	,, 20.	,, 13.	,, 8.
1 ತಿಂಗಳಿಗೆ	,, 25	,, 10.	,, 6.	,, 4.

ನಿರ್ಭಯವಾದ ಟೀಕೆ ಟಿಪ್ಪಣಿಗಳು ಉದಾತ್ತವಾದ ಲೇಖನಗಳು — ವಿವಿಧ ಸಮಾಚಾರ ಸಂಗ್ರಹಗಳು ಇರುವ 'ಕೊಡಗು' ವಾರ ಪತ್ರಿಕೆಗೆ

ನೀವೇಕೆ ಚಂದಾದಾರರಾಗಬಾರದು?

ನಿಮ್ಮ ಕರ್ತವ್ಯ.

ಪ್ರತಿಯೊಬ್ಬ ಮನುಷ್ಯನು ವಿವಾಹಿತನಿರಲಿ, ಅವಿವಾಹಿತನಿರಲಿ, ಧನವಂತನಿರಲಿ, ಧನಹೀನನಿರಲಿ, ಆತನ ರಕ್ಷಣೆಗೊಳಪಟ್ಟ ಕೆಲವರಿದ್ದೇ ಇರುವರು. ಈತನ ಮರಣಾನಂತರವೂ ಅಂಥವರು ಸುಖಿಗಳಾಗಿರುವಂತೆ ದಾರಿ ತೋರಿಸಿ ಕೊಡುವದು ಇವನ ಆದ್ಯ ಕರ್ತವ್ಯ.

ಇಂಥಾ ನಿಮ್ಮ ಕರ್ತವ್ಯ ಸಾಧನೆಗೆ "ಓರಿಯಂಟಲ್" ಸಹಕಾರಿ.



(ಓರಿಯಂಟಲ್ ಬಿಲ್ಡಿಂಗ್ಸ್, ಸೌತ್ ಪೆರೇಡ್ ಬೆಂಗಳೂರು)

64 ವರ್ಷಗಳಿಂದಲೂ "ಓರಿಯಂಟಲ್ ಪೋಲಿಸಿಗಳು" ಸಾವಿರಾರು ಅನಾಥ ಕುಟುಂಬಗಳನ್ನು ಅವುಗಳ ಕಷ್ಟದಿಂದ ಉದ್ಧರಿಸಿವೆ.

ಕ್ರಮೇಣ ಪ್ರತಿಯೊಬ್ಬನೂ ವಿಮಾ ಮಾಡಲರ್ಹನಾಗಬಹುದಾದ್ದರಿಂದ ನಿಮ್ಮ ಕರ್ತವ್ಯವನ್ನು ಮಾಡಲು ತಪ್ಪಬೇಡಿರಿ.

"ಓರಿಯಂಟಲ್"ನಲ್ಲಿ ವಿಮಾ ಮಾಡಿ, ನಿಮ್ಮ ರಕ್ಷಣದಲ್ಲಿರುವವರ ಜೀವನವನ್ನು ಭದ್ರಪಡಿಸಿರಿ.

ಹೆಚ್ಚಿನ ಮಾಹಿತಿಗೆ ಕೆಳಗಿನ ಅಡ್ರೆಸ್ಸಿಗೆ ಬರೆಯಿರಿ—

ಓರಿಯಂಟಲ್

ಸರಕಾರದ ಭದ್ರತೆಯುಳ್ಳ ಜೀವ ವಿಮೆ ಕಂಪನಿ.

ಸ್ಥಾಪಿತವಾದ್ದು 1874.] ಹೆಡ್ ಆಫೀಸು—ಬೊಂಬಾಯಿ.

ಪ್ರತಿನಿಧಿಗಳೂ, ಶಾಖೆಗಳೂ ಇಂಡಿಯಾದಲ್ಲೆಲ್ಲಾ ಇರುವರು.

ಮೆ. ಯಂ. ಹೆಚ್. ಕೃಷ್ಣಮೂರ್ತಿ,
(ಇನ್ಸ್ಪೆಕ್ಟರ್, ಮೈಸೂರು.)

ಮೆ. ಎಲ್. ಎಫ್. ಸಿ. ವಾಸ್,
(ಇನ್ಸ್ಪೆಕ್ಟರ್, ಮಡಿಕೇರಿ.)

82-37 ಮೆ. ಡಿ. ಶೇಷಾದ್ರಿ, ಅ. ಇನ್ಸ್ಪೆಕ್ಟರು, ಶಿವಮೊಗ್ಗಾ.

Printed & Published by P. I. Belliappa, at 'Kodagu' Press Mercara for 'Kodagu' Ltd.

ಇಂಡಿಯೂದ ಪ್ರಮುಖ ಟಾನಿಕ್

ಆತಂಕನಿಗ್ರಹ

— ಮಾತ್ರೆಗಳು —

ಕುಲಬದ್ಧತೆ, ಮನೋದೌರ್ಬಲ್ಯ, ನರಗಳ ಹೀನತೆ ಇವನ್ನು ಗುಣಪಡಿಸಿ, ಆರೋಗ್ಯಕಾರಿಯೂದ ಹಸಿವು ಹುಟ್ಟಿಸಿ ರಕ್ತಶುದ್ಧಿ ಮಾಡುತ್ತದೆ.

ಈ ಮಾತ್ರೆಗಳು ಉತ್ತಮ ಬಲವರ್ಧಕವಾಗಿರುತ್ತದೆ. ಲಕ್ಷಾಂತರ ಜನರಿದನ್ನು ಉಪಯೋಗಿಸುತ್ತಿರುವರು. ಒಂದು ಡಬ್ಬಿ ಉಪಯೋಗಿಸಿ ನೋಡಿ. ಮೂವತ್ತೆರಡು ಮಾತ್ರೆಗಳ ಡಬ್ಬಿ ಒಂದಕ್ಕೆ ಒಂದು ರೂಪಾಯಿ ಮಾತ್ರ.

ಹೆಚ್ಚಿನ ವಿವರಕ್ಕೆ ಧನ್ವಂತರಿ ಹಾಗೂ ಟಪ್ಪಾಲು ಖಾಸಲು ವಿನಹ ಕಳುಹಿಸಲ್ಪಡುವ ನಮ್ಮ

ಕಾಮಶಾಸ್ತ್ರವನ್ನೋದಿರಿ

ಆತಂಕ ನಿಗ್ರಹ ಫಾರ್ಮಸಿ, ಚಿಕ್ಕಪೇಟೆ ಚೌಕ,

52-4 ಬೆಂಗಳೂರು ಸಿಟಿ.

ಅನೇಕ ವರ್ಷಗಳಿಂದ ಅನುಭವಪಟ್ಟು ಪ್ರಖ್ಯಾತಿ ಹೊಂದಿದ

ಕರ್ಕೆ ಕಂಪನಿ

ಸುಪ್ರಸಿದ್ಧ ಜ್ವರದ ಗುಳಿಗೆ

ಇವು ಛಳಿಜ್ವರ, ಚಾತುರ್ಥಿ ಜ್ವರ, ದಿನಬಿಟ್ಟು ದಿನ ಬರುವ ಜ್ವರ, ಮಲೇರಿಯಾ ಜ್ವರ ಇತ್ಯಾದಿ ನಾನಾತರದ ಜ್ವರಗಳ ಮೇಲೆ ತಕ್ಷಣವೇ ಗುಣ ಸಂಜೀವಿನಿಯಂತಿವೆ! ಬಾಟ್ಲಿಗೆ 1 ರೂ. 4 ಬಾಟ್ಲಿಗೆ 3 ರೂ. 12 ಬಾಟ್ಲಿಗೆ 8 ರೂ. ವಿ. ಪಿ. ಖರ್ಚು ಬೇರೆ.

ಗಣೇಶ ರಾಮಚಂದ್ರ ಕರ್ಕೆ.

ಮತ್ತು ಕಂಪನಿ,

52-31) ಗಿರಗಾಂವ, ಮುಂಬಯಿ 4,

ನೋಟೀಸು.

ಈ ಕೆಳಗಿನ ಮಹನೀಯರು 'ಕೊಡಗು' ಪತ್ರಿಕೆಯ ಚಂದಾದಾರರನ್ನು ವಸೂಲು ಮಾಡಲು ಒಪ್ಪಿಕೊಂಡದ್ದರಿಂದ ಅವರನ್ನು ಏಜೆಂಟರುಗಳಾಗಿ ನೇಮಿಸಿ ಅವರಿಗೆ ನಮ್ಮ ರಶೀತಿ ಪುಸ್ತಕಗಳು ಕೊಡಲಾಗಿವೆ. ಕೆಳಗಿನ ಸಬ್ ಏಜೆಂಟರುಗಳಿಗೆ ಏಜೆಂಟರವರ ಜವಾಬ್ದಾರಿಕೆ ಮೇಲೆ ರಶೀತಿ ಪುಸ್ತಕಗಳು ಕೊಡಲಾಗಿರುವುದರಿಂದ ಚಂದಾದಾರರೆಲ್ಲರೂ ಅವರಿಗೆ ಅನುಕೂಲವಿರುವ ಸ್ಥಳದಲ್ಲಿ ತಮ್ಮ ಚಂದಾವನ್ನು ಪಾವತಿ ಮಾಡಿ ರಶೀತಿ ಪಡೆಯಬೇಕಾಗಿ ಕೋರಿದೆ.

ಕೊಡಗಿನ ಎಲ್ಲಾ ಭಾಗಗಳಿಗೆ.

ಮ. ಮುಕ್ಕಾಟಿರ ಜೋಯಪ್ಪನವರು.
ಬಾಚಮ್ಮನ ಕರ್ತಮ್ಮನವರು.

ಸಬ್ ಏಜೆಂಟರುಗಳು.

...ಪೇಟೆ—ಮ. ಮಂಡೇಪಂಡ ಸೋಮಯ್ಯನವರು.
...—ಸಿದ್ದಾಪುರ— ಮ. ಐನಂಡ ಮಾದಪ್ಪನವರು.
...ಪೇಟೆ—ಮ. ಪಿ. ಕೆ. ಮುದ್ದಮ್ಮಯ್ಯನವರು.
...—ಮ. ಅಜ್ಜಮಾಡ ಮಾಚಪ್ಪನವರು ಮತ್ತು ಮ.
... ಮಾದಮ್ಮಯ್ಯನವರು.
...—ಮ. ಅಪ್ಪಚೆಟ್ಟೋಳಂಡ ಮಾಚಯ್ಯನವರು.
...—ಮ. ಕೆ. ಮೊಗಪ್ಪನವರು.
...—ಮ. ಚೆಪ್ಪುಡಿರ ಯು. ಪೂಣಚ್ಚನವರು.

(ಪಾಲಿಬೆಟ್ಟ ಸ್ಟೋರ್ಸ್)

ಸೂಚನೆ.—ಕ್ರಯವಿಲ್ಲದ ರಶೀತಿ ಹೊಂದಿಕೊಳ್ಳುವ ಯಾರೂ ...ಕೊಡಬಾರದಾಗಿ ಈ ಮೂಲಕ ತಿಳಿಸಲಾಗಿದೆ.

ಮ್ಯಾನೇಜರ್,

'ಕೊಡಗು' ಲಿಮಿಟೆಡ್, ಮಡಿಕೇರಿ.

The Bombay Mutual Life Assurance Society Ltd.,

Head Office:-BOMBAY. Estd. 1871.

ಬೊಂಬೇ ಮ್ಯೂಚುವಲ್.

1871ರಿಂದಲೂ ಪ್ರತಿ ವರ್ಷ ಬಲಗೊಳ್ಳುತ್ತಿದೆ.

ಈ ವರ್ಷ ಇದು ಅಮೋಘವಾದ ಕೆಲಸ ಕಾರ್ಯಗಳನ್ನು ಮಾಡಿದೆ. ಜನಾದರಣೆಯನ್ನೂ, ನಂಬಿಕೆಯನ್ನೂ ಗಳಿಸಿಕೊಂಡಿದೆ. ಕಳೆದ 66 ವರ್ಷಗಳಿಂದಲೂ ಮುಂದುವರಿದು ಈಗಿನ ನವೀನ ತರದ ಸಂಧಾನಗಳನ್ನೊಳಗೊಂಡಿರುತ್ತದೆ.

1937ರಲ್ಲಿ ಮಾಡಿದ ಉದ್ಯೋಗ	ರೂ.	2,53,15,500.
1937ರಲ್ಲಿ ಪೂರ್ತಿಯಾದ ಉದ್ಯೋಗ	ರೂ.	2,02,02,000.

ಎಂಡೋಮೆಂಟ್ ವಿಮಾ ಪತ್ರದ ಮೇರೆ 1000ಕ್ಕೆ ವರ್ಷಕ್ಕೆ 21ರಂತೆಯೂ, ಹೋಲ್ ಲೈಫ್ ವಿಮಾ ಪತ್ರಗಳಿಗೆ 26ರಂತೆಯೂ ಬೋನಸು ಹಂಚಲಾಗಿದೆ.

ದಿ ಬೊಂಬೇ ಮ್ಯೂಚುವಲ್ ಲೈಫ್ ಅಶ್ಯೂರೆನ್ಸ್

ಸೊಸೈಟಿ ಲಿಮಿಟೆಡ್,

12, ಸೌತ್ ಪೆರೇಡ್, ಬೆಂಗಳೂರು.

52-16

ಚಿಕ್ಕ ಮಕ್ಕಳ ಮುಖ ಕಾಂತಿಗೆ

ಎಳೇ ಮಕ್ಕಳ ಸ್ನಾನಕ್ಕೆ ಮೈಸೂರು ಗಂಧದ ಸಾಬೂನು ಅತ್ಯುತ್ಕೃಷ್ಟವಾದದ್ದು. ಕೆನೆಯಂತಿರುವ ಅದರ ಉತ್ತಮ ನೊರೆಯು ಸೂಕ್ಷ್ಮವಾದ ಚರ್ಮಕ್ಕೆ ಏನೊಂದು ಹಾನಿಯನ್ನುಂಟುಮಾಡದೆ ಕೊಳೆಯನ್ನೆಲ್ಲಾ ತೆಗೆದುಹಾಕುತ್ತದೆ. ಚಿಕ್ಕ ಮಕ್ಕಳಿಗೆ ಸುವಾಸನೆಯುಳ್ಳ ಈ ಗಂಧದ ಸಾಬೂನಿನಲ್ಲಿ ಸ್ನಾನಮಾಡುವುದೆಂದರೆ ಅತಿ ಪ್ರೀತಿ. ಇಂದೇ ಒಂದು ಸಾಬೂನನ್ನು ಕೊಂಡುಕೊಳ್ಳಿರಿ.

ಮೈಸೂರು ಗಂಧದ ಸಾಬೂನು

ಎಲ್ಲಾ ಅಂಗಡಿಗಳಲ್ಲೂ ಸಿಕ್ಕುತ್ತವೆ.

ಗವರ್ನಮೆಂಟ್ ಸೋಪ್ ಫ್ಯಾಕ್ಟರಿ, ಬೆಂಗಳೂರು.

52-18)

ಭಾರತದ ರಾಜಕೀಯ ಭವಿಷ್ಯ

ವೈಸರಾಯರೇತಕ್ಕೆ ಇಂಗ್ಲೆಂಡಿಗೆ ಹೋದರು?

ಭಾರತದ ವೈಸರಾಯರಾದ ಲಾರ್ಡ್ ಲಿನ್‌ಲಿತ್‌ಗೋರವರು ಜನ ತಮ್ಮ ರಜೆಗೆ ತೆರಳಿದ್ದಾರೆ. ಅವರ ಈ ಪ್ರಯಾಣದ ಬಗ್ಗೆ ಬಗೆ ಬಗೆಯ ಊಹಾಪೋಹಗಳು ನಡೆದಿವೆ. ಭಾರತದ ರಾಜಕೀಯ ಭವಿಷ್ಯ ಮತ್ತು ಸಂಯುಕ್ತ ರಾಜ್ಯಾಂಗ ವ್ಯವಸ್ಥೆ ಈ ವಿಚಾರಗಳನ್ನು ಕುರಿತು ಇಂಡಿಯಾ ಕಾರ್ಯದರ್ಶಿಗಳೊಡನೆ ಚರ್ಚಿಸುವುದಕ್ಕೆ, ಅವರು ತಮ್ಮ ರಜೆಗೆ ಹೋಗಿದ್ದಾರೆಂದು ಅನೇಕರು ಹೇಳುತ್ತಿದ್ದಾರೆ.

ಆದರೆ ಬ್ರಿಟಿಷ್ ಸರಕಾರವು ಹಿಂದೂಸ್ಥಾನದ ರಾಜಕೀಯ ಭವಿಷ್ಯದ ವಿಚಾರವಲ್ಲಿ, ಸರಿಯಾಗಿ ಆಸಕ್ತಿ ವಹಿಸುತ್ತಿದೆ ಎಂದು ಹೇಳುವುದು ಕಷ್ಟವಾಗಿದೆ. ಕೆಲವು ದಿವಸಗಳ ಹಿಂದೆ ಇಂಡಿಯಾ ಕಾರ್ಯದರ್ಶಿಗಳಾದ ಲಾರ್ಡ್ ಜೆಟ್ಲೆಂಡರು 'ಹೋಟಾಯು ಭೋಜನ ಕೂಟ'ದಲ್ಲಿ ಹಿಂದೂಸ್ಥಾನದ ರಾಜಕೀಯ ಭವಿಷ್ಯದ ವಿಚಾರವಾಗಿ ಮಾತನಾಡುತ್ತಾ, ಸಂಯುಕ್ತ ರಾಜ್ಯಾಂಗ ವ್ಯವಸ್ಥೆಯನ್ನು ಜಾರಿಗೆ ತರಲು ಸರಕಾರವು ನಿಶ್ಚಯಿಸಿರುವುದಾಗಿ ಹೇಳಿದರು. 1935 ನೇ ಇಸವಿಯ ಇಂಡಿಯಾ ರಾಜ್ಯಾಂಗ ಶಾಸನವನ್ನು ಕುರಿತು ಅವರು 'ಈಗ ಬದಲಾಯಿಸುವ ...ನ್ನು ಸರಕಾರಕ್ಕಿಲ್ಲವೆಂದು' ಅವರು ಹೇಳಿದ್ದಾರೆ. ಲಾರ್ಡ್ ಜೆಟ್ಲೆಂಡರ ಈ ಭಾಷಣವು ಇಂಗ್ಲೆಂಡಿನ ಹಲವು ಜನರಿಗೂ ಬೇಸರವನ್ನುಂಟುಮಾಡಿದೆ. ಹಲವು ಪತ್ರಗಳ ಹಿಂದೆ ಮ್ಯಾಂಚೆಸ್ಟರ ಗಾರ್ಡಿಯನ್ ಪತ್ರಿಕೆಯು ಒಂದು ಪ್ರಧಾನ ಲೇಖನದ ಬರೆದಿದೆ:-

'ಹಿಂದೂಸ್ಥಾನದ ರಾಜಕೀಯ ಭವಿಷ್ಯ ಸಮಸ್ಯೆಗಳನ್ನು ಬಿಡಿಸುವ ವಿಚಾರದ ಬ್ರಿಟಿಷ್ ಸರಕಾರವು ಕೆಲಸ ಮಾಡುವುದು ಇದೇ ಮೊದಲನೇ ಸಲವಲ್ಲ. ...ದೂಸ್ಥಾನವನ್ನು ಸರಿಯಾಗಿ ಸವಿಸ್ತಾರ ಮಾಡಿದವರಲ್ಲಿ ಕೆಲವರು, ಮುಖ್ಯ ...ದ್ಧ ಭಿಂದೀಚೆಗೆ ಸಿಗದಂತಹ ಮತ್ತು ...ಂದೆ ಸಿಗಲಾರದಂತಹ ಅವಕಾಶವನ್ನು ...ಂದಿನ ಬೇಸಿಗೆಯಲ್ಲಿ ಸಿಗುವುದು ಎಂದಾಗಿ ಹೇಳಿದ್ದಾರೆ. ಆಗ ಇಂಗ್ಲೆಂಡ್ ...ತ್ತು ಹಿಂದೂಸ್ಥಾನ ಈ ದೇಶಗಳ ಮ... ಇರಬೇಕಾದ ಸಂಬಂಧವನ್ನು ಕುರಿ... ಶಾಂತ ರೀತಿಯಲ್ಲಿ ಉಭಯಮತವಾಗಿ ...ತುಕಟ ನಡೆಸಬಹುದು. ಹಿಂದೂಸ್ಥಾನದ ನಾಯಕರು ಇಂಡಿಯಾ ರಾಜ್ಯಾಂಗ ಶಾಸನದ ಸಂಯುಕ್ತ ರಾಜ್ಯಾಂಗ ವ್ಯವಸ್ಥೆಯನ್ನು ಕುರಿತು ಸಂಧಾನ ನಡೆಸಲು ಸಿದ್ಧರಾಗಿದ್ದಾರೆಂದು ತಿಳಿದು ಬಂದಿದೆ. ಈ ಬಗೆಯ ಸಂಧಾನಗಳಿಗೆ ಈಗ ...ಡೆಯಿದೆ.

ಆಶೆಯು ಮಾತ್ರ ಇನ್ನೂ ಇದೆ. ಆದರೆ ಸರಕಾರದ ಕಡೆಯಿಂದ ಮಾತ್ರ ಆ ಶಾಶ್ವತವಾದ ಪ್ರಯತ್ನ ನಡೆದಿಲ್ಲ. ಬದಲಾಗಿ ಲಾರ್ಡ್ ಜೆಟ್ಲೆಂಡರ ಬೊಂಬಾಯಿ ಭೋಜನಕೂಟ ಭಾಷಣವು ಪರಿಸ್ಥಿತಿಯನ್ನು ಕೆಡಿಸಿದೆ. ಲಾರ್ಡ್ ಜೆಟ್ಲೆಂಡರ ಹೇಳಿಕೆಗೆ 'ತೆಗೆದುಕೊಳ್ಳಿ ಅಥವಾ ಬಿಟ್ಟುಬಿಡಿ' ಅರ್ಥವಾದರೆ ಹಿಂದೂ...ಸ್ಥಾನದವರು ಸಂಶಿತವಾಗಿಯೂ ಬಿಡತಕ್ಕವರು. ಹಿಂದೂಸ್ಥಾನದ ಸಂಯುಕ್ತ ರಾಜ್ಯಾಂಗ ವ್ಯವಸ್ಥೆಯನ್ನು ಬೇರೆ ದೃಷ್ಟಿಯಿಂದ ನೋಡುತ್ತಾರೆ. ಬದಲಾಯಿಸುವುದು, ಅದನ್ನು ಕುರಿತು ವಿಚಾರ ವಿನಿಮಯ, ತಿದ್ದುಗಳು ಇವೆಲ್ಲಾ ಆವಶ್ಯಕವೇ ಅಥವಾ ಇಲ್ಲವೇ ಎಂಬುದನ್ನು ಲಾರ್ಡ್ ಜೆಟ್ಲೆಂಡರೂ ಮತ್ತು ವೈಸರಾಯರೂ ಕೂಡ ನಿರ್ಧಾರ ಮಾಡಬೇಕು. ಅವರು ನಿಶ್ಚಯಿಸಿದರೆ ಚಿಂತೆಯಿಲ್ಲ, ಇಲ್ಲದೆ ಹೋದರೆ ಆ ಶಾಸನವೆಲ್ಲವೂ ಒಡೆದು ಪುಡಿಪುಡಿಯಾಗುವುದು ಮತ್ತು ಆ ಸಮಯದಲ್ಲಿ ಹಿಂದೂಸ್ಥಾನದ ಪರಿಸ್ಥಿತಿಯು ಹೇಗಿರುತ್ತದೆಂಬುದನ್ನು ಯಾರಿಗೂ ಹೇಳಲು ಸಾಧ್ಯವಿಲ್ಲದೆ ಹೋಗುತ್ತದೆ.

ಸಂಯುಕ್ತ ರಾಜ್ಯಾಂಗ ವ್ಯವಸ್ಥೆಯನ್ನು ಕುರಿತು ಪುನರಾಲೋಚನೆ ನಡೆಯುವುದರಿಂದ ಇಂಗ್ಲೆಂಡಿಗೂ ಹಿಂದೂಸ್ಥಾನಕ್ಕೂ ಸಂಬಂಧದಲ್ಲಿನ ಅಭಿಪ್ರಾಯ... ಈ ವಿಚಾರದಲ್ಲಿ ಸಂಧಾನವನ್ನು ಆಗ ಪ್ರಾರಂಭಿಸುವುದರಿಂದ ಹಿಂದೂಸ್ಥಾನ ... ಗೌರವ ಮತ್ತು ಹಕ್ಕುಗಳಿಗೆ ಕುಂದು ಬರುವುದೆಂದು ... ಭವಿಷ್ಯದ ಹಲವರು ಹೇಳಬಹುದು. ... ಆದರೆ ನಾವು ಯೋಚಿಸಬೇಕಾದ್ದು ತನ್ನ ಅದೃಷ್ಟವನ್ನು ತಾನೇ ನಿರ್ಧರಿಸಿಕೊಳ್ಳುವ ಹಿಂದೂಸ್ಥಾನದ ಹಿತಾಸಕ್ತಿಯನ್ನು. ಆಂದೋಲನವು ... ನಾವು ಜನರೊಡನೆ ಸಮಾನ ಭಾವನೆಯಿಂದ ... ಚರ್ಚೆ ನಡೆಯಿಸಿ, ನಮ್ಮ ಕಷ್ಟಗಳನ್ನು ಹೇಳಿಕೊಳ್ಳಬಹುದೆಂದಾಗುತ್ತದೆ.' ಈ ರೀತಿಯಾಗಿ ತಿಳಿಸಿದೆ.

ನೇತಾಜೀಯವರ ವಿಚಾರದಲ್ಲಿಯೂ ... ಕೆ. 1935 ನೇ ಇಸವಿಯ ನೂತನ ರಾಜ್ಯಾಂಗ ಶಾಸನವನ್ನು ಕುರಿತು ಕಾಂಗ್ರೆಸ್ಸು ತನ್ನ ನೀತಿಯನ್ನು ಸ್ಪಷ್ಟವಾಗಿ ಹೇಳಿದೆ. ಈ ವಿಚಾರದಲ್ಲಿ ಪ್ರಾಂತೀಯ ಸರಕಾರಗಳು ನಿರ್ಣಯಗಳನ್ನು ಮಾಡಿ, ತಮ್ಮ ಅಭಿಪ್ರಾಯವನ್ನು ಇಂಡಿಯಾ ಸರಕಾರದ ಮೂಲಕ ಬ್ರಿಟಿಷ್ ಸರಕಾರಕ್ಕೆ ತಿಳಿಸಿವೆ. ಆದರೆ ಬ್ರಿಟಿಷ್ ಸರಕಾರವು ಇನ್ನೂ ಅದಕ್ಕೂ ಕಿವಿಗೊಟ್ಟಿಲ್ಲವೆಂದು ಗೊತ್ತಾಗುತ್ತದೆ.

ಮ್ಯಾಂಚೆಸ್ಟರ್ ಗಾರ್ಡಿಯನ್ ಪತ್ರಿಕೆಯ ಪ್ರಧಾನ ಲೇಖನವನ್ನು ಕುರಿತು ರಾಷ್ಟ್ರಪತಿ ಸುಭಾಷರು, ಸಂಯುಕ್ತ ರಾಜ್ಯಾಂಗ ವ್ಯವಸ್ಥೆಯನ್ನು ಕುರಿತು ಬ್ರಿಟನ್ನಿನೊಡನೆ ಯಾವ ಸಮಾಧಾನಕ್ಕೂ ಸಾಧ್ಯವಿಲ್ಲವೆಂಬುದಾಗಿ ಹೇಳಿದ್ದಾರೆ. ಎಲ್ಲಿಯವರೆವಿಗೆ ಬ್ರಿಟನ್ನು ಹಿಂದೂಸ್ಥಾನವನ್ನು ತನ್ನ ಸರಿಸಮನಾದ ರಾಷ್ಟ್ರವೆಂದು ಭಾವಿಸುವುದಿಲ್ಲವೋ ಅಂದಿನ ತನಕ ಹಿಂದೂಸ್ಥಾನಕ್ಕೂ ಮತ್ತು ಬ್ರಿಟನ್ನಿಗೂ ಸಮಾಧಾನವು ಸಾಧ್ಯವಾಗಲಾರದು.

ಭಾಷಾನ್ವಯ ಪ್ರಾಂತ್ಯಗಳು ಸದ್ಯದಲ್ಲಿ ಆದರೆ ಹಿತವಲ್ಲ.

ಶ್ರೀ ಸತ್ಯಮೂರ್ತಿಯವರ ಹೇಳಿಕೆ.

'ನಾವು ತಮಿಳರೂ, ಆದರೂ ನಮಗೆ ಬೇರಾಗಿ ಪ್ರತ್ಯೇಕವಾದೊಂದು ಪ್ರಾಂತ್ಯ ಬೇಕೆಂದು ನಾನೆನ್ನುವುದಿಲ್ಲ. ಆದರೆ ಜನತೆಗೆ ಸಂಬಂಧಿಸುವ ಇತ್ಯರ್ಥವು ... ರಾಷ್ಟ್ರೀಯತೆಗೆ ಯುಕ್ತವಾಗುವ ರೀತಿಯಲ್ಲಿ ಯಾವುದೊಂದು ಭಾಷೆಯು ನಾಡಿನವರು ತಮ್ಮದೆಲ್ಲ ಒಂದೇ ಪ್ರಾಂತ್ಯದಲ್ಲಿ ಸೇರಬೇಕೆನ್ನುವುದು ಇದೀಗ ಆಗಲೇ ಆದ ನಿಶ್ಚಿತವಾದ ವಿಷಯ. ಆಂಧ್ರರಾಗಲೀ, ಕನ್ನಡಿಗರಾಗಲೀ ಈ ಪ್ರಶ್ನೆಯನ್ನು ಸುಲಭದಲ್ಲಿ ಇತ್ಯರ್ಥಪಡಿಸಬಾರದು, ಮೊದಲು ಇಡೀ ದೇಶವು ಸಂಪೂರ್ಣ ಸ್ವಾತಂತ್ರ್ಯವಾಗಬೇಕು. ಆಗ ಆಂಧ್ರರು, ಕನ್ನಡಿಗರು, ಮಲೆಯಾಳಿಗಳು ಪ್ರತ್ಯೇಕವಾದ ರಾಷ್ಟ್ರಗಳನ್ನು ಮಾಡಿಕೊಳ್ಳಬಹುದು. ಆದರೆ ಈಗಲೇ ಬೊಂಬಾಯಿ ಮದ್ರಾಸುಗಳಂತಹ ದೊಡ್ಡ ಪ್ರಾಂತ್ಯಗಳು ಒಂದಾಗಿ ಶಾಸನಸಭೆಯಲ್ಲಿಂತ್ಹ ದೇಶದವರಲ್ಲಿ ಚರ್ಚೆ ನಡೆಯುವ ಹಾಗೆ ಯೋಚಿಸಬಾರದೇ? ಅದನ್ನು ತುಂಡರಿಸುವುದು ಉಚಿತವಲ್ಲ.'

ಗಡಿನಾಡಿನಲ್ಲಿ ಸಿಡಿಗುಂಡುಗಳು.

ಗಡಿನಾಡಿನಲ್ಲಿರುವ ನಾನಾ ಕುಲಗಳನ್ನು ಬಯಸಿ ಹೋಗಿ, ಅವರು ಏಳಿಯರಾಗುವ ಹಾಗೆ ಮಾಡುವ ಸಾಧನೆಯಿದು. ಯಾವ ಹಳ್ಳಿಯಲ್ಲಿ ಬಾಂಬು ಚೆಲ್ಲುವರೋ ಅಲ್ಲಿ ಭಾಷಾ ಪತ್ರಕಗಳನ್ನು ಮೊದಲು ಚೆಲ್ಲುವರು. ಆದರೆ ಅವನ್ನು ಓದಲು ಒಳ್ಳ ಜನವಿದ್ದಾರೆ, ಆ ಗ್ರಾಮಗಳಲ್ಲಿ? ಆದೂ ಅಲ್ಲದೆ ಪಠಾಣರನ್ನು ಭಯಗೊಳಿಸಿ ... ಗೆಲ್ಲಬಾಗುವಂತಿಲ್ಲ ಎಂಬುದನ್ನು ಬ್ರಿಟಿಷರು ಇನ್ನೂ ಕಲಿತುಕೊಳ್ಳಬೇಕಾಗಿದೆ. ಗುಡಿಸಲುಗಳನ್ನೂ, ಮಸೀದಿಗಳನ್ನೂ ಹಾಳುಗೆಡುವುದರಿಂದಲೂ, ಗಂಡಸರು, ಹೆಂಗಸರು, ಮಕ್ಕಳು, ಮುದುಕರು ಮೊದಲಾದವರನ್ನು ಅವರು ನಿರಪರಾಧಿಗಳಾದರೂ ಕೊಂದಿಕ್ಕುವುದರಿಂದಲೂ ಪಠಾಣರ ಮನಸು ಇನ್ನಷ್ಟು ಕಠಿಣವಾಗಿ, ಅವರು ಸುಲಭದಲ್ಲಿ ಗೆಲೆಯರಾಗದೆ, ಇನ್ನೂ ಕೊನೆಯ ತನಕ ಕಾದಾಡುವುದೇ ನಿಶ್ಚಯವೆನ್ನುವಂತಾಗುವುದು.

ಈ ಮಸೀದಿ ಧ್ವಂಸವನ್ನು ಅಫಘಾನಿಸ್ಥಾನವೂ ಕೇಳಿದೆ. ಭಾಷೆ, ಮತ, ವಂಶಗಳು ಒಂದಾಗಿರುವ ಈ ಕುಲದವರು ಈ ರೀತಿ ಹಾವಳಿಗೆ ಒಳಪಡುತ್ತಾರೆಂದು ತಿಳಿದೇ, ಈಚಿಯ ಜನರೂ ಕಾಂಗ್ರೆಸ್ಸಿಗೆ ಒಲಿಯರುವರು. ಅದೂ ಅಲ್ಲದೆ, ರಕ್ಷಣೋಪಾಯವಿಲ್ಲದವರ ಮೇಲೆ ಕಾದಾಡುತ್ತ, ಅಧರ್ಮ ಯುದ್ಧವನ್ನು ಹೂಡಿದುದು ಸರಿಯಲ್ಲ. ಮಾನೋಸಿಗೂ ನೀತಿಗೂ ಈ ಬಾಂಬು ಚೆಲ್ಲಾಟವು ಒಪ್ಪದಾಗಿದೆ.

ಜಾತಿ.

ಅನುಚಿತ ಆಲೋಚನೆ.

ಅಯ್ಯಾ,

ಕೆಲವು ವಾರಗಳಿಂದ 'ಜನ್ಮಭೂಮಿ' ಪತ್ರಿಕೆಯಲ್ಲಿಯ ಜಾತಿಗಳನ್ನು ನೋಡಿದಲ್ಲಿ ಸಿಬ್ಬಂದಿ ಹೋರಾಟ ಮತ್ತು ಕೊಡಗು ಸಂಪಾದಕರ ಹಿಂದಿನ ಜಾತಿ ಕುರಿತು ಬರೆಯುತ್ತಾ ಒಂದು ವಸ್ತುವನ್ನು ಕಂಡು ವ್ಯಸನ ಕರಗಿತು. ಯಾಕೆಂದರೆ ಮತಭೇದಗಳೆ, ಜಾತಿ, ಹೊಟ್ಟೆಕಿಚ್ಚು ಎಂಬುದು ಕೊಡಗರ ರಕ್ತದಲ್ಲಿ ಸಾಟಿಕೊಂಡಿರುವುದೆಂಬುದಾಗಿ ಯಾರೋ ಒಬ್ಬ ಕೊಡಗರೇ ಒಂದು ಪುಸ್ತಕ ಬರೆದದ್ದು ನೆನಪಿದೆ. ನಾವು ಹಿಂದೆ ಯಾವ ಕಾಲದಲ್ಲಿಯೂ ಯಾವ ರಾಜ್ಯಾಳುವ ಜನಾಂಗಕ್ಕೂ ಸೇರಿದವರಲ್ಲ. ಇನ್ನು ಮುಂದೆ ಕೊಡಗರು ಕೊಡಗಿನ ರಾಜರಾಗಿ ಕೊಂಡು ಆಳುವ ನಿರೀಕ್ಷಣೆಯೂ ಇಲ್ಲ. ಯಾವ ಜಾತಿಗೆ ಸ್ವಜಾತಿ ಪ್ರೇಮವಿಲ್ಲವೋ ಅಂಥ ಮತಕ್ಕೆ ಗುಲಾಮಗಿರಿಯೇ ಅವರ ಹಣೆಬರಹ. ತಾಳಿ ಮಾತಲಕ್ಕೆ ಸಾಧ್ಯವಿಲ್ಲ. ನನ್ನಿಂದ ಬೇರೆಯದಕ್ಕೆ ಇನ್ನೊಬ್ಬನನ್ನು ಹೋಯಿಸಲಿಕ್ಕೆ ಬಿಡಬಾರದೆಂಬ ಹಟ. ಇದು ನಿರಪರಾಧವಲ್ಲ. ಕಾಂಗ್ರೆಸ್ಸಿನವರು ನಾಯಕರು... ಯುತ್ತ ಬರುವುದು ಇದೇ ಜನಾಂಗದ ಬೆಂಬಲದಿಂದ. ಇವನ್ನರಿಯದ ಕಾಂಗ್ರೆಸ್ ಅಧ್ಯಕ್ಷರನ್ನಾಗಲೀ ಒಬ್ಬಕ್ಕೆ ಸಂಬಂಧಿಸಿದ ಇನ್ನೊಬ್ಬ ಕಾಂಗ್ರೆಸ್ ನಂಬಿದವರನ್ನಾಗಲೀ ದೂರ ಜನರ ಮನಸ್ಸಿಗೆ ನುಂಡಿಸುವಂತೆ ... ಇವರನ್ನು ಸೋಲಿಸಬೇಕೆಂಬ ಹಟದ ಪ್ರಯತ್ನ. ಇಂಥಾ ಉಪಯೋಗವಿಲ್ಲದ ಹೊಸದಾದಗೋಸ್ಕರ ಕಳೆಯತಕ್ಕ ಸಮಯ, ಕಾಗದವನ್ನು ಬೇರೆ ಒಳ್ಳೇ ಕೆಲಸಕ್ಕೆ ಉಪಯೋಗಿಸುವದು ಹಿತವಲ್ಲವೇ? ಯಾವ ಜಾತಿಯಾದರೂ ಸ್ವಜಾತಿ ಪ್ರೇಮ ಹೆಚ್ಚಿದಂತೆ ಮುಂದರಿಯುತ್ತಾ ಹೋಗುತ್ತದೆಯಲ್ಲದೆ ಈ ರೀತಿ ದ್ವೇಷ ಬೆಳೆಸಿದರೆ ಅಧೋಗತಿಗೆ ಬರುವದು. ... ಸಂಗತಿ ಬರೆದರೆ ಬಹಳ ವಿಷಯ ಬರೆಯಬೇಕಿದೆ. ನಮ್ಮ ಪರಸ್ಪರ ಪ್ರೀತಿ ಹೆಚ್ಚಿ ನಾವು ಮುಂದುವರಿಯಬೇಕಲ್ಲದೆ ಈ ರೀತಿ ದೂಷಣೆಯಿಂದ ನಾವು ಇನ್ನಷ್ಟು ಹಿಂದೆ ಬಿದ್ದು ಬಡವರಾಗುವದು ಖಂಡಿತ.

ಬುದ್ಧಿವಂತರು, ಧೈರ್ಯಶಾಲಿಗಳು ಶುದ್ಧ ಕ್ಷತ್ರಿಯರಾದ ನಾವುಗಳು ಒಂದಾಗಿ ಕೊಡಗನ್ನು ಕರ್ನಾಟಕಕ್ಕೆ ಸೇರಿಸುವದು ಒಳ್ಳೆದು, ಮತ್ತೊಂದು ಸಲ ಮೈಸೂರಿಗೆ ಸೇರಿಸುವದು ಒಳ್ಳೆಯದು ... ನ್ನೊಂದು ಸಾರಿ ಬೇರೆ ಇಡುವದೊಳ್ಳೆದು ಎನ್ನುವದು ನಮಗೆ ಲಾಂಛನೀಯವಾದದ್ದಾಗಿದೆ.

ಕೌನ್ಸಿಲು ಡಿಸ್ಟ್ರಿಕ್ಟ್ ಬೋರ್ಡ್ ... ರ್ಚಿಸಿ, ವರ್ಷವೆಷ್ಟಾಯಿತು. ಇವುಗಳ ದ ಸಿಕ್ಕಿದ ನಿಯಾಮತಿ ಏನೇನು? ... ಮಾತ್ರ ಒಂದು ವರ್ಷದಲ್ಲಿ ಕಾಂಗ್ರೆಸ್ಸಿನವರು ಎಲ್ಲಾ ಮಾಡಿಬಿಡಬೇಕೆಂದರೆ ಸಾಧ್ಯವೇ? ಕಾಂಗ್ರೆಸ್ಸಿಗೆ ಓಟು ಕೊಟ್ಟ ದೇಶದವರೆಲ್ಲರು ತಿಳುವಳಿಕೆಯಿಲ್ಲದ ಮೂಢರು. ಇಂಥ ದೂಷಣೆಗೆ ನಾವು ಕಾಂಗ್ರೆಸ್ಸಿನವರನ್ನು ಕೈ ಬಿಡಲಿಕ್ಕೂ ಇಲ್ಲ.

ಪಿ. ಜಿ. ಚಂಗಪ್ಪ

ದಿ ಗಾರ್ಡಿಯನ್ ಆಫ್ ಇಂಡಿಯಾ ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್, ಮದ್ರಾಸು.

ಹೊಸ ಉದ್ಯೋಗ. ಈ ವರ್ಷದಲ್ಲಿ 52,51,750 ರೂ. [illegible] 1689 ಪ್ರಪೋಸಲುಗಳು ಬಂದವು. ಇವರಲ್ಲಿ [illegible] 1447 ಪ್ರಪೋಸಲುಗಳು [illegible] 40,67,[illegible] ರೂ. [illegible] 2,21,9[illegible] 6 0 ರೂ. [illegible] ರೂ. 30,38,150 [illegible] ಟ್ಟಿದ್ದಾಗಿದೆ. [illegible] 1,13,775 [illegible].

[illegible]

ಇಂಡಿಯಾ [illegible] 215 [illegible] ಇನ್ಶೂರೆನ್ಸ್ [illegible] ಗಾರ್ಡಿಯನ್ ಆಫ್ ಇಂಡಿಯಾ ಹೊಸ ಉದ್ಯೋಗ [illegible]

ಜೀವವಿಮಾ ಫಂಡು. [illegible] 5,250 11 9 [illegible] 5,057 [illegible] 21,0[illegible] 1 3 [illegible]

ಸಾರಾಂಶವಿಲ್ಲಿ.	ವಿಮಾ ಕಂಡು	ಜೀವವಿಮಾ ಫಂಡು
1ನೇ ವರ್ಷದ	ರೂ. 1,10,[illegible]	ರೂ. [illegible]
2ನೇ ವರ್ಷದ	„ 2,36,767	„ [illegible]
3ನೇ ವರ್ಷದ	„ 3,66,19[illegible]	„ [illegible]

[illegible]

ಭಾರತ ಜೀವವಿಮಾ ಕಂಪೆನಿಗಳ [illegible]

ಕೆ. [illegible]

5-9 [illegible]

ಯುನಾನಿ ಫಾರ್ಮಸಿಯ ಉತ್ತಮ ಔಷಧಿಗಳು.

ಅಬ್ಬಾಸ್ [illegible] (Kaki[illegible]) [illegible] 40 [illegible] ರೂ. 5—12—0.

ಅಂಬರ್ ಸೊಪಲೆಸ್ಟ್, ಸುಗಂಧ ಯುಕ್ತ ಆಮ್ಲಕೀರ ತೈಲ [illegible] ರೋಗಗಳಿಗೂ [illegible]

ಬೇಗನೆ ಬರೆಯಿರಿ: —

ಎಂ. ಎಂ. ಸಿದ್ದೀಕ್,

ಪ್ರೊಪ್ರೈಟರ್,

ಯುನಾನಿ ಔಷಧಶಾಲಾ, ಮಡಿಕೇರಿ, ಕೊಡಗು.

19

ಧನ್ವಂತರಿ ಸಹಾಯ ಔಷಧಾಲಯ.

ವೀರಾಜಪೇಟೆ. (ದ. ಕೊಡಗು).

[illegible] ಎಲ್ಲಾ ವಿಷಗಳ [illegible] ಕಾಲೆಯು [illegible]

ಜ್ವರ [illegible] ಸುದರ್ಶನ.

[illegible] ರೂ. 1 0 0 [illegible]

2 ಪಿಟ್. [illegible]

ADVERTISE

IN

"KODAGU"

The OLDEST WEEKLY of COORG.

[illegible] [illegible] [illegible]

[illegible] —ಪ್ರತಿ [illegible] ಸ್ನೇಹಿತ—ಸ್ವದೇಶಿ ವಸ್ತು.



ಇದರ [illegible] ಕಜ್ಜಿ, ಹುಣ್ಣು, [illegible] ತುರಿ, ಹುಣ್ಣು, [illegible] (Pimples) ಸುಟ್ಟಗಾಯ, [illegible] ಹವಾಳೆ, ಗಣಕರ್ಣ [illegible] ರಕ್ತವನ್ನು [illegible] ಒಂದು ಬಾಟ್ಲಿ [illegible]

[illegible] ಬಾಟ್ಲು 1ಕ್ಕೆ ಆ॥ 0 8 0 । ಚಿಕ್ಕ ಬಾಟ್ಲು 1ಕ್ಕೆ ಆಣೆ 0 4-0

ಸೂ:—ಬೆಟ್ಟಿ [illegible] ಚೆನ್ನಾಗಿ [illegible] ಔಷಧಿಗಳು ನಮ್ಮಲ್ಲಿವೆ.

ಲಕ್ಷ್ಮಿ ಮ್ಯಾನಿಫ್ಯಾಕ್ಚರಿಂಗ್ ಕಂಪೆನಿ,

ಬಿ. ಪೊ. ಬೆಂಗಳೂರು ಸಿಟಿ.

52-48

ಸೋಲ್ ಏಜೆಂಟ್:—ಹರಿದಾಸ್ [illegible],

ಮಡಿಕೇರಿ, (ಕೊಡಗು).

ಬ್ರಿಟಿಷರ ತೇಜೋಭಂಗ.

ಸಧ್ಯ ಯೂರೋಪಿನ ಪ್ರಕರಣ[illegible] ಘೋಷವಾಗಿದೆ [illegible] ಮೆರೆಯುತ್ತಿದ್ದ [illegible] ಬ್ರಿಟಿಷರ [illegible] ಬಂಧನದಲ್ಲಿ [illegible] ಅವಮಾನ [illegible] ಬ್ರಿಟಿ[illegible] ಮಾನವಿಲ್ಲ.

[illegible] ಜಗತ್ತಿನಲ್ಲಿ [illegible] ತಮ್ಮ ದಾಸರೆಂಬ [illegible] ಅವರಲ್ಲಿ [illegible] ಹೋಗಬೇಕೆ [illegible]

ಬ್ರಿಟನಿನ ಕುಟಿಲ ನೀತಿ.

ಬ್ರಿಟನು [illegible] ರಾಷ್ಟ್ರ [illegible] ಸಮಿತಿಯಲ್ಲಿ [illegible] ಮೇಲೆ ಬಾಂಬು [illegible] ಸಾಮ್ರಾಜ್ಯ [illegible] ಬ್ರಿಟನು [illegible] ಮುಂದೆ [illegible] ಬಲ್ಲರು?

[illegible]

ದ್ದ ಘೋಷಣೆಯ [illegible] 'ನಮ್ಮಲ್ಲಿ [illegible] ನಿಮ್ಮ [illegible] ಇಲ್ಲ' ಎಂದು [illegible] ಬ್ರಿಟನಿನ [illegible]

ರಾಷ್ಟ್ರ ಸಂಘದ [illegible]

[illegible]

ಅಹಿಂಸೆಯ ಪ್ರಧಾನ್ಯತೆ.

ಗಾಂಧೀಜೀಯವರ ಅಭಿಪ್ರಾಯಗಳು

ಮಜೂರರ ವರ್ಗದಲ್ಲಿ ವ್ಯವಸ್ಥೆಯನ್ನು ಕಲಿಸಲು ಪ್ರತ್ಯಕ್ಷ ಶಿಕ್ಷಣವನ್ನು [illegible] ಪಾಶ್ಚಾತ್ಯ ವಿದ್ಯಾರ್ಥಿಗಳು ಕೆಲವರು [illegible] ಗಾಂಧೀಜೀಯವರನ್ನು ಕಂಡು ಕೆಲವು ವಿಷಯಗಳ ಕುರಿತು ಚರ್ಚಿಸಿದರು. ಮಜೂರ ಪ್ರಶ್ನೆಯೇ ಮುಖ್ಯ [illegible]

ಗಾಂಧೀಜೀಯವರು ಸಂತೋಷದಿಂದ ತಮ್ಮ ಅಭಿಪ್ರಾಯಗಳನ್ನು ವಿವರಿಸಿದರು. ತಮ್ಮ ಸಾರ್ವಜನಿಕ ಜೀವನದ ಆರಂಭವೇ ದಕ್ಷಿಣ ಆಫ್ರಿಕದಲ್ಲಿ ಕೂಲಿ ಮಜೂರ ವರ್ಗದೊಡನೆ [illegible] ಸಂಬಂಧದಿಂದಾಯಿತೆಂದು [illegible] ದಕ್ಷಿಣ ಆಫ್ರಿಕದಲ್ಲಿ [illegible] ಮಜೂರರು [illegible] ಅವರ ಜೀವನದ [illegible] ಸತ್ಯಾಗ್ರಹದಲ್ಲಿ 60,000 ಮಜೂರರು [illegible] ಅವರು [illegible] ಪ್ರತಿಜ್ಞೆ ಮಾತ್ರವಿತ್ತು. [illegible] ಅಹಿಂಸಾ ವ್ರತ [illegible] ಬಿಡಲಿಲ್ಲ. [illegible] ಅಹಿಂಸೆಯ ಬೆಂಬಲವಿರಲಿಲ್ಲ. ಆಗಾಗ ದೊಂಬಿಗಳು ನಡೆಯುತ್ತಿದ್ದವು. [illegible] ವರ್ಷಕ್ಕೆ ಅವರ ಸ್ಥಿತಿಯು [illegible] ಅಹಿಂಸೆಯು ಪ್ರಥಮ [illegible] ಹೊಸ ಜೀವನವನ್ನುಂಟು ಮಾಡಿತು. ಅಲ್ಪ ಸಮಯದ [illegible] ಅವರ ಬಿಡುಗಡೆಯಾಯಿತು.

ಅಹಿಂಸೆಯ ಶಿಸ್ತು [illegible] ಅವರು [illegible] ಜಗಳಾಡುವರು [illegible] ತಮ್ಮಲ್ಲಿ ಸಹಜವಾಗಿರುವ ಶಕ್ತಿಯನ್ನು ಅವರು [illegible] ಬೇಕಾದ ಸಾಮರ್ಥ್ಯವು ಅವರಲ್ಲಿ ಬೆಳೆಯಲಾರದು. [illegible] ಇವೆಲ್ಲ ಅಹಿಂಸೆ[illegible] ಬರುವವು. [illegible] ವರ್ಗಕ್ಕೆ [illegible] ಪರಸ್ಪರ ಸಹಾಯವನ್ನು ಕಲಿತರೂ ಅವರು ಪರಾವಲಂಬಿಗಳಾಗುತ್ತಾರೆ. ಧನಿಗಳ ಮೇಲೆಯೇ [illegible] ಅವಲಂಬಿಸಿರುತ್ತಾರೆ. [illegible] ತಮ್ಮಲ್ಲಿರುವ ಸಹಜ ಸಾಮರ್ಥ್ಯದ ತಿಳುವಳಿಕೆ ಇಲ್ಲದಿರುವುದೇ ಇಂಥ ಸ್ಥಿತಿಗೆ ಕಾರಣವೆನ್ನಬಹುದು. ಅಹಿಂಸಾ ವ್ರತದ ಪಾಲನೆಯಿಂದ ಮಾತ್ರ ಈ ತಿಳುವಳಿಕೆ ಬರುತ್ತದೆ.

ಈ ಅರಿವುಂಟಾಗಿ ಮಜೂರರಿಗೆ ತಮ್ಮ ಸಾಮರ್ಥ್ಯವು ತಿಳಿದ ಮೇಲೆ ಅಹಿಂಸೆಯ ಆವಶ್ಯಕತೆಯೇನೂ ಕಡಿಮೆಯಾಗುವುದಿಲ್ಲ. ಅಂಥ ಸ್ಥಿತಿಯಲ್ಲಿ ಅಹಿಂಸೆಯನ್ನು ಬಿಟ್ಟರೆ ಅವರೂ ಭಂಡವಲದಾರರಂತೆಯೇ [illegible] ಸುಲಿಯಲು ಆರಂಭ ಮಾಡುವರು. ಗಿರಣಿ ಮತ್ತು ಮಿಲ್‌ಗಳು ತಮ್ಮನ್ನು ಸುಲಿಯುವ ಸಾಧನಗಳೆಂದು ಭಾವಿಸುವುದಿಲ್ಲ. ಆದರೆ ಅವು ಉತ್ಪತ್ತಿಯ ಸಾಧನಗಳೆಂದೂ ಅವು ತಮ್ಮ ಸೊತ್ತುಗಳೆಂದೂ ಭಾವಿಸಿ ಅವನ್ನು ರಕ್ಷಿಸಲು ಯತ್ನಿಸುವರು. ಅವರು [illegible] ಪ್ರಯತ್ನದಿಂದ ಕೆಲಸ ಮಾಡುವರು. ನೀವು ದೇವತೆಗಳನ್ನು ತೃಪ್ತಿಪಡಿಸಿರಿ, ದೇವತೆಗಳು ನಿಮ್ಮನ್ನು ತೃಪ್ತಿಪಡಿಸಲಿ, ಇಬ್ಬರೂ ಪರಸ್ಪರ ತೃಪ್ತಿಪಡಿಸಿ ಅತ್ಯಂತ ಹೆಚ್ಚಿನ ಒಳ್ಳೆತನ್ನು ಸಾಧಿಸಿರಿ ಎಂದು ಭಗವದ್ಗೀತೆಯಲ್ಲಿ ಹೇಳಲಾಗಿದೆ. ವಿಶ್ವದಲ್ಲಿ ದೇವತೆಗಳೆಂದು ಪ್ರತ್ಯೇಕ ಯಾರೂ ಇಲ್ಲ. ಉತ್ಪತ್ತಿಯ ಶಕ್ತಿಯನ್ನು ಹೊಂದಿ ಯಾರು ಸಾರ್ವಜನಿಕ ಉಪಯೋಗಕ್ಕಾಗಿ ಆ ಶಕ್ತಿಯನ್ನು ಉಪಯೋಗಿಸಿ ಕೆಲಸ ಮಾಡುತ್ತಾರೋ ಅವರೇ ದೇವತೆಗಳು. ಮಜೂರರೂ ಬಂಡವಲಗಾರರೂ ಇವರಲ್ಲಿ ಸಮಾವೇಶವಾಗುವರು.

[illegible]

ಕಮಿಶನರ್ ಸಾಹೇಬರವರಿಗೆ ವಿನಂತಿ.

ಕದನೂರು ಹೋಬಳಿಯಿಂದ ಸಾಲೀಕೆಪ್ಪ ಮಾರ್ಗವಾಗಿ ಮಂಗಳೂರು ರಸ್ತೆಗೆ ಕೂಡಿಕೊಂಡು ಮತಿಕೇರಿಗೆ ಈ ಜುಲೈ ತಿಂಗಳ 15 ರೊಳಗೆ ಒಂದು ಪ್ರಯಾಣ ಬೆಳೆಸುವವರಿಗೆ ಅದರ ಸ್ಥಿತಿಯು ತಿಳಿಯುವುದು. ಈಗ ಈ ರಸ್ತೆಯಲ್ಲಿ ತಿರುಗಾಡಿದ ಹೊರತು ನಾಲ್ಕುನಾಡು ಕೈಕಾಗೆ ರಸ್ತೆಯ ಸಂಬಂಧ ತರತರದ ಕಷ್ಟಗಳು ಎಷ್ಟರ ಮಟ್ಟಿಗೆ ಇವೆ ಎಂದು ಮನಸ್ಸಿಗೆ ತಿಳಿಯಲಿಕ್ಕಿಲ್ಲ. ಈಗ ಒಂದಾವರ್ತಿ ಪ್ರಯಾಣ ಮಾಡಿದಲ್ಲಿ ವರ್ಷಕ್ಕೆ ಎರಡು ಸರ್ತಿ ನಾಲ್ಕುನಾಡಿನ ರಸ್ತೆಯಲ್ಲಿ ತಿರುಗಿ [illegible] ತಿಳಿದಂತಾಗುತ್ತದೆ. ಕೊಡಗು [illegible] ಎಲ್ಲಾ ಮೂಲೆಗೆ ರಸ್ತೆಯು [illegible] ಆಗಿರುವುದರಿಂದ [illegible] ಎಲ್ಲಾ ಸೌಲಭ್ಯ ಒದಗಿದಂತಿದೆ. [illegible] ನಾವು ಮಾಡಿದ [illegible] ನಮ್ಮ ರಸ್ತೆಯು [illegible] ನಮ್ಮ ಉತ್ಪತ್ತಿಯನ್ನು ಮುಂದೆ [illegible] ಉನ್ನತ ಸ್ಥಿತಿಗೆ ಬರುವೆವು. [illegible] ರಸ್ತೆಯ ದುಸ್ಥಿತಿಯನ್ನು [illegible] ನೋಡಬಾರದೇ?

[illegible]

ವರ್ತಮಾನ ಸಂಗ್ರಹ.

ಒಳದೇಶ.

ಕಳೆದ ಮೇ ತಿಂಗಳಲ್ಲಿ ಕೊಡಗಿನಲ್ಲಿ 141 ಜನನಗಳೂ 327 ಮರಣಗಳೂ ಸಂಭವಿಸಿದೆಯೆಂದು ಪ್ರಕಟಿಸಿರುತ್ತಾರೆ.

ಕಳೆದ ತಾರೀಖು 2-7-38ರಿಂದ [illegible]-7-38ರ ವರೆಗೆ ಮಡಿಕೇರಿಯಲ್ಲಿ 1[illegible] ಇಂಚು 4 ಸೆಂಟು ಮಳೆಯಾಗಿರುವುದಾಗಿ ತಿಳಿಯುತ್ತೇವೆ.

ಬೆಂಗಳೂರಿನಲ್ಲಿ ಕಾಂಗ್ರೆಸ್ ಕೆಲಸ ಮಾಡುತ್ತಿದ್ದ ಶ್ರೀ ಚೆಕ್ಕೇರ ಪೊನ್ನಪ್ಪನವರನ್ನು ಕೊಡಗಿಗೆ ಮೈಸೂರು ಸರಕಾರದವರು ಪುನಃ ಗಡೀಪಾರು ಮಾಡಿರುತ್ತಾರೆ.

ಪೊನ್ನಂಪೇಟೆನಾಡು ಪಬ್ಲಿಕ್ ಪ್ರಾಸಿಡೆಂಟರಾಗಿದ್ದ ಮಿ. ಮನೆಯಪಂಡ ಪೊನ್ನಪ್ಪನವರು ತಮ್ಮ 75ನೇ ವಯಸ್ಸಿನಲ್ಲಿ ಕಳೆದ ತಾ. 28ರಲ್ಲಿ ಶಿವಾಧೀನರಾದರೆಂದು ತಿಳಿಯುತ್ತೇವೆ.

ಚೀಫ್ ಕಮಿಶನರವರು ಸಿವಿಲ್ ಸರ್ಜನರಾದ ಕೆಪ್ಟನ್ ಪಿ. ಸಿ. ಬಾರ್ಗವ[illegible]ರವರನ್ನು ಕ್ರಿಶ್ಚಿಯನರ ಮದುವೆ ಕಾನೂನಿನ ರಿಜಿಸ್ಟ್ರಾರರಾಗಿ ನೇಮಕ ಮಾಡಿರುವರು.

ಕೊಡಗಿನ ಸಿವಿಲ್ ಸರ್ಜನರಾದ ಕೆಪ್ಟನ್ ಪಿ. ಸಿ. ಬಾರ್ಗವರವರು ತಮ್ಮ ತರಬೇತಿಗೆ 15 ದಿನಗಳ ರಜದಲ್ಲಿ ಬೆಂಗ್ಳೂರಿಗೆ ಹೋಗಿರುವುದರಿಂದ ಅವರ ಬದಲು ಕೆಲಸವನ್ನು ಶ್ರೀ. ತೀತಿರ ಮೊಣ್ಣಪ್ಪನವರು ನೋಡುತ್ತಿರುವರಾಗಿ ತಿಳಿಯುತ್ತೇವೆ.

ಕೊಡಗು ಕೌನ್ಸಿಲಿನ ಸೆಕ್ರೆಟರಿಯವರಿಗೆ ಪಿ. ಮಂದೇಪಂಡ ಸುಬ್ಬಣ್ಣನವರು ರಾಜಿನಾಮೆ ಕೊಟ್ಟ ಪ್ರಯುಕ್ತ ಅವರ ಬದಲು ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರಾದ ಮ. [illegible]ಪಂಡ ಚಂಗಪ್ಪನವರನ್ನು ಕೌನ್ಸಿಲು ಸೆಕ್ರೆಟರಿಯಾಗಿ ಚೀಫ್ ಕಮಿಷನರು ನೇಮಕ ಮಾಡಿರುವರು.

ಶ್ರೀಯುತರುಗಳಾದ ರಾ. ಬ. ಶ್ರೀನಿವಾಸರಾವ್, ಡಿ. ಹೆಚ್. ಬಾಸವಪ್ಪ ಬಿ. ಎಂ. ಕಾರ್ಯಪ್ಪ ಎ. [illegible] ಯವರುಗಳನ್ನು ಪ್ರಾಂತೀಕ ಗ್ರಾಮಾಭಿವೃದ್ಧಿ ಕಮಿಟಿಗೆ 1-7-38ರಿಂದ ಒಂದು ವರ್ಷದ ವರೆಗೆ ಚೀಫ್ ಕಮಿಷನರವರು ನೇಮಕ ಮಾಡಿರುವರಾಗಿ ತಿಳಿಯುತ್ತೇವೆ.

ಸ್ಟೇಂಡಿಂಗ್ ಜನರಲ್ ಪರ್ಪಸಸ್ ಕಮಿಟಿಗೆ ಚೀಫ್ ಕಮಿಷನರವರು ಶ್ರೀಯುತರುಗಳಾದ ಲೆಫ್ಟಿನೆಂಟ್ ಕರ್ನಲ್ ಹಿರ್ಲೆಂಡ್ ಯಂ. ಯಲ್. ಸಿ., ಪಿ. ಐ. ಕೃಷ್ಣ ಯಂ. ಯಲ್. ಸಿ., ಕೆ. ಮಲ್ಲಪ್ಪ, [illegible]ಯಂ. ಯಲ್. ಸಿ. ಮತ್ತು ಎ. ಅಟ್ಟು[illegible] ಕಿಮೂನ್ ಖಾನ್ ಯಂ. ಎಲ್. ಸಿ. [illegible]ಯವರುಗಳನ್ನು ತಾರೀಖು 27-6-38ರಿಂದ ನೇಮಿಸಿರುವರು.

ಪೊನ್ನಂಪೇಟೆಯಲ್ಲಿ ಅಬ್ಕಾರಿ ಸಬ್ ಇನ್ಸ್‌ಪೆಕ್ಟರಾಗಿದ್ದ ಮಿ. ದೊಮ್ಮಂಡ ಕಾರ್ಯಪ್ಪನವರನ್ನು ಸೋಮವಾರಪೇಟೆಯ ಠಾಣಾ ಪಾರುಪತ್ಯಗಾರರಾಗಿಯೂ, ಅವರ ಬದಲು ಅಬ್ಕಾರಿ ಸಬ್ ಇನ್ಸ್‌ಪೆಕ್ಟರಾಗಿ ಕೌನ್ಸಿಲ್ ಆಫೀಸ್ ಹೆಡ್ ಕ್ಲಾರ್ಕರಾಗಿದ್ದ ಮಿ. ಆಲ್‌ಬರ್ಟ್‌ರನ್ನೂ ನೇಮಕ ಮಾಡಿರುವರಾಗಿ ತಿಳಿಯಬರುತ್ತದೆ.

ಸೋಮವಾರಪೇಟೆ ರೇಂಜಿನ ಯಡವನಾಡು ರಿಜರ್ವ್ ಫಾರೆಸ್ಟಿನಲ್ಲಿ ತೊಂದರೆ ಕೊಡುತ್ತಿರುವ 'ಯಲ್ಲನೂರು ರೋಗ್' ಮತ್ತು ದಕ್ಷಿಣ ಕೊಡಗು ತಿತಿಮತಿ ರೇಂಜಿನಲ್ಲಿ ಸುತ್ತಾಡಿ ತೊಂದರೆ ಕೊಡುತ್ತಿರುವ 'ತಿತಿಮತಿ ರೋಗ್' ಎಂಬ ಪುಂಡಾನೆಗಳನ್ನು ಕೊಲ್ಲಲು ಮೂರು ಲೈಸೆನ್ಸುಗಳನ್ನು ಕೊಡಲಾಗುವದೆಂದು ಗೆಜೆಟಿನಲ್ಲಿ ಪ್ರಕಟವಾಗಿದೆ.

ಈ ತಾ. 2ನೇ ಶನಿವಾರ ರಾತ್ರಿ ಯಾರೊ ಒಬ್ಬನು ಗೋಣಿಕೊಪ್ಪಲು ಮಿ. ಎ. ರಹಿಮ್. ಹುಚ್ಚಯ್ಯನವರ ಅಂಗಡಿಗೆ ಕನ್ನ ಹಾಕಿ ಅಂಗಡಿಯೊಳಗೆ ಅವರು ಮಲಗಿದ್ದ ಕೋಣೆಯಲ್ಲಿ ಅವರ ಪೆಟ್ಟಿಗೆಯಿಂದ ಒಂದು ಗಡಿಯಾರವನ್ನೂ ಕೆಲವು ನೋಟು ಕಾಗದಗಳನ್ನೂ ಕದ್ದುಕೊಂಡು ಹೋಗಿರುತ್ತಾನೆಂದೂ ಈ ವಿಷಯ ಪೋಲೀಸು ತನಿಖೆ ನಡೆಯುತ್ತಿದೆಯೆಂದೂ ತಿಳಿಯುತ್ತೇವೆ.

ಹಿಂದೂದೇಶ.

ಈ ವರ್ಷ ಏಪ್ರಿಲ್ ತಾ. 1 ರಿಂದ ಜೂನ್ ತಾ. 18ರ ವರೆಗೆ ಸಂಯುಕ್ತ ಪ್ರಾಂತ್ಯಗಳ ಅಧಿಪತ್ಯದಲ್ಲಿ 35,310 ಮಂದಿಗೆ ಕಾಲರಾ ಉಪದ್ರವದಿಂದ ಅವರಲ್ಲಿ 17,330 ಮರಣಗಳಾದವೆಂದು ಪ್ರಕಟಿಸಿರುತ್ತಾರೆ.

"ಡಾನ್ ಆಫ್ ದಿ ಲೈಫ್ ಪ್ರಿಗೇಡ್" ಎಂಬ ಚಿತ್ರವು, ಗಡಿನಾಡಿನಲ್ಲಿ ಬ್ರಿಟಿಷರ ಪರಾಕ್ರಮವನ್ನೂ ಪಠಾಣರ ಕ್ರೌರ್ಯ ಮೊದಲಾದುದನ್ನೂ ಚಿತ್ರಿಸಿದ ಸಿನಿಮಾ ಚಿತ್ರವೆಂದು ಮಧ್ಯಪ್ರಾಂತ್ಯದ ಮತ್ತು ಬಿಹಾರಿನ ಸರಕಾರಗಳು ಅದನ್ನು ನಿರ್ಬಂಧಿಸಿವೆ.

ಮದ್ರಾಸಿನಲ್ಲಿ ಹಿಂದಿ ವಿರೋಧ ಚಳವಳಿ ನಡೆಯುತ್ತಿದೆ. ಕೈದಾದ ಕೆಲವು 'ಸತ್ಯಾಗ್ರಹಿಗಳು' ಕೋರ್ಟಿನ ಮುಂದೆ ಕ್ಷಮೆ ಬೇಡಿ ಬಿಡಿಸಿಕೊಂಡುದೂ ಉಂಟು. ಇವರಲ್ಲಿ ಕೆಲವರು ನಿರಕ್ಷರ ಕುಕ್ಷಿಗಳಾಗಿರುವರು. ಇವರು ಹಿಂದೀ ಬೇಡವೆನ್ನುತ್ತಿರುವರಂತೆ.

ಪಂಡಿತ ಜವಾಹರಲಾಲ್ ನೆಹರೂರವರ ಗೌರವಾರ್ಥವಾಗಿ ಲಂಡನಿನಲ್ಲಿ ಏರ್ಪಡಿಸಿದ್ದ ಒಂದು ದೊಡ್ಡ ಸ್ವಾಗತ ಕೂಟದಲ್ಲಿ ಸುಪ್ರಸಿದ್ಧ ಸಂಗೀತಗಾರರಾದ ಪಾಲ್-ರೋಬ್ಸನ್‌ರವರು 'ವಂದೇ ಮಾತರಂ' ಹಾಡಿದರು. ಶ್ರೀ ರಾಬ್ಸನ್‌ರವರು ಈ ಗೀತದ ರಾಗವನ್ನು ಕಷ್ಟಪಟ್ಟು ಕಲಿತಿದ್ದರು.

ಶಹಜಾನ್‌ಪುರದ, ಮಂಡಲ ಕಾಂಗ್ರೆಸ್ ಕಮಿಟಿಯ ಕಾರ್ಯದರ್ಶಿಗಳಾಗಿದ್ದ ಸುಮಾರು 60 ವರ್ಷ ಪ್ರಾಯದ ರಾಮ ಸಹಾಯಿ ಕಲ್ವಾರ್ ಎಂಬವರ ಕೊಲೆಯಾಗಿದೆ! ಇವರು ನಿದ್ರಿಸಿದ್ದಾಗ ಆರು ಮಂದಿ ಆಯುಧ ಸಹಿತರಾಗಿ ಇವರನ್ನು ಮುತ್ತಿ ಕೊಂದರೆಂದು ತಿಳಿದು ಬರುತ್ತದೆ. ಮೂವರ ಪತ್ತೆಯಾಗಿದೆ.

ಸೇಲಂ ಮುನಿಸಿಪಲ್ ಕೌನ್ಸಿಲಿನವರು, ಸುಮಾರು ರೂ. 20,000 ವೆಚ್ಚದಿಂದ ಒಂದು ಧರ್ಮಛತ್ರವನ್ನು ಕಟ್ಟಿಸಿವಾರೆ. ಮೈಸೂರಿನ ಮಹಾರಾಜರು ಈ ಪಟ್ಟಣವನ್ನು 1926ರಲ್ಲಿ ಸಂದರ್ಶಿಸಿದ್ದಾಗ, ಕೊಟ್ಟ ರೂ. 3500ರ ದಾನದಿಂದ, ಇದಕ್ಕೆ, ಶ್ರೀ ಕೃಷ್ಣ ರಾಜೇಂದ್ರ ಮುನ್ಸಿಪಲ್ ಛತ್ರವೆಂದು ಹೆಸರಿಡಲಾಗಿದೆ.

ಕಾಂಗ್ರೆಸ್ ಪ್ರೆಸಿಡೆಂಟ್ ಶ್ರೀ. ಸುಭಾಸ್ ಚಂದ್ರಬೋಸರು ಜುಲೈ ಅಂತ್ಯದಲ್ಲಾಗಲಿ ಆಗಸ್ಟ ಪ್ರಾರಂಭದಲ್ಲಾಗಲಿ ದಕ್ಷಿಣ ಹಿಂದೂಸ್ಥಾನವನ್ನು ಸಂಚರಿಸುವರೆಂದು ತಿಳಿದು ಬಂದಿದೆ. ಅವರು ಒಟ್ಟು 3 ವಾರ ಸಂಚರಿಸುವರಿದ್ದು, ಮದ್ರಾಸ್ ಇಲಾಖೆಯ ಕೆಲವು ಮುಖ್ಯ ಸ್ಥಳಗಳನ್ನು ಮೈಸೂರು ತಿರುವಾಂಕೂರ್ ಸಂಸ್ಥಾನಗಳನ್ನು ಸಂದರ್ಶಿಸುವರು.

ಮದ್ರಾಸ್ ಲೆಜಿಸ್ಲೇಟಿವ್ ಎಸೆಂಬ್ಲಿಯ ಅಧಿವೇಶನವು, ಮೊದಲು ಸೂಚಿಸಿದಂತೆ, ಇದೇ ಬರುವ ಆಗೋಸ್ಟು ತಾ. 1ರಲ್ಲಿ ನಡೆಯಬೇಕಾಗಿದ್ದ ದಾದರೂ, ಕೆಲವು ಸುಧಾರಣೆಗಳ ತಯಾರಿಗೆ ಹೆಚ್ಚಿಗೆ ಸಮಯ ಬೇಕಾಗಿರುವುದರಿಂದ, ಆ ಅಧಿವೇಶನವು ಬರುವ ಆಗೋಸ್ಟು ತಾ. 1[illegible]ಕ್ಕೆ ಆರಂಭಿಸಿ, ಸುಮಾರು 10 ದಿನಗಳ ವರೆಗೆ ಜರುಗಿಸುವದೆಂದು ಪ್ರಕಟವಾಗಿದೆ.

[illegible] ಸುಭಾಸ ಚಂದ್ರಬೋಸರು ಒಂದು ಪ್ರಕಟನೆ ಹೊರಡಿಸಿ ಇದೇ ಜುಲೈ 7, 8 ಮತ್ತು 9 ರಲ್ಲಿ[illegible] ಭಾರತ ಚೈನಾ ದಿವಸವನ್ನು ಆಚರಿಸಿ ಆ ದಿನಗಳಲ್ಲಿ ಚೈನಾ [illegible]ಗಳನ್ನು ಮಾರಾಟಮಾಡಿ ಒಂದು ವರ್ಷದ ಮಟ್ಟಿಗೆ ಚೈನಾದಲ್ಲಿ ನಮ್ಮ ದೇಶದ ಚಿಕಿತ್ಸಾದಳವನ್ನು ನಿಲ್ಲಿಸಲು [illegible] ಹಣವನ್ನು ಕೂಡಿಸಬೇಕೆಂದು ತಿಳಿಸಿರುವರು.

ಕಾಶ್ಮೀರದ ವಾರ್ಧಾ (ರಾಷ್ಟ್ರಪಕ್ಷ) ಪಕ್ಷದ [illegible] ಘುಲಾಮರೂ ಮೊದಲ ಪ್ರಧಾನ ಮಂತ್ರಿಯೂ ಆದ ಮುಸಲ್ಮಾನರು [illegible] ಪಂಡಿತ ಜವಾಹರ[illegible] ಆಮಂತ್ರಣದ [illegible] ಭಾರತ ಕಾಂಗ್ರೆಸ್ಸಿನ ಅಧಿವೇಶನದಲ್ಲಿ [illegible]ವರೆಂದೂ, ವಾರ್ಧಾ [illegible] ನೆಹರೂರವರು ಅಲ್ಲಿಗೆ ಹೋಗುವರೆಂದೂ ತಿಳಿಯಬರುತ್ತದೆ.

26 ಜನ ಡೆಟಿನ್ಯೂಗಳನ್ನು ಅನಿರ್ಬಂಧವಾಗಿ ಬಿಡುಗಡೆ ಮಾಡಲು ಬಂಗಾಳ ಸರಕಾರದವರು ಹುಕುಮು ಹೊರಡಿಸಿದ್ದಾರೆ. ಬೇರೆ ಬೇರೆ ಶಿಕ್ಷಣ ಶಿಬಿರಗಳಲ್ಲಿದ್ದ 42 ಜನ ಡೆಟಿನ್ಯೂಗಳನ್ನು ಕೆಲವೊಂದು ಶರತುಗಳ ಮೇಲೆ ಬಿಡುಗಡೆ ಮಾಡಬೇಕೆಂದು ನಿನ್ನಿನ ದಿನ ಹುಕುಮು ಹೊರಟಿದೆ. ಮಹಾತ್ಮರು ಕಳೆದ ನವಂಬರದಲ್ಲಿ ಸರಕಾರದ ಕೂಡ ಚರ್ಚೆ ಮಾಡಿದ ಬಳಿಕ 1100ಕ್ಕಿಂತ ಹೆಚ್ಚು ಜನರು ಬಿಡುಗಡೆ ಹೊಂದಿದ್ದು ಸರ್ವವಿಶ್ರುತವಿದೆ. ಇನ್ನೂ 300 ಜನ ಡೆಟಿನ್ಯೂಗಳ ಬಿಡುಗಡೆಯಾಗಬೇಕಾಗಿದೆ.

ಲಕ್ನೋ ನಗರದ ಮುಂಬ್ರಾ ಮುನ್ಸಿಪಾಲಿಟಿ ಕಟ್ಟಡದ ಮೇಲೆ, ಒಂದೇ ಬಾರಿಗೆ ಐದು ಪತಾಕೆಗಳು ಹಾರಾಡ ತೊಡಗಿವೆ. ನಗರದ ಪ್ರಮುಖರು, ಇದರಿಂದ ಅಶಾಂತತೆಯುಂಟಾಗಬಹುದೆಂದು ಹೆದರಿ, ಒಂದು ಸಾರ್ವಜನಿಕ ಸಭೆ ಕರೆದಿದ್ದಾರೆ. ಮೊದಲನೆಯದಾಗಿ, ಕಾಂಗ್ರೆಸ್ ಧ್ವಜವು ಕಟ್ಟಡದ ಮೇಲೇರಿಸಲ್ಪಟ್ಟಿತು. ಕೂಡಲೇ, ಮುಸ್ಲಿಮ್ ಲೀಗಿನ ಹಾಗೂ, ಆರ್ಯ ಸಮಾಜದ ಧ್ವಜಗಳು ಬಂದುವು. ಅದನ್ನು ಕಂಡು, ಸಿಖ್ಖರೂ ತಮ್ಮ ಧ್ವಜವನ್ನೇರಿಸಿದರು. ಕೊನೆಯದಾಗಿ ಸನಾತನಿಗಳ ಧ್ವಜವು ಹಾರಿಸಲ್ಪಟ್ಟಿತು!

ವಿದೇಶ

ನ್ಯೂಯಾರ್ಕಿನಲ್ಲಿ ಆರುವತ್ತು ಮಿಲ್ಲಿಯ ಡಾಲರು ವ್ಯಯದಿಂದ ನದಿಯಡಿಯಲ್ಲಿ ಕಟ್ಟುತ್ತಿರುವ ಸುರಂಗ ರಸ್ತೆಯಲ್ಲಿ [illegible]ದ್ದು, ನೀರನ್ನು ಒಳಗೆ ಬಿಟ್ಟು ಬಂದ್ ಮಾಡಬೇಕಾಯಿತು.

1937ನೇ ಇಸವಿಯಲ್ಲಿ ಪ್ರಪಂಚದ [illegible] ಎಲ್ಲಾ ದೇಶಗಳಲ್ಲಿಯೂ ಒಟ್ಟು 63,16,000 ಮೋಟಾರು ಕಾರುಗಳು ತಯಾರಾಗಿರುತ್ತವೆ. ಈ ಪೈಕಿ [illegible] 76ರಷ್ಟು ಅಮೇರಿಕಾ ದೇಶದಲ್ಲಿ ತಯಾರಾದವು. ರಷ್ಯಾ ದೇಶದಲ್ಲಿ 2 ಲಕ್ಷ ಕಾರುಗಳು ತಯಾರಾದುವೆಂದು ತಿಳಿಯುವದು.

ಇಂದಿಗೆ 20 ವರ್ಷಗಳಿಂದ ಬಾರದ [illegible], ಬಲವಾದ ಮಳೆ ಮತ್ತು ಬಿರುಗಾಳಿ [illegible], ಜಪಾನ್ ದೇಶ [illegible] ಮತ್ತು ಯೋಕೊಹಾಮಾ ಪಟ್ಟಣಗಳಲ್ಲಿ ಸುಮಾರು 120 ಸಾವಿರ ಮನೆಗಳು ನೆಲಸಮವಾಗಿವೆ. ಸುಮಾರು, 1[illegible] [illegible] ಮಡಿದಿರುವರೆಂದು ತಿಳಿದು ಬಂದಿದೆ.

ಬ್ರಿಟನ್ನಿನ ಚಿನ್ನದ ಸಂಗ್ರಹವು ಹೆಚ್ಚುತ್ತ ಹೋಗುತ್ತಿದೆ. ಕಳೆದ ವರ್ಷಕ್ಕಿಂತ, ಈ ವರ್ಷ ಮಿಲಿಯ ಸ್ಟರ್ಲಿಂಗುಗಳ ಪ್ರಾಯದ ಚಿನ್ನ ಹೆಚ್ಚಾಗಿದೆಯೆಂದು ತಿಳಿದುಬಂದಿದೆ. ಅಂದರೆ ಸುಮಾರು, 41,546 ಸಾವಿರ ಪವನು ಬೆಲೆಯ ಬಂಗಾರವಿದೆ. ಬ್ಯಾಂಕ್ ಆಫ್ ಇಂಗ್ಲೆಂಡಿನಲ್ಲಿಯೂ 76843 ಸಾವಿರ ಔನ್ಸು ಬಂಗಾರವಿದೆ.

ಇಟಲಿ ದೇಶದವರು ಹೊರಗಿನಿಂದ ತರಿಸಿಕೊಳ್ಳುವ ಪದಾರ್ಥಗಳನ್ನು ಕಡಿಮೆ ಮಾಡಬೇಕೆಂಬ ಉದ್ದೇಶದಿಂದ ನಾನಾ ಉಪಾಯಗಳನ್ನು ಹುಡುಕುತ್ತಾರೆ. ಆ ಪೈಕಿ ಒಂದೆಂದರೆ—ಮುಂದಿನ ಅಕ್ಟೋಬರ್ ತಿಂಗಳಿನಿಂದ ನಾಣ್ಯ ತಯಾರಿಸುವುದಕ್ಕೆ ನಿಕ್ಕಲನ್ನು ಉಪಯೋಗಿಸುವುದರ ಬದಲು ಉಕ್ಕಿನ ಮಿಶ್ರಣದಿಂದಿರುವ ಲೋಹ ಒಂದನ್ನು ಉಪಯೋಗಿಸಬೇಕೆಂದು ಅವರು ನಿರ್ಧರಿಸಿರುವರು.

ಕೊಡಗು

ಜುಲೈ ತಾರೀಕು ೭ನೇ ಶುಕ್ರವಾರ ೧೯೩೯.

ಡಿಸ್ಟ್ರಿಕ್ಟ್ ಬೋರ್ಡಿನ ಬಜೆಟ್.

ಕೊಡಗು ಡಿಸ್ಟ್ರಿಕ್ಟ್ ಬೋರ್ಡಿನ 1938-39ನೇ ವರ್ಷದ ಆದಾಯ ವೆಚ್ಚ ಪಟ್ಟಿಯನ್ನು ಮಂಜೂರು ಮಾಡಲು ಬೋರ್ಡಿನ ಮೀಟಿಂಗು ಈ ತಾರೀಕು 1 ನಡೆಯಿತು. ಸಾಧಾರಣವಾಗಿ ಏಪ್ರಿಲಿನಿಂದ ಪ್ರಾರಂಭವಾಗುವ ಮುಂ ವರ್ಷದ ಬಜೆಟ್ಟು ಅದೇ ವರ್ಷ ಫೆಬ್ರ 15ರೊಳಗೆ ಮಂಜೂರು ಮಾಡಲ್ಪಡಬೇಕು. ಆದರೆ ಈ ವರ್ಷ ರಾ ಮೊದಲಿಯವರ ಅಧ್ಯಕ್ಷತೆಯ ಮೇಲೆ ಕಾಂಗ್ರೆಸ್ ಪಕ್ಷದವರಿಗೆ ವಿಶ್ವಾಸವಿಲ್ಲದಿದ್ದ ಕಾರಣ ಆ ಪಾರ್ಟಿಯವರು ಬಹುಮತದಿಂದ ಬಜೆಟ್ಟನ್ನು ಮಂಜೂರು ಮಾಡಲು ನಿರಾಕರಿಸಿದರು. ಕಮಿಷನರವರ ಪಕ್ಷದವರ ಕೋರಿಕೆಯಂತೆ ಬಜೆಟ್ಟನ್ನು ಮಂಜೂರು ಮಾಡಲು ಪುನಃ ಬೋರ್ಡಿನ ವಿಶೇಷ ಮೀಟಿಂಗು ಮಾರ್ಚ ತಿಂಗಳಲ್ಲಿ ಸೇರಿಸಲಾಯಿತು. ಅದರಲ್ಲೂ ಬಜೆಟ್ಟಿಗೆ ಬಹುಮತದಿಂದ ಮಂಜೂರಾತಿ ದೊರೆಯಲಿಲ್ಲ. ಆದುದರಿಂದ ಚೀಫ್ ಕಮಿಷನರವರು ಬೋರ್ಡಿನ ಮೆಂಬರುಗಳ ಮೂರು ವರ್ಷ ಅವಧಿಯನ್ನು ಒಂದು ವರ್ಷಕ್ಕೆ ಅಂದರೆ ಮಾರ್ಚ ಆಖೈರಿಗೆ ಅಂತ್ಯ ಮಾಡಿ ಹೊಸ ಚುನಾವಣೆ ನಡೆಸಿದರು. ಈ ಹೊಸ ಚುನಾವಣೆಯಲ್ಲಿ ಹನ್ನೊಂದು ಸಾಮಾನ್ಯ ಸ್ಥಳಗಳಲ್ಲಿಯೂ ಹಿಂದೆ ಕಾಂಗ್ರೆಸ್ ಉಮೇದುವಾರರೇ ಜಯಶೀಲರಾಗಿ ಬೋರ್ಡಿನಲ್ಲಿ ಕಾಂಗ್ರೆಸ್ ಪಾರ್ಟಿಯು ಬಲಪಡಿಸಲ್ಪಟ್ಟಿತು. ಆದುದರಿಂದಲೇ ಕಾಂಗ್ರೆಸ್ ಪಕ್ಷದ ಉಮೇದುವಾರರೇ ಬೋರ್ಡಿನ ಅಧ್ಯಕ್ಷರಾಗಿಯೂ ಕಳೆದ ಮೀಟಿಂಗಿನಲ್ಲಿ ಆರಿಸಲ್ಪಟ್ಟಿದ್ದಾರೆ.

ಈ ವಿಶೇಷ ಸಂದರ್ಭದ ಮೇಲೆಯೇ ಹೊಸ ಚುನಾವಣೆಯು 1938-39ನೇ ವರ್ಷವು ಪ್ರಾರಂಭವಾದ ಮೇಲೆ ನಡೆದ ಕಾರಣ ಬಜೆಟ್ಟನ್ನು ಮಂಜೂರು ಮಾಡಲು ಬೋರ್ಡಿನವರು ಇಷ್ಟು ತಡವಾಗಿ ಸೇರಬೇಕಾಯಿತು. ಬೋರ್ಡಿನ ಆದಾಯವು ಅದರ ನ್ಯಾಯವಾದ ವೆಚ್ಚಕ್ಕೆ ಸಾಕಷ್ಟು ಇಲ್ಲ. ಆದರೆ ಈ ವರ್ಷದ ಒಟ್ಟು ಆದಾಯ ರೂ. 1,62,011-ರಲ್ಲಿ ಮುಖ್ಯವಾದವು ಯಾವುವೆಂದರೆ- ಡಿ. ಬೋರ್ಡಿನ ಸೆಸ್ಸಿನ ಆದಾಯ ರೂ. 66,600; ವ್ಯವಸಾಯಗಾರರಿಂದ ಬರತಕ್ಕ ಆದಾಯ ರೂ. 8,900; ವಿದ್ಯಾ ಇಲಾಖೆಯ ಆದಾಯ ರೂ. 2,900; ವಿದ್ಯಾ ಇಲಾಖೆಗೆ ಸರ್ಕಾರದ ವಂತಿಗೆ ರೂ. 22,720; ಮೋಟಾರು [illegible] ರೂ. 11,6[illegible]; [illegible] ರೂ. 3,400; [illegible] ರೂ. 4,282; ಸುಂಕದ ಕಟ್ಟೆಗಳಿಂದ ರೂ. 10,965; ದೋಣಿ ಕಡವುಗಳಿಂದ ರೂ. 1,400; ಮೋಟಾರು ತೆರಿಗೆಯ ಬಾಬ್ತು ಸರ್ಕಾರದಿಂದ ವಂತಿಗೆ ರೂಪಾಯಿ 20,000; ಪಿ. ಡಬ್ಲ್ಯು. ಇಲಾಖೆಗೆ ಸರ್ಕಾರದ ವಂತಿಗೆ ರೂ. 7,000; ಹಿಂದಿನ ವರ್ಷದ ಉಳಿತಾಯ ರೂ. 24,629; ವೆಚ್ಚದಲ್ಲಿ ಮುಖ್ಯವಾದ ಬಾಬುಗಳು-ಆಫೀಸು ಸಿಬ್ಬಂದಿ, ಮೆಂಬರುಗಳ ಪ್ರಯಾಣದ ಭತ್ಯ ವಗೈರೆ ರೂ. 8,736; ದೊಡ್ಡಿಗಳಿಗೆ ರೂ. 1,450; ವಿದ್ಯಾ ಇಲಾಖೆಗೆ ರೂ. 81,700; ವೈದ್ಯ ಇಲಾಖೆಗೆ ರೂ. 41,007; ಪೆನ್ಶನ್ ವಗೈರೆ ರೂ. 4,300; ಗ್ರಾಮಾಂತರ ರಸ್ತೆಗಳಿಗೆ ರೂ. 10,000; ದೋಣಿ, ಕಾಲುವೆ ವಗೈರೆಗೆ ರೂ. 4,300; ಪಿ. ಡಬ್ಲ್ಯು. ಇಲಾಖೆಗೆ ರೂ. 18,762; ಗ್ರಾಮ ಪಂಚಾಯಿತಿಗಳಿಗೆ ವಂತಿಗೆ ರೂ. 1,500; ಒಟ್ಟು ಖರ್ಚು ರೂ. 1,75,335.

ಅಂದಾಜು ಬಜೆಟ್ಟಿನಲ್ಲಿ ಖರ್ಚು ಕಳೆದು ರೂ. 25,176 ಸಿಲ್ಕು ತೋರಿಸಲಾಗಿತ್ತು. ಇದರ ಪೈಕಿ ರೂ. 13,851 ಸರ್ಕಾರಿ ಪ್ರೊನೋಟು ಮತ್ತು ಇಂಡಿಯಾ ಸರ್ಕಾರದ ರೂಪಾಯಿ ಸಾಲದಲ್ಲಿ ಇಡಲ್ಪಟ್ಟಿದೆ. ನಿಬಂಧನೆ ಪ್ರಕಾರ ಖಚಿತವಾಗಿ ಇಡಬೇಕಾದ ರೂ. 10,000 ಉಳಿತಾಯಕ್ಕಾಗಿ ಇರುವ ಮೊಬಲಗು ಇದಾಗಿದೆ. ಇದನ್ನು ತೆಗೆದು ಉಳಿದ ಮೊಬಲಗು ರೂ. 11,325 ರಲ್ಲಿ ಸುಮಾರು ರೂ. 7,000 ಹೊಸ ಕೆಲಸಗಳಿಗಾಗಿ ಇಂದಿನ ಮೀಟಿಂಗಿನಲ್ಲಿ ಮಂಜೂರು ಮಾಡಲಾಗಿದೆ. ಇದರ ಪೈಕಿ ಬೋರ್ಡಿನಲ್ಲಿ ಈ ಮೊದಲು ಮಂಜೂರಾಗಿ, ಹಣದ ಅಭಾವದಿಂದ ಬಾಕಿ ಮಾಡಲ್ಪಟ್ಟಿದ್ದ ಕೆಲಸಗಳಿಗಾಗಿ ಸುಮಾರು ರೂ. 3,000 ಇರಿಸಲಾಗಿದೆ. ಉಳಿದದ್ದು ಮಾತ್ರ ಈಗ ಸೂಚಿಸಿದ ಹೊಸ ಕೆಲಸಗಳಿಗೆ ಇಟ್ಟದ್ದಾಗಿದೆ. ಈ ಮೊದಲು ಮಂಜೂರು ಮಾಡಿದ ಹಲವು ವಿಷಯಗಳಿಗೆ ಹಣವಿಲ್ಲದೆ ಸ್ಥಗಿತವಾಗಿ ಬಾಕಿ ಉಳಿಯಬೇಕಾಯಿತೆಂದೂ, ಈ ಮೀಟಿಂಗಿನಲ್ಲಿ ಚರ್ಚೆಗೆ ಇಡಲ್ಪಟ್ಟಿದ್ದ 110 ಠರಾವುಗಳಲ್ಲಿ ಬರೇ 35 ಠರಾವುಗಳ ವಿಷಯಗಳಿಗೆ ಮಾತ್ರ ಹಣ ಕೊಡಲು ಸಾಧ್ಯವಾಯಿತೆಂದೂ ತಿಳಿಯಬರುತ್ತದೆ. ಬೋರ್ಡಿನ ಮೀಟಿಂಗಿನಲ್ಲಿ ಚರ್ಚೆಗೆ ಬಂದ ವಿಷಯಗಳಿಗೆಲ್ಲಾ ಹಣ ಕೊಡಬೇಕಾದರೆ ಇನ್ನೂ ಸುಮಾರು 50,000 ರೂಪಾಯಿ ಬೇಕಾಗುವುದು. ಬೋರ್ಡಿನ ವೆಚ್ಚದಲ್ಲಿ ಇನ್ನೂ ಕಡಿಮೆ ಮಾಡುವ ಹಾಗಿದ್ದರೆ ಗ್ರಾಮಾಭಿವೃದ್ಧಿಯ ಕೆಲಸಗಳನ್ನು ಕಡಿಮೆ ಮಾಡಬೇಕಾಗುವುದು. ಯಾಕೆಂದರೆ ಬೋರ್ಡಿನ ವೆಚ್ಚವೆಂದರೆ ಮುಖ್ಯವಾಗಿ ಗ್ರಾಮಾಂತರ ಶಾಲೆ, ರಸ್ತೆ, ಆಸ್ಪತ್ರೆ ಇವುಗಳಿಗಾಗಿ ಮಾಡುವ ಖರ್ಚಾಗಿದೆ. ಇವುಗಳನ್ನು ಕಡಿಮೆ ಮಾಡುವುದು ಉಚಿತವಲ್ಲ. ಬೋರ್ಡಿನ ಆಫೀಸು ಸಿಬ್ಬಂದಿಗಾಗಿ ಖರ್ಚಾಗುವ ಮೊಬಲಗು ಹೆಚ್ಚಾಗಿಲ್ಲ. ಬೋರ್ಡಿನ ಆದಾಯವನ್ನು ಹೆಚ್ಚಿಸುವದೆಂದರೆ ತತ್ಕಾಲ ಆರ್ಥಿಕ ಹೀನ ಸ್ಥಿತಿಯಲ್ಲಿ ನರಳುತ್ತಿರುವ ಜನರ ಮೇಲೆ ಹೆಚ್ಚಿನ ತೆರಿಗೆಯನ್ನು ಹೊರಿಸಲು ಸಾಧ್ಯವಿಲ್ಲದ ವಿಷಯವಾಗಿದೆ. ಅಂದ ಮೇಲೆ ಸರ್ಕಾರದವರಿಂದ ಹೆಚ್ಚಿನ ವಂತಿಗೆಯನ್ನು ಪಡೆಯುವದೊಂದೇ ತತ್ಕಾಲದ ದಾರಿಯಾಗಿದೆ. ಈ ಸಂಬಂಧವಾಗಿ ಬೋರ್ಡಿನಲ್ಲಿ ಒಂದು ಠರಾವು ಪಾಸಾದದ್ದು ಯೋಗ್ಯವಾಗಿದೆ. ಈಗ ಸರ್ಕಾರದವರು ನೂರೂರು ಐವತ್ತು ಸಾವಿರ ರೂಪಾಯಿ ವಂತಿಗೆ ಕೊಡುತ್ತಿರುವರು. ಸ್ಥಳೀಯ ಸರ್ಕಾರದವರೇ ತಮ್ಮ ಬಜೆಟನ್ನು ಸರಿಪಡಿಸಲು ಸಿಬ್ಬಂದಿ ಕಡಿತ ಮಾಡುವ ಪ್ರಯತ್ನದಲ್ಲಿರುವಾಗ್ಯ ಡಿ. ಬೋರ್ಡಿಗೆ ಹೆಚ್ಚಿನ ವಂತಿಗೆ ಕೊಡುವದಾದರೂ ಹೇಗೆಂದು ಸಂಶಯ ಹುಟ್ಟಬಹುದು. ಸ್ಥಳೀಯ ಸರ್ಕಾರದವರು ತಮ್ಮ ಬಜೆಟನ್ನು ಕೇಂದ್ರದವರಿಗೆ ತೃಪ್ತಿಕರವಾಗುವಂತೆ ನಡಿಸಬೇಕಾದರೆ ಇಂಡಿಯಾ ಸರ್ಕಾರದಿಂದ ಹೆಚ್ಚಿನ ವಂತಿಗೆ ಪಡೆಯಬೇಕಾಗುತ್ತದೆ. ಅಂದ ಮೇಲೆ, ಆಗ ಸ್ಥಳೀಯ ಸರ್ಕಾರದವರು ಗ್ರಾಮಾಂತರ ಜನರಿಗೆ ಬಹು ಪ್ರಯೋಜನಕರವಾದ ಕೆಲಸಗಳನ್ನು ಮಾಡುತ್ತಿರುವ ಸ್ಥಳೀಯ ಸ್ವರಾಜ್ಯ ಸಂಸ್ಥೆಯಾದ ಡಿಸ್ಟ್ರಿಕ್ಟ್ ಬೋರ್ಡಿಗೆ ತಕ್ಕ ಸಹಾಯವನ್ನು ಕೊಡಲು ಮರೆಯಬಾರದು.

ಹಿಂದೀ ವಿರೋಧ ಚಳವಳಿ. ಅಜಾದರ ಅಭಿಪ್ರಾಯ.

ಪಾರ್ಲಿಮೆಂಟರಿ ಕಮಿಟಿಯ ಸದಸ್ಯರಾದ ಅಬ್ದುಲ್ ಕಲಾಂ ಆಜಾದರನ್ನು ಹಿಂದೂ ಪತ್ರಿಕೆಯ ಪ್ರತಿನಿಧಿಯು ಹಿಂದೀ ವಿರೋಧ ಚಳವಳಿಯನ್ನು ಕುರಿತು ಕೇಳಿದಾಗ:

'ಮದ್ರಾಸು ಅಧಿವೇಶನದ ಕೆಲವೆಡೆಗಳಲ್ಲಿ ಕೆಲವು ಮಂದಿ ರಾಷ್ಟ್ರ ವಿರೋಧಿಗಳು ರಾಷ್ಟ್ರ ಭಾಷೆಗೆ ವಿರೋಧ ಚಳವಳಿಯನ್ನು ನಡೆಸುತ್ತಿರುವುದು ಅರ್ಥವಿಲ್ಲದ ಪ್ರಯತ್ನವೆಂದು ನನಗನ್ನಿಸುತ್ತದೆ. ಈ ಚಳವಳಿಯು ಅನಾವಶ್ಯಕವಿದ್ದು ಪ್ರಾಂತ್ಯದಲ್ಲಿಯ ರಾಷ್ಟ್ರೀಯ ಭಾವನೆಯ ಜನರು ಇದನ್ನು ಶೀಘ್ರದಲ್ಲಿಯೇ ಅಂತ್ಯಗೊಳಿಸಲೆತ್ನಿಸುವುದು ಆವಶ್ಯವಿರುತ್ತದೆ. ಹಿಂದೂಸ್ಥಾನೀ ಭಾಷೆಯನ್ನು ಶಾಲೆಗಳಲ್ಲಿ ಕಲಿಸುವುದರಿಂದ ಮಾತೃಭಾಷೆಯ ಪ್ರಚಾರಕ್ಕೆ ಕುಂದು ಬರುವುದೆಂದು ತರ್ಕಿಸುವ ಈ ಜನರಿಗೆ ಇತಿಹಾಸ ಜ್ಞಾನವಿಲ್ಲವೆಂದೇ ಹೇಳಬೇಕಾಗುತ್ತದೆ. ಜನರ ಮಾತೃಭಾಷೆಯ ಸಹಜಸ್ಥಾನವನ್ನೂ ಪ್ರಧಾನ್ಯತೆಯನ್ನೂ ಹೋಗಲಾಡಿಸುವುದು ಸಾಧ್ಯವಿಲ್ಲದ ಮಾತು. ಮೂರು ಶತಮಾನಗಳ ಬ್ರಿಟಿಷರ ಆಡಳಿತೆಯಿಂದ ಕೂಡ ಹಿಂದೂಸ್ಥಾನದ ಯಾವದೇ ಭಾಗದಲ್ಲಿ ಅಲ್ಲಿಯ ಮಾತೃಭಾಷೆಯ ಬದಲು ಇಂಗ್ಲಿಷನ್ನು ಪ್ರಚಾರಪಡಿಸಲು ಸಮರ್ಥವಾಗಿಲ್ಲ, ಇಂಥ ಹೆದರಿಕೆಯ ಅವಶ್ಯಕತೆ ಇರುವುದಿಲ್ಲ.

ಇಂಗ್ಲೀಷಿನ ಬದಲು ಹಿಂದುಸ್ಥಾನದ ಒಂದು ಮಾತೃಭಾಷೆಯನ್ನು ರಾಷ್ಟ್ರಭಾಷೆಯನ್ನಾಗಿ ಮಾಡಲು ಕಾಂಗ್ರೆಸು ಪ್ರಯತ್ನಿಸುತ್ತಿದೆ. ಈ ದೇಶದಲ್ಲಿ ಹೆಚ್ಚಿನ ಜನರು ಹಿಂದೂಸ್ಥಾನಿಯನ್ನು ಮಾತಾಡುತ್ತಾರೆ. ಇದೇ ದೇಶಕ್ಕೆ ಇದನ್ನೇ ಸಾಮಾನ್ಯ ಭಾಷೆಯಾಗುವಂತೆ, ಆದರಿಂದಲೇ ಆಯ್ಕೆಸಲಾಗುತ್ತಿದೆ.

ಮದ್ರಾಸು ಸರಕಾರವನ್ನು ಮತ್ತು ಅವರ ಮುಖ್ಯ ಮಂತ್ರಿ ಶ್ರೀ. ಸಿ. ರಾಜಗೋಪಾಲಾಚಾರ್ಯರನ್ನು ಅಧಿಕಾರ ಸ್ವೀಕಾರದ ಒಂದು ವರ್ಷದೊಳಗೆ ಈ ವಿದ್ಯಾ ಸುಧಾರಣೆಗೆ ಧೈರ್ಯದಿಂದ ಕೈಹಾಕಿದ ಬಗ್ಗೆ ಪೂರ್ಣ ಬೆಂಬಲಕೊಟ್ಟು ಅಭಿನಂದಿಸಬೇಕು. ಹಿಂದೂಸ್ಥಾನಿಯು ಇನ್ನು ಹಿಂದೆ ಬೀಳುವ ಸಂಭವವಿಲ್ಲ, ದಿನಂಪ್ರತಿ ಅದರ ಭಕ್ತರು ಹೆಚ್ಚುತ್ತಲೇ ಇದ್ದಾರೆ.

ದಕ್ಷಿಣ ಭಾರತದ ಜನರು ಯಾವಾಗಲೂ ಪ್ರಗತಿಪರ ಭಾವನೆಗಳುಳ್ಳವರೆಂದು ಹೆಸರು ಪಡೆದವರು. ಬೇರೆಲ್ಲಾ ಪ್ರಾಂತ್ಯಗಳಿಗಿಂತ ಇಲ್ಲಿಯ ಜನರು ಚುನಾವಣೆಗಳಲ್ಲಿ ಹೆಚ್ಚಿಗೆ ಕಾಂಗ್ರೆಸ್ ಸದಸ್ಯರನ್ನು ಆರಿಸಿರುವರೆಂಬುದಕ್ಕಿಂತ ಹೆಚ್ಚಿನ ನಿದರ್ಶನವು ಬೇಕಾಗಿಲ್ಲ. ಇಂಥ ಜನರು ದಕ್ಷಿಣ ಭಾರತದ ಹಿಂದೀ ಚಳವಳಿಕ್ಕೆ ಹಾಗೂ ಮದ್ರಾಸು ಮಂತ್ರಿಗಳ ಪ್ರಗತಿಪರ ಧೋರಣೆಕ್ಕೆ ಪೂರ್ಣ ಬೆಂಬಲಕೊಡುವರೆಂದು ನಿರೀಕ್ಷಿಸುತ್ತೇನೆ.'

ಹಿಂದೂಸ್ಥಾನದಲ್ಲಿ ಹೊಸ ಶಕ್ತಿ ಉದಯಿಸಿದೆ.

ಅಲಹಾಬಾದಿನ ಫಿನ್ಲೆಟರ್ ಟೌನ್ ಹಾಲ್‌ನಲ್ಲಿ ನಡೆದ ಒಂದು ಬಹಿರಂಗ ಸಭೆಯಲ್ಲಿ ಪಂಡಿತ ಜವಾಹರ್‌ಲಾಲ್ ನೆಹರೂರವರು ಮಾತಾಡುತ್ತಾ ಹೀಗೆಂದರು:

ಹಿಂದೀ ರೈತರು ಜಾಗ್ರತರಾಗಿರುವರು. ಅವರು ತಮ್ಮ ಬಲವನ್ನು ಅರಿತುಕೊಂಡಿರುವ ಪ್ರಯುಕ್ತ ದೇಶದಲ್ಲಿ ಹೊಸ ಶಕ್ತಿಯೊಂದು ಉದಯಿಸಿದೆ. ಈಗಿನವರೆಗೆ ಯಾವ ಧ್ಯೇಯವನ್ನಿಟ್ಟು ನಾವು ಪ್ರಯತ್ನಪಡುತ್ತಿದ್ದೆವೋ ಅದೇ ಮಹಾಶಕ್ತಿಯು ಉದಯಿಸಿದೆ. ಭಾರತದ ಜೀವಾಳವು ಇಂದು ಜನತೆಯಲ್ಲಿ ವ್ಯಕ್ತವಾಗುತ್ತಿದೆ. ಜಗತ್ತಿನ ಪ್ರಶ್ನೆಗಳ ದೃಷ್ಟಿಯಿಂದ ದೇಶದ ಪ್ರಶ್ನೆಗಳನ್ನು ಎದುರಿಸುವ ಮೂಲ ಬಲವು ಭಾರತಕ್ಕೆ ಇಂದು ಇದೆ. ಅದ್ದರಿಂದಲೇ ಇಂದು ಭಾರತಕ್ಕೆ ಈ ಪ್ರಾಧಾನ್ಯತೆ ಬರಲು ಕಾರಣ. ರಾಜಕೀಯ ರಂಗದಲ್ಲಿ ಬಲಯುತವಾದ ರಾಷ್ಟ್ರಗಳನ್ನು ಜನರು ಹೊಗಳುತ್ತಾರೆ. ಅಂತೆಯೇ ಹಿಂದೂಸ್ಥಾನವೂ ಇಂದು ಒಂದು ಶಕ್ತಿವಂತ ರಾಷ್ಟ್ರವೆಂಬುವನ್ನು ಯಾರೂ ಮರೆಯಬಾರದು. ಫೆಡರೇಶನಿನ ವಿಚಾರದಲ್ಲಿ ಅದಕ್ಕೆ ನನ್ನ ಹೃದಯದಲ್ಲಿ ಕೊಂಚ ಸ್ಥಳ ಮಾತ್ರ ಇದೆ. ಹಿಂದೂಸ್ಥಾನವು ಇಂದು ಎಲ್ಲಾ ಪ್ರಶ್ನೆಗಳನ್ನೂ ಸ್ವಾತಂತ್ರ್ಯ ದೃಷ್ಟಿಯಿಂದಲೇ ನೋಡುತ್ತಿದೆ. ನಮಗೀಗ ಬೇಕಾದದ್ದು ಯಾವುದೂ ಸಂಪೂರ್ಣ ಸ್ವಾತಂತ್ರ್ಯವೇ ಆಗಿದೆ.

ಷ್ಟು ಗೋಪ್ಯವಿದ್ದರೂ ರಾಜನು ಏನು ತಿಳಿದುಕೊಂಡು ಬಿಡುವನೋ ಎಂದು ಅವನನ್ನು ಯಾವಾಗಲೂ ಸಮಾಧಾನ ಪಡಿಸಲಿಲ್ಲ. ಐವತ್ತರಲ್ಲಿ ರಾಜನೇ ಸುಬ್ಬಯ್ಯನನ್ನು ಕರೆ ಕಳುಹಿಸಿದನು. ಸುಬ್ಬಯ್ಯನಿಗೆ ಇನ್ನೇನು ಹೊಸ ವಿಪತ್ತು ಬರುವುದೋ ಎಂದು ಅಂಜಿಕೊಂಡು ರಾಜ ಸನ್ನಿಧಾನಕ್ಕೆ ಹೋದನು. ರಾಜನು ಅವನನ್ನು ನೋಡಿದ ಕೂಡಲೇ 'ಏನು ಸುಬ್ಬಯ್ಯಾ, ಏನೇನು ಯೋಚನೆಯಲ್ಲಿರುವಂತೆ ಕಾಣುತ್ತದೆ. ನಾನೇನು ನಿನ್ನ ಮಗಳನ್ನು ಕೊಲ್ಲಿಸಿಬಿಡುವೆನೆಂದು ಯೋಚಿಸಿದೆಯಾ? ಎಂದು ಕೇಳಿದನು.

ಸುಬ್ಬಯ್ಯ—ಇಲ್ಲ, ಮಹಸ್ವಾಮಿ, ಆದರೂ ನಮಗೆ ಇರುವುದು ಒಬ್ಬಳೇ ಮಗಳು ಎನ್ನುವಿರಲ್ಲ. ಅವಳನ್ನು ಬಿಟ್ಟು ಒಂದು ದಿವಸವಾದರೂ ಜೀವಿಸಿರಲಾರೆನೆಂದು ನಮ್ಮಾಕೆಯು ಅತ್ತುಕೊಂಡು ಕುಳಿತಿರುವಳು.

ಲಿಂಗರಾಜ—ಅಷ್ಟೇನೂ ಬೇಸರಬೇಡ. ನಿನ್ನ ಹೆಂಡತಿಯು ಆಗಾಗ ಇಲ್ಲಿಗೆ ಬಂದು ನೋಡಿಕೊಂಡು ಹೋಗಲಿ. ಬೇಕಾದಾಗ ಅರಮನೆ ಪಲ್ಲಕ್ಕಿಯನ್ನು ಕಳಿಸಿಕೊಡು ಹೋಗಿ ನೀನೆ ನಿನ್ನ ಹೆಂಡತಿಯನ್ನು ಅರಮನೆಗೆ ಕರೆದುಕೊಂಡು ಬಾ. ನಿನ್ನ ಮಗಳನ್ನು ಇಲ್ಲಿಯೇ ಸಾಕಿ ಯುವರಾಜನಿಗೆ ಪಟ್ಟದ ರಾಣಿಯಾಗಿ ಮಾಡುವೆನು. ಅದಕ್ಕಿಂತ ನಿನ್ನ ಮಗಳಿಗೆ ಸದವಿ ಇನ್ನೇನು ಬೇಕು?

ಸುಬ್ಬಯ್ಯನಿಗೆ ಈ ಮಾತಿಗೆ ಪ್ರತ್ಯುತ್ತರ ಕೊಡಲು ಧೈರ್ಯ ಬರಲಿಲ್ಲ. ಆತನಿಗೆ ತನ್ನ ಮಗಳನ್ನು ಲಿಂಗಾಯಿತ ರಾಜನ ಮಗನಿಗೆ ಕೊಡಲು ಇಷ್ಟವಿರಲಿಲ್ಲ. ಬಡವನಾದರೂ ಸ್ವಜಾತಿಯ ವರನಿಗೆ ಗೌರಮ್ಮನನ್ನು ಕೊಡಬೇಕೆಂದು ಸುಬ್ಬಯ್ಯನ ಮತ್ತು ಆತನ ಪತ್ನಿಯ ಅಭಿಮತವಿತ್ತು. ಸುಬ್ಬಯ್ಯನು ಕೊಡಗಿನ ಹವ್ಯಕ ಬ್ರಾಹ್ಮಣ ಸಮುದಾಯಕ್ಕೆ ಆ ಬ್ರಾಹ್ಮಣರ ಪಾರಂಪರಿಕ ಕಟ್ಟಳೆಯಿಂದ ನಿಯಮಿಸಲ್ಪಟ್ಟ ಧರ್ಮಾಧಿಕಾರಿಯಾಗಿದ್ದನು. ಹೀಗಿರುವಲ್ಲಿ ತನ್ನ ಮಗಳೇ ಲಿಂಗಾಯಿತ ರಾಜನ ಪತ್ನಿಯಾದರೆ ತನ್ನ ಬಂಧುಗಳೂ, ಸ್ವಜಾತಿಯವರೂ ತನಗೇನನ್ನು ಅನುವರೆಂದು ಆತನಿಗೆ ಚಿಂತೆಯಾಯಿತು. ಇದೂ ಅಲ್ಲದೆ ತನ್ನ ಮಗಳು ಯುವರಾಜನನ್ನು ಮದುವೆಯಾಗಿ ಸುಖದಿಂದಿರುವಳೋ, ಆತನ ಬಹು ಪತ್ನಿಯರಲ್ಲಿ ಇವಳು ಕ ತಿಯಿಂದ ಪ್ರೀತಿಸಲ್ಪಡುವಳೋ ಇಲ್ಲವೋ ಎಂಬ ಚಿಂತೆಯು ಅವನನ್ನು ಬಾಧಿಸತೊಡಗಿತು.

ಸುಬ್ಬಯ್ಯನು ಏನೂ ಮಾತನಾಡದೆ ಇರುವುದನ್ನು ನೋಡಿ, ಲಿಂಗರಾಜೇಂದ್ರನು 'ಸುಬ್ಬಯ್ಯ, ನೀನೇನೂ ಯೋಚಿಸಬೇಡ, ಬಾ ನಿನ್ನ ಮಗಳು ಅರಮನೆಯೊಳಗೆ ಎಷ್ಟು ಸಂತೋಷದಿಂದಿರುವಳೆಂದು ನೋಡು' ಎಂದು ಅರಮನೆಯೊಳಗೆ ಒಂದೆ ಕೋಣೆಗೆ ಕರೆದುಕೊಂಡು ಹೋದನು. ಅಲ್ಲಿ ಲಿಂಗರಾಜನ ಪತ್ನಿಯರ ಜೊತೆಯಲ್ಲಿ, ನೀಲವರ್ಣದ ಸೀರೆಯನ್ನುಟ್ಟು, ಗೌರಮ್ಮನು ಬಹು ಸಂತೋಷದಿಂದ ಪ್ರಕಾಶಿಸುತ್ತ ಕುಳಿತುಕೊಂಡು ಅವಳಿಗೆ ಸೀರೆ, ಒಡವೆಗಳ

ನ್ನು ತೋರಿಸುತ್ತಿದ್ದರು. ಗೌರಮ್ಮನು ಆ ಲಾವಣ್ಯದ ಅಂಚಿನ ಸೀರೆಯನ್ನುಟ್ಟು ಆ ಲಾವಣ್ಯದ ಕಣದ ಕುಪ್ಪಸವನ್ನು ತೊಟ್ಟಿದ್ದಳು. ಕೊರಳಿನಲ್ಲಿ ನೆಲಕ್ಕೆ ರತ್ನಗಳ ಸರ ಹಾಕಿದ್ದರು. ಸೊಂಟದಲ್ಲಿ ಚಿನ್ನದ ಒಡ್ಯಾಣ ಒಡವೆಗಳನ್ನು ಹಾಕಿದ್ದರು. ಲಿಂಗರಾಜನ ಮತ್ತು ಸೀರೆಯಾಭರಣ ಎರಡು ಪಡಿಗಳನ್ನು ತೂಗಹಾಕಿದ್ದರು.

ರಾಜನೂ, ಸುಬ್ಬಯ್ಯನೂ ಆ ಕೋಣೆಗೆ ಹೋಗಲು ಆ ಹೆಣ್ಣು ಮಕ್ಕಳೆಲ್ಲಾ ಕ ಲೆಯುತ್ತಿ ಅವರನ್ನು ನೋಡಿದರು. ಗೌರಮ್ಮನು ಸುಬ್ಬಯ್ಯನನ್ನು ನೋಡಿ ಮುಗುಳು ನಗು ನಕ್ಕಳು. ಲಿಂಗರಾಜನು ಅವಳನ್ನು ನೋಡಿ 'ಏನಮ್ಮಾ, ಇಲ್ಲೇ ಇರುತ್ತೀಯೋ ಅಥವಾ ನಿನ್ನ ತಂದೆಯೊಡನೆ ನಿನ್ನ ಮನೆಗೆ ಹೋಗುತ್ತೀಯೋ' ಎಂದು ಕೇಳಿದನು. ಗೌರಮ್ಮನು ಅರಮನೆಯ ಶ್ರೇಷ್ಠ ವಸ್ತ್ರಾಭರಣಗಳನ್ನೂ, ಅಲ್ಲಿನ ಪಾ ನಾನಾಂಗನೆಯರನ್ನೂ ನೋಡಿ ಬೆರಗಾಗಿ ಹೋಗಿದ್ದಳು. ಹಿಂದಿನ ರಾತ್ರಿ ಲಿಂಗರಾಜನ ಪತ್ನಿಯರು ಅವಳನ್ನು ಬಹಳ ಪ್ರೀತಿಯಿಂದ ಲಾಲಿಸಿದ್ದರು. ಆದುದರಿಂದ ಲಿಂಗರಾಜನ ಪ್ರಶ್ನೆಗೆ 'ನಾನು ಇಲ್ಲಿಯೇ ಇರುತ್ತೇನೆ' ಎಂದು ಉತ್ತರವನ್ನು ಕೊಟ್ಟಳು. ರಾಜನ ಎದುರಿನಲ್ಲಿ ಸುಬ್ಬಯ್ಯನಿಗೆ ತನ್ನ ಮಗಳ ಮನವನ್ನು ತಿರುಗಿಸಲು ಸಾಧ್ಯವಿರಲಿಲ್ಲ. ರಾಜನು 'ಸುಬ್ಬಯ್ಯ, ಅವಳು ನಿನ್ನ ಮಗಳೇ ಆದರೂ ನಿನ್ನ ಹೆಂಡತಿಯು ನೋಡಬೇಕೆನಿಸಿದಾಗ ಬಂದು ಅವಳನ್ನು ನೋಡಿಕೊಂಡು ಹೋಗಲಿ, ನೀನು ಚಿಂತಿಸಬೇಡ' ಎಂದು ಹೇಳಿ ಪ್ರಾರ್ಥನಾ ಮಂದಿರಕ್ಕೆ ಬಂದನು.

ಸುಬ್ಬಯ್ಯನು ಅಲ್ಲಿಂದ ಕಣ್ಣೀರಿನಿಂದ ಒಂದು ದೀರ್ಘ ನಿಟ್ಟುಸಿರಿನಿಂದ ಬೇಗನೆ ಹಿಂತಿರುಗಿ ಮನೆಗೆ ಬಂದು ತನ್ನ ಪತ್ನಿಯಲ್ಲಿ ನಡೆದ ವಿಷಯವನ್ನೆಲ್ಲಾ ಹೇಳಿದನು. ಆಗ ಆಕೆಯು 'ನಮ್ಮ ಮಗಳು ಜಾತಿಯಿಂದ ಹೊರಗೆ ಹೋಗಿ ಏನಾದರೂ ಫಲ ನಮ್ಮ ಜಾತಿಯ ಆ ಜನರ ಕೈಕಳಗೆ ಇರಬೇಕಾದೀತು. ನಮ್ಮ ಇಲ್ಲಿಂದ ದೂರ ಬೇರೆ ಎಲ್ಲಿಯಾದರೂ ಹೋಗೋಣ' ಎಂದಳು. ಸುಬ್ಬಯ್ಯನೂ ಇಲ್ಲೇ ಇದ್ದರೆ ಬಾರದು, ಆದರೆ ರಾಜನ ಆಳ್ವಿಕೆಯಲ್ಲಿ ಮಡಿಕೇರಿಯಿಂದ ಹೊರಟು ಹೋಗುವುದಕ್ಕೂ ಪರವಾನಗಿ ಬೇಕು. ಅದರ ಕಾರಣ ಅಪಾಯವೂ ಬರಬಹುದೆಂಬ ಭೀತಿಯೂ ಆಗುತ್ತಿತ್ತು. ಸುಬ್ಬಯ್ಯನಿಗೆ ತಾನೂ ತನ್ನ ಕುಟುಂಬವೂ ದೇಶವನ್ನು ಬಿಟ್ಟು ಹೋಗುವುದಕ್ಕೆ ಪರವಾನಗಿಯು ಸಿಗುವುದೇ? ಅದಕ್ಕೆ ಅವನು ರಾಮೇಶ್ವರ ತೀರ್ಥಯಾತ್ರೆಗೆ ಹೋಗುವುದಕ್ಕೆ ತಮಗೆ ರಹದಾರಿ ಕೊಡಬೇಕೆಂದು ರಾಜನನ್ನು ಕೇಳಿದನು. ಇನ್ನಿಲ್ಲ ರಾಜನಿಗೆ ತನ್ನ ಬೀಗಧಿಕಾರದ ಮೇಲೆ ಅವನು ರಾಮೇಶ್ವರಕ್ಕೆ ಹೋಗುವ ನೆಪದಿಂದ ತನ್ನ ರಾಜ್ಯವನ್ನೇ ಬಿಟ್ಟು ಹೋಗಬೇಕೆಂದಿರುವನೆಂದು ತಿಳಿಯಿತು. ರಾಜನಿಗೆ ಸುಬ್ಬಯ್ಯನು ದೇಶವನ್ನು ಬಿಟ್ಟು ಹೋಗುವುದು ಇಷ್ಟವಿರಲಿಲ್ಲ. ಸುಬ್ಬಯ್ಯನು ರಾಜನಲ್ಲಿ ಮುಖ್ಯ ಅಧಿಕಾರಿಯಾಗಿದ್ದನು ಮತ್ತು ಬಹಳ ಪ್ರಮಾಣಿಕನಾಗಿದ್ದನು. ಬರವಣಿಗೆಯಲ್ಲಿಯೂ ರಾಜಕೀಯದಲ್ಲಿಯೂ, ಯುದ್ಧ ವಿದ್ಯೆಯ

ಲ್ಲಿಯೂ ನಿಪುಣನಾಗಿದ್ದನು. ಆದುದರಿಂದ ರಾಜನು ಸುಬ್ಬಯ್ಯನಿಗೆ ಮಕ್ಕಳನ್ನು ಮಡಿಕೇರಿಯಲ್ಲಿಯೇ ಬಿಟ್ಟು ಆತನೂ, ಆತನ ಪತ್ನಿಯೂ ಇಬ್ಬರೇ ರಾಮೇಶ್ವರಕ್ಕೆ ಹೋಗಿ ಎರಡು ತಿಂಗಳಲ್ಲಿ ಬರಬೇಕೆಂದು ಅಪ್ಪಣೆ ಮಾಡಿದನು. ಆಗ ಸುಬ್ಬಯ್ಯನಿಗೆ ರಾಜನ ಅಪ್ಪಣೆಯನ್ನು ಮೀರುವುದಕ್ಕಾಗದೆ ತನ್ನ ಗಂಡು ಮಕ್ಕಳನ್ನು ಮಡಿಕೇರಿಯಲ್ಲಿಯೇ ಬಿಟ್ಟು ತಾವು ಗಂಡ ಹೆಂಡತಿಯರು ರಾಮೇಶ್ವರಕ್ಕೆ ಹೋಗಿ ಯಾತ್ರೆಯನ್ನು ಮುಗಿಸಿಕೊಂಡು ಎರಡು ತಿಂಗಳಲ್ಲಿ ಹಿಂದಕ್ಕೆ ಬಂದರು.

ಇವರು ಮಡಿಕೇರಿಗೆ ಬಂದನಂತರ ಗೌರಮ್ಮನನ್ನು ನೋಡುವುದಕ್ಕೆ ಅವಳ ತಾಯಿಯು ಅರಮನೆಗೆ ಆಗಾಗ ಹೋಗುತ್ತಿದ್ದಳು. ಹೀಗಿರಲು ಕ್ರಿ. ಶ. 1820ರಲ್ಲಿ ಲಿಂಗರಾಜನು ಮೃತನಾದನು. ತಂದೆಯು ಸ್ವರ್ಗಸ್ಥನಾದ ಒಂದು ವರ್ಷದ ಮೇಲೆ ವೀರರಾಜನು ಗೌರಮ್ಮನನ್ನು ವಿವಾಹವಾದನು. ಆಗ ಗೌರಮ್ಮನು ಪ್ರಾಯಕ್ಕೆ ಬಂದಿದ್ದಳು. ಗೌರಮ್ಮನು ತನ್ನ ತಾಯಿಯನ್ನು ಅರಮನೆಗೆ ಹಬ್ಬ ಅಥವಾ ಇತರ ವಿಶೇಷ ದಿವಸಗಳಲ್ಲಿ ಕರೆಸಿ ಅವಳಿಗೆ ಕಲಾಬತ್ತಿನ ಅಂಚಿನ ರೇಷ್ಮೆ ಸೀರೆಗಳನ್ನೂ ಕುಪ್ಪಸ ತೊಡವುದುವುಗಳನ್ನು ಕೊಡುತ್ತಿದ್ದಳು. ಆದರೆ ಅವಳಿಗೆ ಸುಬ್ಬಯ್ಯನಿಗೆ ಮತ್ತು ಆತನ ಗಂಡು ಮಕ್ಕಳಿಗೆ ಅವಳನ್ನು ನೋಡುವ ಅವಕಾಶವಿರಲಿಲ್ಲ. ಇವಳು ಮಾತ್ರ ಅರಮನೆಯ ಉಪ್ಪರಿಗೆಯ ಪರದೆಯ ಹಿಂಭಾಗದಲ್ಲಿ ಕುಳಿತುಕೊಂಡಿದ್ದು ಸುಬ್ಬಯ್ಯನೂ ಆತನ ಮಗ ತಿಮ್ಮಪ್ಪಯ್ಯನೂ ಅರಮನೆಗೆ ರಾಜ ಸಂದರ್ಶನಕ್ಕೆ ಬರುತ್ತಿದ್ದಾಗ 'ಇವರು ನನ್ನ ತಂದೆ, ಇವನು ನನ್ನ ಅಣ್ಣ' ಎಂದು ತನ್ನ ಸಖಿಯರಿಗೆ ತೋರಿಸುತ್ತಿದ್ದಳಂತೆ.

ಹೀಗೆ ಕೆಲವು ವರ್ಷಗಳು ಕಳೆದವು. ಅಷ್ಟರಲ್ಲಿ ವೀರರಾಜನು ಬ್ರಿಟಿಷರಿಗೆ ವಿರೋಧವಾಗಿ ವರ್ತಿಸುತ್ತಿದ್ದುದರಿಂದ ಬ್ರಿಟಿಷರು ಅವನನ್ನು ಕ್ರಿ. ಶ. 1834ರಲ್ಲಿ ಸಿಂಹಾಸನದಿಂದ ಇಳಿಸಿದರು. ವೀರರಾಜನು ಕೊಡಗನ್ನು ಬಿಟ್ಟು ಕಾಶಿಗೆ ಹೋಗಬೇಕಾಯಿತು. ಆಗ ಅವನೊಡನೆ ಅವನ ಆರು ಹೆಂಡತಿಯರೂ ಹೊರಟರು. ಇವರಲ್ಲಿ ಗೌರಮ್ಮನೂ ಒಬ್ಬಳಾಗಿದ್ದಳು. ಇವಳು ಮಡಿಕೇರಿಯಿಂದ ಹೊರಡುವಾಗ ತನ್ನ ತಾಯಿಯನ್ನು ಕರೆಸಿ ಅವಳಿಗೆ ವಸ್ತ್ರಾಭರಣಗಳನ್ನು ಕೊಟ್ಟಳೆಂದು ಹೇಳುವರು. ಅವಳ ತಂದೆ, ಅಣ್ಣ, ಮತ್ತು ತಮ್ಮ ಇವರನ್ನು ಇವಳು ದೂರದಿಂದಲೇ ನೋಡಿ ತೃಪ್ತಿಪಡಬೇಕಾಯಿತು.

ಇವಳು ಕಾಶಿಗೆ ಹೋಗಿ ಹೆಚ್ಚು ಕಾಲ ಜೀವಿಸಲಿಲ್ಲ. ಒಂದೆರಡು ವರ್ಷಗಳಲ್ಲೇ ಸತ್ತು ಹೋದಳು. ಇವಳಿಗೆ ಮಕ್ಕಳಿರಲಿಲ್ಲ.

ಈ ಕಥೆಯನ್ನು ಈಗಿರುವ ಕರಣಿಕ ಸುಬ್ಬಯ್ಯನವರ ಕುಟುಂಬದ ಹಿರಿಯರಿಂದ ಕೇಳಿದು ಬರೆದಿದ್ದೇನೆ. ಈಗಿರುವ ಕರಣಿಕ ಸುಬ್ಬಯ್ಯನವರು ಗೌರಮ್ಮನ ಅಣ್ಣ ತಿಮ್ಮಪ್ಪಯ್ಯನ ಏಳನೆಯ ಮೊಮ್ಮಗ. ವೀರರಾಜನಿಗೆ ಕರಣಿಕ ಸುಬ್ಬಯ್ಯನ ಮಗಳ

ವಿವಾಹವಾದ ಸಂಗತಿಯು ರೈಸ್ ಮತ್ತು ರಿಕ್ಟರ್ ಸಾಹೇಬರು ಬರೆದ ಪುಸ್ತಕಗಳಲ್ಲಿ ಉಲ್ಲೇಖಿಸಲ್ಪಟ್ಟಿದೆ. ಅಲ್ಲಿ ಕೊಟ್ಟಿರುವ ವಿವರಗಳನ್ನು ಶ್ರೀ. ಶ್ಯಾಮರಾಯರವರು ಯುಗಧರ್ಮದ ಸಂಚಿಕೆಯಲ್ಲಿ ಬರೆದ ಲೇಖನದ ಸಹಾಯದಿಂದ ಬರೆದಿದ್ದೇನೆ.

ಲೆಕ್ಕಪತ್ರಗಳನ್ನು ಪರೀಕ್ಷಿಸಲು

ಬ್ಯಾಂಕುಗಳ ಒಪ್ಪಿಗೆ.

ಉಡುಪಿಯ ಕೆನರಾ ಬ್ಯಾಂಕಿಂಗ್ ಕಾರ್ಪೋರೇಶನ್ ಲಿಮಿಟೆಡ್, ಸಂಸ್ಥೆಯ ರಿಜರ್ವ್ ಬ್ಯಾಂಕಿನ ಡೆಪ್ಯುಟಿ ಗವರ್ನರರಿಗೆ ಒಂದು ತಂತಿ ವಾರ್ತೆ ಕಳುಹಿಸಲಾಗಿದೆಯೆಂದು ನಮಗೆ ತಿಳಿಸಲಾಗಿದೆ. 'ಮದ್ರಾಸು ಮುಖ್ಯ ಮಂತ್ರಿಯವರ ಸೂಚನೆಗೆ ಅನುಗುಣವಾಗಿ, ಈ ಬ್ಯಾಂಕಿಂಗ್ ಕಾರ್ಪೋರೇಶನ ಆಡಳಿತದವರು, ರಿಜರ್ವ್ ಬ್ಯಾಂಕಿನವರು ನೇಮಿಸುವ ಅಧಿಕಾರಿಯಿಂದ ತಮ್ಮ ಲೆಕ್ಕಪತ್ರಾದಿಗಳನ್ನು ಪರೀಕ್ಷಿಸಿಕೊಳ್ಳಲು ಒಪ್ಪಿಕೊಳ್ಳುವವರಾಗಿದ್ದಾರೆ. ಈ ವಿಷಯದಲ್ಲಿ ಶ್ರೀಮಾನ್ ಮುಖ್ಯ ಮಂತ್ರಿಯವರಿಗೂ ಸದರಿ ಬ್ಯಾಂಕಿನವರು ಪತ್ರ ಬರೆದುಕೊಂಡು, ಜನರಲ್ಲಿ ಅಕಾರಣದ ಭಯವನ್ನು ಹೋಗಲಾಡಿಸಲು ಮುಖ್ಯ ಮಂತ್ರಿಯವರ ಭಾಷಣವು ಯೋಗ್ಯವಾದ ಬ್ಯಾಂಕುಗಳಿಗೆ ಉತ್ತಮ ಸಮರ್ಥನವನ್ನು ಕೊಟ್ಟಿದೆಯೆಂದೂ, ಮೇಲ್ಕಂಡ ವಾರ್ತೆಯ ವಿಷಯವನ್ನು ತಿಳಿಸಿದ್ದಾರೆ. ಇಂಥಾ ಪರೀಕ್ಷೆಗೆ ಇಂಡಿಯನ್ ಬ್ಯಾಂಕ್, ಇಂಡೋ ಕಮರ್ಷಿಯಲ್ ಬ್ಯಾಂಕ್ ಮತ್ತು ಬ್ಯಾಂಕ್ ಆಫ್ ಹಿಂದುಸ್ತಾನ ಇವು ಸಹ ತಮ್ಮ ಒಪ್ಪಿಗೆಯನ್ನಿತ್ತಿರುವವು.

WANTED.

Candidates for Telegrap[h] Station Master, Radio an[d] Electric class. Allowan[ce] Rs 28. Uniform, passag[e] and quarter free. Servic[e] essential. Rules and Ent[r]ance form on annas eigh[t] Director, Royal Telegrap[h] and Ry. Duties Colleg[e] Bombay 14. 0-8.

ಡಾ. ಮೇತ್ಯೂಸ್ ಎಟ್ಕಿನ್ಸನ್
ಕೃತಕ ದಂತಗಳು
(ಹೇಮಣ್ರ್‌ಲೆಸ್ಸ ಟೀತ್)
(ಕೃತ್ರಿಮ ಹಲ್ಲುಗಳು)
ಮಂಗಳೂರು.



ಕೊಡಗಿನ ಚರಿತ್ರೆಯ ಕಥೆಗಳು.

ಚಿಕ್ಕವೀರರಾಜನ ಪತ್ನಿ ಕರಣಿಕರ ಮನೆ ಗೌರಮ್ಮ.

(ಲೇಖಕ: ಡಿ. ಎನ್. ಕೃಷ್ಣಯ್ಯ, ಎಂ. ಎ. ಬಿ. ಇಡಿ.)

ಲೇಖಾಂಕ ೧೧

(ಎಲ್ಲಾ ಹಕ್ಕುಗಳನ್ನು ಕಾಯ್ದಿರಿಸಲ್ಪಟ್ಟಿವೆ.)

ಸುಮಾರು ಕ್ರಿ. ಶ. 1817, 18ನೇ ಇಸವಿ ಕೊಡಗಿನಲ್ಲಿ ಲಿಂಗರಾಜೇಂದ್ರನ ಆಳ್ವಿಕೆ. ದೀಪಾವಳಿಯ ಹಬ್ಬವು ಸಮೀಪಿಸಿದೆ. ದೀಪಾವಳಿಗೆ ಹಬ್ಬ ಹೆಂಗಸರಿಗೆ ಹೆಣ್ಣು ಮಕ್ಕಳಿಗೆಲ್ಲಾ ಬಹು ಆನಂದ. ಆಗ ಎಷ್ಟು ದಿವಸ ಬೀದಿಯಲ್ಲಿ ದಿನ ಹುಡುಗಿಯರೆಲ್ಲರೂ ಆಟಪಾಟಗಳಲ್ಲಿ, ಗಾನ ನೃತ್ಯಗಳಲ್ಲಿ ಫಲಾಹಾರ ಸಮಾರಂಭಗಳಲ್ಲಿ ಕಳೆಯುವ ಸಮಯ. ಕೊಡಗಿನ ಹೊರದೇಶಗಳಲ್ಲಿ ದೀಪಾವಳಿಯು ಮೂರು ದಿವಸ ಆಚರಿಸಲ್ಪಡುತ್ತದೆ. ಎಣ್ಣೆ ಮತ್ತು ನೀರುಗಳ ಪೂಜೆಯ ದಿನ. ಎಣ್ಣೆಗಳು ಆಯಾ ವರ್ಷ ಹುಟ್ಟಿದ ಕರುಗಳಿಗೆ ಆ ದಿವಸ ವಸ್ತ್ರ ಮತ್ತು ಸರಗಳನ್ನು ಶೃಂಗರಿಸಿ ಊರಲ್ಲಿ ವಾದ್ಯ ಸಮೇತ ಮೆರವಣಿಗೆ ಮಾಡಿಸಿ ಅವಕ್ಕೆ ಪಾಪು ಮಾಡಿದ ಭಕ್ಷ್ಯ ಭೋಜ್ಯಗಳನ್ನು ತಿನ್ನಿಸುವುದು ಆ ಹಬ್ಬದ ಪದ್ಧತಿ. ಆದರೆ ಇದು ದೊಡ್ಡವರು ಮಾಡುವ ಹಬ್ಬ. ಕೊಡಗಿನಲ್ಲಿಯೂ ಬಲಿಪಾಡ್ಯದ ದಿವಸ ಗೋವುಗಳನ್ನು ಶೃಂಗರಿಸಿ ಬಿಡುವ ಪದ್ಧತಿಯು ಸ್ವಲ್ಪ ಮಟ್ಟಿಗೆ ಪಟ್ಟಣಗಳಲ್ಲಿದೆ.

ಆದರೆ ಚಿಕ್ಕ ಹುಡುಗಿಯರು ಈ ಹಬ್ಬವನ್ನು ಇನ್ನೊಂದು ರೀತಿಯಲ್ಲಿ ಆಚರಿಸುತ್ತಿದ್ದರು. ಈ ಹಬ್ಬದಲ್ಲಿ ಹೆಣ್ಣು ಮಕ್ಕಳು ಬಸವಣ್ಣನ ಒಂದು ವಿಗ್ರಹವನ್ನು ಆ ಬೀದಿಯಲ್ಲಿ ಯಾರಾದರೊಬ್ಬರ ಮನೆಯಲ್ಲಿಟ್ಟು ಏಳು ದಿವಸ ಅದರ ಪೂಜೆ ಮಾಡುತ್ತಿದ್ದರು. ವಿಗ್ರಹವನ್ನು ಕೂರಿಸಿದ ದಿನದ ಸಾಯಂಕಾಲದಿಂದಲೇ ಹಬ್ಬವು ಪ್ರಾರಂಭವಾಗುತ್ತಿತ್ತು. ವಿಗ್ರಹದ ಮುಂದೆ ತಮ್ಮ ತಮ್ಮ ಮನೆಗಳಲ್ಲಿರುವ ಮರದ, ಕಂಚಿನ ಮತ್ತು ಹಿತ್ತಾಳೆಯ ಬೊಂಬೆಗಳನ್ನು ಚೆನ್ನಾಗಿ ತೊಳೆದು ಇಡುಗುವ ಹಾಗೆ ಮಾಡಿ ಬಸವಣ್ಣನ ಮುಂದೆ ಸಾಲಾಗಿ ಇಡುತ್ತಿದ್ದರು. ಈ ಹಬ್ಬಕ್ಕೆ ಕೆಲವು ದಿವಸಗಳಿಗೆ ಮೊದಲೇ ಈ ಹೆಣ್ಣು ಮಕ್ಕಳು ದೇವರ ಮೇಲಿನ ಹಾಡುಗಳನ್ನೂ, ಇತರ ಹಾಡುಗಳನ್ನೂ ಕೋಲುಧಾಟಿಯಲ್ಲಿ ಹಾಡಲು ಕೋಲು ಹೊಡೆಯುವಾಗ ತಾಳಕ್ಕೆ ಸರಿಯಾಗಿ ಹೇಳುವುದಕ್ಕೆ ಅನುಕೂಲವಾಗುವಂತೆ ಕಲಿಯುತ್ತಿದ್ದರು. ಬಸವಣ್ಣನನ್ನು ಕೂರಿಸಿದ ಮೇಲೆ ಬಸವಣ್ಣನಿಗೆ ನೀರು ಕುಡಿಸುವುದಕ್ಕೆ ಸಮೀಪದ ಕೆರೆಗೆ ಅಥವಾ ಬಾವಿಗೆ ಮೆರವಣಿಗೆ ಹೋಗುತ್ತಿದ್ದರು. ಹಾಗೆ ಹೋಗುವಾಗ ಪ್ರತಿ ಮನೆಯವರೂ ಕೋಲು ಆಟವನ್ನಾಡಿಕೊಂಡು ಹೋಗುತ್ತಿದ್ದರು. ಕೋಲು ಹೊಡೆಯುವಾಗ ಬಸವಣ್ಣನ ವಿಗ್ರಹವನ್ನು ಮಧ್ಯೆಯಿಟ್ಟು ಅದರ ಸುತ್ತಲೂ "ಬಸವನಿಗೆ ಬಸವನ್ನಿರಿ, ಬಸವನ ಪಾದಕ್ಕೆ ಶರಣ್ಣಿರಿ" ಎಂದು ಹಾಡುತ್ತಲೂ, ಇತರ ಹಾಡುಗಳನ್ನು ಹೇಳುತ್ತಲೂ ಕೋಲು ಹೊಡೆಯುತ್ತಿದ್ದರು. ಅವಕ್ಕೋಸ್ಕರ ಈ ಹಬ್ಬಕ್ಕೆ ಅಲ್ಲೀಕೋಲ್ ಎಂದು ಹೆಸರು. ಕೆರೆಯ ಹತ್ತಿರ ಪ್ರತಿಯೊಬ್ಬರೂ ತಮ್ಮ ತಮ್ಮ ಗಿಂಡಿಯಲ್ಲಿ ನೀರು ತಂದು ಬಸವಣ್ಣನಿಗೆ ನೀರು ಕುಡಿಸುತ್ತಿದ್ದರು. ಪ್ರತಿಯೊಬ್ಬ ಹೆಣ್ಣು ಮಗಳೂ ಇಂಥಾದ್ದೊಂದು ಗಿಂಡಿಯಿರಬೇಕಿತ್ತು. ಹುಡುಗಿಯರೊಂದಕ್ಕೆ ಒಂದರ ಮೇಲೆ ಹುಡುಗಿಯರೆಲ್ಲರೂ ತಮ್ಮ ತಮ್ಮ ಮನೆಗಳಿಂದ ತಿಂಡಿ ಸಾಮಾನುಗಳನ್ನು ತಟ್ಟೆಗಳಲ್ಲಿ ತುಂಬಿಕೊಂಡು ಬರುತ್ತಿದ್ದರು. ಬಸವನ್ನು ತಿರುಗಿ ಹೋದಮೇಲೆ, ಎಲ್ಲರೂ ಫಲಾಹಾರ ಮಾಡುತ್ತಿದ್ದರು.

ಈ ರೀತಿಯ ಹಬ್ಬವು ಈಗಲೂ ಕರ್ನಾಟಕದ ಅನೇಕ ಹಳ್ಳಿಗಳಲ್ಲಿ ನಡೆಯುತ್ತದೆ. ಆದರೆ ಕೊಡಗಿನಲ್ಲಿ ಇದು ಈಗ ಸುಮಾರು ಐವತ್ತು ವರ್ಷಗಳ ಹಿಂದೆ ನಿಂತು ಹೋಯಿತು. ಅದಕ್ಕೆ ಮೊದಲು ಹಾಲೇರಿ ಲಿಂಗಾಯಿತ ರಾಜರ ಕಾಲದಲ್ಲಿ ಈ ಹಬ್ಬಕ್ಕೆ ಬಹಳ ಪ್ರಾಶಸ್ತ್ಯವಿತ್ತು. ಬಸವಣ್ಣನು ಲಿಂಗಾಯಿತ ದೇವರೂ ಜನಪ್ರಿಯನೂ ಆಗಿದ್ದನು.

ಸುಮಾರು ಸಾವಿರದ ಎಂಟನೂರ ಹದಿನೇಳು ಹದಿನೆಂಟನೆಯ ವರ್ಷ ಮಡಿಕೇರಿಯಲ್ಲಿ ಓಂಕಾರೇಶ್ವರ ದೇವಸ್ಥಾನವನ್ನು ಕಟ್ಟಿಸಿ ಆಗ ಐದಾರು ವರ್ಷಗಳಾಗಿದ್ದವು. ಲಿಂಗರಾಜೇಂದ್ರನು ಸಾಯಂಕಾಲದ ಹೊತ್ತಿನಲ್ಲಿ ಓಂಕಾರೇಶ್ವರನ ದೇವಸ್ಥಾನಕ್ಕೆ ಹೆಚ್ಚಾಗಿ ಬರುತ್ತಿದ್ದು ಪೂಜೆಯಾದ ನಂತರ ಹಿಂದಕ್ಕೆ ಹೋಗುತ್ತಿದ್ದನು. ಈ ಸಮಯದಲ್ಲಿ ದೀಪಾವಳಿಯು ಹತ್ತಿರ ಬಂತು. ಓಂಕಾರೇಶ್ವರ ದೇವಸ್ಥಾನದ ಸುತ್ತಮುತ್ತಲಿನ ಬೀದಿಗಳಲ್ಲಿ ಲಿಂಗಾಯಿತರೂ ಬ್ರಾಹ್ಮಣರೂ ವಾಸಮಾಡಿಕೊಂಡಿದ್ದರು. ಇವರಲ್ಲಿ ಸಾಧಾರಣ ಎಲ್ಲರಿಗೂ ಅರಮನೆ ಕಚೇರಿಯಲ್ಲಿ ಒಂದಲ್ಲ ಒಂದು ಕೆಲಸವಿತ್ತು. ಕರಣೀಕ ಸುಬ್ಬಯ್ಯನ ಮನೆಯೂ ಬ್ರಾಹ್ಮಣರ ಬೀದಿಯಲ್ಲಿ ಅರಮನೆ ಹತ್ತಿರದ ಹಾಗಿನ ಮನೆಯಿರುವ ಸ್ಥಳದಲ್ಲಿಯೇ ಇತ್ತು. ದೀಪಾವಳಿ ಹಬ್ಬವು ಬಂದೊಡನೆ ಆ ಬೀದಿಯ ಹೆಣ್ಣು ಮಕ್ಕಳೆಲ್ಲರೂ ಬಸವಣ್ಣನ ಹಬ್ಬಕ್ಕೆ ಸಿದ್ಧಮಾಡಿ ಕೊಂಡಿದ್ದರು.

ದೀಪಾವಳಿ ಹಬ್ಬದ ಮೂರನೆಯ ದಿವಸ ಅಲ್ಲಿನ ಬೇರೆ ಬೇರೆ ಬೀದಿಗಳ ಹೆಣ್ಣು ಮಕ್ಕಳು ಪ್ರತ್ಯೇಕ ಪ್ರತ್ಯೇಕವಾಗಿ ಬಸವಣ್ಣನನ್ನು ಕೂರಿಸಿ ಪ್ರತಿ ದಿವಸವೂ ಸಾಯಂಕಾಲ ಓಂಕಾರೇಶ್ವರ ದೇವಸ್ಥಾನದ ಕೆರೆಗೆ ಬಸವಣ್ಣನಿಗೆ ನೀರು ಕುಡಿಸುವುದಕ್ಕೆ ಮೆರವಣಿಗೆ ಮಾಡಿಕೊಂಡು ಬರುತ್ತಿದ್ದರು. ಇಂಥಾ ಒಂದು ಬಸವಣ್ಣನನ್ನು ಕರಣೀಕ ಸುಬ್ಬಯ್ಯನ ಮನೆಯಲ್ಲಿ ಕೂರಿಸಿದ್ದರು. ಕರಣೀಕ ಸುಬ್ಬಯ್ಯನಿಗೆ ಒಬ್ಬ ಮಗಳಿದ್ದಳು. ಅವಳ ಹೆಸರು ಗೌರಮ್ಮ. ಪ್ರಾಯ ಹದಿನೆಂಟು ವರ್ಷ. ನೋಡುವುದಕ್ಕೆ ಬಹು ಸ್ವರೂಪಿ. ಮಾತಿನಲ್ಲಿಯೂ, ಕೆಲಸದಲ್ಲಿಯೂ ಬಹಳ ಚಟುವಟಿಕೆಯುಳ್ಳವಳು. ತನ್ನ ಬೀದಿಯ ಹೆಣ್ಣು ಮಕ್ಕಳಿಗೆ ತಾನೇ ಮುಂದಾಳಾಗಿ ನಿಂತು ಹಬ್ಬವನ್ನು ನಡೆಸುತ್ತಿದ್ದಳು. ದೀಪಾವಳಿ ಹಬ್ಬದ ಆರನೆಯ ದಿವಸ ನಾಲ್ಕೈದು ದಿವಸಗಳೂ ಗೌರಮ್ಮನು ತನ್ನ ಬೀದಿಯ ಬಸವಣ್ಣನನ್ನು ಮೆರವಣಿಗೆ ಮಾಡಿಕೊಂಡು ಓಂಕಾರೇಶ್ವರ ದೇವಸ್ಥಾನದ ಕೆರೆಯ ಬಳಿ ಬಂದಿದ್ದಳು. ಇವಳೂ ಇವಳ ಬೀದಿಯ ಇತರ ಹೆಣ್ಣು ಮಕ್ಕಳೂ ಸಾಯಂಕಾಲ ಐದಾರು ಗಂಟೆಗೆ ಬರುವಾಗ ಲಿಂಗ ಬರುತ್ತಿದ್ದರು.

ದೀಪಾವಳಿಯ ಕಳೆದು ಆರನೇ ದಿವಸ ಸಾಯಂಕಾಲದ ಹೊತ್ತು. ಗೌರಮ್ಮನು ತನ್ನ ಬೀದಿಯ ಹೆಣ್ಣು ಮಕ್ಕಳೊಡನೆ ಕೋಲು ಹೊಡೆಯುತ್ತಾ ಬಸವಣ್ಣನ ಮೆರವಣಿಗೆಯನ್ನು ಮಾಡಿಕೊಂಡು ಕೆರೆಯ ಹತ್ತಿರ ಬಂದಳು. ಹಾಗೆಯೇ ಬೇರೆ ಬೀದಿಗಳ ಹೆಣ್ಣು ಮಕ್ಕಳೂ ತಮ್ಮ ತಮ್ಮ ಬೀದಿಗಳ ಬಸವಣ್ಣಗಳನ್ನು ಮೆರವಣಿಗೆ ಮಾಡಿಕೊಂಡು ಅಲ್ಲಿಗೆ ಬಂದಿದ್ದರು. ಆ ಹೊತ್ತಿಗೆ ಸರಿಯಾಗಿ ಲಿಂಗರಾಜನು ಅರಮನೆಯಿಂದ ಹೊರಟು ಅಲ್ಲಿಗೆ ಬಂದನು. ರಾಜನು ಅಲ್ಲಿಗೆ ಬರುವಾಗ ಬೇರೆ ಬೇರೆ ಬೀದಿಗಳಿಂದ ಬಂದಿದ್ದ ಹೆಣ್ಣು ಮಕ್ಕಳಿಗೆ ವಾದ್ಯದವರು ನಡೆಯುತ್ತಿತ್ತು. ವಾದ್ಯದವರಲ್ಲಿ ಕೋಲಾಟವು ತನ್ನ ಬಸವಣ್ಣನನ್ನು ನೀರಿನಲ್ಲಿ ಕೊಡುತ್ತಿದ್ದರು. ಈ ಬಾರಿನ ಮೆರವಣಿಗೆಯಲ್ಲಿ ಮುಂದಾಳಾಗಿ ಕೋಲಾಟದಲ್ಲಿ ಗೌರಮ್ಮನೂ ಆವಳ ತಂಡದವರೂ, ಎಲ್ಲರನ್ನೂ ಜಯಿಸಿಬಿಟ್ಟರು. ಈ ಹೆಣ್ಣು ಮಕ್ಕಳ ಆಟವನ್ನು ಅಗಳವನ್ನೂ ಲಿಂಗರಾಜೇಂದ್ರನು ನೋಡುತ್ತಾ ನಿಂತಿದ್ದನು. ಅವನು ತನ್ನ ಪಕ್ಕದಲ್ಲಿದ್ದವರನ್ನು ಆ ಬಾಲಕಿಯು ಯಾರೆಂದು ಕೇಳಿದನು. ಅವರು ವಿಚಾರಿಸಿ ಅವಳು ಕರಣೀಕ ಸುಬ್ಬಯ್ಯನ ಮಗಳೆಂದು ಹೇಳಿದರು. ಲಿಂಗರಾಜನು ಅವಳ ಕಲೆಯನ್ನೂ ಚಟುವಟಿಕೆಯನ್ನೂ, ಸೌಂದರ್ಯವನ್ನೂ, ಬುದ್ಧಿಚಾತುರ್ಯವನ್ನೂ ನೋಡಿ ಅವಳನ್ನು ತನ್ನ ಮಗನಿಗೆ ವಿವಾಹ ಮಾಡಿಸಿದರೆ ಆಗ ಬಹುದೇನು ಆಲೋಚಿಸಿದನು. ಹಾಗೆಯೇ ಮನಸ್ಸಿನಲ್ಲಿ ಯೋಚಿಸಿ ಲಿಂಗರಾಜನು ಗೌರಮ್ಮನನ್ನು ಕುರಿತು "ಅಮ್ಮಾ, ನೀನು ಅರಮನೆಗೆ ಬರುತ್ತೀಯಾ, ನಿನಗೆ ಬಂಗಾರ ಆಟದ ಸಾಮಾನುಗಳನ್ನೂ, ಬಟ್ಟೆಬರೆಗಳನ್ನೂ ಕೊಡುವೆನು" ಎಂದು ಹೇಳಿದನು. ಗೌರಮ್ಮನು 'ಆಗಲಿ, ಬರುವೆ'ನು ಎಂದು ಉತ್ತರಕೊಟ್ಟಳು. ಆಗ ಲಿಂಗರಾಜೇಂದ್ರನು ಅರಮನೆಯಿಂದ ಪಲ್ಲಕ್ಕಿಯನ್ನು ತರಿಸಿ ಅದರಲ್ಲಿ ಗೌರಮ್ಮನನ್ನು ಕೂರಿಸಿ ಅರಮನೆಗೆ ಕಳುಹಿಸಿದನು. ಅರಮನೆಗೆ ಹೋದ ಮೇಲೆ ಅಲ್ಲಿ ಅವಳಿಗೆ ಬೇಕಾದ ಆಟದ ಸಾಮಾನುಗಳನ್ನೂ, ತಿನ್ನುವುದಕ್ಕೆ ಹಣ್ಣು ಹಂಪಲುಗಳನ್ನೂ ಕೊಟ್ಟನು.

ಗೌರಮ್ಮನನ್ನು ಲಿಂಗರಾಜೇಂದ್ರನು ಅರಮನೆಗೆ ಕಳುಹಿಸಿದ ಕೂಡಲೇ ಬೇರೆ ಹುಡುಗಿಯರೆಲ್ಲಾ ಬಹಳ ಗಾಬರಿಯಾಗಿ ಬೇಗನೆ ಬಸವಣ್ಣನನ್ನು ಹೊತ್ತುಕೊಂಡು ತಮ್ಮ ಬೀದಿಗೆ ಬಂದು ತಂತಮ್ಮ ಮನೆಗಳನ್ನು ಸೇರಿದರು. ಇತ್ತಲಾಗಿ ಕರಣಿಕರ ಸುಬ್ಬಯ್ಯನ ಪತ್ನಿಯು ತನ್ನ ಮಗಳು ಗೌರಮ್ಮನು ಬರದೆ ಇದ್ದುದನ್ನು ನೋಡಿ ಆಶ್ಚರ್ಯಪಟ್ಟು ಅಲ್ಲಿ ನೆರೆ ಕರೆಯ ಬಾಲಕಿಯರನ್ನು ಕರೆದು ವಿಚಾರಿಸಿದಳು. ಅವರಿಗೆ ಲಿಂಗರಾಜೇಂದ್ರನು ರಾಜನೆಂದು ಗೊತ್ತಿರಲಿಲ್ಲ. ಯಾರೋ ಒಬ್ಬ ದೊಡ್ಡ ಮನುಷ್ಯನು ಅವಳನ್ನು ಅರಮನೆಗೆ ಪಲ್ಲಕ್ಕಿಯಲ್ಲಿ ಕೂರಿಸಿ ಕಳುಹಿಸಿದನೆಂದು ಹೇಳಿದರು. ಇದನ್ನು ಕೇಳಿ ಅವಳಿಗೆ ಬಹಳ ಭಯವುಂಟಾಯಿತು. ಅಷ್ಟರೇ ಅಳುತ್ತಾ ಗೋಳಾಡುತ್ತಾ ಕುಳಿತುಕೊಂಡಿದ್ದಳು. ಇಷ್ಟರಲ್ಲಿ ಕರಣಿಕ ಸುಬ್ಬಯ್ಯನು ದಿವಾನ್ ಕಚೇರಿಯಲ್ಲಿ ಬರವಣಿಗೆ ಕೆಲಸವನ್ನು ತೀರಿಸಿಕೊಂಡು ಬಂದನು. ಅವನು ಮನೆಗೆ ಬರುತ್ತಿರುವಾಗ ದಾರಿಯ ಎಡ ಬಲ ಬದಿಗಳಲ್ಲಿರುವ ಮನೆಗಳ ಹೆಂಗಸರೂ, ಸ್ತ್ರೀ ವಿಷಯ ತಿಳಿದಿರುವ ಮಕ್ಕಳೂ ಅವನನ್ನು ಇಣಿಕಿಣಿಕಿ ನೋಡುತ್ತಿದ್ದರು. ಸುಬ್ಬಯ್ಯನು ಎಂದೂ ಇಲ್ಲದ ಈ ರೀತಿಯಲ್ಲಿ ನೋಡುವುದನ್ನು ಕಂಡು ಆಶ್ಚರ್ಯಗೊಂಡನು. ಹಾಗೆಯೇ ಬರುತ್ತಾ ಮನೆಯ ಬಳಿ ಹೋಗಲು ತನ್ನ ಪತ್ನಿಯು ಅಳುತ್ತಿರುವುದನ್ನು ಕಂಡನು. ಪತಿಯನ್ನು ನೋಡಿ ಅವಳು 'ನಮ್ಮ ಮುದ್ದು ಕಂದಮ್ಮನನ್ನು ಅರಮನೆಗೆ ಕರೆದುಕೊಂಡು ಹೋದರಂತೆ, ಇನ್ನು ಅವಳನ್ನು ಬಿಟ್ಟು ನಾನು ಹ್ಯಾಗೆ ಜೀವಿಸಿರಲಿ' ಎಂದು ಹೇಳುತ್ತಾ ಗಟ್ಟಿಯಾಗಿ ಅಳಲಾರಂಭಿಸಿದಳು. ಇದನ್ನು ಕೇಳಿ ಸುಬ್ಬಯ್ಯನಿಗೆ ಬೆರಗಾದಂತಾಯಿತು.

ಸುಬ್ಬಯ್ಯನು ದಿವಾನ್ ಕಚೇರಿಯಲ್ಲಿದ್ದಾಗ ಕೋಟೆಯ ಹೆಬ್ಬಾಗಿಲಿನಿಂದ ಜೋಯಿಸರುಗಳು ಒಂದು ಪಲ್ಲಕ್ಕಿಯನ್ನು ಹೊತ್ತುಕೊಂಡು ಹೋಗುತ್ತಿದ್ದುದನ್ನು ನೋಡಿದ್ದನು. ಆದರೆ ಅದರಲ್ಲಿ ಯಾರೋ ರಾಜ ಕುಟುಂಬದ ಹೆಂಗಸಿರಬೇಕೆಂದು ಆಗ ಅವನು ಭಾವಿಸಿದ್ದನು. ಈಗ ಅವನಿಗೆ ಆ ಪಲ್ಲಕ್ಕಿಯಲ್ಲಿ ಯಾರು ಕುಳಿತಿದ್ದರೆಂದು ತಿಳಿಯಿತು. ಮನಸ್ಸು ಆ ಕ್ಷಣವೇ ಮಹತ್ತಾದ ದುಃಖಾಕ್ರಾಂತವಾಯಿತು. ನಡೆಗಿದ್ದ ಒಬ್ಬಳೇ ಪುತ್ರಿಯನ್ನು ಲಿಂಗಾಯಿತ ರಾಜನು ತೆಗೆದುಕೊಂಡು ಹೋಗಿಬಿಟ್ಟಿದ್ದನು. ಆಗ ರಾಜನನ್ನು, 'ನನ್ನ ಮಗಳನ್ನು ಕಳುಹಿಸಿಕೊಡಿರೆಂದು ಕೇಳುವುದು ಹೇಗೆ? ಬಂದು ಸುಮ್ಮನೆ ಕುಳಿತ್ತಾಗ ತನ್ನ ಹಣೆ ಕಳೆದುಕೊಂಡ ಬಳಿಕ ತನ್ನ ಹೆಂಡತಿ ಮತ್ತು ಇಬ್ಬರು ಗಂಡು ಮಕ್ಕಳ ಗತಿಯೇನು?' ಎಂದು ಚಿಂತಿಸತೊಡಗಿದನು. ಹೀಗೆ ಚಿಂತಿಸುತ್ತಾ ಆ ದಂಪತಿಗಳು ಆ ರಾತ್ರಿಯನ್ನು ಬಹಳ ಕಷ್ಟದಿಂದ ಕಳೆದರು. ಬೆಳಗಾಗುತ್ತಲೇ ಕರಣಿಕ ಸುಬ್ಬಯ್ಯನು ತನ್ನ ನಿತ್ಯಕರ್ಮಗಳನ್ನು ತೀರಿಸಿಕೊಂಡು ಬಾಗಿದ ಮುಖವುಳ್ಳವನಾಗಿ ದಿವಾನ್ ಕಚೇರಿಗೆ ಹೊರಟನು. ದಿವಾನ್ ಕಚೇರಿಯಲ್ಲಿ ಎಲ್ಲರಿಗೂ ಸುಬ್ಬಯ್ಯನ ದುಃಖದ ಕಾ

ವಿವಿಧ ವಿಚಾರ.

ಗಡ್ಡದ ಆಟ.

ಈಜಿಪ್ಟ್ ದೇಶದ ಜನರು ತಮ್ಮ ಕೆನ್ನೆ ಗಡ್ಡಗಳನ್ನು ವಿಪುಲವಾಗಿ ಕಪ್ಪಾಗಿ ಬೆಳೆಸಿಕೊಳ್ಳುತ್ತಿದ್ದರು. ಅವರಲ್ಲಿ ವಿನೋದಕರವಾಗಿ ಅವರು ಗಡ್ಡ ಬೆಳೆಸುವರು. ಬೆಳೆಸಲು ಸಾಧ್ಯವಿಲ್ಲದವರು ಕೃತಕ ಗಡ್ಡವನ್ನು ಕಟ್ಟಿಕೊಳ್ಳುವರು.

14 ನೆಯ ಶತಮಾನದಲ್ಲಿ ಸ್ಪೈನ್ ದೇಶದಲ್ಲಿ ಇದ್ದಕಿದ್ದ ಹಾಗೆಯೇ ಗಡ್ಡಕ್ಕೆ ವಿಶೇಷ ಪ್ರಾಮುಖ್ಯತೆ ಬಂತು! ಎಲ್ಲರೂ ಗಡ್ಡ ಬೆಳೆಸುವುದಕ್ಕೆ ಬಣ್ಣ ಬಣ್ಣದ ಗಡ್ಡಗಳು. ಬೆಳೆಸಲಾಗದವರು ಕಟ್ಟು ಗಡ್ಡಗಳನ್ನಾಶ್ರಯಿಸಿದರು. ಧರಿಸಿದ ಟೊಪ್ಪಿಗೆ ಒಪ್ಪುವ ಬಣ್ಣವನ್ನು ಗಡ್ಡಕ್ಕೆ ಹಾಕಲಾರಂಭಿಸಿದರು.

—o0o—

150 ವಯಸ್ಸಿನ ವೃದ್ಧರು.

ಟರ್ಕೀದೇಶದಲ್ಲಿ 3 ಮಂದಿ ವೃದ್ಧರಿದ್ದಾರೆ. ಅವರಿಗೆ 150 ವಯಸ್ಸು! ಈ ಅಂಶವು ಇತ್ತೀಚೆಗೆ ಆ ದೇಶದಲ್ಲಿ ಪ್ರಕಟವಾಗಿರುವ ಜನಗಣತಿಯಿಂದ ಗೊತ್ತಾಗುತ್ತದೆ. ಅವರೆಲ್ಲ ಕೇವಲ ಹಾಲನ್ನು ಕುಡಿದು ಜೀವಿಸುತ್ತಿದ್ದಾರೆ. ಪೂರ್ವ ಅನಟೋಲಿಯದ ಎಲ್ ಅಜಿಕ್ ಎಂಬಲ್ಲಿ ಕಾಪ್ಟೊರಲ್ ಅಲಿ ಎಂಬಾತನಿದ್ದಾನೆ. ಪ್ರಪಂಚದಲ್ಲೆಲ್ಲ ಅತನೇ ಮುದುಕ! ಅವನ ಸಮೀಪ ಸಂಬಂಧಿಯೊಬ್ಬನು ಇದ್ದಾನೆ. ಆತನಿಗೆ 147 ವಯಸ್ಸು. ಕಾಪ್ಟೊರಲ್ ರಾತ್ರಿ ನಾಲ್ಕು ಘಂಟೆಕಾಲ ನಿದ್ದೆ ಹೋಗುವನು. ಹೆಚ್ಚು ಮಾತನಾಡುವುದಿಲ್ಲ. ಇತ್ತೀಚೆಗೆ ಅವನಿಗೆ ಹಲ್ಲು ಮೊಳೆತಿವೆ.

—o0o—

ಪ್ರತಿಯೊಬ್ಬನೂ ರಾಷ್ಟ್ರಕಾರ್ಯ ಮಾಡಲೇಬೇಕು.

ಜನರಲ್ ಗೋರಿಂಗನು ಜರ್ಮನಿಯ ಆರ್ಥಿಕ ವ್ಯವಸ್ಥೆಯನ್ನು ಉತ್ತಮಪಡಿಸುವ ಉದ್ದೇಶದಿಂದ ನಾಲ್ಕು ವರ್ಷದ ಕಾರ್ಯಕ್ರಮವನ್ನು ಕೈಗೊಂಡಿದ್ದಾನೆ.

ಬಲವಾದ ಒಬ್ಬ ಆಳು, ಗಂಡಸೇ ಆಗಲಿ ಅಥವಾ ಹೆಂಗಸೇ ಆಗಲಿ, ಸ್ವಲ್ಪ ಕಾಲ ರಾಷ್ಟ್ರಕಾರ್ಯಕ್ಕಾಗಿ ದುಡಿಯಬೇಕೆಂದು ಅವನು ವಿಧಿಸಿದ್ದಾನೆ. ಅಂಥವರು ಮಾಡಬೇಕಾಗಿರುವ ಕೆಲಸವನ್ನು ಸರಕಾರದವರೇ ಸೂಚಿಸುವರು. ರಾಷ್ಟ್ರಕ್ಕೆ ಬೇಗ ಬೇಗನೆ ಆಗಬೇಕಾಗಿರುವ ಕೆಲಸಗಳನ್ನು ಶೀಘ್ರವಾಗಿ ಮಾಡಿಸಲು ಸರಕಾರದವರು ಈ ಬಗೆಯ ಒತ್ತಾಯ ವಿಧಿ ಹಾಕಿದ್ದಾರೆ.

ಹೀಗೆ ಅವರಿಗೆ ವಿಧಿಸಲಾಗಿರುವ ಅವಧಿಯವರೆಗೂ ದುಡಿದ ನಂತರ ಆ ಜನರು ತಾವು ಹಿಂದೆ ಮಾಡುತ್ತಿದ್ದ ಕೆಲಸ ಕಾರ್ಯಗಳಿಗೆ ಮರಳಿ ಹೋಗಬಹುದು. ರಾಷ್ಟ್ರ ಕಾರ್ಯದಲ್ಲಿ ಅವರು ತೊಡಗಿರುವಾಗ, ಅವರು ತಮ್ಮ ವಿವಿಧ ವೃತ್ತಿಗಳಿಂದ ಸಂಪಾದಿಸುತ್ತಿದ್ದಷ್ಟು ಹಣವನ್ನೇ ಕೂಲಿಯಾಗಿ ಕೊಡುತ್ತಾರೆ.

ತ್ವರಿತ ಬೆಳವಣಿಗೆ.

ಹಿಂದೆ ಕನಸಿನಲ್ಲಿಯೂ ನೆನೆಸಲಾರದಷ್ಟು ತ್ವರೆಯಲ್ಲಿ ಮರಗಿಡಗಳು ಬೆಳೆಯುವಂತೆ ಮಾಡಲು ಇಂದು ಸಾಧ್ಯವಿದೆ.

ಒಕ್ಸಿಲಿನ್ ಎಂಬ ರಸಾಯನದ ಪ್ರಯೋಗದಿಂದ ಮಾತ್ರ ಇದು ಸಾಧ್ಯ. 24 ತಾಸುಗಳ ತನಕ ಹೂವ ಗಿಡವನ್ನಾದರೂ ಸರಿ, ಈ ರಸಾಯನದಲ್ಲಿ ಮುಳುಗಿಸಿಟ್ಟು ನಂತರ ಅದನ್ನು ಯಥಾಕ್ರಮದಲ್ಲಿ ನೆಟ್ಟದ್ದಾಯಿತು. ಈ ಬಗೆಯಲ್ಲಿ ರಸಾಯನ ಪ್ರಯೋಗ ಮಾಡಿದ ಜಪಾನಿನ ಗಿಡದ ಒಂದು ಗೆಲ್ಲು ಆರೇ ವಾರಗಳಲ್ಲಿ ಬೇರುಗಳನ್ನು ಬಿಟ್ಟಿತು. ಇದಿಲ್ಲದಿದ್ದರೆ ಸರ್ವಸಾಧಾರಣವಾಗಿ ಅದಕ್ಕೆ ಬೇರು ಬಿಡಲು ಒಂದು ವರ್ಷ ತಗಲುತ್ತದೆ.

ಪರಂತು ಈ ಒಕ್ಸಿಲಿಯನ್ ಎಂಬ ರಸಾಯನವು ಬೀಜಗಳಿಗೆಯನ್ನು ತ್ವರೆಗೊಳಿಸಬಲ್ಲುದಲ್ಲದೆ, ಸಾಯುತ್ತಿರುವ ಗಿಡಗಳಲ್ಲಿ ಜೀವಕಳೆಯನ್ನು ತುಂಬಲು ಶಕ್ತವಾಗಿರುತ್ತದೆ.

—o0o—

ಫಿಜಿ ದ್ವೀಪದ ಮಾಟಗಾರರು.

ಫಿಜಿದ್ವೀಪದ ಜನರು ಒಂದು ಬಗೆಯ ಶಕ್ತಿಯನ್ನು ಸಂಪಾದಿಸಿಕೊಂಡಿದ್ದಾರೆ. ಆ ದೇಶದ ಬಳಿ 'ಷಾರ್ಕ್' ಎಂಬ ಭಯಂಕರವಾದ ಜಲಜಂತುಗಳಿವೆ. ಅವು ಒಂದು ಬಗೆಯ ಮೀನು. ಈ ದ್ವೀಪವಾಸಿಗಳು ಆ ಮೀನುಗಳಿಗೆ ಮುತ್ತಿಟ್ಟು ಅವುಗಳನ್ನು ಕೊಲ್ಲುತ್ತಾರಂತೆ. ಇದರ ಕಥೆಯೊಂದನ್ನು ಈಗ ನ್ಯೂಯಾರ್ಕ್ ನಗರದಲ್ಲಿ ಚಲನ ಚಿತ್ರದಲ್ಲಿಯೂ ಪ್ರದರ್ಶಿಸುತ್ತಿದ್ದಾರೆ.

ನಾಲ್ಕು, ಐದು ಅಡಿ ಉದ್ದದ ಆ ಮೀನುಗಳನ್ನು ಬಲೆಯಲ್ಲಿ ಹಿಡಿದು, ಅವುಗಳ ಹೊಟ್ಟೆಯ ಮೇಲೆ ಆ ದ್ವೀಪವಾಸಿಗಳು ತಮ್ಮ ತುಟಿಯನ್ನು ಮುಟ್ಟಿಸಿದರೆ ಅವು ಸಾಯುತ್ತವೆ.

ಇದಕ್ಕೆ ಕಾರಣವೇ ತಿಳಿಯದು. ಇದನ್ನು ಒಂದು ಮಂತ್ರಶಕ್ತಿಯೆಂದರೂ ಸರಿ, ಭೂತಶಕ್ತಿಯೆಂದರೂ ಸರಿ; ಇದು ಅಮಾನುಷ ಶಕ್ತಿಯ ಕಾರ್ಯವೇ ಸರಿ ಎಂದು ಫಾದರ್-ಲಾ-ಪ್ಲಾಂಟರು ತಿಳಿಸುತ್ತಾರೆ.

ತಲೆ ತಲಾಂತರಗಳಿಂದ ಈ ಶಕ್ತಿಯನ್ನು ಪಡೆದಿರುವ ನಾಲ್ಕೈದು ಜನರು ಈ 'ಮುತ್ತಿಡುವ' ಸಂಸ್ಕಾರದಲ್ಲಿ ಬಹಳ ನಿಪುಣರೆನಿಸಿದ್ದಾರೆ. ಅರವತ್ತು ವಯಸ್ಸಿನ ಒಬ್ಬ ಪೈಶಾಚ ವೈದ್ಯನ ನೇತೃತ್ವದಲ್ಲಿ ಈ ಕಾರ್ಯವು ಜರಗುತ್ತದೆಯಂತೆ.

ಇಂತಹ ಫಿಜಿ ದ್ವೀಪದ ಮಾಟಗಾರರು ನದಿಗಳ ಮಾರ್ಗವನ್ನೇ ಬದಲಾಯಿಸಬಲ್ಲರಂತೆ. ಬೆಂಕಿಯ ಮೇಲೆ ನಡೆಯುವುದು, ಶತ್ರುವಿಗೆ ರೋಗ ಬರುವಂತಾಗಲೀ ಅಥವಾ ಸಾವೇ ಬರುವಂತೆ ಮಾಡುವುದನ್ನು ಈ ಜನರು ಬಲ್ಲರಂತೆ.

ಕುರುಡರ ಬಂಧು.

ಈ ನೂತನವಾದ ಪತ್ರ-ಮಾಸ ಪತ್ರಿಕೆಯು ರೇಡಿಯೋ ಆಗಿರದೆ ಪ್ರತಿಯೊಬ್ಬನ ಮನೆಯ ಬಾಗಿಲಿಗೆ ತಂದುಕೊಡುವ ಪತ್ರಿಕೆಗಳಂತೆ ಸಾಮಾನ್ಯ ಪತ್ರಿಕೆಯಾಗಿದೆ. ಈ ಪತ್ರಿಕೆಯಲ್ಲಿ ಒಂದು ಪೆಟ್ಟಿಯಿದೆ. ಅದನ್ನು ಹಾಡು ಗ್ರಾಮಫೋನ್ ರಿಕಾರ್ಡುಗಳಂತೆ ಕೇಳಬಹುದು.

ಇದು ನ್ಯೂಯಾರ್ಕ್ ಪಟ್ಟಣದ ರೇಡಿಯೋ ಮತ್ತು ಟೆಲಿಫೋನಿನ ವಿಜ್ಞಾನಿಯಿಂದ ನಿರ್ಮಿಸಲ್ಪಟ್ಟಿದೆ. ಇದರ ಬೆಲೆಯು ಬಹಳ ಕಮ್ಮಿ ಮತ್ತು ಇದರ ಯಂತ್ರವನ್ನು ಸಣ್ಣ ಮಕ್ಕಳು ಕೂಡ ನಡೆಸಬಹುದು.

ಮಕ್ಕಳು, ಕುರುಡರು, ನಿರಕ್ಷರಸ್ಥರೂ ಇದನ್ನು ಕೇಳಿ ಆನಂದಪಡಬಹುದು.

—o0o—

ಬರೆ ಸ್ಪರ್ಶ ಮಾತ್ರದಿಂದ ಗುಣಪಡಿಸುವ ಮಾಯಾವಿ ಮನುಷ್ಯನು.

ಲಂಡನಿನ ಒಂದು ಬೀದಿಯಲ್ಲಿ ಈ ವಿಚಿತ್ರ ವ್ಯಕ್ತಿಯು ವಾಸವಾಗಿರುವನು. ಆತನು ಗಾಡಿಯ ಕೆಲಸ ಮಾಡುವ ಒಬ್ಬ ಮೇಸ್ತ್ರಿಯು. ತನ್ನ ಸ್ಪರ್ಶ ಮಾತ್ರದಿಂದಲೇ ಆತನು ಅನೇಕರನ್ನು ಗುಣ ಮಾಡಿರುವನು. ಅನೇಕ ಡಾಕ್ಟರರು ಆತನಿಂದ ಆತನ ವಿಚಿತ್ರ ಗುಣಗಳ ಕುರಿತು ರಹಸ್ಯಗಳನ್ನು ತಿಳಿಯುವರೆ ಎಷ್ಟು ಪ್ರಯತ್ನಪಟ್ಟರೂ ಸಾಧ್ಯವಾಗಲಿಲ್ಲ.

ಪಕ್ಷವಾತ, ಇತ್ಯಾದಿ ದೀರ್ಘಕಾಲದ ರೋಗಗಳನ್ನು ಅನುಭವಿಸುವವರು ಇವನ ಸ್ಪರ್ಶದಿಂದ ಗುಣ ಲಾಭ ಪಡೆದಿರುವರು. ಮೊನ್ನೆ ಈಚೆಗೆ 13 ವರ್ಷದ ಬಾಲಕನೊಬ್ಬನು ಅವನಲ್ಲಿ ಚಿಕಿತ್ಸೆ ಹೋಗಿದ್ದನು. ಹುಡುಗನು ಹುಟ್ಟಿದಂದಿನಿಂದ ಸೊಂಟದ ಕೆಳಗೆ ಇಡಿ ಭಾಗಕ್ಕೆ ಪಕ್ಷವಾತವಿದ್ದವನು. ಮಿನಿಜಾಯಿಟಿಸ್ ಎಂಬ ಮಹಾ ರೋಗ ಬಾಧೆಯಿಂದ ಅತನಿಗೆ ಆ ಸ್ಥಿತಿಯು ಒದಗಿದ್ದಿತಂತೆ. ಈ ಮಾಯಾವಿಯು ಆ ಹುಡುಗನನ್ನು ಒಂದು ಬೆಂಚಿನ ಮೇಲೆ ಮಲಗ ಹೇಳಿ ಆತನ ಕಾಲಿನ ಮೇಲಿಂದ ಕೈಗಳನ್ನು ತೆಗೆದು, ಆತನ ಹಣೆಗೆ ಎರಡು ಬಾರಿ ಹೊಡೆದು, ಆತನಿಗೆ ನಡೆಯಲು ಹೇಳಿದನಂತೆ. ಇಷ್ಟರ ವರೆಗೆ ನಡೆಯಲಾಗದ ಹುಡುಗನು ಎದ್ದು ನಡೆದು ಹೋದನಂತೆ.

ರೋಗಗಳನ್ನು ಗುಣಪಡಿಸುವುದು, ಈ ಮಾಯಾವಿಯ ಕುಟುಂಬವು ಬಹಳ ಸಮಯದಿಂದ ನಡೆಯಿಸಿ ಬಂದ ಉದ್ಯಮವಂತೆ. ಆತನ ಕೈಗಳನ್ನು ಒಂದು ಗಾಜಿನ ಪೆಟ್ಟಿಗೆಯಲ್ಲಿ ಹಾಕಿದರೆ ಅವುಗಳಿಂದ ನೀಲವರ್ಣದ ಒಂದು ಧೂಮವು ಹೊರಡುವುದು ಕಾಣಬರುವುದಂತೆ.

ಹತ್ತಿಯಿಂದ ಮನೆ.

ಯುನೈಟೆಡ್ ಸ್ಟೇಟ್ಸಿನ ಸಂಶೋಧಕರು ಹತ್ತಿಯಿಂದ ಮನೆಗಳನ್ನು ನಿರ್ಮಿಸುವ ಉಪಾಯಗಳನ್ನು ಕಂಡು ಹಿಡಿಯುತಿದ್ದಾರೆ. ಅವರ ಪ್ರಯೋಗದಂತೆ ಗೃಹಗಳು ಒಳಗೂ ಹೊರಗೂ ಹತ್ತಿಯಿಂದಲೇ ನಿರ್ಮಿತವಾಗುತ್ತವೆ. ನೆಲವು ಕೂಡ ಹತ್ತಿಯಿಂದಲೇ ಮಾಡಲಾಗುತ್ತದೆ.

ಆಧುನಿಕ ಯುಗದ ಎಲ್ಲ ಅನುಕೂಲತೆಗಳನ್ನೂ ಈ ಗೃಹಗಳಲ್ಲಿ ಒದಗಿಸಲಾಗುತ್ತೆ. ಬೆಂಕಿ ಮತ್ತು ಗಾಳಿಯಿಂದ ಅಪಾಯದ ಭಯವೂ ಇಲ್ಲ. ವೆಚ್ಚ ಅತಿ ಸ್ವಲ್ಪ.

—o0o—

ಪರಿಜನರನ್ನು ಸೇರಿಸದಿದ್ದರೆ ಹೊಟೇಲೇ ಇರಬೇಡಿ!

ಕೆಲವು ದಿನಗಳ ಹಿಂದೆ ಸೇಲಂ ಪೌರ ಸಭೆಯಲ್ಲಿ ಒಂದು ಮಹತ್ವದ ನಿರ್ಣಯವಾಯಿತೆಂದು ಗೊತ್ತಾಗಿದೆ.

ಪರಿಜನರ ಪ್ರವೇಶಕ್ಕೆ ಯಾವ ಯಾವ ಹೊಟೇಲುಗಳಲ್ಲಿ ಬಹಿಷ್ಕಾರ ಹಾಕಿ ಫಲಾಹಾರ ಕೊಡುವುದಿಲ್ಲವೋ ಆ ಹೊಟೇಲುಗಳಿಗೆ ರಹದಾರಿಯನ್ನು (ಲೈಸನ್ಸ್) ಕೊಡಕೂಡದೆಂದು ಪೌರಸಭೆ ನಿರ್ಣಯಿಸಿದೆಯಂತೆ.

ಈ ನಿರ್ಣಯವನ್ನು ಇತರ ಪೌರಸಭೆಗಳೂ ಅನುಸರಿಸುವರೆಂದು ತೋರುತ್ತದೆ. ಹಿಂದುಗಳಿಗೆ ಪ್ರವೇಶವಿರುವ ಕಡೆ ಪರಿಜನರಿಗೆ ಇಲ್ಲದಿರುವುದು ಸ್ವಲ್ಪವೂ ಸಮರ್ಥನೀಯವಲ್ಲ.

—o0o—

ಸರ್ವಾಧಿಕಾರಿಯ ಕುರುಡು ನಂಬಿಕೆ!

ಯುರೋಪಿನ ಸರ್ವಾಧಿಕಾರಿಗಳಲ್ಲೆಲ್ಲಾ ಮುಸ್ಸೋಲಿನಿಯೇ ಅಂಧಶ್ರದ್ಧೆಗೆ ಬಹಳ ಹೆಚ್ಚಾಗಿ ಬಲಿಯಾದವನು.

ನಮ್ಮ ಪೂರ್ವ ಸಂಪ್ರದಾಯ ಪ್ರಿಯರು ಎಲ್ಲಾದರೂ ಹೋಗುವಾಗ ವಾಯಸ (ಕಾಗೆ) ಎಡದಿಂದ ಬಲಕ್ಕೆ ಹೋಯಿತೇ ಬಲದಿಂದ ಎಡಕ್ಕೆ ಹೋಯಿತೇ ಎಂದು ನೋಡುವುದಿಲ್ಲವೆ? ವಾಯಸದ ಆಗಮನಕ್ಕೆ ಎದುರು ನೋಡುತ್ತಲಿದ್ದು ತಮ್ಮ ಕಾರ್ಯಾತುರತೆಯನ್ನೂ ಮರೆತುಬಿಡುತ್ತಾರೆ. ಬೆಕ್ಕು ಅಡ್ಡ ಬಂತೆಂದರೆ ಕೆಲಸಕ್ಕೆ ಚಕ್ಕರ್!

ಹಾಗೆಯೇ ಮುಸೋಲಿನಿ ಕೂಡ ಎಲ್ಲಾದರೂ ಹೋಗಬೇಕಾದರೆ ಪಕ್ಷಿ ಹಾರುವುದನ್ನು ನೋಡುತ್ತಾನೆ. ಒಳ್ಳೆ ಶಕುನವೆಂದು ದೃಢಪಟ್ಟಲ್ಲದೆ ಹೆಜ್ಜೆ ಮುಂದಿಡುವುದಿಲ್ಲ.

ಬಹಳ ಜಟಿಲವಾದ ಸಮಸ್ಯೆಯನ್ನು ಬಿಡಿಸಬೇಕಾದಾಗ ಇಸ್ಪೀಟ್ ಪ್ಯಾಕನ್ನು ತನ್ನ ಮೇಜಿನಿಂದ ತೆಗೆದು, ಅದರ ಸಾಧ್ಯಾಸಾಧ್ಯತೆಗಳನ್ನು ತಿಳಿದುಕೊಳ್ಳುತ್ತಾನೆ.

ಇಟಲಿ-ಫ್ರಾನ್ಸ್ ಒಪ್ಪಂದ ವಿಫಲವಾದುದಕ್ಕೆ ಕಾರಣವೇನು ಗೊತ್ತೆ? ಅವನ ಇಸ್ಪೀಟ್ ಪ್ಯಾಕ್ 'ದಾರಿತೋರಲಿಲ್ಲ' ಆಕಾಶ ನೋಡುವಂತಾಯಿತು! ಆದ್ದರಿಂದಲೇ ಬ್ರಿಟನ್ನಿನೊಂದಿಗೆ ಸಲೀಸಾಗಿ ಆದ ಒಪ್ಪಂದ ಫ್ರಾನ್ಸಿನೊಂದಿಗೆ ಆಗಲು ಕಷ್ಟವಾಗಿ ಕಾಣಿತು.

—o0o—

ಪ್ರಕಟಣೆ.

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್, ಲಿಮಿಟೆಡ್, ಮಡಿಕೇರಿ.
(ಕೋ-ಆಪರೇಟಿವ್ ಸೊಸೈಟೀಸ್ ಆಕ್ಟು ಪ್ರಕಾರ ರಿಜಿಸ್ಟರಾಗಿದೆ.)
(ಸ್ಥಾಪಿಸಲಾದದ್ದು 1921ರಲ್ಲಿ)

		ರೂ.	ಆ.	ಪೈ.
ಶೇರ್ ಬಂಡವಾಳ	-	50,000	0	0
ವಸೂಲಾದ ಶೇರ್ ಮೊಬಲಗು	-	44,690	0	0
ಜಮಾಬಂದ ಠೇವಣಾತಿ	-	2,81,879	15	4
ವಸೂಲಾದ ಕ್ಷೇಮನಿಧಿ	-	1,31,704	12	0
ಸೇವಿಂಗ್ಸ್ ಬ್ಯಾಂಕ್ ಡಿಪಾಜಿಟ್ಟು	-	32,211	3	5
ಟ್ರಸ್ಟ್ ಡಿಪಾಜಿಟ್ಟು	-	38,085	15	8

ಈ ಬ್ಯಾಂಕಿನಿಂದ ಕೊಡಗು ದೇಶದ ಸಹಕಾರಿ ಸಂಘಗಳಿಗೇನೇ ಹೆಚ್ಚಾಗಿ ಸಾಲ ಕೊಡತಕ್ಕದ್ದು.

ಒಂದು ಮತ್ತು ಎರಡು ವರ್ಷಗಳ ಅವಧಿಯ ಠೇವಣಾತಿಗಳಿಗೆ ಶೇಕಡ ಬಡ್ಡಿಯೂ 3½ ದರದಲ್ಲಿಯೂ, ಮೂರು ಅಥವ ಹೆಚ್ಚಿನ ಅವಧಿಯ ಠೇವಣಾತಿಗಳಿಗೆ ಶೇಕಡ ಬಡ್ಡಿಯೂ 4ರ ದರದಲ್ಲಿಯೂ ತಾ. 1-9-1937ರಿಂದ ಬಡ್ಡಿ ಕೊಡಲಾಗುತ್ತೆ.

ತಾ. 1-10-1936ರಿಂದ ಬ್ಯಾಂಕಿನಲ್ಲಿ ಕರೆಂಟ್ ಸೇವಿಂಗ್ ಬ್ಯಾಂಕ್ ಲೆಕ್ಕವೂ ಮತ್ತು ಟ್ರಸ್ಟ್ ಡಿಪಾಜಿಟ್ ಲೆಕ್ಕವೂ ತೆರೆಯಲ್ಪಟ್ಟಿವೆ. ಇದರ ವಿಷಯ ಹೆಚ್ಚಿನ ವಿವರಗಳಿಗೆ ಬ್ಯಾಂಕು ಆಫೀಸಿಗೆ ಬರೆದುಕೊಂಡಲ್ಲಿ ವಿವರವಾಗಿ ಬರೆದು ತಿಳಿಸಲಾಗುವುದು.

ವರ್ಷಕ್ಕೊಂದಾವರ್ತಿ ಕೋ-ಆಪರೇಟಿವ್ ರಿಜಿಸ್ಟ್ರಾರವರು ಲೆಕ್ಕ ಅಜಮಾಯಿಷಿ ಮಾಡುತ್ತಾರೆ.

ಪ್ರೆಸಿಡೆಂಟ್:—ಪಂದ್ಯಂಡ ಐ. ಬೆಳ್ಯಪ್ಪನವರು ಎಂ. ಎಲ್. ಸಿ.
ಟ್ರೆಜರರ್:—ಸಿ. ಎ. ಮಂದಣ್ಣನವರು ಬಿ. ಎ., ಬಿ. ಎಲ್.
ಸೆಕ್ರೆಟರಿ:—ಪುಲಿಯಂಡ ಜಿ. ಐಯ್ಯಪ್ಪನವರು ಬಿ. ಎ., ಬಿ. ಎಲ್.

ದಿ ಎಗ್ರಿಕಲ್ಚರಲ್ ಎಂಡ್ ಇಂಡಸ್ಟ್ರಿಯಲ್ ಬ್ಯಾಂಕ್ ಲಿಮಿಟೆಡ್.

(ಬ್ರಿಟಿಷ್ ಹಿಂದೂಸ್ಥಾನದಲ್ಲಿ ಸ್ಥಾಪಿತವಾದದ್ದು)

ಹೆಡ್ ಆಫೀಸು:—'ಲಕ್ಷ್ಮೀನಿವಾಸ್' ಬಿಲ್ಡಿಂಗ್ಸ್, ಕುಂದಾಪುರ, ದ. ಕ.

ಪ್ರಕಟಣೆ.

ಕಷ್ಟಕಾಲದಲ್ಲಿ ಸಂಪಾದಿಸಿದ ಹಣವನ್ನು ಠೇವಣಾತಿ ಇಟ್ಟು ಈ ಚಿನ್ನದಂತ ಸುಸಂದರ್ಭವನ್ನು ಉಪಯೋಗಿಸಿಕೊಳ್ಳಿರಿ.

ಅತ್ಯಧಿಕ ಲಾಭ! **ಅಪೇಕ್ಷಿಸಿದಾಗ ಹಣ ಹಿಂತಕ್ಕೆ!**

ದಿ ಎಗ್ರಿಕಲ್ಚರಲ್ ಎಂಡ್ ಇಂಡಸ್ಟ್ರಿಯಲ್ ಬ್ಯಾಂಕಿನ

ಶೇಕಡ 5ರ 5 ವರ್ಷಗಳ "ಕೊರೊನೇಶನ್ ಕ್ಯಾಶ್ ಸರ್ಟಿಫಿಕೇಟುಗಳು" ರೂಪಾಯಿ 8, 20, 40, 80, 200, 400 ಮತ್ತು 800 ಗಳ ನಾನಾವರ್ಗದ ಠೇವಣಾತಿಗಳಿಗೆ ವ್ಯಯಕ್ತಿಕವಾದ ರೂ. 10, 25, 50, 100, 250, 500 ಮತ್ತು 1000 ಗಳು.

ದಯಮಾಡಿ ಕೊಡುವ ತಾರೀಖನ್ನು ಗಮನಿಸಿರಿ. ಹೆಚ್ಚಿನ ಮಾಹಿತಿಯನ್ನು [illegible], ಕುಂದಾಪುರ, ಕುಮಟಾ, ಗೋಕರ್ಣ, ಬೈಂದೂರು, [illegible], ಸೋಮವಾರಪೇಟೆ, ಕೋಟೇಶ್ವರ, ಶಿವಮೊಗ್ಗ, [illegible] ಮತ್ತು [illegible] ಶಾಖೆಗಳಿಂದ ತಿಳಿದುಕೊಳ್ಳಬಹುದು.

52-6 — The Agricultural & Industrial Bank Ltd

"ZANDU"

ಝಂಡೂರವರ	ಝಂಡೂರವರ
ದ್ರಾಕ್ಷಾಸವ ಮತ್ತು ಚ್ಯವನಪ್ರಾಶ ಇದು ಶಕ್ತಿವರ್ಧಕ ಮತ್ತು ಶ್ವಾಸ ರೋಗಗಳ ಕಾಯಿಲೆಗಳಿಗೆ ಅತ್ಯುತ್ತಮವಾದದ್ದು. ಕ್ಷಯದ ಪ್ರಾರಂಭಾವಸ್ಥೆಯಲ್ಲಿ ದಿವ್ಯವಾದ ಔಷಧ.	**ಕೇಸರಿ ಜೀವನ್** ಇದು ಎಲ್ಲಾ ತರದ ಅಶಕ್ತತೆಗೆ ದಿವ್ಯವಾದ ಔಷಧ. **ಝಂಡೂ ಆಯೋಡೈಸ್ಡ್ ಶೀರಸಪರಿಲ್ಲಾ** ಇದು ರಕ್ತಶೋಧಕ ಮತ್ತು ಸ್ತ್ರೀ ಸಂಬಂಧದ ರೋಗ ವಿಕಾರಗಳಲ್ಲಿ ದಿವ್ಯ ಔಷಧ.

ಝಂಡೂ ಫ್ಲೋಜಿಸ್ಟೈನ್.

ಇದು ನ್ಯುಮೋನಿಯಾ, ಶೋಥ, ಬೆಂಕಿಯಿಂದ ಉಂಟಾದ ಗಾಯ, ವಿದ್ರಧಿ (Boils) ಗಳಲ್ಲಿ ಅತ್ಯುಪಯುಕ್ತವಾದದ್ದು.

ಕೇಟಲಾಗಿಗೆ ಬರೆಯಿರಿ, ಮುಫ್ತಾಗಿ ಕಳುಹಿಸಲಾಗುತ್ತೆ.

ಮಡಿಕೇರಿ ಸ್ಟಾಕಿಸ್ಟ್—
ಡಾ. ಬಿ. ಕೆ. ಸೋಮಸುಂದರೇಶ್ವರ, ಎಲ್. ಎ. ಎಂ. ಎಸ್
(52-48) ಮತ್ತು ಆಯುರ್ವೇದ ವಿದ್ವಾನ್
ವಿರಾಜಪೇಟೆಯ ಏಜೆಂಟರು ಕೆ. ಕೃಷ್ಣರಾವ್. ವಿರಾಜಪೇಟೆ. (ದ. ಕೊಡಗು.)

'ಕೊಡಗು' ಪತ್ರಿಕೆಗೆ ಚಂದಾದಾರರಾಗಿರಿ

ಪೈಲ್ ಸಾಲ್

(OINTMENT FOR EXTERNAL USE)

PILESOL:- ಮೂಲವ್ಯಾಧಿಗೆ (ಹೊರಗೂ ಒಳಗೂ) ದಿವ್ಯೌಷಧಿ.

ಆಪರೇಷನ್ ಇಲ್ಲದೆ ಗುಣವಾಗುತ್ತೆ. ಬ್ರಿಟಿಷ್ ಗವರ್ನಮೆಂಟಿನವರಿಂದ ಇಂಡಿಯಾದಲ್ಲಿಯೂ, ಪರದೇಶದಲ್ಲಿಯೂ ರಿಜಿಸ್ಟರ್ ಮಾಡಲ್ಪಟ್ಟಿದೆ.

ರಕ್ತ ಕೀವು ಬಿದ್ದರೂ ಅತಿ ಶೀಘ್ರವಾಗಿ ಗುಣವಾಗುತ್ತದೆ.

ಪೈಲ್ ಸಾಲ್ ತಣ್ಣಗಿರುತ್ತದೆ. ಜಾರಿದ ನರಗಳು ಯಥಾಸ್ಥಾನಕ್ಕೆ ಬರುತ್ತವೆ. ಪ್ರಖ್ಯಾತಿ ಹೊಂದಿದ ಅನೇಕ ಡಾಕ್ಟರುಗಳಿಂದ ಒಳ್ಳೆಯ ಹೆಸರು ಪಡೆದಿದೆ. ಈ ವ್ಯಾಧಿಯಿಂದ ಮಲವಿಸರ್ಜನೆಯು ಅಕ್ರಮವಾಗುವುದನ್ನು ಪೈಲ್ ಸಾಲ್ ಗುಣಪಡಿಸುತ್ತದೆ

ಯೋಗ್ಯತಾಪತ್ರಗಳು ನಾನಾ ದೇಶಗಳಿಂದ ನಮಗೆ ಬಂದಿರುತ್ತವೆ.

ಈಗಿನ ಒಂದು ಸರ್ಟಿಫಿಕೇಟು.

ನಾಪೋಕ್ಲು,

ಅಯ್ಯಾ,

ನಿಮ್ಮ ಪೈಲ್ ಸಾಲ್ ನನ್ನೊಬ್ಬ ರೋಗಿಗೆ ತುಂಬಾ ಸಹಾಯಮಾಡಿದೆ ಆದ್ದರಿಂದ ದಯವಿಟ್ಟು ಪುನಹ ಮತ್ತೊಂದು ಸೀಸೆಯನ್ನು ವಿ. ಪಿ. ಮೂಲಕ ಕಳುಹಿಸಿಕೊಡಿ. ಮತ್ತೊಬ್ಬನಿಗೆ ಇದರ ಪ್ರಯೋಗವನ್ನು ಮಾಡಬೇಕಾಗಿದೆ

(*Sd*) ಎಸ್. ಯಮು. ದೇವಯ್ಯ,
ಸಬ್-ಅಸಿಸ್ಟೆಂಟ್ ಸರ್ಜನ್,
23 ನಾಪೋಕ್ಲು, ಕೊಡಗು.

ಉಪಯೋಗಿಸುವ ವಿಧಾನ ಔಷಧದ ಜೊತೆಯಲ್ಲಿ ಕಳುಹಿಸಲಾಗುತ್ತೆ.

ಕ್ರಯ:—1 ಔನ್ಸಿಗೆ ರೂ. 5-0-0. ½ ಔನ್ಸಿಗೆ ರೂ. 2-12-0. ಪೋಸ್ಟೇಜು ಪ್ರತ್ಯೇಕ. ಮಾದರಿ ಸೀಸೆಗೆ ರೂ. 1-0-0. ಮನಿಯಾರ್ಡರ್ ಮೂಲಕವಾಗಲೀ ಪೋಸ್ಟಲ್ ಆರ್ಡರ್ ಮೂಲಕವಾಗಲೀ ಹಣ ಕಳುಹಿಸಬಹುದು.

ಬೇಕಾದವರು ಈ ವಿಳಾಸಕ್ಕೆ ಬರೆದು ತರಿಸಿಕೊಳ್ಳಬಹುದು.

ಕೇರಳ ಲೆಬೋರೇಟರಿ (ರಿಜಿಸ್ಟರ್ಡ್), ಮಂಗಳೂರು ಸಿಟಿ.

ಕೊಡಗು

ನಿಮ್ಮ ಮುದ್ರಣ ಕೆಲಸಗಳನ್ನು "ಕೊಡಗು" ಪ್ರೆಸ್ಸಿನಲ್ಲೇ ಮುದ್ರಿಸಿರಿ.

ಪ್ರತಿ ಶುಕ್ರವಾರ ಪ್ರಕಟಿಸಲ್ಪಡುವುದು.

ಸಂಪಾದಕ:— ಪಿ. ಐ. ಬೆಳ್ಯಪ್ಪ. ವಾರ್ಷಿಕ ಚಂದಾ ರೂ. ೩-೮-೦

ತಾ. ೮—೭—೧೯೩೮.

ಸಂಪುಟ ೧೮] [ಸಂಚಿಕೆ ೩

Travancore National & Quilon Bank, Ltd.

(INCORPORATED IN TRAVANCORE—1912.)

(Liability of Members limited.)

Central Office: MADRAS.

With a country wide net work of seventy eight offices make service promt and efficient

Working Capital over FOUR CRORES

Open a HOME SAVING account and resolve to save something and invest a lot every year in 3 YEAR 4% CASH CERTIFICATES

SAVINGS BANK:—accounts opened for sums above Rs. 5/- and interest allowed on daily balances Withdrawls by cheques Maximum amount withdrawable per week-Rs. 250-

FIXED DEPOSITS:—accepted for periods from 6 to 24 months at rates which may be ascertained on application

CURRENT ACCOUNTS:—opened for sums above Rs 100/- and interest allowed on daily credit balances from Rs 100/- to Rs. 20,000/-

All other kinds of Banking business transacted.

For terms please apply to the central Office or to any of the branches.

K. S. Ramanujam, *General Manager.*

52-10

K. M. Eapen, *Joint Managing Director,*

C. P. Mathen, *Managing Director.*

THE CANARA BANKING CORPORATION, UDIPI, Ltd.

(Incorporated in British India.)

Estd. 1906.

BRANCHES:

1 Byndoor,
2 Coondapoor
3 Erode,
4 Madras
5 Mangalore Car Street,
6 Mangalore, Bunder,
7 Malpe,
8. Mercara,
9. Mettupalayam,
10. Mysore,
11. Sagar,
12. Saklaspur,
13. Salem,
14. Shimoga,
15 Shirva,
16 Tellicherry,
17. Thirthahalli,
18. Virarajendrapet,
19. Vellore,
20. Udipi.

TOTAL RESOURCES EXCEED Rs. 62 LAKHS.

Udipi,
20th June 1938.

52-32

V. R. Kamath, B. A., LL. B.,
Ag. Manager.

ಸದ್ವೈದ್ಯ ಶಾಲಾ, ನಂಜನಗೂಡು.

ದಕ್ಷಿಣ ಭಾರತದ

ಪ್ರಸಿದ್ಧ ಆಯುರ್ವೇದೀಯೌಷಧಗಳ ದವಾಖಾನೆ.

ಜೀವರತ್ನಗಳು.

ಶ್ರೀಕರ ಕಸ್ತೂರಿ ಮಾತ್ರೆ.

ಅನೇಕ ಸುವಾಸನೆಯುಳ್ಳ ಈ ಮಾತ್ರೆಗಳು ನಿತ್ಯಾರೋಗ್ಯ ಕಾಪಾಡುವುದಕ್ಕೂ, ಮಕ್ಕಳ ಕೆಮ್ಮು, ನೆಗಡಿ, ಜ್ವರ, ಪಕ್ಕೆ ಶೂಲೆಗಳಿಗೂ ಅಮೃತ. ಬೆಲೆ 0-4-0, 0-2-0

ಶ್ರೀಕರ ಬಾಲಸಂಜೀವಿನಿ

ಮಕ್ಕಳ ಸುಖಭೇದಿ, ಅಜೀರ್ಣ, ವಾಯು, ಜ್ವರಗಳಿಗೆ. ಬೆಲೆ 0-4-0

ನಮ್ಮ ರಿಜಿಸ್ಟರ್

ನಂಜನಗೂಡು ಟೂತ್ ಪೌಡರನ್ನು

ಉಪಯೋಗಿಸಿರಿ ಅನುಕರಣೆಗಳಿಗೆ ಮೋಸಹೋಗಬೇಡಿರಿ.

ಜ್ವರಕೇಸರಿ

ಎಲ್ಲಾ ವಿಧವಾದ ಜ್ವರಗಳನ್ನು ಜಾಗ್ರತೆ ಗುಣಮಾಡುವ ಅದ್ಭುತ ಶಕ್ತಿಯುಳ್ಳ ಮಾತ್ರೆ. ಬೆಲೆ 0-8-0, 0-4-0.

ಸುಕುಮಾರತೈಲ

13

ನಿಸಿಲು ಹೆಚ್ಚಿದ ಭಾಗೆಲ್ಲಾ ಉಂಟಾಗುವ ತಲೆ ನೋವು, ಒತ್ತಲೆ ನೋವು, ತಲೆ ಸುತ್ತ ಮುಂತಾದ ಸಮಸ್ತ ನೇತ್ರ, ಶಿರೋವ್ಯಾಧಿಗಳಿಗೂ ಸಂಜೀವನ. ಬೆಲೆ 1-0-0

ಪ್ರೊಪ್ರೈಟರ್- ಭಿಷಗ್ರತ್ನ ಆಯುರ್ವೇದ ವಿದ್ವಾನ್, ಬಿ. ವಿ. ಪಂಡಿತ್.

ಉತ್ತಮ ಪ್ರಚಾರ! ಅಲ್ಪ ಸಖರ್ಚು!

ವ್ಯಾಪಾರಸ್ಥರೇ

ನಿಮ್ಮ ಮಾಲುಗಳಿಗೆ ಗಿರಾಕಿ ಬೇಕೇ ?

ಹಾಗಾದರೆ

ಕೊಡಗು ಜಿಲ್ಲೆಯ ಪ್ರತಿ ಹಳ್ಳಿಗಳಲ್ಲಿಯೂ ಮತ್ತು ಕರ್ನಾಟಕದ ಪ್ರಾಂತ್ಯಗಳಲ್ಲಿಯೂ ಪ್ರಚಾರವಿರುವ

"ಕೊಡಗು"

ವಾರ ಪತ್ರಿಕೆಯಲ್ಲಿ ಜಾಹೀರಾತುಗಳನ್ನು ಕೊಟ್ಟು ಪ್ರಯೋಜನ ಪಡೆಯಿರಿ.

ಜಾಹಿರಾತಿನ ದರಗಳು.

ಕಾಲ.	1 ಪುಟಕ್ಕೆ.	1 ಕಲಮಿಗೆ.	½ ಕಲಮಿಗೆ.	¼ ಕಲಮಿಗೆ
1 ವರ್ಷಕ್ಕೆ—	ರೂ. 180.	ರೂ. 55.	ರೂ. 33.	ರೂ. 22
6 ತಿಂಗಳಿಗೆ—	„ 100.	„ 35.	„ 22.	„ 13
3 ತಿಂಗಳಿಗೆ—	„ 60.	„ 20.	„ 13.	„ 8
1 ತಿಂಗಳಿಗೆ—	„ 25.	„ 10.	„ 6.	„ 4

ನಿರ್ಭಯವಾದ ಟೀಕೆ ಟಿಪ್ಪಣಿಗಳು—ಉದಾತ್ತವಾದ ಲೇಖನಗಳು—ವಿವಿಧ ಸಮಾಚಾರ ಸಂಗ್ರಹಗಳು ಇರುವ

'ಕೊಡಗು' ವಾರ ಪತ್ರಿಕೆಗೆ

ನೀವೇಕೆ ಚಂದಾದಾರರಾಗಬಾರದು ?

ನಿಮ್ಮ ಕರ್ತವ್ಯ.

ಪ್ರತಿಯೊಬ್ಬ ಮನುಷ್ಯನು ವಿವಾಹಿತನಿರಲಿ, ಅವಿವಾಹಿತನಿರಲಿ, ಧನವಂತನಿರಲಿ, ಧನಹೀನನಿರಲಿ, ಆತನ ರಕ್ಷಣೆಗೊಳಪಟ್ಟ ಕೆಲವರಿದ್ದೇ ಇರುವರು. ಆತನ ಮರಣಾನಂತರವೂ ಅಂಥವರು ಸುಖಿಗಳಾಗಿರುವಂತೆ ದಾರಿ ತೋರಿಸಿ ಕೊಡುವದು ಇವನ ಆದ್ಯ ಕರ್ತವ್ಯ.

ಇಂಥಾ ನಿಮ್ಮ ಕರ್ತವ್ಯ ಸಾಧನೆಗೆ "ಓರಿಯಂಟಲ್" ಸಹಕಾರಿ.



(ಓರಿಯಂಟಲ್ ಬಿಲ್ಡಿಂಗ್ಸ್, ಸೌತ್ ಪೆರೇಡ್ ಬೆಂಗಳೂರು)

64 ವರ್ಷಗಳಿಂದಲೂ "ಓರಿಯಂಟಲ್ ಪೋಲಿಸಿಗಳು" ಸಾವಿರಾರು ಅನಾಥ ಕುಟುಂಬಗಳನ್ನು ಅನ್ನಗಳ ಕಷ್ಟದಿಂದ ಉದ್ಧರಿಸಿವೆ.

ಕ್ರಮೇಣ ಪ್ರತಿಯೊಬ್ಬನೂ ವಿಮಾ ಮಾಡಲಶಕ್ತನಾಗಬಹುದಾದ್ದರಿಂದ ನಿಮ್ಮ ಕರ್ತವ್ಯವನ್ನು ಮಾಡಲು ತಪ್ಪಬೇಡಿರಿ.

"ಓರಿಯಂಟಲ್"ನಲ್ಲಿ ವಿಮಾ ಮಾಡಿ, ನಿಮ್ಮ ರಕ್ಷಣದಲ್ಲಿರುವ ಜೀವನವನ್ನು ಭದ್ರಪಡಿಸಿರಿ.

ಹೆಚ್ಚಿನ ಮಾಹಿತಿಗೆ ಕೆಳಗಿನ ಅಡ್ರೆಸ್ಸಿಗೆ ಬರೆಯಿರಿ—

ಓರಿಯಂಟಲ್

ಸರಕಾರದ ಭದ್ರತೆಯುಳ್ಳ ಜೀವ ವಿಮೆ ಕಂಪೆನಿ.

ಸ್ಥಾಪಿತವಾದ್ದು 1874.] ಹೆಡ್ ಆಫೀಸು—ಬೊಂಬಾಯಿ.

ಪ್ರತಿನಿಧಿಗಳೂ, ಶಾಖೆಗಳೂ ಇಂಡಿಯಾದಲ್ಲೆಲ್ಲಾ ಇರುವರು.

ಮಿ. ಎಂ. ಜೆ. ಕೃಷ್ಣಮೂರ್ತಿ, (ಇನ್ಸ್‌ಪೆಕ್ಟರ್, ಮೈಸೂರು.)

ಮಿ. ಎಲ್. ಎಫ್. ಸಿ. ಹಾಸ್, (ಇನ್ಸ್‌ಪೆಕ್ಟರ್, ಮಡಿಕೇರಿ.)

82-26 ಮಿ. ಬಿ. ಶೇಷಾದ್ರಿ, ಅ. ಇನ್ಸ್‌ಪೆಕ್ಟರು, ಶಿವಮೊಗ್ಗಾ.

Printed & Published by P. I. Belliappa, at 'Kodagu' Press Mercara for 'Kodagu' Ltd.

ಇಂಡಿಯೂದ ಪ್ರಮುಖ ಟಾನಿಕ್

ಆತಂಕನಿಗ್ರಹ

— ಮಾತ್ರೆಗಳು —

ಬಲಬದ್ಧತೆ, ಮನೋದೌರ್ಬಲ್ಯ, ನರಗಳ ಹೀನತೆ ಇನ್ನು ಗುಣಪಡಿಸಿ, ಆರೋಗ್ಯಕಾರಿಯಾದ ಹಸಿವು ಹುಟ್ಟಿಸಿ ರಕ್ತಶುದ್ಧಿ ಮಾಡುತ್ತದೆ.

ಈ ಮಾತ್ರೆಗಳು ಉತ್ತಮ ಬಲವರ್ಧಕವಾಗಿರುತ್ತದೆ. ಲಕ್ಷಾಂತರ ಜನರಿದನ್ನು ಉಪಯೋಗಿಸುತ್ತಿರುವರು. ಒಂದು ಡಬ್ಬಿ ಉಪಯೋಗಿಸಿ ನೋಡಿ. ಮೂವತ್ತೆರಡು ಮಾತ್ರೆಗಳ ಡಬ್ಬಿ ಒಂದಕ್ಕೆ ಒಂದು ರೂಪಾಯಿ ಮಾತ್ರ.

ಹೆಚ್ಚಿನ ವಿವರಕ್ಕೆ ಧರ್ಮಾರ್ಥ ಹಾಗೂ ಟಪ್ಪಾಲು ಖರ್ಚಿಗೆ ... ಕಳುಹಿಸಲ್ಪಡುವ ನಮ್ಮ

ಕಾಮಶಾಸ್ತ್ರವನ್ನೋದಿರಿ.

ಆತಂಕ ನಿಗ್ರಹ ಫಾರ್ಮಸಿ, ಚಿಕ್ಕಪೇಟೆ ಚೌಕ,

52-3 ಬೆಂಗಳೂರು ಸಿಟಿ.

The Bombay Mutual Life Assurance Society Ltd.,

Head Office:-BOMBAY. Estd. 1871.

ಬೊಂಬೇ ಮ್ಯೂಚುವಲ್.

1871 ರಿಂದಲೂ ಪ್ರತಿ ವರ್ಷ ಬಲಗೊಳ್ಳುತ್ತಿದೆ.

ಈ ವರ್ಷ ಇದು ಅಮೋಘವಾದ ಕೆಲಸ ಕಾರ್ಯಗಳನ್ನು ಮಾಡಿದೆ. ಜನಾದರಣೆಯನ್ನೂ, ನಂಬಿಕೆಯನ್ನೂ ಗಳಿಸಿಕೊಂಡಿದೆ. ಕಳೆದ 66 ವರ್ಷಗಳಿಂದಲೂ ಮುಂದುವರಿದು ಹೊಸ ಹೊಸ ತರದ ಸುಧಾರಣೆಗಳನ್ನೊಳಗೊಂಡಿರುತ್ತದೆ.

1937ರಲ್ಲಿ ಮಾಡಿದ ಉದ್ಯೋಗ	ರೂ.	2,53,15,500.
1937ರಲ್ಲಿ ಪೂರೈಸಿದ ಉದ್ಯೋಗ	ರೂ.	2,02,02,000.

ಎಂಡೋಮೆಂಟ್ ವಿಮಾ ಪತ್ರದ ಮೇರೆ 1000ಕ್ಕೆ ವರ್ಷಕ್ಕೆ 21ರಂತೆಯೂ, ಹೋಲ್ ಲೈಫ್ ವಿಮಾ ಪತ್ರಗಳಿಗೆ 26ರಂತೆಯೂ ಬೋನಸು ಹಂಚಲಾಗಿದೆ.

ದಿ ಬೊಂಬೇ ಮ್ಯೂಚುವಲ್ ಲೈಫ್ ಅಶ್ಯೂರೆನ್ಸ್ ಸೊಸೈಟಿ ಲಿಮಿಟೆಡ್,

12, **ಸೌತ್ ಪೆರೇಡ್, ಬೆಂಗಳೂರು.**

52-17

... ವರ್ಷಗಳಿಂದ ಅನುಭವಪಟ್ಟು ಪ್ರಖ್ಯಾತಿ ಹೊಂದಿದ

ಕರ್ಕೀ ಕಂಪನಿ

ಸುಪ್ರಸಿದ್ಧ ಜ್ವರದ ಗುಳಿಗೆ

ಇದು ಛಳಿಜ್ವರ, ಚಾತುರ್ಥಿಕ ಜ್ವರ, ಆಗಿಂದಾಗ್ಗೆ ಬರುವ ಜ್ವರ, ಮಲೇರಿಯಾ ಜ್ವರ ಇತ್ಯಾದಿ ನಾನಾತರದ ಜ್ವರಗಳ ಮೇಲೆ ತಕ್ಷಣವೇ ಗುಣ ಸಂಜೀವಿನಿಯಂತಿದೆ! ಬಾಟ್ಲಿಗೆ 1 ರೂ. 4 ಬಾಟ್ಲಿಗೆ ರೂ. 12 ಬಾಟ್ಲಿಗೆ 8 ರೂ ವಿ. ಪಿ. ಖರ್ಚು ಬೇರೆ.

ಗಣೇಶ ರಾಮಚಂದ್ರ ಕರ್ಕಿ.

ಮತ್ತು ಕಂಪನಿ,

(52-30) ಗಿರಗಾಂವ, ಮುಂಬಯಿ ೪,

ನೋಟೀಸು.

ಈ ಕೆಳಗಿನ ಮುಖಾಂತರ 'ಕೊಡಗು' ಪತ್ರಿಕೆಯ ಚಂದಾ ಹಣವನ್ನು ವಸೂಲು ಮಾಡಲು ಒಪ್ಪಿಕೊಂಡಿದ್ದರಿಂದ ಅವರನ್ನು ಏಜೆಂಟರುಗಳಾಗಿ ನೇಮಿಸಿ ಅವರಿಗೆ ನಮ್ಮ ರಶೀತಿ ಪುಸ್ತಕಗಳು ಕೊಡಲಾಗಿದೆ. ಕೆಳಗಿನ ಸಬ್ ಏಜೆಂಟರುಗಳಿಗೆ ಏಜೆಂಟರ ಜವಾಬ್ದಾರಿಕೆ ಮೇಲೆ ರಶೀತಿ ಪುಸ್ತಕಗಳು ಕೊಡಲಾಗಿದೆ. ದಯವಿಟ್ಟು ಚಂದಾದಾರರೆಲ್ಲರೂ ಅವರಿಗೆ ಅನುಕೂಲದ ಸ್ಥಳದಲ್ಲಿ ತಮ್ಮ ಚಂದಾವನ್ನು ಪಾವತಿ ಮಾಡಿ ರಶೀತಿ ಪಡೆಯಬೇಕಾಗಿ ಕೋರಲಾಗಿದೆ.

ಕೊಡಗಿನ ಎಲ್ಲಾ ಭಾಗಗಳಿಗೆ.

ಮೆ. ಮುಕ್ಕಾಟಿರ ಜೋಯಪ್ಪನವರು.

ಬಾಚಮಂಡ ಕರ್ಣಮ್ಮನವರು.

ಸಬ್ ಏಜೆಂಟರುಗಳು.

ರಾಜಪೇಟೆ—ಮೆ. ಮಂಡೇಪಂಡ ಸೋಮಯ್ಯನವರು,
ಪೊನ್ನಂಪೇಟೆ— ಸಿದ್ದಾಪುರ— ಮೆ. ಐನಂಡ ಪೊದಪ್ಪನವರು.
ಶ್ರೀಮಂಗಲ—ಮೆ ಪಿ. ಕೆ. ಮುದ್ದಮ್ಮಯ್ಯನವರು.
ವಿರಾಜಪೇಟೆ—ಮೆ. ಅಜ್ಜಮಾಡ ಮಾಚಪ್ಪನವರು ಮತ್ತು ಮೆ.
ಕೆ. ಮಾದಮ್ಮಯ್ಯನವರು.
ನಾಪೋಕ್ಲು—ಮೆ. ಅಪ್ಪಚೆಟ್ಟೋಳಂಡ ಮಾಚಯ್ಯನವರು.
ಸೋಮವಾರಪೇಟೆ—ಮೆ ಕೆ ನಾಗಪ್ಪನವರು.
ಪೊನ್ನಂಪೇಟೆ—ಮೆ. ಚೆಪ್ಪುಡಿರ ಯಂ. ಪೂಣಚ್ಚನವರು.
(ಕಾಫೀ ಶಾಪ್ಸ್ ಸ್ಟೋರ್ಸ್)

ಸೂಚನೆ.—ಪ್ರಿಂಟಾದ ರಶೀತಿ ಹೊಂದಿಕೊಳ್ಳದ ಯಾರೂ ಚಂದಾ ಕೊಡಬೇಕಾದವರಾಗಿ ಈ ಮೂಲಕ ತಿಳಿಸಲಾಗಿದೆ.

ಮೇನೇಜರ್,
"ಕೊಡಗು" ಲಿಮಿಟೆಡ್, ಮಡಿಕೇರಿ

ಚಿಕ್ಕ ಮಕ್ಕಳ ಮುಖ ಕಾಂತಿಗೆ

ಎಳೇ ಮಕ್ಕಳ ಸ್ನಾನಕ್ಕೆ **ಮೈಸೂರು ಗಂಧದ ಸಾಬೂನು** ಅತ್ಯುತ್ಕೃಷ್ಟವಾದದ್ದು. ಕೆನೆಯಂತಿರುವ ಇದರ ಉತ್ತಮ ನೊರೆಯು ಸೂಕ್ಷ್ಮವಾದ ಚರ್ಮಕ್ಕೆ ಏನೊಂದು ಹಾನಿಯನ್ನುಂಟುಮಾಡದೆ ಕೊಳೆಯನ್ನೆಲ್ಲಾ ತೆಗೆದುಹಾಕುತ್ತದೆ. ಚಿಕ್ಕ ಮಕ್ಕಳಿಗೆ ಸುವಾಸನೆಯುಳ್ಳ ಈ ಗಂಧದ ಸಾಬೂನಿನಲ್ಲಿ ಸ್ನಾನಮಾಡುವದೆಂದರೆ ಅತೀ ಪ್ರೀತಿ. ಇಂದೇ ಒಂದು ಸಾಬೂನನ್ನು ಕೊಂಡುಕೊಳ್ಳಿರಿ.

ಮೈಸೂರು ಗಂಧದ ಸಾಬೂನು

ಎಲ್ಲಾ ಅಂಗಡಿಗಳಲ್ಲೂ ಸಿಕ್ಕುತ್ತವೆ.

ಗವರ್ನಮೆಂಟ್ ಸೋಪ್ ಫ್ಯಾಕ್ಟರಿ, ಬೆಂಗಳೂರು.

ಕೆಲವು ದಿನಗಳ ಹಿಂದೆ ಹಿಂದೂಸ್ಥಾನದ ಒಂದು ವಾರ್ತಾ ಕಂಪೆನಿಯವರು ಪಂಡಿತ ಜವಾಹರಲಾಲರೊಳಗೂ ಮಿ. ಜಿನ್ನರೊಳಗೂ ನಡೆದ ಪತ್ರವ್ಯವಹಾರವನ್ನು ಅಪ್ಪಣೆಯಿಲ್ಲದೆ ಪ್ರಚಾರ ಮಾಡಿದರು. ಇದನ್ನು ನೋಡಿ ಮಿ. ಜಿನ್ನರು ಮಹಾತ್ಮರಿಗೆ ಬರೆದು ತಮ್ಮೊಳಗೂ ಗಾಂಧಿಜಿಯವರೊಳಗೂ ನಡೆದ ಪತ್ರವ್ಯವಹಾರಗಳನ್ನು ಪ್ರಚಾರ ಮಾಡಲು ಗಾಂಧಿಜಿಯವರ ಅಪ್ಪಣೆ ಕೇಳಿದರು. ಅದಕ್ಕೆ ಮಹಾತ್ಮರು ಅಪ್ಪಣೆಯನ್ನಿತ್ತರು. ಈ ಮುಖಂಡರ ಪತ್ರಗಳಲ್ಲಿನ ಕೆಲವು ಮುಖ್ಯ ಅಂಶಗಳನ್ನಿಲ್ಲಿ ಕೊಡಲಾಗಿದೆ.]

ಭಾರತದಲ್ಲಿ ಹಿಂದೂ-ಮುಸಲ್ಮಾನರ ಐಕ್ಯ.

ಮಹಾತ್ಮಗಾಂಧಿ-ಜಿನ್ನರ ಪತ್ರವ್ಯವಹಾರ.

ಶ್ರೀ ಜಿನ್ನರಿಗೆ ಗಾಂಧಿಜಿಯವರ ಪತ್ರ.

ಸೇಗಾಂವ್, ವಾರ್ಧಾ, ಅಕ್ಟೋಬರ್ ೧೯-೩೭.

ಪ್ರಿಯ ಮಿತ್ರರೇ-ತಮ್ಮ ಲಖನೌ ಭಾಷಣವನ್ನು ಜಾಗ್ರತೆಯಿಂದ ಓದಿ ನೋಡಿದೆನು. ನನ್ನ ಅಭಿಪ್ರಾಯವನ್ನು ನೀವು ತಿಳಿಯದೆ ಹೋದಿರೆಂದು ನನಗೆ ಬಹಳ ವ್ಯಸನವಾಗಿದೆ. ನನ್ನ ಉತ್ತರವು ನೀವು ಕಳುಹಿಸಿದ ಖಾಸಗಿ ಪತ್ರಕ್ಕಾಗಿತ್ತು. ಅದು ನನ್ನ ಸಂಪೂರ್ಣ ಮನೋಗತವನ್ನು ಸೂಚಿಸುವಂತಾದ್ದಾಗಿತ್ತು. ನೀವು ಅದನ್ನು ಈಗ ಉಪಯೋಗಿಸಿದ ರೀತಿಯಲ್ಲಿ ಉಪಯೋಗಿಸಿದುದು ಸರಿಯೇ? ನಿಮ್ಮ ಭಾಷಣವನ್ನು ಓದಿದಾಗ ಅದು ಯುದ್ಧದ ಘೋಷಣೆಯಂತೆ ತೋರಿಬಂತು. ನೀವು, ಇಬ್ಬರ ಕಲಹದಲ್ಲಿ ನನ್ನನ್ನು ಒಂದು ಸೇತುವೆಯಂತೆ ಉಪಯೋಗಿಸುವುದಿಲ್ಲವೆಂದು ನನಗೆ ಗೊತ್ತಿದೆ. ಅತ್ಯಂತ ವ್ಯಸನದಿಂದ ಇದನ್ನು ಬರೆದಿರುತ್ತೇನೆ.

ಇತಿ, ಯಂ. ಕೆ. ಗಾಂಧಿ

ಮಿ. ಜಿನ್ನರ ಉತ್ತರ.

ಮುಂಬಯಿ, ನವಂಬರ್, ೫ '೩೭.

ಮಿ. ಗಾಂಧಿಯವರೇ, ನಿಮ್ಮ ತಾ. 19ರ ಪತ್ರವು ಬಂತು. ನಿಮ್ಮ ಕಾಗದವನ್ನು ಪ್ರಚಾರ ಮಾಡಿದ ವಿಷಯದಲ್ಲಿ ನಾನು ಮಾಡಿದ್ದು ಸರಿ. ನಿಮ್ಮ ಕಾಗದವು ನನ್ನ ಅಭಿಪ್ರಾಯಕ್ಕಿಂತ ಹೆಚ್ಚಿನ ವಿಷಯವನ್ನೊಳಗೊಂಡಿದೆ. ನೀವು ನಿಮ್ಮ ಅಭಿಪ್ರಾಯವನ್ನು ಜನತೆಗೆ ವಿವರಿಸಬಹುದಾಗಿತ್ತು. ನಿಮ್ಮ ಕಾಗದದ ವಿಷಯದಲ್ಲಿ ನಾನು ಏನು ಅಪಾರ್ಥ ಮಾಡಿದೆನೆಂದು ನೀವು ತಿಳಿಸುವುದಿಲ್ಲ. ನನಗೆ ತುಂಬಾ ಮನನೊಂದಿತೆಂದಿದ್ದೀ ನೀವು ಹೇಳುತ್ತೀರಿ. ಲಖನೌವಿನ ನನ್ನ ಭಾಷಣವು ಯುದ್ಧವನ್ನು ಹೂಡತಕ್ಕದೆಂದು ಹೇಳುತ್ತೀರಿ. ಇದಕ್ಕೆ ನಾನು ವ್ಯಸನಪಡುತ್ತೇನೆ. ಅದು ಆತ್ಮರಕ್ಷಣೆಗಾಗಿ ಮಾಡಿದ್ದಾಗಿದೆ. ನಿಮ್ಮನ್ನು ಸೇತುವೆಗಾಗಿ ರಾಜಿಪಂಚಾತಿಗೆಯವರಾಗಿ ಮಾಡುವ ವಿಷಯದಲ್ಲಿ ನೀವು ಸಾಧ್ಯಾಣೆ ಕಾಂಗ್ರೆಸ್ ಮೆಂಬರಲ್ಲದ್ದರೂ ಕಾಂಗ್ರೆಸ್ಸಿನ ನಾಯಕರಿದ್ದೀರಿ ಎಂಬುದನ್ನು ನಾನು ಬಲ್ಲೆ. ನಿಮ್ಮ ಕಾಗದದಲ್ಲಿ ಯಾವ ನಿಶ್ಚಿತ ಅಭಿಪ್ರಾಯವಾಗಲೀ ಅಥವಾ ರಚನಾತ್ಮಕ ಸೂಚನೆಗಳಾಗಲೀ ಇಲ್ಲವೆಂದು ವ್ಯಸನಪೂರ್ವಕವಾಗಿ ತಿಳಿಸುತ್ತೇನೆ.

ಎಂ. ಎ. ಜಿನ್ನ.

ಮಿ. ಜಿನ್ನರ ರಾಷ್ಟ್ರೀಯ ಭಾವನೆಯ ಕುರಿತು ಮಹಾತ್ಮರ ಪತ್ರ.

ಸೇಗಾಂವ್, ಫೆಬ್ರವರಿ ३-'३೮.

ಪ್ರಿಯ ಮಿ. ಜಿನ್ನರೇ, ತಮ್ಮ ನವಂಬರ್ ತಾ. ೯ರ ಪತ್ರಕ್ಕೆ ನನ್ನ ಉತ್ತರವಿಲ್ಲವೆಂದು ತಾವು ಮೌಲಾನಾ ಸಾಹೇಬರೊಡನೆ ತಿಳಿಸಿದಿರೆಂದು ಪಂಡಿತ ಜವಾಹರಲಾಲರು ನನಗೆ ತಿಳಿಸಿದರು. ನನಗೆ ಸುಖ ಇಲ್ಲದಿರುವಾಗ ನಿಮ್ಮ ಲೇಖನವು ಬಂತು. ಕಾಗದ ಬಂದು ಮೂರು ದಿವಸದ ಮೇಲೆ ಅದು ನನಗೆ ತಿಳಿಸಲ್ಪಟ್ಟಿತು. ಆ ಪತ್ರವನ್ನು ನಾನು ಪುನಹ ಓದಿ ನೋಡಿದೆನು. ನಾನು ಉತ್ತರವಾಗಿ ಯಾವ ಸಂಗತಿಯನ್ನೂ ಹೇಳುವ ಅವಕಾಶವಿರಲಿಲ್ಲ. ಆದರೆ ತಾವು ಉತ್ತರವನ್ನು ನಿರೀಕ್ಷಿಸಿದ್ದೀರಿ ಎಂಬದನ್ನು ತಿಳಿಯಲು ನನಗೆ ಸಂತೋಷವಾಯಿತು. ನಿಮ್ಮ ಒಂದು ಖಾಸಗಿ ಸಂದೇಶವನ್ನು ಶ್ರೀ ಖೇರರು ನನಗೆ ತೋರಿಸಿದರು. ತಮಗೆ ನನ್ನ ಮನೋಗತವನ್ನು ತಿಳಿಸುವುದಕ್ಕಾಗಿ ಪತ್ರ ಬರೆದೆನು. ಅದರಲ್ಲಿ ತಮ್ಮಿಂದ ಯಾವುದನ್ನೂ ಮರೆಸುವ ವಿಷಯವು ಇಲ್ಲ. ಆದರೆ ನನ್ನ ಪತ್ರವನ್ನು ನೀವು ಉಪಯೋಗಿಸಿದ ರೀತಿಯು ಮಾತ್ರ ನನಗೆ ವ್ಯಸನವನ್ನುಂಟುಮಾಡಿತು. ಈಗಲೂ ಮಾಡುತ್ತಿದೆ.

ನನ್ನ ಮೌನದ ವಿಷಯ ನಿಮ್ಮ ಆಕ್ಷೇಪಣೆ; ನನ್ನ ಮೌನದ ಕಾರಣವು ನನ್ನ ಲೇಖನದಲ್ಲಿದೆ. ಹಿಂದೂ-ಮುಸಲ್ಮಾನರನ್ನು ಒಟ್ಟಿಗೆ ತರಲು ಸಾಧ್ಯವಿರುವುದಾದರೆ ನನ್ನಿಂದಾಗಬೇಕಾದ್ದನ್ನೆಲ್ಲಾ ನಾನು ಮಾಡಲು ಸಿದ್ಧನೇ ಇದ್ದೇನೆ. ಯಾರು ತಡೆ ಹಾಕಿದರೂ ನಾನು ಭಯಪಡತಕ್ಕಿಲ್ಲ. ನಿಮ್ಮ ಭಾಷಣವು ಯುದ್ಧದ ಘೋಷಣೆಯಲ್ಲವೆಂದು ನೀವೆನ್ನುತ್ತೀರಿ. ನಿಮ್ಮ ಅನಂತರದ ಭಾಷಣಗಳು ಕೂಡ ನನಗೆ ಮೊದಲಿನ ಅಭಿಪ್ರಾಯವನ್ನೇ ಸೂಚಿಸುತ್ತವೆ ಮನೋಗತವನ್ನು ವಿವರಿಸುವುದು ಪ್ರಯೋಜನವಲ್ಲವೆ? ನಿಮ್ಮ ಭಾಷಣದಲ್ಲಿ ಮೊದಲಿನ ರಾಷ್ಟ್ರೀಯ ಭಾವದ ಜಿನ್ನರನ್ನು ನಾನು ಕಾಣುವುದಿಲ್ಲ. ಆಫ್ರಿಕದಿಂದ ನಾನು 1915ರಲ್ಲಿ ಇಲ್ಲಿಗೆ ಬಂದಾಗ ತಾವು ಶ್ರದ್ಧಾಳುಗಳಾಗಿರುವಿರೆಂದು ನನಗೆ ಎಲ್ಲರೂ ಹೇಳಿದರು. ಈಗ ನೀವು ಆ ಹಿಂದಿನ ಜಿನ್ನರೇ ಆಗಿರುವಿರಾ? ಆಗಿದ್ದರೆ ಹೇಳಿರಿ. ನಿಮ್ಮ ಭಾಷಣಗಳು ಏನೇ ಇರಲಿ ನಾನು ನಿಮ್ಮ ಮಾತನ್ನು ಒಪ್ಪಿಕೊಳ್ಳುತ್ತೇನೆ. ಕೊನೆಯದಾಗಿ ನಾನು ಸೂಚನೆಗಳನ್ನು ತರಬೇಕೆಂದೆನ್ನುತ್ತೀರಿ. ನಾನು ನೀವೇನೆಂದು ಭಾವಿಸಿದ್ದೇನೋ ಅದೇ ನೀವಾಗಬೇಕೆಂದು ಮೊಣಕಾಲೂರಿ ತಮ್ಮನ್ನು ಕೇಳಿಕೊಳ್ಳುವುದಲ್ಲದೆ ಮತ್ತೇನನ್ನು ಸೂಚಿಸಲಿ? ಉಭಯ ಪಕ್ಷಗಳೊಳಗೆ ಪಂಚಾತಿಗೆಯಾಗುವ ಬಗ್ಗೆ ಸಲಹೆಗಳು ತಮ್ಮಿಂದ ಬರಬೇಕು. ಇದು ಸಹ ತಮ್ಮ ಕಣ್ಣುಗಳಿಗೆ. ಪ್ರಚಾರಕ್ಕಲ್ಲ. ಇದು ಒಬ್ಬ ಮಿತ್ರನ ಕೂಗು, ಶತ್ರುವಿನ ಕೂಗಲ್ಲ.

ಇತಿ, ಯಂ. ಕೆ. ಗಾಂಧಿ.

ಗಾಂಧಿಜಿಯವರಿಗೆ ಜಿನ್ನರ ಪತ್ರ.

ಹೊಸ ದೆಹಲಿ, ಫೆಬ್ರವರಿ ೧೫-'೩೮.

ಈ ಕಾಗದದಲ್ಲಿ, ಮಿ. ಜಿನ್ನರು ತಾವು ಮೌಲಾನಾ ಸಾಹೇಬರೊಡನೆ ಆಕ್ಷೇಪಿಸಲಿಲ್ಲವೆಂದೂ, ಶ್ರೀ ಖೇರರೊಡನೆ ಕಳುಹಿಸಿದ ಪತ್ರವು ಗುಪ್ತವಲ್ಲವೆಂದೂ, ಅದನ್ನು ಉಪಯೋಗಿಸಿ ಯಾರೊಡನೆಯೂ ಕಲೆತು ಆಲೋಚಿಸಬಹುದಿತ್ತೆಂದೂ ತಿಳಿಸಿ, ಆ ಎರಡು ಸಂಗಡಗಳನ್ನು ಒಟ್ಟಿಗೆ ತರಲು ಇದು ಸಕಾಲವಲ್ಲವೇ? ಎಂದು ಪ್ರಶ್ನಿಸಿದರು. ಲಖನೌವಿನ ಭಾಷಣದ ವಿಚಾರ ಮಾಡುತ್ತಾ, ಆ ಭಾಷಣವನ್ನು ತಾವು ಆತ್ಮರಕ್ಷಣೆಗಾಗಿ ಮಾಡಿದ್ದಾಗಿ ಹೇಳಿದರು. 1915ರಲ್ಲಿ ಜನರು ಆಡಿಕೊಳ್ಳುತ್ತಿದ್ದ ಜಿನ್ನರೇ ನೀವಲ್ಲವೇ ಎಂಬದಾಗಿ ಕೇಳುತ್ತೀರಿ. ಇದು ನ್ಯಾಯವೇ ಎಂದು ನನ್ನ ಪ್ರಶ್ನೆ. ಯಾವ ಪಂಚಾತಿಗೆಯಾಗಬೇಕೋ ಆ ವಿಷಯದಲ್ಲಿ ಕೆಲ ಸೂಚನೆಗಳನ್ನು ಗಾಂಧಿಜಿಯವರು ಕೊಟ್ಟಿಲ್ಲವೆಂದೂ, ಗಾಂಧಿಜಿಯವರು ಈ ಎರಡು ಪಂಗಡದಲ್ಲಿ ಮಿತ್ರತ್ವವನ್ನುಂಟುಮಾಡುವ ವಿಷಯದಲ್ಲಿ ಮಾಡಬಹುದಾದ ಪ್ರಯತ್ನಕ್ಕೆ ತಾವು ತಮ್ಮ ಕೈಲಾದ ಮಟ್ಟಿನ ಸಹಾಯ ಮಾಡುವುದಾಗಿ ತಿಳಿಸಿರುವರು.

ಜಿನ್ನರಿಗೆ ಗಾಂಧಿಜಿಯವರ ಪತ್ರ.

ಸೇಗಾಂವ್, ವಾರ್ಧಾ, ಫೆಬ್ರವರಿ ೨೪-'೩೮.

ಈ ಪತ್ರದಲ್ಲಿ ಮಹಾತ್ಮ ಗಾಂಧಿಯವರು ಜವಾಹರಲಾಲರಿಗೆ ಜಿನ್ನರು ಬರೆದ ಲೇಖನವನ್ನು ತಾವು ನೋಡಿರುವುದಾಗಿಯೂ, ಅದರಲ್ಲಿ ಉತ್ತರವನ್ನು ನಿರೀಕ್ಷಿಸದೆ ಪರಸ್ಪರ ಚರ್ಚಿಸಿಕೊಳ್ಳುವ ವಿಷಯವೇ ಒತ್ತಿ ಹೇಳಲ್ಪಟ್ಟಿದೆಯೆಂದೂ, ಆದರೆ ಸಂಭಾಷಣೆಯು ಜಿನ್ನ-ಜವಾಹರಲಾಲರೊಳಗೆ ಮೊದಲೋ ಅಥವಾ ಜಿನ್ನ-ಮೌಲಾನಾ ಆಜಾದರೊಳಗೆ ಮೊದಲೋ ತಿಳಿಯದಾಗಿದೆಯೆಂದೂ, ಆದರೆ ತಮ್ಮೊಡನೆ ಮಾತಾಡಬೇಕೆಂದಿದ್ದರೆ ಸೇಗಾಂವಿನಲ್ಲಿ ಮಾರ್ಚ್ ತಾ. 10ರ ಮುಂಚಿತವಾಗಿ ನೋಡಬಹುದೆಂದೂ, ಅನಂತರ ತಾವು ಬಂಗಾಳಕ್ಕೆ ಹೋಗುವ ಸಂಭವವಿದೆಯೆಂದೂ, ಮತ್ತು ಹಿಂದೂ ಮುಸಲ್ಮಾನರ ಪ್ರಶ್ನೆಯ ವಿಷಯದಲ್ಲಿ ತಮಗೆ ಮಂತ್ರಾಲೋಚನೆ ಹೇಳತಕ್ಕವರು ಮೌಲಾನಾ ಆಜಾದರಾದ್ದರಿಂದ ಅವರೊಡನೆ ಮುಂಚಿತವಾಗಿ ಜಿನ್ನರು ಸಂಭಾಷಣೆ ನಡೆಸುವುದು ಯುಕ್ತವೆಂದೂ, ಆದರೆ ಸದಾ ತಾವು ಜಿನ್ನರು ಹೇಳಿದಾಗ ತಾವು ಹಾಜರಿರುವುದಾಗಿಯೂ ಬರೆದರು.

ಜಿನ್ನರ ಪ್ರತ್ಯುತ್ತರ.

ಹೊಸ ದೆಹಲಿ, ಮಾರ್ಚ್, ३-३೮.

ಈ ಪತ್ರದಲ್ಲಿ ಮಿ. ಜಿ. ಗಾಂಧಿಜಿಯವರು ಮೌಲಾನರೊಡನೆ ಮೊದಲು ಮಾತಾಡಿದರಾಗಬಹುದೆಂದುದಕ್ಕೆ ಆಕ್ಷೇಪಿಸಿ ಗಾಂಧಿಜಿಯವರು ತಮ್ಮ ಅಭಿಪ್ರಾಯದಲ್ಲಿ ಯಾವ ವ್ಯತ್ಯಾಸವನ್ನೂ ತೋರಿಸಿಲ್ಲವೆಂದು, ಹೇಳಿ ಚಕ್ರಗೋಷ್ಠಿಯಲ್ಲಿಯ ಸಂದರ್ಭದಲ್ಲಿ ಗಾಂಧಿಜಿಯವರು ಅನುಸರಿಸಿದ ಧೋರಣೆಯನ್ನು ಠೀಕಿಸಿರುವರು. ಕಾಂಗ್ರೆಸ್ ಸಂಸ್ಥೆಯವರು ಹಿಂದೂಗಳ ಪರವಾಗಿ ಮಾತ್ರ ಮಾತಾಡಬೇಕೆಂದೂ, ಮುಸಲ್ಮಾನರ ಏಕ ಮಾತ್ರ ಪ್ರತಿನಿಧಿ ಸಭೆಯು ಮುಸ್ಲಿಂ ಲೀಗೆಂದು ಅಂಗೀಕರಿಸಬೇಕೆಂದೂ ಸೂಚಿಸಿದರು.

ಗಾಂಧಿಜಿಯವರ ಪತ್ರ.

ಸೇಗಾಂವ್, ವಾರ್ಧಾ, ಮಾರ್ಚ್ ೮-'೩೮.

ಪತ್ರದಲ್ಲಿ ಶ್ರೀ ಜಿನ್ನರು ಕೇಳಿದ ಪ್ರಕಾರ ತಮಗೆ ಬೆಳಕು ಕಾಣಸಿಕ್ಕಲಿಲ್ಲವೆಂದೂ ಹಿಂದೂಗಳ ಮತ್ತು ಕಾಂಗ್ರೆಸ್ಸಿನ ಪರವಾಗಿ ಮಾತಾಡಲು ತಮಗೆ ಶಕ್ತಿಯಿಲ್ಲವೆಂದೂ, ತಾವು ಈ ಎರಡು ಪಕ್ಷಗಳ ಪ್ರತಿನಿಧಿಗಳಲ್ಲವೆಂದೂ ಹೇಳಿ, ತಮ್ಮಿಂದ ಸಾಧ್ಯವಿರುವುದನ್ನೆಲ್ಲ ಮಾಡುವುದಕ್ಕೂ ತಮ್ಮ ಶಕ್ತಿಯನ್ನು ಉಪಯೋಗಿಸಿ ಒಪ್ಪಂದಕ್ಕೆ ಸಹಾಯ ಮಾಡುವುದಾಗಿಯೂ ತಿಳಿಸಿದರು. ಮತ್ತು ಮುಂಬಯಿಯಲ್ಲಿ ಶ್ರೀ ಜಿನ್ನರನ್ನು ನೋಡುವುದಾಗಿಯೂ ತಿಳಿಸಿದರು.

ಮಿ. ಜಿನ್ನರ ಉತ್ತರ.

ಮಿ. ಜಿನ್ನರ ಉತ್ತರದಲ್ಲಿ, ಮುಂಬಯಿಯಲ್ಲಿ ಮಹಾತ್ಮರನ್ನು ಭೇಟಿಯಾಗಲು ತಮ್ಮ ಸೂಚನೆಗಳನ್ನು ಕೊಟ್ಟಿದ್ದರು. ಅನಂತರ ಮತ್ತೂ ಕೆಲವು ಪತ್ರವ್ಯವಹಾರಗಳು ನಡೆದು ಮಹಾತ್ಮರ-ಜಿನ್ನರ ಭೇಟಿಯಾಯಿತು.

WANTED.

Candidates for Telegraph Station Master, Radio and Electric class. Allowance Rs 28. Uniform, passage and quarter free. Service essential. Rules and Entrance form on annas eight. Director, Royal Telegraph and Ry. Duties College. Bombay 14. 8-7.

ಡಾ. ನೋಬ್ಲ್ಸ್ ಎಬ್ರಹಾಂ
ದಂತ ವೈದ್ಯರು.
(ಪಿಯರ್ಸ್‌ಲೆಸ್ಲಿ ಬಂಗ್ಲೆ)
(ಪ್ರೆಸ್ಬರ್ಸ್ ಹತ್ತಿರ)
ಮಡಿಕೇರಿ.

ದಿ ಗಾರ್ಡಿಯನ್ ಆಫ್ ಇಂಡಿಯಾ ಇನ್ಸೂರೆನ್ಸ್ ಕಂಪನಿ ಲಿಮಿಟೆಡ್, ಮದ್ರಾಸು.

ಹೊಸ ಉದ್ಯೋಗ:—೧೯೩೮ರಲ್ಲಿ 52,54,750 ರೂ. ಭರವಸೆಯ 4689 ಪ್ರಪೋಸಲ್‌ಗಳು ಸಿಕ್ಕಿವೆ. ಅವರಲ್ಲಿ ಹಿಂದಿನ ವರ್ಷದ ಪೂರ್ತಿಯಾಗದ 1447 ಪ್ರಪೋಸಲ್‌ಗಳ ಬಾಬ್ತು 49,67,659 ರೂ. ಗಳ ಬಗ್ಗೆ ವರ್ಷಾವಧಿ 2,21,959-6-0 ರೂ. ವಿಮಾ ಕಂತು ಬರುತ್ತೆ. ಕಂಪನಿಯಿಂದ ಭರವಸೆ ಪಡೆದಿರುವ ಹಣ ರೂ. 39,38,150. ಬಾಕಿ ರೂ. 1,29,500 ಪುನಃ ಭರವಸೆ ಕೊಟ್ಟದ್ದಾಗಿದೆ. ಬಾಕಿ ಇರುವ ಪ್ರಪೋಸಲ್‌ಗಳು ವರ್ಷಾಂತ್ಯದಲ್ಲಿ ತಿರಸ್ಕರಿಸಲು, ಮುಂದುವರಿಸಲು ಇಲ್ಲವೇ ಪೂರ್ತಿಗೊಳ್ಳಲು ಕಾಯುತ್ತಿವೆ. ಈ ವರ್ಷದ ಹೊಸ ಉದ್ಯೋಗವು ಕಳೆದ ವರ್ಷದ ಹೊಸ ಉದ್ಯೋಗಕ್ಕಿಂತ ರೂ. 1,13,775 ಹೆಚ್ಚಿದೆ.

ಈ ಕೆಳಗಿನ ಒಳ್ಳೆ ಸಂಗತಿಗಳಿಂದ ಲಭಿಸಿದ ತೃಪ್ತಿಯನ್ನು ಪಾಲಿಸಿದಾರರೊಡನೆ ಅನುಭವಿಸಲು ಡೈರೆಕ್ಟರುಗಳು ಇಷ್ಟಪಡುತ್ತಾರೆ.

ಇಂಡಿಯಾ ಸರ್ಕಾರದ ಭರವಸೆಯಿಂದ ಜೀವವಿಮೆ ಕೆಲಸ ಮಾಡುವ 215 ಇಂಡಿಯನರ ಕಂಪನಿಗಳಿಗೆಯಿಂದು ಈಗ ಪ್ರಕಟಿಸಲ್ಪಟ್ಟಿರುವ 'ಇಂಡಿಯನ್ ಇನ್ಸೂರೆನ್ಸ್ ಈಯರ್ ಬುಕ್' ಎಂಬುವುದರಿಂದ ತಿಳಿದುಬರುತ್ತದೆ. ಈ ಕಂಪನಿಗಳಲ್ಲಿ ಗಾರ್ಡಿಯನ್ ಆಫ್ ಇಂಡಿಯಾವು ಹೊಸ ಉದ್ಯೋಗಗಳ ದೃಷ್ಟಿಯಿಂದ ಮೊದಲಿನ 20 ಕಂಪನಿಗಳೊಳಗೆ ತನ್ನ ಸ್ಥಾನವನ್ನು ಪಡೆದಿದೆ. ಈ ಸಂಗತಿಯು ಇದಕ್ಕಿಂತ ಅನೇಕ ವರ್ಷಗಳ ವರೆಗೆ ಕ್ರಮಿಸುತ್ತಿರುವ ಸಂಸ್ಥೆಗಳ ದೃಷ್ಟಿಯಿಂದ ಗಣನೀಯವಾಗಿದೆ. ದಕ್ಷಿಣ ಭಾರತದಲ್ಲಿ ಹೆಡ್ಡಾಫೀಸುಗಳುಳ್ಳ ಸಂಸ್ಥೆಗಳಲ್ಲಿ ಗಾರ್ಡಿಯನ್ ಆಫ್ ಇಂಡಿಯಾದ ಹೊಸ ಉದ್ಯೋಗವು ಎರಡನೇಯದಾಗಿದೆ. ಒಂದನೇಯದಾದ ಕಂಪನಿಯು ಇದಕ್ಕಿಂತ 25 ವರ್ಷಗಳ ಮುಂದೆ ಸ್ಥಾಪಿಸಲ್ಪಟ್ಟದ್ದಾಗಿದೆ.

ವಿಮಾ ಕಂತುಗಳ ಆದಾಯ:—ಈ ವರ್ಷದ ಎಲ್ಲಾ ವಿಮಾ ಕಂತುಗಳ ಆದಾಯವು (ಪುನಃ ಭರವಸೆ ಕೊಟ್ಟದ್ದನ್ನು ಬಿಟ್ಟು) ಕಳೆದ ವರ್ಷದ ವಿಮಾ ಕಂತಿನ ಆದಾಯಕ್ಕಿಂತ ಶೇಕಡ 55ರಷ್ಟು ಹೆಚ್ಚಿದೆ. ಸದರಿ ವರ್ಷದ ವಿಮಾ ಕಂತಿನ ಆದಾಯವು ರೂ 3,66,198-13-0, ಗತ ವರ್ಷದ್ದು 2,36,767-6-6 ಆಗಿದೆ.

ಜೀವವಿಮಾ ಫಂಡು:—ಈ ಕಂಪನಿಯು ಜೀವ ವಿಮಾ ಫಂಡು ರೂ. 75,258-14-9ರಿಂದ, ವ್ಯವಸ್ಥಾ ಕ್ರಮಕ್ಕೆ ಮತ್ತು ಇತರ ಖರ್ಚುಗಾಗಿ ರೂ. 45,037-8-4 ವಜಾ ಕಳೆದು ರೂ. 21,00,421-1-3ಕ್ಕೆ ಏರಿದೆ. ಈ ಕೆಳಗೆ ಅವರ ತಪಶೀಲನ್ನು ಕೊಡಲಾಗಿದೆ.

ವರ್ಷಾಂತ್ಯದಲ್ಲಿ.	ವಿಮಾ ಕಂತು	ಜೀವ ವಿಮಾ ಫಂಡು.
1ನೇ ವರ್ಷದ	ರೂ. 1,16,949	ರೂ. 15,619
2ನೇ ವರ್ಷದ	,, 2,36,767	,, 75,259
3ನೇ ವರ್ಷದ	,, 3,66,199	,, 2,00,421

ಈ ಮೇಲಿನ ಅಂಕೆ ಸಂಖ್ಯೆಗಳೇ ಕಂಪನಿಯ ಅಭಿವೃದ್ಧಿಗೆ ನಿದರ್ಶನವಾಗಿದೆ. ಈ ಅಭಿವೃದ್ಧಿಯು ಭಾರತ ವಿಮಾ ಕಂಪನಿಗಳ ವಾರ್ಷಿಕ ವೃತ್ತಾಂತದಲ್ಲಿ ಹೊಗಳಲರ್ಹವಾದದ್ದೇ ಆಗಿದೆ.

ಭಾರತ ಜೀವವಿಮಾ ಕಂಪನಿಗಳ ಅಕ್ಟಿನ ಮೇರೆ ಠೇವಣಾತಿ:—ಈ ಬೋನಸು ಮೀರಿ ಠೇವಣಾತಿ ಮಾಡತಕ್ಕದಿದ್ದ ರೂ, 2 ಲಕ್ಷವನ್ನು ಪೂರ್ತಿಯಾಗಿ ಡಿಪಾಜಿಟ್ಟು ಮಾಡಲಾಗಿದೆ ಎಂಬುವುದನ್ನು ತಿಳಿಸಲು ಡೈರೆಕ್ಟರುಗಳು ಸಂತೋಷಪಟ್ಟವರಾಗಿರುವರು.

ಸಿ. ಯಂ. ತಿಮ್ಮಯ್ಯ,

(12-3) ಏಜೆನ್ಸಿಗಳ ಇನ್ಸ್‌ಪೆಕ್ಟರು, ಕೊಡಗು ಮತ್ತು ಹಾಸನ ಡಿಸ್ಟ್ರಿಕ್ಟ್.

ಯೂನಾನಿ ಫಾರ್ಮಸಿಯ ಉತ್ತಮ ಔಷಧಿಗಳು.

ಉಬ್ಬಸ ಸಂಹಾರಿ (Asthma cure) ಕೆಲವು ದಿನಗಳ ಸೇವನೆಯಿಂದ ಉಬ್ಬಸವನ್ನು ಖಾತ್ರಿಯಾಗಿ ಗುಣಪಡಿಸುತ್ತದೆ. 40 ದಿನದ ಔಷಧಿಗೆ ಕ್ರಯ ರೂ 5—12—0.

ಅಂಬರ್ ಕೂದಲೆಣ್ಣೆ, ಸುಗಂಧಯುಕ್ತ ಆಮ್ಲ ಕೇಶ ತೈಲ ಅಲ್ಲದೆ ಎಲ್ಲಾ ರೋಗಗಳಿಗೂ ರಾಮಬಾಣದಂತಿರುವ ಮಾತ್ರೆಗಳೂ, ಚೂರ್ಣಗಳೂ, ಲೇಹಗಳೂ, ತೈಲಗಳೂ ಮತ್ತು ಕೇಶ ತೈಲಗಳೂ ಸಹ ತಯಾರಿರುವುವು.

ಬೇಗನೆ ಬರೆಯಿರಿ:—

ಯಂ. ಯಂ. ಸಿದ್ದೀಕ್,
ಪ್ರೊಪ್ರೈಟರ್,
18 **ಯುನಾನಿ ಔಷಧಶಾಲಾ, ಮಡಿಕೇರಿ, ಕೊಡಗು.**

ದಿ ಸೌತ್ ಇಂಡಿಯಾ ಕೋಪರೇಟಿವ್ ಇನ್ಸೂರೆನ್ಸ್ ಸೊಸೈಟಿ, ಲಿಮಿಟೆಡ್.

ಹೆಡ್ ಆಫೀಸ್: ಮದರಾಸು.

ಪ್ರಕಟಣೆ.

ನಮ್ಮ ಗ್ರಾಹಕ ಬಂಧುಗಳ ಸೌಕರ್ಯಾರ್ಥವಾಗಿ ಈ ಇನ್ಸೂರೆನ್ಸ್ ಸೊಸೈಟಿಯು ಶಾಖೆಯೊಂದನ್ನು ಮಡಿಕೇರಿಯಲ್ಲಿ ತೆರೆದಿರುತ್ತೇವೆ. ಇನ್ನು ಮುಂದಕ್ಕೆ ಎಲ್ಲಾ ಪತ್ರವ್ಯವಹಾರ ಮತ್ತು ಹಣ ಬಾಬತುಗಳನ್ನು ದಿ ಸೌತ್ ಇಂಡಿಯಾ ಕೋ-ಆಪರೇಟಿವ್ ಇನ್ಸೂರೆನ್ಸ್ ಸೊಸೈಟಿ ಲಿಮಿಟೆಡ್. ಬ್ರಾಂಚ್ ಆಫೀಸು, ಮಡಿಕೇರಿ. ಈ ವಿಳಾಸಕ್ಕೆ ಕಳುಹಿಸಬೇಕೆಂದು ಈ ಮೂಲಕ ಕೇಳಿಕೊಳ್ಳಲಾಗಿದೆ.

4

ADVERTISE
IN
"KODAGU"
The OLDEST WEEKLY of COORG

The Mysore Theatres Limited.

(Incorporated in Mysore State and British India)

Film Producers, Exhibitors, Distributors and Owners of Touring Talkies, etc., etc.

"District Board Buildings" Bangalore City.

Applications are invited from gentlemen of influence and personality to represent the above company thro'out the Mysore State and COORG and British India, on commission basis or salary or both. Only men of influence and Organising ability need apply with references. Lady applicants are also entertained. For Particulars apply to:—The Organiser for Coorg or to the undersigned.

Organiser's Address:
B. M. Chengappa Esq.,
Organiser for Coorg,
The Mysore Theatres Ltd.,
Virajpet, (Coorg.)

R. N. Row,
Managing Directors,
The Mysore Theatres Ltd.,
"District Board Buildings"
Bangalore City.

(8-8)

ಬಂಗಾಳ ಮಂತ್ರಿಮಂಡಲದ ರಾಜಿನಾಮೆ.

ಬಂಗಾಳ ಮಂತ್ರಿ ಮಂಡಲದ ಗತಿಯು ಏನಾಗುವದೆಂಬದು ಇನ್ನೂ ಸ್ಪಷ್ಟವಾಗಿ ತಿಳಿಯಬಂದಿಲ್ಲ. ಮುಖ್ಯ ಮಂತ್ರಿ ಹಕ್ಕರು ತಮ್ಮ ನಿರ್ಧಾರವನ್ನು ಗವರ್ನರರಿಗೆ ತಿಳಿಸಿಬಿಟ್ಟಿದ್ದಾರೆ. ಆದರೆ ಗವರ್ನರರು ರಾಜಿನಾಮೆ ಕೊಡುವಂತೆ ಮಿ. ನಾಸಿರಾಲಿಯವರಿಗೆ ಒತ್ತಾಯಪಡಿಸುವರೋ ಅಥವಾ ಇಲ್ಲವೋ ಎಂಬುದು ಸಂಶಯಾಸ್ಪದವಾಗಿತ್ತು.

ಗವರ್ನರರು ಒತ್ತಾಯಪಡಿಸಲಿಲ್ಲ.

ಗವರ್ನರರ ಮತ್ತು ಮಿ. ನಾಸಿರಾಲಿಯವರ ನಡುವೆ ಮಾತುಕತೆಗಳಾದವಂತೆ. ಆ ಸಮಯದಲ್ಲಿ ರಾಜಿನಾಮೆ ಕೊಡುವಂತೆ ಗವರ್ನರರು ಮಿ. ನಾಸಿರಾಲಿಯವರಿಗೆ ಒತ್ತಾಯಪಡಿಸಲಿಲ್ಲವೆಂದು ರಾಜಕೀಯ ವರ್ಗದಲ್ಲಿ ಕೆಲವರು ಊಹಿಸುತ್ತಾರೆ. ಆದರೆ ಮಿ. ನಾಸಿರಾಲಿ ಮತ್ತು ಉಳಿದ ಮಂತ್ರಿಗಳ ನಡುವಿನ ಮತಭೇದವು ಅತಿಯಾಗಿರುವುದರಿಂದ ಅವರು ರಾಜಿನಾಮೆ ಕೊಟ್ಟರೆ ಉತ್ತಮವೆಂದೂ ಗವರ್ನರರು ಸೂಚಿಸಿದ್ದರು. ಸದ್ಯಕ್ಕೆ ರಾಜಿನಾಮೆ ಕೊಡಬಾರದೆಂದು ಮಿ. ನಾಸಿರಾಲಿಯವರು ನಿರ್ಧರಿಸಿದ್ದರು.

ಮಂತ್ರಿಗಳೆಲ್ಲರೂ ರಾಜಿನಾಮೆ ಕೊಟ್ಟರು.

ಬಂಗಾಳ ಮಂತ್ರಿಮಂಡಲದ 11 ಜನ ಮಂತ್ರಿಗಳೂ ತಾ. 23 ರಲ್ಲಿ ರಾಜಿನಾಮೆ ಕೊಡುವುದು ಖಂಡಿತವೆಂದು ತಿಳಿದು ಬಂತು. ಮಿ. ನಾಸಿರಾಲಿಯವರ ಸಂಬಂಧ ಕಲಹದಲ್ಲಿ ಕೈಹಾಕಿ, ವಿಶೇಷಾಧಿಕಾರವನ್ನು ಉಪಯೋಗಿಸಿ, ರಾಜಿನಾಮೆ ಕೊಡುವಂತೆ ಮಿ. ನಾಸಿರಾಲಿಯವರನ್ನು ಒತ್ತಾಯಪಡಿಸಲು ಗವರ್ನರರು ನಿರಾಕರಿಸಿದ್ದರು. ಆದ್ದರಿಂದ ಮುಖ್ಯ ಮಂತ್ರಿಗಳು ಜನ ಸಹದ್ಯೋಗಿಗಳೊಂದಿಗೆ ರಾಜಿನಾಮೆ ಕೊಡಲು ನಿರ್ಧರಿಸಿದರು. ಇತ್ತ ಮಿ. ನಾಸಿರಾಲಿಯವರೂ ಗವರ್ನರರ ಸೂಚನೆಯನ್ನು ಮಾನ್ಯಮಾಡಿ ರಾಜಿನಾಮೆ ಕೊಡುವದಾಗಿ ನಿಶ್ಚಯಿಸಿದರು.

ಮಿ. ನಾಸಿರಾಲಿಯವರ ರಾಜಿನಾಮೆ.

ರಾತ್ರಿ 11 ಗಂಟೆಗೆ ಗವರ್ನರರ ಭವನಕ್ಕೆ ಹೋದ ಮಿ. ನಾಸಿರಾಲಿಯವರು 12-15 ರ ವರೆಗೆ ಅಲ್ಲಿಯೇ ಇದ್ದರು. ಗವರ್ನರರೊಡನೆ ಸಂಭಾಷಣೆಯು ಮುಗಿದ ಮೇಲೆ ಅವರು ತಮ್ಮ ರಾಜಿನಾಮೆ ಪತ್ರವನ್ನು ಕೊಟ್ಟು ಹೊರಗೆ ಬಂದರೆಂದು ಖಂಡಿತವಾಗಿಯೂ ತಿಳಿದುಬಂತು.

ರಾತ್ರಿ 12 45 ಗಂಟೆಯ ಸಮಯದಲ್ಲಿ ಮುಖ್ಯ ಮಂತ್ರಿಗಳು ತಮ್ಮ ಪರವಾಗಿಯೂ, ತಮ್ಮ ಸಹೋದ್ಯೋಗಿಗಳ ಪರವಾಗಿಯೂ ರಾಜಿನಾಮೆ ಕೊಟ್ಟರು.

ಬಳಿಕ ಗವರ್ನರರು ಪುನಃ ಮಿ. ಫಜಲುಲ್ ಹಕ್ಕರನ್ನೇ ಆಮಂತ್ರಿಸಿ, ಹೊಸ ಮಂತ್ರಿ ಮಂಡಲವನ್ನು ರಚಿಸಿಕೊಳ್ಳಬೇಕೆಂದು ವಿಜ್ಞಾಪಿಸಿಕೊಂಡರು. ಶಾಯಿದೆ ಮಂಡಲದ ಬಹು ಅಧಿಕ ಸದಸ್ಯರ ಬೆಂಬಲವುಳ್ಳವರಾಗಿರುವ ಮಿ. ಹಕ್ಕರು ನಾಯಕರನ್ನೇ ಆಮಂತ್ರಿಸಬೇಕಾಯಿತು. ಗವರ್ನರರ ಬಿನ್ನವತ್ತನ್ನು ಮನ್ನಿಸಿ, ಮಿ. ಹಕ್ಕರು ಹೊಸ ಮಂತ್ರಿ ಮಂಡಲವನ್ನು ರಚಿಸಿಕೊಂಡರು. ಇದರಲ್ಲಿ ಮಿ. ಹಕ್ಕರಲ್ಲದೆ, ಹಳೆಯ 9 ಜನ ಮಂತ್ರಿಗಳೂ ಇದ್ದಾರೆ. ಮಿ. ನಾಸಿರಾಲಿಯವರು ಮಾತ್ರ ಇವರಲ್ಲಿಲ್ಲ.

ಹೊಸ ಮಂತ್ರಿ ಮಂಡಲವು ತಾ. 24 ನೇ ದಿನ 11 ಗಂಟೆಗೆ ಗವರ್ನರರ ಬಂಗಲೆಯಲ್ಲಿ ರಾಜಭಕ್ತಿ ಪ್ರಮಾಣವನ್ನು ಸ್ವೀಕರಿಸಿತು. ಗವರ್ನರರ ಬಂಗಲೆಯಿಂದ ಮರಳಿ ಬರುವಾಗ ಮಿ. ಹಕ್ಕರು ಮಿ. ಎನ್. ಆರ್. ಸರಕಾರರ ಮನೆಗೆ ಹೋದರು. ಅಲ್ಲಿ ಎಲ್ಲ ಮಂತ್ರಿಗಳೂ ಅವರನ್ನು ಸ್ವಾಗತಿಸಿದರು.

ಈ ರೀತಿ ಹೊಸದಾಗಿ ರಚಿತವಾದ ಮಂತ್ರಿ ಮಂಡಲಕ್ಕೆ ನ್ಯಾಯವಿಧಾಯಕ ಸಭೆಯಲ್ಲಿ ಎಷ್ಟು ಬಹುಮತ ದೊರೆಯುವುದೆಂದು ಮುಂದಿನ ಸಭೆಯಲ್ಲಿ ಸ್ಪಷ್ಟವಾಗಲಿಕ್ಕಿದೆ. ಗವರ್ನರರು ಸಭೆಯನ್ನು ಈ ತಾ. 29 ಕ್ಕೆ ಕರೆದಿರುತ್ತಾರೆ.

ಮಿ. ನಾಸಿರಾಲಿಯವರ ರಾಜಿನಾಮೆಯಲ್ಲಿಯ ಹೇಳಿಕೆ.

ಗವರ್ನರರಿಗೆ ತನ್ನ ರಾಜಿನಾಮೆಯನ್ನು ಒಪ್ಪಿಸುವಾಗ ಮಿ. ನಾಸಿರಾಲಿಯವರು ಬರೆದ ಈ ಕೆಳಗಿನ ಪತ್ರವು ಮನನೀಯವಿರುತ್ತದೆ.

"ಇತರ ಮಂತ್ರಿಗಳೆಲ್ಲರೂ ರಾಜಿನಾಮೆ ಕೊಡುವರೆಂದೂ, ನೀವು ಅದನ್ನು ಸ್ವೀಕರಿಸುವಿರೆಂದೂ ತಿಳಿಸಿದ್ದರಿಂದ ನಾನು ರಾಜಿನಾಮೆ ಕೊಡುವುದಿಲ್ಲವೆಂಬ ನಿರ್ಧಾರವನ್ನು ಬದಲಾಯಿಸಿದ್ದೇನೆ. ಮತ್ತು ಇವರ ಜೊತೆಯಲ್ಲಿ ನನ್ನ ರಾಜಿನಾಮೆಯನ್ನು ಒಪ್ಪಿಸುತ್ತೇನೆ. ನನ್ನ ಬೆಂಬಲಕ್ಕಿದ್ದ ಹಲವರ ಅಭಿಪ್ರಾಯವನ್ನು ನಾನು ಕೇಳಿಕೊಂಡಿದ್ದೇನೆ. ಈಗಿನ ಸ್ಥಿತಿಯಲ್ಲಿ ನಾನು ರಾಜಕೊಡಬೇಕೆಂದೇ ಅವರು ಸಲಹೆ ಕೊಟ್ಟಿದ್ದಾರೆ. ಆದರೆ ನೀವು ಪುನಃ ಮಂತ್ರಿ ಮಂಡಲವನ್ನು ರಚಿಸಲು ಯಾರನ್ನಾದರೂ ಕೇಳುವ ಮೊದಲೇ ಈಗಿನ ನ್ಯಾಯವಿಧಾಯಕ ಸಭೆಯಲ್ಲಿ ನನಗೆ ಬಹುಮತವಿರುತ್ತದೆಂಬುದನ್ನು ಖಂಡಿತ ನಿಮಗೆ ಸಮಾಧಾನಪಡಿಸಬೇಕೆಂದೂ ನನ್ನ ಸಹಾಯಕರು ಅಪೇಕ್ಷಿಸಿದ್ದಾರೆ."

ಮುಖ್ಯ ಮಂತ್ರಿಗೆ ಮಿ. ನಾಸಿರಾಲಿಯವರ ಪತ್ರ.—

ಫಜಲುಲ್ ಹಕ್ ಮಂತ್ರಿ ಮಂಡಲದ ಕುರಿತು ಅವರಲ್ಲೊಬ್ಬ ಮಂತ್ರಿಯಾಗಿದ್ದ ಮಿ. ನಾಸಿರಾಲಿಯವರ ಅಭಿಪ್ರಾಯವೇನೆಂಬುದು ಅವರು ಮುಖ್ಯ ಮಂತ್ರಿಯರಿಗೆ ಜೂನ್ 14ಕ್ಕೆ ಬರೆದ ಈ ಕೆಳಗಿನ ಮಾತುಗಳಿಂದ ಸ್ಪಷ್ಟವಾಗುತ್ತದೆ:—

'ಈ ಮಂತ್ರಿ ಮಂಡಲವು ಅದರ ರಚನೆಯಿಂದಾಗಿ ಕೇವಲ ಹಣವಂತರ ಮಂತ್ರಿ ಮಂಡಲವಾಗಿದೆ. ಇದು ಎಸೆಂಬ್ಲಿಯ ಅಭಿಪ್ರಾಯವನ್ನಾಗಲಿ, ಪ್ರಾಂತ್ಯದ ಅಭಿಪ್ರಾಯವನ್ನಾಗಲಿ ಸರಿಯಾಗಿ ಪ್ರತಿಬಿಂಬಿಸುವುದಿಲ್ಲ. ಹೀಗೆ ಇದ್ದಂತೆ ಮತ್ತು ಈಗಿನ ಪರಿಸ್ಥಿತಿಯಲ್ಲಿ ಈ ಮಂತ್ರಿ ಮಂಡಲವು ಬ್ರಿಟಿಷ್ ಸಾಮ್ರಾಜ್ಯ ಶಾಹಿ ... ದಿಕ್ಕಿಗೆ ಒಳಪಟ್ಟಿದ್ದು ಇದರಿಂದ ಬಂಗಾಳದ ಮಹಾಜನರಿಗೆ ಯಾವ ಉಪಕಾರವೂ ಸಾಧ್ಯವಾಗುವಂತಿಲ್ಲ. ಇದರಿಂದ ಜನಹಿತವಾದ ಯಾವ ಒಳ್ಳೆಯ ಕೆಲಸವಾದರೂ ಒತ್ತಾಯದಿಂದ ಮಾಡಿಸಬೇಕಲ್ಲದೆ ಸಹಜವಾಗಿ ಆಗುವುದಿಲ್ಲ. ನ್ಯಾಯವಿಧಾಯಕ ಸಭೆಯಲ್ಲಿ ಹೆಚ್ಚಿನ ಸದಸ್ಯರು ಬಂಗಾಳದ ಗ್ರಾಮಗಳ ಪ್ರದೇಶದ ಪ್ರತಿನಿಧಿಗಳಿರುತ್ತಾರೆ. ಈ ಗ್ರಾಮಸ್ಥ ಜನರ ದುಃಖಕರ ಪರಿಸ್ಥಿತಿಯನ್ನು ಪಟ್ಟಣಗಳ ವಿಲಾಸದಲ್ಲಿ ಬೆಳೆದ ಮಹನೀಯರಿಗೆ ತಿಳಿಯುವುದು ಸಾಧ್ಯವಿಲ್ಲ. ಈಗಿನ ಮಂತ್ರಿಮಂಡಲವು ದೌರ್ಭಾಗ್ಯವಶಾತ್ ಇಂಥಾ ಪಟ್ಟಣಿಗರಿಂದಲೇ ಕೂಡಿರುವುದಲ್ಲದೆ ಇದರಲ್ಲಿ ಗ್ರಾಮಸ್ಥರ ಪ್ರತಿನಿಧಿ ಯಾರೂ ಇರುವುದಿಲ್ಲ.'

[ಚಿಕ್ಕ ಡಾಕ್ಟರ್] **ವೇಪ್ರಿನ್** [ರಿಜಿಸ್ಟರ್ಡ್]

ಚರ್ಮವ್ಯಾಧಿಗಳ ವೈರಿ—ಪ್ರತಿ ಒಬ್ಬರ ಸ್ನೇಹಿತ—ಸ್ವದೇಶಿ ವಸ್ತು.

ಇದರ ಲೇಪನದಿಂದ ಕಜ್ಜಿ, ಘಾಯ, ವ್ರಣ, ಇಸಬು, ನಾರುಹುಣ್ಣು, ಮೂಲವ್ಯಾಧಿ, ಮೆಟ್ಟಿನ ಘಾಯ, ಮುಪ್ಪಣ (Pimples) ಸುಟ್ಟಘಾಯ, ಕತ್ತಿಘಾಯ, ತೊಡದ ಕೆ, ಗಣಕರ್ಣ ಇವು ಮಾಯವಾಗುವವು. ಇದು ಸುರಿಯುತ್ತಿರುವ ರಕ್ತವನ್ನು ನಿಲ್ಲಿಸಿ ನೋವನ್ನು ನಿವಾರಿಸುವುದು ಅಲ್ಲದೆ ಇಂದ್ರಜಾಲದೋಪಾದಿಯಲ್ಲಿ ಚೇಳಿನ ವಿಷವನ್ನು ಬಹಿರ್ಗತಪಡಿಸುವುದು. ನಿಮ್ಮಲ್ಲಿ ಒಂದು ಬಾಟ್ಲಿ ಇದ್ದಲ್ಲಿ ಒಬ್ಬ ಡಾಕ್ಟರೇ ಇದ್ದಂತಾಗುವದು. ಕ್ರಯ ಬಹಳ ಸುಲಭ.

½ ಔನ್ಸ್ ಬಾಟ್ಲಿ 1ಕ್ಕೆ ಆಣೆ 0 8 0 ¼ ಔನ್ಸ್ ಬಾಟ್ಲಿ 1ಕ್ಕೆ ಆಣೆ 0-4-0

ವಿ ಸೂ:—ಪೆಟ್ಟು ತಾಗಿದ ಸ್ಥಳದಲ್ಲಿ ವೇಪ್ರಿನ್ ಚೆನ್ನಾಗಿ ತಿಕ್ಕುವುದು. ಇಲ್ಲವೇ ಬಟ್ಟೆಯ ಮೇಲೆ ಸವರಿ ಅಂಟಿಸುವುದು. ನಂತರ ಸಾಬೂನಿನಿಂದ ಕೈ ತೊಳೆಯುವುದು. ಇದಲ್ಲದೆ ಇನ್ನೂ ಅನೇಕ ತರಹದ ಔಷಧಿಗಳು ನಮ್ಮಲ್ಲಿವೆ.

ಲಕ್ಷ್ಮೀ ಮ್ಯಾನಿಫ್ಯಾಕ್ಚರಿಂಗ್ ಕಂಪೆನಿ,
ಡಿ. ಪ್ರೊ. ಬೆಂಗಳೂರು ಸಿಟಿ.

52 47 ಸೋಲ್ ಏಜೆಂಟ್:—ಹರಿದಾಸ್ ನಂಜುಂಡ ಗುಪ್ತ, ಮಡಿಕೇರಿ, (ಕೊಡಗು).

ಧನ್ವಂತರಿ ಸಹಾಯ ಔಷಧಾಲಯ.

ವೀರಾಜಪೇಟೆ, (ದ. ಕೊಡಗು).

ಆಯುರ್ವೇದ ಶಾಸ್ತ್ರ ಪ್ರಕಾರ ತಯಾರಿಸಲ್ಪಟ್ಟ ಎಲ್ಲಾ ಔಷಧಗಳು ನ್ಯಾಯವಾದ ಕ್ರಯಕ್ಕೆ ವಿಕ್ರಯಿಸಲ್ಪಡುತ್ತೆ. ನಮ್ಮ ವೈದ್ಯ ಶಾಲೆಯು ಕಾಯಿಲಸ್ಥರನ್ನು ಪರೀಕ್ಷೆ ಮಾಡಿ ಔಷಧಿ ಕೊಟ್ಟು ಕೆಲವು ಮಹನೀಯರಿಂದ ಸರ್ಟಿಫಿಕೇಟ್ ಪಡೆದಿರುತ್ತದೆ. ದೂರದಲ್ಲಿರುವ ಮಹನೀಯರು ಅವರ ಕಾಯಿಲೆಯ ವಿವರವನ್ನು ತಿಳಿಸಿದಲ್ಲಿ ತಕ್ಕ ಔಷಧಿ ಕಳುಹಿಸಿ ಕೊಡಲಾಗುತ್ತೆ. ಒಂದು ವರ್ಷದ ಲಾಭವಾಯಿತು ವೈದ್ಯ ಶಾಲೆಯು ಪ್ರಚಾರದಲ್ಲಿರುತ್ತೆ.

ಜ್ವರ ಸಂಹಾರ ಸುದರ್ಶನ.

ಈ ಔಷಧಿಯು ತ್ರಿದೋಷ ಕೋಪದಿಂದುಟಾಗುವ ಸರ್ವಜ್ವರವನ್ನು ಗುಣಪಡಿಸುತ್ತೆ. 13 ಪ್ರಕಾರದ ಸನ್ನಿಯನ್ನೂ, ಶೀತಜ್ವರ, ಮೋಹಾಲಸ್ಯ, ತಲೆನೋವು, ಬಾಯಾರಿಕೆ, ಉಬ್ಬಸ, ಕೆಮ್ಮಲು, ಪಾಂಡುರೋಗ, ಹೃದ್ರೋಗ, ಕಾಮಾಲೆ, ಕಾಲುಬು, ಸೊಂಟ, ಮಂಡಿ, ಪಕ್ಕೆಗಳು—ಈ ಭಾಗಗಳ ನೋವನ್ನು ಗುಣಪಡಿಸುವುದು.

ಉಪಯೋಗದ ಕ್ರಮ.—ದೇಹ ಪ್ರಕೃತಿಯನ್ನನುಸರಿಸಿ ಒಂದರಿಂದ ಎರಡು ಔನ್ಸುಗಳ ವರೆಗೆ ಒಮ್ಮೆ ತೆಗೆದುಕೊಳ್ಳುವದು. 8 ಔನ್ಸುಗಳ ಕುಪ್ಪಿಗೆ ರೂ. 1-0 ಟಪ್ಪಾಲು ಹಾಸಲು ಪ್ರತ್ಯೇಕ.

ಸಿ. ಜೆಚ್. ರಾಮುಣ್ಣಿ ವೈದ್ಯರ್

ವರ್ತಮಾನ ಸಂಗ್ರಹ.

ಒಳದೇಶ.

ವೀರಾಜಪೇಟೆಯಲ್ಲಿ ಈ ವಾರ ಬತ್ತಗಾಡಿಗೆ 43 ರೂ ಕ್ರಯವಿತ್ತೆಂದು ವರ್ತಮಾನ.

ಮಡಿಕೇರಿ ಹುಡುಗಿಯರ ಶಾಲೆಯು ತಾರೀಕು 29 ರಿಂದ ಒಂದು ತಿಂಗಳು ಮಳೆಗಾಲ ರಜೆಗಾಗಿ ಮುಚ್ಚಲ್ಪಟ್ಟಿರುತ್ತೆ.

ಮಡಿಕೇರಿಯಿಂದ ಭಾಗಮಂಡಲಕ್ಕೆ ಹೋಗುತ್ತಿರುವ ಶ್ರೀ ಭಗಂಡೇಶ್ವರ ಬಸ್ ಸರ್ವಿಸ್ ಹಿಂದಿನ ವರ್ಷಗಳಂತೆ ಮಳೆಗಾಲದಲ್ಲಿ ನಿಲ್ಲಿಸಲ್ಪಡದೆ, ಸದಾ ನಡೆಸಲ್ಪಡುವದೆಂದು ತಿಳಿಯುತ್ತೇವೆ.

ಕಮಿಶನರವರು ಈ ಕಳೆದ ತಾ. 29 ರಲ್ಲಿ ಬೆಂಗಳೂರಿನಿಂದ ಮಡಿಕೇರಿಗೆ ಬಂದು ಪುನಹ ಬೆಂಗಳೂರಿಗೆ ವಾಪಸು ಹೋದರೆಂದೂ, ಈ ತಾ. 3 ರಲ್ಲಿ ಮರಳಿ ಮಡಿಕೇರಿಗೆ ಬರುವರೆಂದೂ ತಿಳಿಯಬರುತ್ತದೆ.

ಮುನ್ಸೀಫ್ ಕೋರ್ಟಿನ ಹೆಡ್ ಗುಮಾಸ್ತರಾದ ಮಿ. ಕೋವಿನಾಣೆರಂಡ ಕಾಳಯ್ಯನವರು ತಮ್ಮ ಹುದ್ದೆಯಿಂದ ಈ ತಾ. 1 ರಿಂದ ನಿವೃತ್ತರಾಗುವದರಿಂದ ಅವರ ಸ್ಥಳಕ್ಕೆ ಎರಡನೇ ಗುಮಾಸ್ತರಾಗಿದ್ದ ಮಿ. ಮನೆಯಪಂಡ ಐಯ್ಯಪ್ಪನವರನ್ನೂ, ಇವರ ಸ್ಥಳಕ್ಕೆ ನಿತ್ಯಮಲೆ ಸುಬ್ಬಯ್ಯನವರನ್ನೂ ನೇಮಿಸಿರುವರಾಗಿ ತಿಳಿಯುತ್ತೇವೆ.

ಟ್ರಾವಂಕೂರು ಸೆಂಟ್ರಲ್ ಸಂಸ್ಥೆ ಕ್ವಿಲಾನ್ ಬ್ಯಾಂಕು ಕೆಲ್ಲಾಲ ಮುಚ್ಚಲ್ಪಟ್ಟಿರುವದರಿಂದ, ಮಡಿಕೇರಿ ಕುಶ್ನಿಪಾಲಿಯೊಯಲ್ಲಿರುವ ಇವರ ಡಿಪಾಜಿಟುದಾರರ ಮೀಟಿಂಗೊಂದು ಕಳೆದ ತಾ. 26 ರಲ್ಲಿ ಜಮೀನ್ದಾರರ ಸಂಘದ ಹಾಲಿನಲ್ಲಿ ನಡೆದು ಬ್ಯಾಂಕನ್ನು ಪುನಃ ತೆರೆಯುವ ಒಗ್ಗೆ ಇಂಡಿಯಾ ಸರಕಾರದ ಸಹಾಯ ಪಡೆಯಲು ಚೀಫ್ ಕಮಿಶನರವರನ್ನು ಕೇಳಿಕೊಳ್ಳುವಂತೆ ತೀರ್ಮಾನಿಸಲಾಯಿತು.

ತಾ. 25-6-38 ರಿಂದ 1-7-38 ರ ವರೆಗೆ ಮಡಿಕೇರಿಯಲ್ಲಿ 16 ಇಂಚು 57 ಸೆಂಟು ಮಳೆಯಾಗಿರುತ್ತದೆ. ತಾ. 30—6-38 ರಲ್ಲಿ ಅಂದರೆ ಗುರುವಾರ ಒಂದು ದಿನ 9 ಇಂಚು 30 ಸೆಂಟು ಮಳೆಯಾಗಿದೆ. ಕಳೆದ ವರ್ಷ ಜೂನ್ ತಿಂಗಳಲ್ಲಿ 17 ಇಂಚು 40 ಸೆಂಟು ಮಳೆಯಾಗಿತ್ತು; ಈ ವರ್ಷ 36 ಇಂಚು 12 ಸೆಂಟು ಮಳೆಯಾಗಿರುತ್ತೆ. ಕಳೆದ ಬುಧವಾರದಿಂದ ದೇಶದಲ್ಲೆಲ್ಲಾ ಜೋರಾಗಿ ಮಳೆ ಬೀಳುತ್ತಿರುವದಾಗಿ ತಿಳಿಯುತ್ತೇವೆ.

ಬೆಂಗಳೂರಿನಲ್ಲಿ ಕಾಂಗ್ರೆಸ್ ಕೆಲಸ ಮಾಡುತ್ತಿದ್ದ ಶ್ರೀಮಾನ್ ಚಿಕ್ಕೇರ ಬೊಣ್ಣಯ್ಯನವರನ್ನು ಈ ಮೊದಲು ಮೈಸೂರು ಸರಕಾರದವರು ಗಡೀಪಾರು ಮಾಡಿದ್ದರಷ್ಟೆ. ಆದರೆ ಇತ್ತೀಚೆಗೆ ಸರಕಾರಕ್ಕೂ, ಕಾಂಗ್ರೆಸ್ಸಿಗೂ ನಡೆದ ಒಪ್ಪಂದದ ನಂತರ ಶ್ರೀ. ಬೊಣ್ಣಯ್ಯನವರು ಬೆಂಗಳೂರಿಗೆ ಹೋಗಿ ತಾ. 22 ರಲ್ಲಿ ರಮೇಶಂ ಸಮಿತಿಗೆ ಹೋಗಿದ್ದರು. ಆದರೆ ಅವರನ್ನು ಪೊಲೀಸಿನವರು ಬಂಧಿಸಿ ಸಿಟಿ ಮೇಜಿಸ್ಟ್ರೇಟರ ಮುಂದೆ ತಂದರು. ಅಲ್ಲಿ ಅವರ ವಿಚಾರಣೆ ನಡೆಯಲು ಶ್ರೀ. ಬೊಣ್ಣಯ್ಯನವರು ತಾನು ರಾಷ್ಟ್ರಸೇವೆ ಮಾಡಲು ಇಲ್ಲಿಗೆ ಬಂದಿರುವದಾಗಿ ಹೇಳಿದ್ದರಿಂದ ಅವರನ್ನು ಎರಡು ದಿನ ಜೈಲಿನಲ್ಲಿರಿಸಿ ನಂತರ ಎಲ್ಲಿಗೊ ಕೊಂಡೊಯ್ದಿರುವರೆಂದು ತಿಳಿಯಬರುತ್ತದೆ.

ಹಿಂದೂ ದೇಶ.

ಒರಿಸ್ಸಾ ಗವರ್ನರರಾದ ಸರ್ ಜೋನ್ ಹಬಕರವರು ರಜೆಯಲ್ಲಿ ಹೋಗಿರುವ ಸಮಯ ಅವರ ಬದಲಿಗೆ ಮಿ. ಜಿ. ಟಿ. ಬೋಗರವರನ್ನು ಟೆಂಪರರಿ ಗವರ್ನರರನ್ನಾಗಿ ನೇಮಿಸಿರುವರೆಂದು ತಿಳಿದು ಬಂದದೆ.

ಬಾಬು ಸುಭಾಷರ ಪ್ರಕೃತಿಯಲ್ಲಿ ಸರಿಯಾಗಿಲ್ಲ, ಆದರು ಚಳಿಯಿಂದ ಅಸ್ವಸ್ಥರಾದ್ದರೂ ಮೌ. ಅಬ್ದುಲ್ ಕಲಂ ಅಜಾದರೊಡನೆ 22 ನೇ ತಾರೀಕಿನ ದಿನ ವಾರ್ಧಾಕ್ಕೆ ಹೋದರು. 27 ಕ್ಕೆ ಮತ್ತೆ ಕಲಕತ್ತೆಗೆ ಬಂದಿರುವರು.

ಮದರಾಸು ಸರಕಾರದವರು ತಮ್ಮ ಪ್ರಾಂತದ ವರಮಾನವನ್ನು ಹೆಚ್ಚಿಸುವದಕ್ಕಾಗಿ ಯಾವ ತರದ ಹೊಸ ತೆರಿಗೆಗಳನ್ನು ಹಾಕಬಹುದೆಂದು ಪರಿಶೀಲಿಸುತ್ತಿದ್ದಾರೆ. ಈ ಹೊಸ ತೆರಿಗೆಗಳಲ್ಲಿ ಮದುವೆಗಳ ಮೇಲೆ ತೆರಿಗೆ ಹಾಕಬೇಕೆಂಬ ವಿಷಯವು ಪ್ರಾಂತ ಸರಕಾರದ ಒಪ್ಪಿಗೆಗೆ ಬಂದಿರುವದಾಗಿ ತಿಳಿದು ಬಂದಿದೆ.

ಶಾಹಿದ ಗಂಜ್ ಚಳವಳಿಯು ನಿಮಿತ್ತ ನಿರಿಸಿಯಿಲ್ಲವಷ್ಟು; ದಂಡ ತೆರಲು ತಪ್ಪಿಸುವದಕ್ಕಾಗಿ, ಸರೆಮನೆಗೆ ಕಳುಹಿಸಲ್ಪಟ್ಟ ಎಲ್ಲಾ ಚಳವಳಿಗಾರರನ್ನು, ಕೂಡಲೇ ಬಿಡುಗಡೆ ಮಾಡಬೇಕಾಗಿ ಸರಕಾರದ ಆಜ್ಞೆಯಾಗಿದೆ. ಕಳೆದ ಡಿಸಂಬರ್ ತಾ. 17 ರ ಅನಂತರ, ಸೆರೆಮನೆ ಸೇರಿದವರಲ್ಲರೂ ಬಿಡಲ್ಪಡುವರು.

ಹಿಂದೀ ವಿರೋಧ ಚಳವಳಿಯಲ್ಲಿ ಭಾಗವಹಿಸಿ, ಮಾಜಿ ಮಂತ್ರಿಗಳಾದ ಮನೆಯ ಮುಂದೆ 'ಪಿಕೆಟಿಂಗ' ನಡೆಸಿದ ನಾಲರನ್ನು, ಮದ್ರಾಸಿನ ಪ್ರಸಿಡೆನ್ಸಿ ಮ್ಯಾಜಿಸ್ಟ್ರೇಟರು, ನಾಲ್ಕು ತಿಂಗಳ ಕಠಿಣ ಶಿಕ್ಷೆಗೆ ಗುರಿಪಡಿಸಿದ್ದಾರೆ. ಇತರ ಮೂವರು ಮುಂದ, ಕೆಲವು ದಿನಗಳ ಹಿಂದೆ, ಮೂರು ತಿಂಗಳ ಕಠಿಣ ಸಜೆಗೆ ಗುರಿಪಡಿಸಲ್ಪಟ್ಟಿದ್ದಾರೆ. ಅಂತೂ ಇನ್ನು ಮುಂದಿ. ಇನ್ನೂ ಕೈದುಗಳಾಗುತ್ತಿವೆ

ಸಂಯುಕ್ತ ಪ್ರಾಂತದ ಸರಕಾರವು, ರಾಜಕೀಯ ಕೈದಿಗಳೊಡನೆ ಯಾರು ಕಂಡು ಮಾತನಾಡಲು ಬಂದಾಗ, ಅವರೊಡನೆ ಪೋಲೀಸರು ಇರಬಾರದೆಂದು ಕಟ್ಟು ಮಾಡಿದೆ. ಅಲ್ಲದೆ, ಈಗ ಸಂಯುಕ್ತ ಪ್ರಾಂತ್ಯದ ಸೆರೆಮನೆಗಳಲ್ಲಿರುವ ರಾಜಕೀಯ ಕೈದಿಗಳನ್ನು, ತಮ್ಮ ತಮ್ಮ ಸಂಸ್ಥಾನದ ಸೆರೆಮನೆಗಳಿಗೇ ಸಾಗಿಸಿಕೊಳ್ಳುವ ವಿಚಾರವಲ್ಲಿ, ಮದ್ರಾಸು ಮತ್ತು ಪಂಜಾಬ್ ಸರಕಾರಗಳ ಉತ್ತರ ಬಂದಿಲ್ಲವೆಂದೂ ತಿಳಿದು ಬರುತ್ತದೆ.

ಬೆಂಕಿಯನ್ನಾರಿಸುವ 'ಫಯರ್ ಬ್ರಿಗೇಡ್' ಇದೆಯಷ್ಟ; ಅಂತೆಯೇ, ಶಾಂತಿಸ್ಥಾಪಕವಾದ 'ಪೀಸ್ ಬ್ರಿಗೇಡ್' ಸ್ಥಾಪಿಸಬಹುದೆಂದು, ಮಹಾತ್ಮಾಜಿಯವರು 'ಹರಿಜನ' ಪತ್ರಿಕೆಯಲ್ಲಿ ಸೂಚಿಸಿದ ಮೇರೆಗೆ, ಈ ಸೂಚನೆಯನ್ನು, ಕಾರ್ಯತಃ ಆಚರಣೆಗೆ ತರಲು, ಕರಾಚಿಯ ನಗರಸಭಾ [illegible]

ಯೋಚಿಸಿದ್ದಾರೆ. ಪ್ರದಮತಃ, ಈ ಸೂಚನೆಗೆ ಬೆಲೆ ಕೊಟ್ಟ, ಈ ಮಹನೀಯರ ಈ ಪ್ರಯತ್ನವು, ಸಫಲವಾಗಲಿ!

ಒಂದೇ ನಿಮಿಷದಲ್ಲಿ 900 ಗುಂಡುಗಳನ್ನು ವಿರಾಮವಿಲ್ಲದೆ ಹೊಡೆದಲ್ಲಿ ಒಂದು ಗಂಟೆಯೊಳಗಾಗಿ ಒಂದು ನಗರವನ್ನು ಧ್ವಂಸ ಮಾಡಬಹುದು. ಇಂಥಾ ತುಪಾಕಿಯನ್ನು ಜರ್ಮನರು ಕಂಡು ಹಿಡಿದಿರುವರು.

ಜೈನಾಕ್ಕೊಂದು ವೈದ್ಯಕೀಯ ಸೇನಾದಳವನ್ನು ಕಳುಹಿಸಿಕೊಡಬೇಕೆಂದು ಅಖಿಲಭಾರತ ಕಾಂಗ್ರೆಸ್ ಕಮಿಟಿಯವರು ನಿರ್ಧರಿಸಿರುವರಷ್ಟೆ. ಸ್ವಯಂಸೇವಕರಾಗಿ ಅನೇಕ ಡಾಕ್ಟರರು ಅರ್ಜಿ ಮಾಡಿದ್ದಾರೆ. ಸದ್ಯಕ್ಕೆ ನಾಲ್ಕು ಜನರನ್ನು ಮೊದಲು ಆರಿಸಿ ಕಳುಹಿಸುವುದಾಗಿಯೂ, ಇವರು ಜೈನಕ್ಕೆಹೋಗಿ, ಸ್ಥಿತಿಗತಿಗಳನ್ನು ಕಂಡು ಹೆಚ್ಚು ಜನಗನ್ನಪೇಕ್ಷಿಸಿದರೆ, ಇತರರಲ್ಲಿ ಕೆಲವರನ್ನು ಕಳುಹಿಸುವುದಾಗಿಯೂ, ಅಧಿಕಾರಿಗಳು ಪ್ರಕಟಿಸಿದ್ದಾರೆ.

ಬೊಂಬಾಯಿ ನಗರದಲ್ಲಿ ಸಂಚರಿಸುವ ಮೋಟಾರ್ ವಾಹನಗಳ ಚೀತ್ಕಾರವನ್ನು ಬಹಳ ಕಡಮೆ ಮಾಡಬೇಕೆಂದು ಅಲ್ಲಿನ ಪೊಲೀಸ್ ಇಲಾಖೆಯವರು ಒಂದು ಹೊಸ ಆಜ್ಞೆ ಹೊರಡಿಸುತ್ತಾರೆ. ಮುಂದಿನ ವರ್ಷ ಜನವರಿ ತಿಂಗಳಿನ ಆರಂಭದಿಂದ ಮೋಟಾರು ಕಾರುಗಳಲ್ಲಿ ವಿದ್ಯುಚ್ಛಕ್ತಿಯ ಸಹಾಯದಿಂದ ಕೂಗಿಸುವ ಸಾಧನಗಳನ್ನು (ಹಾರನ್) ಮೋಟಾರ್ ನಡೆಸುವವರು ಯಾರೂ ಉಪಯೋಗಿಸಬಾರದೆಂಬುದೇ ಆ ಆಜ್ಞೆ.

ರಾಮದುರ್ಗ ಸಂಸ್ಥಾನದಲ್ಲಿ, ರಾಜಾ ಪ್ರಜೆಗಳೊಳಗಿನ ವೈಮನಸ್ಯ ಶಾಂತವಾಗುವಂತೆ, ಈಗ ರಾಜೀಪ್ರಯತ್ನ ನಡೆದಿದೆ. ಜೀಣ ಕಟ್ಟಿ ನಿಮಿತ್ತ ಕಂದಾಯ ರಿಯಾಯತಿ ಮಾಡಬೇಕೆಂದು ಕಳೆದ ಏಪ್ರಿಲ್ ತಿಂಗಳಿಂದ, ಅಲ್ಲಿನ 33 ಹಳ್ಳಿಗಳಲ್ಲಿ, 15 ಗ್ರಾಮಗಳು, ತೆರಿಗೆ ತೆರುವುದಿಲ್ಲವೆಂದು ಸತ್ಯಾಗ್ರಹ ಹೂಡಿದ್ದುದೇ, ಇಲ್ಲಿನ ಈಗಲಿನ ಕಾರಣವಾಗಿತ್ತು. ಪ್ರಕೃತ, ಆ ಸ್ಥಿತಿ ಒಂದು ಕಮಿಟಿ, ಈ ಸಂಧಾನ ನಡೆಸಿ, ಕೃತಕೃತ್ಯವಾಗಿದೆ. ಅದರಂತೆ—ಸಂಸ್ಥಾನದ ಪ್ರಜೆಗಳಿಗೆ, ಬೇಕ್ಕ ರಾಜಕೀಯ ಸುಧಾರಣೆಗಳು ಬೇಗನೇ ದೊರೆಯಬೇಕು, ಅದಕ್ಕಾಗಿ, ಒಂದು ಬೋರ್ಡ್ ಸ್ಥಾಪಿತವಾಗಬೇಕು; ಕಳೆದ ವರ್ಷದ ತೀರ್ವೆ ಮಾಫಿಯಾಗಬೇಕು; ಚಾಲ್ತಿ ವರ್ಷದ ಕಂದಾಯವನ್ನು ಆಮೂನತು ಇರಿಸಬೇಕು; ರಾಜ್ಯವ್ಯವಹಾರದ ಭಾಷೆ ಕನ್ನಡವಾಗಬೇಕು; ದಮನ ನೀತಿಯ ಶಾಸನಗಳನ್ನು ಹಿಂದೆಗೆಯಬೇಕು ಎಂದು ಸೂಚಿಸಲಾಗಿದೆ.

ವಿದೇಶ

ಅಮೇರಿಕದವರು ಅಟ್ಲಾಂಟಿಕ್ ಸಾಗರದಲ್ಲಿ ದೊಡ್ಡದೊಂದು ನೌಕಾ ಪ್ರದರ್ಶನವನ್ನು [illegible]

50 ಸಾವಿರ ಸೈನಿಕರು ಭಾಗ ವಹಿಸುವರು. 55 ಯುದ್ಧ ನೌಕೆಗಳು ಅಮೇರಿಕದ ಸಾಗರ ಯುದ್ಧ ಪ್ರವೀಣತೆಯನ್ನು ಸಾರಲಿರುವವು.

ಯುದ್ಧ ಕಾಲದ ಖರ್ಚಿಗಾಗಿ, ಬ್ರಿಟನ್ ಆಹಾರ ಸಾಮಗ್ರಿಗಳ ಸಂಗ್ರಹವನ್ನು ಭರದಿಂದ ಸಾಗಿಸುತ್ತಿದೆ. 125 ಸಾವಿರ ಟನ್ ಗೋಧಿ ಕರಾಚಿ ಬಂದರಿಂದ ಬೇಗನೆ ಬ್ರಿಟನಿಗೆ ಸಾಗಿಸಲ್ಪಡಲಿದೆ. ಆರು ಹಡಗುಗಳು ಇದಾಗಲೇ ಸಾಗಿವೆ. ಇನ್ನು ಆರು ಹಡಗು ಗೋಧಿಯನ್ನು ತುಂಬಿಕೊಳ್ಳುತ್ತಿವೆ. ವ್ಯಾಪಾರದ ಮುಗ್ಗಟ್ಟಿನಿಂದ ಗೋಧಿಯ ಕ್ರಯ ಬಹಳ ಹೀನಸ್ಥಿತಿಗೆ ಬಂದಿದ್ದುದು ಒಮ್ಮೆಗೆ ಉತ್ತಮ ಗತಿಗೆ ಏರಿತು.

ಹಾಂಕೋಂಗಿಂದ 113 ಮೈಲಿ ದೂರದ ಯಾಂಗ್ಸೆ ಕಣಿವೆಯು ಬಳಿ ಜಪಾನೀಯರು ಮುಂದೊತ್ತುತ್ತಿದ್ದಾರೆ. ಮಾರ್ಷಲ್ ಚೈಂಗ್ ಕೈ-ಶೇಕರ ಅಪ್ಪಣೆಯಂತೆ ರಾಜ್ಯ ಸೂತ್ರಗಳು ಸಾಗುತ್ತಿರುವ ಚುಂಗ್ ಕಿಂಗ್ ಪ್ರದೇಶದ ಕಾವಲಿಗೆ ಸೈನ್ಯಗಳು ನಿಲ್ಲವಾಗುತ್ತವೆ. ವಿಮಾನ ಸೈನ್ಯವೆಲ್ಲ ಪಟ್ಟಣದ ಭದ್ರತೆ ನಡೆಸುತ್ತಿದೆ. ಕಮಗೇ ಜಯವಾದೀತೆಂದು ಮಾರ್ಷಲರ ದೃಢ ನಿಶ್ಚಯ.

ಜಪಾನೀಯರು ವಿಮಾನಗಳಿಂದ ಬಾಂಬ್ ಹಾಕಿ,ಜೈನಾದ ನಿರಾಶ್ರಿತ ನಗರವಾಸಿಗಳನ್ನು ಕೊಲ್ಲುತ್ತಿರುವುದು ಉಚಿತವಲ್ಲವೆಂದು ರಷ್ಯದ ಪ್ರತಿನಿಧಿಗಳು ಜಪಾನಿನ ಸರ್ಕಾರದ ಪ್ರತಿನಿಧಿಗಳಲ್ಲಿ ಕೇಳಿಕೊಂಡರು. ಜಪಾನ್ ಸರ್ಕಾರದವರಿಗೆ ಸಿಟ್ಟು ಬಂತು. ಜೈನದಲ್ಲಿ ತಾವು ಮಾಡುತ್ತಿರುವ ನ್ಯಾಯಾನ್ಯಾಯಗಳನ್ನು ವಿಚಾರಿಸುವುದಕ್ಕೆ ಇತರರಾರಿಗೂ ಹಕ್ಕಿಲ್ಲ. ಜೈನಾದಲ್ಲಿ ಅಂಥಾ ಅನ್ಯಾಯಗಳೇನೂ ನಡೆಯುತ್ತಿಲ್ಲ. ರಷ್ಯ ಸರ್ಕಾರದವರು ಜೈನೀಯರಿಗೆ ಸಹಾಯ ಮಾಡುತ್ತಿರುವರು. ಇದು ಸರಿಯೋ? ಎಂದು ಜಪಾನ್ ಸರ್ಕಾರದವರು ಕೇಳಿದರಂತೆ

ಇಗ್ಗುತಪ್ಪ ಸರ್ವಿಸು ಲೈನು ಬದಲಾವಣೆ.

ಈ ತಾರೀಕು 1 ರಿಂದ ವೀರಾಜಪೇಟೆ ತಕ್ಕಬೆ ಲೈನಿನಲ್ಲಿ ಓಡುತ್ತಿದ್ದ ಇಗ್ಗುತಪ್ಪ ಬಸ್ಸ್ ಸರ್ವಿಸ್ ಬಲೇ ಕವಲಂಗದ ವರೆಗೆ ಹೋಗಿ ನಂತರ ತಿರುಗಿ ವೀರಾಜಪೇಟೆಗೆ 10 ಗಂಟೆಗೆ ಬರುವದು. ಪುನಃ 10-15 ಕ್ಕೆ ವೀರಾಜಪೇಟೆಯಿಂದ ಹೊರಟು ಸಿದ್ದಾಪುರ ಮಾರ್ಗವಾಗಿ ಮಡಿಕೇರಿಗೆ 12-15 ಗಂಟೆಗೆ ಮುಟ್ಟುವದು. ನಂತರ 12-30 ಕ್ಕೆ ಮಡಿಕೇರಿಯಿಂದ ಹೊರಟು ವೀರಾಜಪೇಟೆಗೆ 2-30 ಕ್ಕೆ ತಲಪಿ ಮಾಮೂಲಿನಂತೆ ಪೊನ್ನಂಪೇಟೆ ತಿತಿಮತಿಗೆ ಹೋಗುತ್ತದೆ. ಸೆಪ್ಟಂಬರ್ ಅಂತ್ಯದಿಂದ ಮಾಮೂಲಿನಂತೆ ಲೈನಿನಲ್ಲಿ ಓಡಾಡುವದು.

2-1 ಕೆ. ಯಂ. ಯಂ. ಸಿ. } ಮುಂದಣ್ಣ.

ಕೊಡಗು

ಜುಲೈ ತಾರೀಖು ೧ನೇ ಶುಕ್ರವಾರ ೧೯೩೮.

ಬಾಂಬುಗಳ ಅನಾಹುತ.

ಪೂರ್ವಕಾಲದ ಯುದ್ಧದ ರೀತಿ, ನೀತಿಗಳಿಗೂ ಆಧುನಿಕ ಕಾಲದವುಗಳಿಗೂ ದೊಡ್ಡ ವ್ಯತ್ಯಾಸವಿದೆ. ಈಗಿನವರು ಪೂರ್ವದವರನ್ನು ಅನಾಗರಿಕರೆಂದು ಕರೆದರೂ, ಪೂರ್ವದಲ್ಲಿ ಒಂದು ಜನಾಂಗವು ಇನ್ನೊಂದು ಜನಾಂಗದ ಮೇಲೆ ಅನ್ಯಾಯವಾಗಿ ಯುದ್ಧವನ್ನು ಹೂಡುತ್ತಿದ್ದಿಲ್ಲ. ಮಾತ್ರವಲ್ಲ, ಯುದ್ಧರಂಗದಲ್ಲಿ ನಿರಾಯುಧರಾದ ಶತ್ರುಗಳ ಮೇಲೆ ತಮ್ಮ ಆಯುಧ ಪ್ರಯೋಗ ಮಾಡುತ್ತಿದ್ದಿಲ್ಲ. ನಾಗರೀಕರೆಂದುಕೊಳ್ಳುತ್ತಿರುವ ಈಗಿನವರು ಮಾಡುತ್ತಿರುವ ಯುದ್ಧದ ರೀತಿಯಾದರೋ ಮನುಷ್ಯ ಮಾತ್ರದವರನ್ನು ನಾಚಿಕೆಯಿಂದ ತಲೆ ತಗ್ಗಿಸುವಂಥದ್ದಾಗಿದೆ. ತಮ್ಮಂತೆಯೇ ಸನ್ನದ್ಧರಾದವರೊಂದಿಗೆ ಯುದ್ಧ ಮಾಡುವುದರ ಬದಲು ಯುದ್ಧರಂಗದಿಂದ ಎಷ್ಟೋ ದೂರದಲ್ಲಿರುವ ಪಟ್ಟಣಗಳ ಮೇಲೆ ಬಾಂಬುಗಳನ್ನು ಎಸೆದು ಅಲ್ಲಿಯ ಅಸಹಾಯಕರಾದ ಮುದುಕರು, ಅಶಕ್ತರು, ಹೆಂಗಸರು, ಮಕ್ಕಳನ್ನು ಸದೆ ಕೊಲ್ಲುತ್ತಿರುವರು; ಅದೆಷ್ಟೋ ಅಮೂಲ್ಯವಾದ ಮತ್ತು ಚರಿತ್ರಾರ್ಹವಾದ ಕಟ್ಟಡಗಳನ್ನು ನಾಶಮಾಡುತ್ತಿರುವರು. ಇದು ನೀತಿರಹಿತವಾದ ಹೇಡಿತನದ ಕಾರ್ಯವಾಗಿದೆ. ಆಧುನಿಕ ಶಾಸ್ತ್ರಪರಿಜ್ಞಾನದ ಫಲವಿದು! ಶಾಸ್ತ್ರಪರಿಶೋಧನೆಯು ವಿಶೇಷವಾದ ಫಲಿತಾಂಶಗಳು ಮನುಷ್ಯ ವರ್ಗದ ಸುಖಜೀವನವನ್ನು ಅಭಿವೃದ್ಧಿಗೊಳಿಸಲು ಉಪಯೋಗಿಸಲ್ಪಡಬೇಕಿತ್ತು; ಅದರ ಬದಲು ಅವುಗಳು ಮನುಷ್ಯರ ಮತ್ತು ಅಮೂಲ್ಯ ವಸ್ತುಗಳ ನಾಶಕ್ಕಾಗಿ ಉಪಯೋಗಿಸಲ್ಪಡುತ್ತಿರುವುದು ಬಹಳ ಶೋಚನೀಯವಾಗಿದೆ.

ಜನಾಂಗಗಳ ಕೂಟದ ಮಾತನ್ನು ಧಿಕ್ಕರಿಸಿ ಇಟಲಿಯವರು ಅಬಿಸ್ಸೀನಿಯಾದಲ್ಲಿ ಸಾಧಾರಣದ ಬಾಂಬುಗಳನ್ನು ಮಾತ್ರವಲ್ಲ, ವಿಷಗಾಳಿಯ ಬಾಂಬುಗಳನ್ನೂ ಕೂಡ ಉಪಯೋಗಿಸಿ ಅಲ್ಲಿಯ ಧೀರ ಯೋಧರ ಶೌರ್ಯ ಸಾಹಸಗಳನ್ನು ಮುರಿದರು; ಸಾವಿರಗಟ್ಲೆ ಅಸಹಾಯಕರ ಪ್ರಾಣಹತ್ಯ ಮಾಡಿದರು. ಧೀರ್ಘಕಾಲದಿಂದ ಸ್ಪೈನಿನಲ್ಲಿ ಈ ಹತ್ಯಾಕಾಂಡವು ನಡಿಸಲ್ಪಡುತ್ತಲೇ ಇದೆ. ಈಗ ಕೆಲವು ತಿಂಗಳುಗಳಿಂದ ಜಪಾನರು ಚೈನಾದ ಪಟ್ಟಣಗಳ ನಿಬಿಡವಾದ ಜನಸಮುದಾಯದ ಮೇಲೆ ಈ ಅನಾಹುತವನ್ನು ನಡಿಸುತ್ತಾ ಇದ್ದಾರೆ. ಶತ್ರುಗಳ ಮಿಲಿಟರಿ ಸ್ಥಾನಗಳ ಮೇಲೆ ಮಾತ್ರ ಬಾಂಬುಗಳನ್ನು ಹಾಕುತ್ತಿರುವವರೆಂದು ಸ್ಪೈನಿನ ದಂಗೆಕೋರ ಮುಖಂಡನಾದ ಫ್ರಾಂಕೋರವರೂ, ತಾವು ಬಾಂಬುಗಳನ್ನು ಉಪಯೋಗಿಸುತ್ತಿರುವುದು ಪಟ್ಟಣವಾಸಿಗಳನ್ನು ನಾಶಮಾಡಲಿಕ್ಕಲ್ಲ; ಆದರೆ ಶತ್ರುಗಳನ್ನು ಅಧೈರ್ಯಪಡಿಸಲಿಕ್ಕಾಗಿ ಮಾತ್ರವಾಗಿದೆ ಎಂದು ಜಪಾನಿನವರೂ ಹೇಳುತ್ತಿರುವುದರಲ್ಲಿ ಅರ್ಥವೇ ಇಲ್ಲ. ಈಗ ಜನಾಂಗಗಳ ಕೂಟವು ಉಸುರೆತ್ತುವಂತಿಲ್ಲ. ಅದು ಮುದುಡಿ ಮೂಲೆಗೆ ಬಿದ್ದು ಹೋಗಿದೆ. 'ನಾಗರೀಕ' ಜನಾಂಗಗಳಾದ ಅಮೇರಿಕನರು, ಬ್ರಿಟಿಷರು, ಫ್ರೆಂಚರೇ ಮೊದಲಾದವರು ಈ ಕ್ರೂರಕೃತ್ಯಗಳನ್ನು ನೋಡುತ್ತಾ ಸುಮ್ಮನಿರುವರು. ಫ್ರಾಂಕೋರವರ ಕಡೆಯವರು ಬ್ರಿಟಿಷ್ ಹಡಗುಗಳನ್ನು ಮುಳುಗಿಸುತ್ತಿದ್ದರೂ ಕೂಡ ಬ್ರಿಟಿಷ್ ಸಿಂಹವು ಘರ್ಜಿಸಲಾರದೆ, ಅಬಲವಾದ ವಾಣಿಯಿಂದ ತನ್ನ ಅತೃಪ್ತಿಯನ್ನೂ ಸೂಚಿಸುತ್ತಿರುವುದು.

ಇಂಥಾ ಅನ್ಯಾಯದ ಬಾಂಬುಗಳ ಪ್ರಯೋಗವನ್ನು ವಿಚಾರಿಸಲು ಒಂದು ನಿಷ್ಪಕ್ಷಪಾತದ ಕಮಿಷನನ್ನು ಏರ್ಪಡಿಸಬೇಕೆಂದು ಬ್ರಿಟಿಷ್ ಪ್ರಧಾನ ಮಂತ್ರಿಗಳು ಸಲಹೆಕೊಟ್ಟಿರುವರು. ಆದರೆ ಸ್ಪೈನಿನಲ್ಲಿ ಜನರಲ್ ಫ್ರಾಂಕೋರವರಿಗೆ ಬೆಂಬಲವನ್ನೀಯುತ್ತಿರುವ ಇಟಲಿ ಮತ್ತು ಜರ್ಮನಿಯವರು ಬ್ರಿಟಿಷರ ಈ ಸಲಹೆಗೆ ಒಂದಿಷ್ಟು ಪ್ರಾಮುಖ್ಯತೆಯನ್ನು ಕೊಡುವಂತೆ ಕಾಣುವುದಿಲ್ಲ. ಯಾಕೆಂದರೆ ಬ್ರಿಟಿಷರೇ ಇಂಡಿಯಾದ ವಾಯುವ್ಯ ಪ್ರಾಂತ್ಯದ ಸರಹದ್ದಿನಲ್ಲಿ ಬೆಟ್ಟ ನಿವಾಸಿಗಳಾದ ಪಠಾಣರ ಮೇಲೆ ಬಾಂಬುಗಳನ್ನು ಎಸೆಯುತ್ತಿರುವರು. ಇದನ್ನು ಅವರು 'ಪೊಲೀಸು ಬಾಂಬಿಂಗ್' ಎಂದು ಕರೆದರೂ ಅದರಿಂದ ಹಲವು ಹೆಂಗಸರು ಮಕ್ಕಳ ಪ್ರಾಣ ಹಾನಿಯಾಗುವುದರಲ್ಲಿ ಸಂಶಯವಿಲ್ಲ. ಬಾಂಬುಗಳ ಉಪಯೋಗದ ಹೆಸರು ಬೇರೆ ಇದ್ದರೂ ಅದರ ನಾಶಕರವಾದ ಪರಿಣಾಮವು ಒಂದೇ ಆಗಿದೆ. ಈ ವಿಷಯ ವಿಚಾರಿಸಲು ಒಂದು ಕಮಿಷನನ್ನು ನೇಮಿಸಬೇಕೆಂದು ಬ್ರಿಟಿಷ್ ಪಾರ್ಲಿಮೆಂಟಿನ ಒಬ್ಬ ಲಿಬರಲ್ ಮೆಂಬರರು ಸೂಚಿಸಿದಾಗ್ಯೂ—ಮೊದಲು ಜನರಿಗೆ ಎಚ್ಚರಿಕೆ ಕೊಟ್ಟು ನಂತರ ಬಾಂಬುಗಳನ್ನು ಹಾಕುವುದಾಗಿದೆ; ಈ ವಿಷಯ ನಿರ್ದಿಷ್ಟ ಕ್ರಮಗಳಿವೆ, ಅವುಗಳನ್ನನುಸರಿಸಿಯೇ ಬಾಂಬುಗಳ ಪ್ರಯೋಗಮಾಡಲಾಗುವುದೆಂದು ಮುಂತಾಗಿ ಪ್ರಧಾನರು ಜವಾಬಿತ್ತರು. ಇದೆಂದಿಗೂ ಸಮರ್ಪಕವಾದ ಉತ್ತರವಲ್ಲ. ತತ್ವದಲ್ಲಿ ನಿರ್ದಿಷ್ಟ ಕ್ರಮಗಳೇನೋ ಇರಬಹುದು. ಆದರೆ ಕಾರ್ಯತಃ ಅವುಗಳನ್ನನುಸರಿಸಿ ನಡೆಯುತ್ತಾರೋ ಎಂಬದು ಸಂಶಯದ ಮಾತಾಗಿದೆ. ಆದಕಾರಣ ಅದರ ವಿಚಾರಣೆ ನಡಿಸಲು ಪ್ರಧಾನರು ಒಪ್ಪಿಕೊಳ್ಳಬೇಕಿತ್ತು. ಇದೇ ಕಾರಣವನ್ನು ಹೂಡಿ ಜಪಾನರು ಮತ್ತು ಜನರಲ್ ಫ್ರಾಂಕೋರವರು ಬ್ರಿಟಿಷರ ವಿಚಾರಣಾ ಸಲಹೆಯನ್ನು ತಿರಸ್ಕರಿಸುವುದರಲ್ಲಿ ಆಶ್ಚರ್ಯವೇನಿದೆ?

ಹೇಗೂ ಬಾಂಬುಗಳ ಅನಾಹುತವು ವಿಪರೀತವಾಗಿ ವರ್ಣನಾತೀತವಾಗುತ್ತಿದೆ. ಅಸಹಾಯಕ ಜನರ ಮೇಲೆ ಈ ರೀತಿ ಅನ್ಯಾಯವಾಗಿ ಬಾಂಬುಗಳ ಸುರಿಮಳೆಗರೆದು ನಾಶ ಮಾಡುವುದು ಆಧುನಿಕ ನಾಗರೀಕತೆಗೆ ಒಂದು ದೊಡ್ಡ ಅಪಮಾನವಾಗಿದೆ. ಇದನ್ನು ಪ್ರಪಂಚದ ಜನಾಂಗಗಳೆಲ್ಲವೂ ಸೇರಿ ಬೇಗನೆ ಅಂತ್ಯಗೊಳಿಸುವುದು ಅಗತ್ಯವಾಗಿದೆ.

ಪಂಡಿತ ನೆಹರುರವರು ಲಂಡನಿನಲ್ಲಿ.

ವಿಶೇಷ ಸ್ವಾಗತ.

ಪಂಡಿತ ಜವಾಹರ್‌ಲಾಲ್ ನೆಹರುರವರಿಗೆ ಲಂಡನಿನಲ್ಲಿ ಅಪೂರ್ವ ಸ್ವಾಗತ ದೊರೆಯಲಾಯಿತು. ಕಳೆದ ತಾ. 25ರಲ್ಲಿ ಅವರು ಭಾಷಣ ಮಾಡಿದ ಕಿಂಗ್ಸ್‌ವೇ ಹಾಲ್‌ನಲ್ಲಿ ಮತ್ತು ಸೆಯಿಂಟ್ ಪಂಕ್ರಾಸ್ ಟೌನ್ ಹಾಲ್‌ನಲ್ಲಿ ಜನರು ಕಿಕ್ಕಿರಿದು ನೆರೆದಿದ್ದರು. ಎರಡು ಕಡೆಯಲ್ಲೂ ಅವರು ಸಭಾ ಮಂದಿರವನ್ನು ಪ್ರವೇಶಿಸಿದಾಗಲೂ ಮತ್ತು ಭಾಷಣ ಮಾಡಲು ಎದ್ದು ನಿಂತಾಗಲೂ ಜಯಘೋಷವು ವಾಯುಮಂಡಳವನ್ನು ತುಂಬಿತು. ಹಿಂದೂದೇಶದ ಎಲ್ಲಾ ಮತಸ್ಥರೂ ತುಂಬಾ ಸೇರಿದ್ದರು. ಇಂಗ್ಲೀಷರು ಪ್ರಾಮುಖ್ಯತೆಯನ್ನು ಹೊಂದಿದ್ದರು. ಆಫ್ರಿಕದ ಮತ್ತು ಇತರ ವಸಾಹತುಗಳ ನಿವಾಸಿಗಳು ಹಲವರು ಕೂಡಿದ್ದರು. ಪಂಡಿತ ನೆಹರುರವರು ಭಾಷಣ ಮಾಡುತ್ತಾ—'ಇಂಡಿಯಾದ ಚಳವಳವು ಕ್ರಮೇಣ ಪ್ರಪಂಚದ ಸ್ವಾತಂತ್ರ್ಯದ ದೊಡ್ಡ ಪ್ರಶ್ನೆಯೊಂದಿಗೆ ಸೇರುತ್ತಲಿದೆ. ರಾಷ್ಟ್ರೀಯತ್ವವು ತನ್ನಷ್ಟಕ್ಕೆ ಉತ್ತಮವಲ್ಲದಿದ್ದರೂ, ಹಲವು ವರ್ಷಗಳಿಂದ ಇಂಡಿಯಾದಲ್ಲಿ ಸಾಮ್ರಾಜ್ಯ ಶಾಹಿತ್ವವು ಪ್ರಬಲ್ಲವಾಗಿದ್ದರೂ ಕಾಂಗ್ರೆಸು ತಮ್ಮ ರಾಷ್ಟ್ರೀಯತ್ವದ ಚಳವಳವನ್ನು ನಿರ್ಮಲವಾಗಿಯೂ, ಸವಿಯಾಗಿಯೂ ಇಟ್ಟುಕೊಂಡಿದೆ; ಜನಾಂಗ ದ್ವೇಷಕ್ಕೆ ಎಡೆ ಕೊಟ್ಟಿಲ್ಲ. ಯೂರೋಪಿನಲ್ಲಿ ಅಂಥಾ ಚಳವಳದ ಉದ್ದೇಶವನ್ನು ಇಂಡಿಯಾವು ಮೆಚ್ಚುತ್ತಿದೆ. ಆದರೆ ಸ್ಪೈನಿನಲ್ಲಿಯೂ, ಚೈನಾದಲ್ಲಿಯೂ ಪಟ್ಟಣಗಳ ಮೇಲೆ ಬಾಂಬುಗಳನ್ನು ಎಸೆಯುವುದನ್ನು ಖಂಡಿಸುತ್ತಾ ಇಂಡಿಯಾದ ಗಡೀ ಪ್ರಾಂತ್ಯದಲ್ಲಿ ಬ್ರಿಟಿಷರು ಬಾಂಬು ಹಾಕುವುದನ್ನು ಸಹಿಸುತ್ತಿರುವ ವರ್ತನೆಯು ವಿಷಾದಕರವಾದದು. ಇಂಡಿಯಾದ ನಿಜವಾದ ಪ್ರಶ್ನೆಯು ಜನಸಮುದಾಯದ ಬಡತನವನ್ನು ಹೋಗಲಾಡಿಸುವದಾಗಿದೆ. ಇದನ್ನು ಲಾಯರು ತಯಾರಿಸಿದ ಸುಧಾರಣೆ ಆಕ್ಟು ಪರಿಹರಿಸಲಾರದು' ಎಂದು ಮುಂತಾಗಿ ಹೇಳಿದರು.

ಅನಂತರ ಪ್ರಸಿದ್ಧ ನೀಗ್ರೋ ಸಂಗೀತಗಾರರಾದ ಪಾಲ್‌ರಾಬ್‌ಸನ್‌ರು, ಟ್ರೇಡ್ ಯೂನಿಯನ್ ಕಾಂಗ್ರೆಸ್ಸಿನ ಅಧ್ಯಕ್ಷರಾದ ಮಿ. ಎಲ್ವಿನ್ನರು, ಪ್ರೊಫೆಸರ್ ಲಸ್ಕಿಯವರು, ಪ್ರಕಾಶಕರಾದ ಮಿ. ವಿಕ್ಟರ್ ಗೊಲ್ಲಾನ್ಜ್‌ರವರು ಪಂಡಿತ ನೆಹರುರವರನ್ನು ಪ್ರಶಂಸಿಸಿ ಮಾತಾಡಿದರು. ಪಾರ್ಲಿಮೆಂಟಿನ ಲೇಬರ್ ಮೆಂಬರಾದ ಮಿ. ಗ್ರೀನ್‌ಫೆಲ್‌ರವರು ಅಧ್ಯಕ್ಷರಾಗಿದ್ದರು.

ಬ್ಯಾಂಕುಗಳಲ್ಲಿ ವಿಶ್ವಾಸ.

ಠೇವಣಾತಿದಾರರಿಗೆ ಮದ್ರಾಸು ಮುಖ್ಯ ಮಂತ್ರಿಯವರ ವಿನಂತಿ.

ಮದ್ರಾಸು ಸರ್ಕಾರದ ಮುಖ್ಯ ಮಂತ್ರಿ ಶ್ರೀ ಸಿ. ರಾಜಗೋಪಾಲಾಚಾರ್ಯರು ಈ ಕೆಳಗಿನ ವಿನಂತಿಯನ್ನು ಪ್ರಕಟಿಸಿರುತ್ತಾರೆ.

ತಿರುವಾಂಕೂರು ನೇಶನಲ್ ಬ್ಯಾಂಕಿನವರು ವಹಿವಾಟು ನಿಲ್ಲಿಸಿದ್ದರಿಂದ ಮದ್ರಾಸು ಪಟ್ಟಣಗಳಲ್ಲಿ ಬ್ಯಾಂಕುಗಳ ಕುರಿತು ಅವಿಶ್ವಾಸವು ಪ್ರಚಾರವಾದಂತಿದೆ. ಠೇವಣಾತಿದಾರರು ತಮ್ಮ ತಮ್ಮ ಬ್ಯಾಂಕುಗಳಿಂದ ಹಣವನ್ನು ಹಿಂತೆಗೆಯುವ ಮನಸುಳ್ಳವರಾಗಿದ್ದಾರೆ.

ಎಷ್ಟೇ ಉತ್ತಮ ಬ್ಯಾಂಕಾದರೂ ಹಣ ಇಟ್ಟವರೆಲ್ಲ ಒಮ್ಮೆಗೇನೇ ಹೋಗಿ ಅದನ್ನು ಕೇಳಿದಲ್ಲಿ ಅದರಿಂದ ಕೊಡಲು ಸಾಧ್ಯವಿಲ್ಲ. ಜನರು ತಮ್ಮೊಡನೆ ಉಳಿಯುವ ಹಣವನ್ನು ಇತರ ಉಪಯುಕ್ತ ಕಾರ್ಯಗಳಿಗೆ ಕೊಡಲು ಅನುಕೂಲವಾಗುವಂತೆ ಬ್ಯಾಂಕಿನಲ್ಲಿಡುವುದೇ ಬ್ಯಾಂಕ್ ಪದ್ಧತಿಯಿಂದ ಸಮಾಜಕ್ಕೆ ಆಗುವ ನಿಜವಾದ ಪ್ರಯೋಜನವಾಗಿರುತ್ತದೆ. ಬ್ಯಾಂಕಿನಲ್ಲಿ ಇಟ್ಟ ಹಣವನ್ನು ಇತರರಿಗೆ ಒಳ್ಳೇ ಭದ್ರತೆ ಮೇಲೆ ಸಾಲ ಕೊಡುವುದು ಬ್ಯಾಂಕಿನ ಕೆಲಸ. ಕೇಳಿದವರಿಗೆ ಕೊಡುವುದಕ್ಕೆ ದೀರ್ಘ ಅನುಭವದ ಅಂದಾಜಿನಿಂದ ಸ್ವಲ್ಪ ಹಣವನ್ನು ಬ್ಯಾಂಕಿನಲ್ಲಿ ಇಟ್ಟುಕೊಳ್ಳುತ್ತಾರೆ. ಠೇವಣಾತಿದಾರರ ಹಣವನ್ನೆಲ್ಲ ಬ್ಯಾಂಕಿನಲ್ಲೇ ಯಾವಾಗಲೂ ಇಟ್ಟರೆ ಎಷ್ಟು ಶ್ರೀಮಂತ ಬ್ಯಾಂಕಾದರೂ ಠೇವಣಾತಿದಾರರಿಗೆ ಬಡ್ಡಿ ಕೊಡಲಾರದು. ಆದ್ದರಿಂದ ಗಾಬರಿಗೊಂಡು ಎಲ್ಲ ಠೇವಣಾತಿದಾರರು ಒಮ್ಮೆಗೇನೇ ಹಣ ಕೇಳಿದರೆ ಯಾವ ಬ್ಯಾಂಕಿನಿಂದಲೂ ಕೊಡಲು ಸಾಧ್ಯವಿಲ್ಲ.

ಠೇವಣಾತಿದಾರರ ಹಿತದ ದೃಷ್ಟಿಯಿಂದಲೇ ಗಾಬರಿ ಮಾಡುವುದು ಯುಕ್ತವಲ್ಲ. ಇದಕ್ಕೆ ಉತ್ತಮ ಉಪಾಯವೆಂದರೆ ಪ್ರತಿಯೊಬ್ಬ ಠೇವಣಾತಿದಾರನು ತನ್ನ ತನ್ನ ಬ್ಯಾಂಕಿನ ಮೇಲೆ ವಿಶ್ವಾಸ ಇಡಬೇಕು.

ಮದ್ರಾಸು ಸರ್ಕಾರದವರು ಮದ್ರಾಸಿನ ಎಲ್ಲ ಬ್ಯಾಂಕುಗಳ ಲೆಕ್ಕ ನೋಡಿ ಅಧಿಕಾರಯುಕ್ತ ಪ್ರಕಟಣೆ ಕೊಡುವರು. ರಿಸರ್ವ್ ಬ್ಯಾಂಕಿನವರೂ ಜನರ ವಿಶ್ವಾಸ ಹಾಳಾಗದಂತೆ ಅಗತ್ಯವುಳ್ಳ ಕಾರ್ಯವನ್ನು ಮಾಡಿಯೇ ಮಾಡುವರು. ಆದ್ದರಿಂದ ಎಲ್ಲಾ ಮಹಾಜನರೂ ಶಾಂತರಾಗಿ ನಿರಾಧಾರ ವಾರ್ತೆಗಳಿಂದ ಗಾಬರಿಗೊಳ್ಳಬಾರದಾಗಿ ಪ್ರಾರ್ಥಿಸಿಕೊಳ್ಳುತ್ತೇನೆ.

ಜಪಾನರ ಕ್ರೂರಾಚಾರ ಮತ್ತು ನಿರ್ದಯತೆ.

●●●

ಚೀನಿಯರ ಮೇಲೆ ಜಪಾನರು ನಡೆಸುತ್ತಿರುವ ಅತ್ಯಾಚಾರಗಳ ಬಗ್ಗೆ ಚೈನಾದಲ್ಲಿರುವ ಮಿಸ್. ಮ್ಯುರಿಯಲ್ ಲೆಸ್ಟರ ಎಂಬವಳು ಬರೆದ ಪತ್ರದಿಂದ ತೆಗೆದು 'ಹರಿಜನ' ಪತ್ರಿಕೆಯಲ್ಲಿ ಹಾಕಿದ ಕೆಲವು ಅಂಶಗಳ ಸಾರಾಂಶ:—

ಜಪಾನರು ಚೀನೀಯರ ಮೇಲೆ ನಡೆಸುತ್ತಿರುವ ಅನಾಚಾರಗಳು ನಿರ್ದಯ ಮತ್ತು ಅಧಮಾಧಿಕಗಳಿಂದ ತುಂಬಿವೆ. ಈ ವಿಷಯಗಳನ್ನು ಯಾವನೊಬ್ಬ ವಿರೋಧಿಯೇ ಆಗಲೀ ನೋಡಿದರೆ ಆತನ ಹೃದಯವು ಕರಗಿ ನೀರಾಗದಿರದು. ಜಪಾನರು ಚೀನಿಯರನ್ನು ಹುಲ್ಲಿಗಿಂತ ಕಡೆಯಾಗಿ ಪರಿಗಣಿಸಿರುವರು. ಒಬ್ಬ ಜಪಾನಿ ಮಹನೀಯನು ಒಂದು ಹುಲ್ಲಿನ ಹೊರೆಯನ್ನು ತರಿಸಿ ಅದರ ಮೇಲೆ ತನ್ನ ಖಡ್ಗ ನೈಪುಣ್ಯವನ್ನು ತೋರಿಸಿ ಹುಲ್ಲಿನ ಹೊರೆ

ಸಂಶಯವಿರುವಲ್ಲಿ ನೆಂದೂ, ಈ ಸಾಲಗಳಲ್ಲಿ ಭೂಮಾಲೀಕರ ಪಾಲಿಗೆ 24 ಕೋಟಿ ರೂ. ಗಳ ಸಾಲ ಇರುವದೆಂದೂ, ಸಾಧಾರಣ ರೈತರುಗಳನ್ನು ಬಿಟ್ಟು, ನಾಡುಗಳಲ್ಲಿಯೂ ಹಳ್ಳಿಪಳ್ಳಿಗಳಲ್ಲಿ ಮನೆ ಮಠಗಳಿರುವ ರೈತರ ಪಾಲಿಗೆ 2 ಕೋಟಿ ರೂ. ಗಳ ಸಾಲವು ಸಾಧಾರಣ ಗರೀಬ ಸ್ಥಿತಿಯ ವ್ಯವಸಾಯಗಾರರ ಪಾಲಿಗೆ 129 ಕೋಟಿ ಸಾಲ ಎಂದು ಪ್ರಕಟಣೆ ಮಾಡಿರುತ್ತಾರೆ.

ಅಸಾಂ.

ಅಸಾಂ ಪ್ರಾಂತ್ಯದ ಬ್ಯಾಂಕಿಂಗ್ ತನಿಖೆ ಕಮಿಟಿಯವರು ಭೂಮಿ ವ್ಯವಸಾಯಗಾರರ ಸಾಲದ ಮೊಬಲಗನ್ನು 22 ಕೋಟಿ ರೂಪಾಯಿಯ ಎಲ್ಲೆಯನ್ನು ಮೀರಿರುವದೆಂದೂ, ಈ ಸಾಲವು ವಾರ್ಷಿಕ ಭೂಕಂದಾಯದ 21 ರಷ್ಟು ಇರುವದೆಂದೂ, ಪ್ರತಿ ಕುಟುಂಬದ ಸರಾಸರಿ ಸಾಲವು 242 ರೂಪಾಯಿಗಳೆಂದೂ, ಶೇಕಡ 16 ರಷ್ಟು ಕುಟುಂಬಸ್ಥರು ಏನೊಂದೂ ಸಾಲವಿಲ್ಲದೆ ಇರುವರೆಂದೂ ಪ್ರಕಟಿಸಿರುತ್ತಾರೆ.

ಬರ್ಮಾ.

ಬರ್ಮಾ ಬ್ಯಾಂಕ್ ತನಿಖೆ ಕಮಿಟಿಯವರು ಆ ಪ್ರಾಂತ್ಯದ ಒಟ್ಟು ಸಾಲವು 50 ಕೋಟಿಯಿಂದ 60 ಕೋಟಿ ರೂ. ಗಳ ವರೆಗೂ ಇರುವದೆಂದು ಅಂದಾಜು ಮಾಡಿರುವುದು ಸರಿಯಾಗಿದೆಯೆಂದು ಪ್ರಕಟಿಸಿರುವರು.

ಸೆಂಟ್ರಲ್ ಪ್ರಾಂತ್ಯ.

ಸೆಂಟ್ರಲ್ ಪ್ರಾಂತ್ಯಗಳ ಒಟ್ಟು ಸಾಲವು ಸರಿಯಾದ ತನಿಖೆಯಿಂದ 18 ಕೋಟಿ ರೂಪಾಯಿಗಳೆಂದು ಪ್ರಕಟಿಸಿರುವರು.

ಕೊಡಗು ದೇಶ.

ಕೊಡಗು ದೇಶದ ಸಾಲವು 35 ಲಕ್ಷ ಮತ್ತು 55 ಲಕ್ಷ ಈ ಎರಡು ಸಂಖ್ಯೆಗಳ ಮಧ್ಯದಲ್ಲಿನಷ್ಟು ಇರುವದೆಂದು ಅಂದಾಜು ಮಾಡಿ ಪ್ರಕಟಿಸಿರುವರು.

'ಬಡ ಜನರ ಸೇವಕ'

ಯೊಡನೆ ತನ್ನ ಕೈಚಳಕವನ್ನು ತೋರಿಸುವದಕ್ಕಿಂತ ಹೊಂಚುಹಾಕಿಕೊಂಡು ಕಾದಿದ್ದ ಮನುಷ್ಯನೊಡನೆ ಹೋರುವದು ಸುಲಭವೆಂದು ಬಗೆದಂತೆ, ಚೀನೀ ಯುವತಿಯರನ್ನು ಹಿಡಿದು ರಸ್ತೆಯಲ್ಲಿ ಓಡಾಡುವ ಜಪಾನಿಯರನ್ನು ನೋಡುವ ದೃಶ್ಯವು ಅಸಹ್ಯವಾಗಿದೆ. ಇಂಥಾ ಅನಾಚಾರಗಳನ್ನು ತಡೆದು ನಿಲ್ಲಿಸುವ ಕಾನೂನು ಇನ್ನು ಅಲ್ಲಿ ಹುಟ್ಟಲೇ ಇಲ್ಲ ಎನ್ನಬಹುದು. ಪರಾಜಯ ಹೊಂದಿದ ಚೈನೀಯರ ಕೈಯಲ್ಲಿ ಬಲಾತ್ಕಾರದಿಂದ ತಮ್ಮ ಧ್ವಜಗಳನ್ನು ಹಿಡಿಸಿ, ಜಯಕಾರವನ್ನು ಮಾಡುವಂತೆ ಪ್ರೇರೇಪಿಸುವ ಜಪಾನೀ ಸೈನಿಕರ ವರ್ತನೆಯು ಖಂಡನೀಯವಾಗಿದೆ. ದಿನಸಕ್ಕೆ 200 ರಂತೆ ಶೈಹಿಂಗ್ ನಗರಕ್ಕೆ ಬರುತ್ತಿರುವ ಜಪಾನೀಯರು ತಮ್ಮ ನಿಜಸ್ಥಿತಿಯನ್ನು ಮರೆಸಿ ಬರುತ್ತಾರೆ. ಅಂಗಡಿಗಳನ್ನಿಟ್ಟು ವ್ಯಾಪಾರಮಾಡುವ ಜಪಾನಿ ಹೆಂಗಸರಲ್ಲಿ ಸಹ ದಯೆ, ಶಾಂತತೆಯನ್ನು ಕಾಣಲಿಚ್ಛಿಸುವದು ಮೌಢ್ಯತೆಯೇ ಆಗಿದೆ. ಜಪಾನೀ ಜನಾಂಗದಿಂದಲೇ ದಯೆ, ಶಾಂತತೆ, ಇವೆಲ್ಲವೂ ಮಾಯವಾಗಿದೆ.

ಚೈನಿ ಯುವತಿಯರನ್ನು ಒಡಿದು ತಮ್ಮ ಬಂಧನದಲ್ಲಿರಿಸಿ, ಅವರಿಂದ ತನ್ನ ಬಟ್ಟೆ ಬರೆ ಒಗಿಸುವದಲ್ಲದೆ ರಾತ್ರಿ ಅವರೊಡನೆ ಹಟಸಂಭೋಗ ಮಾಡುವ ಕ್ರೂರಾಚಾರಗಳು ವಿಪರೀತವಾಗಿವೆ. ಇಂಥಾವರನ್ನು ಒಂದು ವಾರ ತನ್ನಲ್ಲಿಟ್ಟುಕೊಂಡು ನಂತರ ಅವರನ್ನು ಕೊಂದು ಹಾಕಿಬಿಡುವರು. ಹೀಗೆ ಒಂದು ಸಲ ಒಬ್ಬ ಚೈನೀ ಯುವತಿಯನ್ನು ಕೊಲ್ಲಲು ಕೊಡಲಿಯಿಂದ ಆರೇಳು ಪೆಟ್ಟುಗಳನ್ನು ತಲೆಗೆ ಹೊಡೆದರೂ ಸಹ ಆಕೆ ಸಾಯದ್ದನ್ನು ಕಂಡು ಆಕೆಯನ್ನು ಹೊರ ಹಾಕಿದರು. ಆಕೆಯು ಈಗ ಒಂದು ಮಿಶಿನ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಕೊಡುತ್ತಿರುವಳು.

ಒಂದು ಸ್ಥಳದಲ್ಲಿ 12 ಚೈನೀಯರನ್ನು ಹಿಡಿದು ಕಟ್ಟಿ ಅವರಿಗೆ ಮಿಶನ್ ಗನ್‌ಗಳಿಂದ ಗುಂಡು ಹಾರಿಸಿದರು. ನಂತರ ಅವರ ಮೇಲೆ ಪೆಟ್ರೋಲನ್ನು ಹಾಕಿ ಬೆಂಕಿಕೊಟ್ಟರು. ಇವರಲ್ಲಿ ಒಬ್ಬನು ಹೇಗೋ ತಪ್ಪಿಸಿ ಹರಿದುಕೊಂಡು ಬರುವದನ್ನು ಕಂಡು ಒಂದು ಮಿಶಿನರಿಯು ಅವರ ಸಹಾಯಕ್ಕೆ ಬಂದನು. ಆದರೆ ಅವನು ಆಸ್ಪತ್ರೆಯನ್ನು ತಲಪುವ ಮೊದಲು ಮೃತಪಟ್ಟನು.

ಜಪಾನಿಯರು ಬೆಂಕಿ ಉರಿಸಲಿಕ್ಕೆ ಕಲ್ಲಿದ್ದಲು ಉಪಯೋಗಿಸುವದಿಲ್ಲ. ಉತ್ತರ ಚೈನಾದಲ್ಲಿ ಮರಗಿಡಗಳು ಕಡಿಮೆ. ಅಲ್ಲಿಯ ಜಪಾನಿ ಸೈನಿಕರು ಬೆಂಕಿ ಉರಿಸಲು ಚೈನೀಯರ ಮನೆಗಳಿಗೆ ನುಗ್ಗಿ ಅಲ್ಲಿರುವ ಸಾಮಾನುಗಳನ್ನು ಮುರಿದು ಕಿಡಿಕಿಗಳನ್ನು ಒಡೆದು, ಬೆಂಕಿ ಹಚ್ಚುವರು. ಪುರಾತನ ಚೈನೀಯರ ಅನೇಕ ಭವ್ಯವಾದ ಕಟ್ಟಡಗಳನ್ನು ಈ ರೀತಿ ನಾಶಮಾಡುತ್ತಿರುವರು.

ಜಪಾನೀ ಚಿಲ್ಲರೆ ವ್ಯಾಪಾರಸ್ಥರು ಚೀನಿಯರ ಮನೆಯಿಂದ ಮನೆಗೆ 'ವಿಷದ' ಔಷಧ ಎಂದು ಕೂಗುತ್ತಾ ತಿರುಗುವರು. ಪ್ರತಿ ಮನೆಯಲ್ಲೂ ಕೆಲವು ಸಾಮಾನನ್ನಾದರೂ ತೆಗೆದೇ ತೀರಬೇಕು. ಮನೆಮನೆಯಲ್ಲಿ ಇದನ್ನು ತೆಗೆದುಕೊಳ್ಳಲೇ ಬೇಕೆಂದು ಗರ್ಜಿಸುವರು. ಹಣ ಒಲ್ಲದ ಪಕ್ಷದಲ್ಲಿ ಕೊಡುವರು. ಅವನ್ನು ತೆಗೆದು ಉಪಯೋಗಿಸಿದರೆ ಅದರಲ್ಲಿ ಔಷಧದ ಗುಣಗಳೇ ಇಲ್ಲ. ಇಂಥಾ ಈ ಕೃತ್ಯವನ್ನು ಅಧಿಕಾರಿಗಳು ನಿಲ್ಲಿಸಲು ತೊಡಗಿರುವರು.

ಚೈನೀ ಮಕ್ಕಳ ಜೀವನವು ಕಷ್ಟಕ್ಕೀಡಾಗಬೇಕಾಗಿದೆ. ಕಾಲು ಬಟ್ಟೆ ಧರಿಸಿ ಖಡ್ಗಪಾಣಿಗಳಾದ ಸೈನಿಕರು ಅವರನ್ನು ಬಹಳ ಹಿಂಸಿಸುವರು. ಚೈನೀ ಬಾಲಕರ ಮನೋವೃತ್ತಿಯು ಜಪಾನರ ಕ್ರೂರ ಕೃತ್ಯಗಳಿಂದ ಕೆಟ್ಟು ಹೋಗಿದೆ.

ಶಾಲೆಗಳಲ್ಲಿ ಪ್ರತಿಯೊಬ್ಬ ಬಾಲಕನೂ ಒಂದು ಜಪಾನಿ ಬಾವುಟವನ್ನು ಕ್ರಯಕ್ಕೆ ಪಡೆಯಬೇಕು. ಅದರಲ್ಲಿ ಜಯಚಿಹ್ನೆಯನ್ನು ಬರೆದು ಅದರ ಕೆಳಗೆ ರುಜುಮಾಡಿ ಆ ಜಯಕ್ಕೆ ತನ್ನ ಸಹಾನುಭೂತಿಯನ್ನು ತೋರಬೇಕು. ಶಾಲೆಗಳಲ್ಲಿ ಸದ್ಯಕ್ಕೆ ಪಾಠ ಪುಸ್ತಕಗಳೇ ಇಲ್ಲ. ಹಳೇ ಪುಸ್ತಕಗಳನ್ನೆಲ್ಲಾ ನಾಶಮಾಡಿರುವರು. ಹೊಸ ಪುಸ್ತಕಗಳು ಇನ್ನೂ ಟೋಕಿಯೋ ನಗರದಿಂದ ಬರಲಿಲ್ಲ. ಅಲ್ಲಿ ಅವು ತಯಾರಾಗುತ್ತಿವೆ. ಈ ವಿದ್ಯಾ ಕಮಿಟಿಯ ಮೀಟಿಂಗಿನಲ್ಲಿ ಒಬ್ಬ ಅಧ್ಯಾಪಕನು ಹುಡುಗರಿಗೆ ಪ್ರತಿ ಪುಸ್ತಕಗಳನ್ನು ಪಡೆಯಲು ಕಷ್ಟವಾಗುವದು ಅದ್ದರಿಂದ ಚರಿತ್ರೆ, ಭೂಗೋಳ, ಸಾಹಿತ್ಯ ಈ ವಿಷಯಗಳಲ್ಲದೆ ಬಾಕಿ ವಿಷಯಗಳಲ್ಲಿ ಹಳೇ ಪುಸ್ತಕಗಳನ್ನು ಉಪಯೋಗಿಸುವದು ಯುಕ್ತವೆಂದು ಸೂಚಿಸಿದ್ದನ್ನು ಅವರು ನಿರಾಕರಿಸಿ, 'ಜಪಾನೀ ಚಕ್ರವರ್ತಿಯು ಚೈನಾದ ಶಾಂತತೆಗಾಗಿ ಇಷ್ಟೆಲ್ಲಾ ಪ್ರಯತ್ನಿಸುತ್ತಿರುವಾಗ ಒಡೇ ಒಂದು ಪಠ್ಯ ಪುಸ್ತಕದ ವಿಷಯ ಹೇಗೆ ಗೊಣಗುವದು?' ಎಂದರಂತೆ. ಅದರ ಸ್ವಕೃತ ಹೇಳುವದಾದರೆ ಜಪಾನಿಯರು ಶಾಲಾ ಕಾಲೇಜುಗಳನ್ನು ಲೈಬ್ರೆರಿಗಳನ್ನೂ ನಾಶಪಡಿಸುತ್ತಿರುವರು. ಚೈನಾದ ಸುಪ್ರಸಿದ್ಧ ವಿಶ್ವ ವಿದ್ಯಾಲಯವಾದ ನಂಕಿ ವಿದ್ಯಾಲಯವು ಸಮೂಲನಾಶವಾಗಿದೆ. ಮಂಚೂರಿಯದಲ್ಲಿ ಬಾಲಕಿಯರ ಶಾಲೆಗಳೆಲ್ಲವೂ ಮುಚ್ಚಲ್ಪಟ್ಟಿದೆ.

ಮನೆಮಾಡುಗಳು ಸೈನಿಕರಿಂದ ಸೂರೆಗೊಳ್ಳುತ್ತಿರುವದನ್ನು ನೋಡುವದು ಅಪರೂಪವಲ್ಲ. ಸುಂದರವಾದ ಪಟ್ಟಣಗಳು ಭಸ್ಮಾವಶೇಷವಾಗಿದೆ. ಜನರಿಂದ ಕಿಕ್ಕಿರಿದಿದ್ದ ನಗರಗಳು ಜನರಹಿತವಾಗಿವೆ. ತಮ್ಮ ಮಕ್ಕಳನ್ನು ಸಾಕಲು ಅಥವಾ ಹೊತ್ತು ತಿರುಗಲಸಾಧ್ಯವಾಗಿ, 'ನನ್ನ ಮಕ್ಕಳನ್ನು ಯಾರು ತೆಗೆದುಕೊಳ್ಳುವರು' ಎಂದು ಕೂಗುವ ತಾಯಂದಿರ ದೃಶ್ಯದಿಂದ ಎಂಥಾ ಪಾಷಾಂಡನ ಹೃದಯವಾದರೂ ಕರಗದಿರದು,

ಕೆಲವು ಪ್ರಾಂತ್ಯಗಳಲ್ಲಿ ನಡೆಯುವ ಘೋರ ಕೃತ್ಯಗಳಿಗೆ ಕಾರಣವೆಂದರೆ ಭಾಷೆ ಮತ್ತು ಹೆಂಗಸರು. ಒಬ್ಬ ಸೈನಿಕನು ರೈತನೊಬ್ಬನನ್ನು ಕೂಗಿ ಮಾತಾಡಿದರೆ ಅವನಿಗೆ ಇವನ ಭಾಷೆಯು ಗೊತ್ತಾಗದ್ದರಿಂದ ಅವನು ಈತನಿಗೆ ಏನು ಬೇಕಾಗಿದೆ ಎಂಬದನ್ನು ತಿಳಿದುಕೊಳ್ಳಲಾರನು. ಅದ್ದರಿಂದ ಅವನು ಸೈನಿಕನ ಗುಂಡಿಗೆ ತುತ್ತಾಗುವನು. ಹೆಂಗಸರ ಸಂರಕ್ಷಣೆಯು ಬಹಳ ಅಪಾಯಕರವಾಗಿದೆ. ಒಬ್ಬ ಹೆಂಗಸಿಗಾಗಿ ಮನೆಯವರನ್ನೆಲ್ಲಾ ಕರುಣಾರಹಿತರಾಗಿ ಕೊಂದಿಕ್ಕುವರು.'

Film Producers, Exhibitors, Distributors and Owners of Touring Talkies, etc., etc.

"District Board Buildings" Bangalore City.

Applications are invited from gentlemen of influence and personality to represent the above company thro'out the Mysore State and COORG and British India, on commission basis or salary or both. Only men of influence and Organising ability need apply with references. Lady applicants are also entertained. For Particulars apply to:—The Organiser for Coorg or to the undersigned.

Organiser's Address:
B. M. Chengappa Esq.,
Organiser for Coorg,
The Mysore Theatres Ltd.,
Virajpet, (Coorg.)

R. N. Row,
Managing Directors,
The Mysore Theatres Ltd.,
"District Board Buildings"
Bangalore City.

(8-7)

[ಚಿಕ್ಕ ಡಾಕ್ಟರ್] **ವೇಸ್ಲಿನ್** [ರಿಜಿಸ್ಟರ್ಡ್]

ಚರ್ಮವ್ಯಾಧಿಗಳ ವೈರಿ—ಪ್ರತಿ ಒಬ್ಬರ ಸ್ನೇಹಿತ—ಸ್ವದೇಶಿ ವಸ್ತು.

ಇದರ ಲೇಪನದಿಂದ ಕಜ್ಜಿ, ಘಾಯ, ವ್ರಣ, ಇಸಬು, ನಾರು ಹುಣ್ಣು, ಸುಟ್ಟವ್ಯಾಧಿ, ಮೆಟ್ಟಿನ ಘಾಯ, ಮೊಡವೆ(Pimples) ಸುಟ್ಟಘಾಯ, ಕತ್ತಿಘಾಯ, ತೊಡೆವಾಳೆ, ಗಣಕರ್ಣ ಇವು ಮೂಯವಾಗುವವು. ಇದು ಸುರಿಯುತ್ತಿರುವ ರಕ್ತವನ್ನು ನಿಲ್ಲಿಸಿ ನೋವನ್ನು ನಿವಾರಿಸುವುದು. ಅಲ್ಲದೆ ಇಂಪ್ರಜಾಲಮೋಪಾದಿಯಲ್ಲಿ ಜೀವನ ವಿಷವನ್ನು ಬಹಿರ್ಗತಪಡಿಸುವುದು. ನಿಮ್ಮಲ್ಲಿ ಒಂದು ಬಾಟ್ಲು ಇದ್ದಲ್ಲಿ ಒಬ್ಬ ಡಾಕ್ಟರು ಇದ್ದಂತಾಗುವುದು. ಕ್ರಯ ಬಹಳ ಸುಲಭ. ½ ಔನ್ಸ್ ಬಾಟ್ಲು 1ಕ್ಕೆ ಆಣೆ 0-8-0. ¼ ಔನ್ಸ್ ಬಾಟ್ಲು 1ಕ್ಕೆ ಆಣೆ 0-4-0

ವಿ. ಸೂ:—ಪೆಟ್ಟು ತಾಗಿದ ಸ್ಥಳದಲ್ಲಿ ವೇಸ್ಲಿನ್ ಚೆನ್ನಾಗಿ ತಿಕ್ಕುವುದು. ಇಲ್ಲವೇ ಬಟ್ಟೆಯ ಮೇಲೆ ಸವರಿ ಅಂಟಿಸುವುದು. ನಂತರ ಸಾಬೂನಿನಿಂದ ಕೈ ತೊಳೆಯುವುದು. ಇದಲ್ಲದೆ ಇನ್ನೂ ಅನೇಕ ತರದ ಔಷಧಿಗಳು ನಮ್ಮಲ್ಲಿವೆ.

ಲಸ್ಟರ್ ಮ್ಯಾನಿಫ್ಯಾಕ್ಚರಿಂಗ್ ಕಂಪೆನಿ,
ವಿ. ಪ್ರೊ. ಬೆಂಗಳೂರು ಸಿಟಿ.

52-46

ಸೋಲ್ ಏಜೆಂಟ್:—ಹರಿದಾಸ್ ನಂಜುಂಡ ಗುಪ್ತ,
ಮಡಿಕೇರಿ, (ಕೊಡಗು).

ADVERTISE
IN
"KODAGU"
The OLDEST WEEKLY of COORG.

For marriage Festivities and Social Functions order your Choicest Dishes,

to 'Indra Bhavan' Sweets and Delicacies at

Bombay Indra Bhavan,

(Sayaji Rao Road, Mysore.)

The premier Restaurant and Catering house in the City for high class varieties, reasonable fare and prompt Services.

Indra Bhavan Sweets win favour always and every where.

12-12

ದಿ ಸೌತ್ ಇಂಡಿಯಾ ಕೋಪರೇಟಿವ್ ಇನ್ಸೂರೆನ್ಸ್ ಸೊಸೈಟಿ, ಲಿಮಿಟೆಡ್.

ಹೆಡ್ ಆಫೀಸ್: ಮದರಾಸು.

ಪ್ರಕಟಣೆ.

ನಮ್ಮ ಗ್ರಾಹಕ ಬಂಧುಗಳ ಸೌಕರ್ಯಾರ್ಥವಾಗಿ ಈ ಇನ್ಸೂರೆನ್ಸ್ ಸೊಸೈಟಿಯ ಶಾಖೆಯೊಂದನ್ನು ಮಡಿಕೇರಿಯಲ್ಲಿ ತೆರೆದಿರುತ್ತೇವೆ. ಇನ್ನು ಮುಂದಕ್ಕೆ ಎಲ್ಲಾ ಪತ್ರವ್ಯವಹಾರ ಮತ್ತು ಹಣ ಪಾವತಿಗಳನ್ನು ದಿ ಸೌತ್ ಇಂಡಿಯಾ ಕೋ-ಅಪರೇಟಿವ್ ಇನ್ಸೂರೆನ್ಸ್ ಸೊಸೈಟಿ ಲಿಮಿಟೆಡ್. ಬ್ರಾಂಚ್ ಆಫೀಸು, ಮಡಿಕೇರಿ. ಈ ವಿಳಾಸಕ್ಕೆ ಕಳುಹಿಸಬೇಕೆಂದು ಈ ಮೂಲಕ ಕೇಳಿಕೊಳ್ಳಲಾಗಿದೆ.

3

ಸೋಮವಾರಪೇಟೆ ಚೆನ್ನಬಸಪ್ಪ ಹೈಯರ್ ಎಲಿಮೆಂಟರಿ ಶಾಲೆಗೆ ಹೊಸತಾಗಿ ಕಟ್ಟಿಸಿದ ಚೆನ್ನಬಸಪ್ಪ ಹಾಲ್ ಎಂಬ ಕಟ್ಟಡವನ್ನು ತೆರೆಯುವ ಸಮಾರಂಭದಲ್ಲಿ

ಚೀಫ್ ಕಮಿಷನರವರಿಗೆ

ಮ. ಡಿ. ಸಿದ್ದಣ್ಣನವರು ಒಪ್ಪಿಸಿದ ಬಿನ್ನವತ್ತಳೆ :—

ಈ ಶಾಲೆಗೆ ಸೇರಿದ ಹಾಲನ್ನು ತೆರೆಯುವ ಸಮಾರಂಭಕ್ಕೆ ತಮ್ಮನ್ನು ತುಂಬಾ ಸಂತೋಷದಿಂದ ಸ್ವಾಗತಿಸುತ್ತೇವೆ. ಚೆನ್ನಬಸಪ್ಪ ಸ್ಕೂಲ್ ಹಾಲನ್ನು ತೆರೆಯಲು ತಾವು ಒಪ್ಪಿದ್ದಕ್ಕೆ ನಾವು ತಮಗೆ ತುಂಬಾ ಋಣಿಗಳಾಗಿದ್ದೇವೆ. ತಮಗೆ ತುಂಬಾ ಮಹತ್ವದ ಕಾರ್ಯಗಳಿವೆ. ಆದರೂ ನಮಗಾಗಿ ಒಂದು ದಿನವನ್ನು ಉಪಯೋಗಿಸಿ ನಮಗೆ ಉಪಕಾರ ಮಾಡಿದ್ದೀರಿ. ಈ ಕೆಲಸಕ್ಕಾಗಿಯೇ ತಾವು ಮೈಸೂರಿನಿಂದ ಬಂದದ್ದರಿಂದ ತಮ್ಮ ಉಪಕಾರವು ಇನ್ನೂ ಮಹತ್ವದ್ದಾಯಿತು.

ಸೋಮವಾರಪೇಟೆ ಶಾಲೆಯು ಬಹಳ ಚಿಕ್ಕದಾಗಿ ಪ್ರಾರಂಭವಾಯಿತು. ದುರುವಿನಲ್ಲಿ ಪ್ರೈವೇಟ್ ಕಟ್ಟಡದಲ್ಲಿ ಇತ್ತು. ಅನಂತರ ಸರಕಾರದವರು ಒಂದು ಕಟ್ಟಡ ಕಟ್ಟಿಸಿದರು. ವಿದ್ಯಾರ್ಥಿಗಳ ಸಂಖ್ಯೆ ಹೆಚ್ಚಾಗುತ್ತಾ ಬಂದಂತೆ ಸ್ಥಳ ಸಾಲದೆ ಬಂದದ್ದನ್ನು ಕಂಡು ಸಿದ್ದಣ್ಣ ಮತ್ತು ಸಹೋದರರ ತಂದೆ ಶ್ರೀ ಚೆನ್ನಬಸಪ್ಪಶೆಟ್ಟರು 1910 ನೇ ಇಸವಿಯಲ್ಲಿ ಶಾಲೆಗೆ ಒಂದು ಕಟ್ಟಡವನ್ನು ಕಟ್ಟಿಸಿಕೊಟ್ಟರು. ಊರವರ ಪತ್ಯಾಯದ ಮೇರೆ ಸರಕಾರದವರು ಶಾಲೆಯನ್ನು ಹೈಯರ್ ಎಲಿಮೆಂಟರಿ ದರ್ಜೆಗೆ ಏರಿಸಿದರು. 1910 ರಲ್ಲಿ ಶಾಲೆಯಲ್ಲಿ 110 ವಿದ್ಯಾರ್ಥಿಗಳು ಮಾತ್ರ ಇದ್ದರು. ಈಗ ಸುಮಾರು 350 ಕ್ಕೆ ಏರಿದೆ.

ಶಾಲೆಯಲ್ಲಿ ವಿದ್ಯಾರ್ಥಿಯರಿಗೆ ಇನ್ನೂ ಹೆಚ್ಚಿನ ಸ್ಥಳ ಬೇಕಾದದ್ದು ಅತ್ಯವಶ್ಯವೆಂದು ತಿಳಿದು ಗತಿಸಿದ ಚಕ್ರವರ್ತಿಯವರ ಸಿಂಹಾಸನಾರೋಹಣದ ರಜತೋತ್ಸವದ ಸ್ಮಾರಕಕ್ಕಾಗಿ ಡಿ. ಸಿದ್ದಣ್ಣ ಮತ್ತು ಸಹೋದರರು ಮತ್ತು ಶ್ರೀಮತಿ ಡಿ. ಸಾಕಮ್ಮನವರು ಸಹ ಶಾಲೆಗೆ ಒಂದು ಹಾಲ್ ಇರುವ ಕಟ್ಟಡವನ್ನು ಸೇರಿಸಿ ಶಾಲೆಯನ್ನು ಬಡಾವಣೆ ಮಾಡಲು ನಿಶ್ಚೈಸಿದರು. ಗತಿಸಿದ ಶ್ರೀ ಚೆನ್ನಬಸಪ್ಪ ಶೆಟ್ಟರು ಶಾಲೆಗೆ ಕಟ್ಟಡ ಕಟ್ಟಿಸಿಕೊಟ್ಟದ್ದರಿಂದ ಒಟ್ಟು ಶಾಲೆಯನ್ನೂ ಮತ್ತು ಈ ಹಾಲನ್ನೂ ಚೆನ್ನಬಸಪ್ಪನವರ ಸ್ಮಾರಕವಾಗಿ ಮಾಡಿಕೊಡಬೇಕೆಂತ ಸರಕಾರವನ್ನು ಕೇಳಲು ನಿಶ್ಚೈಸಿದ್ದೆವು. 6000 ರೂಪಾಯಿ ಖರ್ಚು ಮಾಡಿ ಹೊಸ ಕಟ್ಟಡ ಕಟ್ಟಿಸಿ ಕೊಡಬಹುದೆಂತ ತಿಳಿಸಿ ಶಾಲೆಗೂ ಈಗ ಕಟ್ಟಿಸುವ ಹಾಲಿಗೂ ಚೆನ್ನಬಸಪ್ಪನವರ ಹೆಸರು ಇಡಬೇಕೆಂತ ಸರಕಾರವನ್ನು ಕೇಳಿಕೊಂಡೆವು. ಆಗ ಚೀಫ್ ಕಮಿಷನರಾಗಿದ್ದ ಕರ್ನಲ್ ಪ್ಲೋಡೆನ್‌ರವರು ನಮ್ಮ ಕೋರಿಕೆಯನ್ನು ಅಂಗೀಕರಿಸಿದರು. ರಜತೋತ್ಸವವನ್ನು ನೆನೆಸಿಕೊಂಡು ನಮ್ಮ ರಾಜಭಕ್ತಿಯನ್ನು ತೋರಿಸಲಿಕ್ಕೆ ನಮಗೆ ಅವಕಾಶಕೊಟ್ಟದ್ದಕ್ಕಾಗಿ ಕರ್ನಲ್ ಪ್ಲೋಡೆನರಿಗೂ ಸರಕಾರಕ್ಕೂ ನಮ್ಮ ವಂದನೆಗಳನ್ನು ಅರ್ಪಿಸುತ್ತೇವೆ.

ಶಾಲೆಯ ಅಸ್ತಿಭಾರವು 1936 ರಲ್ಲಿ ಹಾಕಲ್ಪಟ್ಟು 1937-38 ರಲ್ಲಿ ಕಟ್ಟಡದ ಕೆಲಸವು ಪೂರೈಸಿತು. ಕಟ್ಟಡದ ಖರ್ಚು ನಮ್ಮ ಅಂದಾಜಿಗಿಂತ ಮೀರಿ ಸುಮಾರು 9000 ರೂ ಆಗಿದೆ.

ಶ್ರೀ. ಚೆನ್ನಬಸಪ್ಪಶೆಟ್ಟರಿಗಿಂತ ಮುಂಚೆ ಸಹ ನಮ್ಮ ಹಿರಿಯರು ಸೋಮವಾರಪೇಟೆ ಜನರಿಗೆ ಸೌಕರ್ಯಗಳನ್ನು ಮಾಡಿಕೊಡಲು ಸರಕಾರದೊಂದಿಗೆ ಸಹಕರಿಸಿದ್ದಾರೆ. ಸೋಮವಾರಪೇಟೆ ಆಸ್ಪತ್ರೆ ಕಟ್ಟಡವನ್ನು ನಮ್ಮ ಕುಟುಂಬದ ಶ್ರೀ. ಚಿಕ್ಕಬಸಪ್ಪಶೆಟ್ಟರು ಕೊಟ್ಟದ್ದಾಗಿದೆ. ಸೋಮವಾರಪೇಟೆ ಕ್ಲಬ್ಬಿನ ಕಟ್ಟಡವನ್ನು ಅವರ ಪತ್ನಿ ಗೌರಮ್ಮನವರು ಅವರ ಸ್ಮಾರಕಕ್ಕಾಗಿ ಕೊಟ್ಟದ್ದಾಗಿದೆ. ಸೋಮವಾರಪೇಟೆಗೆ ಬರುವಂಥ ನೀರಿನ ಮುಖ್ಯ ಆಸರೆಯಾದ ಆನೆ ಕೆರೆಯನ್ನು ನಮ್ಮ ಹಿರಿಯರೇ ಕಟ್ಟಿಸಿದ್ದು. ನಮ್ಮ ಪೈಕಿ ಒಬ್ಬರಾದ ಶ್ರೀ. ಸಾಕಮ್ಮನವರು ಕಳೆದ ವರ್ಷ ಒಂದು ಕಟ್ಟಡವನ್ನು ಈ ಶಾಲೆಯ ಹಾಸ್ಟೆಲಾಗಿ ಉಪಯೋಗಿಸಲು ಕೊಟ್ಟದ್ದಲ್ಲದೆ ಆ ಹೈಸ್ಕೂಲು ನಡೆಯುವ ಬಗ್ಗೆ ಕೆಲವು ಆಸ್ತಿಗಳನ್ನು ಸಹ ಬಿಟ್ಟುಕೊಟ್ಟಿದ್ದಾರೆ. ದೇಶದ ಮುಖ್ಯ ಆಸ್ಪತ್ರೆಯಾದ ಮಡಿಕೇರಿ ಆಸ್ಪತ್ರೆಗೆ ವಿದ್ಯುಚ್ಛಕ್ತಿ ಒದಗಿಸಿ ಕೊಡಲು ವಿದ್ಯುಚ್ಛಕ್ತಿಯನ್ನುಂಟುಮಾಡುವ ಯಂತ್ರಗಳನ್ನು ಕಳೆದ ವರ್ಷ ಕೊಟ್ಟಿದ್ದೇವೆ. ನಮ್ಮ ಕುಟುಂಬದಲ್ಲಿ ಪರಂಪರಾಗತವಾಗಿ ನಡೆದು ಬಂದಿರುವ ಪದ್ಧತಿಯನ್ನನುಸರಿಸಿ ಈ ಶಾಲೆಯ ಕಟ್ಟಡವನ್ನು ಈ ದಿನ ಒಪ್ಪಿಸಿದ್ದೇವೆ.

ಸೋಮವಾರಪೇಟೆಯೇ ಮುಖ್ಯ ಪಟ್ಟಣವಾಗಿದ್ದ ಹಳೇ ನಂಜರಾಜಪಟ್ಟಣ ತಾಲೋಕು ವಿದ್ಯೆಯಲ್ಲಿ ಬಹಳ ಹಿಂದುಳಿದಿದೆ. ವಿದ್ಯಾಭಿವೃದ್ಧಿಗೆ ಅನುಕೂಲಗಳನ್ನು ಒದಗಿಸಿಕೊಡದೆ ಇದ್ದದ್ದು ಹೀಗಾಗಲು ಕಾರಣವಾಯಿತು. ಇತ್ತೀಚೆಗೆ ಮಾತ್ರ ಸರಕಾರವು ಈ ತಾಲೋಕಿನ ವಿದ್ಯಾಭಿವೃದ್ಧಿಯ ಅನುಕೂಲಕ್ಕೆ ಗಮನ ಕೊಟ್ಟಿದೆ. ಅದಕ್ಕೆ ನಾವು ಸರಕಾರವನ್ನು ವಂದಿಸುತ್ತೇವೆ.

ಈ ಶಾಲೆಯನ್ನು ಅಭಿವೃದ್ಧಿಗೊಳಿಸಲು ಮುಂದೆ ಬಂದವರು ನಮ್ಮ ಕುಟುಂಬದವರು ಮಾತ್ರವೇ ಅಲ್ಲ, ಇನ್ನೂ ಅನೇಕರು ಅದರ ಅಭಿವೃದ್ಧಿಗಾಗಿ ಧನ ಸಹಾಯ ಕೊಟ್ಟಿದ್ದಾರೆ. ಈ ಶಾಲೆಯು ಮತ್ತು ಸೋಮವಾರಪೇಟೆ ಮಹಾ ಜನರ ಉಪಯೋಗಕ್ಕಾಗಿ ಒಂದು ಸೊಗಸಾದ ಆಟದ ಮೈದಾನವನ್ನು ಮಾಡಿಸಿಕೊಟ್ಟ ಶ್ರೀ. ಡಿ. ದಾಸಪ್ಪನವರ ಹೆಸರನ್ನು ಸೂಚಿಸದೆ ಇರಲು ಸಾಧ್ಯವಿಲ್ಲ.

ಈ ಕಟ್ಟಡವನ್ನು ಸರಕಾರವೂ ಮತ್ತು ಜನರೂ ಸದುಪಯೋಗಕ್ಕೆ ಉಪಯೋಗಿಸುತ್ತಾರೆಂತ ನಂಬುತ್ತೇವೆ. ಈ ಶಾಲೆಯು ಇನ್ನು ಹೆಚ್ಚಾಗಿ ಅಭಿವೃದ್ಧಿ ಹೊಂದಿ ಮುಂದೆ ಹೈಸ್ಕೂಲ್ ಆಗಲೆಂತ ಪ್ರಾರ್ಥಿಸುತ್ತೇವೆ.

ತಾವು ಈ ದಿನ ದಯಮಾಡಿಸಿದ್ದಕ್ಕೆ ಪುನಃ ವಂದಿಸಿ ತಮಗೆ ದೇವರು ಆಯುರಾರೋಗ್ಯ ಐಶ್ವರ್ಯಗಳನ್ನು ದಯಪಾಲಿಸಲಿ ಎಂತ ಪ್ರಾರ್ಥಿಸುತ್ತೇವೆ.

ಡಿ. ಸಿದ್ದಣ್ಣ ಮತ್ತು ಸಹೋದರರು
ಮತ್ತು ಶ್ರೀ. ಡಿ. ಸಾಕಮ್ಮ.

ಚೀಫ್ ಕಮಿಷನರ ಭಾಷಣ.

ಮಹನೀಯರೇ,

ಈ ದಿನ ಸೋಮವಾರಪೇಟೆಗೆ ಬಂದು ಈ ಕಟ್ಟಡವನ್ನು ತೆರೆಯುವ ಸಮಾರಂಭ ನಡಿಸಲು ನನಗೆ ತುಂಬಾ ಸಂತೋಷವಿದೆ. ಮುಖ್ಯವಾಗಿ ಯಾತಕ್ಕೆಂದರೆ ಶ್ರೀಮತಿ ಸಾಕಮ್ಮನವರೂ, ಸಿದ್ದಣ್ಣ ಮತ್ತು ಸಹೋದರರೂ ಸಹ ಜನರ ಉಪಕಾರಕ್ಕಾಗಿ ಜೋರಿ ಜೋರಿ ಕಟ್ಟಡಗಳನ್ನು ಇತರ ಆವಶ್ಯಕತೆಗಳನ್ನು ಒದಗಿಸಿಕೊಟ್ಟದ್ದಕ್ಕಾಗಿ ಕೊಡಗಿನ ಸರಕಾರದ ಕೃತಜ್ಞತೆಯನ್ನು ವ್ಯಕ್ತಪಡಿಸಲು ತುಂಬಾ ಕುತೂಹಲಪಟ್ಟವನಾಗಿದ್ದೆನು.

1903 ಕ್ಕೆ ಮೊದಲು ಈ ಶಾಲೆಯು ಪ್ರೈಮರಿ ಶಾಲೆಯಾಗಿದ್ದು ಶ್ರೀ. ಚೆನ್ನಬಸಪ್ಪ ಶೆಟ್ಟರ ಕಟ್ಟಡದಲ್ಲಿ ನಡೆಯುತ್ತಿತ್ತು. 1908 ರಲ್ಲಿ ಶ್ರೀ. ಚೆನ್ನಬಸಪ್ಪ ಶೆಟ್ಟರು ಕಟ್ಟಿಸಿಕೊಟ್ಟ ಈ ಕಟ್ಟಡಕ್ಕೆ ಶಾಲೆಯು ಬಂತು. ಅನಂತರ 1914 ರಲ್ಲಿ ಸರಕಾರವು ಇನ್ನೊಂದು ಕಟ್ಟಡವನ್ನು ಕಟ್ಟಿಸಿತು.

1902 ರಲ್ಲಿ ಶಾಲೆಯಲ್ಲಿ 130 ವಿದ್ಯಾರ್ಥಿಯರಿದ್ದರು. ಈಗ 360 ಕ್ಕೆ ಏರಿದೆ. ಈ ಸಂಖ್ಯೆಗಳಿಂದ ಶಾಲೆಗೆ ಬಡಾವಣೆಯು ಎಷ್ಟು ಆವಶ್ಯಕವಾಗಿತ್ತೆಂತ ತಿಳಿಯುತ್ತದೆ. ಡಿ. ಸಿದ್ದಣ್ಣ ಮತ್ತು ಸಹೋದರರೂ ಶ್ರೀ. ಸಾಕಮ್ಮನವರೂ ಈ ಆವಶ್ಯಕತೆಯನ್ನು ತಿಳಿದು ಚಕ್ರವರ್ತಿ ಜಾರ್ಜರ ಆಳ್ವಿಕೆಯ ರಜತೋತ್ಸವದ ಸಂಬಂಧವಾಗಿ ಈ ಶಾಲೆಯನ್ನು ಕಟ್ಟಿಸುವ ಸೂಚನೆಯನ್ನು ಕರ್ನಲ್ ಪ್ಲೋಡೆನರಿಗೆ ತಿಳಿಸಿದರು. ಕಟ್ಟಡವು 1936 ರಲ್ಲಿ ಪ್ರಾರಂಭವಾಗಿ 9000 ರೂಪಾಯಿ ಖರ್ಚು ಮುಟ್ಟಿ ಈಗ ಪೂರೈಸಿದೆ.

ಈ ಉಚಿತವನ್ನು ಕೊಟ್ಟವರು ಇದಕ್ಕಿಂತ ಹೆಚ್ಚಿನ ಉಪಯೋಗವಾದಂಥಾದ್ದನ್ನು ಕೊಡಲು ಸಾಧ್ಯವಿಲ್ಲ. ಈ ಉಚಿತದಿಂದ ಈ ಊರಿನ ಜನರ ಸಂಪೂರ್ಣ ಮೆಚ್ಚುಗೆಯನ್ನು ಪಡೆದಿದ್ದಾರೆ.

ಈ ಊರಿನ ಪ್ರಧಾನವಾಗಿ ದೊಡ್ಡ ಮನೆ ಕುಟುಂಬದವರು ಇರುವುದರಿಂದ ಈ ಊರಿನ ಜನರು ತುಂಬಾ ಅದೃಷ್ಟಶಾಲಿಗಳೆಂತ ನಾನು ಭಾವಿಸುತ್ತೇನೆ. ಜನರ ಹಿತಕ್ಕೆ ಅವರು ಏನೊಂದು ಹಣವನ್ನು ಕೊಡುತ್ತಾರೆಂಬುದಕ್ಕೆ ಅವರು ಕೊಟ್ಟಿರುವ ಈ ಕೆಳಗೆ ಸೂಚಿಸುವ ಅನೇಕ ಉಚಿತಗಳೇ ಸಾಕ್ಷಿ. ಸೋಮವಾರಪೇಟೆ ಶಾಲೆಯ ಮೂಲ ಕಟ್ಟಡ, ಸೋಮವಾರಪೇಟೆ ಆಸ್ಪತ್ರೆ ಕಟ್ಟಡ, ಸೋಮವಾರಪೇಟೆ ಕ್ಲಬ್ ಕಟ್ಟಡ, ಸೋಮವಾರಪೇಟೆ ಆನೆಕೆರೆ, ಸೋಮವಾರಪೇಟೆ ಶಾಲೆ ಹಾಸ್ಟೆಲ್, ಮಡಿಕೇರಿ ಆಸ್ಪತ್ರೆಗೆ ವಿದ್ಯುಚ್ಛಕ್ತಿ ಯಂತ್ರಗಳು, ಸೋಮವಾರಪೇಟೆ ಶಾಲೆ ಆಟದ ಮೈದಾನ ಮತ್ತು ಈ ಚೆನ್ನಬಸಪ್ಪ ಹಾಲ್.

ಬಿನ್ನವತ್ತಳೆಯಲ್ಲಿ ಈ ಶಾಲೆಯು ವೃದ್ಧಿಗೊಳ್ಳಲಿ ಎಂತ ಡಿ. ಸಿದ್ದಣ್ಣನವರು ಬಯಸಿದ್ದಾರೆ. ಒಳ್ಳೇ ಕೆಲಸ ಮಾಡುತ್ತಿರುವ ಈ ಶಾಲೆಯು ಈ ಪ್ರಾಂತ್ಯದ ಬಾಲಕರಿಗೆ ಉಪಯೋಗಕರವಾಗುವಂತೆ ಇನ್ನೂ ಅಭಿವೃದ್ಧಿ ಹೊಂದಲೆಂತ ನಾನು ಆಶಿಸುತ್ತೇನೆ ಮತ್ತು ನಂಬುತ್ತೇನೆ.

ಶ್ರೀಮತಿ ಸಾಕಮ್ಮ ಮತ್ತು ಡಿ. ಸಿದ್ದಣ್ಣ ಮತ್ತು ಸಹೋದರರು ಈ ಪ್ರಯೋಜನಕರವಾದ ಮತ್ತು ದೊಡ್ಡದಾದ ಉಚಿತವನ್ನು ಕೊಟ್ಟದಕ್ಕೆ ಕೊಡಗಿನ ಸರಕಾರದ ಪರವಾಗಿ ನಾನು ಅವರನ್ನು ವಂದಿಸುತ್ತೇನೆ. ಮತ್ತು ಈ ಶಾಲೆಗೆ ಬರುವ ವಿದ್ಯಾರ್ಥಿಯರ ಮತ್ತು ಅವರ ಪಾಲಿತರುಗಳ ಕೃತಜ್ಞತೆಯನ್ನು ಸಹ ಅವರು ಪಡೆಯುತ್ತಾರೆ ಎಂತ ನನಗೆ ನಂಬಿಕೆ ಇದೆ.

ನಿಮ್ಮ ಅನುಮತಿಯೊಡನೆ ಈ ಕಟ್ಟಡ ತೆರೆಯುವ ಸಮಾರಂಭವನ್ನು ನಾನು ಈಗ ನಡೆಸುತ್ತೇನೆ.

ಕಳೆದು ಹೋಗಿದೆ ಯಾ ಗೈರ್ಹಾಜರಿಯಾಗಿದೆ.

ಹರದೂರಿನಲ್ಲಿ ಪವಾರ್ ಜಗ್ಗುಸಿಂ ರಾಮಸಿಂಗ್ ಎಂಬವರ ಹೆಸರಿಗೆ ಓರಿಯಂಟಲ ಗವರ್ನಮೆಂಟ್ ಸೆಕ್ಯೂರಿಟಿ ಲೈಫ್ ಎಶ್ಯೂರೆನ್ಸ್ ಕಂಪೆನಿ ಲಿಮಿಟೆಡ್ ಬೊಂಬಾಯಿಯ 2204ನೇ ನಂಬರ ರಿಜಿಸ್ಟರಾಗಿರುವ ರೇಖಿನ ತಾರೀ 22-8-1883ರ ನಂ. 260ನೇ ಶೆಸ್ಕ್ರಿಪ್ ಕಳೆದು ಹೋಗಿದೆ ಯಾ ಗೈರ್ಹಾಜರಿಯಾಗಿದೆ. ಈ ಶೇರಿನ ಸಂಬಂಧ ಏನಾದರೂ ಹಕ್ಕು ಇರುವವರು ಒಂದು ತಿಂಗಳೊಳಗೆ ಓರಿಯಂಟಲ್ ಬಿಲ್ಡಿಂಗ್ ಫೋರ್ಟ್, ಬೊಂಬಾಯಿ ಎಂಬ ಸ್ಥಳದಲ್ಲಿ ಇರುವ ಸದರಿ ಕಂಪನಿಯ ಹೆಡ್ ಆಫೀಸಿಗೆ ಬರೆದುಕೊಳ್ಳದೆ ತಪ್ಪಿದರೆ ಕೆಳಗೆ ಸಹಿ ಮಾಡಿದವರಿಗೆ ಹೊಸ ಸರ್ಟಿಫಿಕೇಟ್ ಕೊಡಲಾಗುವದು.

ಶಿ. ಜೆ. ಬಿಕ್ರಮಸ್ ಸಿಂಗ
ಮಿಸೆಸ್ ಕೆ. ಜಾನಕಮ್ಮ
ಷ್ಣಮೂರ್ತಿರಾವ್,
ಪವಾರ್ ಜಗ್ಗುಸಿಂಗ್
ವಾಸಿಂಗರ ಲಾಯರಿಗೆ

1-1 ಏಜಂಟ್ ನಿರೀಕ್ಷಕ
ತಾ. 20-6-1938. ಬೆಡ.

ಒಳದೇಶ.

ಕಮಿಷನರವರು ಈ ತಾ. 22 ರಲ್ಲಿ ಬೆಂಗಳೂರಿಗೆ ಹೋಗಿರುವರು.

ಈ ವಾರ ವೀರಾಜಪೇಟೆಯಲ್ಲಿ ಭತ್ತ ಗಾಡಿಗೆ ರೂ. 11 ಕ್ರಯವಿತ್ತೆಂದು ತಿಳಿಯಬರುತ್ತದೆ.

ತಾ. 19-6-38ರಿಂದ 24-6-38 ರ ವರೆಗೆ ಮಡಿಕೇರಿಯಲ್ಲಿ 7 ಇಂಚು 46 ಸೆಂಟು ಮಳೆಯಾಗಿದೆ.

ಕಾರಣಾಂತರಗಳಿಂದ ಟ್ರಾವಂಕೂರು ನೇಶನಲ್ ಮತ್ತು ಕ್ವಿಲನ್ ಬ್ಯಾಂಕಿನ ವ್ಯಾಪಾರಗಳು ಈ ತಾ. 21 ರಿಂದ ಜುಲೈ 1 ರ ವರೆಗೆ ನಿಲ್ಲಿಸಲ್ಪಟ್ಟವೆ.

ಬರುವ ಜುಲೈ ತಾ. 1 ರಿಂದ ಸಹಕಾರಿ ಸಂಘಗಳ ಹೊಸ ಆಕ್ಟು ಕೊಡಗಿನಲ್ಲಿ ಜಾರಿಗೆ ಬರುವದೆಂದು ಚೀಫ್ ಕಮಿಷನರವರು ಗಜೆಟಿನಲ್ಲಿ ಪ್ರಕಟಿಸಿರುವರು.

ಕೊಡಗಿನ ಸಿವಿಲ್ ಸರ್ಜನರು ಹೆಚ್ಚಿನ ತರಬೇತಿನ ಪರೀಕ್ಷೆಗಾಗಿ ಈ ತಾ. 27 ರಿಂದ 20 ದಿವಸ ರಜೆಯಲ್ಲಿ ಇಂಗ್ಲೆಂಡಿಗೆ ಹೋಗುವರೆಂದು ತಿಳಿಯಬರುತ್ತದೆ

ನಾಪೋಕ್ಲು ಶಾಲೆಯ ಉಪಾಧ್ಯಾಯರಾಗಿದ್ದ ಮ. ಬಿದ್ದರ ನಂಜಪ್ಪನವರು ಈ ತಾ. 21 ರಲ್ಲಿ ಮಡಿಕೇರಿ ಆಸ್ಪತ್ರೆಯಲ್ಲಿ ದಿವಂಗತರಾದರೆಂದು ತಿಳಿಸಲು ವಿಷಾದಿಸುತ್ತೇವೆ.

ಮೈಸೂರು ಸಂಸ್ಥಾನದಲ್ಲಿ ಪೋಲೀಸು ಇನ್ಸ್‌ಪೆಕ್ಟರಾಗಿದ್ದ ಮ. ಮುಕ್ಕಾಟಿರ ಅಣ್ಣಯ್ಯನವರು ಉದ್ಯೋಗದಿಂದ ರಿಟಯರಾಗಿ ಮಡಿಕೇರಿಗೆ ಹಿಂತಿರುಗಿ ಬಂದಿರುವರು.

ಬಿರುದು ಪಡೆದವರಿಗೆ ಸನ್ನದುಗಳನ್ನು ಕೊಡಲಿಕ್ಕಾಗಿ ಚೀಫ್ ಕಮಿಷನರವರು ಈ ತಾ. 28 ರಲ್ಲಿ ಬೆಂಗಳೂರು ಕಂಟೋನ್ಮೆಂಟಿನಲ್ಲಿ ಒಂದು ದರ್ಬಾರನ್ನು ನಡಿಸುವರೆಂದು ತಿಳಿಯಬರುತ್ತದೆ.

ಮಿಲಿಟರಿ ಇಲಾಖೆಗೆ ಸೇರಲು ಇಚ್ಛಿಸುವ ರಾಜಕುಮಾರರ ಮತ್ತು ದೊಡ್ಡ ಜಮೀನ್ದಾರರ ಮಕ್ಕಳಿಗೆ ತಕ್ಕ ತರಬೇತು ಕೊಡುವ ಬಗ್ಗೆ, ಮೇಯೋ ಕಾಲೇಜಿನ ಪ್ರಿನ್ಸಿಪಾಲರು ಜುಲೈ 1 ರಿಂದ ತಮ್ಮ ಕಾಲೇಜಿನಲ್ಲಿ ಸ್ಪೆಶಲ್ ಕ್ಲಾಸನ್ನು ತೆರೆಯುವರಾಗಿ ಪ್ರಕಟವಾಗಿದೆ. ಈ ವಿಷಯ ಹೆಚ್ಚಿನ ಮಾಹಿತಿಯನ್ನು ಕಮಿಷನರವರಿಂದ ಪಡೆಯಬಹುದು.

ಧಾರವಾಡದಲ್ಲಿ ವಿದ್ಯಾಭ್ಯಾಸ ಮಾಡುತ್ತಿದ್ದ ಶ್ರೀಮತಿ ಪಾಂಡಂಡ ಎಂ. ಮುತ್ತಮ್ಮನವರು ಬೊಂಬಾಯಿಯ ಮೆಟ್ರಿಕ್ಯುಲೇಶನ್ ಪರೀಕ್ಷೆಯಲ್ಲಿ ತೇರ್ಗಡೆಯಾದರೆಂದೂ, ಮತ್ತು ಮೈಸೂರು ಮಹಾರಾಣಿ ಹೈಸ್ಕೂಲಿನಲ್ಲಿ ಸ್ಕೂಲ್ ಫೈನಲ್ ಪರೀಕ್ಷೆಗೆ ಕೂತ ಶ್ರೀಮತಿ ಪಾಂಡಂಡ ಎಂ. ಸುಬ್ಬಮ್ಮನವರು ಉತ್ತೀರ್ಣರಾಗಿರುವರೆಂದೂ ತಿಳಿಯುತ್ತೇವೆ. ಇವರನ್ನು ಅಭಿನಂದಿಸುತ್ತೇವೆ.

ಡಿಸ್ಟ್ರಿಕ್ಟ್ ಬೋರ್ಡಿನ ಅಧ್ಯಕ್ಷರಾಗಿ ಆರಿಸಲ್ಪಟ್ಟಿರುವ ಮ. ಪಿ. ಐ. ಬೆಳ್ಯಪ್ಪನವರಿಗೆ ಕೆಲವು ಸ್ನೇಹಿತರು ಈ ತಾ. 19 ರ ಗೋಣಿಕೊಪ್ಪಲಲ್ಲಿ ಸೇರಿ ಒಂದು ಟೀಪಾರ್ಟಿಯನ್ನು ಕೊಟ್ಟರೆಂದೂ, ಈ ತಾ. [illegible] ರಲ್ಲಿ ಹೊಸೂರು ಗ್ರಾಮಸ್ಥರು ಅಲ್ಲಿನ ಮಹದೇವರ ದೇವಸ್ಥಾನದಲ್ಲಿ ಪೂಜೆ ಮಾಡಿಸಿ, ಒಂದು ಔತಣವನ್ನು ನಡಿಸಿದರೆಂದೂ ತಿಳಿಯಬರುತ್ತದೆ.

ಹಿಂದೂ ದೇಶ.

ವಾರ್ಧಾದಲ್ಲಿ ಕಾಗದ ಮಾಡುವ ಕೈಗಾರಿಕೆಯನ್ನು ಅಭ್ಯಾಸಿಸುವದಕ್ಕಾಗಿ ಮದ್ರಾಸ್ ಸರಕಾರದವರು 10 ಜನರನ್ನು ಆರಿಸಿ ಕಳುಹಿಸಿರುವರು.

ಬರ್ಮಾ ಸರ್ಕಾರವು ತನ್ನ ಅಧೀನ ನೌಕರರಾದ ಬರ್ಮಾ ದೇಶೀಯರ ಉಡುಪುಗಳು ಬರ್ಮಾ ಬಟ್ಟೆಯದೇ ಆಗಿರಬೇಕೆಂದು ಆಜ್ಞೆ ಮಾಡಿದೆ.

ಹೈದರಾಬಾದಿನ ನೈಜಾಮು ಸರಕಾರದವರು ಶ್ರೀ ನರಿಮಾನರು ಮತ್ತು ಪಟ್ಟಾಭಿ ಸೀತಾರಾಮಯ್ಯನವರು ತಮ್ಮ ಸಂಸ್ಥಾನಕ್ಕೆ ಪ್ರವೇಶಿಸಕೂಡದೆಂದು ಶಾಸನ ಮಾಡಿದ್ದಾರೆ.

ಕಲ್ಕತ್ತಾದ ಫಯರ್ ಬ್ರಿಗೇಡನ್ನು ಕೆಲವು ನಿಶ್ಚಿತ ವರ್ಷಗಳೊಳಗಾಗಿ ಸಂಪೂರ್ಣ ಹಿಂದೀಯರ ವಶಕ್ಕೆ ಬರುವಂತೆ ಮಾಡಲು ತಕ್ಕ ಯೋಜನೆಗಳನ್ನು ಮಾಡಬೇಕೆಂಬ ಠರಾವು ಕಲ್ಕತ್ತಾ ಕಾರ್ಪೋರೇಷನಿನಲ್ಲಿ ಮಂಜೂರಾಯಿತು

ಇಂಡಿಯಾ ಸರ್ಕಾರದ ವಿದ್ಯಾ, ಆರೋಗ್ಯ ಮತ್ತು ಸ್ವಾಸ್ಥ್ಯಗಳ ಶಾಖೆಗಳ ಸೆಕ್ರೆಟರಿಗಳಾಗಿರುವ ಸರ್ ಜಿ. ಎಸ್. ಬಾಜಪೇಯಿಯವರು ಒರಿಸ್ಸದ ಗವರ್ನರರಾಗಿ ನೇಮಿಸಲ್ಪಡಬಹುದೆಂದು 'ಹಿಂದೂಸ್ಥಾನ ಸ್ಟ್ಯಾಂಡರ್ಡ್' ಪತ್ರಿಕೆಯು ಸಾರಿದೆ.

ಆಸ್ಸಾಂ ನ್ಯಾಯವಿಧಾಯಕ ಸಭೆಯಲ್ಲಿ ನ್ಯಾಯವಿಧಾಯಕ ಸಭೆಯವರಿಂದ ಇಂಗ್ಲೀಷ್ ರಹಿತ ಭಾಷೆಗಳಿಂದ ಮಾತಾಡಬಹುದೆಂದು ತೀರ್ಮಾನವಾಗಿದೆ. ಇಂಗ್ಲೀಷ್ ತಿಳಿಯದವರು ತಮಗೆ ಪರಿಚಯವಿರುವ ಭಾಷೆಯಿಂದ ಮಾತಾಡಬಹುದು.

ಪಂಡಿತ ಜವಾಹರ್ ಲಾಲ್ ನೆಹರು ರವರು ಕಳೆದ ವಾರ ಸ್ಪೈನಿಗೆ ಹೋಗಿ ಯುದ್ಧರಂಗವನ್ನು ಸಂದರ್ಶಿಸಿ, ಅಲ್ಲಿ ಐದು ದಿವಸಗಳಿದ್ದರು. ನಂತರ ಪ್ಯಾರಿಸ್ಸಿಗೆ ಹೋಗಿ ಅಲ್ಲಿ ಸತ್ಕಾರಪಡೆದು ಭಾಷಣ ಮಾಡಿ, ತಾ. 22ರಲ್ಲಿ ಲಂಡನಿಗೆ ಹೊರಟು ಹೋದರು.

ಮೈಸೂರು ಮುಸ್ಲಿಂ ಲೀಗಿನ ಅಧಿವೇಶನವನ್ನು ಬರುವ ಜುಲೈ ತಿಂಗಳಲ್ಲಿ ಬೆಂಗಳೂರಿನಲ್ಲಿ ಕೂಡುವದು. ಈ ಅಧಿವೇಶನಕ್ಕೆ ಸರ್ ಸಿಕಂದರ ಹಯಾತ್ ಖಾನ, ಫಜಲುಲ್ಲ ಹಕ್, ಸರ್ ಮಹಮ್ಮದ್ ಉಸ್ಮಾನ ಮೊದಲಾದವರಿಗೆ ಆಮಂತ್ರಣ ಕೊಡಲಾಗಿದೆಯೆಂದು ತಿಳಿದು ಬಂದಿದೆ.

ಸಂಯುಕ್ತ ಪ್ರಾಂತ್ಯಗಳಿಗೆ ಸೇರಿದ 48 ಜಿಲ್ಲೆಗಳ ಪೈಕಿ 41 ಜಿಲ್ಲೆಗಳಲ್ಲಿ ವಾಂತಿಭೇದಿ ರೋಗವು ಪ್ರಬಲವಾಗಿ ಬಹಳ ಅನಾಹುತವನ್ನುಂಟುಮಾಡಿದೆ. ಕಳೆದ ಏಪ್ರಿಲಿನಿಂದ ಇದುವರೆಗೆ ರೋಗಕ್ಕೆ ತುತ್ತಾದವರ ಸಂಖ್ಯೆಯು 25000 ಆಗಿದೆ. ಕಳೆದ ಹತ್ತು ವರ್ಷಗಳಿಂದ ಇಷ್ಟು ಜನ ಹಾನಿಯು ಆಗಿರಲಿಲ್ಲವಂತೆ.

ಲಾಹೋರಿನ ಬಾದಶಾಹಿ ಮಸೀದಿಯ ಜೀರ್ಣೋದ್ಧಾರದ ಫಂಡಿಗೆ ನಿಜಾಮರು 20 ಸಾವಿರ ರೂಪಾಯಿಗಳನ್ನು ದಾನಕೊಟ್ಟಿದ್ದಾರೆ. ಇಂಡಿಯದಲ್ಲಿ ಇಷ್ಟು ಸೊಗಸಾದ ದೊಡ್ಡ ಪ್ರಾರ್ಥನಾ ಮಂದಿರವು ಇನ್ನೊಂದಿಲ್ಲ. ಇದರ ಮರಮ್ಮತಿಗಾಗಿ ಸುಮಾರು 8 ಲಕ್ಷ ರೂಪಾಯಿಗಳು ಬೇಕಾಗಿವೆ!

ವಿಶಾಖಪಟ್ಟಣದಲ್ಲಿ ನಡೆದ ಗೋಲೀಬಾರಕ್ಕೆ ಕಾರಣರಾದ ಅಧಿಕಾರಿಗಳನ್ನು ವಿಚಾರಿಸುವದಕ್ಕಾಗಿ ಏರ್ಪಡಿಸಿದ ವಿಚಾರಣಾಸಮಿತಿಯಲ್ಲಿ ಸಹಕರಿಸುವದಿಲ್ಲವೆಂಬ ಶ್ರೀ ಎಚ್. ಎಸ್. ರಾಜು ಮತ್ತು ಶ್ರೀ ಎಸ್. ವೆಂಕಟಪತಯ್ಯನವರ ಸೂಚನೆಗೆ ಪ್ರಧಾನ ಸಚಿವರು ಭರವಸೆ ಕೊಟ್ಟ ಮೇರೆ ಈಗ ಅವರು ಸಹಕರಿಸುವರು.

ಹಿಮಾಲಯ ಪರ್ವತಶ್ರೇಣಿಯಲ್ಲಿರುವ ಎವರೆಸ್ಟ್ ಶಿಖರವನ್ನು ಆರೋಹಣ ಮಾಡಲು ಕೆಲವು ಮಂದಿ ಬ್ರಿಟಿಷರು ಈ ವರ್ಷ ಪ್ರಯತ್ನಪಟ್ಟು ಆಗಲೇ ಆ ಪರ್ವತ ಶ್ರೇಣಿಯಲ್ಲಿ ಕೆಲವು ದೂರ ಹತ್ತಿ ಹೋಗಿದ್ದರಷ್ಟೆ. ವಾಯುಗುಣವು ಈ ವರ್ಷ ಬಹಳ ಬೇಗ ಬದಲಾವಣೆಯಾಗಿರುವದರಿಂದಲೂ, ಬೆಟ್ಟ ಹತ್ತುವುದು ಸಾಧ್ಯವಿಲ್ಲದಿರುವದರಿಂದ ಈ ಆರೋಹಣವನ್ನು ಮುಂದುವರಿಸದೆ ಎಲ್ಲರೂ ಹಿಂತಿರುಗುವರೆಂದೂ ಪ್ರಕಟವಾಗಿದೆ.

ಬಂಗಾಳ ಮಂತ್ರಿ ಮಂಡಳಿಯ ಪ್ರಧಾನ ಮಂತ್ರಿಯಾದ ಫಜಲುಲ್ಲ ಹಕರವರಿಗೂ ಪಬ್ಲಿಕ್ ಹೆಲ್ತ್ ಇಲಾಖೆಯ ಮಂತ್ರಿಯಾದ ಮ. ನೌಶರ್ ಅಲಿಯವರಿಗೂ ಒಪ್ಪಿಗೆ ಬೀಳದ್ದರಿಂದ ನೌಶರ್ ಅಲಿಯವರು ರಾಜೀನಾಮೆ ಕೊಡಬೇಕೆಂದು ಕೇಳಿಕೊಂಡದ್ದಕ್ಕೆ, ತನಗೆ ಎಸೆಂಬ್ಲಿಯವರ ಬಹುಮತದ ಬೆಂಬಲವಿರುವುದರಿಂದ ರಾಜೀನಾಮೆ ಕೊಡುವುದಿಲ್ಲವೆಂದು ಜವಾಬು ಕೊಟ್ಟಿರುವರು. ಈ ವಿಚಾರ ಗವರ್ನರರ ಪರ್ಯಾಲೋಚನೆಗೆ ಹೋಗಿದೆ.

ಮೆಟ್ರಿಕ್ಯುಲೇಶನ್ ಪರೀಕ್ಷೆಯಲ್ಲಿ ಫೇಲಾಗಿ ಆತ್ಮಹತ್ಯ ಮಾಡಿಕೊಂಡಳೆಂದು ನಂಬಲಾದ ರಾವಲಪಿಂಡಿಯ ಹುಡುಗಿಯೊಬ್ಬಳು ಗಂಡು ವೇಷದಲ್ಲಿ ರಾವಲಪಿಂಡಿಯಲ್ಲಿ ಸಿಕ್ಕಿದ್ದಾಳೆ. 'ತಂದೆ ತಾಯಿಗಳು ಬಡವರು; ಅವರನ್ನು ಪೋಷಿಸಲು, ಈ ಗಂಡು ವೇಷ ಹಾಕಿ ಒಂದು ಉದ್ಯೋಗವನ್ನು ಸಂಪಾದಿಸಲು ಯತ್ನಿಸಿದೆ.' ಎಂದು ನುಡಿದ ಅವಳನ್ನು ಕಂಡು ಕನಿಕರಪಟ್ಟ ರಾವಲಪಿಂಡಿಯ ಮುನ್ಸೀಫರು, ಮುಂದಿನ ಈಕೆಯ ವಿದ್ಯಾಭ್ಯಾಸದ ಖರ್ಚನ್ನು ತಾವು ತೆರುವೆವೆಂದಿದ್ದಾರೆ.

ಗಡಿನಾಡಿನಲ್ಲಿ ಬಾಂಬುಗಳನ್ನು ಬಿಸಾಡುವ ಕುರಿತು, ಕಾಮನ್ಸ್ ಮಂದಿರದಲ್ಲಿ ಪ್ರಶ್ನೆ ಬಂದಾಗ, ಬ್ರಿಟಿಷ್ ಪ್ರಧಾನರು, 'ಬಾಂಬು ಬಿಸಾಡುವ ಮುಂಚೆ ಜನರಿಗೆ ಸಾಕಷ್ಟು ಎಚ್ಚರಿಕೆ ಕೊಡಲಾಗುತ್ತದೆ' ಎಂದರು. 'ಹೌದಯ್ಯ! ಆ ಜನಗಳು, ತಮ್ಮ ಸಂಸಾರ, ಜಾನುವಾರುಗಳನ್ನು ಕಟ್ಟಿಕೊಂಡು ಓಡುವುದಾದರೂ ಎಲ್ಲಿಗೆ? ಅವರ ಆಸ್ತಿಪಾಸ್ತಿಗಳೆಲ್ಲ ಬಾಂಬಿನಿಂದ ಲಯವಾಗುವುದಿಲ್ಲವೇ?' ಎಂದು ಮಿ. ಲ್ಯಾನ್ಸ್‌ಬರಿಯವರು ಕೇಳಲು, ಪ್ರಧಾನರು 'ಇಲ್ಲ; ಹಾಗೇನೂ ಇಲ್ಲ; ಹೊಸ ಆಶ್ರಯಸ್ಥಾನಗಳಿಗಾಗಿ ಅವರು ಕಷ್ಟಪಡಬೇಕಾಗಿಲ್ಲ; ಅಲ್ಲೆಲ್ಲ ಯಥೇಷ್ಟ ಗುಹೆಗಳವೆ ಎಂದು ನಾನು ಓದಿದ್ದೇನೆ' ಎಂದು ಹೇಳುತ್ತಿದ್ದಾಗಲೇ ಆ ಸಭೆಯಲ್ಲಿ ಕೆಲವರು 'ನಾಚಿಕೆಗೇಡು!' ಎಂದು ಕೂಗಿ ಗುಲ್ಲೆಬ್ಬಿಸಿದರು.

ಐರ್ಲೆಂಡಿನ (ಏರ್) ಪಾರ್ಲಿಮೆಂಟಿನ ಜನರಲ್ ಚುನಾವಣೆಯು ಮೊನ್ನೆ ತಾನೇ ಮುಗಿಯಿತು. ಅದರಲ್ಲಿ ಡಿವೇಲರವರ ಫೈಯನ್ನ ಫೈಲ್ ಪಾರ್ಟಿಗೆ 77 ಮೆಂಬರುಗಳೂ ಉಳಿದ ಎಲ್ಲಾ ಪಾರ್ಟಿಗೆ ಒಟ್ಟಾಗಿ 61 ಮೆಂಬರುಗಳೂ ದೊರೆತಿವೆ. ಇದರಿಂದ ಡಿವೇಲರವರಿಗೆ ದೊಡ್ಡ ಬಹುಮತ ದೊರೆತಂತಾಗಿದೆ.

ಚೈನಾದ ಎಲ್ಲೋ ನದಿಯ ನೆರೆಯಿಂದ ವಿಪರೀತ ಹಾವಳಿಯಾಗಿ ಬರೇ 24 ಗಂಟೆಗಳಲ್ಲಿ ಹೊನಾನ್ ಪ್ರಾಂತ್ಯದಲ್ಲಿ 400 ಚದರ ಮೈಲುಗಳಲ್ಲಿ ನೆರೆಯು ಹಬ್ಬಿರುವದೆಂದು ತಿಳಿದು ಬಂದಿದೆ. ನೆರೆಯಿಂದ ಎರಡು ಸಾವಿರ ಗ್ರಾಮಗಳು ಮುಳುಗಿರುತ್ತವೆ. 7,00,000 ಜನರಿಗೆ ಆಪಾಯ ಬಂದಿದೆ. ಇವರ ಪೈಕಿ 1,00,000 ಜನರನ್ನು ರಕ್ಷಿಸುವದು ಸಾಧ್ಯವೇ ಇಲ್ಲವಂತೆ. ನೆರೆಯಿಂದ ತಪ್ಪಿಸಿಕೊಂಡವರು ಬೇರು, ಗೆಡ್ಡೆಗಳನ್ನು ತಿಂದು ಜೀವಿಸುತ್ತಾರೆ. ಜಪಾನು ಇಂಜನೀಯರುಗಳು ತಮ್ಮ ಕಾರ್ಯವು ನೆರೆಯಿಂದ ಅಸಾಧ್ಯವೆಂದು ಹೇಳಿದ್ದಾರೆ.

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್ ಲಿಮಿಟೆಡ್, ಮಡಿಕೇರಿ.

ಈ ಬ್ಯಾಂಕಿನ ಸ್ವಂತ ಭಂಡವಾಳವು ಈ ಕೆಳಗಿನ ರೀತಿ ಇದೆ.

1.	ಬ್ಯಾಂಕಿನ ಕ್ಷೇಮನಿಧಿ (R. Fund)	ರೂ.	24,985	5	0
2.	ಸಮುದಾಯದ ಪ್ರಯೋಜನದ ಫಂಡು	,,	3,132	11	3
3.	ಲಾಭ ಹಂಚುವಿಕೆಯ ಫಂಡು	,,	7,508	4	8
4.	ಸರಾಸರಿ ಖರ್ಚು ಫಂಡು	,,	4,015	13	0
5.	ಕಟ್ಟಡದ ಫಂಡು	,,	4,150	4	0
6.	ಸಂಶಯಾಸ್ಪದದ ಸಾಲದ ಫಂಡು	,,	1,266	2	9
	ಜುಮ್ಲ ಬ್ಯಾಂಕಿನ ಲಾಭ	,,	45,058	8	8
	ಬ್ಯಾಂಕಿನ ಪಾಲು ಭಂಡವಾಳ	,,	46,110	0	0
	ಜುಮ್ಲ	,,	91,168	8	8

ಮಡಿಕೇರಿ,
ತಾ. 24-6-1938.

ಪಿ. ಕೆ. ಐಯ್ಯಪ್ಪ,
(ಗೌರವ ಕಾರ್ಯದರ್ಶಿ.)

ಕೊಡಗು

ಜೂನ್ ತಾರೀಕು ೨೪ನೇ ಶುಕ್ರವಾರ ೧೯೩೮.

ಹಿಂದೂ-ಮುಸ್ಲೀಮರ ಐಕ್ಯ.

ಹಿಂದೂದೇಶದಲ್ಲಿ ಒಗ್ಗಟ್ಟಿಲ್ಲದಿರುವುದೇ ಭಾರತ ಭೂಮಿಯ ಗುಲಾಮಗಿರಿಗೆ ಕಾರಣವೆಂಬದನ್ನು ಎಲ್ಲರೂ ಒಪ್ಪುವಂಥಾದ್ದಾಗಿದೆ. ಆದುದರಿಂದಲೇ ಹಿಂದುಸ್ಥಾನದ ಪರಾಧೀನತೆಯನ್ನು ಹೋಗಲಾಡಿಸಲು ಹಲವು ವರ್ಷಗಳಿಂದ ಎಡೆಬಿಡದೆ ಪ್ರಯತ್ನಿಸುತ್ತಿರುವ ಕಾಂಗ್ರೆಸು ಮಹಾ ಸಂಸ್ಥೆಯು ಇಂಡಿಯಾದ ಪ್ರಾಮುಖ್ಯ ಕೋಮುಗಳವರಾದ ಹಿಂದೂ-ಮುಸ್ಲಿಮರೊಳಗೆ ಐಕ್ಯತೆಯನ್ನು ಸಾಧಿಸಲ್ಲು ಆಗಾಗ್ಯೆ ಪ್ರಯತ್ನ ಮಾಡುತ್ತಿರುವದಾಗಿದೆ. ಈ ಉದ್ದೇಶದಿಂದ ರಾಷ್ಟ್ರಪತಿಗಳಾಗಿದ್ದ ಪಂಡಿತ ಜವಾಹರ್‌ಲಾಲ್ ನೆಹರುರವರಿಗೂ ಮುಸ್ಲಿಂ ಲೀಗಿನ ಅಧ್ಯಕ್ಷರಾದ ಮಿ. ಯಂ. ಎ. ಜಿನ್ನಾರವರಿಗೂ ಕಳೆದ ಜನವರಿ ತಿಂಗಳಿಂದ ನಡೆದ ಪತ್ರವ್ಯವಹಾರಗಳು ಅನಾಧಿಕಾರವಾಗಿ ಪ್ರಕಟವಾದ ಕೂಡಲೇ, ಈ ಮೊದಲು ಈ ಸಂಬಂಧವಾಗಿ ಮಿ. ಜಿನ್ನಾರವರಿಗೂ ಮಹಾತ್ಮ ಗಾಂಧಿಯವರಿಗೂ ನಡೆದ ಪತ್ರವ್ಯವಹಾರಗಳನ್ನು ಮಿ. ಜಿನ್ನಾರವರು ಬಹಿರಂಗಪಡಿಸಿರುವರು. ಇವುಗಳ ಪ್ರಕಟಣೆಯಿಂದ ಹಿಂದೂ-ಮುಸ್ಲಿಮರ ಒಗ್ಗಟ್ಟಿಗೆ ಹೆಚ್ಚಿನ ಸಹಾಯವಾಗುವಂತೆ ತೋರುವುದಿಲ್ಲ.

ಗಾಂಧಿ-ಜಿನ್ನಾರವರ ಪತ್ರವ್ಯವಹಾರಗಳನ್ನು ಓದಿದಲ್ಲಿ, ಜಿನ್ನಾರವರು ಮುಸ್ಲಿಂ ಲೀಗಿನ ಹಾಗೂ ತನ್ನ ಸ್ವಪ್ರತಿಷ್ಠೆಯನ್ನು ಹೆಚ್ಚಿಸಿಕೊಳ್ಳುವ ಪ್ರಯತ್ನದಲ್ಲಿರುವರೇ ಹೊ, ಬೈನ್ಯದಿಂದ ಮಾತುಕತೆ ಮೂಲಕ ಹಿಂದೂ-ಮುಸ್ಲಿಮರೊಳಗೆ ಐಕ್ಯತೆಯನ್ನು ಸಾಧಿಸುವುದೇ ಗಾಂಧಿಯವರ ಹೃದಯದಾಳದ ಪತ್ರಗಳ ಉದ್ದೇಶವೆಂದೂ ಸ್ಪಷ್ಟವಾಗುತ್ತದೆ. ಜಿನ್ನಾರವರು ತಮ್ಮದೊಂದು ಪತ್ರದಲ್ಲಿ ಮಹಾತ್ಮರಿಗೆ ಹೀಗೆಂದು ಬರೆದಿರುವರು.-"ಮುಸ್ಲಿಂ ಲೀಗ್ ಹಿಂದೂಸ್ಥಾನದ ಮುಸಲ್ಮಾನರ ಏಕ ಮಾತ್ರ ಪ್ರತಿನಿಧಿ ಸಂಸ್ಥೆಯೆಂದು ನೀವು ಒಪ್ಪಬೇಕು; ಅಲ್ಲದೆ, ನೀವು ಕಾಂಗ್ರೆಸ್ ಮತ್ತು ಇತರ ಹಿಂದೂಗಳ ಪರವಾಗಿ ಮಾತಾಡಬೇಕು. ಹೀಗಾದರೆ ಮಾತ್ರ ರಾಜಿಯ ಸಂಧಾನಗಳನ್ನು ನಡೆಸಲು ಸಾಧ್ಯವಾಗುವುದು." ಈ ಮಾತುಗಳಿಂದ ಜಿನ್ನಾರವರ ಉದ್ದೇಶವೇನೆಂಬುವುದು ಒಡೆದು ಕಾಣುತ್ತದೆ. ಕಾಂಗ್ರೆಸ್ ಸಂಸ್ಥೆಯು ಗಾಂಧಿಜಿಯವರು ಹೇಗೆ ಅದ್ವಿತೀಯ ಮುಂದಾಳಾಗಿರುವರೋ ಹಾಗೆಯೇ ಇಂಡಿಯಾದ ಮುಸಲ್ಮಾನರ ಮಟ್ಟಿಗೆ ಮುಸ್ಲಿಂ ಲೀಗಿನ ಅಧ್ಯಕ್ಷರಾದ ತಾವು ಏಕಮಾತ್ರ ಪ್ರತಿನಿಧಿಯಾಗಬೇಕು ಎಂಬುದು ಜಿನ್ನಾರವರ ಇಚ್ಛೆ ಎಂಬುದು ವಿಶದವಾಗುತ್ತದೆ. ಮತ್ತು ಹೀಗೆ ನೋಡುವುದರಿಂದ ಕಾಂಗ್ರೆಸ್ ಸಂಸ್ಥೆಯು ಬರೇ ಹಿಂದೂಗಳ ಸಂಸ್ಥೆ, ಅದೊಂದು ಕೋಮುವಾರು ಸಂಸ್ಥೆ ಎಂದು ತೋರಿಸಬೇಕೆಂದು ಅವರ ಉದ್ದೇಶವಾಗಿದೆ. ಈ ಶರತನ್ನು ಒಪ್ಪಿಕೊಳ್ಳಲು ಯಾವ ಕಾಂಗ್ರೆಸ್ ಮುಂದಾಳಿಗೂ ಸಾಧ್ಯವಿಲ್ಲ. ಹಿಂದೂದೇಶದ ಏಕ ಮಾತ್ರ ಪ್ರತಿನಿಧಿ ಸಂಸ್ಥೆಯಾದ ಕಾಂಗ್ರೆಸ್ ಮಹಾ ಸಭೆಯಲ್ಲಿ ಲಕ್ಷಗಟ್ಟಲೆ ಮುಸಲ್ಮಾನರೂ ಸದಸ್ಯರಾಗಿರುವರು. ಅಂದ ಮೇಲೆ ಕಾಂಗ್ರೆಸು ಬರೇ ಹಿಂದೂಗಳ ಕೋಮುವಾರು ಸಂಸ್ಥೆಯೆಂದು ಹೇಳುವುದರಲ್ಲಿ ಅರ್ಥವಿಲ್ಲ. ಮಾತ್ರವಲ್ಲ, ಮುಸ್ಲಿಂ ಲೀಗಿಗೆ ಸೇರದ ಅನೇಕ ಮುಸಲ್ಮಾನರು ಬೇರೆ ಸಂಸ್ಥೆಗಳನ್ನು ಮಾಡಿಕೊಂಡಿರುವಾಗ್ಯೆ ಮುಸ್ಲಿ ಲೀಗನ್ನು ಇಂಡಿಯಾದ ಮುಸಲ್ಮಾನರ ಏಕ ಮಾತ್ರ ಪ್ರತಿನಿಧಿ ಸಂಸ್ಥೆಯೆಂದು ಒಪ್ಪಿಕೊಳ್ಳುವದಾದರೂ ಹೇಗೆ? ಹೀಗೆ ಒಪ್ಪಿಕೊಂಡರೆ ಮುಸ್ಲಿಂ ಲೀಗಿಗೆ ಸೇರದ ಮಹನೀಯರಿಗೆ ದೊಡ್ಡ ಅನ್ಯಾಯ ಮಾಡಿದಂತಾಗುವುದರಲ್ಲಿ ಸಂದೇಹವಿಲ್ಲ.

ಐಕ್ಯತೆಗೆ ಮುಸ್ಲಿಂ ಲೀಗಿನವರ ಮುಖ್ಯ ಶರತುಗಳೇನೆಂಬುದನ್ನು ಅರಿತುಕೊಳ್ಳಲು ಪಂಡಿತ ನೆಹರೂರವರು ತಮ್ಮ ಪತ್ರಗಳ ಮೂಲಕ ಇಂಛಿಸಿದರು. ಆದರೆ ಜಿನ್ನಾರವರು ಅವುಗಳನ್ನು ನಿಸರವಾಗಿ ಬರೆದು ತಿಳಿಸದೆ, ಅವು ಸಾಮಾನ್ಯವಾಗಿ ಎಲ್ಲರಿಗೂ ತಿಳಿದ ವಿಷಯಗಳು ಎಂದೂ, ತನ್ನ 14 ಶರತುಗಳೂ, ಈ ಸಂಬಂಧ ಹಲವು ಲೇಖನಗಳೂ ಪತ್ರಿಕೆಗಳಲ್ಲಿ ಪ್ರಕಟವಾಗಿವೆಯೆಂದೂ ಹೇಳಿ, ಮುಖ್ಯ ಘಟನೆಯಾಗಿ ಇವುಗಳನ್ನು ಚರ್ಚಿಸಿದ ವಿಷಯ ಪ್ರಯೋಜನವಾಗಲಾರದೆಂದೂ ಜವಾಬು ಕೊಟ್ಟಿರುವರು. ಆದರೂ ಪಂಡಿತ ನೆಹರೂರವರು ಪತ್ರಿಕೆಗಳಿಂದ ಹುಡುಕಿ ಆ ಶರತುಗಳನ್ನು ವಿಮರ್ಶಿಸ ತೊಡಗಿದಾಗ್ಯೆ, ಹಾಗೆ ಪತ್ರವ್ಯವಹಾರ ನಡೆಸುವುದರಿಂದ ರಾಜಿ ಪಂಚಾಯಿತಿಗೆಯು ಕೆಡುವದೆಂದು ಜಿನ್ನಾರವರು ಪ್ರತ್ಯುತ್ತರ ಕೊಟ್ಟರು. ಇದರಿಂದ ತಮ್ಮ ಶರತುಗಳನ್ನು ಕೊಡಲು ಜಿನ್ನಾರವರು ಸಿದ್ಧರಿರಲಿಲ್ಲವೆಂದಲ್ಲ. ಆದರೆ ಅದಕ್ಕಿಂತ ಮುಂಚಿತವಾಗಿ ಮುಸ್ಲಿಂ ಲೀಗಿನ ಪ್ರತಿನಿಧಿ ಸ್ಥಾನವನ್ನು ಭದ್ರಪಡಿಸಬೇಕೆಂಬುದೇ ಅವರ ಅಭಿಲಾಷೆ.

ಈ ರೀತಿಯ ಪತ್ರವ್ಯವಹಾರಗಳಿಂದ ಐಕ್ಯತೆಯ ಸಮಸ್ಯೆಯು ಬಗೆಹರಿಯುವ ಸಂಭವ ಕಾಣುವುದಿಲ್ಲ. ಇತ್ತಲಾಗಿ ಜಿನ್ನಾರವರು ಕಾಂಗ್ರೆಸ್ಸಿನ ಅಧ್ಯಕ್ಷರಾದ ಸುಭಾಷ್ ಚಂದ್ರ ಬೋಸ್‌ರವರ ಸಂಗಡ ನಡಿಸಿದ ಸಂಭಾಷಣೆಗಳೂ ಆಶಾಜನಕವಾಗಿ ಕಂಡುಬರುವುದಿಲ್ಲ. ಈ ಪ್ರಾಮುಖ್ಯ ವಿಚಾರವನ್ನು ದೇಶದ ಕಲ್ಯಾಣದ ದೃಷ್ಟಿಯಿಂದ ತೀರ್ಮಾನಿಸಬೇಕಾದರೆ ಮುಸಲ್ಮಾನ ಮುಖಂಡರು-ಮಿ. ಜಿನ್ನಾರವರು ತಮ್ಮ ಸ್ವಪ್ರತಿಷ್ಠೆಯ ಧೋರಣೆಯನ್ನು ಬದಲಾಯಿಸುವಂತೆ ಮಾಡಲು ಯತ್ನಿಸಬೇಕು. ಬೊಂಬಾಯಿಯ ಶಿಕ್ಷಣಾದ ನಂಸ್ಕ್ರವ್‌ಖಾಯಿ ದೇಸಾಯಿಯವರು ಹೇಳಿದಂತೆ ಕಾಂಗ್ರೆಸ್ ಸಂಸ್ಥೆಯು ಮುಸ್ಲಿಂ ಸಮೂಹದಲ್ಲಿ ಬೆಚ್ಚಿನ ಒಳಿತೆಯನ್ನು ನೋಡಿ ಅವರನ್ನು ಹೆಚ್ಚಾಗಿ ಕಾಂಗ್ರೆಸ್ಸಿಗೆ ಸೇರಿಸಬೇಕು. ದೇಶದ ಸ್ವಾತಂತ್ರ್ಯಕ್ಕಾಗಿ ಹಾಗೂ ಅಭಿವೃದ್ಧಿಗಾಗಿ ಇವೆರಡು ಸಮಾಜದವರೂ ಪರಸ್ಪರ ಪ್ರೀತಿ ವಿಶ್ವಾಸದಿಂದಲೂ ಸೌಹಾರ್ದತೆಯಿಂದಲೂ ಜೀವಿಸಬೇಕೆಂಬ ಅವಶ್ಯಕತೆಯನ್ನು ಅರಿತುಕೊಂಡು ಒಗ್ಗಟ್ಟನ್ನು ಸಾಧಿಸಲು ಯತ್ನಿಸದಲ್ಲದೇ ಸಫಲವಾಗುವುದಿಲ್ಲವೆನ್ನದೆ ಅನ್ಯಥಾ ಇಲ್ಲ.

ಕೊಚ್ಚಿ ಸಂಸ್ಥಾನದಲ್ಲಿ ಹೊಸ ರಾಜ್ಯಘಟನೆ.

ಹೊಸ ರಾಜ್ಯಘಟನೆಯ ಆರಂಭೋತ್ಸವಕ್ಕಾಗಿ ಕಳೆದ ಶುಕ್ರವಾರ ಅರ್ನಾಕುಲಮಿನ ದರ್ಬಾರ್ ಸಭಾಭವನದಲ್ಲಿ ನಡೆದ ದರ್ಬಾರಿನಲ್ಲಿ ಮಹಾರಾಜರು ಕೊಟ್ಟ ಸಂದೇಶದ ಸಾರಾಂಶ ಹೀಗಿದೆ.

1938ನೇ ಜನವರಿ ನಾಲ್ಕರಂದು ನನ್ನ ಜನ್ಮ ದಿನಾಚರಣೆಯ ಸಂದರ್ಭದಲ್ಲಿ ಸಂಸ್ಥಾನದ ಆಡಳಿತೆಯಲ್ಲಿ ನನ್ನ ಪ್ರಜೆಗಳನ್ನು ಸೇರಿಸಿಕೊಳ್ಳುವುದಾಗಿಯೂ, ಸರಕಾರದ ಕೆಲವು ಇಲಾಖೆಗಳ ಮಟ್ಟಿಗಾದರೂ ನ್ಯಾಯಸಭಾಯಕ ಸಭೆಯ ಅಧಿಕಾರವನ್ನು ಜಾರಿಗೆ ಬರುವಂತೆ ಮಾಡುವುದಾಗಿಯೂ ಮಾತು ಕೊಟ್ಟೆನು. ಈ ಇಚ್ಛೆಯಿಂದಲೇ ಸಂಸ್ಥಾನದ ಅಭಿವೃದ್ಧಿಯನ್ನು ಸಾಧಿಸುವ ಕೆಲವು ಇಲಾಖೆಗಳನ್ನು ನ್ಯಾಯವಿಧಾಯಕ ಸಭೆಯ ಚುನಾಯಿಸಲ್ಪಟ್ಟ ಸದಸ್ಯರೊಳಗಿಂದ ನೇಮಿಸಲಾಗುವ ಮಂತ್ರಿಯೊಬ್ಬರ ಕೈಗೊಪ್ಪಿಸಲು ನಿರ್ಣಯಿಸಿರುವೆನು. ಇದ್ದ ಕಾನೂನು ಹಾಗೂ ನಿಯಮಗಳಲ್ಲಿ ಈ ನನ್ನ ನಿರ್ಣಯವನ್ನು ಪೂರೈಸಲು ಅಗತ್ಯವುಳ್ಳ ಬದಲಾವಣೆಗಳನ್ನು ಮಾಡಲು ನನ್ನ ಸರಕಾರಕ್ಕೆ ಸೂಚಿಸಿರುವೆನು. ಇದರಂತೆ ತಯಾರಿಸಲ್ಪಟ್ಟ ಕೊಚ್ಚಿ ಸರಕಾರದ ಕಾನೂನು ಎಂಬ ಈ ಹೊಸ ಕಾಯ್ದೆಯನ್ನು ಈ ದಿನದಿಂದ ಜಾರಿಗೆ ತರಲಾಗುತ್ತದೆ. ಈ ಕಾನೂನಿನಂತೆ ನನ್ನ ಸರಕಾರದ ಕೆಲವು ಇಲಾಖೆಗಳು ನನ್ನ 'ಗ್ರಾಮಾಭಿವೃದ್ಧಿ ಮಂತ್ರಿಯ ಕೈಗೆ ಒಪ್ಪಿಸಲ್ಪಡುತ್ತವೆ ಮತ್ತು ಈ ಮಂತ್ರಿಯು ಪ್ರಜೆಗಳ ಪ್ರತಿನಿಧಿಯಿರುವುದರಿಂದ ಈ ಭಾಗದ ಆಡಳಿತೆಯನ್ನು ಪ್ರಜೆಗಳ ಪರಕ್ಕೇನೇ ಒಪ್ಪಿಸಿದಂತಾಗಿರುತ್ತದೆ.

ನನ್ನ ಪೂರ್ವಜರೂ ನಾನೂ ನಮ್ಮ ಅಧಿಕಾರವನ್ನು ನಮ್ಮ ದಿವಾನರ ಮೂಲಕವೇ ಜಾರಿಗೆ ತರುವ ಪದ್ಧತಿಯನ್ನಿಟ್ಟುಕೊಂಡಿದ್ದೇವೆ. ಈಗ ಇನ್ನೊಬ್ಬ ಮಂತ್ರಿಯನ್ನು ಆಡಳಿತೆಯಲ್ಲಿ ಉಪಯೋಗಿಸಿಕೊಳ್ಳಲು ನಾನು ನಿಶ್ಚಯಿಸಿದ್ದೇನೆ. ಮತ್ತು ಇಂಥ ಮಂತ್ರಿಯು ನನ್ನ ಪ್ರಜೆಗಳ ಪ್ರತಿನಿಧಿಯಾಗಿರಬೇಕಾಗಿಯೂ ---ಯುಸಿದ್ದೇನೆ. ಯಾವ ಇಲಾಖೆಗಳನ್ನು ಈ ಮಂತ್ರಿಯ ಕೈಗೆ ಕೊಡಲಾಗುವುದೋ ಆ ಇಲಾಖೆಗಳ ಮಟ್ಟಿಗೆ ನನ್ನ ಅಧಿಕಾರವು ಈ ಮಂತ್ರಿಯ ಮೂಲಕವೇ ಜಾರಿಗೆ ತರಲಾಗುವುದು.

ಹೊಸ ಕಾನೂನನ್ನು ತಯಾರಿಸುವಾಗ ಉದಾರತೆಯಿಂದ ತಯಾರಿಸಬೇಕಾಗಿ ನನ್ನ ದಿವಾನರಿಗೆ ತಿಳಿಸಿದಂತೆ ನ್ಯಾಯವಿಧಾಯಕ ಸಭೆಯ ಅಧಿಕಾರಗಳನ್ನು ವಿಸ್ತರಿಸಲಾಗಿದೆ. ಬಂದರ ಮತ್ತು ಸಂಸ್ಥಾನದ ರೈಲ್ವೆಗಳ ವಿಚಾರವು ಈ ಸಭೆಯಲ್ಲಿ ಈ ಮೊದಲು ಚರ್ಚಿಸಲಾಗುತ್ತಿದ್ದಿಲ್ಲ. ಮುಂದೆ ಚರ್ಚಿಸಬಹುದಾಗಿರುತ್ತದೆ. ಸಂಸ್ಥಾನದ ಆಯವ್ಯಯಗಳ ಕುರಿತು ಈ ಸಭೆಗೆ ಹೆಚ್ಚಿನ ಅಧಿಕಾರವು ಕೊಡಲಾಗಿದೆ. ಓಟು ಮಾಡಲಾಗದ ವಿಷಯಗಳನ್ನು ಬಹಳ ಮಟ್ಟಿಗೆ ಕಡಮೆ ಮಾಡಲಾಗಿದೆ.

ನನ್ನ ಅಧಿಕಾರವನ್ನು ನನ್ನ ಪ್ರಜೆಗಳ ಒಟ್ಟಿಗೆ ವಿಭಾಗಿಸಿಕೊಳ್ಳಬೇಕೆಂಬುದೇ ನನ್ನ ನಿಜವಾದ ಆನಂದವಿರುತ್ತದೆ. ನನ್ನ ಅಧಿಕಾರವನ್ನು ಇದರಿಂದಾಗಿ ಬಿಟ್ಟುಕೊಡುವಂತಾದರೂ ನನ್ನ ಪ್ರಜೆಗಳ ಪ್ರೇಮವು ನನಗೆ ಇದರಿಂದ ಸಿಕ್ಕುವುದರಿಂದ ನನಗೆ ಇದರಲ್ಲಿ ಆನಂದವೇ ಇರುತ್ತದೆ.

ನನ್ನ ಪ್ರಜೆಗಳು ತಮ್ಮ ಕರ್ತವ್ಯವನ್ನು ಸರಿಯಾಗಿ ಪಾಲಿಸಿ ಸಂಸ್ಥಾನದ ಅಭಿವೃದ್ಧಿಯಾಗಲೆಂದು ಭಗವಂತನನ್ನು ಪ್ರಾರ್ಥಿಸುತ್ತೇನೆ.

ಈ ದಿನದ ಆನಂದಕ್ಕಾಗಿ ನನ್ನ ಕಾರಾಗೃಹಗಳಿಂದ 35 ಮಂದಿ ಕೈದಿಗಳನ್ನು ಬಿಡುಗಡೆ ಮಾಡಿಸಿದ್ದೇನೆ. ಇವರ ಜೀವನದಲ್ಲಿಯೂ ಹೊಸ ಅಧ್ಯಾಯವು ಆರಂಭವಾಗಿ ಅವರೂ ಆನಂದದಲ್ಲಿ ಸಹಭಾಗಿಗಳಾಗಲಿ.

ಪ್ರಕಟಣೆ.

ಹೊಸೂರು ಗ್ರಾಮದ ಶ್ರೀ ಪಂದ್ಯಂಡ ಬೆಳ್ಯಪ್ಪನವರ ಜಾಗದಿಂದ ತಾ. 18-6-38ರ ಸಾಯಂಕಾಲ 5 ಗಂಟೆ ಸಮಯಕ್ಕೆ ಈ ಕೆಳಗೆ ಕೊಟ್ಟಿರುವ ಗುರ್ತುಗಳಿರುವ ಒಂದು ಹಸ ಮತ್ತು ಅದರ ನಾಲ್ಕು ತಿಂಗಳ ಕರ ಸಹ ಪರಾರಿಯಾಗಿವೆ. ಪತ್ತೆ ಹಚ್ಚಿ ಈ ಕೆಳಗಿನ ಅಡ್ರೆಸ್ಸಿಗೆ ತಿಳಿಸಿದವರಿಗೆ ಎರಡು ರೂಪಾಯಿ ಬಹುಮಾನ ಕೊಡಲಾಗುವುದು.

1. ಬೂದು ವರ್ಣದ 1 ಅಡಿ ಉದ್ದದ ಬಾಚಕೋಡಿನ ಸುಮಾರು 3 ಅಡಿ ಎತ್ತರದ ಹಸ.

2. ಕೆಂಪು ವರ್ಣದ ಹೊಟ್ಟೆಯ ಅಡಿಯಲ್ಲಿ ಮತ್ತು ಮುಖದಲ್ಲಿ ಬಿಳಿಪಟ್ಟೆ ಇರುವ ಹೆಣ್ಣು ಕರ.

ಪಂದ್ಯಂಡ ಬೆಳ್ಯಪ್ಪನವರ
ಪಾರೆ ಮಾಡುವ
ಗೌಡುಗಳ ಬಳ್ಳದಳ ಬೋಜಪ್ಪ,
ಹೊಸೂರು ಗ್ರಾಮ,
ಅಮ್ಮತ್ತಿ.

ದಿ ಗಾರ್ಡಿಯನ್ ಆಫ್ ಇಂಡಿಯಾ ಇನ್ಶ್ಯೂರೆನ್ಸ್ ಕಂಪೆನಿ ಲಿಮಿಟೆಡ್, ಮದ್ರಾಸು.

ಹೊಸ ಉದ್ಯೋಗ.—ಈ ವರ್ಷದಲ್ಲಿ 52,51,750 ರೂ. ಭರವಸೆಯ 4680 ಪ್ರಪೋಸಲ್‍ಗಳು ಸಿಕ್ಕಿವೆ. ಅವರಲ್ಲಿ ಹಿಂದಿನ ವರ್ಷದ ಪೂರ್ತಿಯಾಗದ 1447 ಪ್ರಪೋಸಲ್‍ಗಳ ಬಾಬ್ತು 49,67,650 ರೂ. ಗಳ ಬಗ್ಗೆ ವರ್ಷಾವಧಿ 2,21,959-6-0 ರೂ. ವಿಮಾ ಕಂತು ಬರುತ್ತೆ. ಕಂಪೆನಿಯಿಂದ ಭರವಸೆ ಪಡೆದಿರುವ ಹಣ ರೂ. 39,38,150. ಬಾಕಿ ರೂ. 1,29,500 ಪುನಃ ಭರವಸೆ ಕೊಟ್ಟದ್ದಾಗಿದೆ. ಬಾಕಿ ಇರುವ ಪ್ರಪೋಸಲ್‍ಗಳು ವರ್ಷಾಂತ್ಯದಲ್ಲಿ ತಿರಸ್ಕರಿಸಲು, ಮುಂದುವರಿಸಲು ಇಲ್ಲವೇ ಪೂರ್ತಿಗೊಳ್ಳಲು ಕಾಯುತ್ತವೆ. ಈ ವರ್ಷದ ಹೊಸ ಉದ್ಯೋಗವು ಕಳೆದ ವರ್ಷದ ಹೊಸ ಉದ್ಯೋಗಕ್ಕಿಂತ ರೂ 4,13,775 ಹೆಚ್ಚಿದೆ.

ಈ ಕೆಳಗಿನ ಒಳ್ಳೆ ಸಂಗತಿಗಳಿಂದ ಲಭಿಸಿದ ತೃಪ್ತಿಯನ್ನು ಶೇರುದಾರರೊಡನೆ ಅನುಭವಿಸಲು ಡೈರೆಕ್ಟರುಗಳು ಇಷ್ಟಪಡುತ್ತಾರೆ.

ಇಂಡಿಯಾ ಸರಕಾರದ ಭರವಸೆಯಿಂದ ಜೀವವಿಮೆ ಕೆಲಸ ಮಾಡುವ 215 ಇಂಡಿಯನರ ಕಂಪೆನಿಗಳಿವೆಯೆಂದು ಈಗ ಪ್ರಕಟಿಸಲ್ಪಟ್ಟಿರುವ 'ಇಂಡಿಯನ ಇನ್ಶೂರೆನ್ಸ್ ಇಯರ್ ಬುಕ' ಎಂಬುವುದರಿಂದ ತಿಳಿಯಬರುತ್ತದೆ. ಈ ಕಂಪೆನಿಗಳಲ್ಲಿ ಗಾರ್ಡಿಯನ್ ಆಫ್ ಇಂಡಿಯಾವು ಹೊಸ ಉದ್ಯೋಗಗಳ ದೃಷ್ಟಿಯಿಂದ ಮೊದಲಿನ 20 ಕಂಪೆನಿಗಳೊಳಗೆ ತನ್ನ ಸ್ಥಾನವನ್ನು ಪಡೆದಿದೆ. ಈ ಸಂಗತಿಯು ಇದಕ್ಕಿಂತ ಅನೇಕ ವರ್ಷಗಳ ವರೆಗೆ ಶ್ರಮಿಸುತ್ತಿರುವ ಸಂಸ್ಥೆಗಳ ದೃಷ್ಟಿಯಿಂದ ಗಣನೀಯವಾಗಿದೆ. ದಕ್ಷಿಣ ಭಾರತದಲ್ಲಿ ಹೆಡ್ಡಾಫೀಸುಗಳುಳ್ಳ ಸಂಸ್ಥೆಗಳಲ್ಲಿ ಗಾರ್ಡಿಯನ್ ಆಫ್ ಇಂಡಿಯಾದ ಹೊಸ ಉದ್ಯೋಗವು ಎರಡನೆಯದಾಗಿದೆ. ಒಂದನೆಯದು ದೊಡ್ಡ ಕಂಪೆನಿಯು ಇದಕ್ಕಿಂತ 35 ವರ್ಷಗಳ ಮುಂಚೆ ಸ್ಥಾಪಿಸಲ್ಪಟ್ಟದ್ದಾಗಿದೆ.

ವಿಮಾ ಕಂತುಗಳ ಆದಾಯ:—ಈ ವರ್ಷದ ಎಲ್ಲಾ ವಿಮಾ ಕಂತುಗಳ ಆದಾಯವು (ಪುನಃ ಭರವಸೆ ಕೊಟ್ಟದ್ದನ್ನು ಬಿಟ್ಟು) ಕಳೆದ ವರ್ಷದ ವಿಮಾ ಕಂತಿನ ಆದಾಯಕ್ಕಿಂತ ಶೇಕಡ 55ರಷ್ಟು ಹೆಚ್ಚಿದೆ. ಮೂರು ವರ್ಷದ ವಿಮಾ ಕಂತಿನ ಆದಾಯವು ರೂ. 3,66,198-13-0, ಗತ ವರ್ಷದ್ದು 2,36,767-6-6 ಆಗಿದೆ.

ಜೀವವಿಮಾ ಫಂಡು:—ಈ ಕಂಪೆನಿಯ ಜೀವ ವಿಮಾ ಫಂಡು ರೂ. 75,258-14-9ರಿಂದ, ವ್ಯವಸ್ಥಾ ಕ್ರಮಕ್ಕೆ ಮತ್ತು ಇತರ ಖರ್ಚುಗಳಿಗಾಗಿ ರೂ. 45,037-8-4 ವಜಾ ಕಳೆದು ರೂ. 21,00,421-1-3ಕ್ಕೆ ಏರಿದೆ. ಈ ಕೆಳಗೆ ಅವರ ತಖ್ತೆಯನ್ನು ಕೊಡಲಾಗಿದೆ.

ವರ್ಷಾಂತ್ಯದಲ್ಲಿ.	ವಿಮಾ ಕಂತು	ಜೀವ ವಿಮಾ ಫಂಡು.
1ನೇ ವರ್ಷದ	ರೂ. 1,46,949	ರೂ 15,619
2ನೇ ವರ್ಷದ	,, 2,36,767	,, 75,259
3ನೇ ವರ್ಷದ	,, 3,66,199	,, 2,00,421

ಈ ಮೇಲಿನ ಅಂಕೆ ಸಂಖ್ಯೆಗಳೇ ಕಂಪೆನಿಯ ಅಭಿವೃದ್ಧಿಗೆ ನಿದರ್ಶನವಾಗಿದೆ. ಈ ಅಭಿವೃದ್ಧಿಯು ಭಾರತ ವಿಮಾ ಕಂಪೆನಿಗಳ ವಾರ್ಷಿಕ ವೃತ್ತಾಂತದಲ್ಲಿ ಹೊಗಳಲರ್ಹವಾದದ್ದೇ ಆಗಿದೆ.

ಭಾರತ ಜೀವವಿಮಾ ಕಂಪೆನಿಗಳ ಆಕ್ಟಿನ ಮೇರೆ ಠೇವಣಾತಿ:—ಈ ಕಾನೂನು ಮೇರೆ ಠೇವಣಾತಿ ಮಾಡಬೇಕಾದಿದ್ದ ರೂ. 2 ಲಕ್ಷವನ್ನು ಪೂರ್ತಿಯಾಗಿ ವಿಮುಕ್ತ ಮಾಡಲಾಗಿದೆ ಎಂಬುವುದನ್ನು ತಿಳಿಸಲು ಡೈರೆಕ್ಟರುಗಳು ಸಂತೋಷಪಡುವವರಾಗಿರುವರು.

ಸಿ. ಯಂ. ತಿಮ್ಮಯ್ಯ,

(12-2) ಏಜೆನ್ಸಿ ಇನ್ಸ್‌ಪೆಕ್ಟರು, ಕೊಡಗು ಮತ್ತು ಹಾಸನ ಡಿಸ್ಟ್ರಿಕ್ಟ್.

ಯೂನಾನಿ ಫಾರ್ಮೆಸಿಯ ಉತ್ತಮ ಔಷಧಿಗಳು.

ಉಬ್ಬಸ ಸಂಹಾರಿ (Asthma cure) ಕೆಲವು ದಿನಗಳ ಸೇವನೆಯಿಂದ ಉಬ್ಬಸವನ್ನು ಖಾತ್ರಿಯಾಗಿ ಗುಣಪಡಿಸುತ್ತದೆ. 40 ದಿನದ ಔಷಧಿಗೆ ಕ್ರಯ ರೂ. 5—12—0.

ಅಂಬರ್ ಕೂದಲೆಣ್ಣೆ, ಸುಗಂಧಯುಕ್ತ ಆಮ್ಲಕೇಶ ತೈಲ ಅಲ್ಲದೆ ಎಲ್ಲಾ ರೋಗಗಳಿಗೂ ರಾಮಬಾಣದಂತಿರುವ ಮಾತ್ರೆಗಳೂ, ಚೂರ್ಣಗಳೂ, ಲೇಹಗಳೂ, ತೈಲಗಳೂ ಮತ್ತು ಕೇಶ ತೈಲಗಳೂ ಸಹ ತಯಾರಿರುವವು.

ಬೇಗನೆ ಬರೆಯಿರಿ:—

ಯಂ. ಯಂ ಸಿದ್ದೀಕ್,

17 ಪ್ರೊಪ್ರೈಟರ್,

ಯುನಾನಿ ಔಷಧಶಾಲಾ, ಮಡಿಕೇರಿ, ಕೊಡಗು.

ಮ್ಮ ಮೂಲ ತತ್ವಗಳಲ್ಲಿ ಯಾವ ಬದಲಾವಣೆಯೂ ಆಗುವಂತಿಲ್ಲ. ನಾವು ಆರಿಸಿದ ಮಾರ್ಗದಿಂದ ನಾವೆಂದೂ ಹಿಂತಿರುಗುವಂತಿಲ್ಲ. ಒಂದೊಂದೇ ಇಟ್ಟಿಗೆಯು ನಮಗೂ ಅವರಿಗೂ ಒಂದು ಸ್ವಲ್ಪವಾದ ಅಂತರವನ್ನುಂಟುಮಾಡುತ್ತದೆ, ಆದರೆ ನಾವಿನ್ನು ಹೋಗಬೇಕಾದ ಮುಂದಿನ ಹೆಜ್ಜೆಗಳು ಸಹಕಾರಿಯಾಗುತ್ತವೆ.

ಕಾಂಗ್ರೆಸ್ ಕಾರ್ಯಕರ್ತರಿಗೊಂದು ಮಾತು.

ನನ್ನ ಸಹಕಾರ್ಯಕರ್ತರಿಗೆ ನಾನೊಂದು ಮಾತನ್ನು ಹೇಳಲು ಬಯಸುತ್ತೇನೆ. ಅದನ್ನು ಪರಮ ವಿಶ್ವಾಸದಿಂದ ಸಲಹೆಯಾಗಿ ಕೊಡುತ್ತಿದ್ದೇನೆ. ಜನತಾ ಪ್ರತಿಕಕ್ಷಿಗಳಾಗಿ ಜನರೆಲ್ಲಿ ಬಂದಾದಂತೆ ಮುಸ್ಲಿಮ ಲೀಗಿನವರು ಇಲ್ಲಿ ನಡೆಸಿದಂತೆ ಇನ್ನು ಅನೇಕ ಬಗೆಯ ಹುಚ್ಚಾಟಿಗಳನ್ನು ನಡೆಸಬಹುದು. ಆಗ ಮಾತ್ರ ನಾವು ಅಹಿಂಸಾತ್ಮವನ್ನು ಕೊನೆಯವರೆಗೂ ಪಾಲಿಸಬೇಕಾದ್ದು. ಅವರು ಎಷ್ಟು ಅನರ್ಥಗಳನ್ನು ಮಾಡಿದರೂ ನಾವು ಹಿಟ್ಟಿಗೆ ಹೋಗಬಾರದು. ಅವರ ದುಂಡಿತನವನ್ನು ನಾವು ನಮ್ಮ ಪ್ರೇಮದಿಂದ ಗೆಲ್ಲಬೇಕು. ಅವರು ಸಾಧಿಸುವ ದ್ವೇಷವನ್ನು ಪ್ರೇಮದಿಂದ ಗೆಲ್ಲಬೇಕು, ಆಗ್ಗೆ ಮಾತ್ರ ನಾವು ಅಹಿಂಸಾ ತತ್ವವನ್ನು ಅಕ್ಷರಶಃ ಪಾಲಿಸಿದಂತಾಗುವದು.

ಚಂದಾದಾರರಲ್ಲಿ ವಿನಂತಿ.

ಮಹನೀಯರೇ,

ಕಳೆದ ತಿಂಗಳ ಅಂತ್ಯಕ್ಕೆ 'ಕೊಡಗು' ಕಂಪೆನಿಯ ವರ್ಷವು ಮುಗಿದು ಈ ತಿಂಗಳ ಮೊದಲಿನಿಂದ ಹೊಸ ವರ್ಷವು ಪ್ರಾರಂಭವಾಗಿದೆ. ಆದ್ದರಿಂದ ಚಂದಾದಾರರೆಲ್ಲರೂ ಚಂದಾ ಬಾಪ್ತು ಹಳೇ ಬಾಕಿ ಇರುವ ಹೊಬಳಿಗನ್ನು, ಮುಂದಿನ ವರ್ಷದ ಚಂದಾ ಹಣವನ್ನು ಹಾಸು ವಿಟ್ಟು ಕೂಡನೆ ಕಳುಹಿಸಿಕೊಡಬೇಕಾಗಿ ವಿನಂತಿ. ಪತ್ರಿಕೆಯ ಚಂದಾ ಬಾಕಿಗಾಗಿ ವಿ. ಪಿ. ಕಳುಹಿಸುವುದರಿಂದ ಚಂದಾದಾರರಿಗೆ ನಷ್ಟ ಸಂಭವಿಸುವ ಕಾರಣ ತಮ್ಮ ತಮ್ಮ ಬಾಕಿಯನ್ನು ಮನಿಯಾರ್ಡರು ಮುಖಾಂತರವಾಗಲೀ, ತಮ್ಮ ಸಮೀಪದ ನಮ್ಮ ಏಜಂಟರ ಮುಖಾಂತರವಾಗಲೀ ನಮ್ಮ ಆಫೀಸಿಗೆ ತಲಪಿಸಬೇಕಾಗಿ ಕೇಳಿಕೊಳ್ಳಲಾಗಿದೆ.

ಮೇನೇಜರ್,

"ಕೊಡಗು" ಲಿಮಿಟೆಡ್,

ಮಡಿಕೇರಿ.

ಡಾ. ಮ್ಯಾತ್ಯೂಸ್ ಎಬ್ರಹಾಮ್

ದಂತ ವೈದ್ಯರು.

(ಪೀಯರ್ಸ್ ಲೆಸ್ಲಿ ಬಂಗ್ಲೆ)

(ಸ್ಪೆನ್ಸರ್ಸ್ ಹತ್ತಿರ)

ಮಡಿಕೇರಿ.

ಬೆ...

ಜೇನು ಮತ್ತು ... ಸಂಘ, ...

ಈ ಸಂಘಕ್ಕೆ ಒ... ಬೇಕಾಗಿದ್ದಾನೆ. ಅರ್ಜಿ ಜುಲೈ ತಾರೀಕು 15ರ ಪ್ರೆಸಿಡೆಂಟರಿಗೆ ಮಾಡಿಕೊಳ್ಳ ... ಬರಮಾಡಿಕೊಳ್ಳತಕ್ಕದ್ದು. ಚುನಾಯಿತನಾದವನು 3 ತಿಂಗಳ ವರೆಗೆ ಮಾಸಿಕ 20 ರೂಪಾಯಿ ಸಂಬಳದಲ್ಲಿ ಉಮೇದುವಾರನಾಗಿರತಕ್ಕದ್ದು. ಅನಂತರ ತಕ್ಕವನೆಂದು ಕಂಡು ಬಂದರೆ ಮಾಸಿಕ ರೂ. 25 ಸಂಬಳದಲ್ಲಿ ಖಾಯಂ ಮಾಡಲಾಗುವುದು. ಸಂಘದಲ್ಲಿ ಪ್ರವೇಶ ಹೊಂದಿದ ಬಳಿಕ ಒಂದು ವರ್ಷದ ನಂತರ ರೂ. 30 ಕೊಡಲಾಗುವುದು. ಉಮೇದ್ವಾರನು ಇಂಗ್ಲಿಷ್ ಮೆಟ್ರಿಕ್ಯುಲೇಷನ್ ಪರೀಕ್ಷೆಗೆ ಕೂತಿರಬೇಕು. ಕನ್ನಡ ಬಲ್ಲವನಿದ್ದರೆ ಉತ್ತಮ. ಚುನಾಯಿತನು ಒಂದು ಸಾವಿರ ರೂಪಾಯಿಗಳಿಗೆ ಜಾಮೀನು ಕೊಡುವುದಲ್ಲದೆ, ಉದ್ಯೋಗವನ್ನು 5 ವರ್ಷಗಳ ವರೆಗೆ ಸಂಘವನ್ನು ಬಿಡುವುದಿಲ್ಲವೆಂದು ಕರಾರು ಬರೆದು ಕೊಡತಕ್ಕದ್ದು. ಚುನಾಯಿತ ಉಮೇದ್ವಾರನು ಜುಲೈ 1ಕ್ಕೆ ತನ್ನ ಉದ್ಯೋಗವನ್ನು ವಹಿಸಿಕೊಳ್ಳತಕ್ಕದ್ದು.

ಸಿ. ಯಂ. ಉತ್ತಪ್ಪ,

1-1. ಸಂಘದ ಪ್ರೆಸಿಡೆಂಟರು.

ಕೃತಜ್ಞತಾ ಪತ್ರ.

ಮ್ಯಾಕಾರಿನಲ್ಲಿ ತಾ. 14-5-38 ಲ್ಲಿ ನಿಧನ ಹೊಂದಿದ ನಮ್ಮ ಪ್ರಿಯ ಪುತ್ರಿ **ಕೆ. ಚಿಪ್ಪವೀರ ಪೊನ್ನಪ್ಪನವರ ಪತ್ನಿ** ಪೊನ್ನಮ್ಮನಿಗಾಗಿ ಸಂತಾಪ ಸೂಚಕ ಪತ್ರಗಳನ್ನು ಕಳುಹಿಸಿದ ಬಂಧು ಮಿತ್ರ ಸ್ನೇಹಿತರುಗಳಿಗೆ ಪ್ರತ್ಯೇಕ ಪ್ರತ್ಯೇಕ ಪತ್ರ ಬರೆಯಲು ಅನಾನುಕೂಲವಾದ್ದರಿಂದ ಅವರಿಗೆಲ್ಲಾ ಈ ಮೂಲಕ ನಮ್ಮ ಕೃತಜ್ಞತಾಪೂರ್ವಕ ವಂದನೆಗಳನ್ನು ಅರ್ಪಿಸುತ್ತೇವೆ.

Mr. & Mrs. Konganda

2 **Appaya.**

W A N T E D.

Candidates for Telegra
Station Master, Radio a
Electric class. Allowa
Rs 28. Uniform. pass
and quarter free. Serv
essential. Rules and En
ance form on annas eig
Director, Royal Telegr
and Ry. Duties Colle
Bombay 14. 8-

ಕೊಡಗಿನ ಚರಿತ್ರೆಯ ಕಥೆಗಳು.

●●

ರಾಜಕುಮಾರಿ ವಿಕ್ಟೋರಿಯಾ ಗೌರಮ್ಮ.

●●●

(ಲೇಖಕ:—ಡಿ. ಎನ್. ಕೃಷ್ಣಯ್ಯ, ಎಂ. ಎ. ಬಿ. ಇಡಿ.)

ಲೇಖಾಂಕ ೧೩.

(ಎಲ್ಲಾ ಹಕ್ಕುಗಳನ್ನು ಕಾಯ್ದಿಡಲ್ಪಟ್ಟಿವೆ)

(ಕಳೆದ ಸಂಚಿಕೆಯಿಂದ ಸಾಗಿದ್ದು.)

ಲೇಡಿ ಲೋಗಿನ್ನಳು ರಾಜಕುಮಾರಿ ಗೌರಮ್ಮನೊಡನೆ ಇಂಗ್ಲೆಂಡಿಗೆ ತಿರುಗಿ ಮೇ ತಿಂಗಳಲ್ಲಿ ಬಂದಳು. ಆಗ ಅವಳು ತನ್ನ ಮಕ್ಕಳು ದೊಡ್ಡವರಾಗಿರುವರೆಂದೂ, ಅವರ ವಿದ್ಯಾಭ್ಯಾಸಕ್ಕೆ ತಾನು ಗಮನಕೊಡಬೇಕಾದುದರಿಂದ ರಾಜಕುಮಾರಿ ಗೌರಮ್ಮನನ್ನು ತನ್ನ ಪೋಷಣೆಯಿಂದ ಬಿಡಿಸಬೇಕೆಂದೂ ವಿಕ್ಟೋರಿಯಾ ರಾಣಿಯನ್ನು ಪ್ರಾರ್ಥಿಸಿದಳು. ವಿಕ್ಟೋರಿಯಾ ರಾಣಿಯು ಆಕೆಯ ಪ್ರಾರ್ಥನೆಯನ್ನು ಅಂಗೀಕರಿಸಿ ರಾಜಕುಮಾರಿ ಗೌರಮ್ಮನನ್ನು ಲೇಡಿ ಕ್ಯಾಥರೀನ್ ಹಾರ್‌ಕೋರ್ಟ್ ಎಂಬವಳ ಸ್ವಾಧೀನದಲ್ಲಿ ಬಿಟ್ಟಳು.

ಈ ಸಮಯದಲ್ಲಿ ಅಂದರೆ 1859ನೇ ಇಸವಿ ಜೂನ್ ತಿಂಗಳಲ್ಲಿ ವೀರರಾಜನಿಗೆ ಬಹಳ ಅಸ್ವಸ್ಥವಾಗಿ ಲಂಡನ್ ನಗರದಲ್ಲಿದ್ದನು. ಆಗ ಅವನು ರಾಜಕುಮಾರಿ ಗೌರಮ್ಮನು ತನ್ನಲ್ಲಿಗೆ ಆಗಾಗ ಬರುತ್ತಿರಬೇಕೆಂದು ಆಶಿಸಿದನು. ರಾಜಕುಮಾರಿಯು ಒಂದೆರಡು ಸಾರಿ ವೀರರಾಜನನ್ನು ನೋಡುವುದಕ್ಕೆ ಹೋದಳು. ವೀರರಾಜನಿಗೆ ತನ್ನ ಮಗಳಲ್ಲಿ ಬಹಳಾ ಪ್ರೇಮವಿತ್ತು. ಆದರೆ ರಾಜಕುಮಾರಿ ಗೌರಮ್ಮನು ತಂದೆಯಲ್ಲಿ ಪ್ರೀತಿಯುಳ್ಳವಳಾಗಿರಲಿಲ್ಲ. ವೀರರಾಜನಿಗೆ ಇಂಗ್ಲಿಷು ಭಾಷೆಯು ಬರುತ್ತಿರಲಿಲ್ಲ. ರಾಜಕುಮಾರಿ ಗೌರಮ್ಮನಿಗೆ ಕನ್ನಡ ಅಥವಾ ಹಿಂದಿಯು ಮರೆತುಹೋಗಿದ್ದಿತು. ಹೀಗಾಗಿ ಲೇಡಿ ಲೋಗಿನ್ನಳು ತಂದೆ ಮಗಳ ಹಿಂದಿ, ಇಂಗ್ಲಿಷ್ ಸಂಭಾಷಣೆಯನ್ನು ತಾನು ತರ್ಜುಮೆ ಮಾಡಬೇಕಾದ ಪ್ರಸಂಗವು ಬಂತು. ಇದೇ ಸಮಯದಲ್ಲಿ ವೀರರಾಜನು ರಾಜಕುಮಾರಿ ಗೌರಮ್ಮನಿಗೆ ಅವಳಿಗೆಂದು ತೆಗೆದಿಟ್ಟಿದ್ದ ಆಭರಣಗಳನ್ನು ಕೊಟ್ಟನು. ಇಷ್ಟರಲ್ಲಿ ವೀರರಾಜನ ದೇಹಸ್ಥಿತಿಯು ಸ್ವಲ್ಪ ಮಟ್ಟಿಗೆ ಸುಧಾರಿಸಲು ರಾಜಕುಮಾರಿ ಗೌರಮ್ಮನು ಲೇಡಿ ಕ್ಯಾಥರೀನ್ ಹಾರ್‌ಕೋರ್ಟಿಯ ಸಂಗಡ ವೈಟ್ ದ್ವೀಪಕ್ಕೆ ಹೊರಟು ಹೋದಳು.

ವೀರರಾಜೇಂದ್ರನು ಈಸ್ಟ್ ಇಂಡಿಯಾ ಕಂಪೆನಿಯ ಮೇಲೆ ಹೂಡಿದ ವ್ಯಾಜ್ಯವು ಇಂಗ್ಲೆಂಡಿನ ಕೋರ್ಟುಗಳಲ್ಲಿ ನಡೆಯುತ್ತಿತ್ತು. ಈ ವ್ಯಾಜ್ಯದ ವಿಚಾರಣೆಯ ಮೊದಲೇ ವೀರರಾಜನನ್ನು ರಾಜತ್ವದಿಂದ ಹಿಂದೂದೇಶಕ್ಕೆ ಕಳಿಸಬೇಕೆಂದು ಇಂಡಿಯಾ ಸರ್ಕಾರದವರು ಪ್ರಯತ್ನಪಟ್ಟರು. ಆದರೆ ವೀರರಾಜನು ತಾನು ಇಂಗ್ಲೆಂಡಿನಲ್ಲಿಯೇ 'ಇರುವಂತೆಯೂ, ತನ್ನ ಏಳು ಗಂಡು ಮಕ್ಕಳನ್ನೂ ಅಲ್ಲಿಯೇ ವಿದ್ಯಾಭ್ಯಾಸ ಮಾಡಿಸುವಂತೆಯೂ ಅನುಮತಿ ಕೊಡಬೇಕೆಂದು ವಿಕ್ಟೋರಿಯಾ ರಾಣಿಗೆ ಅರ್ಜಿ ಬರೆದುಕೊಂಡನು. ಈ ಅರ್ಜಿಯು ತೀರ್ಮಾನವಾಗುವ ಮೊದಲೇ ಸೆಪ್ಟೆಂಬರ್ 21ರಲ್ಲಿ ವೀರರಾಜನು ಲಂಡನ್ ನಗರದಲ್ಲಿ ಸ್ವರ್ಗಸ್ಥನಾದನು. ವೀರರಾಜನ ಮೃತದೇಹವನ್ನು ಲಂಡನಿನ ಕೆನ್ಸಲ್‌ಗ್ರೀನ್ ಸ್ಮಶಾನದಲ್ಲಿ ಹೂಳಿದರು. ಮರುವರ್ಷ ಆ ಶರೀರವನ್ನು ಸ್ಮಶಾನದಿಂದ ಅಗೆದು ಕಾಶಿಗೆ ತಂದು ಅಲ್ಲಿ ತಿರುಗಿ ಹೂಳಿ ಅದರ ಮೇಲೆ ಗೋರಿಕಟ್ಟಿಸಿದರು.

ರಾಜಕುಮಾರಿ ಗೌರಮ್ಮನು ಲೇಡಿ ಕ್ಯಾಥರೀನ್ ಹಾರ್‌ಕೋರ್ಟಿನ ಪೋಷಣೆಯಲ್ಲಿ ಸುಖವಾಗಿರಲಿಲ್ಲ. ಅಲ್ಲಿ ಅವಳನ್ನು ಬಹಳ ಚಿಕ್ಕಮಕ್ಕಳ ನೋಡಿಕೊಳ್ಳುವ ದಾದಿಗಳ ವಶಕ್ಕೆ ಬಿಟ್ಟದ್ದು ಅವಳಿಗೆ ಅವಮಾನವಾದಂತಾಯಿತು. ಅದುದರಿಂದ ರಾಜಕುಮಾರಿಯು ಅಲ್ಲಿ ಸ್ವಲ್ಪ ಅವಿಧೇಯತೆಯನ್ನು ತೋರಿಸಿದಳು. ಆಗ ವಿಕ್ಟೋರಿಯಾ ರಾಣಿಯು ಅವಳನ್ನು ಸರ್ ಜೇಮ್ಸ್ ವೀರ್ ಹಾಗ್ ಎಂಬವನ ಸ್ವಾಧೀನದಲ್ಲಿ ಬಿಟ್ಟಳು.

ರಾಜಕುಮಾರಿ ಗೌರಮ್ಮನು ಸರ್ ಜೇಮ್ಸ್ ವೀರ್‌ಹಾಗನ ಪೋಷಣೆಗೆ ಬಂದು ಕೆಲವು ತಿಂಗಳುಗಳಲ್ಲಿ ಮಹಾರಾಜ ದಿಲೀಪಸಿಂಹನು ರಾಜಕುಮಾರಿಯನ್ನು ಕರ್ನಲ್ ಕ್ಯಾಂಪ್‌ಬೆಲ್ಲನಿಗೆ ಪರಿಚಯ ಮಾಡಿಸಿದನು. ಕರ್ನಲ್ ಕ್ಯಾಂಪ್‌ಬೆಲ್ಲನು ಲೇಡಿ ಲೋಗಿನ್ನಳ ಸಹೋದರನು. ಇವನಿಗೆ ಸೈನ್ಯದಲ್ಲಿ ಒಂದು ದೊಡ್ಡ ಹುದ್ದೆ ಇತ್ತು. ಇವನ ಪತ್ನಿಯು ಗತಿಸಿ ಹೋಗಿದ್ದಳು. ಆದರೆ ಇವನಿಗೆ ಕೆಲವು ಗಂಡು ಮಕ್ಕಳಿದ್ದರು. ಇದಾಗ್ಯೂ, ರಾಜಕುಮಾರಿಗೂ ಪರಸ್ಪರ ಪ್ರೇಮವುಂಟಾಗಿ ಇವರು 1860 ನೇ ಇಸವಿ ಜುಲೈ ತಿಂಗಳಲ್ಲಿ ವಿವಾಹವಾದರು. ಇದರ ಮಾರನೆಯ ವರ್ಷ ರಾಜಕುಮಾರಿ ಗೌರಮ್ಮನಿಗೆ ಒಂದು ಹೆಣ್ಣು ಮಗುವು ಜನಿಸಿತು. ಆ ಮಗುವಿಗೆ ಎಡಿತ್ ವಿಕ್ಟೋರಿಯಾ ಗೌರಮ್ಮನೆಂದು ನಾಮಕರಣ ಮಾಡಿದರು.

ರಾಜಕುಮಾರಿ ಗೌರಮ್ಮನ ಆರೋಗ್ಯವು ಚಿಕ್ಕಂದಿನಿಂದಲೇ ಚೆನ್ನಾಗಿರಲಿಲ್ಲ. ಅವಳು ದೊಡ್ಡವಳಾದ ಹಾಗೆ ಕ್ಷಯರೋಗವು ವೃದ್ಧಿಯಾಗುತ್ತಾ ಬಂದು ಅವಳು ವಿವಾಹವಾಗಿ ಎರಡು ಮೂರು ವರ್ಷಗಳಲ್ಲಿ ಕಠಿಣವಾಯಿತು. ವಿಕ್ಟೋರಿಯಾ ರಾಣಿಯು ಇವಳ ಯೋಗಕ್ಷೇಮವನ್ನು ಆಗಾಗ್ಗೆ ವಿಚಾರಿಸಿಕೊಳ್ಳುತ್ತಿದ್ದಳು. ಕೊನೆಗೆ ರಾಜಕುಮಾರಿ ಗೌರಮ್ಮನು ಅದೇ ರೋಗದಿಂದ 1864 ನೇ ಮಾರ್ಚಿ 31 ರಲ್ಲಿ ಸ್ವರ್ಗಸ್ಥಳಾದಳು. ಇವಳಿಗೆ ಸಾಯುವಾಗ 23 ವರ್ಷಗಳಾಗಿದ್ದವು. ಇವಳ ಶವವನ್ನು ಬ್ರಾಂಪ್ಟನ್ ಸ್ಮಶಾನದಲ್ಲಿ ಹೂಳಿ ಆ ಸ್ಥಳದಲ್ಲಿ ಅವಳ ಜ್ಞಾಪಕಾರ್ಥವಾಗಿ ವಿಕ್ಟೋರಿಯಾ ರಾಣಿಯ ಇಷ್ಟದಂತೆ ಶಿಲಾಶಾಸನವನ್ನು ಇಡಿಸಿದರು.

ರಾಜಕುಮಾರಿ ಗೌರಮ್ಮನ ಮರಣದ ನಂತರ ಅವಳ ಚಿಕ್ಕ ಮಗುವಿಗೆ ಇಂಡಿಯಾ ಸರ್ಕಾರದವರು 250 ಪೌನು ಹಣವನ್ನು ವರ್ಷಾಶನವಾಗಿ ಮಂಜೂರು ಮಾಡಿದರು. ಈ ಹುಡುಗಿಯನ್ನು ಕೆಲವು ವರ್ಷ ಅವಳ ತಂದೆಯ ನೆಂಟರು ಕೆಲವರು ಸಾಕಿದರು. ಅನಂತರ ಲೇಡಿ ಲೋಗಿನ್ನಳು ಅವಳನ್ನು ಅವಳ ವಿವಾಹದ ವರೆಗೆ ಅಂದರೆ 1882 ನೇ ಇಸವಿಯ ವರೆಗೆ ಅವಳನ್ನು ಸಾಕಿದಳು. 1882 ನೇ ಇಸವಿಯಲ್ಲಿ ಎಡಿತ್ ವಿಕ್ಟೋರಿಯಾ ಕ್ಯಾಂಪ್‌ಬೆಲ್ಲಳು ಕ್ಯಾಪ್ಟನ್ ಎಚ್. ಎ. ಯಾರ್ಬರ್ಗ್ ಎಂಬವನನ್ನು ಮದುವೆಯಾದಳು. ಇವಳ ಯೋಗಕ್ಷೇಮವನ್ನೂ ವಿಕ್ಟೋರಿಯಾ ರಾಣಿಯು ವಿಚಾರಿಸಿಕೊಳ್ಳುತ್ತಿದ್ದಳು. ಈಕೆಯು ತನ್ನ 75 ನೇ ವಯಸ್ಸಿನಲ್ಲಿ ಅಂದರೆ 1934 ನೇ ಇಸವಿಯಲ್ಲಿ ಮೃತಪಟ್ಟಳು. ಇವಳ ಒಬ್ಬನೇ ಒಬ್ಬ ಪುತ್ರ ವಿಕ್ಟರ್ ಯಾರ್ಬರ್ಗನು ಎರಡು ವರ್ಷಗಳ ಹಿಂದೆ ಆಸ್ಟ್ರೇಲಿಯಾದಲ್ಲಿ ಸತ್ತು ಹೋದನು.

1867 ನೇ ಆಗಸ್ಟ್ 7 ನೇ ತಾರೀಖಿನ ದಿನ ಬೆಳಿಗ್ಗೆ ರಾಜಕುಮಾರಿ ವಿಕ್ಟೋರಿಯಾ ಗೌರಮ್ಮನ ಪತಿ ಕರ್ನಲ್ ಕ್ಯಾಂಪ್‌ಬೆಲ್ಲನು ತನ್ನ ಕೈಯಲ್ಲಿ ಒಂದು ಸಣ್ಣ ಚೀಲವನ್ನು ಹಿಡಿದುಕೊಂಡು ಹೊರಗೆ ಹೊರಟನು. ಆ ಚೀಲದಲ್ಲಿ ವಿಕ್ಟೋರಿಯಾ ಗೌರಮ್ಮನಿಗೆ ವೀರರಾಜನು ಕೊಟ್ಟಿದ್ದ ಆಭರಣಗಳಿದ್ದವು. ಈ ಆಭರಣಗಳು ಸುಮಾರು ಎರಡು ಮಿಲಿಯ ಪೌಂಡುಗಳ ಬೆಲೆಯುಳ್ಳವೆಂದು ಹೇಳುವರು. ಕರ್ನಲ್ ಕ್ಯಾಂಪ್‌ಬೆಲ್ಲನು ಆ ಆಭರಣಗಳನ್ನು ಕೌಟ್ಸ್ ಬ್ಯಾಂಕಿನಲ್ಲಿಡಬೇಕೆಂದು ಹೊರಟಿದ್ದನು. ಆದರೆ ಅವನು ಆ ದಿನ ಬೆಳಿಗ್ಗೆ ಹೊರಟವನು ಹಿಂದಕ್ಕೆ ಬರಲೇ ಇಲ್ಲ. ಅವನು ಎಲ್ಲಿ ಹೋದನು, ಅವನ ಕೈಯಲ್ಲಿದ್ದ ಆಭರಣಗಳೇನಾದವು ಎಂಬುದು ಯಾರಿಗೂ ತಿಳಿಯದಾಯಿತು. ಇವನ ಕೈಯಲ್ಲಿದ್ದ ಆಭರಣಗಳನ್ನು ಅಪಹರಿಸುವುದಕ್ಕೆ ಅವನನ್ನು ಯಾರೋ ಕೊಂದುಹಾಕಿರಬೇಕೆಂದು ಎಲ್ಲರೂ ಯೋಚಿಸಿದರು.

ರಾಜಕುಮಾರಿ ಗೌರಮ್ಮನ ಜೀವನದಲ್ಲಿ ಹೆಚ್ಚು ಸಮಯ ಅವಳು ಅಸುಖಿಯಾಗಿದ್ದಳು. ಅವಳ ಸುಖದ ಕಾಲವೆಂದರೆ ಅವಳ ವಿವಾಹದ ನಂತರ ಎರಡು—ಮೂರು ವರ್ಷಗಳು. ಅವಳು ಆಗಿಂದಾಗ್ಗೆ ಕೊಡಗನ್ನು ಜ್ಞಾಪಿಸಿಕೊಳ್ಳುತ್ತಿದ್ದಳು. ಮತ್ತು ಅವಳು ಸಾಯುವ ಸಮಯದಲ್ಲಿ "ನಾನು ನನ್ನ ಪ್ರೀತಿಯ ಚಿಕ್ಕ ಕೊಡಗಿನಲ್ಲಿರಲು ಎಷ್ಟು ಇಷ್ಟ ಪಡುವೆನು!" ಎಂದು ಹೇಳಿದಳಂತೆ. ಇವಳಿಗೆ ಸಾಯುವ ವರೆಗೂ ಇಂಡಿಯಾ ಸರ್ಕಾರದಿಂದ ಸಾವಿರ ಪೌನುಗಳ ವರ್ಷಾಶನವು ದೊರೆಯುತ್ತಿತ್ತು.

ಮೇಲಿನ ಜೀವನ ಚರಿತ್ರೆಯು 'ಲೇಡಿ ಲೋಗಿನ್ನಳ ನೆನಪುಗಳು' ಎಂಬ ಪುಸ್ತಕದಿಂದಲೂ ಬೇರೆ ಒಂದೆರಡು ಲೇಖನದಿಂದಲೂ ಸಂಗ್ರಹಿಸಲ್ಪಟ್ಟಿದೆ.

ಮುಸ್ಲಿಂ ಲೀಗದವರ ಅತ್ಯಾಚಾರದ ವಿಷಯ ಸುಭಾಷರ ಹೇಳಿಕೆ:—

ಪೂರ್ವ ಬಂಗಾಲದ ಟಿಪ್ಪರಾ ಜಿಲ್ಲೆಯಲ್ಲಿರುವ ಬ್ರಾಹ್ಮಣ ಬಾರಿಯಾದಲ್ಲಿ ಬಾಬು ಸುಭಾಷ ಹಾಗೂ ಬಂಗಾಲ ಕಾಂಗ್ರೆಸ್ ಕಮಿಟಿಯ ಕಾರ್ಯದರ್ಶಿಗಳಾದ ಪೌಲ್ರಿ ಅವರನ್ನು ಉದ್ದೇಶಿಸಿ ಮೊನಚಾದ 15 ಇಂಚಿನ ಮೊಳೆ ಇಟ್ಟಿಗೆಗಳನ್ನು ಎಸೆದು ಗಾಯಪಡಿಸಿದರು. ಈ ವರ್ತನೆಯನ್ನು ಖಂಡಿಸಿ ಬಾಬು ಸುಭಾಷರು ಯುನೈಟೆಡ್ ಪ್ರೆಸ್ ಮೂಲಕ ತಮ್ಮ ಹೇಳಿಕೆಯನ್ನು ಈ ರೀತಿ ಕೊಟ್ಟಿದ್ದಾರೆ.

ಮುಸ್ಲಿಂ ಲೀಗದವರ ಪುಂಡತನ.

ಟಿಪ್ಪೇರಾದಲ್ಲಿ ಕಾಂಗ್ರೆಸ್ ಮನೋವೃತ್ತಿಯ ಮುಸಲ್ಮಾನ ಬಂಧುಗಳನೇಕರಿದ್ದಾರೆಂಬುದು ಆ ದಿನದ ಕಾರ್ಯಕ್ರಮದಲ್ಲಿ ಅವರು ಭಾಗ ವಹಿಸಿದ್ದರಿಂದ ಯಾರಿಗಾದರೂ ಸ್ಪಷ್ಟವಾಗುತ್ತದೆ. ಅವರು ಉತ್ಸಾಹಿಗಳಿದ್ದಾರೆ. ಇದರಿಂದ ಮುಸ್ಲಿಂ ಲೀಗದವರಿಗೆ ಮನೋವೇದನೆಯುಂಟಾಗಿ ಉದ್ದೇಶಪೂರ್ವಕವಾಗಿ ಅವರು ಇಂಥ ಕೆಲಸಕ್ಕೆ ಕೈ ಹಾಕಿದ್ದಾರೆ. ಕೆಲವೇ ಹುಡುಗರು ಕರಿಪತಾಕೆಗಳನ್ನು ಹಿಡಿದುಕೊಂಡು ಹಿಂದಿನಿಂದ ಬೊಬ್ಬೆ ಹಾಕುವುದು ಯಾರಿಗೂ ಕೇಳಿಸುತ್ತಿದ್ದಿಲ್ಲ. ಗಗನದಲ್ಲಿದ್ದ ಒಂದೇ ಚುಕ್ಕೆಯಂತೆ ಅವರು ಕಾಣುತ್ತಿದ್ದರು. ಇದರಿಂದ ಇಲ್ಲಿ ಲೀಗಕ್ಕೆ ಏನೂ ಬೆಂಬಲವಿಲ್ಲವೆಂಬುದು ಗೊತ್ತಾಗುತ್ತದೆ.

ಮಹತ್ವದ ಸ್ವಾಗತ.

ಬ್ರಾಹ್ಮಣ ಬಾರಿಯಾದವರು ನನಗೆ ಮಾಡಿದ ಸ್ವಾಗತವು ಅವರ ಇತಿಹಾಸದಲ್ಲಿ ಮಹತ್ವದ್ದು. ಇದರಿಂದ ಮುಸ್ಲಿಂ ಲೀಗದವರ ತಲೆ ತಿರುಗಿತು. ಟಿಪ್ಪೇರಾ ಜಿಲ್ಲೆಯ ಎಲ್ಲ ಭಾಗದವರೂ ಒಟ್ಟಾಗಿ ನನ್ನ ಮೋಟಾರು ಕಾರು ಸ್ಟೇಶನ ರೋಡಿನಲ್ಲಿ ಬರುತ್ತಿರುವಾಗ ಇಟ್ಟಿಗೆಗಳು ಮೇಲೆ ಬೀಳಲಾರಂಭಿಸಿದವು.

ಇದಕ್ಕೆ ಕಾರಣಗಳು.

ಇದು ಮುಸ್ಲಿಂ ಲೀಗದವರ ಪರಮಾವಧಿಯ ಪುಂಡತನ. ಟಿಪ್ಪೇರಾ ಜಿಲ್ಲೆಯಲ್ಲಿ ಮುಸ್ಲಿಂ ಲೀಗದವರು ಮಾಡಿದ ಅತ್ಯಾಚಾರವು ಅಕ್ಷಮ್ಯವಾದದ್ದು. ಅಪ್ರಚಾರ ಮಾಡುವದು ಮುಂತಾದ್ದರಲ್ಲಿ ಅವರು ಕಾಲಹರಣ ಮಾಡುತ್ತಿದ್ದಾರೆ. ಈ ರೀತಿ ಮಾಡುವದು ತಮ್ಮ ಹಾಗು ಬೇರೆ ಬೇರೆ ಪ್ರಾಂತಗಳ ಮುಸ್ಲಿಮರ ಹಿತಕ್ಕೆ ಘಾತಕವಾಗಿದೆ.

ಮುಸ್ಲಿಂ ಲೀಗದವರಿಗೆ ಎಚ್ಚರಿಕೆ.

ಬೇರೆ ಬೇರೆ ಪ್ರಾಂತಗಳಲ್ಲಿ ಪರಿಸ್ಥಿತಿಯು ಬಹಳ ಚಿಂತಾಜನಕವಾಗಿರುವದರಿಂದ ಈ ಮಧ್ಯೆ ನಾನು ಎಚ್ಚರಿಸುವದು ಅತ್ಯವಶ್ಯವಾಗಿದೆ. ಇಟ್ಟಿಗೆಗಳಿಂದ ಹೊಡೆಯುವದು ಮುಂತಾದವುಗಳಿಂದ ಏನೂ ಪ್ರಯೋಜನವಿಲ್ಲವೆಂದು ನಾನು ತಿರುಗೊಮ್ಮೆ ಹೇಳುತ್ತೇನೆ. ಹೀಗೆ ಮಾಡುವದರಿಂದ ನಮ್ಮ ಧೋರಣೆಯಲ್ಲಿ ಯಾವ ಬದಲಾವಣೆಯೂ ಆಗುವಂತಿಲ್ಲ. ಇಟ್ಟಿಗೆಗಳಿಂದ ಹೊಡೆಯಲಿ ದಂಗೆ ಹೂಡಲಿ ನ

ಸರಕಾರದ ಪ್ರತಿಯೊಬ್ಬ ಅಧಿಕಾರಿಯೂ ವಿಷಸೆ ಇಷ್ಟೇ ತೀರಬೇಕು.

ಬೆಂಗೇರಿಯವಲ್ಲಿಯ ಅಧಿಕಾರಿಗಳ ಕಟ್ಟಪ್ಪಣೆ ಇದು. ಸರಕಾರದ ಉದ್ಯೋಗದಲ್ಲಿರುವ ಪ್ರತಿಯೊಬ್ಬ ಉದ್ಯೋಗಿಯೂ ಮೀಸೆ ಇಡಲಿಕ್ಕೇ ಬೇಕು. ಎಂಥಾ ಸಂದರ್ಭ ಬಂದರೂ ಮೀಸೆ ಬೋಳಿಸಕೂಡದು. ಆ ವರ ಬೊಕ್ಕಸದಲ್ಲಿ ಗಡ್ಡಬಿಟ್ಟವರು ಯಾರೂ ಆಕ್ಷೇಪ ಇಲ್ಲ. ಸರಕಾರದವರು ಹೀಗೆ ಹೇಳಿದರೆ ? ಪ್ರಜಾಪಾಲನೆ ಎಂದರೆ ಇದು ಆದರ್ಶಪ್ರದವಾಗಿದೆ. ಪ್ರಜೆಗಳ ಕೂದಲಿನ ಮೇಲೂ ಇಷ್ಟು ಕಣ್ಣಿಟ್ಟಿರುವ ಆ ರಾಜ್ಯದ ಆಡಳಿತವಾದರೂ ಹೇಗಿರುವದೋ ಯೋಚಿಸಿರಿ.

—೦()೦—

ವಧೂವರರಿಗೆ ಕೋಳಿಹಾಕಿ ವಿನೋದ!

ಪೆಸ್ಟರ್ ಎಂಬ ಊರಿನಲ್ಲಿ ಜೋನಾಲ್ಡ್ ಕೊಲಿಕ್ ಎಂಬವನು ಅವಲೀನ ಎಂಬವಳನ್ನು ಮದುವೆಯಾಗುವನೆಂದು ಗೊತ್ತಾಯಿತು. ಮದುವೆಯ ಮುಂಚೆ ವರನ ಮಿತ್ರನೊಬ್ಬನು ಮುಂತ್ರ ಮೋಟಾರಿನಲ್ಲಿ ವಧೂವರರನ್ನು ಕುಳ್ಳಿರಿಸಿಕೊಂಡು ಹೋಗುವನೆಂಬ ನಿಶ್ಚಿತ ಸುದ್ದಿ ವರನಿಗೆ ಸಿಕ್ಕಿತು. ವರನಿಗೆ ಭಯವಾಯಿತು. ವಧೂವರರು ತಪ್ಪಿ ಹೋಗಬಾರದೆಂದು ವಿವಾಹ ಸಂಸ್ಕಾರದ ಇಡೀ ಸಮಯದಲ್ಲಿ ವರನ ಇಷ್ಟಮಿತ್ರರು, ವಧೂವರರ ಕೈಗಳನ್ನು ಜೋಡಿಸಿ ಕೋಳಿಹಾಕಿದರು. ಮದುವೆಯು ಸಾಂಗವಾಗಿ ನೆರವೇರಿ ದಂಪತಿಗಳು ಹಾಗೆಯೆ ಕೈ ಜೋಡಿಸಿಕೊಂಡೆ ಮನೆಗೆ ಮರಳಿದರು. ಅಲ್ಲಿ ಬಂದು ನೋಡುವಾಗ ಕೋಳದ ಬೀಗದ ಕೈ ಕಾಣೆ! ಗಡಿಬಿಡಿಯಲ್ಲಿ ಎಲ್ಲಿಯೋ ಬಿದ್ದು ಹೋಗಿತ್ತು. ಕಡೆಗೆ ಅಕ್ಕಸಾಲಿಗನ ಸಹಾಯದಿಂದ ಮುರಿದು 'ಪ್ರೇಮ ಬಂಧ'ವನ್ನು ಬಿಡಿಸಲಾಯಿತು!

—೦()೦—

ಪರಸ್ಥಳದಲ್ಲಿರುವ ಗಂಡನನ್ನು ಹೇಗೆ ಚುಂಬಿಸುವುದು ?

ಲಂಡನ್ನಿನ ಒಬ್ಬ ನರ್ತಕಿಯು ಇದು ಹೇಗೆ ಸಾಧ್ಯವೆಂಬುದನ್ನು ತೋರಿಸಿಕೊಟ್ಟಿದ್ದಾಳೆ. ಅವಳ ಪ್ರಿಯತಮನು ಕಾರ್ಡಿನೆಯೊಂದರಲ್ಲಿ ಮನೇಜರ. ಅವನಿಗೆ ಬಿಡುವಿಲ್ಲದ್ದರಿಂದ ತನ್ನ ಪರವಾಗಿ ತನ್ನ ಪ್ರಣಯಿನಿಗೆ ಸುಖಪ್ರಯಾಣ ಬಯಸಲು ತನ್ನ ಮಿತ್ರನನ್ನು ಕಳಿಸಿದ್ದನು. ಟ್ರೈನು ಹೊರಡುತ್ತಿರುವಾಗ ನರ್ತಕಿಯು ತನ್ನ ಸಲ್ಲಿಸ ಮಿತ್ರನನ್ನು ಹಿಡಿದಪ್ಪಿ ಚುಂಬಿಸಿಬಿಟ್ಟು 'ಇದನ್ನು ನನ್ನ ಪ್ರಿಯನಿಗೆ ಮುಟ್ಟಿಸು' ಎಂದು ಕೇಳಿಕೊಂಡಳು! ಏನು ಮಾಡುವುದೆಂದು ತಿಳಿಯದೆ ಆವನು ಬಹಳ ಯೋಚನೆಯಲ್ಲಿ ಬಿದ್ದನು. ಕಡೆಗೆ ಒಂದು ಯೋಚನೆ ಹೊಳೆಯಿತು. ಆವನು ತನ್ನ ಪ್ರೇಯಸಿಯನ್ನು ಚುಂಬಿಸಿ ಆವಳು ತನ್ನ ಮಿತ್ರ (ನರ್ತಕಿಯ ಪ್ರಣಯಿ)ನನ್ನು ಚುಂಬಿಸುವಂತೆ ಹೇಳಿದನು. ಹೇಗಿದೆ ಹೊಂಚು? ಆಧುನಿಕ ಸುಲಭೋಪಾಯಗಳಲ್ಲಿ ಇದೊಂದು!

—೦()೦—

ವಿ ವಿ ಧ ವಿ ಚಾ ರ .

ಸುವಾಸನೆ ಬೆಂಕಿಕಡ್ಡಿ.

ಬೆಂಕಿಕಡ್ಡಿ ಇನ್ನು ಹಚ್ಚಿಸಿದಾಗ ಅದರಿಂದ ಬರುವ ದುರ್ಗಂಧವು ನಮಗೆಲ್ಲರಿಗೂ ಅಸಹ್ಯವಾಗುತ್ತಿರುವುದು. ಅದರಿಂದನ್ನು ಮುಂದೆ ಹಾಗೆ ಬೆಂಕಿಕಡ್ಡಿಯನ್ನು ಹಚ್ಚಿಸಿದಾಗ ದುರ್ಗಂಧಕ್ಕೆ ಬದಲು ಸುವಾಸನೆ ಸೂಸಬೇಕೆಂದು ಒಂದು ಹೊಸ ರೀತಿಯ ಬೆಂಕಿಕಡ್ಡಿಗಳು ಬಳಕೆಗೆ ಬರುವುದನ್ನು ಕೇಳಿ ಎಲ್ಲರಿಗೂ ಸಂತೋಷವಾಗುವುದು.

ಇವರ ಗುಟ್ಟು ಮತ್ತೇನೂ ಇಲ್ಲ. ಅದು ಹತ್ತಿಗೆ ಉಪಯೋಗಿಸುವ ಸುಗಂಧವನ್ನು ಬೆಂಕಿಕಡ್ಡಿಯ ಮೇಲೆ ಸ್ವಲ್ಪ ಲೇಪಿಸುವರು. ಹಾಗೆಯೇ ಮೋಟಾರ್ ಕಾರ್‌ಗಳ ಬಿಡಿಸಿದ ಹೊಗೆಯೂ ಸುವಾಸನೆ ಬೀರುವ ಹಾಗೆ ಮಾಡುವ ವಿಧಾನವನ್ನು ಸಹ ಯಾರಾದರೂ ಕಂಡುಹಿಡಿದರೆ ಆದರೆ ಆಗ ನಮ್ಮ ಸುಗಂಧಪ್ರಿಯ ರಸ್ತೆಗಳಲ್ಲಿ ಆನಂದದಿಂದ ಓಡಾಡಬಹುದಲ್ಲವೇ ?

—೦()೦—

ಹಿಟ್ಲರನು ಏಕೆ ಮದುವೆ ಮಾಡಿಕೊಳ್ಳಲಿಲ್ಲ ?

ಜಗತ್ತಿನ ಪ್ರಸಿದ್ಧ ಡಿಕ್ಟೇಟರುಗಳಲ್ಲಿ ಇಬ್ಬರೆಂದರೆ ಇವರು,–ಇಟಲಿಯ ಮುಸಲೋನಿ, ಜರ್ಮನಿಯ ಹಿಟ್ಲರು. ಇವರಲ್ಲಿ ಮುಸಲೋನಿಯವನು ಸಂಸಾರಿ; ಎರಡನೆಯವನು ಬ್ರಹ್ಮಚಾರಿ. ಹಿಟ್ಲರು, ನಾತ್ಸಿ ಪಕ್ಷದ ನಾಯಕನಾಗಿದ್ದು, ಪ್ರಪಂಚದ ಗೌರವಪಾತ್ರನಿಯಾಗಿದ್ದು, ಆತನೇಕೆ ಮದುವೆಯಾಗಲಿಲ್ಲ? ಈ ಸಂದಿಗ್ಧ ಪ್ರಶ್ನೆಗೆ ಸಮರ್ಪಕ ಉತ್ತರ ಏನು? ಸಾವಿರಾರು ಮಂದಿ ಸುಂದರ ಯುವತಿಯರು, ಹಿಟ್ಲರನ ಪಾಣಿಗ್ರಹಣಕ್ಕಾಗಿ ಆತುರದಿಂದ ಕಾದಿರುತ್ತಾ, ಆವನೇಕೆ ಮದುವೆಯಾಗಲಿಲ್ಲ ? ಮದುವೆಯಾಗಲು ಒಲ್ಲ? ಆವನ ರಾಜ್ಯದಲ್ಲಿ, ಮದುವೆಯು, ಜನೋದ್ಧಾರದ ಕರ್ತವ್ಯವೆಂದೇ ಸಾರೋದ್ಧಾರವಾಗಿ ಸಾರಲಾಗಿದೆ; ಮದುವೆಯಾಗದಿದ್ದರೆ ಏಕೆ ಮದುವೆಯೊಡನೆ 'ಆದೇಕೆ? ಏನು? ಎಂಬು ವಿಚಾರಿಸಲಾಗುತ್ತಿದೆ. ಇಷ್ಟಾದರೂ ಹಿಟ್ಲರು ಮದುವೆ ಮಾಡಿಕೊಂಡಿಲ್ಲ. ಏಕೆ? ಹಿಟ್ಲರನ ಜೀವನೋದ್ದೇಶದ ಸಾಧನೆಗೆ, ಹೊರಗಿನ ಯಾವ ಶಕ್ತಿಯೂ ಪ್ರತಿಬಂಧಕವಾಗಲ್ಲವಂತೆ, ಆವನು ಮದುವೆ ಮಾಡಿಕೊಂಡಿಲ್ಲವೆಂದು ಪ್ರತೀತಿಯುಂಟಾಗಿದೆ. ಮದುವೆಯಂತಹ ದಾಕ್ಷಿಣ್ಯದ, ಹೆಂಗಿನ ಮನೆಯಲ್ಲಿ ಸಿಕ್ಕಿ ಬೀಳದೆ, ತಾನು ಜೀವನಾಂತ್ಯದ ವರೆಗೂ ಬ್ರಹ್ಮಚಾರಿಯಾಗಿಯೇ ಇದ್ದು, ತನ್ನ ಶಕ್ತಿಯನ್ನೂ, ವರ್ಚಸ್ಸನ್ನೂ, ಉಳಿಸಿಕೊಳ್ಳಬೇಕೆಂದೇ ಆತನ ನಿರ್ಧಾರವಿರುವುದಾಗಿ, ಆತನನ್ನು ಚೆನ್ನಾಗಿ ಬಲ್ಲವರ ಪ್ರಬಲವಾದ ನಂಬಿಕೆ.

—೦()೦—

ಬಸ್ಥಲಿನಿಂದ ನೆಲ್ಲು.

ಪ್ರತಿ ವರ್ಷವು ನದಿ,ಬದಿಗಳ ಕೊಚ್ಚಿನಿಂದ ಸಾಬಿನನು ಸಾಮಾನ್ಯವಾಗಿ ಬರೂ ಬಿಡಲ್ಪಡುತ್ತದೆ. ಆದರೆ ಮರ್ಚನಿಯಲ್ಲಿ ಈ ಕೊಚ್ಚು ಸಿಗುವುದು ಕಡಿಮೆಯಾಗಿರುವುದರಿಂದ ಇತರ ಸಿದ್ಧವಾದ ಸಾಬೂನನ್ನು ತಯಾರು ಮಾಡಲು ಪ್ರಯೋಗ ನಡೆಸುತ್ತಿದ್ದಾರೆ. ನೂತ್ನ ತರದ ಇದ್ದಲಿನಿಂದ ಹೆಚ್ಚಾಗಿ ನ ಬಣ್ಣನ್ನು ತಯಾರಿಸಿದ್ದಾರೆ. ಈ ಸಾಬೂನು ಈಗ ಮಾರ್ಕೆಟ್ಟಿನಲ್ಲಿರುವ ಸಾಬೂನಿನಂತೆ ಇದ್ದಾಗ್ಯೂ ಇನ್ನು ಸುಲಭ ಬೆಲೆಗೆ ದೊರೆಯುವದಿಲ್ಲ. ಆದನ್ನು ಸುಲಭ ಬೆಲೆಗೆ ಮಾರಲು ಪ್ರಯತ್ನ ನಡೆಯುತ್ತಿದೆ.

—೦()೦—

ಇದ್ದಲಿನಿಂದ ಚಲಾವಣಾ ಶಕ್ತಿ.

ಇದ್ದಲಿನಿಂದ ಯಂತ್ರಗಳಿಗೆ ಕಡಿಮೆ ಖರ್ಚಿನಲ್ಲಿ ಚಲಾವಣಾಶಕ್ತಿಯನ್ನು ಒದಗಿಸಿಕೊಡಲಿಕ್ಕೆ ಸಾಧ್ಯವಿದೆಯೆಂದು ಮದ್ರಾಸಿನ ಕೈಗಾರಿಕೆ ಇಲಾಖೆಯವರು ಪ್ರಕಟಿಸಿದ ವರದಿಯು ಮದ್ರಾಸು ಸರಕಾರದ ನೋಟಕ್ಕೆ ಬಿದ್ದಿರುವುದಿ. ಈ ವಿಷಯ ಸರಕಾರದ ಹೆಚ್ಚಿನ ವಿಮರ್ಶೆ ನಡೆಸಲು ನಿರ್ಧರಿಸಿರುತ್ತದೆ. ಈ ಯೋಜನೆಯಿಂದಾಗಿ ಸಾರಿಗೆ, ಇಲಾಖೆ ಉತ್ಪತ್ತಿಯು ಹೆಚ್ಚುಬರುವದಾಗಿಯೂ, ಗ್ರಾಮಸ್ಥರಿಗೆ ಜೀವನೋಪಾಯ ಸಿಗಬಹುದಾಗಿಯೂ, ಪೆಟ್ರೋಲ್ ಶಕ್ತಿಗಿಂತ ⅓ ರಷ್ಟು ಕಡಿಮೆ ಖರ್ಚಿನಲ್ಲಿ ಇದ್ದಲಿನಿಂದ ಚಲಾವಣಾ ಶಕ್ತಿಯನ್ನು ಒದಗಿಸಿಕೊಳ್ಳಬಹುದಾಗಿಯೂ ಅಂದಾಜು ಹಾಕಲಾಗಿದೆ.

—೦()೦—

ಮೈಸೂರಿನಲ್ಲಿ ವಿಧವಾ ವಿವಾಹ ಕಾನೂನು.

ಹಿಂದೂ ವಿಧವೆಯರು ವಿವಾಹವಾಗಲಿಚ್ಛಿಸಿದ್ದು, ಮದುವೆಯಾದಲ್ಲಿ ಅಂಥವರ ವಿವಾಹವು ಕಾನೂನು ರೀತ್ಯಾ ಕ್ರಮಬದ್ಧವೆಂಬುದು ಇಷ್ಟರಲ್ಲಿಯೇ ಮೈಸೂರು ಸಂಸ್ಥಾನದಲ್ಲಿಯೂ ಜಾರಿಗೆ ಬರಲಿದೆ. 16 ವರ್ಷಕ್ಕೆ ಮೀರಿದ ವಿಧವೆಯರು ಪುನರ್ವಿವಾಹ ಮಾಡಿಕೊಳ್ಳಲು ಸ್ವತಂತ್ರರು. 16 ವರ್ಷದೊಳಗಿನ ಬಾಲವಿಧವೆಯರಿಗೆ ಅವರ ತಾಯಿ ತಂದೆಗಳಾಗಲಿ ಅಥವಾ ಅವರಿಲ್ಲವಾದರೆ ಸಮೀಪ ಬಂಧುಗಳಾಗಲೀ ಒಪ್ಪಿ ವಿವಾಹ ಮಾಡಬೇಕೆಂದೂ ಮತ್ತು ಸ್ವತ್ತಿನ ಸಂಬಂಧವಾಗಿ ಪುನರ್ವಿವಾಹವಾದ ವಿಧವೆಯರ ಹಕ್ಕು ಬಾಧ್ಯತೆಗಳನ್ನೂ ಸೆಲೆಕ್ಟ್ ಕಮಿಟಿಯವರು ತಮ್ಮ ವರದಿಯಲ್ಲಿ ವಿಶದಗೊಳಿಸಿರುವರು. ಇದು ಮೈಸೂರು ಗೆಜೆಟ್ಟಿನಲ್ಲಿ ಪ್ರಕಟವಾದ ಒಂದು ತಿಂಗಳ ಮೇಲೆ ಜಾರಿಗೆ ಬರುವದು.

—೦()೦—

ಹುಟ್ಟಿದೊಡನೆಯೇ ಕಟ್ಟು.

ಉತ್ತರ ಇಂಡಿಯಾದ ಕಲಭಾಯಾ ಎಂಬ ಹಳ್ಳಿಯಲ್ಲಿ ಸಿಕ್ಕಾಮಕೀಯನೊಬ್ಬನು 1½ ವರ್ಷದ ತನ್ನ ಮಗಳನ್ನು 5 ವರ್ಷದ ಹುಡುಗನೊಬ್ಬನಿಗೆ ಮದುವೆಮಾಡಿಕೊಟ್ಟಿರುವರು. ಇದಂತೂ ಘೋರ ವಿಚಿತ್ರ ವಿವಾಹವೇ ಇರಬೇಕು. ಮದುವೆ ನಡೆಯುತ್ತಿದ್ದ ಕಾಲದಲ್ಲಿ ಈ ವರಕನ್ಯೆಯರು ತೊಟ್ಟಿಲಲ್ಲಿ ಮಲಗಿ ನಿದ್ರಿಸುತ್ತಿದ್ದರೇನೋ ? ಪ್ರಸಂಗದ ನಾಗರೀಕತೆ ಇಲ್ಲಿಗೆ ಒಂದು ಮುಟ್ಟಿತು.

ಅರ್ಧ ಮದುವೆ.

ನೀವು ಈ 'ಅರ್ಧ ಮದುವೆ'ಯನ್ನು ಕೇಳಿಲ್ಲ. ಇದು ನಿಜ. ಪೂರ್ತಿ ಮದುವೆಯಲ್ಲ, ಅರ್ಧ ಮದುವೆ. ಇದೂ ಬಳಕೆಯಲ್ಲಿದೆ ಕಾಲಿಪ್ಪೋರ್ನಿಯಾ ದೇಶದ ಪಾಯಿಮ್ ಪ್ರಾಂತದಲ್ಲಿ. ಆ ದೇಶದಲ್ಲಿ ವಿವಾಹಾತ್ಪೂರ್ವ ಕನ್ಯೆಗೆ ಇಷ್ಟು ಹಣ ಕೊಡಬೇಕೆಂದು ನಿಶ್ಚಯವಾಗುತ್ತದೆ. ಹುಡುಗಿಯನ್ನು ಮದುವೆಯಾಗುವವನು ಅಷ್ಟು ಹಣವನ್ನು ಕೊಟ್ಟು ಮದುವೆಯಾಗಬೇಕು. ಹಾಗಲ್ಲದೆ ಅವನು ಆ ನಿಶ್ಚಯವಾದ ಹಣದಲ್ಲಿ ಅರ್ಧ ಭಾಗವನ್ನು ಮಾತ್ರ ಕೊಡುತ್ತಾನೆಂದು ಇಟ್ಟುಕೊಳ್ಳೋಣ. ಆಗ ಆವನು ಆವಳಿಗೆ ಅರ್ಧ ಗಂಡನಾಗುತ್ತಾನೆಯೇ ಹೊರತು ಪೂರ್ತಿ ಗಂಡನಾಗಲಾರ. ಹೀಗೆ ಅರ್ಧ ಗಂಡನಾದವನು ತನ್ನ ಹೆಂಡತಿಯನ್ನು ತನ್ನ ಮನೆಗೆ ಕರೆದುಕೊಂಡು ಹೋಗುವಂತಿಲ್ಲ. ತಾನೇ ಆವಳ ತಂದೆಯ ಮನೆಗೆ ಹೋಗಿ ಆವರೊಡನೆ ಸಂಸಾರ ಮಾಡಬೇಕು. ಮಾವನು ಹೇಳಿದಂತೆ ಕೇಳಿಕೊಂಡು ಬಿದ್ದಿರಬೇಕು.

—೦()೦—

ಜಗತ್ತಿನ ಭಾರಿ ನಾಯಿ.

'ನಿಮ್ಮ ಪ್ರೀತಿ ನನ್ನ ಕೊಂದಿತು' ಎಂದ ಹಾಗಾಯಿತು ಈ ನಾಯಿಯ ಕಥೆ. ಓಹಿಯೋ ನಗರದಲ್ಲಿ ಇತ್ತೀಚೆಗ ಜರುಗಿದ ನಾಯಿಗಳ ಪ್ರದರ್ಶನದಲ್ಲಿ 'ಯೋಕಬ್' ಎಂಬ ಒಂದು ದೊಡ್ಡ ನಾಯಿಯನ್ನು ಪ್ರದರ್ಶಿಸಿದ್ದರು. ಇದು ಸೇಂಟ್ ಬರ್ನಾರ್ಡ್ ಜಾತಿಗೆ ಸೇರಿದುದು.

ಇಂತಹ ಆಶ್ಚರ್ಯಕರವಾದ ನಾಯಿಯನ್ನು ನೋಡಿ, ಪ್ರದರ್ಶನಕ್ಕೆ ಬಂದವರೆಲ್ಲರೂ ಪ್ರೀತಿಯಿಂದ ಅದರ ತಲೆಯನ್ನು ತಟ್ಟಿದರು. ಹತ್ತಾರು ಸಾವಿರ ಮಂದಿ ಪ್ರೇಕ್ಷಕರು ಹಲವು ಸಾಲ್ಯೆಯು ಬಾರಿ ಅದರ ತಲೆಯನ್ನು ತಟ್ಟುತ್ತಾ ಹೋದರೆ ಅದೇನು ಸಾಮಾನ್ಯವೇನು? ಪ್ರದರ್ಶನದಿಂದ ತನ್ನ ಯಜಮಾನನೊಂದಿಗೆ ಮೋಟಾರಿನಲ್ಲಿ ಮನೆಗೆ ಹೋಗುತ್ತಿದ್ದಾಗ ದಾರಿಯಲ್ಲಿಯೇ ಸತ್ತು ಹೋಯಿತು. ಪಾಪ! ಪ್ರೇಕ್ಷಕರ ಪ್ರೀತಿಯಿಂದ ಅದರ ಪ್ರಾಣಕ್ಕೆ ಸಂಚಕಾರ ಬಂದಿತು. ಇದು 7 ಅಡಿ 2 ಅಂಗುಲ ಉದ್ದವಾಗಿತ್ತು. ತೂಕ 252 ಪೌಂಡುಗಳು. ಒಂದು ಕಿವಿಯಿಂದ ಇನ್ನೊಂದು ಕಿವಿಗೆ ಅಳತೆ 13 ಅಂಗುಲ. ಇದೇ ಜಗತ್ತಿನ ಭಾರಿ ನಾಯಿಯಂತೆ!

—೦()೦—

ಪ್ರಕಟಣೆ.

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್, ಲಿಮಿಟೆಡ್, ಮಡಿಕೇರಿ.
(ಕೋ-ಆಪರೇಟಿವ್ ಸೊಸೈಟೀಸ್ ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ.)

(ಸ್ಥಾಪಿತವಾದದ್ದು 1921ರಲ್ಲಿ)

		ರೂ.	ಅ.	ಪೈ.
ಶೇರ್ ಬಂಡವಾಳ	–	50,000	0	0
ವಸೂಲಾದ ಶೇರ್ ಮೊಬಲಗು	–	44,690	0	0
ಜಮೆಯಾದ ಠೇವಣಾತಿ	–	2,81,879	15	4
ವಸೂಲಾದ ಕ್ಷೇಮನಿಧಿ	–	1,31,701	12	0
ಸೇವಿಂಗ್ಸ್ ಬ್ಯಾಂಕ್ ಡಿಪಾಜಿಟ್ಟು	–	32,211	3	5
ತ್ರಿಫ್ಟ್ ಡಿಪಾಜಿಟ್ಟು	–	38,085	15	8

ಈ ಬ್ಯಾಂಕಿನಿಂದ ಕೊಡಗು ದೇಶದ ಸಹಕಾರಿ ಸಂಘಗಳಿಗೇನೇ ಹೆಚ್ಚಾಗಿ ಸಾಲ ಕೊಡತಕ್ಕದ್ದು.

ಒಂದು ಮತ್ತು ಎರಡು ವರ್ಷಗಳ ಅವಧಿಯ ಠೇವಣಾತಿಗಳಿಗೆ ಶೇಕಡ ವಾರ್ಷಿಕ 3½ ದರದಲ್ಲಿಯೂ, ಮೂರು ಅಥವ ಹೆಚ್ಚಿನ ಅವಧಿಯ ಠೇವಣಾತಿಗಳಿಗೆ ಶೇಕಡ ವಾರ್ಷಿಕ 4 ರ ದರದಲ್ಲಿಯೂ ತಾ. 1-9-1937ರಿಂದ ಬಡ್ಡಿ ದೊರೆಯುತ್ತೆ.

ತಾ. 1-10-1936ರಿಂದ ಬ್ಯಾಂಕಿನಲ್ಲಿ ಕರೆಂಟ್ ಸೇವಿಂಗ್ಸ್ ಬ್ಯಾಂಕ್ ಲೆಕ್ಕವೂ ಮತ್ತು ತ್ರಿಫ್ಟ್ ಡಿಪಾಜಿಟ್ ಲೆಕ್ಕವೂ ತೆರೆಯಲ್ಪಟ್ಟಿವೆ. ಇವರ ವಿಷಯ ಹೆಚ್ಚಿನ ವಿವರಗಳಿಗೆ ಬ್ಯಾಂಕು ಆಫೀಸಿಗೆ ಬರೆದುಕೊಂಡಲ್ಲಿ ವಿವರವಾಗಿ ಬರೆದು ತಿಳಿಸಲಾಗುವುದು.

ಪರ್ಯವೇಕ್ಷಕ ಕೋ-ಆಪರೇಟಿವ್ ರಿಜಿಸ್ಟ್ರಾರರು ಲೆಕ್ಕ ಆಡಿಟ್ ಮಾಡುತ್ತಾರೆ.

ಪ್ರೆಸಿಡೆಂಟ್:–ಪಂದ್ಯಂಡ ಐ. ಬೆಳ್ಯಪ್ಪನವರು ಎಂ. ಎಲ್. ಸಿ.
ಟ್ರೆಜರರ್:—ಮಾಚಿಮಾಡ ಎ. ಚಂಗಪ್ಪನವರು ಬಿ. ಎ., ಎಲ್. ಟಿ.
ಸೆಕ್ರೆಟರಿ:—ಪುಲಿಯಂಡ ಜಿ. ಪಯ್ಯಪ್ಪನವರು ಪಿ. ಎ., ಬಿ. ಎಲ್.

ದಿ ಎಗ್ರಿಕಲ್ಚರಲ್ ಎಂಡ್ ಇಂಡಸ್ಟ್ರಿಯಲ್ ಬ್ಯಾಂಕ್ ಲಿಮಿಟೆಡ್.

(ಬ್ರಿಟಿಷ್ ಹಿಂದುಸ್ಥಾನದಲ್ಲಿ ಸ್ಥಾಪಿತವಾದದ್ದು.)

ಹೆಡ್ ಆಫೀಸು:—"ಲಕ್ಷ್ಮೀನಿವಾಸ್" ಬಿಲ್ಡಿಂಗ್ಸ್, ಕುಂದಾಪುರ, ದ. ಕ.

ಪ್ರಕಟಣೆ.

ಕಷ್ಟಪಟ್ಟು ಸಂಪಾದಿಸಿದ ಹಣವನ್ನು ಠೇವಣಾತಿ ಇಟ್ಟು ಈ ಚಿನ್ನದಂತ ಸುಸಂದರ್ಭವನ್ನು ಉಪಯೋಗಿಸಿಕೊಳ್ಳಿರಿ.

ಅತ್ಯಧಿಕ ಲಾಭ! **ಇಚ್ಛೈಸಿದಾಗ ಹಣ ಹಿಂದಕ್ಕೆ!**

ದಿ ಎಗ್ರಿಕಲ್ಚರಲ್ ಎಂಡ್ ಇಂಡಸ್ಟ್ರಿಯಲ್ ಬ್ಯಾಂಕಿನ

ಶೇಕಡ 6ರ 5 ವರ್ಷಗಳ "ಕೊರೊನೇಷನ್ ಕ್ಯಾಶ್ ಸರ್ಟಿಫಿಕೇಟುಗಳು" ರೂಪಾಯಿ 8, 20, 40, 80; 200, 400 ಮತ್ತು 800 ಗಳ ನಾನಾವರ್ಗದ ಠೇವಣಾತಿಗಳಿಗೆ ವೈಯಕ್ತಿಕವಾದ ರೂ. 10, 25, 50, 100, 250, 500 ಮತ್ತು 1000 ಗಳು.

ದಯಮಾಡಿ ಕೊಡುವ ತಾರೀಕನ್ನು ಗಮನಿಸಿರಿ. ಹೆಚ್ಚಿನ ಮಾಹಿತಿಯನ್ನು ನಮ್ಮ ಯಾವದಾದರೊಂದು, ಕುಂದಾಪುರ, ಕುಮಟಾ, ಗೋಕರ್ಣ, ಬೈಂದೂರು, ವೀರರಾಜೇಂದ್ರಪೇಟೆ, ಸೋಮವಾರಪೇಟೆ, ಕೋಟೇಶ್ವರ, ಶಿವಮೊಗ್ಗಾ, ತರೀಕೆರೆ ಮತ್ತು ಕಮೂರು ಶಾಖೆಗಳಿಂದ ತಿಳಿದುಕೊಳ್ಳಬಹುದು.

52-4

The Agricultural & Industrial Bank Ltd

"ZANDU"

ಝಂಡೂ ರಸವನ | **ಝಂಡೂರಸವನ**

ದ್ರಾಕ್ಷಾಸವ
ಮತ್ತು
ಚ್ಯವನಪ್ರಾಶ

ಇದು ಶಕ್ತಿವರ್ಧಕ ಮತ್ತು ಶ್ವಾಸ ರೋಗಗಳ ಕಾಯಿಲೆಗಳಿಗೆ ಅತ್ಯುತ್ತಮವಾದದ್ದು. ಕ್ಷಯದ ಪ್ರಾರಂಭಾವಸ್ಥೆಯಲ್ಲಿ ದಿವ್ಯವಾದ ಔಷಧ.

ಕೇಸರಿ ಜೀವನ್

ಇದು ಎಲ್ಲಾ ತರದ ಅಶಕ್ತತೆಗೆ ದಿವ್ಯವಾದ ಔಷಧ.

ಝಂಡೂ ಅಯೋಡೈಸ್ಡ್
ಸೇರಸಪರಿಲ್ಲಾ

ಇದು ರಕ್ತಶೋಧಕ ಮತ್ತು ಸ್ತ್ರೀ ಸಂಬಂಧದ ಮೇಹ ವಿಕಾರಗಳಲ್ಲಿ ದಿವ್ಯ ಔಷಧ.

ಝಂಡೂ ಫ್ಲೋಜಿಸ್ಟೈನ್.

ಇದು ನ್ಯುಮೋನಿಯಾ, ಶೋಥ, ಬೆಂಕಿಯಿಂದ ಉಂಟಾದ ಗಾಯ, ವಿದ್ರಧಿ (Boils) ಗಳಲ್ಲಿ ಅತ್ಯುಪಯುಕ್ತವಾದದ್ದು.

ಕೆಟಲಾಗಿಗೆ ಬರೆಯಿರಿ, ಮುಫತ್ತಾಗಿ ಕಳುಹಿಸಲಾಗುತ್ತೆ.

ಮಡಿಕೇರಿ ಸ್ಟೋಕಿಸ್ಟ್—
ಡಾ. ಬಿ. ಕೆ. ನಂಜುಂಡೇಶ್ವರ, ಎಲ್. ಎ. ಎಂ. ಎಸ್
(52-16) ಮತ್ತು ಆಯುರ್ವೇದ ವಿದ್ವಾನ್

ವೀರಾಜಪೇಟೆಯ ಏಜೆಂಟರು–ಕೆ. ಕೃಷ್ಣರಾವ್, ವೀರಾಜಪೇಟೆ. (ದ. ಕೊಡಗು.)

'ಕೊಡಗು' ಪತ್ರಿಕೆಗೆ ಚಂದಾದಾರರಾಗಿರಿ!

PILESOL

ಪೈಲ್ ಸಾಲ್

(OINTMENT FOR EXTERNAL USE)

PILESOL:- ಮೂಲವ್ಯಾಧಿಗೆ (ಹೊರಗೂ ಒಳಗೂ) ದಿವ್ಯೌಷಧಿ.

ಆಪರೇಷನ್ ಇಲ್ಲದೆ ಗುಣವಾಗುತ್ತೆ. ಬ್ರಿಟಿಷ್ ಗವರ್ನಮೆಂಟಿನವರಿಂದ ಇಂಡಿಯಾದಲ್ಲಿಯೂ, ಪರದೇಶದಲ್ಲಿಯೂ ರಿಜಿಸ್ಟರ್ ಮಾಡಲ್ಪಟ್ಟಿದೆ.

ರಕ್ತ ಕೀವು ಬಿದ್ದರೂ ಅತಿ ಶೀಘ್ರವಾಗಿ ಗುಣವಾಗುತ್ತದೆ.

ಪೈಲ್ ಸಾಲ್ ತಣ್ಣಗಿರುತ್ತದೆ. ಜಾರಿದ ನರಗಳು ಯಥಾಸ್ಥಾನಕ್ಕೆ ಬರುತ್ತವೆ. ಪ್ರಖ್ಯಾತಿ ಹೊಂದಿದ ಅನೇಕ ಡಾಕ್ಟರುಗಳಿಂದ ಒಳ್ಳೆಯ ಹೆಸರು ಪಡೆದಿದೆ. ಈ ವ್ಯಾಧಿಯಿಂದ ಮಲವಿಸರ್ಜನೆಯು ಅಕ್ರಮವಾಗುವುದನ್ನು ಪೈಲ್ ಸಾಲ್ ಗುಣಪಡಿಸುತ್ತದೆ.

ಯೋಗ್ಯತಾಪತ್ರಗಳು ನಾನಾ ದೇಶಗಳಿಂದ ನಮಗೆ ಬಂದಿರುತ್ತವೆ.

ಈಗಿನ ಒಂದು ಸರ್ಟಿಫಿಕೇಟು.

ನಾಪೋಕ್ಲು,

ಅಯ್ಯಾ,

ನಿಮ್ಮ ಪೈಲ್ ಸಾಲ್ ನನ್ನೊಬ್ಬ ರೋಗಿಗೆ ತುಂಬಾ ಸಹಾಯಮಾಡಿದೆ. ಆದ್ದರಿಂದ ದಯವಿಟ್ಟು ಒಡನೆ ಮತ್ತೊಂದು ಸೀಸೆಯನ್ನು ವಿ. ಪಿ. ಮೂಲಕ ಕಳುಹಿಸಿಕೊಡಿ. ಮತ್ತೊಬ್ಬನಿಗೆ ಇದರ ಪ್ರಯೋಗವನ್ನು ಮಾಡಬೇಕಾಗಿದೆ.

(*Sd*) **ಎನ್. ಯಂ. ದೇವಯ್ಯ,**
ಸಬ್-ಅಸಿಸ್ಟೆಂಟ್ ಸರ್ಜನ್,
20 ನಾಪೋಕ್ಲು, **ಕೊಡಗು.**

ಉಪಯೋಗಿಸುವ ವಿಧಾನ ಔಷಧದ ಜೊತೆಯಲ್ಲಿ ಕಳುಹಿಸಲಾಗುತ್ತೆ.

ಕ್ರಯ:—½ ಔನ್ಸಿಗೆ ರೂ. 5-0-0. ¼ ಔನ್ಸಿಗೆ ರೂ. 2-12-0. **ಪೋಸ್ಟೇಜು ಪ್ರತ್ಯೇಕ.** ಮಾದರಿ ಸೀಸೆಗೆ ರೂ. 1-0-0. ಮಣಿಯಾರ್ಡರ್ ಮೂಲಕವಾಗಲೀ ಪೋಸ್ಟಲ್ ಆರ್ಡರ್ ಮೂಲಕವಾಗಲೀ ಹಣ ಕಳುಹಿಸಬಹುದು.

ಬೇಕಾದವರು ಈ ವಿಳಾಸಕ್ಕೆ ಬರೆದು ತರಿಸಿಕೊಳ್ಳಬಹುದು.

ಕ್ಯೂರಾಲ್ ಲೇಬೋರೇಟರಿ (ರಿಜಿಸ್ಟರ್ಡ್), ಬೆಂಗಳೂರು ಸಿಟಿ.

Reg No. M. 1380

ಕೊಡಗು

ಪ್ರತಿಶುಕ್ರವಾರ ಪ್ರಕಟಿಸಲ್ಪಡುವುದು.

ಸಂಪಾದಕ:— ಪಿ. ಐ. ಬೆಳ್ಯಪ್ಪ.

ವಾರ್ಷಿಕ ಚಂದಾ ರೂ. ೩-೮-೦

ತಾ. ೨೪—೬—೧೯೩೮.

ಸಂಪುಟ ೧೮] [ಸಂಚಿಕೆ ೪

ನಿಮ್ಮ

ಮುದ್ರಣ ಕೆಲಸಗಳನ್ನು

" ಕೊಡಗು "

ಪ್ರೆಸ್ಸಿನಲ್ಲೇ

ಮುದ್ರಿಸಿರಿ.

Travancore National & Quilon Bank, Ltd.

(INCORPORATED IN TRAVANCORE—1912.)

(Liability of Members limited,)

Central Office: MADRAS.

With a country wide net work of seventy eight offices make service promt and efficient.

Working Capital over FOUR CRORES.

Open a HOME SAVING account and resolve to save something and invest a lot every year in 3 YEAR 4% CASH CERTIFICATES

SAVINGS BANK:—accounts opened for sums above Rs. 5/- and interest allowed on daily balances Withdrawls by cheques-Maximum amount withdrawable per week Rs. 250/-

FIXED DEPOSITS:—accepted for periods from 6 to 24 months at rates which may be ascertained on application.

CURRENT ACCOUNTS:—opened for sums above Rs. 100/- and interest allowed on daily credit balances from Rs. 100 - to Rs. 20,000/-

All other kinds of Banking business transacted.

For terms please apply to the central Office or to any of the branches.

K. S. Ramanujam,
General Manager.

52-38

K. M. Eapen,
Joint Managing Director.

C. P. Mathen,
Managing Director.

THE CANARA BANKING CORPORATION, UDIPI, Ltd.

(Incorporated in British India.)

Estd. 1906.

BRANCHES:

1. Byndoor,
2. Coondapoor.
3. Erode,
4. Madras,
5. Mangalore, Car Street,
6. Mangalore, Bunder,
7. Malpe,
8. Mercara,
9. Mettupalayam,
10. Mysore,
11. Sagar,
12. Saklaspur.
13. Salem,
14. Shimoga,
15. Shirva,
16. Tellicherry,
17. Thirthahalli,
18. Virarajendrapet,
19. Vellore,
20. Udipi.

ANNOUNCEMENT.

A Branch of the CORPORATION will be opened at ARNI (N. Arcot Dt.) shortly.

TOTAL RESOURCES EXCEED Rs. 62 LAKHS.

Udipi,
20th June 1938.

52 29

V. K. Kamat, B. A., LL. B.,
Ag. Manager.

ಸದ್ವೈದ್ಯ ಶಾಲಾ, ನಂಜನಗೂಡು.

ದಕ್ಷಿಣ ಭಾರತದ
ಪ್ರಸಿದ್ಧ ಆಯುರ್ವೇದೀಯೌಷಧಗಳ ದವಾಖಾನೆ.

ಜೀವರತ್ನಗಳು.

ಶ್ರೀಕರ ಕಸ್ತೂರಿ ಮಾತ್ರೆ.

ಅಮೋಘ ಪ್ರವಾಸನೆಯುಳ್ಳ ಈ ಮಾತ್ರೆಗಳು ನಿತ್ಯಾರೋಗ್ಯ ಕಾಪಾಡುವುದಕ್ಕೂ, ಮಕ್ಕಳ ಕೆಮ್ಮು, ನೆಗಡಿ, ಜ್ವರ, ಪಕ್ಕೆಶೂಲೆಗಳಿಗೂ ಅಮೃತ. ಬೆಲೆ 0 4 0. 0 2 0

ಶ್ರೀಕರ ಬಾಲಸಂಜೀವಿನಿ

ಮಕ್ಕಳ ಸುಖಭೇದಿ, ಅಜೀರ್ಣ, ವಾಯು, ಜ್ವರಗಳಿಗೆ. ಬೆಲೆ 0-4-0

ನಮ್ಮ ರಿಜಿಸ್ಟರ್ಡ್

ನಂಜನಗೂಡು ಟೂತ್ ಪೌಡರನ್ನು

ಉಪಯೋಗಿಸಿ ಅನುಕರಣಗಳಿಗೆ ಮೋಸಹೋಗಬೇಡಿರಿ.

ಜ್ವರಕೇಸರಿ

ಎಲ್ಲಾ ವಿಧವಾದ ಜ್ವರಗಳನ್ನು ಜಾಗ್ರತೆ ಗುಣಮಾಡುವ ಅಮೃತ ಶಕ್ತಿಯುಳ್ಳ ಮಾತ್ರೆ. ಬೆಲೆ 0-8-0, 0-4-0.

ಸುಕುಮಾರತೈಲ

11

ಬಿಸಿಲು ಹೆಚ್ಚಿದ ಹಾಗೆಲ್ಲಾ ಉಂಟಾಗುವ ತಲೆ ನೋವು, ಒತ್ತರೆ ನೋವು, ತಲೆ ತಿರುಗುವಿಕೆ ಮುಂತಾದ ಸಮಸ್ತ ನೇತ್ರ, ಶಿರೋವ್ಯಾಧಿಗಳಿಗೂ ಸಂಜೀವನ. ಬೆಲೆ 1-0 0

ಪ್ರೊಪ್ರೈಟರ್—ಭಿಷಗ್ರತ್ನ ಆಯುರ್ವೇದ ವಿದ್ವಾನ್, ಬಿ. ವಿ ಪಂಡಿತ್.

ಉತ್ತಮ ಪ್ರಚಾರ! ಜ್ಞಾನಭಂಡಾರ!!

ವ್ಯಾಪಾರಸ್ಥರೇ

ನಿಮ್ಮ ಮಾಲುಗಳಿಗೆ ಗಿರಾಕಿ ಬೇಕೇ?

ಹಾಗಾದರೆ

ಕೊಡಗು ಜಿಲ್ಲೆಯ ಪ್ರತಿ ಹಳ್ಳಿಗಳಲ್ಲಿಯೂ ಮತ್ತು ಕರ್ನಾಟಕದ ಪ್ರಾಂತ್ಯಗಳಲ್ಲಿಯೂ ಪ್ರಚಾರವಿರುವ

"ಕೊಡಗು"

ವಾರ ಪತ್ರಿಕೆಯಲ್ಲಿ ಜಾಹೀರಾತುಗಳನ್ನು ಕೊಟ್ಟು ಪ್ರಯೋಜನ ಪಡೆಯಿರಿ.

ಜಾಹಿರಾತಿನ ದರಗಳು.

ಕಾಲ.	1 ಪುಟಕ್ಕೆ.	1 ಕಲಮಿಗೆ.	½ ಕಲಮಿಗೆ.	¼ ಕಲಮಿಗೆ
1 ವರ್ಷಕ್ಕೆ—	ರೂ. 180.	ರೂ. 55.	ರೂ. 35.	ರೂ. 22
6 ತಿಂಗಳಿಗೆ—	,, 100.	,, 35.	,, 22.	,, 13
3 ತಿಂಗಳಿಗೆ—	,, 60.	,, 20.	,, 13.	,, 8
1 ತಿಂಗಳಿಗೆ—	,, 25	,, 10	,, 6.	,, 4

ನಿರ್ಭಯವಾದ ಟೀಕೆ ಟಿಪ್ಪಣಿಗಳು—ಉದಾತ್ತವಾದ ಲೇಖನಗಳು—
ವಿವಿಧ ಸಮಾಚಾರ ಸಂಗ್ರಹಗಳು ಇರುವ
'ಕೊಡಗು' ವಾರ ಪತ್ರಿಕೆಗೆ

ನೀವೇಕೆ ಚಂದಾದಾರರಾಗಬಾರದು?

ನಿಮ್ಮ ಕರ್ತವ್ಯ.

ಪ್ರತಿಯೊಬ್ಬ ಮನುಷ್ಯನು ವಿವಾಹಿತನಿರಲಿ, ಅವಿವಾಹಿತನಿರಲಿ, ಧನವಂತನಿರಲಿ, ಧನಹೀನನಿರಲಿ, ಆತನ ರಕ್ಷಣೆಗೊಳಪಟ್ಟ ಕೆಲವರಿದ್ದೇ ಇರುವರು. ಈತನ ಮರಣಾನಂತರವೂ ಅಂಥವರು ಸುಖಿಗಳಾಗಿರುವಂತೆ ದಾರಿ ತೋರಿಸಿ ಕೊಡುವದು ಇವನ ಆದ್ಯ ಕರ್ತವ್ಯ.

ಇಂಥಾ ನಿಮ್ಮ ಕರ್ತವ್ಯ ಸಾಧನೆಗೆ "ಓರಿಯಂಟಲ್" ಸಹಕಾರಿ.



(ಓರಿಯಂಟಲ್ ಬಿಲ್ಡಿಂಗ್ಸ್, ಸೌತ್ ಪರೇಡ್ ಬೆಂಗಳೂರು)

64 ವರ್ಷಗಳಿಂದಲೂ "ಓರಿಯಂಟಲ್ ಪೋಲಿಸಿಗಳು" ಸಾವಿರಾರು ಅನಾಥ ಕುಟುಂಬಗಳನ್ನು ಅವುಗಳ ಕಷ್ಟದಿಂದ ಉದ್ಧರಿಸಿವೆ.

ಕ್ರಮೇಣ ಪ್ರತಿಯೊಬ್ಬನೂ ವಿಮಾ ಮಾಡಲಶಕ್ತನಾಗಬಹುದಾದ್ದರಿಂದ ನಿಮ್ಮ ಕರ್ತವ್ಯವನ್ನು ಮಾಡಲು ತಪ್ಪಬೇಡಿರಿ.

"ಓರಿಯಂಟಲ್"ನಲ್ಲಿ ವಿಮಾ ಮಾಡಿ, ನಿಮ್ಮ ರಕ್ಷಣೆಯಲ್ಲಿರುವವರ ಜೀವನವನ್ನು ಭದ್ರಪಡಿಸಿರಿ.

ಹೆಚ್ಚಿನ ಮಾಹಿತಿಗೆ ಕೆಳಗಿನ ಅಡ್ರೆಸ್ಸಿಗೆ ಬರೆಯಿರಿ—

ಓರಿಯಂಟಲ್

ಸರಕಾರದ ಭದ್ರತೆಯುಳ್ಳ ಜೀವ ವಿಮೆ ಕಂಪನಿ.

[ಸ್ಥಾಪಿತವಾದದ್ದು 1874.] ಹೆಡ್ ಆಫೀಸು—ಬೊಂಬಾಯಿ.

ಪ್ರತಿನಿಧಿಗಳೂ, ಶಾಖೆಗಳೂ ಇಂಡಿಯಾದಲ್ಲೆಲ್ಲಾ ಇರುವರು.

ಮೆ. ಎಂ. ಹೆಚ್. ಕೃಷ್ಣಮೂರ್ತಿ,
(ಇನ್ಸ್‌ಪೆಕ್ಟರ್, ಮೈಸೂರು.)

ಮೆ. ಎಲ್. ಎಫ್. ಸಿ. ವಾಸ್,
(ಇನ್ಸ್‌ಪೆಕ್ಟರ್, ಮಡಿಕೇರಿ.)

62-24

ಮೆ. ಡಿ. ಶೇಷಾದ್ರಿ, ಅ. ಇನ್ಸ್‌ಪೆಕ್ಟರು, ಶಿವಮೊಗ್ಗಾ.

Printed & Published by P. I. Belliappa, at 'Kodagu' Press Mercara for 'Kodagu' Ltd.

ಇಂಡಿಯೊದ ಪ್ರಮುಖ ಟಾನಿಕ್

ಆತಂಕನಿಗ್ರಹ

— ಮಾತ್ರೆಗಳು —

ಮಲಬದ್ಧತೆ, ಮನೋದೌರ್ಬಲ್ಯ, ನರಗಳ ಹೀನತೆ ಇವನ್ನು ಗುಣಪಡಿಸಿ, ಆರೋಗ್ಯಕಾರಿಯಾದ ಹಸಿವು ಹುಟ್ಟಿಸಿ ರಕ್ತಶುದ್ಧಿ ಮಾಡುತ್ತವೆ.

ಈ ಮಾತ್ರೆಗಳು ಉತ್ತಮ ಬಲವರ್ಧಕವಾಗಿರುತ್ತವೆ. ಲಕ್ಷಾಂತರ ಜನರಿದನ್ನು ಉಪಯೋಗಿಸುತ್ತಿರುವರು. ಒಂದು ಡಬ್ಬಿ ಉಪಯೋಗಿಸಿ ನೋಡಿ. ಮೂವತ್ತೆರಡು ಮಾತ್ರೆಗಳ ಡಬ್ಬಿ ಒಂದಕ್ಕೆ ಒಂದು ರೂಪಾಯಿ ಮಾತ್ರ.

ಹೆಚ್ಚಿನ ವಿವರಕ್ಕೆ ಧರ್ಮಾರ್ಥ ಹಾಗೂ ಟಪ್ಪಾಲು ಹಾಸಲು ವಿನಹ ಕಳುಹಿಸಲ್ಪಡುವ ನಮ್ಮ

ಕಾಮಶಾಸ್ತ್ರವನ್ನೋದಿರಿ

ಆತಂಕ ನಿಗ್ರಹ ಫಾರ್ಮಸಿ, ಚಿಕ್ಕಪೇಟೆ ಚೌಕ,

52–53 ಬೆಂಗಳೂರು ಸಿಟಿ.

---

೪೨ ವರ್ಷಗಳಿಂದ ಅನುಭವಪಟ್ಟು ಪ್ರಖ್ಯಾತಿ ಹೊಂದಿದ

ಕರ್ಕೇಕಂಪನಿ

ಸುಪ್ರಸಿದ್ಧ ಜ್ವರದ ಗುಳಿಗೆ

ಇದು ಛಳಿಜ್ವರ, ಚಾತುರ್ಥಿಕ ಜ್ವರ, ದಿನಬಿಟ್ಟು ದಿನ ಬರುವ ಜ್ವರ, ಮಲೇರಿಯಾ ಜ್ವರ ಇತ್ಯಾದಿ ನಾನಾತರದ ಜ್ವರಗಳ ಮೇಲೆ ತತ್ಕ್ಷಣವೇ ಗುಣ ಸಂಜೀವಿನಿಯಂತಿದೆ! ಬಾಟ್ಲಿಗೆ 1 ರೂ 4 ಬಾಟ್ಲಿಗೆ 3 ರೂ. 12 ಬಾಟ್ಲಿಗೆ 8 ರೂ. ವಿ. ಪಿ. ಖರ್ಚು ಬೇರೆ.

ಗಣೇಶ ರಾಮಚಂದ್ರ ಕರ್ಕೇ.

ಮತ್ತು ಕಂಪನಿ,

(52–29) ಗಿರಗಾಂವ, ಮುಂಬಯಿ ೪,

ನೋಟೀಸು.

ಈ ಕೆಳಗಿನ ಮಹಾಶಯರ 'ಕೊಡಗು' ಪತ್ರಿಕೆಯ ಚಂದಾ ಹಣವನ್ನು ವಸೂಲು ಮಾಡಲು ಒಪ್ಪಿಕೊಂಡದ್ದರಿಂದ ಅವರನ್ನು ಏಜೆಂಟರುಗಳಾಗಿ ನೇಮಿಸಿ ಅವರಿಗೆ ನಮ್ಮ ರಶೀತಿ ಪುಸ್ತಕಗಳು ಕೊಡಲಾಗಿವೆ. ಕೆಳಗಿನ ಸಬ್ ಏಜೆಂಟರುಗಳಿಗೆ ಏಜೆಂಟರವರ ಜವಾಬ್ದಾರಿಯ ಮೇಲೆ ರಶೀತಿ ಪುಸ್ತಕಗಳು ಕೊಡಲಾಗಿವೆ. ದಯವಿಟ್ಟು ಚಂದಾದಾರರೆಲ್ಲರೂ ಅವರಿಗೆ ಅನುಕೂಲವಿರುವ ಸ್ಥಳದಲ್ಲಿ ತಮ್ಮ ಚಂದಾವನ್ನು ಪಾವತಿ ಮಾಡಿ ರಶೀತಿ ಪಡೆಯಬೇಕಾಗಿ ಕೋರಿದೆ.

ಕೊಡಗಿನ ಎಲ್ಲಾ ಭಾಗಗಳಿಗೆ.

ಮ. ಮುಕ್ಕಾಟಿರ ಕೋಯಪ್ಪನವರು.

ಚಾಳಿಯಂಡ ಕರ್ತಮ್ಮನವರು

ಸಬ್ ಏಜೆಂಟರುಗಳು.

ವೀರಾಜಪೇಟೆ—ಮ, ಮಂಡೇಪಂಡ ಸೋಮಯ್ಯನವರು,
ಬಿಟ್ಟಂಗಾಲ—ಸಿದ್ದಾಪುರ— ಮ. ಐನಂಡ ಪೊಂದಪ್ಪನವರು
ಪೊನ್ನಂಪೇಟೆನಾಡು—ಮ ಪಿ ಕೆ ಮುದ್ದಪ್ಪಯ್ಯನವರು.
ಹುದಿಕೇರಿ—ಮ. ಅಜ್ಜಮಾಡ ಮಾಚಪ್ಪನವರು ಮತ್ತು ಮ. ಕೆ ನಾಣಯ್ಯನವರು.
ಸುಂಟಿಕೊಪ್ಪ—ಮ ಅಪ್ಪಚೆಟ್ಟೋಳಂಡ ಪೂಣಚ್ಚನವರು.
ಸೋಮವಾರಪೇಟೆ—ಕೆ ಪೊಗಪ್ಪನವರು.
ನಾಪೋಕ್ಲು—ಮ. ಚೆಪ್ಪುಡಿರ ಯಂ ಪೂಣಚ್ಚನವರು.
(ನಾಪೋಕ್ಲು ಸ್ಟೋರ್ಸ್)

ಸೂಚನೆ.— ಪ್ರಿಂಟೆಡ್ ರಶೀತಿ ಹೊಂದಿಕೊಳ್ಳದೆ ಯಾರೂ ಹಣ ಕೊಡಬಾರದಾಗಿ ಈ ಮೂಲಕ ತಿಳಿಸಲಾಗಿದೆ.

ಮ್ಯಾನೇಜರ್,

'ಕೊಡಗು' ಲಿಮಿಟೆಡ್, ಮಡಿಕೇರಿ.

The Bombay Mutual Life Assurance Society Ltd.,

Head Office:-BOMBAY. Estd. 1871.

ಬೊಂಬೇ ಮ್ಯೂಚುವಲ್.

1871ರಿಂದಲೂ ಪ್ರತಿ ವರ್ಷ ಬಲಗೊಳ್ಳುತ್ತಿದೆ.

ಈ ವರ್ಷ ಇದು ಅನೇಕವಾದ ಕೆಲಸ ಕಾರ್ಯಗಳನ್ನು ಮಾಡಿದೆ. ಜನಾದರಣೆಯನ್ನೂ, ನಂಬಿಕೆಯನ್ನೂ ಗಳಿಸಿಕೊಂಡಿದೆ. ಕಳೆದ 66 ವರ್ಷಗಳಿಂದಲೂ ಮುಂದುವರಿದು ಈಗಿನ ನವೀನ ತರದ ಸುಧಾರಣೆಗಳನ್ನೊಳಗೊಂಡಿರುತ್ತದೆ.

1937ರಲ್ಲಿ ಮಾಡಿದ ಉದ್ಯೋಗ	ರೂ.	2,53,15,500.
1937ರಲ್ಲಿ ಪೂರ್ತಿಯಾದ ಉದ್ಯೋಗ	ರೂ.	2,02,02,000.

ಎಂಡೋಮೆಂಟ್ ವಿಮಾ ಪತ್ರದ ಮೇರೆ 1000ಕ್ಕೆ ವರ್ಷಕ್ಕೆ 21ರಂತೆಯೂ, ಹೋಲ್ ಲೈಫ್ ವಿಮಾ ಖರಾರುಗಳಿಗೆ 26ರಂತೆಯೂ ಬೋನಸು ಹಂಚಲಾಗಿದೆ.

ದಿ ಬೊಂಬೇ ಮ್ಯೂಚುವಲ್ ಲೈಫ್ ಅಶ್ಯೂರೆನ್ಸ್ ಸೊಸೈಟಿ ಲಿಮಿಟೆಡ್,

12, ಸೌತ್ ಪೆರೇಡ್, ಬೆಂಗಳೂರು.

52–15

ಚಿಕ್ಕ ಮಕ್ಕಳ ಮುಖ ಕಾಂತಿಗೆ

ಎಳೇ ಮಕ್ಕಳ ಸ್ನಾನಕ್ಕೆ ಮೈಸೂರು ಗಂಧದ ಸಾಬೂನು ಅತ್ಯುತ್ಕೃಷ್ಟವಾದದ್ದು. ಕೆನೆಯಂತಿರುವ ಅದರ ಉತ್ತಮ ನೊರೆಯು ಸೂಕ್ಷ್ಮವಾದ ಚರ್ಮಕ್ಕೆ ಏನೊಂದು ಹಾನಿಯನ್ನುಂಟುಮಾಡದೆ ಕೊಳೆಯನ್ನೆಲ್ಲಾ ತೆಗೆದುಹಾಕುತ್ತದೆ. ಚಿಕ್ಕ ಮಕ್ಕಳಿಗೆ ಸುವಾಸನೆಯುಳ್ಳ ಈ ಗಂಧದ ಸಾಬೂನಿನಲ್ಲಿ ಸ್ನಾನಮಾಡುವುದೆಂದರೆ ಅತೀ ಪ್ರೀತಿ. ಇಂದೇ ಒಂದು ಸಾಬೂನನ್ನು ಕೊಂಡುಕೊಳ್ಳಿರಿ.

ಮೈಸೂರು ಗಂಧದ ಸಾಬೂನು

ಎಲ್ಲಾ ಅಂಗಡಿಗಳಲ್ಲೂ ಸಿಕ್ಕುತ್ತವೆ.

ಗವರ್ನಮೆಂಟ್ ಸೋಪ್ ಫ್ಯಾಕ್ಟರಿ, ಬೆಂಗಳೂರು.

52–15)

ಕೊಡಗು ಜಮೀನ್ದಾರರ ಸಂಘದ

ಮಹಾಸಭೆಯ ಸ್ವಾಗತಾಧ್ಯಕ್ಷರಾಗಿದ್ದ

ಮಿ|| ಕಂಗಾಣಂಡ ಚೆಟ್ಟಪ್ಪನವರ ಭಾಷಣ.

ಕೊಡಗು ಜಮೀನ್ದಾರರ ಸಂಘದ ೨೫ನೇ ವಾರ್ಷಿಕ ಮಹಾ ಸಭೆಗೆ ಸ್ವಾಗತ ಕಮಿಟಿಯ ಪರವಾಗಿ ನಿಮಗೆಲ್ಲರಿಗೂ ಸ್ವಾಗತವನ್ನೀಯಲು ನಾನು ತುಂಬಾ ಹರ್ಷಿತನಾಗಿದ್ದೇನೆ. ಈ ಸಂಘವೇ ಕೊಡಗಿನ ಅತೀ ಪುರಾತನ ರಾಜಕೀಯ ಸಂಸ್ಥೆಯಾಗಿದೆ. ಈ ಸಂಸ್ಥೆಯು ಕಳೆದ ೨೫ ವರ್ಷಗಳ ಹಿಂದೆ ವ್ಯವಸಾಯಗಾರರ ಅಭಿವೃದ್ಧಿಯನ್ನು ಸಾಧಿಸಲು ಸ್ಥಾಪಿಸಲ್ಪಟ್ಟದ್ದಾಗಿದೆ. ಈ ವರ್ಷದ ಅಧಿವೇಶನವನ್ನು ಈ ನಾಡಿನಲ್ಲಿ ಜರುಗಿಸಲು ಅನೇಕ ದಿನಗಳ ಹಿಂದೆಯೇ ಈ ನಾಡಿನವರು ಬಯಸಿದ್ದಾಗ್ಯೂ ಕೂಡ ಡಿಸ್ಟ್ರಿಕ್ಟ್ ಬೋರ್ಡು ಚುನಾವಣೆಯು ಈ ಮಧ್ಯೆ ಬಂದ ಕಾರಣ ಇದಕ್ಕಿಂತಲೂ ಮುಂಚೆ ನಡೆಸಲು ಅನುಕೂಲವಾಗದಿರುವ ಈ ಸಮಯದಲ್ಲಿ ನಡೆಸಬೇಕಾಗಿ ಬಂತು.

ಈ ಸಂಸ್ಥೆಯು ಪ್ರಾರಂಭವಾದಾಗ ಈ ಪ್ರಾಂತ್ಯದ ಜನರು ರಾಜಕೀಯ ವಿಚಾರದಲ್ಲಿ ಎಚ್ಚೆತ್ತಿರಲಿಲ್ಲ. ಆಗಿನ ಆಡಳಿತ ಪದ್ಧತಿಯಿಂದ ತೃಪ್ತರಾಗಿ ಅದರ ಸಹಾಯದಿಂದ ರೈತರ ಏಳಿಗೆಯನ್ನು ಸಾಧಿಸಿಕೊಂಡರೆ ಸಾಕೆಂದು ನಂಬಿದ್ದರು. ಹಿಂದೂದೇಶದ ಇತರ ಭಾಗಗಳ ವಾತಾವರಣವು ಬದಲಾಗುತ್ತಾ ಬಂತು. ಇಲ್ಲಿಯವರು ರಾಜಕೀಯ ವಿಚಾರದ ಯೋಚನೆಗೊಳಗಾದರು. ಆಡಳಿತದ ಅಧಿಕಾರವಿಲ್ಲದೆ ವ್ಯವಸಾಯಗಾರರ ಅಭಿವೃದ್ಧಿಯನ್ನು ಸಾಧಿಸುವುದು ಸಾಧ್ಯವಿಲ್ಲವೆಂದು ತಿಳಿದುಕೊಂಡರು. ಆದ್ದರಿಂದ ಈ ಸಂಘವು ತನ್ನ ಉದ್ದೇಶವನ್ನು ನೆರವೇರಿಸಲು ರಾಜಕೀಯ ಪ್ರಸಂಗಕ್ಕೆ ಕೈ ಹಾಕಬೇಕಾಗಿ ಬಂತು.

ಇದು ಪ್ರಾರಂಭದಲ್ಲಿ ವ್ಯವಸಾಯಗಾರರ ಆರ್ಥಿಕ ಸ್ಥಿತಿಯನ್ನು ಉತ್ತಮಪಡಿಸಲು ಹೊರಟ ಸಂಸ್ಥೆಯಾದರೂ ಕ್ರಮೇಣ ರಾಜಕೀಯ ರಂಗಕ್ಕೆ ಕಾಲಿಕ್ಕಿದ ಕಾರಣ ದೇಶದಲ್ಲಿ ಯಾವುದಾದರೂ ಒಂದು ತರದ ಹಿತವಿರುವವರೆಲ್ಲರೂ ಇದರ ಮೆಂಬರುಗಳಾಗಬಹುದೆಂದು ನಿಬಂಧನೆಗಳಲ್ಲಿ ಬದಲಾವಣೆ ಮಾಡಲ್ಪಟ್ಟಿರುವುದು ಬಹಳ ಯೋಗ್ಯವಾಗಿದೆ. ಇಂದು ಈ ಸಂಸ್ಥೆಯು ಜಾತಿ, ಮತ, ಪಂಗಡಗಳೆಂಬ ಭೇದಭಾವವನ್ನೆಣಿಸದೆ ಇಡೀ ಕೊಡಗಿನ ರಾಜಕೀಯ ಸಂಸ್ಥೆಯಾಗಿದೆ. ಆದ್ದರಿಂದ ದೇಶದ ಮಹಿಳೆಯರೂ, ಮಹನೀಯರೂ ಈ ಸಂಘಕ್ಕೆ ಎಷ್ಟು ಉತ್ತೇಜನ ಕೊಟ್ಟರೂ ಅದು ಸ್ವಲ್ಪವೇ ಎಂದು ನನ್ನ ಭಾವನೆ. ಇಂಥಾ ಪ್ರಮುಖ್ಯ ಸಂಸ್ಥೆಯ ಮಹಾ ಸಭೆಗೆ ದೇಶೀಯರಿಗೆ ಸುಸ್ವಾಗತವನ್ನೀಯುವ ಸೌಭಾಗ್ಯ ಲಭಿಸಿದ ನಾನೇ ಧನ್ಯನು.

ಕೆಲವು ವರ್ಷಗಳ ಹಿಂದೆ ಜನರ ಆರ್ಥಿಕ ಸ್ಥಿತಿಯು ಉತ್ತಮವಾಗಿದ್ದು ಸಾರ್ವಜನಿಕ ಕಾರ್ಯಗಳಿಗೆ ಸುಲಭವಾಗಿ ಧನಸಹಾಯ ದೊರೆಯುತ್ತಿದ್ದಾಗ್ಯೆ ಇಂಥಾ ಸಭೆಗಳಿಗೆ ಬೇಕಾದ ಸೌಕರ್ಯಗಳನ್ನು ಏರ್ಪಡಿಸಿ ಮಹನೀಯರಿಗೆ ಸ್ವಾಗತವನ್ನೀಯುವುದು ಸಂತೋಷದ ಕಾರ್ಯವಾಗಿತ್ತು. ಆದರೆ ಈಗಿನ ಆರ್ಥಿಕ ಮುಗ್ಗಟ್ಟಿನ ಬೇಗೆಯಿಂದ ರೈತರಿಗೆ ಹೊಟ್ಟೆ ಬಟ್ಟೆಗೇ ತೊಂದರೆಯಾಗಿರುವಲ್ಲಿ ಸಾರ್ವಜನಿಕ ಕಾರ್ಯಗಳಿಗೆ ದ್ರವ್ಯ ಸಹಾಯ ದೊರೆಯುವುದು ತಾನೇ ಹೇಗೆ? ಆದ ಕಾರಣ ಈ ದಿವಸದ ಸ್ವಾಗತ ಏರ್ಪಾಡುಗಳಲ್ಲಿ ಏನಾದರೂ ಕುಂದು ಕೊರತೆಗಳಿದ್ದರೆ ಅದನ್ನೆಲ್ಲಾ ಕ್ಷಮಿಸಿ ಈ ಮಹಾ ಸಭೆಯ ಕಾರ್ಯ ಕಲಾಪಗಳನ್ನು ಜಯಪ್ರದವಾಗಿ ನಡೆಸಲು ತಾವೆಲ್ಲರೂ ಒಮ್ಮನಸಿನಿಂದ ಸಹಕರಿಸಬೇಕಾಗಿ ಕೋರುತ್ತೇನೆ.

ನನ್ನ ಭಾಷಣವನ್ನು ಮುಂದುವರಿಸುವ ಮೊದಲು ಪ್ರಪಂಚದ ಈಗಿನ ವಿದ್ಯಮಾನಗಳ ಕಡೆಗೆ ಸ್ವಲ್ಪ ಮಟ್ಟಿಗೆ ನೋಡುವ. ಅತೀ ಪುರಾತನ ದೇಶವಾದ ಚೈನಾವನ್ನು ಜಪಾನ್ ದೇಶವು ಸ್ವಾಧೀನಪಡಿಸಲಿಕ್ಕಾಗಿ ಅನುಸರಿಸುವ ಕ್ರೂರಕೃತ್ಯಗಳನ್ನು ನಡೆಸುತ್ತಿದೆ. ಜರ್ಮನಿ ದೇಶವು, ಏಳನೆ ವರ್ಷಗಳಿಂದಲೂ ಸ್ವತಂತ್ರವಾಗಿದ್ದ ತನ್ನ ನೆರೆ ಪ್ರಾಂತ್ಯವಾದ ಆಸ್ಟ್ರಿಯವನ್ನು ಒಂದೇ ಬೆದರಿಕೆಯಿಂದ ಸ್ವಾಧೀನಪಡಿಸಿಕೊಂಡಿತು. ಇಟಲಿ ಮತ್ತು ಜರ್ಮನಿಯ ಸಹಾಯದಿಂದ ಸ್ಪೈನಿನಲ್ಲಿ ನಡೆಯುತ್ತಿರುವ ಘೋರ ಕೃತ್ಯಗಳನ್ನು ಪತ್ರಿಕೆಗಳ ಮೂಲಕ ನಾವು ಪ್ರತಿದಿನವೂ ನೋಡುತ್ತಿದ್ದೇವೆ. ಜನಾಂಗ ಕೂಟವು ಈ ಅನ್ಯಾಯದ ಕೃತ್ಯಗಳನ್ನು ಪ್ರತಿಭಟಿಸದೆ ತನ್ನ ಮಹತ್ವವನ್ನು ಕಳೆದುಕೊಂಡಿದೆ.

ಇದು ಪ್ರಪಂಚದ ವಿಚಾರ. ಇನ್ನು ನಮ್ಮ ಭಾರತ ಭೂಮಿಯ ವಿಷಯ ಯೋಚಿಸುವ. ಇಂದು ಹಿಂದೂ ದೇಶದ ಇತರ ಭಾಗಗಳಲ್ಲಿ 1935ನೇ ಆಕ್ಟು ಜಾರಿಗೆ ಬಂದಿದೆ. ಅದರ ಫಲಿತಾಂಶವಾಗಿ ಏಳು ಪ್ರಾಂತಗಳಲ್ಲಿ ಕಾಂಗ್ರೆಸ್ ಸರ್ಕಾರ ನಡೆಸುತ್ತಿದೆ. ಬ್ರಿಟಿಷರು ಅದೆಷ್ಟೋ ಬುದ್ಧಿವಂತಿಕೆಯಿಂದ ಬೇಕು ಬೇಕಾದಷ್ಟು ತೊಡಕುಗಳನ್ನು ತಂದೊಡ್ಡಿದ್ದರೂ ಮಹಾತ್ಮ ಗಾಂಧಿಯವರ ಮುಂದಾಳುತನದಿಂದ ಆ ತೊಡಕುಗಳನ್ನು ಪರಿಹರಿಸಿಕೊಂಡು ಮುಂದರಿಯುತ್ತಿರುವುದು ನಮ್ಮ ದಿನ ನಿತ್ಯದ ಅನುಭವವಾಗಿದೆ. ಬ್ರಿಟಿಷರ ರಾಜತಂತ್ರವು ದಿನೇ ದಿನೇ ಮುರಿದು ಬೀಳುತ್ತಿರುವುದು ಗೋಚರವಾಗುತ್ತಿದೆ. ಇದಕ್ಕೆ ಬಿಹಾರ್ ಮತ್ತು ಒರಿಸ್ಸಾ ಮಂತ್ರಿಮಂಡಳದ ರಾಜನಾಮೆಯು ನಿದರ್ಶನವಾಗಿದೆ. ಕಾಂಗ್ರೆಸ್ ಸರ್ಕಾರದಿಂದ ಈಗಾಗಲೇ ಅಲ್ಲಿ ರೈತರಿಗೆ ಲಭಿಸಿರುವ ಪ್ರಯೋಜನವು ಅವರ್ಣನೀಯವಾಗಿದೆ. ಎಲ್ಲಾ ವಿಧದಲ್ಲೂ ಮುಂದರಿದಿರುವ ಮತ್ತು ನಾವಾಗಿ ಬಿಟ್ಟುಕೊಟ್ಟಿರುವ ನಮ್ಮ ಈ ಪ್ರಾಂತಕ್ಕೆ ಯಾವ ಸುಧಾರಣೆಯನ್ನೂ ಕೊಡದೆ ನಮ್ಮನ್ನು ಕಾಡು ನಿವಾಸಿಗಳಿಗೆ ಸಮಾನವಾಗಿ ಇಟ್ಟುಕೊಂಡಿರುವುದು ಬ್ರಿಟಿಷ್ ರಾಜ್ಯಾಡಳಿತಕ್ಕೆ ಹಾಸ್ಯಾಸ್ಪದಕರವಾಗಿದೆ.

ರೈತರಾದ ನಾವು ದಿನ ನಿತ್ಯ ದುಡಿದು ಕಂದಾಯ ಕಾಣಿಕೆಗಳನ್ನು ತೆರುವುದೇ ನಮ್ಮ ಆದ್ಯ ಕರ್ತವ್ಯವೆಂಬುವುದನ್ನು ಬಿಟ್ಟು ಸರಕಾರದೊಡನೆ ಹೋರಾಡಲು ನಾವು ತಯಾರಾಗಬೇಕು. ನಮ್ಮ ಹಿತವನ್ನು ಸಾಧಿಸಲು ನಾವೇ ಕಂಕಣಬದ್ಧರಾಗಬೇಕು. ನಮಗಾಗಿ ಯಾರು ಹೋರಾಡಲಾರರು. ಸರ್ಕಾರದವರು ಒಡನೇ ಪ್ರಾಂತೀಯ ಸ್ವರಾಜ್ಯವನ್ನು ನಮಗೆ ಕೊಡಬೇಕು. ಕೊಡಗಿನಲ್ಲಿ ನಾವು ನವ ಸಂಘಟನಾ ಬಲವನ್ನು ಹೂಡಬೇಕು.

ಡಿಸ್ಟ್ರಿಕ್ಟ್ ಬೋರ್ಡು ಚುನಾವಣೆಯಲ್ಲಿ ಜನರು ತೋರಿಸಿದ ಒಗ್ಗಟ್ಟು ನಮ್ಮ ಉತ್ಸಾಹವನ್ನು ವರ್ಧಿಸಲು ಅಸಾಧಾರಣವು. ಮತದಾರರು ನಮ್ಮ ಬೋರ್ಡಿನಲ್ಲಿರುವ ಹನ್ನೊಂದು ಸ್ಥಳಗಳಿಗೆ ಕಾಂಗ್ರೆಸ್ ಪರವಾಗಿ ನಿಂತಿದ್ದ 11 ಜನರಿಗೆ ಮತಕೊಟ್ಟು ಅವರನ್ನು ಜಯಪ್ರದವಾಗಿ ಮಾಡಿದ್ದು ಇಡೀ ಹಿಂದೂಸ್ಥಾನದ ದೃಷ್ಟಿಯನ್ನು ಎಳೆಯುವ ಒಂದು ಮುಖ್ಯ ವಿಷಯವಾಗಿದೆ. ಇದಕ್ಕಾಗಿ ನಾವು ಮತದಾರರನ್ನೂ, ಸದಸ್ಯರುಗಳನ್ನೂ ಮನಃಪೂರ್ವಕವಾಗಿ ಅಭಿನಂದಿಸಬೇಕಾಗಿದೆ. ಬೋರ್ಡಿನವರು ದೇಶದ ಕಲ್ಯಾಣಕ್ಕಾಗಿ ಕೆಲಸ ಮಾಡಿ ನಮ್ಮ ಬೋರ್ಡನ್ನು ಇಡೀ ಹಿಂದೂಸ್ಥಾನದಲ್ಲಿ ಒಂದು ಮಾದರಿ ಬೋರ್ಡಾಗಿ ಮಾಡಲು ಅವಕಾಶ ಕಲ್ಪಿಸಿಕೊಡಬೇಕಾಗಿ ಭಗವಂತನನ್ನು ಪ್ರಾರ್ಥಿಸುವ.

ದೇಶದ ಮುಂದಿನ ರಾಜ್ಯಭಾರದ ವಿಷಯ ಬಿನ್ನಾಭಿಪ್ರಾಯಗಳು ತಲೆದೋರುತ್ತಿವೆ. ಕೊಡಗನ್ನು ಈಗಿರುವ ಹಾಗೆ ಪ್ರತ್ಯೇಕ ಇಟ್ಟುಕೊಂಡು ಪ್ರಾಂತೀಕ ಸರಕಾರ ನಡಿಸಲು ಇಂಡಿಯಾ ಸರ್ಕಾರದಿಂದ ೫ ಲಕ್ಷ ರೂ. ವಂತಿಗೆ ಪಡೆಯಲು ಪ್ರಯತ್ನಪಡಬೇಕೋ, ಬೇರೆ ಪ್ರಾಂತ್ಯಗಳಿಗೆ ಕೊಟ್ಟಿದ್ದ ಸುಧಾರಣೆಯ ಪ್ರತಿಫಲವನ್ನು ಹೊಂದಲು ಅದರೊಂದಿಗೆ ಸೇರಿಕೊಳ್ಳಬೇಕೋ ಎಂಬ ವಿಷಯವು ದೇಶೀಯರೊಳಗೆ ಭಿನ್ನಾಭಿಪ್ರಾಯಕ್ಕೆ ಎಡೆ ಕೊಟ್ಟಿದೆ. ಈ ತೊಂದರೆಗೆ ಸರ್ಕಾರದವರೇ ಹೆಚ್ಚಿನ ಕಾರಣಭೂತರು. ಬೇರೆ ಪ್ರಾಂತ್ಯಗಳಿಗೆ ಕೊಟ್ಟಂತೆ ನಮಗೂ ಸುಧಾರಿಸಿದ ಆಡಳಿತವನ್ನು ಕೊಟ್ಟಿದ್ದರೆ ಈ ತರದ ವ್ಯತ್ಯಾಸಕ್ಕೆ ಕಾರಣವಿರುತ್ತಿರಲಿಲ್ಲ. ಈಗಲಾದರೂ ಇಂಡಿಯಾ ಸರ್ಕಾರದವರು ತಡ ಮಾಡದೆ ಬೇರೆ ಪ್ರಾಂತ್ಯಗಳಿಗೆ ಕೊಟ್ಟ ಸುಧಾರಣೆಯನ್ನು ಇಲ್ಲಿಗೂ ಕೊಟ್ಟು ನಮ್ಮ ಸರ್ಕಾರವನ್ನು ನಡೆಸಲು ಅವಶ್ಯವಿರುವ ವಂತಿಗೆಯನ್ನು ಕೊಟ್ಟರೆ ದೇಶೀಯರಲ್ಲಿ ತಲೆದೋರಿರುವ ಭಿನ್ನಾಭಿಪ್ರಾಯವು ಅದರಷ್ಟಕ್ಕೆ ಮಾಯವಾಗುತ್ತದೆಂಬುವುದರಲ್ಲಿ ಸಂಶಯವಿಲ್ಲ.

ಈ ಸಂಘದ ಕಾರ್ಯ ಕಲಾಪಗಳಿಗೆ ಹೆಚ್ಚಿನ ಹುರುಪನ್ನು ಕೊಡಲಿಕ್ಕಾಗಿಯೇ ಈಗ ಕೆಲವು ವರ್ಷಗಳಿಂದ ಹೊರ ಪ್ರಾಂತ್ಯದ ಧುರೀಣರನ್ನು ಕರೆಯುತ್ತಿರುವುದಾಗಿದೆ. ಅನುಭವದಿಂದ ಇದು ತುಂಬಾ ಪ್ರಯೋಜನಕಾರಿಯಾಗಿದೆ. 14 ಯಾ 15 ವರ್ಷಗಳ ಹಿಂದೆ ನಮ್ಮ ಈ ನಾಡಿನಲ್ಲಿ ನಡೆದ ವಾರ್ಷಿಕ ಮಹಾ ಸಭೆಯ ಅಧಿವೇಶನಕ್ಕೆ ಮಲೆಯಾಳದ ಆ ಕಾಲದ ಮುಂದಾಳುಗಳಲ್ಲಿ ಅಗ್ರಗಣ್ಯರೆನಿಸಿಕೊಂಡಿದ್ದ ಶ್ರೀ. ಮಂಜೇರಿ ರಾಮಯ್ಯನವರು ಅಧ್ಯಕ್ಷ ಸ್ಥಾನವನ್ನು ವಹಿಸಿದ್ದರು. ಹೊರ ಪ್ರಾಂತ್ಯದಿಂದ ನಮ್ಮ ವಾರ್ಷಿಕ ಮಹಾ ಸಭೆಯ ಅಧಿವೇಶನದ ಅಧ್ಯಕ್ಷಸ್ಥಾನಕ್ಕೆ ಬಂದವರಲ್ಲಿ ಅವರು ಮೊದಲನೆಯವರು. ನಮ್ಮ ಈ ನಾಡಿನ ಅದೃಷ್ಟಕ್ಕೆ ಪುನಹ ವಾರ್ಷಿಕ ಮಹಾ ಸಭೆಯ ಅಧ್ಯಕ್ಷ ಸ್ಥಾನವನ್ನು ವಹಿಸಲು ತಮ್ಮ ಮುಂದೆ ಒಂದು ಕೂತಿರುವ ಮಹನೀಯರಾದವರೂ ನಮ್ಮ ನೆರೆ ಪ್ರಾಂತ್ಯವಾದ ಅದೇ ಮಲೆಯಾಳದ ಅಗ್ರಗಣ್ಯ ಧುರೀಣರು. ಅವರು ಮಲೆಯಾಳ ದೇಶದ ಒಬ್ಬ ಕಾಂಗ್ರೆಸ್ ಮುಂದಾಳು. ಅವರು ಸರ್ವಸ್ವವನ್ನೂ ತ್ಯಾಗ ಮಾಡಿ ಅನೇಕ ಸಲ ಜೈಲುವಾಸವನ್ನು ಕೈಕೊಂಡು ಸ್ವತಂತ್ರ ಹೋರಾಟದಲ್ಲಿ ಅವರ ಕೈಲಾದ ಮಟ್ಟಿಗೆ ಕೆಲಸ ಮಾಡಿದವರು. ಅವರನ್ನು ದಸ್ತಗಿರಿಯಾದ ಕೂಡಲೆ ಇವರ ಮನೆಯೊಳಗೆ [illegible]ಯಿತು. ಅವರ ಧರ್ಮಪತ್ನಿಯವರು ಸಹ ಜೈಲಿಗೆ ಹೋಗಿದ್ದರು. ಅವರಿಗೆ ವಿಧಿಸಿದ ಜುಲ್ಮಾನೆ ವಸೂಲಿಗಾಗಿ ಅವರ ಮದುವೆ ಕಾಲದಲ್ಲಿ ಅವರ ಪತ್ನಿಯವರಿಗೆ ನಮ್ಮ ಮುಂದೆ ಕೂತಿರುವ ಶ್ರೀ. ರಘುರವರು ಕೊಟ್ಟ ತಾಳಿಯನ್ನು ಕಿತ್ತುಕೊಂಡರು. ಈ ವಿಷಯವಾಗಿ ಇಡೀ ಹಿಂದೂಸ್ಥಾನದಲ್ಲಿ ಪ್ರಬಲವಾದ ಚಳವಳವು ನಡೆಯಿತು. ಪಾರ್ಲಿಮೆಂಟು ಸಭೆಯಲ್ಲೂ ಸಹ ಪ್ರಶ್ನೋತ್ತರಗಳು ನಡೆದವು. ಈ ಹೀನ ಕೃತ್ಯವನ್ನು ನಡೆಸಿದ ಅಧಿಕಾರಿಗೆ ಸರ್ಕಾರದಿಂದ ಶಿಕ್ಷೆ ಕೊಡಲ್ಪಟ್ಟಿತು. ಇಂಥಾ ಅಗ್ರಗಣ್ಯ ಮುಂದಾಳು ನಮ್ಮ ಈ ಸಭೆಯ ಅಧ್ಯಕ್ಷರಾಗಿ ಲಭಿಸಿದ್ದು ನಮ್ಮ ನಾಡಿನ ಹಾಗೂ ದೇಶದ ಅದೃಷ್ಟವೆಂದೇ ಹೇಳಬೇಕು. ತಾವೆಲ್ಲರೂ ಅವರ ಅಮೂಲ್ಯವಾದ ಭಾಷಣವನ್ನು ಕೇಳಲು ಬಹಳ ಕುತೂಹಲಪಟ್ಟವರಾಗಿರುತ್ತೀರಿ. ತಮ್ಮ ಸಮಯವನ್ನು ನಾನು ಹೆಚ್ಚಾಗಿ ಕಳೆಯದೆ ಅಧ್ಯಕ್ಷರು ಅವರು ಭಾಷಣವನ್ನು ಮಾಡಬೇಕಾಗಿ ಅವರನ್ನು ತಮ್ಮೆಲ್ಲರ ಪರವಾಗಿ ವಂದಿಸಿ ಕೇಳಿಕೊಳ್ಳುತ್ತೇನೆ.

FOR SALE.

Two Gordons coffee pulpers in fair condition each complete with bullock gearing. Some bolts are missing only.

ONE oil cake crusher in fair condition.

ONE D. B. Hammerless ejector 12 bore shot gun by Cogswell and Harison, in canvas coverd case. Excellent order.

Apply to:-

ELIZA COFFEE ESTAE,
Pollibetta P. O.
Coorg.

ಮಾರಾಟಕ್ಕಿದೆ.

ಕೆಲವು ಅಗಣಿಗಳು ಮಾತ್ರ ಹಾಳಾಗಿರುವ, ಎತ್ತು ಕಟ್ಟುವ ಮುರಿಯಿಂದೊಡಗೂಡಿದ 2 ಗಾರ್ಡನರ ಕಾಫಿ ಪಲ್ಪರುಗಳು.

ಒಳ್ಳೆ ಸ್ಥಿತಿಯಲ್ಲಿರುವ ಹಿಂಡಿಯನ್ನು ಪುಡಿ ಮಾಡುವ ಒಂದು ಯಂತ್ರ.

ಹ್ಯಾರಿಸನ್ ಮತ್ತು ಕಾಗ್ಸವೆಲ್ ಕಂಪೆನಿಯವರಿಂದ ತಯಾರಿಸಲ್ಪಟ್ಟ ಕುದುರೆ ಇಲ್ಲದ 12ನೇ ಬೋರಿನ ತೋಟದ ಕೋವಿ. ಕ್ಯಾನ್‌ವಾಸ್ ಪೆಟ್ಟಿಗೆ ಸಮೇತ.

ಎಲಿಜಾ ಕಾಫಿ ತೋಟ,
ಪೊಳ್ಳಿಬೆಟ್ಟ, ಕೊಡಗು.

The Mysore Theatres Limited.

(Incorporated in Mysore State and British India)

Film Producers, Exhibitors, Distributors and Owners of Touring Talkies, etc., etc.

"District Board Buildings" Bangalore City.

Applications are invited from gentlemen of influence and personality to represent the above company thro'out the Mysore State and COORG and British India on commission basis or salary or both. Only men of influence and Organising ability need apply with references. Lady applicants are also entertained. For Particulars apply to:—The Organiser for Coorg or to the undersigned.

Organiser's Address:
B. M. Chengappa Esq.,
Organiser for Coorg,
The Mysore Theatres Ltd.,
Virajpet, (Coorg.)

R. N. Row,
Managing Directors,
The Mysore Theatres Ltd.,
"District Board Buildings"
Bangalore City.

(8-6)

ADVERTISE
"KODAGU"
The OLDEST WEEKLY of COORG.

[ಚಿಕ್ಕ ಡಾಕ್ಟರ್] **ವೇಪ್ರಿನ್** [ರಿಜಿಸ್ಟರ್ಡ್]

ಚರ್ಮವ್ಯಾಧಿಗಳ ವೈರಿ—ಪ್ರತಿ ಒಬ್ಬರ ಸ್ನೇಹಿತ—ಸ್ವದೇಶಿ ವಸ್ತು.

ಇದರ ಲೇಪನದಿಂದ ಕಜ್ಜಿ, ಘಾಯ, ವ್ರಣ, ತಸಟು, ನಾರು ಹುಣ್ಣು, ಮೂಲವ್ಯಾಧಿ, ಸುಟ್ಟಿನ ಘಾಯ, ಮುಧ್ದಣ (Pimples) ಸುಟ್ಟಘಾಯ, ಕತ್ತಿಘಾಯ, ತೊಡವಾಳೆ, ಗಣಕರ್ಣ ಇವು ಮೂಯವಾಗುವವು. ಇದು ಸುರಿಯುತ್ತಿರುವ ರಕ್ತವನ್ನು ನಿಲ್ಲಿಸಿ ನೋವನ್ನು ನಿವಾರಿಸುವುದು. ಅಲ್ಲದೆ ಇಂದ್ರಜಾಲಮೋಪಾದಿಯಲ್ಲಿ ಚರ್ಮವ ಶಿಖವನ್ನು ಒಹಿಗಾಕಪರಿಸುವುದು. ನಿಮ್ಮಲ್ಲಿ ಒಂದು ಬಾಟ್ಲು ಇದ್ದಲ್ಲಿ ಒಬ್ಬ ಡಾಕ್ಟರು ಇದ್ದಂತಾಗುವುದು ಕ್ರಯ ಬಹಳ ಸುಲಭ. ½ ಔನ್ಸ್ ಬಾಟ್ಲು 1ಕ್ಕೆ ಆಣೆ 0-8-0. ¼ ಔನ್ಸ್ ಬಾಟ್ಲು 1ಕ್ಕೆ ಆಣೆ 0-4-0.

ವಿ. ಸೂ:—ಪೆಟ್ಟು ತಾಗಿದ ಸ್ಥಳದಲ್ಲಿ ವೇಪ್ರಿನ್ ಚೆನ್ನಾಗಿ ತಿಕ್ಕುವುದು. ಇಲ್ಲದೇ ಬಟ್ಟೆಯ ಮೇಲೆ ಸವರಿ ಅಂಟಿಸುವುದು. ನಂತರ ಸಾಬೂನಿನಿಂದ ಕೈ ತೊಳೆಯುವುದು. ಇದಲ್ಲದೆ ಇನ್ನೂ ಅನೇಕ ತರಹದ ಔಷಧಿಗಳು ನಮ್ಮಲ್ಲಿವೆ.

ಲಸ್ಟರ್ ಮ್ಯಾನಿಫ್ಯಾಕ್ಚರಿಂಗ್ ಕಂಪೆನಿ,
ಡಿ. ಪೋ. ಬೆಂಗಳೂರು ಸಿಟಿ.

52 15

ಸೋಲ್ ಏಜೆಂಟ್:—ಹರಿದಾಸ್ ನಂಜುಂಡ ಗುಪ್ತ,
ಮಡಿಕೇರಿ, (ಕೊಡಗು).

ದಿ ಸೌತ್ ಇಂಡಿಯಾ ಕೋಪರೇಟಿವ್ ಇನ್ಶೂರೆನ್ಸ್ ಸೊಸೈಟಿ, ಲಿಮಿಟೆಡ್.

ಹೆಡ್ ಆಫೀಸ್: ಮದರಾಸು.

ಪ್ರ ಕ ಟ ಣೆ.

ನಮ್ಮ ಗ್ರಾಹಕ ಬಂಧುಗಳ ಸೌಕರ್ಯಾರ್ಥವಾಗಿ ಈ ಇನ್ಶೂರೆನ್ಸ್ ಸೊಸೈಟಿಯ ಶಾಖೆಯೊಂದನ್ನು ಮಡಿಕೇರಿಯಲ್ಲಿ ತೆರೆದಿರುತ್ತೇವೆ. ಇನ್ನು ಮುಂದಕ್ಕೆ ಎಲ್ಲಾ ಪತ್ರವ್ಯವಹಾರ ಮತ್ತು ಹಣ ಪಾವತಿಗಳನ್ನು ದಿ ಸೌತ್ ಇಂಡಿಯಾ ಕೋ-ಆಪರೇಟಿವ್ ಇನ್ಶೂರೆನ್ಸ್ ಸೊಸೈಟಿ ಲಿಮಿಟೆಡ್. ಬ್ರಾಂಚ್ ಆಫೀಸು, ಮಡಿಕೇರಿ. ಈ ವಿಳಾಸಕ್ಕೆ ಕಳುಹಿಸಬೇಕೆಂದು ಈ ಮೂಲಕ ಕೇಳಿಕೊಳ್ಳಲಾಗಿದೆ.

2

For marriage Festivities and Social Functions order your Choicest Dishes,

to 'Indra Bhavan' Sweets and Delicacies at

Bombay Indra Bhavan,

(Sayaji Rao Road, Mysore.)

The premier Restaurent and Catering house in the City for high class varieties, reasonable fare and prompt Services.

Indra Bhavan Sweets win favour always and every where.

12-11

ದಿನದಲ್ಲಿ ಜಮೆಯಾದ ಮೊತ್ತವನ್ನು, ನಮ್ಮ ರಾಷ್ಟ್ರಪತಿಗಳಾದ ಘೋಷರವರು, ದಿವಂಗತ ದೇಶಪ್ರಿಯ ಜೆ. ಯಂ. ಸೇನ್ ಗುಪ್ತರ ಸ್ಮರಣಾರ್ಥವಾದ, ಕಲ್ಕತ್ತೆಯ ಪ್ರಾಂತದ ಒಂದು ಕಾಂಗ್ರೆಸ್ ಮಂದಿರದ ನಿರ್ಮಾಣಕ್ಕಾಗಿ ವಿನಿಯೋಗಿಸಲಿರುವರು.

ಸಂಸ್ಥಾನ ಪ್ರಜೆಗಳ ನಾನಾ ರೀತಿಯ ಕಷ್ಟ ನಷ್ಟಗಳ ಬಗ್ಗೆ ರಚನಾತ್ಮಕ ಆಸಕ್ತಿಯನ್ನು ತೋರುತ್ತಿರುವ ಹಾಗೂ ಸಂಸ್ಥಾನ ಪ್ರಜೆಗಳು ಆದಷ್ಟು ಬೇಗ ದೇಶೀಯ ಪ್ರಭುಗಳ ನಿರಂಕುಶ ಪ್ರಭುತ್ವದಿಂದ ಬಿಡುಗಡೆ ಹೊಂದಬೇಕೆಂಬ ಘನವಾದ ತಮ್ಮ ಆಸೆಗೆ ಉತ್ತೇಜನ ಕೊಡುತ್ತಿರುವ ಪಂಡಿತ ಜವಹರಲಾಲ್ ನೆಹ್ರೂರವರು ಲೂಧಿಯಾನಾ (ಪಂಜಾಬ್) ದಲ್ಲಿ ನಡೆಯುವ ಅಖಿಲ ಭಾರತ ದೇಶೀಯ ಸಂಸ್ಥಾನ ಪ್ರಜಾಪರಿಷತ್ ಸಮ್ಮೇಳನಾಧ್ಯಕ್ಷತೆಯನ್ನು ವಹಿಸಲು ಒಪ್ಪಿಕೊಂಡಿದ್ದಾರೆ. ಇದು ಸುಮಾರು ಹತ್ತು ಹನ್ನೆರಡು ಕೋಟಿ ಸಂಸ್ಥಾನ ಪ್ರಜೆಗಳಿಗೆಲ್ಲಾ ಆತ್ಮಾನಂದವನ್ನುಂಟುಮಾಡದೆ ಇರದು. ಪ್ರಾಯಶಃ ಸಮ್ಮೇಳನವು ಮುಂದಿನ ನವಂಬರ್ ತಿಂಗಳಿನಲ್ಲಿ ನಡೆಯುವುದೆಂದು ನಿರೀಕ್ಷಿಸಲಾಗಿದೆ. ಆ ಹೊತ್ತಿಗೆ ಪಂಡಿತ ಜವಹರಲಾಲರು ತಮ್ಮ ಐರೋಪ್ಯ ಪ್ರವಾಸವನ್ನು ಮುಗಿಸಿಕೊಂಡು ಭಾರತಕ್ಕೆ ಹಿಂತಿರುಗುವವರಾಗಿದ್ದಾರೆ. ಈಗಾಗಲೇ ಲೂಧಿಯಾನಾದಲ್ಲಿ ಸ್ವಾಗತಸಮಿತಿಯು ಸಮ್ಮೇಳನದ ಸಿದ್ಧತೆಯನ್ನು ಭರಾಟೆಯಿಂದ ಮುಂದುವರಿಸುತ್ತಿದೆ.

ಚಂದಾದಾರರಲ್ಲಿ ವಿನಂತಿ.

ಮಹನೀಯರೇ,

ಕಳೆದ ತಿಂಗಳ ಅಂತ್ಯಕ್ಕೆ 'ಕೊಡಗು' ಕಂಪೆನಿಯ ವರ್ಷವು ಮುಗಿದು ಈ ತಿಂಗಳ ಸುರುವಿನಿಂದ ಹೊಸ ವರ್ಷವು ಪ್ರಾರಂಭವಾಗಿದೆ. ಆದ್ದರಿಂದ ಚಂದಾದಾರರೆಲ್ಲರೂ ಚಂದಾ ಬಾಬ್ತು ಹಳೇ ಬಾಕಿ ಇರುವ ಮೊಬಲಗನ್ನೂ, ಮುಂದಿನ ವರ್ಷದ ಚಂದಾ ಹಣವನ್ನೂ ದಯವಿಟ್ಟು ಬೇಗನೆ ಕಳುಹಿಸಿಕೊಡಬೇಕಾಗಿ ವಿನಂತಿ. ಪತ್ರಿಕೆಯ ಚಂದಾ ಬಾಕಿಗಾಗಿ ವಿ. ಪಿ. ಕಳುಹಿಸುವುದರಿಂದ ಚಂದಾದಾರರಿಗೆ ನಷ್ಟ ಸಂಭವಿಸುವ ಕಾರಣ ತಮ್ಮ ಕಡ್ಡು ಬಾಕಿಯನ್ನು ಮನಿಯಾರ್ಡರು ಮುಖಾಂತರವಾಗಲೀ, ತಮ್ಮ ಸಮೀಪದ ನಮ್ಮ ಏಜಂಟರ ಮುಖಾಂತರವಾಗಲೀ ನಮ್ಮ ಆಫೀಸಿಗೆ ತಲಪಿಸಬೇಕಾಗಿ ಕೇಳಿಕೊಳ್ಳಲಾಗಿದೆ.

ಮೇನೇಜರ್,
"ಕೊಡಗು" ಲಿಮಿಟೆಡ್,
ಮಡಿಕೇರಿ.

ಶ್ರೀ ಸುಭಾಷ ಚಂದ್ರ ಬೋಸರು.

ಕಾಂಗ್ರೆಸ್-ಲೀಗ್ ಸಂಧಾನಗಳು.

ಅವರಿಗೆ ಜಿನ್ನಾ ಲೀಗಿನ ಪತ್ರ ಬಂದಿಲ್ಲ. ಅದರೂ ಲೀಗಿನ ಮುಖಂಡರ ಮುಖಾಭಿಪ್ರಾಯವನ್ನು ತಿಳಿದ ಬೋಸರು ಐಕ್ಯ ಸಾಧನೆಯ ಸಮಸ್ಯೆಯನ್ನು ಕುರಿತು ಮಾತಾಡುವಾಗ-ಜಿನ್ನಾ ಪತ್ರಿಕೆಗಳಲ್ಲಿ ಪ್ರಕಟವಾಗಿರುವ ಲೀಗಿನ ಅಭಿಪ್ರಾಯವನ್ನು ಎಣಿಸಿ ಅಭಿಪ್ರಾಯ ಕೊಡುವುದು ಸರಿಯಲ್ಲ, ಎಲ್ಲೆಲ್ಲಿಯೂ ಸಂಧಾನಕ್ಕೆ, ಪತ್ರ ವ್ಯವಹಾರಗಳಿಂದ ಫಲವೇನೂ ಉಂಟಾಗಲಾರದೆಂದು ನುಡಿಯುತ್ತಾರಾದರೂ ಹಾಗೇನೂ ಬರುವುದಿಲ್ಲ. ಈಗ ಕಡು ಕತ್ತಲಾಗಿ ತೋರುವುದರಿಂದಲೇ ಸೂರ್ಯನು ಖಂಡಿತವಾಗಿ ಮೂಡುವ ವೇಳೆ ಬಂದಿದೆ ಎಂದು ತಿಳಿಯಬೇಡವೇ? ಜಿನ್ನಾರವರ ಪತ್ರ ಬಂದ ಕೂಡಲೆ, ಪುನಹ ಸಂಧಾನಗಳಿಗೂ ತೊಡಗುವುದು ಅತ್ಯವಶ್ಯವಾಗುವುದು. ಅದರೂ ಪುನಹ ಕಾಂಗ್ರೆಸು ತನ್ನ ಉತ್ತರ ಕೊಡುವುದು. ಆದರೆ ಅದಕ್ಕೆ ಮೊದಲಾಗಿಯೇ ಮಹಾತ್ಮಾಜೀಯವರೂ, ಕಾಂಗ್ರೆಸಿನ ಕಾರ್ಯಕಾರಿ ಮಂಡಲವೂ ವಿಮರ್ಶಿಸಿ, ಕಾಂಗ್ರೆಸಿನವರ ಹೇಳಿಕೆಯೊಡನೆ ಜಿನ್ನಾರವರ ಹೇಳಿಕೆಯನ್ನು ತೂಗಿ ನೋಡಿಯೇ ಒಂದು ಇತ್ಯರ್ಥ ಮಾಡುವರು' ಎಂದರು.

ಬೇರೆ ಧ್ವಜ-ಬೇರೆ ಸಂಸ್ಥೆ-ಬೇರೆ ರಿಯಾಯಿತಿ-ಎಲ್ಲವೂ ಇನ್ನು ಬೇರೆಯೇ ಎಂದು ಸಾರುತ್ತಿರುವ ಮುಸ್ಲಿಂ ಮುಖಂಡರಿರುವಾಗ ಇತ್ಯರ್ಥವಾಗಲಿರುವ ವ್ಯಾಜ್ಯವು ಪಕ್ಷಪಾತ ದೃಷ್ಟಿಯಿಂದ ಹಾಳಾಗುವಂತೆ ಪ್ರಯತ್ನಗಳಾಗುವಾಗ ಕತ್ತಲು ಇನ್ನೂ ಕತ್ತಲಾಗುವುದೇ ವಿನಹ ಸೂರ್ಯೋದಯಕ್ಕೆ ಅವಕಾಶ ಕಡಿಮೆ ಎನಿಸದೇ?

ಮೂವರು ಮುಖಂಡರು ಜಿನ್ನರನ್ನು ಖಂಡಿಸಿರುವರು.

ಮೊನ್ನಿನ ತನಕ ಮುಸ್ಲಿಂ ಲೀಗ್ ಪಕ್ಷದ ನಾಯಕರಾದ ಜಿನ್ನಾರವರ ಬಲಕೈಯಂತಿದ್ದವರಾದ ಮೌಲಾನಾ ಜಾಫರಾಲಿ ಖಾನ್, ಪಂಜಾಬ್ ಪ್ರಾಂತ್ಯದ ಎಸೆಂಬ್ಲಿ ಸದಸ್ಯರು-ಈಗ ಜಿನ್ನಾರವರಿಗೆ ವಿರೋಧವಾಗಿ ಚಳವಳ ಎಬ್ಬಿಸಿರುವುದರ ಕುರಿತು ವಾರ್ತೆಯು ಬಂದಿರುತ್ತದೆ. ಶ್ರೀ ಜಾಫರ್ ಅಲಿಖಾನರೊಡನೆ ಇನ್ನೂ ಮೂವರು ಮುಖಂಡರು ಸೇರಿರುವರು.

'ಜಿನ್ನಾರವರೂ, ಮುಸ್ಲಿಂ ಲೀಗೂ, ಮುಸಲ್ಮಾನರ ನಿಜವಾದ ಪ್ರತಿನಿಧಿಯಲ್ಲವೆಂದೂ, ಮುಸ್ಲಿಂ ಲೀಗಿನ ಕೌನ್ಸಿಲಿನಲ್ಲಿ ಮುಸ್ಲಿಮರ ನಿಜವಾದ ನಾಯಕರನ್ನು ಸೇರಿಸಿಕೊಳ್ಳಲಿಲ್ಲವೆಂದೂ, ಅದು ಈಗ ಭಾರತೀಯ ರಾಷ್ಟ್ರೀಯತೆಗೆ ವಿರೋಧವೆನಿಸುವ ಜನರಿರುವ ಒಂದು ಸಂಘವಾಗಿರುವುದೆಂದೂ, ಜಿನ್ನಾರವರು ಲೀಗಿನ ಕೌನ್ಸಿಲ್ ಚುನಾವಣೆಯಲ್ಲಿ ಮುಸ್ಲಿಮರಲ್ಲಿ ಅನೇಕ ಪಂಗಡಗಳ ನಿರ್ಲಕ್ಷ್ಯ ಮಾಡಿರುವರೆಂದೂ, ತಮ್ಮ ತಮ್ಮ ಸ್ವಹಿತಗಳನ್ನು ರಕ್ಷಿಸಿಕೊಳ್ಳುವವರೇ ಕೆಲವರು ಜಿನ್ನಾರವರ ಮುಖಂಡತನದಲ್ಲಿ ಕೂಡಿರುವರೆಂದೂ, ಅಭಿಪ್ರಾಯ ಸೂಚಿಸಿ, ಮೌಲಾನಾ ಜಾಫರಾಲಿ ಖಾನ್‌ರವರ ಸಂಪಾದಕತ್ವದಲ್ಲಿ ನಡೆಯುವ 'ಜಮೀನ್ದಾರ್' ಎಂಬ ಪತ್ರಿಕೆಯ ಅಗ್ರಲೇಖನದಲ್ಲಿದೆ.

ಬಾತ್ಮಿ.

ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ಪತ್ರಿಕಾಕರ್ತರು ಜವಾಬ್ದಾರರಲ್ಲ. [ಕೊ. ಸಂ.

ಡಿ. ಪಿ. ಡಬ್ಲ್ಯು. ಇಲಾಖೆ.

ಅಯ್ಯಾ ರಾವುಸಾಹೇಬರೇ,

ನೀವು ಬಂದ ಮೇಲೆ ಕೊಡಗಿನ ರಸ್ತೆಗಳು ಎಷ್ಟೋ ಮಟ್ಟಿಗೆ ಬದಲಾವಣೆಗಳು ಹೊಂದಿವೆ. ಮುಖ್ಯ ಮುಖ್ಯವಾದ ರಸ್ತೆಗಳಿಗೆ ಠಾರು ಸಹ ಹಾಕಿಸಿರುತ್ತೀರಿ. ದೊಡ್ಡ ದೊಡ್ಡ ಆಫೀಸರುಗಳ ಬಂಗ್ಲೆಗಳನ್ನು ಅಪ್‌ಟುಡೇಟ್ ಮಾಡಿರುತ್ತೀರಿ. ಆದರೆ ತಮ್ಮ ಗಮನವು ವಿದ್ಯಾರ್ಥಿಗಳು ಓದುವಂಥ ಶಾಲೆಯ ಮೇಲೂ, ಅವರು ವಾಸಮಾಡುವಂಥ ಬೋರ್ಡಿಂಗಿನ ಮೇಲೂ ಹೋಗಿರುವುದಿಲ್ಲ. ಈ ಸಂಗತಿಯು ಬಹಳ ವಿಷಾದಕರವಾದದ್ದು. ಪರದೇಶಗಳಲ್ಲಿ ವಿದ್ಯಾರ್ಥಿಗಳು ವಾಸಮಾಡುವಂಥ ಬೋರ್ಡಿಂಗುಗಳಿಗೆ ಬೇಕಾದಷ್ಟು ಕಕ್ಕಸ್ ಮತ್ತು ಮೂತ್ರದ ಮನೆಗಳು ಇವೆ. ಆದರೆ ಮಡಿಕೇರಿಯಲ್ಲಿರುವ ಹುಡುಗರ ಬೋರ್ಡಿಂಗಿನಲ್ಲು ಸಾಧಾರಣ ಎಪ್ಪತ್ತು ಹುಡುಗರಿಗೆ ನಾಲ್ಕು ಕೋಣೆಯ ಒಂದು ಕಕ್ಕಸ್ ಮನೆಯೂ, ಒಬ್ಬನು ಮಾತ್ರವೂ ದಲಿಕ್ಕಿರುವಷ್ಟು ಸ್ಥಳವಿರುವ ಒಂದು ಮೂತ್ರದ ಮನೆಯೂ ಇವೆ. ಇದು ಆರೋಗ್ಯದ ದೃಷ್ಟಿಯಿಂದ ಖಂಡಿತವಾಗಿಯೂ ಸಾಲದು. ಕ್ಲಾಸು ಕೋಣೆಗಳಲ್ಲಿ ಅಲ್ಲಲ್ಲಿ ಸೋರುತ್ತದೆ. ವಿದ್ಯಾರ್ಥಿಗಳು ಕ್ಲಾಸಿನಲ್ಲಿ ಕೂರುವುದಕ್ಕೆ ಬಹಳ ಕಷ್ಟವಾಗುತ್ತದೆಂದು ನನ್ನ ಸಂಗಡ ಎಷ್ಟೋ ಸಲ ಹೇಳಿರುವರು. ಇದೇ ತರಹದ ದೂರುಗಳನ್ನು ನನ್ನ ಸಹೋದರರ ಮಕ್ಕಳಾದ ಬೋರ್ಡಿಂಗ್ ಹುಡುಗರು ಹೇಳಿರುವರು. ಈ ದಿನದಿಂದ ರಾವು ಸಾಹೇಬರೇ, ತಾವು ಒಂದು ಸಲ ಶಾಲೆಯ ಕಡೆ ಪ್ರಯಾಣ ಮಾಡಿ ವಿದ್ಯಾರ್ಥಿಗಳಿಗೆ ಇರುವಂಥ ಕಷ್ಟವನ್ನು ಪ್ರತ್ಯಕ್ಷ ಕೇಳಿ, ತಮ್ಮ ಕೈಲಾಗುವಂಥ ಸಹಾಯವನ್ನು ಮಾಡಬೇಕಾಗಿ ಬೇಡಿಕೊಳ್ಳುತ್ತೇನೆ. 'ಮಕ್ಕಳ ತಂದೆ'

ಕೊಡಗು ನೋಂವಲೆನಾಡು ಅಮ್ಮ ಕೊಡವರಲ್ಲಿ ವಿನಂತಿ.

ಕೊಡಗಿನಲ್ಲಿ ನಮ್ಮ ನಿವಾಸಿಗಳು ಕಮ್ಮಿಯಾಗಿವೆ ಎಂಬ ಸಂಗತಿ ವಿವರಿಸಬೇಕಾದ್ದಿಲ್ಲ. ನಮ್ಮ ಕುಲವನ್ನು ವೃದ್ಧಿಪಡಿಸುವ ಮಹನೀಯರು ಇಲ್ಲವೆ ದಿನೇ ದಿನೇ ನಮ್ಮ ಜನಾಂಗವನ್ನು ಅನಾಚಾರಕ್ಕೂ ಮತ್ತು ಕ್ಷೀಣ ಸ್ಥಿತಿಗೂ ತಂದು ಜನಾಂಗದಲ್ಲಿ ಅನ್ಯೋನ್ಯ ವಿರೋಧ ಮಾಡುವುದು ನೋಡಿದರೆ ಬಹಳ ವ್ಯಸನವಾಗಿದೆ.

ಕೆಲವು ವರ್ಷಗಳ ಹಿಂದೆ ಹಲವು ಮಹನೀಯರು ಒಂದು ಶುಭ ಕಾರ್ಯಕ್ಕೆ ಹೋಗಿ ಅಲ್ಲಿ ಅನ್ಯೋನ್ಯ ಕಲಹ ನಡಿಸಿ ತಾಯಿಗೆ ಮಕ್ಕಳಿಲ್ಲದೆಯೂ, ಮಕ್ಕಳಿಗೆ ತಾಯಿ ಇಲ್ಲದೆಯೂ ಸಹ ಮಾಡಿ ಕೆಲವು ಕಾಲ ಎರಡು ಪಾರ್ಟಿಯಾಗಿದ್ದು ಈಗ ಅವನ ಕುಲಸ್ಥರು ಸರಿಯಾಗಿರುವುದು ಎಲ್ಲರೂ ತಿಳಿಯದ್ದಲ್ಲ.

ಆದರೆ 12-5-38ರಲ್ಲು ನಡೆದ ಶುಭ ಕಾರ್ಯದ ದಿವಸ ನಮ್ಮ ಆಚಾರಕ್ಕೆ ಪೂರ್ಣ ಸರಿಯಾಗದ ಒಬ್ಬ ಮನುಷ್ಯನನ್ನು ಒಬ್ಬ ಮಹನೀಯರು ರಾತ್ರಿ ದುರ್ಬೋಧನೆ ಮಾಡಿ ಆ ಮನುಷ್ಯನನ್ನು ಶುಭ ಕಾರ್ಯಕ್ಕೆ ಕರೆದುಕೊಂಡು ಹೋಗಿ ಅಲ್ಲಿ ಅನ್ಯೋನ್ಯ ಕಲಹ ನಡಿಸಿ, ಒಬ್ಬನಿಗಾಗಿ ಐದಾರು ಜನರನ್ನು ತಿರಸ್ಕರಿಸಿ, ಮಹನೀಯರೆಲ್ಲರೂ ಕಾರ್ಯಾಗ್ರಹವಾಸಿಗಳೂ ಸಹಭೋಜನವನ್ನು ಮಾಡಿದ ಸಂಗತಿ ನೋಡಿದರೆ ನಮ್ಮ ಈ ಚಿಕ್ಕ ಜನಾಂಗವನ್ನು ವೃದ್ಧಿ ಮಾಡುವಂತೆ ಕಾಣುವುದಿಲ್ಲ.

ಆದ್ದರಿಂದ ಅಂಥಾ ಮಹನೀಯರು ಇನ್ನು ಮುಂದಕ್ಕಾದರೂ ನಮ್ಮ ಈ ಚಿಕ್ಕ ಜನಾಂಗದಲ್ಲಿ ಒಡಕಿಗೆ ಆಸ್ಪದ ಕೊಡದೆ ಕುಲವನ್ನು ವೃದ್ಧಿ ಮಾಡಲಿಕ್ಕೆ ಅವರೆಲ್ಲರಿಗೂ ಬುದ್ಧಿ ಕೊಡಲೆಂದು ಶ್ರೀ ಸತ್ಯನಾರಾಯಣ ಸ್ವಾಮಿಯನ್ನು ಅನುದಿನವೂ ಪ್ರಾರ್ಥಿಸುತ್ತೇನೆ. 'ಇತಿ ಸತ್ಯಾತ್ಮಕ.'

ಕೃತಜ್ಞತಾ ಪತ್ರ.

ಮೈಸೂರಿನಲ್ಲಿ ತಾ. 14-5-38ರಲ್ಲು ಶಿವಾಧೀನ ಹೊಂದಿದ ನಮ್ಮ ಪ್ರಿಯ ಪುತ್ರಿ **ಮಿ. ಚೆಪ್ಪುಡೀರ ಪೊನ್ನಪ್ಪನವರ ಪತ್ನಿ** (ಕಳೆದ ವಾರ ಪೊನ್ನಪ್ಪನವರ ಬದಲು ನಂಜಪ್ಪನವರು ಎಂದು ತಪ್ಪಾಗಿ ಪ್ರಕಟವಾದದ್ದಕ್ಕೆ ವ್ಯಸನಪಡುತ್ತೇವೆ.) ಪೊನ್ನಮ್ಮನಿಗಾಗಿ ಸಂತಾಪ ಸೂಚಕ ಪತ್ರಗಳನ್ನು ಕಳುಹಿಸಿದ ಬಂಧು ಮತ್ತು ಸ್ನೇಹಿತರುಗಳಿಗೆ ಪ್ರತ್ಯೇಕ ಪ್ರತ್ಯೇಕ ಪತ್ರ ಬರೆಯಲು ಅನಾನುಕೂಲವಾದ್ದರಿಂದ ಅವರಿಗೆಲ್ಲಾ ಈ ಮೂಲಕ ನಮ್ಮ ಕೃತಜ್ಞತಾಪೂರ್ವಕ ವಂದನೆಗಳನ್ನರ್ಪಿಸುತ್ತೇವೆ.

Mr. & Mrs. Kongande
2 Appaya.

ಜಗನ್ಮೋಹನ ಭವನದಿಂದ ವಿಧುರಾಶ್ವತ್ಥಕ್ಕೆ

'ವಿಶ್ವಕರ್ನಾಟಕ'ದಲ್ಲಿ ಪ್ರಕಟವಾದ ಕೆಲವು ಪ್ರಧಾನಲೇಖನಗಳ ಸಂಗ್ರಹ ಎಲ್ಲರೂ ಅಗತ್ಯವಾಗಿ ಓದಬೇಕಾದ ಪುಸ್ತಕ.

ಸಾಧಾರಣ ಪ್ರತಿ	0—8—0
(ಅಂಚೆ ವೆಚ್ಚ)	0—1—6
ಉತ್ತಮ ಪ್ರತಿ	1—0—0
(ಅಂಚೆ ವೆಚ್ಚ)	0—2—0

ಅಪೇಕ್ಷಿಸುವವರು ಹಣವನ್ನು ಮುಂಗಡವಾಗಿ ಕಳುಹಿಸಬೇಕು. ಪ್ರತಿಗಳನ್ನು ವಿ. ಪಿ. ಮೂಲಕ ಕಳುಹಿಸುವುದಿಲ್ಲ. ಸ್ವಲ್ಪವೇ ಪ್ರತಿಗಳಿರುವುದರಿಂದ ಇಂದೇ ವಿಶ್ವಕರ್ನಾಟಕ ಕಾರ್ಯಾಲಯ (ಬೆಂಗಳೂರು ನಗರ)ಕ್ಕೆ ಬರೆದು ತರಿಸಿಕೊಳ್ಳಿ.

ಮ್ಯಾನೇಜರ್,
'ವಿಶ್ವಕರ್ನಾಟಕ'
ಬೆಂಗಳೂರು ನಗರ.

ನೆ' ಎಂದು ಮೊದಲಾಗಿ ಉತ್ತರವನ್ನಿತ್ತರು.

'ಚುನಾಯಿತ ಮೆಂಬರುಗಳೂ, ಸರ್ಕಾರಿ ಮೆಂಬರುಗಳೂ, ನೇಮಿತ ಮೆಂಬರುಗಳೂ-ಎಲ್ಲರೂ ಸಹಕರಿಸಿ ದೇಶಕ್ಕೆ ಪ್ರಯೋಜನವಾಗುವಂತೆ ಬೋರ್ಡಿನ ಕೆಲಸ ಕಾರ್ಯಗಳನ್ನು ನಡಿಸುವಂತಾಗಲಿ' ಎಂದು ಮುಂತಾಗಿ ಹೇಳಿ, ಕಮಿಷನರವರು ಮೀಟಿಂಗನ್ನು ಮುಕ್ತಾಯಗೊಳಿಸಿದರು.

ಒಳದೇಶ.

ಈ ವಾರ ಮಡಿಕೇರಿಯಲ್ಲಿ 15 ಇಂಚು 53 ಸೆಂಟು ಮಳೆಯಾಗಿದೆ.

ಈ ವಾರ ವೀರಾಜಪೇಟೆಯಲ್ಲಿ ಭತ್ತ ಗಾಡಿಗೆ 44 ರೂ. ಕ್ರಯವಿತ್ತೆಂದು ತಿಳಿಯಬರುತ್ತದೆ.

ಡಿಸ್ಟ್ರಿಕ್ಟ್ ಬೋರ್ಡಿನ ಬಜೆಟ್ ಮೀಟಿಂಗು ಬರುವ ಜುಲೈ ತಾ. 8 ರಲ್ಲಿ ನಡೆಯುವದೆಂದು ತಿಳಿಯಬರುತ್ತದೆ.

ಕೋಕೇರಿ ಗ್ರಾಮದ ಮೆ. ಚೇನಂಡ ಲೇಟ್ ಸಂದಿಚ್ಚನವರ ಪತ್ನಿ ಶ್ರೀಮತಿ ಸೋಮವ್ವನವರು ಜೂನ್ ತಾ. 8 ರಲ್ಲಿ ತಮ್ಮ 70 ನೇ ವಯಸ್ಸಿನಲ್ಲಿ ಸ್ವರ್ಗಸ್ಥರಾದರೆಂದು ತಿಳಿಸಲು ವ್ಯಸನಪಡುತ್ತೇವೆ.

ಮೆ. ಕೊಡಂದೇರ ಯಂ. ಐಯ್ಯಪ್ಪನವರು ಕಲ್ಕತ್ತಾವಲ್ಲಿ ಮೋಟಾರ್ ಮೆಕಾನಿಕಲ್ ಇಂಜಿನೀಯರಿಂಗ್ ಪರೀಕ್ಷೆಯಲ್ಲಿ ತೇರ್ಗಡೆಯಾಗಿ ಡಿಪ್ಲೋಮ ಪಡೆದಿರುವರಾಗಿ ತಿಳಿಯ ಬರುತ್ತದೆ.

ಸೋಮವಾರಪೇಟೆ, ಫ್ರೇಜರ್‌ಪೇಟೆ ಮತ್ತು ಕೊಡ್ಲಿಪೇಟೆ ನೋಟಿಫೈಡ್ ಏರ್‍ಯಾಗಳ ಕಮಿಟಿ ಮೆಂಬರುಗಳ ಚುನಾವಣೆ ಬಗ್ಗೆ ಉತ್ತರ ಕೊಡಗಿನ ಸುಭೇದಾರರು 'ಇಲೆಕ್ಷನ್ ಆಫೀಸರಾಗಿ ನೇಮಿಸಲ್ಪಟ್ಟಿರುವರು.

ಮಡಿಕೇರಿ ಸಬ್ ಮೇಜಿಸ್ಟ್ರೇಟರ ಕೋರ್ಟಿನ ಗುಮಾಸ್ತರಾಗಿದ್ದ ಮೆ. ಮುಕ್ಕಾಟಿರ ಮಾದಪ್ಪನವರು ಈ ತಾ. 15 ರಲ್ಲಿ ಕೆಲಸದಿಂದ ನಿವೃತ್ತರಾದ ಕಾರಣ ಅವರ ಸ್ಥಳಕ್ಕೆ ಮೆ. ಐಚೆಟ್ಟಿರ ನಾಣಯ್ಯನವರು ನೇಮಿಸಲ್ಪಟ್ಟಿರುವರು.

ಸಬಾರ್ಡಿನೇಟ್ ಜಡ್ಜರ ಕೋರ್ಟಿನ ಶಿರಸ್ತೆದಾರರಾಗಿದ್ದ ಮೆ. ಕೇತಿಯಂಡ ಬೆಳ್ಯಪ್ಪನವರು, ರಜೆ ಮುಗಿದು, ಬಿಟ್ಟಿಯರಾದ ಕಾರಣ ಅವರ ಬದಲು ಮೆ. ಮೂಡೇರ ತಿಮ್ಮಯ್ಯನವರು ಶಿರಸ್ತೆದಾರರಾಗಿ ನೇಮಿಸಲ್ಪಟ್ಟಿರುವರು.

ಕೊಡಗು ಡಿಸ್ಟ್ರಿಕ್ಟ್ ಬೋರ್ಡಿನ ಪ್ರಥಮ ಮೀಟಿಂಗು ಈ ತಾ. 15 ರಲ್ಲಿ ಕೌನ್ಸಿಲ್ ಹಾಲಿನಲ್ಲಿ ಕೊಡಗು ಕಮಿಷನರವರ ಅಧ್ಯಕ್ಷತೆಯಲ್ಲಿ ನಡೆಯಿತು. ಶ್ರೀಮಾನ್ ಪಿ. ಐ. ಬೆಳ್ಯಪ್ಪನವರು ಸರ್ವಾನುಮತದಿಂದ ಬೋರ್ಡಿನ ಪ್ರೆಸಿಡೆಂಟರಾಗಿ ಆರಿಸಲ್ಪಟ್ಟಿರುವರು.

ನಾಪೋಕ್ಲುನಾಡು ಸಹಕಾರಿ ಯೂನಿಯನ್ನಿನವರು ಕೃಷಿಕರ ಕಾಫಿ, ಯಾಲಕ್ಕಿ, ಕಿತ್ತಳೆ ಗಿಡಗಳನ್ನು ಮಾರಾಟ ಮಾಡಲೂ, ಮತ್ತು ಅವರಿಗೆ ಬೇಕಾಗುವ ಕಸಿಮಾವಿನ ಗಿಡ, ತೆಂಗಿನ ಗಿಡ, ಅನಾನಸು ವಗೈರೆಗಳನ್ನು ಪಡಗಿಸಿಕೊಡುವ ಏರ್ಪಾಡುಗಳನ್ನು ಕೈಕೊಂಡಿರುತ್ತಾರೆಂದು ತಿಳಿಯಬರುತ್ತದೆ.

ಇಂಡಿಯನ್ ಸಿವಿಲ್ ಸರ್ವಿಸಿಗೆ ಪ್ರವೇಶಕ್ಕಾಗಿ 1939 ನೇ ಜನವರಿ 4 ರಲ್ಲಿ ಡೆಲ್ಲಿಯಲ್ಲಿ ಒಂದು ಸ್ಪರ್ಧೆಯ ಪರೀಕ್ಷೆ ನಡೆಯುವುದು. ಉಮೇದುವಾರರು ಚೀಫ್ ಕಮಿಷನರಿಗಿರುವ ತಮ್ಮ ಅರ್ಜಿಗಳನ್ನು ಬರುವ ಜುಲೈ ತಾ. 15 ರೊಳಗೆ ಕಮಿಷನರವರಿಗೆ ತಲಪುವಂತೆ ಕಳುಹಿಸಬೇಕೆಂದು ಪ್ರಕಟವಾಗಿದೆ.

ಡೇರಾಡನ್ನಿನಲ್ಲಿ ಇಂಡಿಯನ ಮಿಲಿಟರಿ ಎಕಾಡಮಿಗೂ ಮತ್ತು ರೋಯಲ್ ಇಂಡಿಯನ್ ನೇವಿಗೂ ಪ್ರವೇಶಕ್ಕಾಗಿ ಬರುವ ಅಕ್ಟೋಬರು ತಾ. 19ರಲ್ಲಿ ಡೆಲ್ಲಿಯಲ್ಲಿ ಒಂದು ಸ್ಪರ್ಧೆಯ ಪರೀಕ್ಷೆ ನಡೆಯುವುದು. ಉಮೇದುವಾರರು ತಮ್ಮ ಅರ್ಜಿಗಳನ್ನು ಜುಲೈ 1ರೊಳಗೆ ಕಮಿಷನರವರಿಗೆ ತಲಪುವಂತೆ ಕಳುಹಿಸತಕ್ಕದೆಂದು ಪ್ರಕಟವಾಗಿದೆ.

ಡಿಸ್ಟ್ರಿಕ್ಟ್ ಬೋರ್ಡಿನ ಅಧ್ಯಕ್ಷರಾಗಿ ಆರಿಸಲ್ಪಟ್ಟ ಮೆ. ಪಿ. ಐ. ಬೆಳ್ಯಪ್ಪನವರು ಈ ತಾ. 15 ರಲ್ಲಿ ಮಡಿಕೇರಿಯಲ್ಲಿ, ಕಾಂಗ್ರೆಸು ಪಾರ್ಲಿಮೆಂಟರಿ ಬೋರ್ಡು ಮೆಂಬರುಗಳು, ಡಿಸ್ಟ್ರಿಕ್ಟ್ ಬೋರ್ಡಿನ ಕಾಂಗ್ರೆಸು ಮೆಂಬರುಗಳು, ಕೆಲವು ಕಾಂಗ್ರೆಸು ಕಾರ್ಯಕರ್ತರುಗಳು ಮತ್ತು ಇನ್ನು ಕೆಲವು ಅವರ ಹಿತಚಿಂತಕರು ಇವರುಗಳಿಗೆ ಒಂದು ಟೀ ಪಾರ್ಟಿಯನ್ನು ಕೊಟ್ಟರಾಗಿ ತಿಳಿಯುತ್ತೇವೆ.

ಇಂಡಿಯನ್ ರೈಲ್ವೆ ಇಂಜನೀಯರಿಂಗ್ ಸರ್ವಿಸ, ಇಂಡಿಯನ್ ಪೋಸ್ಟ್ ಮತ್ತು ಟೆಲಿಗ್ರಾಫ್ ಇಲಾಖೆಯ ಸುಪೀರಿಯರ್ ಟೆಲಿಗ್ರಾಫ್ ಇಂಜಿನೀಯರಿಂಗ್ ಮತ್ತು ವಯರ್ಲೆಸ್ ಶಾಖೆಗಳ ಪ್ರವೇಶಕ್ಕಾಗಿ ಒಂದು ಸ್ಪರ್ಧೆ ಪರೀಕ್ಷೆಯು 1938 ನೇ ನವಂಬರು 2 ರಲ್ಲಿ ಡೆಲ್ಲಿಯಲ್ಲಿ ನಡೆಯುವುದು. ಇಚ್ಛಿಸುವವರು ತಮ್ಮ ಅರ್ಜಿಗಳನ್ನು ಬರುವ ಜುಲೈ 5 ರೊಳಗೆ ಕಮಿಷನರವರಿಗೆ ತಲಪಿಸತಕ್ಕದ್ದು ಎಂದು ಪ್ರಕಟಿಸಲಾಗಿದೆ.

ಕೊಡಗು ಕಾಂಗ್ರೆಸು ಪಾರ್ಲಿಮೆಂಟರಿ ಬೋರ್ಡು ಮೆಂಬರುಗಳ ಮತ್ತು ಡಿಸ್ಟ್ರಿಕ್ಟ್ ಬೋರ್ಡಿನ ಕಾಂಗ್ರೆಸು ಮೆಂಬರುಗಳ ಜಂಟಿ ಮೀಟಿಂಗೊಂದು ಈ ತಾ. 14 ರ ರಾತ್ರಿ ಮಡಿಕೇರಿಯಲ್ಲಿ ನಡೆದು, ಡಿಸ್ಟ್ರಿಕ್ಟ್ ಬೋರ್ಡಿನ ಅಧ್ಯಕ್ಷ ಪದವಿಗೆ ಶ್ರೀಯುತ ಪಿ. ಐ. ಬೆಳ್ಯಪ್ಪನವರನ್ನೂ, ಉಪಾಧ್ಯಕ್ಷ ಪದವಿಗೆ ಶ್ರೀಯುತ ಯನ್. ಯನ್. ರಾಮಶೆಟ್ಟಿಯವರನ್ನೂ ಕಾಂಗ್ರೆಸು ಪಕ್ಷದ ಉಮೇದುವಾರರುಗಳಾಗಿ ಆರಿಸಲಾಯಿತೆಂದು ತಿಳಿಯಬರುತ್ತದೆ.

ಅಸಿಸ್ಟೆಂಟ್ ಕಮಿಷನರು ಮತ್ತು ಡಿಸ್ಟ್ರಿಕ್ಟ್ ಮೇಜಿಸ್ಟ್ರೇಟರಾದ ರಾ. ಸಾ. ಮಂಡೇಪಂಡ ಮಂದಣ್ಣನವರು ಈ ತಾ. 15 ರಿಂದ ಮೂರು ತಿಂಗಳು ರಜ ತೆಗೆದುಕೊಂಡಿರುವರು. ಅವರ ಬದಲು ಮೆ. ಕರವಂಡ ಚಂಗಪ್ಪನವರು ಅಸಿಸ್ಟೆಂಟ್ ಕಮಿಷನರ್ ಮತ್ತು ಡಿಸ್ಟ್ರಿಕ್ಟ್ ಮೇಜಿಸ್ಟ್ರೇಟರಾಗಿಯೂ, ಮೆ. ನೆಲ್ಲಮಕ್ಕಡ ಸುಬ್ಬಯ್ಯನವರು (ಅವರ ರಜೆಯನ್ನು ವಜಮಾಡಿ) ಲ್ಯಾಂಡ್ ರಿಕಾರ್ಡ್ಸಿನ ಡೆಪ್ಯುಟಿ ಡೈರೆಕ್ಟರ್ ಮತ್ತು ಸಹಕಾರಿ ಸಂಘಗಳ ರಿಜಿಸ್ಟ್ರಾರಾಗಿಯೂ ನೇಮಿಸಲ್ಪಟ್ಟಿರುವರು.

ವೀರಾಜಪೇಟೆ ಹೈಸ್ಕೂಲಿನಿಂದ ಸ್ಕೂಲ್ ಫೈನಲ್ ಪರೀಕ್ಷೆಗೆ ಕೂತ 30 ವಿದ್ಯಾರ್ಥಿಗಳ ಪೈಕಿ ಮೆ. ಗಳಾದ (1) ನಾಣಮಂಡ ಕೆ. ಪೊನ್ನಪ್ಪ, (2) ಕೆ. ಅಣ್ಣಾಜಿರಾವ್, (3) ಐಚೆಟ್ಟಿರ ಯಂ. ಮುತ್ತಣ್ಣ, (4) ಕೊಳ್ಳಿಮಾಡ ಕೆ. ಅಚ್ಚಯ್ಯ, (5) ನೆಲ್ಲಮಕ್ಕಡ ಯನ್. ಸ್ವಾಮಯ್ಯ, (6) ಕೋ ವಿರುಣೆಯಂಡ ಬಿ. ಚಂಗಪ್ಪ, (7) ಕಲ್ಲಪಂಡ ಸಿ. ಕಾರ್ಯಪ್ಪ, (8) ಮೊಣ್ಣಂಡ ಎ. ಉತ್ತಪ್ಪ, (9) ಪಟ್ಟಚೆರವಂಡ ಸಿ. ದೇವಯ್ಯ, (10) ಕೋಟೆರ ಪಿ. ದೇವಯ್ಯ, (11) ಉದಿಯಂಡ ಎಂ. ಕಾರ್ಯಪ್ಪ, (12) ಕಾಯಪಂಡ ಬಿ. ಐಯ್ಯಪ್ಪ, (13) ಅಮ್ಮಣಿಚಂಡ ಯನ್. ಮಂದಣ್ಣ, (14) ಕಡೇಮಾಡ ಕೆ ಬಿದ್ದಪ್ಪ, (15) ಬಿದ್ದಂಡ ಬಿ. ಮೊಣ್ಣಪ್ಪ (16) ಕೇಳಪಂಡ ಯಂ. ಪೂವಯ್ಯ (17) ಕಡಿಯಂಗಡ ಕೆ. ಕಾಳಯ್ಯ, (18) ಪಂದಿಕಂಡ ಯಂ. ಮಾದಪ್ಪ, (19) ಐಚೆಟ್ಟಿರ ಯನ್. ನಾಣಯ್ಯ, (20) ಕೋದಂಡ ಯಸ್. ಮೊಣ್ಣಪ್ಪ, (21) ಅಮ್ಮಣಿಚಂಡ ಕೆ. ದೇವಯ್ಯ, (22) ಮೊಳಕಂಡ ಯಂ. ಮುತ್ತಪ್ಪ, (23) ಕುಟ್ಟಂಡ ಯನ್. ಗಣಪತಿ, (24) ಶ್ರೀಮತಿ ಮಾಳೇಟಿರ ಡಬ್ಲ್ಯು. ದೇವಕಿ ಮತ್ತು (25) ಶ್ರೀಮತಿ ಮಂಡುಡ ಎ. ಪಾರ್ವತಿಯವರುಗಳು ಪಾಸಾಗಿರುವರೆಂದು ತಿಳಿಸಲು ಸಂತೋಷಪಡುತ್ತೇವೆ. ಇವರಿಗೆಲ್ಲಾ ನಮ್ಮ ಅಭಿವಂದನೆಗಳಿವೆ.

ಹಿಂದೂ ದೇಶ.

ಪಂಡಿತ ನೆಹರೂರವರು, ಇಂಗ್ಲೆಂಡಿನಲ್ಲಿ ನಾಲಕ್ಕು ವಾರಗಳಕಾಲ ಬಂದು ತಂಗಿದ್ದು, ಮುಂದೆ ಪೂರ್ವಾಭಿಮುಖರಾಗಿ ತೆರಳುವರು.

ಶ್ರೀ. ಬುಲಾಭಾಯಿ ದೇಸಾಯಿಗಳು, ಜಾಮಿಗೆ ಜಾ ಸತ್ಕಾರ ಮಾಡಿದ, ಸಿಂಧ್ ಪ್ರಾಂತದ ಪ್ರಧಾನರ ತಲೆಯ ಮೇಲೆ, ಒಂದು ಗಾಂಧಿ ಟೋಪಿಯನ್ನಿಟ್ಟು, 'ನೀವು ಅಚ್ಚ ಕಾಂಗ್ರೆಸ್ ಮಂದಿಯಾಗುವಿರೆಂದು ನಾನು ನಂಬಿದ್ದೇನಾಗಿ, ಅಪ್ಪಣೆ ಕೊಡಿಸಿದರು.

ಕನ್ಯಾಶುಲ್ಕ, ವರಶುಲ್ಕಗಳ ಮೂಲಕ ಅನೇಕ ಸಂಸಾರಗಳು ಸಾಲಗಾರರ ಪಾಲಾಗಿ ನಾಶವಾಗಿ ಹೋಗುತ್ತಿವೆ. ಆದುದರಿಂದ ಈ ದುಷ್ಟ ಪದ್ಧತಿಯನ್ನು ದೂರ ಮಾಡಲು ಕಾಂಗ್ರೆಸ್ ಮಂತ್ರಿಗಳು ಬೀಹಾರು ಅಸೆಂಬ್ಲಿಯಲ್ಲಿ ಒಂದು ಮಸೂದೆಯನ್ನು ಪ್ರತಿಪಾದಿಸಿರುವರು.

ಜಬ್ಬಲ್ಪುರ ಪ್ರಾಂತದಲ್ಲಿ, ವಿಚಾರಣೆಗೆ ಒಳಗಾಗಲಿದ್ದ ಒಬ್ಬ ಕೈದಿ, ಲಾಕಪ್ಪಿನಲ್ಲಿರುವಾಗಲೇ ಮೃತನಾದದುದರಿಂದ, ಇದು ಕೊಲೆಯಾಗಿರಬೇಕೆಂಬ ಆರೋಪದ ಮೇಲೆ, ಒಬ್ಬ ಪೋಲೀಸ್ ಸಬ್ ಇನಸ್ಪೆಕ್ಟರ್ ಮತ್ತು 9 ಮಂದಿ ಇತರರ ಮೇಲೆ ಪ್ರಾಶಿಕ್ಯೂಷನ್ ನಡೆಸಲು, ಮಧ್ಯ ಪ್ರಾಂತದ ಸರಕಾರವು, ಅಪ್ಪಣೆ ಕೊಟ್ಟಿದೆ.

ಕಲ್ಕತ್ತೆಯಲ್ಲಿ ನಮ್ಮ ರಾಷ್ಟ್ರಪತಿಗಳು, ಸದ್ಯದಲ್ಲೇ ಅಲ್ಲಿನ ಪ್ರಮುಖ ವ್ಯಾಪಾರೀ ಸಂಸ್ಥೆಗಳ ಒಡೆಯರದೊಂದು ಸಭೆ ಸೇರಿಸಿ, ನಿರುದ್ಯೋಗಿಗಳಾದ, ಹಲವು ಮಂದಿ ರಾಜಕೀಯ ಬಂದಿಗಳಿಗೆ, **ಉದ್ಯೋಗವನ್ನು** ದೊರಕಿಸಿ **ಕೊಡುವ ಉ**ಪಾಯವೇನಾದರೂ ಇದ್ದೀತೇ ಎಂದು **ಆ** ವ್ಯಾಪಾರಿಗಳೊಡನೆ **ಆಲೋಚಿಸಲಿರು**ವರು.

ಬೊಂಬಾಯಿ ಅಧಿಪತ್ಯದಲ್ಲಿ ಕೈಗಾರಿಕೆಯ ಹಿತಸೂಚನೆಯ ಸಭೆಯೊಂದು ರಚಿಸಲ್ಪಟ್ಟಿದೆ. ಸರ್. ಚುನೀಲಾಲ್ ವಿ. ಮೆಹ್ತಾರವರು ಈ ಬೋರ್ಡಿನ ಚೆಯರ್ ಮೇನರು. ಈ ಬೋರ್ಡ್ ಇನ್ನು, ಅಗತ್ಯ ಕಂಡಂತೆ, ಸಬ್ ಕಮಿಟಿಗಳನ್ನು ಸ್ಥಾಪಿಸಿ, ಕೈಗಾರಿಕೆಗಳ ಉನ್ನತಿಯ ಕುರಿತು ತಕ್ಕ ಸಲಹೆಗಳನ್ನು ಸರಕಾರಕ್ಕೆ ಕೊಡಲಿರುವುದು.

ಸಾರ್ವಜನಿಕ ನಿಧಿಗಳ ಸಹಾಯದಿಂದ ನಡೆಯುಕೊಂಡು ಬರುವ ವಿದ್ಯಾಶಾಲೆಗಳಲ್ಲಿ ವಿದ್ಯಾರ್ಥಿಗಳನ್ನು ಸೇರಿಸಿಕೊಳ್ಳಲು ಜಾತಿಯ ನಿರ್ಬಂಧನೆಯಿರಬಾರದೆಂದೂ, ಯಾವ ಶಾಲೆಯಾದರೂ ಮತಾಭಿಮಾನದಿಂದ ಇತರ ವರ್ಣದ ವಿದ್ಯಾರ್ಥಿಗಳನ್ನು ಸೇರಿಸಲು ತಿರಸ್ಕರಿಸಿದಲ್ಲಿ ಅಂಥಾ ಶಾಲೆಗಳಿಗೆ ಸರ್ಕಾರದವರು ಸಹಾಯದ್ರವ್ಯವನ್ನು ಕೊಡುವುದಿಲ್ಲವೆಂದೂ ಬೊಂಬಾಯಿ ಸರ್ಕಾರದವರು ಪ್ರಕಟಣೆ ಹೊರಡಿಸಿರುತ್ತಾರೆ.

ಅಖಿಲ ಹಿಂದೂಸ್ಥಾನದ ಕಾಂಗ್ರೆಸ್ ಸಭೆಯ ಅಧ್ಯಕ್ಷರಾದ ಮ. ಸುಭಾಸ್ ಚಂದ್ರಬೋಸರವರು ಕಳೆದ ಮೇ ತಾ. 8 ರಲ್ಲಿ ಮಿದ್ನಾಪುರಕ್ಕೆ ಬಂಗಾಳ ನಾಗಪುರದ ರೈಲ್ವೆ ಗಾಡಿಯಲ್ಲಿ ಪ್ರಯಾಣಮಾಡುತ್ತಿದ್ದಾಗ ಆ ರೈಲ್ ಗಾಡಿಯಲ್ಲಿದ್ದ ಗಾರ್ಡ್ ಶ್ರೀ. ಸುಭಾಸ್ ಚಂದ್ರಬೋಸ್‌ರವರ ವಿಷಯದಲ್ಲಿ ಅಸಭ್ಯ ರೀತಿಯಲ್ಲಿ ವರ್ತಿಸಿ ತನ್ನ ಕರ್ತವ್ಯವನ್ನು ನೆರವೇರಿಸಲಿಲ್ಲವೆಂದು ಅವನಿಗೆ ಆ ರೈಲ್ವೆ ಇಲಾಖೆಯವರು ತಕ್ಕ ಶಿಕ್ಷೆ ವಿಧಿಸಿರುತ್ತಾರೆ.

ಕೀರ್ತಿಶೇಷರಾದ ರಾಜಾ ಸರ್. ಟಿ. ಮಾಧವರಾಯರ ಮರಿಮಗ ಡಾ. ಟಿ. ವಿ. ಮಾಧವರಾಯರು ನಿನ್ನೂ ನಗರದಲ್ಲಿ ಕಳೆದ ವಾರ 38 ನೇ ವಯಸ್ಸಿನಲ್ಲಿ ಕಾಲವಾದರು. ಇವರು ತಮ್ಮ ಆಸ್ತಿಯಲ್ಲಿ ಬಹುಭಾಗವನ್ನು ಅಂದರೆ ಸುಮಾರು ಎರಡು ಲಕ್ಷ ರೂಪಾಯಿನಷ್ಟು ಆಸ್ತಿಯನ್ನು ಕಾಂಗ್ರೆಸ್ ಪಕ್ಷದ ಮೂಲಧನಕ್ಕೆ ಧರ್ಮಾರ್ಥವಾಗಿ ಕೊಡತಕ್ಕದ್ದೆಂದೂ, ಈ ರಾಷ್ಟ್ರಕ್ಕೆ ಸ್ವಾತಂತ್ರ್ಯವನ್ನು ದೊರಕಿಸುವ ರೀತಿ ಪ್ರಯಿಗಳನ್ನು ತರಬೇತು ಮಾಡುವುದಕ್ಕೆ ಹಣವನ್ನು ವಿನಿಯೋಗಿಸತಕ್ಕದ್ದೆಂದೂ ಮರಣಶಾಸನವನ್ನು ಬರೆದಿರುವರು.

ಹೆಸರು ವಿಳಾಸಗಳನ್ನು ಪ್ರಕಟಪಡಿಸದೆ, ಮಹಾನುಭಾವರೊಬ್ಬರು, 'ಸುಭಾಷ್ ಕಾಂಗ್ರೆಸ್ ಫಂಡಿಗೆ' 10 ಸಾವಿರ ರೂಪಾಯಿಗಳ ಒಂದು ಗುಪ್ತ ದಾನ ಮಾಡಿರುತ್ತಾರೆ. ಈ ಫಂಡು, ಶ್ರೀ. ಸುಭಾಷ್ ಚಂದ್ರ ಭೋಸರವರ ಬಿಡುಗಡೆಯೊಡನೆಯೇ, ಅಂದರೆ, 1937 ನೇ ಮಾರ್ಚಿಯಲ್ಲಿ ಸ್ಥಾಪಿಸಲ್ಪಟ್ಟಿತು. ಈಗ ಅದು, ಈ 10 ಸಾವಿರ ರೂಪಾಯಿಗಳ ದಾನವೂ ಸೇರಿ, ಒಟ್ಟಿಗೆ 35 ಸಾವಿರಗಳಷ್ಟಾಗಿದೆ. ಈ ಫಂಡು, ಶ್ರೀ. ಭೋಸರವರ ತ್ಯಾಗಬುದ್ಧಿ ಮತ್ತು ಕಷ್ಟನಿಷ್ಠುರಗಳ ಸಹನೆಯ ಮೆಚ್ಚುಗೆಗಾಗಿ ರಚಿಸಲ್ಪಟ್ಟಿದ್ದು. ಈ ಫಂ

ಕೊಡಗು

ಜೂನ್ ತಾರೀಕು ೧೭ನೇ ಶುಕ್ರವಾರ ೧೯೩೮.

ಹಿಂದೀ ಭಾಷೆಯ ವಿರುದ್ಧ ಚಳವಳ!

ಮದ್ರಾಸು ಪ್ರಾಂತ್ಯದ ಮುಖ್ಯವಾಗಿ ತಮಿಳು ಜಿಲ್ಲೆಗಳಲ್ಲಿ, ಶಾಲೆಗಳಲ್ಲಿ ಹಿಂದೀ ಭಾಷೆಯನ್ನು ಖಡ್ಡಾಯವಾಗಿ ಕಲಿಸಲು ಮಾಡಿರುವ ಏರ್ಪಾಡಿಗೆ ಒಂದು ವಿರುದ್ಧ ಚಳವಳವು ಹೊರಟಿರುವುದು ಹಲವರಿಗೆ ಆಶ್ಚರ್ಯವನ್ನುಂಟುಮಾಡಬಹುದು. ಮೂವತ್ತೈದು ಕೋಟಿ ಜನಸಂಖ್ಯೆ ಇರುವ ಭಾರತ ಭೂಮಿಯು ಹಲವು ವರ್ಷಗಳಿಂದ ಗುಲಾಮಗಿರಿಯಲ್ಲಿ ಬಿದ್ದು ನರಳುತ್ತಿರುವುದಕ್ಕೆ ಭಾರತೀಯರಲ್ಲಿ ಒಗ್ಗಟ್ಟಿಲ್ಲದೆ ಇರುವುದೇ ಮುಖ್ಯ ಕಾರಣವಾಗಿದೆ. ಇಂಥಾ ಒಗ್ಗಟ್ಟಿಗೆ ಏಕ ಭಾಷೆಯ ಬಾಂಧವ್ಯವು ಅಗ್ಯಗತ್ಯವಾಗಿದೆ. ಹಿಂದೀಯರು ಒಂದು ಜನಾಂಗವೆಂದೆನ್ನಿಸಿಕೊಳ್ಳಬೇಕಾದರೆ ಅವರಿಗೆ ಒಂದು ರಾಷ್ಟ್ರ ಭಾಷೆಯು ಇದ್ದೇ ಇರಬೇಕು. ಹಿಂದೂಸ್ಥಾನದ ದಕ್ಷಿಣದವರು ಉತ್ತರದವರೊಂದಿಗೂ, ಪೂರ್ವದಲ್ಲಿರುವವರು ಪಶ್ಚಿಮದವರೊಂದಿಗೂ ಪರಸ್ಪರ ಮಿಳಿತವಾಗಿ ಅವರ ಅಭಿಪ್ರಾಯವನ್ನು ಸರಳವಾಗಿ ತಿಳಿದುಕೊಳ್ಳಲು ಇಂಡಿಯಾಕ್ಕೆ ಏಕ ಭಾಷೆಯ ಅವಶ್ಯಕತೆ ಇದೆ. ಹಿಂದೂಸ್ಥಾನದ ಇಂಥಾ ಏಕ ಭಾಷೆಯಾಗಲು 'ಹಿಂದೀ' ಯೂ 'ಹಿಂದೂಸ್ಥಾನೀ' ಯೇ ಯೋಗ್ಯವಾದದ್ದು ಎಂಬುವದರಲ್ಲಿ ಸಂಶಯವಿಲ್ಲ.

'ಹಿಂದೀ' ಅಥವಾ 'ಹಿಂದೂಸ್ಥಾನಿ' ಶಬ್ದವು ಹಿಂದೂ ದೇಶದ ಹೆಸರಿನಿಂದ ಉಂಟಾದದ್ದಾಗಿದೆ. ಭಾರತ ಭೂಮಿಯನ್ನು ಪಾರ್ಶಿಯವರು 'ಹಿಂದ್' ಎಂದೂ, ಮೊಗಲರು 'ಹಿಂದೂಸ್ಥಾನ್' ಎಂದೂ ಕರೆದರು. ಆದಕಾರಣ ಇವೆರಡೂ ಭಾರತ ಭೂಮಿಯ ಹೆಸರನ್ನು ಸೂಚಿಸುವ ಒಂದೇ ಅರ್ಥದ ಶಬ್ದಗಳಾಗಿವೆ. 'ಹಿಂದೀ' ಯೂ 'ಹಿಂದೂಸ್ಥಾನೀ' ಭಾಷೆಯೆಂದರೆ ಒಂದೇ ಭಾಷೆಯಾಗಿದೆ. ಇದು ಹಿಂದೂಸ್ಥಾನದ ಮುಖ್ಯ ಕೋಮುಗಳಾದ ಹಿಂದೂಗಳಿಗೂ, ಮುಸಲ್ಮಾನರಿಗೂ ಅರಿತುಕೊಳ್ಳಲು ಸುಲಭವಾದ ಭಾಷೆಯಾಗಿದೆ; ಅಲ್ಲದೆ ಇಂಡಿಯಾದ ಮೂರರಲ್ಲಿ ಎರಡು ಭಾಗದಷ್ಟು ಜನರು ಈಗ ಹಿಂದೀ ಭಾಷೆಯನ್ನಾಡುವವರಾಗಿದ್ದಾರೆ. ಹಿಂದಿಯ ಜ್ಞಾನವು ಕಡಿಮೆಯಾಗಿರುವ ಪಶ್ಚಿಮ ಹಿಂದೂಸ್ಥಾನದಲ್ಲೂ ಕೂಡ ವ್ಯಾಪಾರ ಸ್ಥಳಗಳಲ್ಲೂ, ಮಾರ್ಕೆಟುಗಳಲ್ಲೂ ಈ ಭಾಷೆಯ ಉಪಯೋಗವು ಕಂಡುಬರುತ್ತದೆ. ಆದುದರಿಂದಲೇ ಕಾಂಗ್ರೆಸು ಸಂಸ್ಥೆಯು 'ಹಿಂದೀ' ಯನ್ನು ಇಂಡಿಯಾದ ರಾಷ್ಟ್ರ ಭಾಷೆಯನ್ನಾಗಿ ಮಾಡಬೇಕೆಂದು ನಿಶ್ಚಯಿಸಿ, ಹಲವು ವರ್ಷಗಳಿಂದ ಇದರ ಪ್ರಚಾರವನ್ನು ಮಾಡುತ್ತಿರುವುದಾಗಿದೆ.

ಈ ತತ್ವವನ್ನನುಸರಿಸಿಯೇ ಮದ್ರಾಸು ಪ್ರಾಂತ್ಯದ ಕಾಂಗ್ರೆಸು ಮಂತ್ರಿ ಮಂಡಳವು ಅಲ್ಲಿಯ ಶಾಲೆಗಳಲ್ಲಿ ಹಿಂದೀ ಭಾಷೆಯನ್ನು ಖಡ್ಡಾಯವಾಗಿ ಕಲಿಸಲು ಏರ್ಪಾಡು ಮಾಡಿರುವರು. ಕೆಲಸವನ್ನು ನಡಿಸಿಕೊಂಡು ಹೋಗುವಷ್ಟಾದರೂ ಹಿಂದೀ ಭಾಷೆಯ ಜ್ಞಾನವು ಮಕ್ಕಳಿಗೆ ಇರಬೇಕಾದ ಕಾರಣ ಇದನ್ನು ಒಂದರಿಂದ ಮೂರನೇ ಫಾರ್ಮುಗಳ ವರೆಗೆ ಖಡ್ಡಾಯವಾಗಿ ಕಲಿಸಲು ನಿಶ್ಚಯಿಸಿದ್ದಾರೆ. ಮಕ್ಕಳಿಗೆ ತಮ್ಮ ಸ್ವಭಾಷೆಯಾದ ಕನ್ನಡ, ತೆಲುಗು, ತಮಿಳು ಯಾ ಮಲೆಯಾಳ ಭಾಷೆಯೊಂದೇ ಕಲಿಸಲ್ಪಡುತ್ತಿರುವ ಪ್ರಾಥಮಿಕ ಶಾಲೆಗಳಲ್ಲಿ ಹಿಂದೀ ಭಾಷೆಯನ್ನು ಕಲಿಸುವುದಿಲ್ಲ. ತಮ್ಮ ಸ್ವಭಾಷೆಯು ತಕ್ಕ ಮಟ್ಟಿಗೆ ಮುಂದುವರಿದ್ದ ಮೇಲೆ ಹೈಸ್ಕೂಲ್ ಸೆಕೆಂಡರಿ ತರಗತಿಗಳಲ್ಲಿ ಮಾತ್ರ ಈ ಭಾಷೆಯು ಕಲಿಸಲ್ಪಡುವುದು. ಹಿಂದೂಸ್ಥಾನಿಯು ಈ ವರ್ಗಗಳಲ್ಲಿ ಖಡ್ಡಾಯವಾಗಿ ಕಲಿಸಲ್ಪಡುತ್ತಿದ್ದಾಗ್ಯೂ ಹುಡುಗರನ್ನು ಒಂದು ತರಗತಿಯಿಂದ ಮೇಲಿನ ತರಗತಿಗೆ ಕಳುಹಿಸುವಾಗ ಈ ಭಾಷೆಯ ಪರೀಕ್ಷೆಯಲ್ಲಿ ತೇರ್ಗಡೆಯಾಗಬೇಕೆಂಬ ನಿಬಂಧನೆ ಇಲ್ಲ. ಹಿಂದೀ ಭಾಷೆಯನ್ನು ಬರೆಯಲು ವಿದ್ಯಾರ್ಥಿಗಳ ಇಚ್ಛೆಗಳಿಗನುಸಾರವಾಗಿ ನಾಗರಿ ಅಥವಾ ಉರ್ದು ಲಿಪಿಯನ್ನು ಉಪಯೋಗಿಸಬಹುದು. ವಿದ್ಯಾರ್ಥಿಗಳಿಗೆ ಸ್ವಭಾಷೆಯ ಹೆಚ್ಚಿನ ಜ್ಞಾನ ಉಂಟಾಗುವಂತೆ ಎಲ್ಲಾ ವಿಷಯಗಳನ್ನೂ ಪರಭಾಷೆಯಾದ ಇಂಗ್ಲಿಷಿನಲ್ಲಿ ಕಲಿಸುವುದರ ಬದಲು ಮಾತೃಭಾಷೆಯಲ್ಲೇ ಕಲಿಸುವ ಏರ್ಪಾಡು ಮಾಡಲಾಗುತ್ತಿದೆ. ಹೈಸ್ಕೂಲಿನಲ್ಲಿ ಮಾತೃ ಭಾಷೆಯನ್ನು ಬಿಟ್ಟು, ಅದರ ಬದಲು ಹಿಂದೂಸ್ಥಾನಿಯನ್ನು ತೆಗೆದುಕೊಳ್ಳಲು ಯಾವ ವಿದ್ಯಾರ್ಥಿಗೂ ಅನುಮತಿ ಕೊಡುವುದಿಲ್ಲ. ಮಾತೃ ಭಾಷೆಗೆ ಶಾಲೆಗಳಲ್ಲಿ ಈ ಮೊದಲು ಇದ್ದದಕ್ಕಿಂತ ಹೆಚ್ಚಿನ ಪ್ರಾಮುಖ್ಯತೆಯನ್ನು ಕೊಡಲೂ, ಇದರೊಂದಿಗೆ ಇಂಡಿಯಾದ ರಾಷ್ಟ್ರೀಯ ಭಾಷೆಯಾದ ಹಿಂದೀಯ ಸ್ವಲ್ಪ ಜ್ಞಾನವನ್ನು ಮಾಡಿಕೊಡಲೂ ಮಾಡಿರುವ ಮದ್ರಾಸು ಕಾಂಗ್ರೆಸು ಸರ್ಕಾರದ ಏರ್ಪಾಡನ್ನು ವಿರೋಧಿಸಲು ಅಲ್ಲಿ ಹಲಕೆಲವರು ಹೂಡಿರುವ ಚಳವಳವು ಖಂಡನೀಯವಾದದ್ದು. ಇಂಡಿಯಾಕ್ಕೆ ಸಂಪೂರ್ಣ ಪರದೇಶೀ ಭಾಷೆಯಾದ ಇಂಗ್ಲಿಷನ್ನು ತಮ್ಮ ಮಾತೃ ಭಾಷೆಗಿಂತ ಹೆಚ್ಚಾಗಿ ಅಪ್ಪಿ ಹಿಡಿದಿರುವ ಕೆಲವು ಮಹನೀಯರು ಈ ಚಳವಳದಲ್ಲಿ ಭಾಗವಹಿಸುತ್ತಿರುವುದು ಮತ್ತೂ ವಿಷಾದಕರ.

ಈ ಚಳವಳದ ನಿಜವಾದ ಮೂಲವನ್ನು ಹುಡುಕಿನೋಡಿದರೆ, ಕಾಂಗ್ರೆಸು ಮಂತ್ರಿ ಮಂಡಲದ ಜಯಪ್ರದವಾದ ಆಡಳಿತೆಯ ಮೇಲೆ ಕಾಂಗ್ರೆಸ್ಸಿನ ವಿರೋಧಿಗಳಿಗೆ ಉಂಟಾಗಿರುವ ಅಸೂಯೆಯೇ ಇದಕ್ಕೆ ಮುಖ್ಯ ಕಾರಣವೆಂದು ಕಂಡುಬರುತ್ತದೆ. ಈ ಮೊದಲು ನಡೆದ ಚುನಾವಣೆಗಳಲ್ಲಿ ಕಾಂಗ್ರೆಸ್ಸಿನ ಮುಂದೆ ಪರಾಜಿತರಾದ 'ಜಸ್ಟಿಸ್' ಪಾರ್ಟಿಯ ಕೆಲವರೂ ಮತ್ತು ಕಾಂಗ್ರೆಸನ್ನು ವಿರೋಧಿಸುತ್ತಿರುವ ಕೆಲವು ಮುಸಲ್ಮಾನರೂ ಈ ಚಳವಳವನ್ನು ಪ್ರೋತ್ಸಾಹಿಸುತ್ತಿರುವುದಾಗಿದೆ. ಇದರಿಂದ ಹುರಿದುಂಬಿಸಲ್ಪಟ್ಟ ಕೆಲವು ಯುವಕರು ದಾರಿ ತಪ್ಪಿ, ಇದಕ್ಕಾಗಿ ಆ ಪವಿತ್ರ ಆಯುಧವಾದ ಸತ್ಯಾಗ್ರಹವನ್ನು ಕೈಕೊಂಡಿರುವರು. ಪ್ರಧಾನ ಮಂತ್ರಿಯ ಮನೆ ಎದುರುಗಡೆ 'ಪಿಕೆಟಿಂಗ' ಮಾಡಲು ತೊಡಗಿರುವರು. ಈ ಸಂಬಂಧ ಈಗಾಗಲೇ ಕೆಲವರು ದಸ್ತಗಿರಿ ಮಾಡಲ್ಪಟ್ಟಿರುವರು. ಈ ತರಹದಲ್ಲಿ ಪಿಕೆಟಿಂಗ್ ಮಾಡುವುದು ಸತ್ಯಾಗ್ರಹ ಚಳವಳದ ಗುರುಗಳಾದ ಮಹಾತ್ಮ ಗಾಂಧಿಯವರು ಬೋಧಿಸುತ್ತಿರುವ ಅಹಿಂಸಾ ತತ್ವಕ್ಕೆ ವಿರುದ್ಧವಾಗಿದೆ. ಈ ತಂಟೆಯ ಚಳವಳವು ಅಲ್ಲಲ್ಲಿ ಹರಡುತ್ತಿರುವುದರಿಂದ ಆ ಪ್ರಾಂತ್ಯದವರು ಈಗ ಹಲವು ಕಡೆಗಳಲ್ಲಿ ಸಾರ್ವಜನಿಕ ಸಭೆಗಳನ್ನು ಸೇರಿಸಿ, ಮಂತ್ರಿಗಳ ಈ ಕಾರ್ಯದಲ್ಲಿ ತಮ್ಮ ಸಂಪೂರ್ಣ ವಿಶ್ವಾಸವನ್ನೂ, ಬೆಂಬಲವನ್ನೂ ತೋರಿಸಲಾರಂಭಿಸಿರುವರು.

ಕೊಡಗಿನಲ್ಲಿ ಮದ್ರಾಸು ಪ್ರಾಂತ್ಯದ ವಿದ್ಯಾ ಇಲಾಖೆಯ ಕ್ರಮವನ್ನೇ ಅನುಸರಿಸಿ ನಡೆಯುವುದರಿಂದ ಈ ವಿಚಾರವು ಇಲ್ಲಿಗೂ ಸಂಬಂಧಿಸಿರುವುದಾಗಿದೆ. ಇಂದಲ್ಲದಿದ್ದರೂ, ನಾಳೆಯಾದರೂ ಇಲ್ಲಿಯ ಶಾಲೆಗಳಲ್ಲಿ ಹಿಂದೀಯು ಕಲಿಸಲ್ಪಡದೆ ಇರದು. ಆದುದರಿಂದ ಈ ವಿಚಾರದಲ್ಲಿ ನಮ್ಮ ನೆರೆ ಪ್ರಾಂತ್ಯದಲ್ಲಿ ನಡೆಯುತ್ತಿರುವ ಚಳವಳಕ್ಕೆ ನಮ್ಮ ದೇಶೀಯರೂ ಗಮನ ಕೊಡುವುದು ಉಚಿತವಾಗಿದೆ.

ಡಿ. ಬೋರ್ಡಿನ ಅಧ್ಯಕ್ಷರ ಚುನಾವಣೆ.

ಕಾಂಗ್ರೆಸ್ಸಿನ ಜಯ.

ಹೊಸ ಕೊಡಗು ಡಿಸ್ಟ್ರಿಕ್ಟ್ ಬೋರ್ಡಿನ ಪ್ರಥಮ ಮೀಟಿಂಗು ಈ ತಾ. 15ನೇ ಬುಧವಾರ ಬೆಳಿಗ್ಗೆ 11 ಗಂಟೆಗೆ ಕೊಡಗು ಕೌನ್ಸಿಲ್ ಹಾಲ್‌ನಲ್ಲಿ ಸೇರಿಯಿತು. ಕಮಿಷನರರು ಅಧ್ಯಕ್ಷರಾಗಿದ್ದರು. ನೇಮಿತ ಮೆಂಬರಾದ ಡಾಕ್ಟರ್ ವಾರಣ್ಣಯವರು ಮತ್ತು ಯೂರೋಪಿಯನ್ ಪ್ಲಾಂಟರ್ ಮೆಂಬರಾದ ಮಿ. ಬ್ರಮೋಲ್ಸ್ ರವರು ಇವರಿಬ್ಬರು ವಿನಹ ಉಳಿದ 17 ಸದಸ್ಯರುಗಳು ಹಾಜರಿದ್ದರು. 11 ಕಾಂಗ್ರೆಸ್ ಮೆಂಬರುಗಳು ಬಿಳೀ ಟೋಪಿ ಮತ್ತು ಉಡುಪನ್ನು ಧರಿಸಿದ್ದರು. ಪ್ರೇಕ್ಷಕರು ಹಲವರು ನೆರೆದಿದ್ದರು. ಮೀಟಿಂಗು ಪ್ರಾರಂಭವಾದ ಕೂಡಲೇ ಬೋರ್ಡಿನ ಅಧ್ಯಕ್ಷರ ಚುನಾವಣೆಯನ್ನು ಮಾಡಬೇಕೆಂದು ಕಮಿಷನರರು ಹೇಳಿದರು. ಮಿ. ಪಂದ್ಯಂಡ ಬೆಳ್ಯಪ್ಪನವರನ್ನು ಬೋರ್ಡಿನ ಅಧ್ಯಕ್ಷರಾಗಿ ಆರಿಸಬೇಕೆಂದು ಮಿ. ಯೆನ್. ಯಸ್. ರಾಮಕೃಷ್ಣಯ್ಯನವರು ಸೂಚಿಸಿದರು. ಮಿ. ಮಂಡೇಪಂಡ ಸೋಮಯ್ಯನವರು ಅನುಮೋದಿಸಿದರು. ಬೇರೆ ಯಾರ ಹೆಸರೂ ಸೂಚಿಸಲ್ಪಡದ್ದರಿಂದ ಮಿ. ಪಿ. ಐ. ಬೆಳ್ಯಪ್ಪನವರು ಸರ್ವ ಸಮ್ಮತದಿಂದ ಬೋರ್ಡಿನ ಅಧ್ಯಕ್ಷರಾಗಿ ಆರಿಸಲ್ಪಟ್ಟರೆಂದು ಪ್ರೆಸಿಡೆಂಟರಾಗಿದ್ದ ಕಮಿಷನರವರು ಹೇಳಿದರು.

ಮಿ. ರಾಮಕೃಷ್ಣಯ್ಯನವರು ಹೊಸ ಅಧ್ಯಕ್ಷರನ್ನು ಅಭಿನಂದಿಸುತ್ತಾ-ಕಳೆದ ವರ್ಷ ಬೋರ್ಡಿನ ಕೆಲಸ ಕಾರ್ಯಗಳು ಸರಾಗವಾಗಿ ನಡೆಯದ ಕಾರಣ ಪುನಹ ಚುನಾವಣೆ ನಡೆದಲ್ಲಿ ಕಾಂಗ್ರೆಸ್ ಪಕ್ಷವು ಅದ್ವಿತೀಯ ಜಯವನ್ನು ಪಡೆದು ಪಂಥವನ್ನು ಗೆದ್ದಿತು. ಆದುದರಿಂದ ಆ ಪಕ್ಷದ ಉಮೇದ್ವಾರರರಾದ ಮಿ. ಬೆಳ್ಯಪ್ಪನವರು ಈಗ ಸರ್ವ ಸಮ್ಮತದಿಂದ ಅಧ್ಯಕ್ಷರಾಗಿ ಆರಿಸಲ್ಪಟ್ಟದ್ದು ದೇಶದವರಿಗೆ ಸಂತೋಷವನ್ನುಂಟುಮಾಡದಿರದು. ಹೊಸ ಅಧ್ಯಕ್ಷರೊಂದಿಗೆ ಬೋರ್ಡಿನ ಮೆಂಬರುಗಳೆಲ್ಲರೂ ಸಹಕರಿಸಿ ಬೋರ್ಡಿನ ಕಾರ್ಯಗಳನ್ನು ಜಯಪ್ರದವಾಗಿ ನಡಿಸಲು ಎಲ್ಲರೂ ಪ್ರಯತ್ನಿಸುವರೆಂದು ಮುಂತಾಗಿ ಭಾಷಣ ಮಾಡಿದರು.

ಮಿ. ಸಿ. ಯಂ. ಪೂಣಚ್ಚನವರು- 'ಹೊಸ ಅಧ್ಯಕ್ಷರನ್ನು ಅಭಿನಂದಿಸುವುದರಲ್ಲಿ ನಾನೂ ಸೇರುತ್ತೇನೆ. ಕಳೆದ ಚುನಾವಣೆಯಲ್ಲಿ ಕಾಂಗ್ರೆಸು ಶೇಕಡ ನೂರರಷ್ಟು ಜಯವನ್ನು ಪಡೆದು, ಇಂದು ಏಕೋ ಭಾವದಿಂದ ಮಿ. ಬೆಳ್ಯಪ್ಪನವರನ್ನು ಅಧ್ಯಕ್ಷರಾಗಿ ಆರಿಸಿ, ಅವರ ಮೇಲೆ ದೊಡ್ಡ ಜವಾಬ್ದಾರಿಯನ್ನು ಹೊರಿಸಿದೆ. ಈ ಜವಾಬ್ದಾರಿಯನ್ನು ಅವರು ದೇಶದವರಿಗೆ ತೃಪ್ತಿಯಾಗುವಂತೆ ನಡಿಸಲು ದೇವರು ಅವರಿಗೆ ಬುದ್ಧಿವಂತಿಕೆಯನ್ನೂ, ಶಕ್ತಿಯನ್ನೂ ಕೊಡಲೆಂದು ದೇವರನ್ನು ಬೇಡುತ್ತೇನೆ' ಎಂದು ಮೊದಲಾಗಿ ಮಾತಾಡಿದರು.

ಮಿ. ಪಿ. ಬೆಳ್ಯಪ್ಪನವರು ಅಭಿನಂದಿಸಿದವರನ್ನು ವಂದಿಸುತ್ತಾ-'ಇಂದು ಈ ಪದವಿಯು ನನಗೆ ನನ್ನ ಸ್ವಂತ ಯೋಗ್ಯತೆಯಿಂದ ದೊರೆತದ್ದಲ್ಲ; ಕಾಂಗ್ರೆಸು ಸಂಸ್ಥೆಯ ಮಹತ್ವದಿಂದ ದೊರೆತದ್ದಾಗಿದೆ. ಇದು ಹತ್ತಿಯ ಹಾಸಿಗೆಯಲ್ಲ. ಮುಳ್ಳಿನ ಕಿರೀಟವೆಂದು ನಾನು ಅರಿತುಕೊಂಡಿದ್ದೇನೆ. ಈ ದೊಡ್ಡ ಜವಾಬ್ದಾರಿಯನ್ನು ದೇಶದ ಜನರಿಗೆ ಪ್ರಯೋಜನವಾಗುವಂತೆ ನಡಿಸಲು ನನಗೆ ಈ ಬೋರ್ಡಿನ ಎಲ್ಲಾ ಮೆಂಬರುಗಳ ಮನಃಪೂರ್ತಿಯಾದ ಸಹಕಾರ ಅವಶ್ಯಬೇಕಾಗಿದೆ. ಆರ್ಥಿಕ ಹೀನಸ್ಥಿತಿಯ ಕಾರಣ ಇದೊಂದು ಬಿಕ್ಕಟ್ಟಿನ ಸಮಯ. ಆದ ಕಾರಣ ಬೋರ್ಡಿಗೆ ಸರ್ಕಾರದಿಂದ ದೊರೆಯುತ್ತಿರುವ ವಂತಿಗೆಯು ಕಡಿಮೆಯಾಗಲಿಕ್ಕಿಲ್ಲವಾಗಿ ಭಾವಿಸುತ್ತೇನೆ. ಈ ದಿನ ಬೋರ್ಡಿನ ಮೆಂಬರುಗಳೆಲ್ಲರೂ ನನ್ನ ಮೇಲೆ ವಿಶ್ವಾಸವನಿಟ್ಟು ಅಧ್ಯಕ್ಷನಾಗಿ ಆರಿಸಿದಂತೆಯೇ ಮುಂದಕ್ಕೂ ಬೋರ್ಡಿನ ಕಾರ್ಯಗಳನ್ನು ದೇಶದವರಿಗೆ ತೃಪ್ತಿಕರವಾಗಿ ನಡಿಸಲು ಸಹಾಯಮಾಡಬೇಕಾಗಿ ಪುನಹ ಕೋರುತ್ತೇ

ದಿ ಗಾರ್ಡಿಯನ್ ಆಫ್ ಇಂಡಿಯಾ ಇನಸ್ಯೂರೆನ್ಸ್ ಕಂಪೆನಿ ಲಿಮಿಟೆಡ್, ಮದ್ರಾಸು.

ಹೊಸ ಉದ್ಯೋಗ:—ಈ ವರ್ಷದಲ್ಲಿ 52,51,750 ರೂ. ಭರವಸೆಯ್ಯ 4689 ಪ್ರಪೋಸಲ್‌ಗಳು ಸಿಕ್ಕಿವೆ. ಅವರಲ್ಲಿ ಹಿಂದಿನ ವರ್ಷದ ಪೂರ್ತಿಯಾಗದ 1417 ಪ್ರಪೋಸಲ್‌ಗಳಬಾಬ್ತು 10,67,650 ರೂ. ಗಳ ಬಗ್ಗೆ ವರ್ಷಾವಧಿ 2,21,959-6-0 ರೂ. ವಿಮಾ ಕಂತು ಬರುತ್ತೆ. ಕಂಪೆನಿಯಿಂದ ಭರವಸೆ ಪಡೆಯುವ ಹಣ ರೂ. 39,38,150. ಬಾಕಿ ರೂ. 1,29,500 ಪುನಹ ಭರವಸೆ ಕೊಟ್ಟಿದ್ದಾಗಿದೆ. ಬಾಕಿ ಇರುವ ಪ್ರಪೋಸಲ್‌ಗಳು ವರ್ಷಾಂತ್ಯದಲ್ಲಿ ತಿರಸ್ಕರಿಸಲು, ಮುಂದುವರಿಸಲು ಇಲ್ಲವೇ ಪೂರ್ತಿಗೊಳ್ಳಲು ಕಾಯುತ್ತವೆ. ಈ ವರ್ಷದ ಹೊಸ ಉದ್ಯೋಗವು ಕಳೆದ ವರ್ಷದ ಹೊಸ ಉದ್ಯೋಗಕ್ಕಿಂತ ರೂ. 4,13,775 ಹೆಚ್ಚಿದೆ.

ಈ ಕೆಳಗಿನ ಒಳ್ಳೆ ಸಂಗತಿಗಳಿಂದ ಲಭಿಸಿದ ತೃಪ್ತಿಯನ್ನು ಮೆಂಬರುಗಳೊಡನೆ ಅನುಭವಿಸಲು ಡೈರೆಕ್ಟರುಗಳು ಇಷ್ಟಪಡುತ್ತಾರೆ.

ಇಂಡಿಯಾ ಸರಕಾರದ ಭರವಸೆಯಿಂದ ಜೀವವಿಮೆ ಕೆಲಸ ಮಾಡುವ 215 ಇಂಡಿಯನರ ಕಂಪೆನಿಗಳದೊಂದು ಈಗ ಪ್ರಕಟಿಸಲ್ಪಟ್ಟಿರುವ 'ಇಂಡಿಯನ್ ಇನ್ಶೂರೆನ್ಸ್ ಇಯರ್ ಬುಕ' ಎಂಬುವುದರಿಂದ ತಿಳಿದುಬರುತ್ತದೆ. ಈ ಕಂಪೆನಿಗಳಲ್ಲಿ ಗಾರ್ಡಿಯನ್ ಆಫ್ ಇಂಡಿಯಾವು ಹೊಸ ಉದ್ಯೋಗಗಳ ದೃಷ್ಟಿಯಿಂದ ಮೊದಲಿನ 20 ಕಂಪೆನಿಗಳೊಳಗೆ ತನ್ನ ಸ್ಥಾನವನ್ನು ಪಡೆದಿದೆ. ಈ ಸಂಗತಿಯು ಇದಕ್ಕಿಂತ ಅನೇಕ ವರ್ಷಗಳ ವರೆಗೆ ಶ್ರಮಿಸುತ್ತಿರುವ ಸಂಸ್ಥೆಗಳ ದೃಷ್ಟಿಯಿಂದ ಗಣನೀಯವಾಗಿದೆ. ದಕ್ಷಿಣ ಭಾರತದಲ್ಲಿ ಹೆಡ್ಡಾಫೀಸುಗಳುಳ್ಳ ಸಂಸ್ಥೆಗಳಲ್ಲಿ ಗಾರ್ಡಿಯನ್ ಆಫ್ ಇಂಡಿಯಾದ ಹೊಸ ಉದ್ಯೋಗವು ಎರಡನೇಯದಾಗಿದೆ. ಒಂದನೇಯದಾದ ಕಂಪೆನಿಯು ಇದಕ್ಕಿಂತ 25 ವರ್ಷಗಳ ಮುಂಚೆ ಸ್ಥಾಪಿಸಲ್ಪಟ್ಟಿದ್ದಾಗಿದೆ.

ವಿಮಾ ಕಂತುಗಳ ಆದಾಯ:—ಈ ವರ್ಷದ ಎಲ್ಲಾ ವಿಮಾ ಕಂತುಗಳ ಆದಾಯವು (ಪುನಹ ಭರವಸೆ ಕೊಟ್ಟದ್ದನ್ನು ಬಿಟ್ಟು) ಕಳೆದ ವರ್ಷದ ವಿಮಾ ಕಂತಿನ ಆದಾಯಕ್ಕಿಂತ ಶೇಕಡ 55ರಷ್ಟು ಹೆಚ್ಚಿದೆ. ವರದಿ ವರ್ಷದ ವಿಮಾ ಕಂತಿನ ಆದಾಯವು ರೂ. 3,66,198-13-0, ಗತ ವರ್ಷದ್ದು 2,36,767-6-6 ಆಗಿವೆ.

ಜೀವವಿಮಾ ಫಂಡು:—ಈ ಕಂಪೆನಿಯ ಜೀವ ವಿಮಾ ಫಂಡು ರೂ. 75,258-14-9ರಿಂದ, ವ್ಯವಸ್ಥಾ ಕ್ರಮಕ್ಕೆ ಮತ್ತು ಇತರ ಖರ್ಚಿಗಾಗಿ ರೂ. 45,037-8-4 ವಜಾ ಕಳೆದು ರೂ. 21,00,421-1-3ಕ್ಕೆ ಏರಿದೆ. ಈ ಕೆಳಗೆ ಅದರ ತಪಶೀಲನ್ನು ಕೊಡಲಾಗಿದೆ.

ವರ್ಷಾಂತ್ಯದಲ್ಲಿ.	ವಿಮಾ ಕಂತು	ಜೀವ ವಿಮಾ ಫಂಡು.
1ನೇ ವರ್ಷದ	ರೂ. 1,46,949	ರೂ. 15,619
2ನೇ ವರ್ಷದ	„ 2,36,767	„ 75,259
3ನೇ ವರ್ಷದ	„ 3,66,199	„ 2,00,421

ಈ ಮೇಲಿನ ಅಂಕೆ ಸಂಖ್ಯೆಗಳೇ ಕಂಪೆನಿಯ ಅಭಿವೃದ್ಧಿಗೆ ನಿದರ್ಶನವಾಗಿವೆ. ಈ ಅಭಿವೃದ್ಧಿಯು ಭಾರತ ವಿಮಾ ಕಂಪೆನಿಗಳ ವಾರ್ಷಿಕ ವೃತ್ತಾಂತದಲ್ಲಿ ಹೊಗಳಲರ್ಹವಾದದ್ದೇ ಆಗಿದೆ.

ಭಾರತ ಜೀವವಿಮಾ ಕಂಪೆನಿಗಳ ಆಕ್ಟಿನ ಮೇರೆ ಠೇವಣಾತಿ:—ಈ ಕಾನೂನು ಮೇರೆ ಠೇವಣಾತಿ ಮಾಡತಕ್ಕದಿದ್ದ ರೂ. 2 ಲಕ್ಷವನ್ನು ಪೂರ್ತಿಯಾಗಿ ಡಿಪಾಜಿಟ್ಟು ಮಾಡಲಾಗಿದೆ ಎಂಬುವುದನ್ನು ತಿಳಿಸಲು ಡೈರೆಕ್ಟರುಗಳು ಸಂತೋಷವುಳ್ಳವರಾಗಿರುವರು.

ಸಿ. ಯಂ. ತಿಮ್ಮಯ್ಯ,

(12-1) ಏಜೆನ್ಸಿಗಳ ಇನ್ಸ್‌ಪೆಕ್ಟರು, ಕೊಡಗು ಮತ್ತು ಹಾಸನ ಡಿಸ್ಟ್ರಿಕ್ಟ್.

ಯೂನಾನಿ ಫಾರ್ಮಸಿಯ ಉತ್ತಮ ಔಷಧಿಗಳು.

ಉಬ್ಬಸ ಸಂಹಾರಿ (Asthma cure) ಕೆಲವು ದಿನಗಳ ಸೇವನೆಯಿಂದ ಉಬ್ಬಸವನ್ನು ಖಾತ್ರಿಯಾಗಿ ಗುಣಪಡಿಸುತ್ತದೆ. 40 ದಿನದ ಔಷಧಿಗೆ ಕ್ರಯ ರೂ. 5—12—0.

ಅಂಬರ್ ಕೂದಲೆಣ್ಣೆ, ಸುಗಂಧಯುಕ್ತ ಅಮ್ಲ ಕೇಶ ತೈಲ ಅಲ್ಲದೆ ಎಲ್ಲಾ ರೋಗಗಳಿಗೂ ರಾಮಬಾಣದಂತಿರುವ ಮಾತ್ರೆಗಳೂ, ಚೂರ್ಣಗಳೂ, ಲೇಹಗಳೂ, ತೈಲಗಳೂ ಮತ್ತು ಕೇಶ ತೈಲಗಳೂ ಸಹ ತಯಾರಿರುವುವು.

ಬೇಗನೆ ಬರೆಯಿರಿ:—

ಯಂ. ಯಂ. ಸಿದ್ದೀಕ್,

16 **ಪ್ರೊಪ್ರೈಟರ್,**

ಯುನಾನಿ ಔಷಧಶಾಲಾ, ಮಡಿಕೇರಿ, ಕೊಡಗು.

ಪಾನ ನಿರೋಧದ ಪರಿಣಾಮ.

ಸೇಲಂ ಜಿಲ್ಲೆಯಲ್ಲಿ ನಡೆಯುತ್ತಿರುವ ಪಾನನಿರೋಧ ಕಾರ್ಯಕಲಾಪಗಳ ಬಗ್ಗೆ ಮದ್ರಾಸು ಗವರ್ನಮೆಂಟಿನ ಈಗಿನ ಒಂದು ಪ್ರಕಟಣೆಯ ಸಾರಾಂಶವನ್ನು ಈ ಕೆಳಗೆ ಕೊಡಲಾಗಿದೆ.

ಜನರ ಜೀವನದಲ್ಲಿ ಮಿತವ್ಯಯದ ಪರಿಣಾಮವು ಮುಂದುವರಿಯುತ್ತಿದೆ. ಕಂದಾಯ ವಸೂಲಾತಿಯು ಪಾನ ಬಹಿಷ್ಕಾರದಿಂದ ಸಲಭವಾಗಿದೆ. ಜಗಳಕ್ಕೆ ತವರೂರೆನಿಸಿದ ಕೆಲವು ಗ್ರಾಮಗಳು ಈಗ ಸೌಮ್ಯ ಮುದ್ರೆಯುಳ್ಳವಾಗಿವೆ. ಹೆಂಗಸರ ಮತ್ತು ಮಕ್ಕಳ ಅಭಿವೃದ್ಧಿಯು ಮುಂದರಿಯುತ್ತಿದೆ. ಮಿತವ್ಯಯದ ಚಳವಳವು ಎಲ್ಲೆಲ್ಲೂ ಹರಡಿದೆ. ಮಿತವ್ಯಯ ದಿನಾಚರಣೆಯು ತಿಂಗಳ ಒಂದು ಕರ್ತವ್ಯವೆನಿಸಿದೆ. ಇಂಥಾ ಸಂದರ್ಭಗಳಲ್ಲಿ ಭಜನೆಗಳು, ನಾಟಕಗಳು, ಗ್ರಾಮಸ್ಪರ್ಧೆಗಳೂ ಅಲ್ಲದೆ ಇತರ ಚಿತ್ತಾಕರ್ಷಕ ಸಂಗತಿಗಳು ನಡೆಯುತ್ತವೆ. ಇವು ಮಿತವ್ಯಯವನ್ನು ಪ್ರೋತ್ಸಾಹಿಸುವುದಲ್ಲದೆ, ಕುಡುಕ ತನದ ಯೋಚನೆಯನ್ನು ಜನರ ಮನಸ್ಸಿನಿಂದ ಕಿತ್ತೊಗೆಯಲು ಸಹಕಾರಿಗಳಾಗುತ್ತವೆ.

ಗ್ರಾಮ ಜೀವನವನ್ನು ಸುಖಮಯವನ್ನಾಗಿ ಮಾಡಲು ಪ್ರಯತ್ನಗಳು ನಡೆದವೆ. ರಾಸಿಪುರಂ ಎಂಬಲ್ಲಿ ಯುವಕರಿಗೆ ಗ್ರಾಮಗಳಲ್ಲಿ ಆರೋಗ್ಯ ಮತ್ತು ಸಂತೋಷಕಾರಕವಾದ ಕಾರ್ಯಗಳ ಬಗ್ಗೆ ಒಂದು ಸ್ಕೂಲ್ ತರಬೇತು ಕೊಡುತ್ತಿರುವದು. ಸಿನೆಮಾಗೃಹಗಳು, ರೇಡಿಯೋಗಳು ಹೆಚ್ಚಿ ಕುಡಿಕರ ಮನವನ್ನಾಕರ್ಷಿಸುವ ಸಾಯಂಕಾಲದ ಸಮಯದಲ್ಲಿ ಅವರ ಮನವನ್ನು ಬದಲಾಯಿಸಲು ಸಹಕಾರಿಗಳಾಗಿವೆ. ನಾಟಕಗಳು ಅಭಿವೃದ್ಧಿಗೊಳುತ್ತಿವೆ. ಪೋತನೂರಿನಲ್ಲಿ ಮೊದಲು ಸೇಂದಿ ಅಂಗಡಿ ಇಟ್ಟಿದ್ದವನೊಬ್ಬನು ಅದೇ ಸ್ಥಳದಲ್ಲಿ ಒಂದು ಸಿನೆಮಾಗೃಹವನ್ನು ತೆರೆದಿರುವನು. ಇನ್ನೂ ಅಲ್ಲಲ್ಲಿ ರೀಡಿಂಗ್ ರೂಂಗಳನ್ನು ಫಾರ್ಮುಗಳನ್ನು ತೆರೆಯಲು ಅಧಿಕಾರಿಗಳು ಯೋಚಿಸುತ್ತಿರುವರು.

ಅಲ್ಲಿಯ ಕಲೆಕ್ಟರರು ಅಲ್ಲಿಯ ಸ್ಥಿತಿಗತಿಗಳನ್ನು ಕುರಿತು ಈ ರೀತಿ ತಿಳಿಸುತ್ತಾರೆ. 'ಸಿಹಿ ಹೆಂಡ ಇಳಿಸುವ ಸಮಯವು ಅಂತ್ಯವಾಗುತ್ತಾ ಬಂತು. ಈ ಕೆಲಸವು ಈ ವರೆಗೆ ಜಯಪ್ರದವಾಗಿ ಅಧೀನದಲ್ಲಿಡಲ್ಪಟ್ಟಿತು. ಪ್ರಾಂತದೊಳಗೆ ಈಗ ಗುಟ್ಟಿನಲ್ಲಿ ಖರ್ಚಾಗುವ ಹೆಂಡವು ಅಷ್ಟೇನು ಹೆಚ್ಚಿಲ್ಲ. ಹೆಂಡದ ನಿರೋಧವು ಬಹು ಯಶಸ್ವಿಯಾಗಿದೆ. ಆದರೆ ಗಾಂಜ ಸೇವನೆಯನ್ನು ಹದ್ದಿನಲ್ಲಿಡಲು ಬಹು ಕಷ್ಟವೆನಿಸುತ್ತದೆ. ಸುದೈವದಿಂದ ಗಾಂಜ ಸೇವಕರ ಸಂಖ್ಯೆಯು ಮುಂದಿನ ಹೆಂಡ ಸೇವಕರ ಸಂಖ್ಯೆಯಷ್ಟು ಹೆಚ್ಚಿಲ್ಲ. ಗಾಂಜ ಸೇವನೆಯನ್ನು ಪೂರ್ತಿಯಾಗಿ ನಿಲ್ಲಿಸಲು ಸಾಧ್ಯವಿದೆಯೋ ಎಂಬುದನ್ನು ಹೇಳಲು ಇನ್ನೂ ಸಮಯ ಬೇಕಿದೆ. ಪೋಲೀಸಿನವರು ಈಗಿನ ಈ ಹೊಸ ಕಾರ್ಯಕ್ಷೇತ್ರದಲ್ಲಿ ಚೆನ್ನಾಗಿ ಕೆಲಸ ಮಾಡುತ್ತಿರುವರು. ಕೆಲವು ಉದ್ಯೋಗಸ್ಥರಲ್ಲದವರೂ ಸಹ ಒಳ್ಳೆ ಸಹಾಯ ಮಾಡುತ್ತಿರುವರು. ಹೆಂಗಸರ ಬಲವಾದ ಮತ್ತು ಅವಿರೋಧ ಕಾರಣವಾದ ವರ್ತನೆಯು ಎಲ್ಲೆಲ್ಲಿಯೂ ಕಾಣುತ್ತಿವೆ. ಪ್ರಾಂತದ ಕೆಲವು ಭಾಗಗಳಲ್ಲಿ ನಿಷಾಸೇವನೆಯು ಜನರ ಮನಸ್ಸಿನಿಂದ ದೂರವಾಗುತ್ತಾ ಬಂದಿದೆ.'

— —

ಹಿಮಾಲಯ ಪರ್ವತಾರೋಹಣ ಸಾಹಸ!

ಹಿಮಾಲಯ ಪರ್ವತ ಶಿಖರದ ಮೇಲೆ ಏರಿ ಹೋಗಬೇಕೆಂದು ಐರೋಪ್ಯರ ಒಂದು ತಂಡವು ಕಳೆದ ತಿಂಗಳ 18 ನೇಯ ತಾರೀಖಿನ [illegible] ಮಹಾ ಸಾಹಸ ಮಾಡಿತು. ಆ ತಂಡದ ಮುಖ್ಯಸ್ಥನಾದ ಮಿ. ಅರ್ನೆಸ್ಟ ಮಾರ್ಲ್ಯು ಇವನು ಪರ್ವತವನ್ನು ಪೂರ್ವ ದಿಕ್ಕಿನಿಂದ ಏರಬೇಕೆಂದು ಅಪ್ಪಣೆ ಮಾಡಿದನು. ಪ್ರತಿಯೊಬ್ಬರೂ ಏಳು ದಿವಸಗಳ ವರೆಗೆ ಸಾಲುವಷ್ಟು ಅನ್ನ ಸಂಗ್ರಹಮಾಡಿಕೊಂಡಿದ್ದರು. ಅವರು 19,700 ಅಡಿಗಳ ವರೆಗೆ ಏರಿದರು. ಶಿಖರದ ಎತ್ತರವು 23,000 ಅಡಿ ಇದ್ದಿತು. ಪರ್ವತದ ದೊಡ್ಡ ದೊಡ್ಡ ಬಂಡೆಗಳು ಉರುಳಿ ಬೀಳುತ್ತಿದ್ದುದರಿಂದ ಆ ಜನರಿಗೆ ಒಂದೇ ಕಡೆಗೆ ಕ್ಯಾಂಪು ಹಾಕುವುದು ಶಕ್ಯವೇ ಆಗಲಿಲ್ಲ. ಅಲ್ಲಿಂದ ಮುಂದಕ್ಕೆ ಹೋಗುವುದೆಂದರೆ ಸಾಧ್ಯವೇ ಆಗಲಿಲ್ಲ. ಹಿಮದ ಕಡಿದಾದ ಪ್ರದೇಶವು [illegible] ಅವರಿಗೆ ಏರುವುದು ಅಸಾಧ್ಯವಾಯಿತು. ನಿರುಪಾಯರಾಗಿ ಅವರು ಮರಳಿ ಬರಬೇಕಾಯಿತು.

ತಿರುಗಿ ಹೋಗುವದರೊಳಗೆ ಅರ್ಧ ಗಂಟೆಯಲ್ಲಿಯೇ ಮೇಲಕ್ಕೆ ಏರುವುದಕ್ಕಿಂತಲೂ ಭಯಂಕರವಾಗಿ ಪರಿಣಮಿಸಿದ್ದಿತು. ಹಿಮದ ಪರ್ವತವೇ ಬಂದು ತಿಪ್ಪಳಿಸಿ ಇವರು ಮಾಡಿಕೊಂಡು ಬಂದಿದ್ದ ದಾರಿಯನ್ನೆಲ್ಲಾ ಸಮಮಾಡಿಬಿಟ್ಟಿದ್ದಿತು. ಎತ್ತ ಕಡೆಗೆ ಇಳಿಯಲೂ ಆಸ್ಪದವಿಲ್ಲ. ಮರಣದ ಜಾಲವೇ ಪಸರಿಸಲ್ಪಟ್ಟಂತೆ ಎಲ್ಲಿ ನೋಡಿದಲ್ಲಿ ಕಡಿದಾದ ತಗ್ಗುಗಳು ಕಾಣಹತ್ತಿದವು. ಸ್ವಲ್ಪ ಕಾಲು ಜಾರಿದರೆ ಜನರು ಪಾತಾಳ ಕಾಣುವದೇ ಸರಿ. ಅಷ್ಟರಲ್ಲಿ ಮತ್ತೊಂದು ಹಿಮದ ರಾಶಿಯು ಉರುಳುತ್ತ ಬಂದಿತು. ಸಂಶೋಧಕರು ಪರಮಾತ್ಮನನ್ನು ಸ್ಮರಿಸುವದೊಂದೇ ಕಾರ್ಯ ನಡೆಯಿಸಿದ್ದರು. ಅಷ್ಟರಲ್ಲಿ ಒಂದು ಕಡೆ ಇಳಿಜಾರಾದ ಪ್ರದೇಶವುಂಟಾಗಲು ಅವರು ಜಾರುತ್ತ, ಸರಿಯುತ್ತ ತಳಪ್ರದೇಶಕ್ಕೆ ಬಂದರು.

ತಳಕ್ಕೆ ಬಂದೊಡನೆಯೇ ಅವರಿಗೆ ಜೀವ ಬಂದಂತಾಯಿತು. ಇದು ಅವರ ಮೂರನೆಯ ಪ್ರಯತ್ನ. ಮೂರು ಸಾರೆ ಪ್ರಯತ್ನ ಸಫಲವಾಗದಿದ್ದರೂ ಅವರು ಪುನಃ ಪ್ರಯತ್ನ ಮಾಡಲಿರುವರು.

ಕೊಡಗಿನ ಚರಿತ್ರೆಯ ಕಥೆಗಳು.

ರಾಜಕುಮಾರಿ ವಿಕ್ಟೋರಿಯಾ ಗೌರಮ್ಮ.

(ಲೇಖಕರು:- ಡಿ. ಎನ್. ಕೃಷ್ಣಯ್ಯ, ಎಂ. ಎ. ಬಿ. ಇಡಿ.)

ಲೇಖನಾಂಕ ೧೦.

(ಎಲ್ಲಾ ಹಕ್ಕುಗಳನ್ನು ಕಾಯ್ದಿದಲ್ಪಟ್ಟಿದೆ.)

ಕ್ರಿ. ಶ. 1834 ನೇ ಇಸವಿಯಲ್ಲಿ ಕೊಡಗಿನ ಕೊನೆಯ ಅರಸನಾದ ಚಿಕ್ಕವೀರರಾಜನು ರಾಜ್ಯಭ್ರಷ್ಟನಾದನು. ಬ್ರಿಟಿಷರು ಕೊಡಗನ್ನು ತೆಗೆದುಕೊಂಡ ಮೇಲೆ ವೀರರಾಜನನ್ನು ಕೊಡಗಿನಲ್ಲಿಯೇ ಇರಲು ಒಡಂಬಡಲಿಲ್ಲ. ಆದುದರಿಂದ ಅವರು ವೀರರಾಜನನ್ನು ಮೊದಲು ವೆಲ್ಲೂರಿಗೆ ಸಾಗಿಸಿ ಅನಂತರ ಕಾಶಿಗೆ ಕರೆದುಕೊಂಡು ಹೋದರು. ವೀರರಾಜನ ಸಂಗಡ ಆತನ ರಾಣಿಯರಲ್ಲಿ ಆರು ಜನರೂ, ಇಬ್ಬರು ಮಕ್ಕಳೂ, ಕೆಲವು ಆಪ್ತರಾದ ಕಾರ್ಯಗಾರರೂ ಕಾಶಿಗೆ ಹೋದರು. ಅಲ್ಲಿ ವೀರರಾಜನಿಗೆ ತಿಂಗಳಿಗೆ ಆರು ಸಾವಿರ ರೂಪಾಯಿಗಳ ವೇತನ ಸಿಗುತ್ತಿತ್ತು. ಇದರಿಂದ ವೀರರಾಜನು ಕಾಶಿಯಲ್ಲಿಯೂ ರಾಜಮರ್ಯಾದೆಗೆ ತಕ್ಕಂತೆ ತನ್ನ ಮತ್ತು ತನ್ನ ಪರಿವಾರದವರ ಜೀವನವನ್ನು ನಡೆಸುತ್ತಿದ್ದನು. ಅಲ್ಲಿ ಕೊಡಗಿನ ರಾಜ ಕುಟುಂಬದ ಮತ್ತು ಅವರ ಪರಿವಾರದವರ ಮೇಲ್ವಿಚಾರಣೆಗೆ ಮೇಜರ್ ಕಾರ್ಪೆಂಟರ್ ಎಂಬ ಉದ್ಯೋಗಸ್ಥನನ್ನು ಕಂಪೆನಿ ಸರ್ಕಾರದವರು ನೇಮಿಸಿದ್ದರು.

ವೀರರಾಜನು ಕಾಶಿಗೆ ಹೋದ ಮೇಲೆ ಆತನಿಗೆ ಆರು ಗಂಡು ಮಕ್ಕಳೂ, ನಾಲ್ಕು ಹೆಣ್ಣು ಮಕ್ಕಳೂ ಜನಿಸಿದರು. ಇವರಲ್ಲಿ ವೀರರಾಜನ ಪ್ರೀತಿಯ ರಾಣಿಯ ಗರ್ಭದಲ್ಲಿ ಹುಟ್ಟಿದವರು ರಾಜಕುಮಾರಿ ಗೌರಮ್ಮ ಮತ್ತು ಗಂಗಮ್ಮ ಎಂಬಿಬ್ಬರು ಸಹೋದರಿಯರು. ವೀರರಾಜನಿಗೆ ತನ್ನ ಎಲ್ಲಾ ಮಕ್ಕಳಲ್ಲಿ ಗೌರಮ್ಮನ ಮೇಲೆ ಹೆಚ್ಚಿನ ಪ್ರೀತಿ. ಆತನಿಗೆ ಬ್ರಿಟಿಷ್ ಜನರ ನಡೆನುಡಿ, ಉಡಿಗೆತೊಡಿಗೆ, ಜೀವನಕ್ರಮಗಳಲ್ಲಿ ಬಹಳ ಮೆಚ್ಚಿಗೆ ಇದ್ದುದರಿಂದ ತನ್ನ ಮಗಳು ಗೌರಮ್ಮನಿಗೆ ಅವರ ಹಾಗೆ ಎಲ್ಲಾ ವಿಷಯಗಳಲ್ಲಿ ಶಿಕ್ಷಣ ಕೊಡಬೇಕೆಂದು ನಿಶ್ಚಯಿಸಿದನು. ಇದಕ್ಕೋಸ್ಕರ ಆಕೆಯನ್ನು ಇಂಗ್ಲೆಂಡಿಗೆ ಕರೆದುಕೊಂಡು ಹೋಗಬೇಕೆಂದು ನಿರ್ಧರಿಸಿ ಇಂಗ್ಲೆಂಡಿಗೆ ಹೋಗಲು ಆಗ ಗವರ್ನರ್ ಜನರಲಾಗಿದ್ದ ಲಾರ್ಡ್ ಡಾಲ್‌ಹೌಸಿಯ ಅನುಮತಿಯನ್ನು ಕೇಳಿದನು. ಹಾಗೆಯೇ ಲಾರ್ಡ್ ಡಾಲ್‌ಹೌಸಿಯು ವೀರರಾಜನಿಗೆ ಅನುಮತಿಯನ್ನು ಕೊಡಲು, ವೀರರಾಜನು 1852 ನೇ ಇಸವಿಯಲ್ಲಿ ಇಂಗ್ಲೆಂಡಿಗೆ ಹೋದನು. ಆತನ ಸಂಗಡ ಆತನ ಇಬ್ಬರು ಪತ್ನಿಯರೂ, ರಾಜಕುಮಾರಿ ಗೌರಮ್ಮನೂ, ಕೆಲವು ದಾಸಿಯರೂ ಹೋದರು.

ವೀರರಾಜನಿಗೆ ಇಂಗ್ಲೆಂಡಿಗೆ ಹೋಗಲು ಇನ್ನೊಂದು ಉದ್ದೇಶವೂ ಇದ್ದಿತು. ಆತನ ದೊಡ್ಡಪ್ಪ ದೊಡ್ಡವೀರರಾಜನು ತನ್ನ ಮೋಹದ ಕುಮಾರಿಯಾದ ದೇವಮ್ಮಾಜಿಯ ಹೆಸರಿನಲ್ಲಿ ಕಂಪನಿಯ ಖಜಾನೆಯಲ್ಲಿ 680,000 ರೂಪಾಯಿಗಳನ್ನು ಠೇವಣಾತಿಯಾಗಿ ಇಟ್ಟಿದ್ದನು. ಈ ಹಣದ ಬಡ್ಡಿಯನ್ನು ದೊಡ್ಡವೀರರಾಜನ ಮರಣಾನಂತರ ಲಿಂಗರಾಜನೂ, 'ಅವನ ನಂತರ ಚಿಕ್ಕವೀರರಾಜನೂ ಪ್ರತೀ ವರ್ಷವೂ ದೇವಮ್ಮಾಜಿಯ ಹೆಸರಿನಲ್ಲಿ ಹೊಂದಿಕೊಳ್ಳುತ್ತಿದ್ದರು. ಆದರೆ 1833 ನೇ ಇಸವಿಯಲ್ಲಿ ಕಂಪೆನಿಯವರು ವೀರರಾಜನು ತಮಗೆ ವಿರೋಧವಾಗಿರುವನೆಂದು ತಿಳಿದು ಆ ಹಣಕ್ಕೆ ಕೊಡತಕ್ಕ ಬಡ್ಡಿಯನ್ನು ನಿಲ್ಲಿಸಿಬಿಟ್ಟರು. ವೀರರಾಜನು ಮೂಲ ಧನವನ್ನೇ ಹಿಂದಕ್ಕೆ ಪಡೆಯಲು ಪ್ರಯತ್ನಪಟ್ಟನು. ಆದರೆ ಅದರಲ್ಲಿ ಯಶಸ್ವಿಯಾಗದೆ ಇಂಗ್ಲೆಂಡಿಗೆ ಹೋಗಿ ಅಲ್ಲಿನ ನ್ಯಾಯಸ್ಥಾನಗಳಲ್ಲಿ ಈಸ್ಟ್ ಇಂಡಿಯಾ ಕಂಪೆನಿಯ ಮೇಲೆ ವ್ಯಾಜ್ಯವನ್ನು ಹೂಡಬೇಕೆಂದು ಉದ್ದೇಶಿಸಿದನು. ಈ ಕಾರಣವೂ ಆತನನ್ನು ಇಂಗ್ಲೆಂಡಿಗೆ ಹೋಗುವಂತೆ ಮಾಡಿತು.

ಇಂಗ್ಲೆಂಡಿನಲ್ಲಿ ವೀರರಾಜನನ್ನು ಬ್ರಿಟಿಷ್ ಸರ್ಕಾರದವರು ರಾಜ ಮರ್ಯಾದೆಯಿಂದ ಕಂಡು ಆತನನ್ನು ಸತ್ಕರಿಸಿದರು. ವಿಕ್ಟೋರಿಯಾ ರಾಣಿಯೂ ಆತನನ್ನು ತನ್ನ ಅರಮನೆಗೆ ಬರಮಾಡಿಕೊಂಡಳು. ವೀರರಾಜನು ತನ್ನ ಮಗಳು ಗೌರಮ್ಮನನ್ನು ವಿಕ್ಟೋರಿಯಾ ರಾಣಿಯ ಬಳಿ ಕರೆದುಕೊಂಡು ಹೋಗಿ ಆಕೆಗೆ ಪಾಶ್ಚಾತ್ಯ ವಿದ್ಯಾಭ್ಯಾಸವನ್ನು ಕೊಡಿಸಬೇಕೆಂದು ರಾಣಿಯನ್ನು ಕೇಳಿಕೊಂಡನು. ಗೌರಮ್ಮನಿಗೆ ಆಗ ಹತ್ತು ಅಥವಾ ಹನ್ನೊಂದು ವರ್ಷ ಪ್ರಾಯ. ನೋಡುವುದಕ್ಕೆ ಬಹು ಸುಂದರಳಾಗಿದ್ದಳು. ಇವಳನ್ನು ನೋಡಿ ವಿಕ್ಟೋರಿಯಾ ರಾಣಿಗೆ ತುಂಬಾ ಸಂತೋಷವೂ, ಪ್ರೇಮವೂ ಉಂಟಾದವು. ವೀರರಾಜನಿಗೆ ತನ್ನ ಮಗಳನ್ನು ಕ್ರೈಸ್ತಮತಕ್ಕೆ ಸೇರಿಸುವ ಅಭಿಪ್ರಾಯವೂ ಇದ್ದಿತು. ವಿಕ್ಟೋರಿಯಾ ರಾಣಿಯು ತಾನು ಗೌರಮ್ಮನ ವಿದ್ಯಾಭ್ಯಾಸದ ಭಾರವನ್ನು ಹೊತ್ತುದಲ್ಲದೆ ಗೌರಮ್ಮನಿಗೆ ತಾನೇ ಧರ್ಮಮಾತೆಯಾಗಿ ನಿಂತು ಕ್ರೈಸ್ತ ಮತ ದೀಕ್ಷೆಯನ್ನು ಕೊಡಿಸಿದಳು. ಅಂದಿನಿಂದ ರಾಜಕುಮಾರಿ ಗೌರಮ್ಮನಿಗೆ ವಿಕ್ಟೋರಿಯಾ ಗೌರಮ್ಮನೆಂದು ಹೆಸರಾಯಿತು. ಹಿಂದೂ ದೇಶದ ರಾಜಮನೆತನದವರಲ್ಲಿ ಕ್ರೈಸ್ತ ಮತಕ್ಕೆ ಸೇರಿದ ಸ್ತ್ರೀಯರಲ್ಲಿ ರಾಜಕುಮಾರಿ ಗೌರಮ್ಮನೇ ಮೊದಲನೆಯವಳು. ಇದಲ್ಲದೆ ವಿಕ್ಟೋರಿಯಾ ರಾಣಿಯೇ ರಾಜಕುಮಾರಿ ಗೌರಮ್ಮನ ಧರ್ಮಮಾತೆಯಾಗಲು ಸಮ್ಮತಿಸಿದ್ದರಿಂದ ಈ ಮತ ದೀಕ್ಷೆ ಸಮಾರಂಭವು ವಿಂಡ್ಸರ್ ಅರಮನೆಯಲ್ಲಿ ವಿಜೃಂಭಣೆಯಿಂದ ನಡೆಯಿತು. ಇದಾದ ನಂತರ ವಿಕ್ಟೋರಿಯಾ ರಾಣಿಯು ರಾಜಕುಮಾರಿ ಗೌರಮ್ಮನನ್ನು ಅವಳ ವಿದ್ಯಾಭ್ಯಾಸಕ್ಕೋಸ್ಕರ ಮೇಜರ್ ಡ್ರಮ್ಮಂಡ್ ಎಂಬ ಮಿಲಿಟರಿ ಉದ್ಯೋಗಸ್ಥನ ಪತ್ನಿಯ ಸ್ವಾಧೀನದಲ್ಲಿ ಬಿಟ್ಟಳು.

ರಾಜಕುಮಾರಿ ಗೌರಮ್ಮನು ಶ್ರೀಮತಿ ಡ್ರಮ್ಮಂಡಳೊಡನೆ ಸುಮಾರು ನಾಲ್ಕೈದು ವರ್ಷಗಳಿದ್ದಳು. ಆದರೆ ಆ ಸಮಯದಲ್ಲಿ ಅವಳ ಜೀವನವು ಸುಖಮಯವಾಗಿರಲಿಲ್ಲ. ಇವಳಿಗೂ ಶ್ರೀಮತಿ ಡ್ರಮ್ಮಂಡಳಿಗೂ ಪರಸ್ಪರ ಸೌಹಾರ್ದವು ಇರಲಿಲ್ಲ. ರಾಜಕುಮಾರಿ ಗೌರಮ್ಮನಿಗೆ ವಿದ್ಯಾಭ್ಯಾಸದಲ್ಲಿ ಹೆಚ್ಚಿನ ಅಭಿರುಚಿ ಇರಲಿಲ್ಲ. ಹೀಗಾಗಿ ಶ್ರೀಮತಿ ಡ್ರಮ್ಮಂಡಳಿಗೂ ರಾಜಕುಮಾರಿ ಗೌರಮ್ಮನಿಗೂ ಸರಿಬೀಳದೆ ಶ್ರೀಮತಿ ಡ್ರಮ್ಮಂಡಳು ಗೌರಮ್ಮನನ್ನು ತನ್ನ ವಶದಿಂದ ಬಿಡಿಸಿ ಬೇರೆಯವರ ಸ್ವಾಧೀನದಲ್ಲಿ ಬಿಡಬೇಕೆಂದು ವಿಕ್ಟೋರಿಯಾ ರಾಣಿಯನ್ನು ಕೇಳಿಕೊಂಡಳು.

ಈ ಸಮಯದಲ್ಲಿ ಇಂಗ್ಲೆಂಡಿನಲ್ಲಿ ಸರ್ ಜಾನ್ ಲೋಗಿನ್ ಮತ್ತು ಲೇಡಿ ಲೋಗಿನ್ ಎಂಬ ದಂಪತಿಗಳಿದ್ದರು. ಇವರು ಹಿಂದೂಸ್ಥಾನದಲ್ಲಿ ಬಹಳ ವರ್ಷಗಳಿದ್ದು ಹಿಂದೂ ದೇಶೀಯ ರಾಜಕುಟುಂಬಗಳ ಪದ್ಧತಿ, ಸ್ವಭಾವ ಮೊದಲಾದವುಗಳನ್ನು ಚೆನ್ನಾಗಿ ಅರಿತವರಾಗಿದ್ದರು. ಇದೂ ಅಲ್ಲದೆ ಇವರು ಪಂಜಾಬಿನ ಸಿಂಹನೆಂದೆನಿಸಿಕೊಂಡಿದ್ದ ರಣಜಿತಸಿಂಹನ ಪುತ್ರ ದಲೀಪಸಿಂಹನನ್ನು ಬಾಲ್ಯದಿಂದ ಸಾಕಿ ಆತನ ವಿದ್ಯಾಭ್ಯಾಸ, ಧಾರ್ಮಿಕ ಶಿಕ್ಷಣ ಮೊದಲಾದವುಗಳಲ್ಲಿ ಶ್ರದ್ಧೆ ವಹಿಸಿದ್ದರು. ಮಹಾರಾಜ ದಲೀಪ ಸಿಂಹನೂ ಕ್ರೈಸ್ತಮತವನ್ನು ಅವಲಂಬಿಸಿದ್ದನು. ಹಿಂದೂಸ್ಥಾನದ ರಾಜಮನೆತನದವರಲ್ಲಿ ಕ್ರೈಸ್ತಮತವನ್ನವಲಂಬಿಸಿದವರಲ್ಲಿ ಮೊದಲನೆಯವನು. ಇವನಿಗೆ ವಿಕ್ಟೋರಿಯಾ ಗೌರಮ್ಮನನ್ನು ವಿವಾಹ ಮಾಡಿಸಬೇಕೆಂದು ವಿಕ್ಟೋರಿಯಾ ರಾಣಿಗೆ ಇಷ್ಟವಿದ್ದಿತು.

ಶ್ರೀಮತಿ ಡ್ರಮ್ಮಂಡಳು ರಾಜಕುಮಾರಿ ಗೌರಮ್ಮನನ್ನು ತನ್ನ ರಕ್ಷಣೆಯಿಂದ ತಪ್ಪಿಸಬೇಕೆಂದು ವಿಕ್ಟೋರಿಯಾ ರಾಣಿಯನ್ನು ಕೇಳಲು ರಾಣಿಯು ಲೇಡಿ ಲೋಗಿನ್ನಳನ್ನು ರಾಜಕುಮಾರಿ ಗೌರಮ್ಮನನ್ನು ಆಕೆಯ ಪೋಷಣೆಗೆ ತೆಗೆದುಕೊಳ್ಳಬೇಕೆಂದು ಅಪೇಕ್ಷಿಸಿದಳು. ಅಂದಿನಿಂದ ರಾಜಕುಮಾರಿ ಗೌರಮ್ಮನು ಲೇಡಿ ಲೋಗಿನ್ನಳ ಸ್ವಾಧೀನದಲ್ಲಿ ಕೆಲವು ತಿಂಗಳು ಬೆಳೆದಳು. ವಿಕ್ಟೋರಿಯಾ ರಾಣಿಯು ರಾಜಕುಮಾರಿ ಗೌರಮ್ಮನ ಯೋಗಕ್ಷೇಮವನ್ನು ಆಗಿಂದಾಗ್ಗೆ ಲೇಡಿ ಲೋಗಿನ್ನಳಿಗೆ ಪತ್ರ ಬರೆದು ತಿಳಿಯುತ್ತಿದ್ದಳು. ರಾಜಕುಮಾರಿ ಗೌರಮ್ಮನು ನೋಡುವುದಕ್ಕೆ ನಿರೋಗಿಯಂತಿದ್ದರೂ ಅವಳ ದೇಹಸ್ಥಿತಿಯು ಚೆನ್ನಾಗಿರಲಿಲ್ಲ. ಅವಳಿಗೆ ಚಿಕ್ಕಂದಿನಿಂದಲೇ ಕ್ಷಯರೋಗದ ಸೂಚನೆಗಳಿದ್ದವು. ಆದುದರಿಂದ ಅವಳನ್ನು ಇಟಲಿ ದೇಶಕ್ಕೆ ಕರೆದುಕೊಂಡು ಹೋಗಬೇಕೆಂದು ರಾಣಿಯು ಲೇಡಿ ಲೋಗಿನ್ನಳಿಗೆ ಹೇಳಿದಳು. ಆದರೆ ಯೂರೋಪಿನ ದೇಶಗಳಲ್ಲಿ ಪ್ರಯಾಣ ಮಾಡುವ ಮೊದಲು ರಾಜಕುಮಾರಿ ಗೌರಮ್ಮನಿಗೆ ಕ್ರೈಸ್ತ ಮತದ ಅಂತಿಮ ಪರೀಕ್ಷೆಯಾಗಬೇಕಿತ್ತು. ಈ ಪರೀಕ್ಷೆಯೂ ಅದರ ನಂತರದ ಸಮಾರಂಭವೂ ಇಂಗ್ಲೆಂಡಿನಲ್ಲಿ ಕ್ಯೂ ಎಂಬ ಸ್ಥಳದ ಕ್ರೈಸ್ತ ದೇವಾಲಯದಲ್ಲಿ ನಡೆಯಿತು. ವಿಕ್ಟೋರಿಯಾ ರಾಣಿಯ ಪ್ರತಿನಿಧಿಗಳಾಗಿ ಲೇಡಿ ಹಾರ್ಡಿಂಜ್ ಮತ್ತು ಸರ್ ಜೇಮ್ಸ್ ವಿಯರ್ ಹಾಗ್ ಎಂಬುವರು ಬಂದಿದ್ದರು. ವೀರರಾಜೇಂದ್ರನೂ ಇದಕ್ಕೆ ಆಮಂತ್ರಿಸಲ್ಪಟ್ಟಿದ್ದನು. ವಿಕ್ಟೋರಿಯಾ ರಾಣಿಯು ಈ ಸಂದರ್ಭದಲ್ಲಿ ರಾಜಕುಮಾರಿ ಗೌರಮ್ಮನಿಗೆ ಬಹುಮಾನವಾಗಿ ಒಂದು ಹವಳದ ಕುತ್ತಿಗೆ ಸರ ಮತ್ತು ಒಂದು ಜೊತೆ ವಜ್ರದ ಓಲೆಗಳನ್ನು ಕಳುಹಿಸಿ ಗೌರಮ್ಮನು ದೇವರು ಮೆಚ್ಚುವಂತೆ ತಾನು ನಡೆಯಬೇಕೆಂದು ಹಾರೈಸಿ ಪತ್ರ ಬರೆದಿದ್ದಳು. ವೀರರಾಜೇಂದ್ರನಿಗೆ ರಾಣಿಯು ತನ್ನ ಮಗಳಿಗೆ ಬಹುಮಾನ ಕಳುಹಿಸಿದ್ದನ್ನು ನೋಡಿ ಅತ್ಯಾನಂದವಾಯಿತು.

ಕೆಲವು ದಿವಸಗಳ ನಂತರ ಲೇಡಿ ಲೋಗಿನ್ನಳು ರಾಜಕುಮಾರಿ ವಿಕ್ಟೋರಿಯಾ ಗೌರಮ್ಮನನ್ನು ಇಟಲಿ ದೇಶಕ್ಕೆ ಕರೆದುಕೊಂಡು ಹೋದಳು. ಸ್ಥಳ ಮತ್ತು ಹವಾ ಬದಲಾವಣೆಗಳಿಂದ ರಾಜಕುಮಾರಿ ಗೌರಮ್ಮನ ದೇಹಸ್ಥಿತಿಯು ಉತ್ತಮವಾದುದಲ್ಲದೆ ಅವಳ ಮಾನಸಿಕ ಶಕ್ತಿಯೂ ಹೆಚ್ಚಾಯಿತು. ಅವಳ ನಡೆನುಡಿಗಳಲ್ಲಿಯೂ ಒಳ್ಳೆಯ ಪರಿಣಾಮವು ಉಂಟಾಯಿತು. ಅವಳು ಇಟಲಿಯಲ್ಲಿರುವಾಗ ಮಹಾರಾಜ ದಲೀಪ ಸಿಂಹನು ಲೇಡಿ ಲೋಗಿನ್ನಳ ಮನೆಗೆ ಆಗಾಗ ಬರುತ್ತಿದ್ದನು. ದಲೀಪಸಿಂಹನು ರಾಜಕುಮಾರಿ ಗೌರಮ್ಮನೊಡನೆ ಕೆಲವು ದಿವಸ ಒಡನಾಡಿದನು. ಆದರೆ ಆತನಿಗೂ ರಾಜಕುಮಾರಿ ಗೌರಮ್ಮನಿಗೂ ಪರಸ್ಪರ ಪ್ರೇಮ ಉಂಟಾಗಲಿಲ್ಲ. ಈ ವಿವಾಹ ಸಂಬಂಧದಿಂದ ತನ್ನ ಜೀವನವು ಸುಖಮಯವಾಗಲಾರದೆಂದು ಆತನು ಲೇಡಿ ಲೋಗಿನ್ನಳಿಗೆ ತಿಳಿಸಿದನು.

ಸಶೇಷ.]

WANTED.

Candidates for Telegraph Station Master, Radio and Electric class. Allowance Rs 28. Uniform, passage and quarter free. Service essential. Rules and Entrance form on annas eight. Director, Royal Telegraph and Ry. Duties College. Bombay 14. 8-6.

ಡಾ. ಮೋತ್ಯುಸ್ ಎಬ್ರಹಾಮ್ ದಂತ ವೈದ್ಯರು.

(ಪಿಯರ್ಸ್ ಲೆಸ್ಲಿ ಬಂಗ್ಲೆ)

(ಪ್ರೆಸ್ಸ್ ಹತ್ತಿರ)

ಮಡಿಕೇರಿ.

ವಿವಿಧ ವಿಚಾರ.

ಗಾಜಿನ ಕಿಟಿಕಿಯುಳ್ಳ ಮೊಟ್ಟೆ.

ಬರ್ಲಿಂಗ್‌ಟನ್ ಹೌಸ್ ಎಂಬಲ್ಲಿ ರೊಯಲ್ ಸೊಸೈಟಿ ಎಂಬ ವಿಜ್ಞಾನ ಶೋಧಕರ ಒಂದು ಕೂಟದಲ್ಲಿ ಗಾಜಿನ ಕಿಟಿಕಿಯುಳ್ಳ ತತ್ತಿಯು ಜನರಿಗೊಂದು ಆಶ್ಚರ್ಯವನ್ನು ಉಂಟುಮಾಡಿತು. ಸ್ಟೆಂಟ್ ಮೇರಿ ಆಸ್ಪತ್ರೆಯ ಡಾಕ್ಟರು ಶಾಲೆಯ ಸಹಾಯಕರಾದ ಡಾ. ಹಿಸ್ಕೋಲ್ ವೀಲ್ ಎಂಬವರು ಈ ಮೊಟ್ಟೆಯನ್ನು ತಯಾರು ಮಾಡಿದರು. ಮೊಟ್ಟೆಯಲ್ಲಿರುವ ಸಜೀವ ಅಣುಗಳ ಕ್ರಿಯಾಶೋಧನೆಗಾಗಿ ಅವರು ಈ ತರದ ನೂತನ ಉಪಾಯವನ್ನು ಮಾಡಿದ್ದರಂತೆ.

—:0:—

ರಕ್ತದಿಂದ ಬೀಜ ಪರೀಕ್ಷೆ.

ಕಳೆದ ಬಾರಿ ಡಾ. ಲಿಂಚ್ ಎಂಬವರು ರಕ್ತ ಪರೀಕ್ಷೆಯಿಂದ ಒಂದು ಮಗುವು ತಂದೆಯ ಬೀಜಕ್ಕೆ ಹುಟ್ಟಿದಲ್ಲವೆಂದು ಸ್ಪಷ್ಟಪಡಿಸಿದುದನ್ನು ಓದಿರುವಿರಲ್ಲವೇ? ಇತ್ತೀಚೆಗೆ ಪಿತ್ರಾರ್ಜಿತ ವ್ಯಾಜ್ಯಗಳಲ್ಲಿ ರಕ್ತ ಪರೀಕ್ಷೆಯನ್ನು ಖಡ್ಡಾಯ ಮಾಡಬೇಕೆಂದು ಲಂಡನಿನಲ್ಲಿ ಒಂದು ಚಳವಳವುಂಟಾಗಿದೆ. ಈ ಚಳವಳದಲ್ಲಿ ಅಲ್ಲಿನ ಪ್ರಮುಖ ವೈದ್ಯರೂ, ಪಾರ್ಲಿಮೆಂಟರಿ ಸದಸ್ಯರೂ ಕೈಹಾಕಿರುವರು. ಸದ್ಯದಲ್ಲೇ ಈ ಪ್ರಶ್ನೆಯು ಹೌಸ್ ಆಫ್ ಕಾಮನ್ಸಿನಲ್ಲಿ ಚರ್ಚೆಗೆ ಬರಲಿರುವುದು. ಜಯವಾಗಲೀ ಆ ಮಹನೀ[illegible] ಸತ್ಕಾರ್ಯ! ಪತಿವ್ರತಾ ಧರ್ಮಕ್ಕೆ[illegible] ಸುಲಭ ಪರೀಕ್ಷೆಯ ವಿಧಾನ ದೊ[illegible]ದಾಗಲಿ.

—:0:—

ಐದು ತಿಂಗಳ ತನಕ ಶವವು ಕೊಳೆಯದೆ?

ಒಬ್ಬ ಮುದಿ ಕಾಬೂಲಿಯ ಪ್ರಾರ್ಥನೆಯ ಮೇರೆಗೆ ಭಾರತ ಮಾತೆಯು ಆತನ ಮಡದಿಯ ಶವವನ್ನು 5 ಮಾಸಗಳ ತನಕ ಜೋಪಾನ ಮಾಡಿದಳು. ಈ ವಿಚಿತ್ರ ಸಂಗತಿಯು ಲಕ್ನೋ ಎಂಬಲ್ಲಿ ನಡೆಯಿತು. ಒಬ್ಬ ಅಫಘಾನಿ, ಅಕ್ಬರ್ ಖಾನ್ ಎಂಬವನು ತನ್ನ ಮಡದಿಯೊಂದಿಗೆ 5 ತಿಂಗಳ ಹಿಂದೆ ಸಂಚಾರಾರ್ಥವಾಗಿ ಪಂಜಾಬಿಗೆ ಬಂದನು. ದಾರಿಯಲ್ಲಿ ಆತನ ಭಾರ್ಯೆಯು ಅಕಾಲ ಮರಣಕ್ಕೆ ತುತ್ತಾದಳು. ಆಕೆಯ ಶವವನ್ನು ದಾರಿಯಲ್ಲಿಯೇ ಹುಗಿದು ಆತನು ಮರಳಿ ಅಫಘಾನಿಸ್ಥಾನಕ್ಕೆ ತೆರಳಿದನು. ಬಳಿಕ ಆತನು ಅಫಘಾನಿಸ್ಥಾನದ ಸರಕಾರದಿಂದ ತನ್ನ ಹೆಂಡತಿಯ ಶವವನ್ನು ತನ್ನ ದೇಶಕ್ಕೆ ತಂದು ಸಂಸ್ಕಾರ ಮಾಡುವದಕೋಸ್ಕರ ಹುಕುಂ ಪಡೆದು ಶವವನ್ನು ಅಗೆದು ಪರೀಕ್ಷಿಸಲಾಗಿ ಅದು ಏನೊಂದು ಕೊಳೆಯದೇ ಹುಗಿಯುವ ಮೊದಲು ಹೇಗಿತ್ತೋ ಅದೇ ರೀತಿ ಇತ್ತು. ಕಾರಣ ಆ ಕಾಬೂಲಿಯು ತನ್ನ ಮಡದಿಯ ಶವವು ಒಂದು ವರ್ಷ ಪರ್ಯಂತರ ಕೊಳೆಯದ ಹಾಗೆ ಅದನ್ನು ಕಾಪಾಡುವಂತೆ ಭಾರತ ಮಾತೆಯಲ್ಲಿ ಆತನು ಪ್ರಾರ್ಥಿಸಿದುದಾಗಿ ತಿಳಿದು ಬಂತು. ಭಾರತ ಮಾತೆಯು ತನ್ನ ಮಕ್ಕಳ ಮೊರೆಯನ್ನು ಪಾಲಿಸುವ ಈ ರೀತಿಯು ಬಹಳ ಸೋಜಿಗವಲ್ಲವೇ?

—:0:—

ವಿದ್ಯುಚ್ಛಕ್ತಿಯ ನೂತನ ಉಪಯೋಗ.

ಅಮೇರಿಕದ ನೋರ್ತ್‌ವೆಸ್ಟರ್ನ್ ವಿಶ್ವ ವಿದ್ಯಾಲಯದ ಮಾನಸಿಕ ಶಾಸ್ತ್ರಜ್ಞರೊಬ್ಬರು ಮಕ್ಕಳು ನಿದ್ರೆಯಲ್ಲಿ ಜೊಲ್ಲು ಸುರಿದು ಹಾಸಿಗೆಯನ್ನು ಒದ್ದೆ ಮಾಡದ ಹಾಗೆ ವಿದ್ಯುಚ್ಛಕ್ತಿಯ ಒಂದು ನೂತನ ಯಂತ್ರವನ್ನು ಕಂಡು ಹಿಡಿದಿರುವರು. ಬೆಡ್‌ಪಾಡಿಗೆ ನೆಗೆಟಿವ್ ಮತ್ತು ಪೋಜಿಟಿವ್ ವಾಯರ್‌ಗಳನ್ನು ಇಬ್ಬದಿಗಳಲ್ಲಿ ಸಿಕ್ಕಿಸಿದ್ದಾರೆ. ಆ ಪ್ಯಾಡು ಒದ್ದೆಯಾದ ಕೂಡಲೇ ವಿದ್ಯುಚ್ಛಕ್ತಿಯು ಅಲ್ಪ ಪ್ರವಾಹವೊಂದು ಬಂದು ಗಂಟೆಯನ್ನು ಬಾರಿಸಿ ಮಗುವನ್ನು ಎಬ್ಬಿಸಿಬಿಡುತ್ತದೆ.

—:0:—

ಅತ್ಯಲ್ಪ ಖರ್ಚಿನಿಂದ ಶಾಖ.

ಮಿನ್ನೆಸೋಟದ ಆರ್ಥರ್ ಲಜಾರಸ್ ಎಂಬ ಮಹನೀಯರೊಬ್ಬರು ಅತ್ಯಲ್ಪ ಖರ್ಚಿನಿಂದ ಕೋಣೆಗಳಲ್ಲಿ ಶಾಖವನ್ನುಂಟುಮಾಡುವ ಒಂದು ವಿಚಿತ್ರ ವಿಧಾನವನ್ನು ಕಂಡು ಹಿಡಿದಿರುವರು. ಕಟ್ಟಿಗೆ ಕಲ್ಲಿದ್ದಲುಗಳ ಸಹಾಯವಿಲ್ಲದೆ ಬರೇ ಘರ್ಷಣದಿಂದಲೇ ಶಾಖವನ್ನುಂಟುಮಾಡುವುದೇ ಅವರ ವಿಚಿತ್ರ ವಿಧಾನ. ಇರಲಿ, ಆರ್ಥಿಕ ದುಸ್ಥಿತಿಯ ಈ ಕಾಲದಲ್ಲಿ ಹೊಟ್ಟೆ ಬಟ್ಟೆಗಳಿಗೆ ಕಡಿಮೆಯಾದರೂ ಶೀತ ಪ್ರದೇಶಗಳ ನಿವಾಸಿಗಳಿಗೆ ಬೆಚ್ಚಗೆ ಮಲಗಿಕೊಳ್ಳಲಾಯಿತಲ್ಲವೇ?

—:0:—

ವಿದ್ಯುಚ್ಛಕ್ತಿಯನ್ನು ಪಳಗಿಸುವಿಕೆ.

ಲಂಡನಿನ ಕ್ವೀನ್ ಮೇರಿ ಕಾಲೇಜಿನ ಹ್ಯಾವೋಲ್ಟೇಜ್ ಲೆಬೊರೆಟರಿಯಲ್ಲಿ ವಿದ್ಯುಚ್ಛಕ್ತಿಯನ್ನು ಪಳಗಿಸುವ ಒಂದು ನೂತನ ಶೋಧನೆ ನಡೆಯುತ್ತದೆ.

ವಿದ್ಯುಚ್ಛಕ್ತಿಯು ಮಹಾ ಅಪಾಯಕರ, 'ಗ್ರಿಡ್ ಸಿಸ್ಟಮ್' ಎಂಬ ವಿದ್ಯುಚ್ಛಕ್ತಿಯ ಸಾಧನಕ್ಕೆ, ಒಂದು ಸೆಕುಂಡಿನ ಒಂದು ಮಿಲಿಯದ 5 ಮಿಲಿಯದ ಅತ್ಯಲ್ಪ ಸಮಯದೊಳಗಾಗಿ ಗ್ರಿಡ್ ಟ್ರಾನ್ಸ್‌ಫೊರ್ಮರನ್ನು ಧ್ವಂಸ ಮಾಡುವ ಸಾಮರ್ಥ್ಯವು ಅದಕ್ಕಿದೆ. 100 ಮೈಲು ವ್ಯಾಸದಲ್ಲಿರುವ ಸ್ಥಳಕ್ಕೆ ತತ್‌ಕ್ಷಣ ಗಾಢಾಂಧಕಾರವನ್ನು ಮುಸುಕುವಂತೆ ಮಾಡಬಲ್ಲದು. ವಿದ್ಯುಚ್ಛಕ್ತಿಯನ್ನು ಪೂರ್ಣ ಪಳಗಿಸುವುದು ಒಂದು ವೇಳೆ ಅಸಾಧ್ಯವೆಂದು ತೋರಿದರೂ ಅದರ ಅಪಾಯಕರವಾದ ಸಾಮರ್ಥ್ಯವನ್ನು ತಗ್ಗಿಸಬಹುದೆಂದು ಲೆಬೊರೆಟರಿಯ ಮುಖ್ಯಾಧಿಕಾರಿಗಳ ಅಂಬೋಣ.

—:0:—

ಒಂದು ಕುದುರೆಗೆ 40 ಮೋಟಾರು ಕಾರುಗಳು.

ಹಿಟ್ಲರನು ಅಫಘಾನರ ಜಾಜಾಟ ಕುದುರೆಗಳ ಕುರಿತು ಕುತೂಹಲವನ್ನು ಈ ಸಂಭಾಷಣೆಗಳಲ್ಲಿ ವ್ಯಕ್ತಪಡಿಸಿದನಂತೆ. ಅಫಘಾನನಿಂದ ಒಳ್ಳೆ ಜಾತಿಯ ಕುದುರೆಯೊಂದನ್ನು ಪಡಕೊಂಡು ಜರ್ಮನಿಯ ಕುದುರೆ ಜಾತಿಯನ್ನು ಉದ್ಧರಿಸುವ ದೃಷ್ಟಿಯಿಂದ, ಅದರ ಬೆಲೆಯನ್ನು ಕೇಳಿದನಂತೆ. ಬೆಲೆಯು 30 ಸಾವಿರ ಪೌಂಡುಗಳೆಂದು ಅಫಘಾನರು ಹೇಳಿದೊಡನೆ, ಹಿಟ್ಲರನು ಅವಕ್ಕಾದನು. ಆದರೆ ಸ್ವಲ್ಪ ಸಮಯದ ನಂತರ ಆತನು ಚೇತರಿಸಿಕೊಂಡು, ಒಂದಿಷ್ಟು ಆಲೋಚನೆ ಮಾಡಿದವನಾಗಿ 'ಬದಲಿಗೆ ನಮ್ಮ 40 ಮೋಟಾರು ಕಾರುಗಳನ್ನು ಕೊಟ್ಟರೆ, ನೀವೊಂದು ಕುದುರೆಯನ್ನು ಕೊಡುವಿರೋ' ಎಂದು ಕೇಳಿದನಂತೆ. ಅದಕ್ಕೆ ಅಫಘಾನರು ಅವುಗಳಿಂದ ನಮಗೇನು ಪ್ರಯೋಜನ ಲಂಡನಿನ ಕೇಂದ್ರದಲ್ಲಿ ಒಂದು ಮೋಟಾರು ಪ್ರದರ್ಶನವನ್ನು ತೋರಿಸುವುದೇ?' ಎಂದರಂತೆ.

—:0:—

ಪ್ರಧಾನರಿಗೂ ಹೊಗೆಸೊಪ್ಪಿನ ಹುಚ್ಚೇ?

ಫ್ರೆಂಚ್ ಪ್ರೀಮಿಯರರಾದ ಡುಂ. ವಾಲ್ಡಿಯರರು, ಆಂಗ್ಲೋ ಫ್ರೆಂಚರ ಸಂಭಾಷಣೆಗಾಗಿ ಲಂಡನಿಗೆ ಬಂದಿದ್ದರಷ್ಟೆ. ಆಗ ಒಂದು ಸ್ವಾರಸ್ಯ ನಡೆಯಿತು. ಪ್ರೀಮಿಯರರು, ಫ್ರೆಂಚ್ ರಾಯಭಾರಿಗಳ ನಿವಾಸದಿಂದ, ಡೌನಿಂಗ್ ಸ್ಟ್ರೀಟಿಗೆ ಹೊರಡುತ್ತಿದ್ದ ಹಾಗೆ, ತಮ್ಮ ಹೊಗೆ ಸೊಪ್ಪಿನ ಸ್ಟಾಕ್ ಖರ್ಚಾದದ್ದು ಅವರಿಗೆ ತಿಳಿಯಿತು. ಪ್ರಧಾನರು ಕಕ್ಕಾಬಿಕ್ಕಿಯಾದರು. ಆ ರಾಜಕೀಯ ನೂರು ಕಥೆಗಳು, 'ಹೊಗೆಸೊಪ್ಪು ಇಲ್ಲದೆ, ಹದಗೆಡುವುವೋ' ಎಂಬಂತೆ ತೋರಿತು. ಸರಿ; ಪ್ರಧಾನರು, ಯಾವಾಗಲೂ ಉಪಯೋಗಿಸುತ್ತಿದ್ದ, ಹೊಗೆಸೊಪ್ಪಿನ ಸುರುಳಿ ಮಾಡಿ, ಸಿಗರೇಟಾಗಿ ಸುತ್ತಿ ಸೇದುತ್ತಿದ್ದ ಅದೊಂದು ಪ್ರತ್ಯೇಕ ಫ್ರೆಂಚ್ ಬ್ರಾಂಡಿನ ಹೊಗೆಸೊಪ್ಪು, ಎಲ್ಲಿ ಸಿಕ್ಕೀತೆಂದು, ನಾಲ್ಕು ದಿಕ್ಕಿಗೂ, ಜನಗಳನ್ನು ಓಡಿಸಿದ್ದಾಯಿತು. ಸಮೀಪದ ಅಂಗಡಿಗಳಲ್ಲೆಲ್ಲೂ, ಪ್ರೀಮಿಯರರಿಗೆ ಬೇಕಾದ, ಆ ಬ್ರಾಂಡಿನ ಹೊಗೆಸೊಪ್ಪಿಲ್ಲ. ಕೊನೆಗೆ, ಯಾರೋ ಒಬ್ಬ ಸಮೀಪದಲ್ಲಿ ವಾಸಿಸುತ್ತಿದ್ದ, ಫ್ರೆಂಚ್ ಕುಟುಂಬದಲ್ಲಿಂದ, ಒಂದು ಪ್ಯಾಕೆಟ್ ಹೊಗೆಸೊಪ್ಪು ತಂದು ಕೊಟ್ಟ. ಪ್ರಧಾನರು, ಒಡೆದು ನೋಡಿ, 'ಹೌದು; ಇದೇ ನನಗೆ ಬೇಕಾದ್ದೆ'ನ್ನುತ್ತ, ಸಂತೋಷದಿಂದ ನಗುತ್ತ, ಅದರಿಂದ ಸಿಗರೇಟ್ ಸುತ್ತಿ ಸೇದುತ್ತ, ಅವಸರವಾಗಿ ಕಾರು ಹತ್ತಿ, ಡೌನಿಂಗ್ ಸ್ಟ್ರೀಟಿಗೆ ತೆರಳಿದರು. ಹೇಗಿದೆ, ಹೊಗೆಸೊಪ್ಪಿನ ಪ್ರಭಾವ!

—:0:—

ಪೊರೆ ಬಿಡುವ ಮನುಷ್ಯ.

—:0:—

ಪ್ರಾಣಿ ವರ್ಗದಲ್ಲಿ ಹಲ ಕೆಲವು ಕ್ಲುಪ್ತ ಕಾಲಗಳಲ್ಲಿ ಪೊರೆ ಬಿಡುವುದನ್ನು ಎಲ್ಲರೂ ಬಲ್ಲರು. ಆದರೆ ಮನುಷ್ಯನು ಹಾವುಗಳಂತೆ ಪೊರೆ ಬಿಡುವುದನ್ನಿದುವರೆಗೂ ಯಾರೂ ಕಂಡಿರಲಿಲ್ಲ. ಈಗ ಒಬ್ಬ ಇಂತಹ ವ್ಯಕ್ತಿಯು ಬೆಳಕಿಗೆ ಬಂದಿದ್ದಾನೆ.

ಟೆನ್ನೆಸ್ಸಿಯಲ್ಲಿ ಒಬ್ಬ ತರುಣನಿದ್ದಾನೆ. ಆತನು ಹತ್ತು ವರ್ಷದ ಹುಡುಗನಾಗಿದ್ದಾಗಲಿಂದಲೂ ಪ್ರತಿ ವರ್ಷ ಒಂದು ಬಾರಿ ಆತನ ದೇಹಾದ್ಯಂತವೂ ಚರ್ಮದ ಪೊರೆ ತಾನಾಗಿ ಸುಲಿದು ಹೋಗುತ್ತಿದೆ. ಹಾಗೆ ಎದ್ದು ಬರುವ ಚರ್ಮದ ಪೊರೆಯು ಬಹು ಒಣ್ಣಕ್ಕಿರುವುದು. ಅದರ ಸ್ಥಾನದಲ್ಲಿ ಕಂಡು ಬರುವ ನೂತನ ಚರ್ಮವು ಅತಿ ಸೂಕ್ಷ್ಮವಾಗಿಯೂ, ಕೆಂಪಗೂ ಮತ್ತು ಮೃದುವಾಗಿಯೂ ಇರುವುದು. ಆದರೆ ಅಲ್ಪ ಕಾಲದಲ್ಲೇ ಒರಟಾಗಿ ಹೋಗುವುದು. ಈ ವಿಚಿತ್ರ ಮನುಷ್ಯನನ್ನು ವೈದ್ಯ ಪರೀಕ್ಷೆಗೆ ಗುರಿ ಮಾಡಿದರು. ಆ ಪರೀಕ್ಷೆಯಲ್ಲಿ ಆತನು ಯಾವ ಬಗೆಯ ರೋಗದಿಂದಲೂ ನರಳುತ್ತಿಲ್ಲವೆಂದೂ ಮತ್ತು ಸಂಪೂರ್ಣ ಆರೋಗ್ಯದಿಂದಿರುವನೆಂದೂ ತಿಳಿದು ಬಂದಿರು.

—:0:—

ಇಲಿಗಳ ಬೇಟೆ ಲಂಡನ್ ಮಹಾ ನಗರದಲ್ಲಿ.

ಲಂಡನ್ ಅತಿ ದಿವ್ಯವಾದ ನಗರ. ನಗರದ ಅತಿ ಭವ್ಯವಾದ ಭವನಗಳು. ಅತಿ ನಾಗರಿಕ ಜನರೇ ಅಲ್ಲಿ ವಾಸಿಸುವುದು. ಹೀಗೆ ತಿಳಿದಿರುವವರು ಅನೇಕ ಮಂದಿ. ಆದರೆ ಲಂಡನ್ನಿನಲ್ಲೂ ಅನೇಕ ಕೊಳಚೆಗಳಿವೆ. ಅಂತಹ ಎಡೆಯಲ್ಲಿ ವಾಸಿಸುವ ಜನರು ತಮ್ಮ ಒಂದು ಹೊತ್ತಿನ ಊಟಕ್ಕೆ ಬಹು ಶ್ರಮಪಡಬೇಕಾದವರು. ಅವರು ಕಷ್ಟಪಟ್ಟು ಸಂಪಾದಿಸಿದ ಊಟವೂ ಅವರಿಗೆ ದಕ್ಕಲಾಗದಂತೆ ಮಾಡಿ ಕೊಬ್ಬಿರುವ ಲಕ್ಷಾಂತರ ಇಲಿಗಳೂ ಅಲ್ಲಿ ಮನೆ ಮಾಡಿವೆ. ಈ ಇಲಿಗಳಿಂದ ತಮ್ಮ ಊಟವನ್ನುಳಿಸಿಕೊಳ್ಳಲು ಅಲ್ಲಿಯ ಜನರು ರಾತ್ರಿ ನಿದ್ದೆಗೆಟ್ಟು ಇಲಿಗಳ ಬೇಟೆಯಾಡುವರು. ಹೀಗೆ ಆಡುವ ಇಲಿಗಳ ಬೇಟೆಯು ಅವರಿಗೆ ಬೇಸರಿಕೆ ಹುಟ್ಟಿಸಬಹುದಂತೆ ಅಲ್ಲಿಯ ಪುರುಷರು ಮನೆ ಮನೆಯ ಬಿರಡಿಗಳನ್ನು ಹಾಕಿಕೊಂಡು ಕಾಯುವರು. ಒಂದು ವಾರದಲ್ಲಿ ಯಾರು ಹೆಚ್ಚಿಗೆ ಇಲಿಗಳನ್ನು ಕೊಂದಿರುವರೊ ಅವರಿಗೆ ಒಂದು ಪ್ಯಾಕ್ ಸಿಗರೇಟ್ ಬಹುಮಾನವಾಗಿ ಕೊಡಲ್ಪಡುವುದು. ಈ ಬೇಟೆಯನ್ನು ಕೈಗೊಳ್ಳುವವರು ಕೇವಲ ತಮಾಷೆಗಾಗಿ ಇದನ್ನು ವಹಿಸಿಕೊಳ್ಳುವುದಲ್ಲ. ಅನೇಕ ವೇಳೆ ಆಹಾರ ದೊರಕದೆ ಇಲಿಗಳು ಮಕ್ಕಳುಗಳ ಮೇಲೆ ಬಿದ್ದು ಕಚ್ಚಿ ಬಹುವಾಗಿ ಗಾಯಪಡಿಸಿವೆ. ಹಲವು ಸಂದರ್ಭಗಳಲ್ಲಿ ಅನೇಕ ಮಕ್ಕಳು ಸತ್ತೇಹೋಗಿವೆ. ಈ ರೋಷದಿಂದಷ್ಟು ಈ ಬೇಟೆಯಲ್ಲಿ ಹಲವರು ತೊಡಗುವರು.

—:0:—

ಪ್ರಕಟಣೆ.

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್, ಲಿಮಿಟೆಡ್, ಮಡಿಕೇರಿ.
(ಕೋ-ಆಪರೇಟಿವ್ ಸೊಸೈಟೀಸ್ ಆಕ್ಟ್ ಪ್ರಕಾರರಿಜಿಸ್ಟರಾಗಿದೆ.)

(ಸ್ಥಾಪಿತವಾದದ್ದು 1921ರಲ್ಲಿ)

		ರೂ.	ಆ.	ಪೈ.
ಶೇರ್ ಬಂಡವಾಳ	–	50,000	0	0
ವಸೂಲಾದ ಶೇರ್ ಮೊಬಲಗು	–	44,690	0	0
ಜಮೂಬಂದ ಠೇವಣಾತಿ	–	2,81,879	15	4
ವಸೂಲಾದ ಕ್ಷೇಮನಿಧಿ	–	1,31,704	12	0
ಸೇವಿಂಗ್ಸ್ ಬ್ಯಾಂಕ್ ಡಿಪಾಜಿಟ್ಟು	–	33,211	3	5
ಕ್ರಿಫ್ಟ ಡಿಪಾಜಿಟ್ಟು	–	38,085	15	8

● ಬ್ಯಾಂಕಿನಿಂದ ಕೊಡಗು ದೇಶದ ಸಹಕಾರಿ ಸಂಘಗಳಿಗೇನೇ ಹೆಚ್ಚಾಗಿ ಸಾಲ ಕೊಡತಕ್ಕದ್ದು.

ಒಂದು ಮತ್ತು ಎರಡು ವರ್ಷಗಳ ಅವಧಿಯ ಠೇವಣಾತಿಗಳಿಗೆ ಶೇಕಡ ಶಾಲಿಯಾನ 3¼ ಪರವಲ್ಲಿಯೂ, ಮೂರು ಅಥವ ಹೆಚ್ಚಿನ ಅವಧಿಯ ಠೇವಣಾತಿಗಳಿಗೆ ಶೇಕಡ ಶಾಲಿಯಾನ 4ರವರದಲ್ಲಿಯೂ ತಾ. 1-9-1937ರಿಂದ ಬಡ್ಡಿ ದೊರೆಯುತ್ತೆ.

ತಾ. 1-10-1936ರಿಂದ ಬ್ಯಾಂಕಿನಲ್ಲಿ ಕರೆಂಟ್ ಸೇವಿಂಗ್ಸ್ ಬ್ಯಾಂಕ್ ಲೆಕ್ಕವೂ ಮತ್ತು ಕ್ರಿಫ್ಟ ಡಿಪಾಜಿಟ್ ಲೆಕ್ಕವೂ ತೆರೆಯಲ್ಪಟ್ಟಿವೆ. ಇವರ ವಿಷಯ ಹೆಚ್ಚಿನ ವಿವರಗಳಿಗೆ ಬ್ಯಾಂಕು ಆಫೀಸಿಗೆ ಬರೆದುಕೊಂಡಲ್ಲು ವಿವರವಾಗಿ ಬರೆದು ತಿಳಿಸಲಾಗುವುದು.

ವರ್ಷಕ್ಕೊಂದಾವರ್ತಿ ಕೋ-ಆಪರೇಟಿವ್ ರಿಜಿಸ್ಟ್ರಾರವರು ಲೆಕ್ಕ ಆಡಿಟ್ ಯಿಸಿಕೆ ಮಾಡುತ್ತಾರೆ.

ಪ್ರೆಸಿಡೆಂಟ್:-ಪಂದ್ಯಂಡ ಐ. ಬೆಳ್ಯಪ್ಪನವರು ಎಂ. ಎಲ್. ಸಿ.
ಟ್ರೆಜರರ್:—ಮಾಚಿಮಾಡ ಎ. ಚಂಗಪ್ಪನವರು ಬಿ. ಎ., ಎಲ್.ಟಿ.
ಸೆಕ್ರೆಟರಿ:—ಪ್ಪಲಿಯಂಡ ಜಿ. ಐಯ್ಯಪ್ಪನವರು ಬಿ. ಎ., ಬಿ. ಎಲ್.

ದಿ ಎಗ್ರಿಕಲ್ಚರಲ್ ಎಂಡ್ ಇಂಡಸ್ಟ್ರಿಯಲ್ ಬ್ಯಾಂಕ್ ಲಿಮಿಟೆಡ್.

(ಬ್ರಿಟಿಷ್ ಹಿಂದುಸ್ಥಾನದಲ್ಲಿ ಸ್ಥಾಪಿತವಾದದ್ದು)

ಹೆಡ್ ಆಫೀಸು:—ಲಕ್ಷ್ಮೀನಿವಾಸ್ ಬಿಲ್ಡಿಂಗ್ಸ್, ಕುಂದಾಪುರ, ದ. ಕ.

ಪ್ರಕಟಣೆ.

ಕಷ್ಟಕಾಲದಲ್ಲಿ ಸಂಪಾದಿಸಿದ ಹಣವನ್ನು ಠೇವಣಾತಿ ಇಟ್ಟು ಈ ಚಿನ್ನದಂತ ಸುಸಂದರ್ಭವನ್ನು ಉಪಯೋಗಿಸಿಕೊಳ್ಳಿರಿ.

ಅತ್ಯಧಿಕ ಲಾಭ! **ಇಚ್ಛಿಸಿದಾಗ ಹಣ ಹಿಂದಕ್ಕೆ!**

ದಿ ಎಗ್ರಿಕಲ್ಚರಲ್ ಎಂಡ್ ಇಂಡಸ್ಟ್ರಿಯಲ್ ಬ್ಯಾಂಕಿನ

ಶೇಕಡ 5ರ 5 ವರ್ಷಗಳ "ಕರೊನೇಶನ್ ಕ್ಯಾಶ್ ಸರ್ಟಿಫಿಕೇಟುಗಳು" ರೂಪಾಯಿ 8, 20, 40, 80; 200, 400 ಮತ್ತು 800 ಗಳ ನಾನಾವರ್ಗದ ಠೇವಣಾತಿಗಳಿಗೆ ವೈಯಕ್ತಿಕವಾದ ರೂ. 10, 25, 50, 100, 250, 500 ಮತ್ತು 1000 ಗಳು.

ದಯವಿಟ್ಟು ಕೊಡುವ ತಾರೀಕನ್ನು ಗಮನಿಸಿರಿ. **ಹೆಚ್ಚಿನ ಮಾಹಿತಿಯನ್ನು ನಮ್ಮ ಯಾವದಾದರೊಂದು, ಕುಂದಾಪುರ, ಕುಮಟಾ, ಗೋಕರ್ಣ, ಬೈಂದೂರು, ವೀರರಾಜೇಂದ್ರಪೇಟೆ, ಸೋಮವಾರಪೇಟೆ, ಕೋಟೇಶ್ವರ, ಶಿವಮೊಗ್ಗಾ, ತರೀಕೆರೆ ಮತ್ತು ಕಡೂರು ಶಾಖೆಗಳಿಂದ ತಿಳಿದುಕೊಳ್ಳಬಹುದು.**

52-3

The Agricultural & Industrial Bank Ltd

"ZANDU"

ಝಂಡೂರವರ	ಝಂಡೂರವರ
ದ್ರಾಕ್ಷಾಸವ ಮತ್ತು **ಚ್ಯವನಪ್ರಾಶ** — ಇದು ಶಕ್ತಿವರ್ಧಕ ಮತ್ತು ಶ್ವಾಸಕೋಶಗಳ ಕಾಯಿಲೆಗಳಿಗೆ ಅತ್ಯುತ್ತಮವಾದದ್ದು. ಕ್ಷಯದ ಪ್ರಾರಂಭಾವಸ್ಥೆಯಲ್ಲಿ ದಿವ್ಯವಾದ ಔಷಧ.	**ಕೇಸರಿ ಜೀವನ್** — ಇದು ಎಲ್ಲಾ ತರದ ಅಶಕ್ತತೆಗೆ ದಿವ್ಯವಾದ ಔಷಧ. **ಝಂಡೂ ಆಯೋಡೈಸ್ಡ್ ಸೇರಸಪರಿಲ್ಲಾ** — ಇದು ರಕ್ತಶೋಧಕ ಮತ್ತು ಸ್ತ್ರೀ ಸಂಬಂಧದ ಮೇಹ ವಿಕಾರಗಳಲ್ಲಿ ದಿವ್ಯ ಔಷಧ.

ಝಂಡೂ ಪ್ಲೋಜಿಸ್ಟೈನ್.

ಇದು ನ್ಯುಮೋನಿಯಾ, ಶೋಥ, ಬೆಂಕಿಯಿಂದ ಉಂಟಾದ ಗಾಯ, ವಿಪ್ರಧಿ (Boils) ಗಳಲ್ಲಿ ಅತ್ಯುಪಯುಕ್ತವಾದದ್ದು

ಕೆಟಲಾಗಿಗೆ ಬರೆಯಿರಿ, ಮುಫ್ತಾಗಿ ಕಳುಹಿಸಲಾಗುತ್ತೆ.

ಮಡಿಕೇರಿ ಸ್ಟೋಕಿಸ್ಟ—
ಡಾ. ಬಿ. ಕೆ. ನಂಜುಂಡೇಶ್ವರ, ಎಲ್. ಎ. ಎಂ. ಎಸ್
(52–45) ಮತ್ತು ಆಯುರ್ವೇದ ವಿದ್ವಾನ್

ವೀರಾಜಪೇಟೆಯ ಏಜೆಂಟರು-ಕೆ. ಕೃಷ್ಣರಾವ್, ವೀರಾಜಪೇಟೆ. (ದ. ಕೊಡಗು)

'ಕೊಡಗು' ಪತ್ರಿಕೆಗೆ ಚಂದಾದಾರರಾಗಿರಿ!



ಪೈಲ್‌ಸಾಲ್

(OINTMENT FOR EXTERNAL USE)

PILESOL:- ಮೂಲ ವ್ಯಾಧಿಗೆ (ಹೊರಗೂ ಒಳಗೂ) ದಿವ್ಯೌಷಧಿ.

ಆಪರೇಷನ್ ಇಲ್ಲದೆ ಗುಣವಾಗುತ್ತೆ. ಬ್ರಿಟಿಷ್ ಗವರ್ನಮೆಂಟಿನವರಿಂದ ಇಂಡಿಯಾದಲ್ಲಿಯೂ, ಪರದೇಶದಲ್ಲಿಯೂ ರಿಜಿಸ್ಟರ್ ಮಾಡಲ್ಪಟ್ಟಿದೆ.

ರಕ್ತ ಕೀವು ಬಿದ್ದರೂ ಅತಿ ಶೀಘ್ರವಾಗಿ ಗುಣವಾಗುತ್ತದೆ.

ಪೈಲ್‌ಸಾಲ್ ತಣ್ಣಗಿರುತ್ತದೆ. ಜಾರಿದ ನರಗಳು ಯಥಾಸ್ಥಾನಕ್ಕೆ ಬರುತ್ತವೆ. ಪ್ರಖ್ಯಾತಿ ಹೊಂದಿದ ಅನೇಕ ಡಾಕ್ಟರುಗಳಿಂದ ಒಳ್ಳೆಯ ಹೆಸರು ಪಡೆದಿದೆ ಈ ವ್ಯಾಧಿಯಿಂದ ಮಲವಿಸರ್ಜನೆಯು ಅಕ್ರಮವಾಗುವುದನ್ನು ಪೈಲ್‌ಸಾಲ್ ಗುಣಪಡಿಸುತ್ತದೆ.

ಯೋಗ್ಯತಾಪತ್ರಗಳು ನಾನಾ ದೇಶಗಳಿಂದ ನಮಗೆ ಬಂದಿರುತ್ತವೆ.

ಈಗಿನ ಒಂದು ಸರ್ಟಿಫಿಕೇಟು

ಸಾಪೋಕ್ಲು,

ಅಯ್ಯಾ,

ನಿಮ್ಮ ಪೈಲ್‌ಸಾಲ್ ನನ್ನೊಬ್ಬ ರೋಗಿಗೆ ತುಂಬಾ ಸಹಾಯಮಾಡಿದೆ ಆದ್ದರಿಂದ ದಯವಿಟ್ಟು ವಡನೆ ಮತ್ತೊಂದು ಸೀಸೆಯನ್ನು ವಿ. ಪಿ. ಮೂಲಕ ಕಳುಹಿಸಿಕೊಡಿ. ಮತ್ತೊಬ್ಬನಿಗೆ ಇದರ ಪ್ರಯೋಗವನ್ನು ಮಾಡಬೇಕಾಗಿದೆ.

(*Sd*) ಎನ್. ಯಂ. ದೇವಯ್ಯ,
ಸಬ್-ಅಸಿಸ್ಟಾಂಟ್ ಸರ್ಜನ್,
19 ನಾಪೋಕ್ಲು, ಕೊಡಗು.

ಉಪಯೋಗಿಸುವ ವಿಧಾನ ಔಷಧದ ಜೊತೆಯಲ್ಲಿ ಕಳುಹಿಸಲಾಗುತ್ತೆ.

ಕ್ರಯ:—1 ಔನ್ಸಿಗೆ ರೂ. 5-0-0. ½ ಔನ್ಸಿಗೆ ರೂ. 2-12-0. ಪೋಸ್ಟೇಜು ಪ್ರತ್ಯೇಕ. ಮಾದರಿ ಸೀಸೆಗೆ ರೂ. 1-0-0. ಮನಿಯಾರ್ಡರ್ ಮೂಲಕವಾಗಲೀ ಪೋಸ್ಟಲ್ ಆರ್ಡರ್ ಮೂಲಕವಾಗಲೀ ಹಣಕಳುಹಿಸಬಹುದು.

ಬೇಕಾದವರು ಈ ವಿಳಾಸಕ್ಕೆ ಬರೆದು ತರಿಸಿಕೊಳ್ಳಬಹುದು.

ಕ್ಯಾಪಾಲ್ ಲೇಬೋರೇಟರಿ (ರಿಜಿಸ್ಟರ್ಡ್), ಬೆಂಗಳೂರು ಸಿಟಿ.

Reg No. M. 1590

ಕೊಡಗು

ಪ್ರತಿಶುಕ್ರವಾರ ಪ್ರಕಟಿಸಲ್ಪಡುವುದು.

ಸಂಪಾದಕ:— ಪಿ. ಐ. ಬೆಳ್ಯಪ್ಪ. ವಾರ್ಷಿಕ ಚಂದಾ ರೂ. ೩-೮-೦

ತಾ. ೧೭—೬—೧೯೩೮.

ಸಂಪುಟ ೧೮] [ಸಂಚಿಕೆ ೩

ನಿಮ್ಮ

ಲಗ್ನ ಪತ್ರಿಕೆಗಳನ್ನು

"ಕೊಡಗು"

ಪ್ರೆಸ್ಸಿನಲ್ಲೇ

ಮುದ್ರಿಸಿರಿ.

Travancore National & Quilon Bank, Ltd.

(INCORPORATED IN TRAVANCORE—1912.)

(Liability of Members limited,)

Central Office: MADRAS.

With a country wide net work of seventy eight offices make service promt and efficient.

Working Capital over FOUR CRORES.

Open a HOME SAVING account and resolve to save something and invest a lot every year in 3 YEAR 4% CASH CERTIFICATES

SAVINGS BANK:—accounts opened for sums above Rs. 5 - and interest allowed on daily balances Withdrawals by cheques-Maximum amount withdrawable per week-Rs. 250/-

FIXED DEPOSITS:—accepted for periods from 6 to 24 months at rates which may be ascertained on application.

CURRENT ACCOUNTS:—opened for sums above Rs. 100 and interest allowed on daily credit balances from Rs. 100/- to Rs. 20,000/-

All other kinds of Banking business transacted.

For terms please apply to the Central Office or to any of the branches.

K. S. Ramanujam, *General Manager.* 52-37 **K. M. Eapen,** *Joint Managing Director,* **C. P. Mathen,** *Managing Director.*

THE CANARA BANKING CORPORATION, UDIPI, Ltd.

(Incorporated in British India.)

Estd. 1906.

ABSTRACT BALANCE SHEET AS AT 30TH APRIL, 1938.

CAPITAL & LIABILITIES.	Rs.	A.	P.	PROPERTY & ASSETS.	Rs.	A.	P.
Paid up Capital	2,97,045	0	0	Property, Premises & furniture	3,64,887	1	5
Reserves	3,83,903	6	8	Government & other securities	17,68,998	12	2
Deposits	40,18,102	5	3	Advances	34,83,850	7	6
Due to Bankers	11,38,795	13	11	Bills for collection	1,30,705	6	8
Bills for collection as per contract	1,30,705	6	8	Cash on hand & with Bankers at call	3,61,659	6	9
Sundries	2,09,229	9	8	Sundry Assets	67,680	7	8
	61,77,781	10	2		61,77,781	10	2

Udipi,
14th May 1938.

52-28

12. ರೆಸೊಲ್ಯೂಷನ್ ನಂ. 4597 ನ್ನು ತಿದ್ದುಪಡಿ ಮಾಡಬೇಕೆಂದು ಕೆನರಾ ಬ್ಯಾಂಕಿಂಗ್ ಕಾರ್ಪೊರೇಷನಿನವರು ಬರೆಕೊಂಡ ಪತ್ರವನ್ನೂ ಮತ್ತು ಅವರು ಕಳುಹಿಸಿದ ಕರಡು ಠರಾವನ್ನೂ ಆಲೋಚಿಸಲಾಗಿ ಸದರಿ ಠರಾವನ್ನು ಅಂಗೀಕರಿಸಬಹುದೆಂದು ತೀರ್ಮಾನವಾಯಿತು.

13. ಪೊನ್ನಂಪೇಟೆ ಸಂಘದ ರಿಂಡಿಂಗ್ ರೂಮ್ ಪುಸ್ತಕಗಳು ತಮಗೆ ಸ್ವಸ್ತಕಕೊಂಡುಕೊಳ್ಳಲಿಕ್ಕಾಗಿ ಬ್ಯಾಂಕಿನಿಂದ ಸಣ್ಣ ಧನ ಸಹಾಯ ಕೊಡಬೇಕೆಂದು ಬರೆಕೊಂಡ ಅರ್ಜಿಯನ್ನು ತಿರಸ್ಕರಿಸಲಾಯಿತು.

14. ಬ್ಯಾಂಕಿನ ಒಬ್ಬ ಶೇರು ಮೆಂಬರನು ತನ್ನ ಮದುವೆಯ ಖರ್ಚಿಗಾಗಿ ಶೇರು ಮೊಬಲಗನ್ನು ವಾಪಸು ಕೊಡಬೇಕೆಂದು ಬರೆಕೊಂಡ ಅರ್ಜಿ ಮೇಲೆ ಆತನ ಸಾಲು ಹಣವನ್ನು ವಾಪಸು ಕೊಡಬಹುದೆಂದು ತೀರ್ಮಾನವಾಯಿತು.

15. ಬ್ಯಾಂಕಿನ ಮತ್ತು ಸುಪರ್‌ವಿಜನ್ ಬೋರ್ಡಿನ ಡಿಮಾಂಡ್ ಕಲೆಕ್ಷನ್ ಮತ್ತು ಬ್ಯಾಲೆನ್ಸ್ ಪಟ್ಟಿಯನ್ನು ಪ್ರತಿ ತಿಂಗಳಲ್ಲಿ ಯೂನಿಯನ್‌ಗಳಿಗೆ ಕಳುಹಿಸಬೇಕೆಂದು ಮಿ. ಕೆ. ಕೆ. ಬೆಳ್ಯಪ್ಪನವರು ಕಳುಹಿಸಿದ ಠರಾವು ಪಾಸಾಗಲಿಲ್ಲ.

16. ಬ್ಯಾಂಕಿನ ಮತ್ತು ಸುಪರ್‌ವಿಜನ್ ಬೋರ್ಡಿನ ಮೀಟಿಂಗು ಪ್ರೊಸೀಡಿಂಗಿನ ನಕಲನ್ನು ಎಲ್ಲಾ ಯೂನಿಯನ್‌ಗಳಿಗೆ ಕಳುಹಿಸಬೇಕೆಂದು ಮಿ. ಕೆ. ಕೆ. ಬೆಳ್ಯಪ್ಪನವರು ಕಳುಹಿಸಿದ ಠರಾವು ಪಾಸಾಯಿತು.

17. ಬ್ಯಾಂಕಿನ ಮತ್ತು ಸುಪರ್‌ವಿಜನ್ ಬೋರ್ಡಿನ ಮೀಟಿಂಗುಗಳಲ್ಲಿ ಚರ್ಚಿಸಲ್ಪಡುವ ವಿಷಯಗಳನ್ನು ಎಲ್ಲಾ ಯೂನಿಯನ್‌ಗಳಿಗೆ ತಿಳುಹಿಸಬೇಕೆಂದು ಮಿ. ಕೆ. ಕೆ. ಬೆಳ್ಯಪ್ಪನವರು ಕಳುಹಿಸಿದ ಠರಾವು ಪಾಸಾಗಲಿಲ್ಲ.

18. ಆಯಾ ಯೂನಿಯನ್‌ಗಳಿಗೆ ಅಧೀನವಾಗಿರುವ ಸೊಸೈಟಿಗಳಿಗೆ ಬ್ಯಾಂಕಿನಿಂದ ಸಾಲ ಮಂಜೂರಾದ ಸಂಗತಿಯನ್ನು ಸಾಲ ಬಟವಾಡೆ ಮಾಡುವ ಮೊದಲೇ ಆಯಾ ಯೂನಿಯನ್‌ಗಳಿಗೆ ತಿಳಿಸಬೇಕೆಂದು ಮಿ. ಕೆ. ಕೆ. ಬೆಳ್ಯಪ್ಪನವರು ಕಳುಹಿಸಿದ ಠರಾವು ಪಾಸಾಗಲಿಲ್ಲ.

19. ಜನರಲ್ ಬಾಡಿಯವರ ತೀರ್ಮಾನದ ಮೇರೆ ಬ್ಯಾಂಕಿನಲ್ಲಿ ಒಂದು ಮಾಫಿ ವಾಚನಾಲಯವನ್ನು ತೆರೆಯುವ ವಿಷಯ ಬ್ಯಾಂಕಿಗೆ ಒಂದು ಹೊಸ ಕಟ್ಟಡ ಆದ ನಂತರ ಆಲೋಚಿಸುವಂತೆ ತೀರ್ಮಾನವಾಯಿತು.

20. ಬ್ಯಾಂಕಿಗೆ ಮರುಪಾವತಿ ಮಾಡಲಿಕ್ಕಿರುವ ವಾಯಿದೆ ಮೀರಿದ ಸಾಲಕ್ಕೆ ಹೆಚ್ಚಿನ ಸಮಯ ಕೊಡಬೇಕೆಂದು ಹೊಸಕ್ಕೇರಿ ಸೊಸೈಟಿಯವರು ಬರೆಕೊಂಡ ಅರ್ಜಿಯನ್ನು ತಿರಸ್ಕರಿಸಲಾಯಿತು.

21. ಪಮ್ಮನಾಡು ಸರ್ಕಲಿನ ಸುಪ[illegible] ಲದ ಕಾರ್ಯಗಳ ವಿಷಯ ಬರೆಕೊಂಡ ರಿಪೋರ್ಟನ್ನು ಇನ್ನೊಂದು ಮೀಟಿಂಗಿಗೆ ಇಡಲಾಯಿತು.

ಕೈಕೇರಿ ಸೊಸೈಟಿಯವರು ಬ್ಯಾಂಕಿಗೆ ಮರುಪಾವತಿ ಮಾಡಬೇಕಾದ ವಾಯಿದೆ ಮೀರಿದ ಸಾಲಕ್ಕೆ ಹೆಚ್ಚಿನ ಸಮಯ ಕೊಡಬೇಕೆಂದು ಬರೆಕೊಂಡ ಅರ್ಜಿಯನ್ನು ಇನ್ನೊಂದು ಮೀಟಿಂಗಿಗೆ ಇಡಲಾಯಿತು.

23. ಸಂಪಾಜೆ ಮಲ್ಲೇಶ್ವರ ಸೊಸೈಟಿಯ ಪ್ರೆಸಿಡೆಂಟರು ತಮ್ಮ ಸಂಘಕ್ಕೆ ಒಂದು ಕಟ್ಟಡ ಕಟ್ಟಿಸುವ ಉದ್ದೇಶ್ಯ ಬ್ಯಾಂಕಿನಿಂದ 100 ರೂಪಾಯಿಗಳನ್ನು ಸಹಾಯವಾಗಿ ಕೊಡಬೇಕೆಂದು ಬರೆಕೊಂಡ ಅರ್ಜಿಯನ್ನು ಇನ್ನೊಂದು ಮೀಟಿಂಗಿಗೆ ಇಡಲಾಯಿತು.

24. ಬ್ಯಾಂಕಿನ ಮೆಂಬರಾಗಲು ಅರ್ಜಿ ಬರೆದುಕೊಂಡ ಮಿ. ಮುಂಡೇಪಂಡ ಯಂ. ನಾಣ್ಯಯ್ಯನವರನ್ನು ಮೆಂಬರಾಗಿ ಆರಿಸಿಕೊಳ್ಳಲಾಯಿತು.

25. ಮಡಿಕೇರಿ ಮುನ್ಸಿಪಾಲಿಟಿಯ ಪ್ರೆಸಿಡೆಂಟರು ಕಾರ್ಪೊರೇಷನ್ ಕೋರ್ಟಿನಲ್ಲಿ ಬ್ಯಾಂಕಿಗೆ ಕಟ್ಟಡ ಕಟ್ಟಿಸುವ ವಿಷಯ ಬರೆಕೊಂಡ ಪತ್ರವನ್ನು ಇನ್ನೊಂದು ಮೀಟಿಂಗಿಗೆ ಇಡಲಾಯಿತು.

26. ಒಂದು ಯಾ ಹೆಚ್ಚು ವರ್ಷಗಳ ಠೇವಣಾತಿಗಳನ್ನು ತಾ. 1-6-38 ರಿಂದ ಹೊಂದಿಕೊಳ್ಳಬಹುದೆಂದು ತೀರ್ಮಾನವಾಯಿತು.

27. ಬ್ಯಾಂಕು ಹೊರ ಬ್ಯಾಂಕುಗಳಲ್ಲಿ ಠೇವಣಾತಿ ಮಾಡಿದ ಮೊಬಲಗುಗಳ ಆಧಾರದ ಮೇಲೆ ಅವಶ್ಯವಿದ್ದಲ್ಲಿ ಸಾಲ ಪಡೆಕೊಳ್ಳಬಹುದೆಂದು ತೀರ್ಮಾನವಾಯಿತು.

28. ಪೊನ್ನಂಪೇಟೆ ಟೌನ್ ಸೊಸೈಟಿಯವರು ಬ್ಯಾಂಕಿಗೆ ಪಾವತಿ ಮಾಡಲು ಇರುವ ಸಾಲಗಳಿಗೆ ತಿಂಗಳುವಾರು ಕಂತುಗಳ ಬದಲು ಮೂರು ತಿಂಗಳುಗಳ ಕಂತುಗಳಲ್ಲಿ ಮರುಪಾವತಿ ಮಾಡುವ ಠರಾವನ್ನು ಕೊಡ್ಸಿಕೊಡಬೇಕೆಂದು ಬರೆಕೊಂಡ ಅರ್ಜಿಯನ್ನು ಇನ್ನೊಂದು ಮೀಟಿಂಗಿಗೆ ಇಡಲಾಯಿತು.

29. ಬ್ಯಾಂಕಿಗೆ ಮರುಪಾವತಿ ಮಾಡಲು ಬಾಕಿ ಇರುವ ವಾಯಿದೆ ಮೀರಿದ ಸಾಲಕ್ಕೆ ಜೂನ್ 15 ರ ವರೆಗೆ ಸಮಯ ಕೊಡಬೇಕೆಂದು ಮುತ್ತುನಾಡು ಸಂಘದವರು ಬರೆಕೊಂಡ ಅರ್ಜಿಯನ್ನು ತಿರಸ್ಕರಿಸಲಾಯಿತು.

30. ಬ್ಯಾಂಕಿಗೆ ಮರುಪಾವತಿ ಮಾಡಲು ಬಾಕಿ ಇರುವ ವಾಯಿದೆ ಮೀರಿದ ಸಾಲಗಳಿಗೆ 4 ತಿಂಗಳ ಹೆಚ್ಚಿನ ಸಮಯವನ್ನು ಕೊಡಬೇಕೆಂದು ಕಡಗದಾಳು ಸೊಸೈಟಿಯವರು ಬರೆಕೊಂಡ ಅರ್ಜಿಯನ್ನು ತಿರಸ್ಕರಿಸಲಾಯಿತು.

31. ಮಿ. ಯಂ. ಎ. ಚೆಂಗಪ್ಪನವರು ಸರ್ಕಾರಿ ಉದ್ಯೋಗಸ್ಥರಾದ್ದರಿಂದ ಸೆಂಟ್ರಲ್ ಬ್ಯಾಂಕಿನ ಡೈರೆಕ್ಟರುತನದಲ್ಲಿ ಭಾಗವಹಿಸಲು ಹುಕುಂ ಕೊಡಲಾಗುವುದಿಲ್ಲವೆಂದು ಚೀಫ್ ಕಮಿಷನರವರ ನೋಟಿಫಿಕೇಶನ್ ಮೇರೆ ರಿಜಿಸ್ಟ್ರಾರವರಿಂದ [illegible]

ಹೊಗೆ ನುಂಗುವ ನಾಗಗೊಳವೆ.

ಗಿರಣಿ ಇಲ್ಲವೆ ಕಾರಖಾನೆಗಳ ಹೊಗೆಯು ನಾಗರಿಕರಿಗೆ ಅಪಾಯಕರವಾಗ ಬಾರದೆಂದು ಅವುಗಳ ಹೊಗೆಗೊಳವೆಗಳನ್ನು ಬಹಳ ಎತ್ತರವಾಗಿ ಕಟ್ಟಿರುತ್ತಾರೆ. ಆದರೂ ಅಷ್ಟು ಎತ್ತರದಲ್ಲಿ ಹೊರಬಿದ್ದ ಹೊಗೆಯಲ್ಲಿರುವ ಸೂಕ್ಷ್ಮ ವಸ್ತುಗಳು ಮರಗಳ ಮೇಲೆ ಮನೆಗಳ ಮೇಲೆ ಸೂಕ್ಷ್ಮವಾಗಿ ಬಿದ್ದು ಉಸಿರಾಟದ ಮೂಲಕ ನಾಗರಿಕರ ದೇಹವನ್ನು ಸೇರುವವು. ಇದರಿಂದ ಕಾರಖಾನೆಗಳಿದ್ದ ಊರಿನ ನಾಗರಿಕರ ಆರೋಗ್ಯವು ಅಷ್ಟು ಚೆನ್ನಾಗಿರುವದಿಲ್ಲ. ಆದ್ದರಿಂದ ಈಗ ಜರ್ಮನಿಯಲ್ಲಿ ಹೊಗೆಯನ್ನು ಒಳಗಿಂದೊಳಗೇ ನುಂಗುವ ಹೊಗೆಗೊಳವೆಗಳನ್ನು ಕಟ್ಟುತ್ತಿದ್ದಾರೆ. ಪ್ರತಿಯೊಂದು ಹೊಗೆಗೊಳವೆಯೂ ಸುಮಾರು 500 ಫೂಟು ಉದ್ದವಾಗಿರುತ್ತದೆ. ಹೊಗೆಯೆಲ್ಲ ಆ ಕೊಳವೆಯಲ್ಲಿಯೇ ಹೀರಲ್ಪಡುವದು.

—:0:—

ಸತ್ತ ಸೈನಿಕರು ದೇವರಾಗುವರು!

ಜಪಾನಿನಲ್ಲಿ ರಾಷ್ಟ್ರಾಭಿಮಾನವು ಒಂದು ಧರ್ಮವೇ ಆಗಿದೆ. ಜಪಾನಿಗಳು ಸ್ವಾತಂತ್ರ್ಯವನ್ನು ಮಿಕ್ಕೆಲ್ಲ ಸಂಪದಗಳಿಗಿಂತ ಹೆಚ್ಚೆಂದು ಭಾವಿಸಿದ್ದಾರೆ. ಆದುದರಿಂದಲೇ ಅಷ್ಟು ಚಿಕ್ಕ ದೇಶವು ನಿರ್ದಾಕ್ಷಿಣ್ಯವಾಗಿ ದೊಡ್ಡ ದೊಡ್ಡ ರಾಷ್ಟ್ರಗಳ ಮೋರೆಯ ಮೇಲೆ ಹೊಡೆಯುತ್ತಿದೆ. ಸ್ವದೇಶಕ್ಕಾಗಿ ಹೋರಾಡಿ ರಣರಂಗದಲ್ಲಿ ಮಡಿಯುವವರ ವಿಷಯಕ್ಕೆ ಜಪಾನಿಗಳಿಗೆ ತಮ್ಮ ಧರ್ಮಾಧಿಕಾರಿಗಳಿಗಿಂತ ಹೆಚ್ಚು ಗೌರವವೆನಿಸುತ್ತದೆ. ಯುದ್ಧದಲ್ಲಿ ಮಡಿದ ವೀರಯೋಧರು ದೇವತೆಗಳಾಗುವರೆಂಬ ಭಾವನೆ ಅವರಿಗಿದೆ. ಈ ಭಾವನೆಯಿಂದ ಪ್ರೇರಿತರಾಗಿಯೇ ಅನೇಕ ಯುವಕರು ಯುದ್ಧದಲ್ಲಿ ಸತ್ತು ದೇವತೆಗಳಾಗಲು ಹವಣಿಸುವರು.

'ಕುಂಡನ್' ಎಂಬ ಬೆಟ್ಟದ ಮೇಲೆ ಇಂತಹ ಸೈನಿಕ ದೇವತೆಗಳ ಒಂದು ಮಂದಿರವಿದೆ. ಅದಕ್ಕೆ 'ಶಾಂತಿ ಮಂದಿರ'ವೆಂದು ಹೆಸರು. ಅದರಲ್ಲಿ ಈ ವರೆಗೆ 1300967 ವೀರರು ದೇವತೆಗಳಾಗಿದ್ದಾರೆ. ಪ್ರತಿ ವರ್ಷವೂ ಒಂದು ವಿಶಿಷ್ಟ ದಿನ ಈ ದೈವೀಕರಣ ಸಮಾರಂಭವು ನಡೆಯುತ್ತದೆ. ಆಗ ಆ ವರ್ಷದ ಸ್ವಾತಂತ್ರ್ಯಕ್ಕಾಗಿ ಆತ್ಮಾರ್ಪಣೆ ಮಾಡಿದ ವೀರರ ಆತ್ಮಗಳನ್ನು ದೇವತೆಗಳನ್ನಾಗಿ ಮಾಡಿ ಈ ಮಂದಿರಕ್ಕೆ ಸೇರಿಸುತ್ತಾರೆ. ಈ ವರ್ಷ 1148 ವೀರ ಆತ್ಮಗಳು ದೇವತೆಗಳಾಗಿವೆ. ಪ್ರಧಾನ ಪೂಜಾರಿಗಳು, ಸೈನ್ಯದ ಪ್ರಮುಖ ಅಧಿಕಾರಿಗಳು, ಮೃತಾತ್ಮರ ಮನೆಯವರು ಇವರನ್ನುಳಿದು ಮಿಕ್ಕವರನ್ನು ಮಂದಿರದೊಳಗೆ ಬಿಡುವದಿಲ್ಲ. ನಾಗರಿಕರೆಲ್ಲ ಆ ದೈವೀಕರಣ ಸಮಾರಂಭದ ದಿನ ಭಕ್ತಿಯಿಂದ ಮಂದಿರ ಮೆಟ್ಟಲುಗಳ ವರೆಗೆ ಮೌನವಾಗಿ ನಡೆದು ಬಂದು ದೇವತೆಗಳನ್ನು ಪ್ರಾರ್ಥಿಸಿ ಶಿರಬಾಗಿ ಸಾವಕಾಶವಾಗಿ ಮೂರು ಸಲ ಚಪ್ಪಾಳೆ ತಟ್ಟಿ ದುಡ್ಡು ಕಾಣಿಕೆಗಳನ್ನು ಕೊಟ್ಟು ಹೋಗುವರು.

—:0:—

ವಿ ವಿ ಧ ವಿ ಚಾ ರ.

ಕಾಮನ ಬಿಲ್ಲಿನ ಸಿಗರೇಟ್!

ಅವರು ಬರಿ ಸಿಗರೇಟ್ ಸೇದಿ ಬಗೆಯುವವರಲ್ಲಿಯೆ [illegible]ವಲ್ಲ. ಅದರಿಂದ ಹೊರಡುವ ಹೊಗೆ, ಬಣ್ಣ ಬಣ್ಣದ್ದಾಗಬೇಕೆಂದು ಅವರ ಬಯಕೆ. ಆದನ್ನು ಕೈಗೂಡಿಸುವುದಕ್ಕಾಗಿ ಓ.ಡೊ. ಎಲ್. ಮಿಲ್ಲರ್ ಕಂಪೆನಿಯವರು ಒಂದು ಹೊಸ ಶೋಧವನ್ನು ಮಾಡಿದ್ದಾರೆ. ಬೇರೆ ಬೇರೆ ವಸ್ತುಗಳ ಸಂಸ್ಕಾರ ಮಾಡಬೇಕಾಗುತ್ತದೆ. ಸಿಗರೇಟಿಗೆ, ಸ್ತ್ರೀಯರು ತಮ್ಮ ವಸ್ತ್ರಾಭರಣಗಳ ಬಣ್ಣಕ್ಕೆ ಒಪ್ಪುವ ಹೊಗೆಯನ್ನು ಹೊರಡಿಸುವ ಸಿಗರೇಟನ್ನೇ ಸೇದುವರು. ಕಾಮನ ಬಿಲ್ಲಿನ ಬಣ್ಣದ ಹೊಗೆಯೂ ಹೊರಡುವ ವ್ಯವಸ್ಥೆ ಮಾಡಲಾಗಿದೆ. ಆದುದರಿಂದ ಸಿಗರೇಟ್ ಸೇದುವದರಿಂದಾಗುವ ಸುಖಕ್ಕಿಂತ ಆ ಹೊಗೆಯನ್ನು ನೋಡುವದರಿಂದಾಗುವದೆಂದು ಅನ್ನುತ್ತಾರೆ.

—:0:—

ಕುದುರೆಗಳಿಗೆ ಬುದ್ಧಿ ಕಲಿಸಿರುವರು.

ನಿಮ್ಮ ಕುದುರೆಗಳಿಗೆ ನೀವೇ ನೀರು ಕೊಡಬೇಕು. ಆದರೆ 'ಜರ್ಮನಿಯಲ್ಲಿ ಹಾಗಿಲ್ಲ. ಅವುಗಳು ತಮಗೆ ಬೇಕಾದ ನೀರನ್ನು ತಾವೇ ಯಂತ್ರಗೆ ಹೊಡೆದುಕೊಂಡು ಕುಡಿಯುವವು. ಈ ತೆರನ ಮಾದರಿಯು ಲೂಣಾವು ಜರ್ಮನಿ ದೇಶದ ಬರ್ಲಿನಿನ ಸ್ಟ್ರಾಲಿಟ್ ಎಂಬಲ್ಲಿದೆ. ಪ್ರತಿಯೊಂದು ಕುದುರೆಗೂ ಒಂದೊಂದು ನೀರಿನ ಬುಟ್ಟಿಗಳಿವೆ. ಹಾಗೆಯೇ ಕುದುರೆಯ ಕಾಲಬುಡದಲ್ಲಿ ಒಂದು ಕೀಲಿನಂತಹದು ಇದೆ. ಬಾಯಾರಿಕೆಯಾದೊಡನೆಯೇ ಕುದುರೆಯು ಆ ಕೀಲನ್ನು ತುಳಿಯುವುದು. ಆಗ ನಲ್ಲಿಯಿಂದ ನೀರು ಆ ಬುಟ್ಟಿಯೊಳಗೆ ಸುರಿಯುವದು. ಹಾಗೆಯೇ ಹುರುಳಿ ಕೊಡುವ ಯಂತ್ರವೂ ಇದ್ದರೆ...?

—:0:—

ಹಕ್ಕಿಗಳ ಎಚ್ಚರ.

ಫ್ರೀನ್ಸ್ ಒಬೆರ್‌ಹ್ಯೂಬರ್ ಎಂಬ ವಿಯೆನ್ನಾ ನಗರದ 75 ವರ್ಷ ಪ್ರಾಯದ ಅವಿವಾಹಿತನು ಸದಾ (ಗುಬ್ಬಿ) ಹಕ್ಕಿಗಳಿಗೆ ತಿಂಡಿಯನ್ನಿಟ್ಟು ಅವುಗಳನ್ನು ಸಲಹುತ್ತಿದ್ದ. ಹೀಗೆ ಈತನು ಸುಮಾರು 30 ವರ್ಷಗಳಿಂದ ತನ್ನ ಕೋಣೆಯ ಕಿಟಕಿಯ ಮೂಲಕ ಕಾಳುಗಳನ್ನು ಒಗೆದು ಹಕ್ಕಿಗಳಿಗೆ ಊಟವೊದಗಿಸುತ್ತಿದ್ದ. ಒಂದು ದಿನ ರಾತ್ರಿ ಆ ವೃದ್ಧನಿಗೆ ಜ್ವರ ಬಂದುದರಿಂದಾಗಿ ಆತನು ಮೂರ್ಛೆ ಬಿದ್ದನು. ಹಕ್ಕಿಗಳು ಎಂದಿನಂತೆ ಮುಂಜಾನೆ ಹೊತ್ತು ಬಂದಾಗ ವೃದ್ಧನ ಕೋಣೆಯ ಕಿಟಕಿ ಮುಚ್ಚಿತ್ತು. ಅವುಗಳು ಭಯಂಕರವಾಗಿ ಕಿರಿಚಿಕೊಳ್ಳಹತ್ತಿದುವು. ಇದರಿಂದ ನೆರೆಮನೆಯವನೊಬ್ಬನು ಫ್ರೀನ್ಸನ ಮನೆಗೆ ಬಂದು ಆತನ ಉಪಚಾರವನ್ನು ಮಾಡಿ ವೃದ್ಧನನ್ನು ಬದುಕಿಸಿದನು. ಮಾನವರಿಗೆಲ್ಲಿ ಬರಬೇಕು ಈ ಬುದ್ಧಿ?

—:0:—

ಕೃತಕ ಕಣ್ಣು.

ಬಹು ವರ್ಷಗಳ ಅವಿಶ್ರಾಂತ ಪರಿಶೋಧನೆಯ ಫಲವಾಗಿ ಡಾ. ಜೋಸೆಫ್ ದಬ್ರೂನ ಎಂಬವರು ಒಂದು ಶೋಧದಲ್ಲಿ ಕೃತಾರ್ಥರಾಗಿದ್ದಾರೆ. ಕುರುಡರೆಂಥವರಿಗೆ ಕಣ್ಣು ಕಾಣಬೇಕಾದಲ್ಲಿ, ಅಧಿಕ ರಕ್ತವು ಕಣ್ಣದಳದ ಹೊಂದ ನೋವಲೇ ಆಗಿದೆ. ಆದರೆ, ಇವರು ಆ ಕಣ್ಣದಕಗಳು ಬೇಡವೆನ್ನುತ್ತಿದ್ದಾರೆ. ಕಣ್ಣುಗಳಿಗೆ ರಕ್ತವಾದ ರಕ್ತನಾಳಗಳನ್ನು, ಕಣ್ಣಿನ ಗೊಂಬೆಯ ಮೇಲೆಯೇ ಕುಳ್ಳಿರಿಸಬಹುದೆಂದು ಇವರು ಕಂಡು ಹಿಡಿದಿದ್ದಾರೆ. ಕಣ್ಣಿನ ಗೊಂಬೆಯು ಅಷ್ಟನ್ನು ತೆಗೆದು, ಅಷ್ಟೇ ಗಾತ್ರದ ಗಾಜಿನ ತುಂಡನ್ನು ತಯಾರಿಸಿದರೆ ಸರಿ! ಈ ಗಾಜಿನ ತುಂಡಿನ ಬೆಲೆ 2 ಪವನುಗಳು ಮಾತ್ರ. ಇದನ್ನು ಇರಿಸಿಕೊಂಡರೆ, ದೃಷ್ಟಿಯ ಯೋಜನೆ ತಿಳಿಯಬರುವದಿಲ್ಲವಂತೆ!

—:0:—

ಹೆದರಿದವನನ್ನು ಪ್ರಾಣಿಗಳು ಗುರ್ತಿಸುತ್ತವೆ.

ಮನುಷ್ಯನಲ್ಲಿ ಹೆದರಿಕೆಯುಂಟಾದಾಗ ದೇಹದೊಳಗಿನ ರಕ್ತದ ರಭಸದಿಂದ ಚಲಿಸಿ ಹೊರಟ ಸ್ನಾಯುಗಳು, ಸಂಕುಚಿತವಾಗುತ್ತವೆ. ಈ ಸಮಯದಲ್ಲಿ ದೇಹದಿಂದ ಒಂದು ತರದ ವಾಸನೆಯುಂಟಾಗುತ್ತದೆ. ಸೂಕ್ಷ್ಮ ನಾಸೇಂದ್ರಿಯವು ಮೃಗಗಳಿಗಿರುವದರಿಂದ ನಮ್ಮ ದೇಹದೊಳಗಿನ ಆ ವಾಸನೆಯನ್ನು ತಿಳಿದು ನಾವು ಭಯಗೊಂಡಿರುತ್ತೇವೆಂದು ಅವು ನಿರ್ಧರಿಸುತ್ತವೆಯಂತೆ. ಆ ಮೇಲೆಯೇ ಅವುಗಳು ನಮ್ಮ ಮೈಮೇಲೆ ಬೀಳುತ್ತವೆ. ಒಂದು ಸಮಯದಲ್ಲಿ ನಾವು ಹೆದರಿಕೊಳ್ಳದಿದ್ದರೆ ಕ್ರೂರ ಮೃಗಗಳು ಪಲಾಯನ ಪ್ರಾರಂಭಿಸುವವಂತೆ. ಹುಲಿಯನ್ನು ನೋಡಿ ಭಯಗೊಳ್ಳದವರು ನಮ್ಮಲ್ಲಿ ಎಷ್ಟು ಮಂದಿಗಳಿದ್ದಾರೆ?

—:0:—

ಬಾಯಲ್ಲಿ ಹೇಳಲೊಲ್ಲನು.

ಟ್ರೆಂಟನ್ ನಗರದಲ್ಲಿ 15 ವರ್ಷದ ಹುಡುಗನೊಬ್ಬನಿಗೆ, ಬೇಟೆಯಾಡುವಾಗ ಗುಂಡು ತಗಲಿತ್ತು. ಗುಂಡು ಅವನ ತಲೆಯನ್ನು ಹೊಕ್ಕು ಮಿದುಳಿನ ಸಮೀಪದಲ್ಲಿರುವದರಿಂದ ಅದನ್ನು ಹೊರಕ್ಕೆ ತೆಗೆಯಲು ಡಾಕ್ಟರರಿಗೆ ಧೈರ್ಯವಾಗಲಿಲ್ಲ.

ಅದರ ಪರಿಣಾಮವಾಗಿ ಈಗ ಆ ಹುಡುಗನಿಗೆ ಯಾವುದರ ಹೆಸರುಗಳೂ ಗೊತ್ತಿರುವದಿಲ್ಲ. ಗೊತ್ತಿದ್ದರೆ ಹೇಳಲಿಕ್ಕೆ ಬರುವದಿಲ್ಲ. ಒಂದು ಕುರ್ಚಿಯನ್ನು ಅವನಿಗೆ ತೋರಿಸಿದರೆ ಅವನು ಅದು ಒಂದು ಕೂತುಕೊಳ್ಳುವ ವಸ್ತು ಎಂದು ಹೇಳುತ್ತಾನೆ. 'ಅದು ಕುರ್ಚಿ' ಎಂದು ಹೇಳ ಬರುವದಿಲ್ಲ. ನಾಮಪದಗಳನ್ನು ತಿಳಿಸುವ ಮಿದುಳು ಕೇಂದ್ರವು ಜಖಂ ಆಗಿರುತ್ತದೆಂದು ಡಾಕ್ಟರರು ಅಭಿಪ್ರಾಯಪಡುತ್ತಾರೆ. ಹುಡುಗನು ಬದುಕಿರುವನು.

—:0:—

ಹಲ್ಲು ನೋವಿನ ಚರಿತ್ರೆ.

ಹಲ್ಲು ನೋವು ನಿನ್ನೆ ಮೊನ್ನೆಯದಲ್ಲ. ಪೂರ್ವಕಾಲದಲ್ಲಿ ಕೂಡ ಹಲ್ಲು ಬೇನೆಯಿಂದ ಬಳಲುವವರು ಬಹುವಾಗಿದ್ದರು. ಆದುದರಿಂದ ಹಲ್ಲು ಬೇನೆಗಳು ಆಧುನಿಕ ನಾಗರಿಕತೆಯ ಕೃತ್ರಿಮ ಆಹಾರಗಳ ಪರಿಣಾಮವೆಂದು ಹೇಳಲಾಗದು. ಆದರೆ ಹಲ್ಲುಬೇನೆಗಳು ದಿನೇ ದಿನೇ ಬೆಳೆಯುತ್ತಿವೆಯೆಂಬುದೇನೂ ಸುಳ್ಳಲ್ಲ. ಈಗ ಒಂದು ಲಕ್ಷ ವರ್ಷಕ್ಕೆ ಹಿಂದೆ ಬರಿ ನೂರಕ್ಕೆ 5-20 ಜನರಲ್ಲಿ ಮಾತ್ರ ಹಲ್ಲು ಬೇನೆಯಿರುತ್ತಿತ್ತು. ಇಪ್ಪತ್ತು ಸಾವಿರ ವರ್ಷಗಳ ಹಿಂದೆ ನೂರಕ್ಕೆ 20ರಿಂದ 45ರ ವರೆಗೆ ಹಲ್ಲು ಬೇನೆಗಿದ್ದರು. ಐದಾರು ಸಾವಿರ ವರ್ಷಗಳ ಹಿಂದಿನ ಆರ್ಯರಲ್ಲಿ 75 ರಿಂದ 90ರ ವರೆಗೆ ಹಲ್ಲಿನ ರೋಗಿಗಳಿದ್ದರು. ಇದೆಲ್ಲ ನಾಗರಿಕತೆಯ ಪರಿಣಾಮವೆನ್ನುವದಕ್ಕಿಂತ ಮನುಷ್ಯನು ಬಯಲುಗಾಳಿಯನ್ನು ಬಿಟ್ಟು ಮನೆಗೂಳಿಯಾದುದರ ಪರಿಣಾಮವೆನ್ನುವದೇ ಒಳಿತು. ಈ ಲಕ್ಷಾವಧಿ ವರ್ಷಗಳಿಂದ ಬೆನ್ನಟ್ಟಿರುವ ಹಲ್ಲು ಬೇನೆಯಿಂದ ನಾವು ಮುಕ್ತರಾಗಬೇಕಾದರೆ ನಮ್ಮ ಆಹಾರದಲ್ಲಿ ವಿಟಮಿನ್ನುಗಳು, ಖನಿಜಕ್ಷಾರಗಳು ಯೋಗ್ಯ ಪರಿಮಾಣದಲ್ಲಿ ಇರುವದರ ಕಡೆಗೆ ಗಮನವೀಯಬೇಕು.

—:0:—

ಬೇನೆಗಳನ್ನು ಗುಣಪಡಿಸಲು ಪುಸ್ತಕಗಳು!

ಅಲ್ಬಾನಿಯದಲ್ಲಿ ಒಂದು ಆಸ್ಪತ್ರೆ. ಅದರಲ್ಲಿ ಅದ್ಭುತ ಯೋಗಕಾರಕವಾದ ಭಾಗವೆಂದರೆ ವಾಚನಾಲಯದ ಭಾಗ. ಅದರ ಕಾರ್ಯದರ್ಶಿಯಾದ ಮಿಸೆಸ್ ಸಾಡಿಸ್‌ಟಿರೆನ್ಸನ್ನಳೇ ಆ ವಾಚನಾಲಯಕ್ಕೆ ಯಶಸ್ಸು ತಂದವಳು. ಆವಳು ಮನೋವಿಜ್ಞಾನಿಯೂ ಆಗಿದ್ದಾಳೆ. ಬಹುತರವಾಗಿ ಶಾರೀರಿಕ ರೋಗಗಳಲ್ಲೆಲ್ಲ ಮನಸ್ಸಿಗೆ ಸಂಬಂಧಿಸಿದ ಅಂಶಗಳೂ ಇರುತ್ತವೆ. ಆ ಅಂಶಗಳನ್ನು ಕಂಡು ಹಿಡಿದು ರೋಗಿಗಳಿಗೆ ಯೋಗ್ಯವಾದ ಪುಸ್ತಕಗಳನ್ನು ಒದಗಿಸಿದರೆ ಅವರು ಉಲ್ಲಾಸಿತರಾಗಿರುವರು. ಆ ಉಲ್ಲಾಸವು ಅವರನ್ನು ಬೇಗ ಗುಣಮುಖರನ್ನಾಗಿ ಮಾಡುವದು. ಆದುದರಿಂದ ವಾಚನಾಲಯದ ಕಾರ್ಯದರ್ಶಿಯು ರೋಗಿಗಳ ಚರಿತ್ರೆಯನ್ನು ತಿಳಿದುಕೊಂಡು ಆಯಾ ರೋಗಿಗೆ ಯೋಗ್ಯವಾಗುವಂತಹ ಪುಸ್ತಕವನ್ನು ಒದಗಿಸುವಳು. ಉದಾ: ಥೈರಾಯಿಡ್ ಗ್ರಂಥಿಯ ಮಾಂದ್ಯದಿಂದ ಬೇನೆ ಬಂದಿದ್ದರೆ ಆ ಗ್ರಂಥಿಯನ್ನು ಉತ್ತೇಜಿಸುವ ವಿಷಯಗಳುಳ್ಳ ಪುಸ್ತಕವನ್ನು ರೋಗಿಗೆ ಕೊಡುವಳು.

ಈ ವಿಧದ ವ್ಯವಸ್ಥೆಯಿಂದ ಅನೇಕ ರೋಗಿಗಳು ಅಲ್ಲಿಂದ ಬಹು ಬೇಗ ರೋಗಮುಕ್ತರಾಗಿ ಬರುತ್ತಿದ್ದಾರೆ. ವಿಶೇಷವಾಗಿ ಮನೋವ್ಯಥೆಯಿಂದ ಬೇನೆಬಿದ್ದವರಿಗೆ ಈ ಪುಸ್ತಕಗಳ ಚಿಕಿತ್ಸೆಯು ಬಹಳ ಉಪಯುಕ್ತವಾಗುತ್ತಿದೆ.

—:0:—

ಪ್ರಕಟಣೆ.

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್, ಲಿಮಿಟೆಡ್, ಮಡಿಕೇರಿ.
(ಕೋ-ಆಪರೇಟಿವ್ ಸೊಸೈಟೀಸ್ ಆಕ್ಟು ಪ್ರಕಾರ ರಿಜಿಸ್ಟರಾಗಿದೆ.)
(ಸ್ಥಾಪಿತವಾದದ್ದು 1921ರಲ್ಲಿ)

		ರೂ.	ಆ.	ಪೈ.
ಶೇರ್ ಬಂಡವಾಳ	–	50,000	0	0
ವಸೂಲಾದ ಶೇರ್ ಮೊಬಲಗು	–	44,690	0	0
[illegible]		2,81,579	15	1
ವಸೂಲಾದ ಕ್ಷೇಮನಿಧಿ	–	1,31,704	12	0
ಸೇವಿಂಗ್ಸ್ ಬ್ಯಾಂಕ್ ಡಿಪಾಜಿಟ್ಟು	–	32,211	3	5
ಫಿಕ್ಸ್ ಡಿಪಾಜಿಟು	–	38,085	15	9

ಈ ಬ್ಯಾಂಕಿನಿಂದ ಕೊಡಗು ದೇಶದ ಸಹಕಾರಿ ಸಂಘಗಳಿಗೇನೇ ಹೆಚ್ಚಾಗಿ ಸಾಲ ಕೊಡುತ್ತಿದ್ದು.

ಒಂದು ಮತ್ತು ಎರಡು ವರ್ಷಗಳ ಅವಧಿಯ ಠೇವಣಾತಿಗಳಿಗೆ ಕೇಳಿದ ಬಡ್ಡಿಯನ್ನು 3½ ದರದಲ್ಲಿಯೂ, ಮೂರು ಅಥವ ಹೆಚ್ಚಿನ ಅವಧಿಯ ಠೇವಣಾತಿಗಳಿಗೆ ಕೇಳಿದ ಬಡ್ಡಿಯನ್ನು 4ದರದಲ್ಲಿಯೂ ತಾ. 1-9-1937ರಿಂದ ಬಡ್ಡಿ ಕೊಡಲಾಗುತ್ತೆ.

ತಾ. 1-10-1936ರಿಂದ ಬ್ಯಾಂಕಿನಲ್ಲಿ ಕರೆಂಟ್ ಸೇವಿಂಗ್ಸ್ ಬ್ಯಾಂಕ್ ಲೆಕ್ಕವೂ ಮತ್ತು ಫಿಕ್ಸ್ಡ್ ಡಿಪಾಜಿಟ್ ಲೆಕ್ಕವೂ ತೆರೆಯಲ್ಪಟ್ಟಿವೆ. ಇದರ ವಿಷಯ ಹೆಚ್ಚಿನ ವಿವರಗಳಿಗೆ ಬ್ಯಾಂಕು ಆಫೀಸಿಗೆ ಬರೆದುಕೊಂಡಲ್ಲಿ ವಿವರವಾಗಿ ಬರೆದು ತಿಳಿಸಲಾಗುವುದು.

ವರ್ಷಕ್ಕೊಂದಾವರ್ತಿ ಕೋ-ಆಪರೇಟಿವ್ ರಿಜಿಸ್ಟ್ರಾರವರು ಲೆಕ್ಕ ಆಡಿಟು ಮಾಡುತ್ತಾರೆ.

ಪ್ರೆಸಿಡೆಂಟ್:—ಕಂಡ್ಯಂಡ ಎ. ಚೆಂಗಪ್ಪನವರು ಎಂ. ಎಲ್. ಸಿ.
ಟ್ರೆಜರರ್:—ಮಾಚಿಮಾಡ ಎ. ಚಂಗಪ್ಪನವರು ಬಿ. ಎ., ಎಲ್. ಟಿ.
ಸೆಕ್ರೆಟರಿ:—ಪುಲಿಯಂಡ ಜಿ. ಐಯ್ಯಪ್ಪನವರು ಬಿ. ಎ., ಬಿ. ಎಲ್.

ದಿ ಎಗ್ರಿಕಲ್ಚರಲ್ ಎಂಡ್ ಇಂಡಸ್ಟ್ರಿಯಲ್ ಬ್ಯಾಂಕ್ ಲಿಮಿಟೆಡ್.

(ಬ್ರಿಟಿಷ್ ಹಿಂದುಸ್ಥಾನದಲ್ಲಿ ಸ್ಥಾಪಿತವಾದದ್ದು)

ಹೆಡ್ ಆಫೀಸು:—"ಲಕ್ಷ್ಮೀನಿವಾಸ" ಬಿಲ್ಡಿಂಗ್ಸ್, ಕುಂದಾಪುರ, ದ. ಕ.

ಪ್ರಕಟಣೆ.

ಕಷ್ಟದಲ್ಲಿ ಸಂಪಾದಿಸಿದ ಹಣವನ್ನು ಠೇವಣಾತಿ ಇಟ್ಟು ಈ ಚಿನ್ನದಂತ ಸುಸಂದರ್ಭವನ್ನು ಉಪಯೋಗಿಸಿಕೊಳ್ಳಿರಿ.

ಅತ್ಯಧಿಕ ಲಾಭ! **ಅಪೇಕ್ಷಿಸಿದಾಗ ಹಣ ಹಿಂದಕ್ಕೆ!**

ದಿ ಎಗ್ರಿಕಲ್ಚರಲ್ ಎಂಡ್ ಇಂಡಸ್ಟ್ರಿಯಲ್ ಬ್ಯಾಂಕಿನ

ಕೇವಲ ಐದು 5 ವರ್ಷಗಳ "ಕೊರೊನೇಶನ್ ಕ್ಯಾಶ್ ಸರ್ಟಿಫಿಕೇಟುಗಳು" ರೂಪಾಯಿ 8, 20, 40, 80; 200, 400 ಮತ್ತು 800 ಗಳ ಸಾಮಾನ್ಯ ಠೇವಣಾತಿಗಳಿಗೆ ನಿಶ್ಚಯಿಸಲಾದ ರೂ. 10, 25, 50, 100, 250, 500 ಮತ್ತು 1000 ಗಳು.

ದಯಮಾಡಿ ಕೆಳಗಿನ ಶಾಖೆಗಳನ್ನು ಗಮನಿಸಿರಿ. ಹೆಚ್ಚಿನ ಮಾಹಿತಿಯನ್ನು ನಮ್ಮ ಯಾವುದಾದರೊಂದು, ಕುಂದಾಪುರ, ಕುಮಟಾ, ಗೋಕರ್ಣ, ಬೈಂದೂರು, ವೀರರಾಜೇಂದ್ರಪೇಟೆ, ಸೋಮವಾರಪೇಟೆ, ಕೊಟೇಶ್ವರ, ಶಿವಮೊಗ್ಗಾ, ಹರೀಹರ ಮತ್ತು ಕಾರೂರು ಶಾಖೆಗಳಿಂದ ತಿಳಿದುಕೊಳ್ಳಬಹುದು.

52-2

The Agricultural &
Industrial Bank Ltd

ಝಂಡೂ ಕಂಪನಿಯವರ	"ZANDU" ಝಂಡೂಕಂಪನಿಯವರ
ದ್ರಾಕ್ಷಾಸವ ಮತ್ತು **ಚ್ಯವನಪ್ರಾಶ** ಇದು ಶಕ್ತಿವರ್ಧಕ ಮತ್ತು ಶ್ವಾಸಕೋಶಗಳ ಕಾಯಿಲೆಗಳಿಗೆ ಅತ್ಯುತ್ತಮವಾದವು. ಕ್ಷಯದ ಪ್ರಾರಂಭದಲ್ಲಿ ದಿವ್ಯವಾದ ಔಷಧ.	**ಕೇಸರಿ ಜೀವನ್** ಇದು ಎಲ್ಲಾ ತರದ ಅಶಕ್ತತೆಗೆ ದಿವ್ಯವಾದ ಔಷಧ. **ಝಂಡೂ ಅಯೋಡೈಸ್ಡ್ ಸೇರಸಪರಿಲ್ಲಾ** ಇದು ರಕ್ತದೋಷ ಮತ್ತು [illegible] ಸಂಬಂಧದ ರೋಗ ವಿಕಾರಗಳಲ್ಲಿ ದಿವ್ಯ ಔಷಧ.

ಝಂಡೂ ಪ್ಲೋಜಿಸ್ಟೀನ್.

ಇದು ನ್ಯುಮೋನಿಯಾ, ಶೋಥ, ಏಟಿನಿಂದ ಉಂಟಾದ ಗಾಯ, ವಿದ್ರಧಿ (Boils) ಗಳಲ್ಲಿ ಅತ್ಯುಪಯುಕ್ತವಾದದ್ದು

[illegible]

ಮಡಿಕೇರಿ ಸ್ಟೋಕಿಸ್ಟ್—
ಡಾ. ಬಿ. ಕೆ. ನಂಜುಂಡೇಶ್ವರ, ಎಲ್. ಎ. ಎಂ. ಎಸ್
(52-14) ಮತ್ತು ಆಯುರ್ವೇದ ವಿದ್ವಾನ್

ವೀರಾಜಪೇಟೆಯ ಏಜೆಂಟರು–ಕೆ. ಕೃಷ್ಣರಾವ್, ವೀರಾಜಪೇಟೆ. (ದ. ಕೊಡಗು.)

'ಕೊಡಗು' ಪತ್ರಿಕೆಗೆ ಚಂದಾದಾರರಾಗಿರಿ!

ಪೈಲ್ ಸಾಲ್

(OINTMENT FOR EXTERNAL USE)

PILESOL:- ಮೂಲ ವ್ಯಾಧಿಗೆ (ಹೊರಗೂ ಒಳಗೂ) ದಿವ್ಯೌಷಧಿ.

ಆಪರೇಷನ್ ಇಲ್ಲದೆ ಗುಣವಾಗುತ್ತೆ. ಬ್ರಿಟಿಷ್ ಗವರ್ನಮೆಂಟಿನವರಿಂದ ಇಂಡಿಯಾದಲ್ಲಿಯೂ, ಪರದೇಶದಲ್ಲಿಯೂ ರಿಜಿಸ್ಟರ್ ಮಾಡಲ್ಪಟ್ಟಿದೆ.

ರಕ್ತ ಶೀವು ಬಿದ್ದರೂ ಅತಿ ಶೀಘ್ರವಾಗಿ ಗುಣವಾಗುತ್ತದೆ.

ಪೈಲ್‌ಸಾಲ್ ತಣ್ಣಗಿರುತ್ತದೆ. ಜಾರಿದ ನರಗಳು ಯಥಾಸ್ಥಾನಕ್ಕೆ ಬರುತ್ತವೆ. ಪ್ರಖ್ಯಾತಿ ಹೊಂದಿದ ಅನೇಕ ಡಾಕ್ಟರುಗಳಿಂದ ಒಳ್ಳೆಯ ಹೆಸರು ಪಡೆದಿದೆ. ಈ ವ್ಯಾಧಿಯಿಂದ ಮಲವಿಸರ್ಜನೆಯು ಅಕ್ರಮವಾಗುವುದನ್ನು ಪೈಲ್‌ಸಾಲ್ ಗುಣಪಡಿಸುತ್ತದೆ.

ಯೋಗ್ಯತಾಪತ್ರಗಳು ನಾನಾ ದೇಶಗಳಿಂದ ನಮಗೆ ಬಂದಿರುತ್ತವೆ.

ಈಗಿನ ಒಂದು ಸರ್ಟಿಫಿಕೇಟು.

ಸಾಪೋಕ್ಲು,

ಅಯ್ಯಾ,

ನಿಮ್ಮ ಪೈಲ್‌ಸಾಲ್ ನನ್ನೊಬ್ಬ ರೋಗಿಗೆ ತುಂಬಾ ಸಹಾಯಮಾಡಿದೆ, ಆದ್ದರಿಂದ ದಯವಿಟ್ಟು ಪುನಃ ಮತ್ತೊಂದು ಸೀಸೆಯನ್ನು ವಿ. ಪಿ. ಮೂಲಕ ಕಳುಹಿಸಿಕೊಡಿ. ಮತ್ತೊಬ್ಬನಿಗೆ ಇದರ ಪ್ರಯೋಗವನ್ನು ಮಾಡಬೇಕಾಗಿದೆ.

(Sd) ಎಸ್. ಯಂ. ದೇವಯ್ಯ,
ಸಬ್-ಅಸಿಸ್ಟಾಂಟ್ ಸರ್ಜನ್,
18 ಸಾಪೋಕ್ಲು, ಕೊಡಗು.

ಉಪಯೋಗಿಸುವ ವಿಧಾನ ಔಷಧದ ಜೊತೆಯಲ್ಲಿ ಕಳುಹಿಸಲಾಗುತ್ತೆ.

ಕ್ರಯ:—1 ಔನ್ಸಿಗೆ ರೂ. 5-0-0. ½ ಔನ್ಸಿಗೆ ರೂ. 2-12-0. ಪೋಸ್ಟೇಜು ಪ್ರತ್ಯೇಕ ಮಾದರಿ ಸೀಸೆಗೆ ರೂ. 1-0-0. ಮನಿಯಾರ್ಡರ್ ಮೂಲಕವಾಗಲೀ ಪೋಸ್ಟಲ್ ಆರ್ಡರ್ ಮೂಲಕವಾಗಲೀ ಹಣಕಳುಹಿಸಬಹುದು.

ದೇಶಾದವರು ಈ ವಿಳಾಸಕ್ಕೆ ಬರೆದು ತರಿಸಿಕೊಳ್ಳಬಹುದು.

ಪ್ಯಾರಾಲ್ ಲೇಬೋರೇಟರಿ (ರಿಜಿಸ್ಟರ್ಡ್), ಬೆಂಗಳೂರು ಸಿಟಿ.

Reg No. M. 1596

ಕೊಡಗು

ಪ್ರತಿಶುಕ್ರವಾರ ಪ್ರಕಟಿಸಲ್ಪಡುವುದು.

ಸಂಪಾದಕ:— ಡಿ. ಐ. ಬೆಳ್ಯಪ್ಪ.

ವಾರ್ಷಿಕ ಚಂದಾ ರೂ. ೩-೮-೦

ತಾ. ೧೦—೬—೧೯೩೮.

ಸಂಪುಟ ೧೮] [ಸಂಚಿ

ನಿಮ್ಮ
ಲಗ್ನ ಪತ್ರಿಕೆಗಳನ
" ಕೊಡಗು "
ಪ್ರೆಸ್ಸಿನಲ್ಲೇ
ಮುದ್ರಿಸಿರಿ.

Travancore National & Quilon Bank, Ltd.

(INCORPORATED IN TRAVANCORE—1912.)
(Liability of Members limited.)

Central Office: MADRAS.

With a country wide net work of seventy eight offices make service promt and efficient.

Working Capital over FOUR CRORES.

Open a HOME SAVING account and resolve to save something and invest a lot every year in 3 YEAR 4% CASH CERTIFICATES

SAVINGS BANK:—accounts opened for sums above Rs. 5 - and interest allowed on daily balances Withdrawls by cheques-Maximum amount withdrawable per week Rs. 250

FIXED DEPOSITS:—accepted for periods from 6 to 24 months at rates which may be ascertained on application.

CURRENT ACCOUNTS:—opened for sums above Rs. 100 and int rest allowed on daily credit balances from Rs. 100,- to Rs. 20,000 -

All other kinds of Banking business transacted.

For terms please apply to the Central Office or to any of the branches.

K. S. Ramanujam, *General Manager.*
52-36
K. M Eapen, *Joint Managing Director.*
C P. Mathen, *Managing Director.*

THE CANARA BANKING CORPORATION, UDIPI, Ltd.

(Incorporated in British India.)
Estd. 1906.

ABSTRACT BALANCE SHEET AS AT 30TH APRIL, 1938.

CAPITAL & LIABILITIES.	Rs.	A.	P.	PROPERTY & ASSETS.	Rs.	A.	P.
Paid up Capital	2,97,015	0	0	Property, Premises & furniture	3,64,887	1	5
Reserves	3,83,903	6	8	Government & other securities	17,68,998	12	2
Deposits	40,18,102	5	3	Advances	34,83,850	7	6
Due to Bankers	11,38,795	13	11	Bills for collection	1,30,705	6	8
Bills for collection as per contract	1,30,705	6	8	Cash on hand & with Bankers at call	3,61,659	6	9
Sundries	2,09,229	9	8	Sundry Assets	17,680	7	8
	61,77,781	10	2		61,77,781	10	2

Udipi,
14th May 1938.

52-27

V. R. Kamath, B. A., LL. B.,
Ag. Manager.

ಸದ್ವೈದ್ಯ ಶಾಲಾ, ನಂಜನಗೂಡು.

ದಕ್ಷಿಣ ಭಾರತದ

ಪ್ರಸಿದ್ಧ ಆಯುರ್ವೇದೀಯೌಷಧಗಳ ದವಾಖಾನೆ.

ಜೀವರತ್ನಗಳು.

ಶ್ರೀಕರ ಕಸ್ತೂರಿ ಮಾತ್ರೆ.

ಅನೇಕ ಸಮಾನಸಿಯುಳ್ಳ ಈ ಮಾತ್ರೆಗಳು ಪಿತ್ತ್ಯರೋಗ, ಕಾಮಾದುತ್ತರಕ್ಕೂ, ಮಕ್ಕಳ ಕೆಮ್ಮು, ನೆಗಡಿ, ಜ್ವರ, ಪಕ್ಕೆಶೂಲೆಗಳಿಗೂ ಅಮೃತ. ಬೆಲೆ 0 10. 0 2 0

ಶ್ರೀಕರ ಬಾಲಸಂಜೀವಿನಿ

ಮಕ್ಕಳ ಸುಖಭೇದಿ, ಅಜೀರ್ಣ, ವಾಯು, ಜ್ವರಗಳಿಗೆ. ಬೆಲೆ 0 4 0

ನಮ್ಮ ರಿಜಿಸ್ಟರ್ಡ್

ನಂಜನಗೂಡು ಟೂತ್ ಪೌಡರನ್ನು

ಉಪಯೋಗಿಸಿರಿ. ಅನುಕರಣಗಳಿಗೆ ಮೋಸಹೋಗಬೇಡಿರಿ.

ಜ್ವರಕೇಸರಿ

ಎಲ್ಲಾ ವಿಧವಾದ ಜ್ವರಗಳನ್ನು ಜಾಗ್ರತೆ ಗುಣಮಾಡುವಂಥ ಶಕ್ತಿಯುಳ್ಳ ಮಾತ್ರೆ. ಬೆಲೆ 0-8-0. 0-4-0.

ಸುಕುಮಾರತೈಲ

ಪಿಸಿಲು ಹೆಚ್ಚಿದ ಮಾಗಿಲ್ಲಾ ಉಂಟಾಗುವ ತಲೆ ನೋವು, ಬತ್ತಳಿ ನೋವು, ತಲೆ ಶಾಕ ಮುಂತಾದ ಸಮಸ್ತ ನೇತ್ರ, ಶಿರೋವ್ಯಾಧಿಗಳಿಗೂ ಸಂಜೀವನ. ಬೆಲೆ 1 0 0

ಪ್ರೊಪ್ರೈಟರ್-ಭಿಷಗ್ರತ್ನ ಆಯುರ್ವೇದ ವಿದ್ವಾನ್, ಬಿ ವಿ ಪಂಡಿತ್.

ಉತ್ತಮ ಪ್ರಚಾರ! ಜ್ಞಾನಭಂಡಾರ!!

ವ್ಯಾಪಾರಸ್ಥರೇ

ನಿಮ್ಮ ಸಾಲುಗಳಿಗೆ ಗಿರಾಕಿ ಬೇಕೇ?

ಹಾಗಾದರೆ

ಕೊಡಗು ಜಿಲ್ಲೆಯ ಪ್ರತಿ ಹಳ್ಳಿಗಳಲ್ಲಿಯೂ ಮತ್ತು ಕರ್ನಾಟಕದ ಪ್ರಾಂತ್ಯಗಳಲ್ಲಿಯೂ ಪ್ರಚಾರವಿರುವ

"ಕೊಡಗು"

ವಾರ ಪತ್ರಿಕೆಯಲ್ಲಿ ಜಾಹೀರಾತುಗಳನ್ನು ಕೊಟ್ಟು ಪ್ರಯೋಜನ ಪಡೆಯಿರಿ.

ಜಾಹಿರಾತಿನ ದರಗಳು.

ಕಾಲ.	1 ಪುಟಕ್ಕೆ.	1 ಕಲಮಿಗೆ.	½ ಕಲಮಿಗೆ.	¼ ಕಲಮಿಗೆ
1 ವರ್ಷಕ್ಕೆ—	ರೂ. 180.	ರೂ. 55.	ರೂ. 35.	ರೂ. 22
6 ತಿಂಗಳಿಗೆ—	,, 100.	,, 35.	,, 22.	,, 13
3 ತಿಂಗಳಿಗೆ—	,, 60.	,, 20.	,, 13.	,, 8
1 ತಿಂಗಳಿಗೆ—	,, 25.	,, 10.	,, 6.	,, 4.

ನಿರ್ಭಯವಾದ ಟೀಕೆ ಟಿಪ್ಪಣಿಗಳು—ಉದಾತ್ತವಾದ ಲೇಖನಗಳು—ವಿವಿಧ ಸಮಾಚಾರ ಸಂಗ್ರಹಗಳು ಇರುವ

'ಕೊಡಗು' ವಾರ ಪತ್ರಿಕೆಗೆ

ನೀವೇಕೆ ಚಂದಾದಾರರಾಗಬಾರದು?

ನಿಮ್ಮ ಕರ್ತವ್ಯ.

ಪ್ರತಿಯೊಬ್ಬ ಮನುಷ್ಯನು ವಿವಾಹಿತನಿರಲಿ, ಅವಿವಾಹಿತನಿರಲಿ, ಧನವಂತನಿರಲಿ, ಧನಹೀನನಿರಲಿ, ಆತನ ರಕ್ಷಣೆಗೊಳಪಟ್ಟ ಕೆಲವರಿದ್ದೇ ಇರುವರು. ಆತನ ಮರಣಾನಂತರವೂ ಅಂಥವರು ಸುಖಿಗಳಾಗಿರುವಂತೆ ದಾರಿ ತೋರಿಸಿ ಕೊಡುವುದು ಅವನ ಆದ್ಯ ಕರ್ತವ್ಯ.

ಇಂಥಾ ನಿಮ್ಮ ಕರ್ತವ್ಯ ಸಾಧನೆಗೆ "ಓರಿಯಂಟಲ್" ಉಪಕಾರಿ.

(ಓರಿಯಂಟಲ್ ಬಿಲ್ಡಿಂಗ್ಸ್, ಸೌತ್ ಪೆರೇಡ್ ಬೆಂಗಳೂರು)

61 ವರ್ಷಗಳಿಂದಲೂ "ಓರಿಯಂಟಲ್ ಪೋಲಿಸಿಗಳು" ಸಾವಿರಾರು ಅನಾಥ ಕುಟುಂಬಗಳನ್ನು ಅತ್ಯಗತ್ಯವಾಗಿ ಉದ್ಧರಿಸಿವೆ.

ಕ್ರಮೇಣ ಪ್ರತಿಯೊಬ್ಬನೂ ವಿಮಾ ಮಾಡಲಶಕ್ತನಾಗಬಹುದಾದ್ದರಿಂದ ನಿಮ್ಮ ಕರ್ತವ್ಯವನ್ನು ಮಾಡಲು ತಪ್ಪಬೇಡಿರಿ.

"ಓರಿಯಂಟಲ್"ನಲ್ಲಿ ವಿಮಾ ಮಾಡಿ, ನಿಮ್ಮ ರಕ್ಷಣೆಯಲ್ಲಿರುವವರ ಜೀವನವನ್ನು ಭದ್ರಪಡಿಸಿರಿ.

ಹೆಚ್ಚಿನ ಮಾಹಿತಿಗೆ ಕೆಳಗಿನ ಅಡ್ರೆಸ್ಸಿಗೆ ಬರೆಯಿರಿ—

ಓರಿಯಂಟಲ್

ಸರಕಾರದ ಭದ್ರತೆಯುಳ್ಳ ಜೀವ ವಿಮಾ ಕಂಪನಿ.

ಸ್ಥಾಪಿತವಾದದ್ದು 1874.] ಹೆಡ್ ಆಫೀಸು—ಬೊಂಬಾಯಿ.

ಪ್ರತಿನಿಧಿಗಳೂ, ಶಾಖೆಗಳೂ ಇಂಡಿಯಾದಲ್ಲೆಲ್ಲಾ ಇರುವರು.

ಮೆ. ಎಂ. ಹೆಚ್. ಕೃಷ್ಣಮೂರ್ತಿ,
(ಇನ್ಸ್‌ಪೆಕ್ಟರ್, ಮೈಸೂರು.)

ಮೆ. ಎಲ್. ಎಫ್. ಸಿ. ವಾಸ್,
(ಇನ್ಸ್‌ಪೆಕ್ಟರ್, ಮಡಿಕೇರಿ)

52-22

ಮೆ. ಡಿ. ಶೇಷಾದ್ರಿ, ಆ. ಇನ್ಸ್‌ಪೆಕ್ಟರು, ಶಿವಮೊಗ್ಗಾ.

Printed & Published by P. I. Belliappa, at 'Kodagu' Press Mercara for 'Kodagu' Ltd.

ಇಂಡಿಯೊದ ಪ್ರಮುಖ ಟಾನಿಕ್

ಆತಂಕನಿಗ್ರಹ

— ಮಾತ್ರೆಗಳು —

ಮಲಬದ್ಧತೆ, ಮನೋದೌರ್ಬಲ್ಯ, ನರಗಳ ಹೀನತೆ ಇವನ್ನು ಗುಣಪಡಿಸಿ, ಆರೋಗ್ಯಕಾರಿಯಾದ ಹಸಿವು ಹುಟ್ಟಿಸಿ ರಕ್ತಶುದ್ಧಿ ಮಾಡುತ್ತದೆ.

ಈ ಮಾತ್ರೆಗಳು ಉತ್ತಮ ಬಲವರ್ಧಕವಾಗಿರುತ್ತವೆ. ಲಕ್ಷಾಂತರ ಜನರಿದನ್ನು ಉಪಯೋಗಿಸುತ್ತಿರುವರು. ಒಂದು ಡಬ್ಬಿ ಉಪಯೋಗಿಸಿ ನೋಡಿ. ಮೂವತ್ತೆರಡು ಮಾತ್ರೆಗಳ ಡಬ್ಬಿ ಒಂದಕ್ಕೆ ಒಂದು ರೂಪಾಯಿ ಮಾತ್ರ.

ಹೆಚ್ಚಿನ ವಿವರಕ್ಕೆ ಧರ್ಮಾರ್ಥ ಹಾಗೂ ಟಪ್ಪಾಲು ಹಾಸಲು ವಿನಹ ಕಳುಹಿಸಲ್ಪಡುವ ನಮ್ಮ

ಕಾಮಶಾಸ್ತ್ರವನ್ನೋದಿರಿ.

ಆತಂಕ ನಿಗ್ರಹ ಫಾರ್ಮಸಿ, ಚಿಕ್ಕಪೇಟೆ ಚೌಕ,

52–51 ಬೆಂಗಳೂರು ಸಿಟಿ.

೪೨ ವರ್ಷಗಳಿಂದ ಅನುಭವಪಟ್ಟು ಪ್ರಖ್ಯಾತಿ ಹೊಂದಿದ

ಕರ್ಕೆಕಂಪನಿ

ಸುಪ್ರಸಿದ್ಧ ಜ್ವರದ ಗುಳಿಗೆ

ಇದು ಛಳಿಜ್ವರ, ಚಾತುರ್ಥಿ ಜ್ವರ, ದಿನಬಿಟ್ಟು ದಿನ ಬರುವ ಜ್ವರ, ಮಲೇರಿಯಾ ಜ್ವರ ಇತ್ಯಾದಿ ನಾನಾತರದ ಜ್ವರಗಳ ಮೇಲೆ ತತ್ಕ್ಷಣವೇ ಗುಣ ಸಂಜೀವಿನಿಯಂತಿವೆ! ಬಾಟ್ಲಿಗೆ 1 ರೂ. 4 ಬಾಟ್ಲಿಗೆ 3 ರೂ. 12 ಬಾಟ್ಲಿಗೆ 8 ರೂ. ವಿ. ಪಿ. ಖರ್ಚು ಬೇರೆ.

ಗಣೇಶ ರಾಮಚಂದ್ರ ಕರ್ಕೆ.

ಮತ್ತು ಕಂಪೆನಿ,

(52–27) ಗಿರಗಾಂವ, ಮುಂಬಯಿ ೪,

ನೋಟೀಸು.

ಈ ಕೆಳಗಿನ ಮಹಾಶಯರು 'ಕೊಡಗು' ಪತ್ರಿಕೆಯ ಚಂದಾ ಹಣವನ್ನು ವಸೂಲು ಮಾಡಲು ಒಪ್ಪಿಕೊಂಡದ್ದರಿಂದ ಅವರನ್ನು ಏಜೆಂಟರುಗಳಾಗಿ ನೇಮಿಸಿ ಅವರಿಗೆ ನಮ್ಮ ರಶೀತಿ ಪುಸ್ತಕಗಳು ಕೊಡಲಾಗಿದೆ ಕೆಳಗಿನ ಸಬ್ ಏಜೆಂಟರುಗಳಿಗೆ ಏಜೆಂಟರವರ ಜವಾಬ್ದಾರಿಕೆ ಮೇಲೆ ರಶೀತಿ ಪುಸ್ತಕಗಳು ಕೊಡಲಾಗಿವೆ ದಯಮಾಡಿ ಚಂದಾದಾರರೆಲ್ಲರೂ ಅವರಿಗೆ ಅನುಕೂಲವಿರುವ ಸ್ಥಳದಲ್ಲಿ ತಮ್ಮ ಚಂದಾವನ್ನು ಪಾವತಿ ಮಾಡಿ ರಶೀತಿ ಪಡೆಯಬೇಕಾಗಿ ಕೋರಿಕೆ

ಕೊಡಗಿನ ಎಲ್ಲಾ ಭಾಗಗಳಿಗೆ.

ಮೆ. ಮುಕ್ಕಾಟಿರ ಜೋಯಪ್ಪನವರು.

ಬಾಚಮ್ಮನ ಕರ್ತಮ್ಮನವರು

ಸಬ್ ಏಜೆಂಟರುಗಳು.

ವೀರಾಜಪೇಟೆ—ಮೆ, ಮುಂಡಂಡ ಸೋಮಯ್ಯನವರು.

ಅಮ್ಮತ್ತಿ, ಸಿದ್ದಾಪುರ— ಮೆ. ಐನಂಡ ಮಾದಪ್ಪನವರು.

ಪೊನ್ನಂಪೇಟೆನಾಡು—ಮೆ ಪಿ. ಕೆ. ಮುದ್ದಪ್ಪಯ್ಯನವರು.

ಮಡಿಕೇರಿ—ಮೆ. ಅಜ್ಜಮಾಡ ಮಾದಪ್ಪನವರು ಮತ್ತು ಮೆ. ಕೆ ಮಾದಮ್ಮಯ್ಯನವರು.

ಸೋಮವಾರಪೇಟೆ—ಮೆ. ಅಪ್ಪಚೆಟ್ಟೋಳಂಡ ಮಾಚಯ್ಯನವರು.

ಸೋಮ.ವಾರಪೇಟೆ—ಮು ಕೆ ಮಾಗಪ್ಪನವರು.

ಶಾಂತೀಕಟ್ಟೆ—ಮೆ. ಚೆಟ್ಟಿಮಾಡ ಯಂ. ಪೂಣಚ್ಚನವರು

(ಶಾಂತೀಕಟ್ಟೆ ಸ್ಟೋರ್ಸ್)

ಸೂಚನೆ.—ಪ್ರಿಂಟಾದ ರಶೀತಿ ಹೊಂದಿಕೊಳ್ಳದೆ ಯಾರೂ ಚಂದಾ ಕೊಡಬಾರದಾಗಿ ಈ ಮೂಲಕ ತಿಳಿಸಲಾಗಿದೆ,

ಮೇನೇಜರ್,

'ಕೊಡಗು' ಲಿಮಿಟೆಡ್, ಮಡಿಕೇರಿ

The Bombay Mutual Life Assurance Society Ltd.,

Head Office:-BOMBAY. Estd. 1871.

ಬೊಂಬೇ ಮ್ಯೂಚುವಲ್.

1871 ರಿಂದಲೂ ಪ್ರತಿ ವರ್ಷ ಬಲಗೊಳ್ಳುತ್ತಿದೆ.

ಈ ವರ್ಷ ಇದು ಅನೇಕ ನೂತನ ಕೆಲಸ ಕಾರ್ಯಗಳನ್ನು ಮಾಡಿದೆ. ಜನಾದರಣೆಯನ್ನೂ, ನಂಬಿಕೆಯನ್ನೂ ಗಳಿಸಿಕೊಂಡಿದೆ. ಕಳೆದ 66 ವರ್ಷಗಳಿಂದಲೂ ಮುಂದುವರಿದು ಈಗಿನ ನವೀನ ತರದ ಸುಧಾರಣೆಗಳನ್ನೊಳಗೊಂಡಿರುತ್ತದೆ.

1937ರಲ್ಲಿ ಮಾಡಿದ ಉದ್ಯೋಗ ರೂ. 2,53,15,500.

1937ರಲ್ಲಿ ಪೂರ್ತಿಯಾದ ಉದ್ಯೋಗ ರೂ. 2,02,02,000.

ಎಂಡೋಮೆಂಟ್ ವಿಮಾ ಪತ್ರದ ಮೇರೆ 1000ಕ್ಕೆ ವರ್ಷಕ್ಕೆ 21 ರಂತೆಯೂ, ಹೋಲ್ ಲೈಫ್ ವಿಮಾ ಪತ್ರಗಳಿಗೆ 26 ರಂತೆಯೂ ಬೋನಸು ಹಂಚಲಾಗಿದೆ.

ದಿ ಬೊಂಬೇ ಮ್ಯೂಚುವಲ್ ಲೈಫ್ ಅಶ್ಯೂರೆನ್ಸ್ ಸೊಸೈಟಿ ಲಿಮಿಟೆಡ್,

12, ಸೌತ್ ಪೆರೇಡ್, ಬೆಂಗಳೂರು.

52 13

ಚಿಕ್ಕ ಮಕ್ಕಳ ಮುಖ ಕಾಂತಿಗೆ

ಎಳೇ ಮಕ್ಕಳ ಸ್ನಾನಕ್ಕೆ ಮೈಸೂರು ಗಂಧದ ಸಾಬೂನು ಅತ್ಯುತ್ಕೃಷ್ಟವಾದದ್ದು. ಕೆನೆಯಂತಿರುವ ಆದರ ಉತ್ತಮ ನೊರೆಯು ಸೂಕ್ಷ್ಮವಾದ ಚರ್ಮಕ್ಕೆ ಏನೊಂದು ಹಾನಿಯನ್ನುಂಟುಮಾಡದೆ ಕೊಳೆಯನ್ನೆಲ್ಲಾ ತೆಗೆದುಹಾಕುತ್ತದೆ. ಚಿಕ್ಕ ಮಕ್ಕಳಿಗೆ ಸುವಾಸನೆಯುಳ್ಳ ಈ ಗಂಧದ ಸಾಬೂನಿನಲ್ಲಿ ಸ್ನಾನಮಾಡಿಸುವದೆಂದರೆ ಅತೀ ಪ್ರೀತಿ. ಇಂದೇ ಒಂದು ಸಾಬೂನನ್ನು ಕೊಂಡುಕೊಳ್ಳಿರಿ.

ಮೈಸೂರು ಗಂಧದ ಸಾಬೂನು

ಎಲ್ಲಾ ಅಂಗಡಿಗಳಲ್ಲೂ ಸಿಕ್ಕುತ್ತವೆ.

ಗವರ್ನಮೆಂಟ್ ಸೋಪ್ ಫ್ಯಾಕ್ಟರಿ, ಬೆಂಗಳೂರು.

52–131

ಸ್ವಾಮಿ ನಿರ್ಮಲಾನಂದಜೀಯವರು.

●●

ತಮ್ಮ ಆಶ್ರಮದಲ್ಲಿ ಮಹಾಸಮಾಧಿಸ್ಥರಾದರು.

(ಬೇರೆ ಪತ್ರಿಕೆಗಳಿಂದ ತೆಗೆದು ಹಾಕಿದ್ದು.)

———::———

ಶ್ರೀಮತ್ ರಾಮಕೃಷ್ಣ ಪರಮಹಂಸರವರ ಶಿಷ್ಯರಲ್ಲಿ ಸಂಜಾತರೂ, ಕಲ್ಕತ್ತಾ ನಗರದ ವಿವೇಕಾನಂದ ಸಂಸ್ಥೆಯ ಮತ್ತು ರಾಮಕೃಷ್ಣ-ಶಾರದಾ ಮಠದ ಅಧ್ಯಕ್ಷರೂ ಆದ ಪವಿತ್ರಾತ್ಮ ಶ್ರೀಮತ್ ಸ್ವಾಮಿ ನಿರ್ಮಲಾನಂದಜೀ ಮಹಾರಾಜರವರು ತಮ್ಮ ಗುರುಭಾಯಿ ಶ್ರೀಮತ್ ಸ್ವಾಮಿ ವಿಜ್ಞಾನಾನಂದಜಿಯವರು ಸ್ವರ್ಗಸ್ಥರಾದ ಮಾರನೆ ದಿವಸ ಅಂದರೆ ಕಳೆದ ಏಪ್ರಿಲ್ ತಾ. 26 ನೇ ಮಂಗಳವಾರ ತಮ್ಮ ೭೫ ನೇ ವಯಸಿನಲ್ಲಿ ತಮ್ಮ ಒಟ್ಟಪಾಲಯಮ್ ಆಶ್ರಮದಲ್ಲಿ ಮಹಾ ಸಮಾಧಿಸ್ಥರಾದರೆಂದು ದಕ್ಷಿಣ ಮಲಬಾರಿನ ಒಟ್ಟಪಾಲಯಮ್ಮಿನ ಶ್ರೀ ನಿರಂಜನಾಶ್ರಮದಿಂದ ತಿಳಿದುಬಂದು ನಮಗೆ ಅತ್ಯಂತ ವ್ಯಸನವಾಗುತ್ತದೆ.

ಜೀವನ ಚರಿತ್ರೆ.

ಉತ್ಕೃಷ್ಟವಾದ ಧಾರ್ಮಿಕ ವಿಜಯಯಾತ್ರೆಯಲ್ಲಿ-ಅದೂ ಹೆಚ್ಚಾಗಿ ದಕ್ಷಿಣ ಭಾರತದಲ್ಲಿ ಸುಮಾರು 20 ರಾಮಕೃಷ್ಣ ಕೇಂದ್ರಗಳಿಗೆ ಮೂಲ ಪುರುಷರೆನಿಸಿದ ಮಹಾತ್ಮರಿವರು. ಹೆಚ್ಚೇಕೆ ಇಡೀ ದಕ್ಷಿಣ ಭಾರತದಲ್ಲಿ ರಾಮಕೃಷ್ಣ ಧರ್ಮ ಪ್ರಚಾರ ಕಾರ್ಯವು ಇವರಿಂದಲೇ ಬೇರನ್ನು ಕಂಡಿರುತ್ತದೆನ್ನಲು ಯಾವ ಅಡ್ಡಿಯೂ ಇರುವದಿಲ್ಲ.

ಇವರು ತಮ್ಮ ಬಾಲ್ಯ ವಯಸ್ಸಿನಲ್ಲಿಯೇ ಬಾಗಬಜಾರಿನಲ್ಲಿದ್ದ ಬೋಲಾರಾಂ ಮಂದಿರದಲ್ಲಿ ಶ್ರೀ ರಾಮಕೃಷ್ಣರ ಪ್ರಥಮ ದರ್ಶನವನ್ನು ಪಡೆದು ಅನಂತರ ದಕ್ಷಿಣೇಶ್ವರದಲ್ಲಿ ಅವರನ್ನು ಆಗಾಗ ಸಂದರ್ಶಿಸುತ್ತಿದ್ದರು. ಇವರನ್ನು ಕಂಡರೆ ಶ್ರೀ ರಾಮಕೃಷ್ಣರಿಗೆ ವಿಶೇಷ ವಾತ್ಸಲ್ಯವಿದ್ದ ಕಾರಣ ಅವರಿಗೆ ಉಪದೇಶವಿತ್ತು ಅನುಗ್ರಹಿಸಿದರು. ಪೂರ್ವಾಶ್ರಮದಲ್ಲಿ ಇವರಿಗೆ ಬಂದ ಹೆಸರೆಂದರೆ ತುಲಸಿ ಚರಣದತ್ ಎಂದು. ಇವರು ಬಾಗಬಜಾರಿನ ಉತ್ತಮ ಕಾಯಸ್ಥ ಕುಟುಂಬದವರು. ದೇವನಾಥದತ್ತರು ಇವರ ತಂದೆಯು. ಇವರ ತಾಯಿ ತಂದೆಗಳು ಧಾರ್ಮಿಕ ಜೀವಿಗಳೂ, ಸಾಧುಗಳೂ ಆದುದರಿಂದ ಇವರಿಗೂ ಬಾಲ್ಯದಲ್ಲಿಯೇ ಪಾರಮಾರ್ಥಿಕ ದೃಷ್ಟಿಯು ತೋರಿಯಿತು. ಇವರ ಸಹೋದರ ಸನ್ಯಾಸಿಗಳಂತೆಯೇ ಇವರೂ ಕಾಸೀಪುರ ಉದ್ಯಾನದಲ್ಲಿ ತಮ್ಮ ಶ್ರೀಗುರುಗಳು ರುಗ್ಣಾವಸ್ಥೆಯಲ್ಲಿ ನರಳುತ್ತಿದ್ದಾಗ ಮನಃಪೂರ್ವಕವಾಗಿ ಅವರ ಸೇವೆ ಮಾಡಿ ಅವರು ಮಹಾ ಸಮಾಧಿಯನ್ನು ಪಡೆದ ನಂತರ ಇತರ ಗುರುಭಾಯಿಗಳೊಡನೆ ಕಲೆತು ರಾಮಕೃಷ್ಣ ಸಂಸ್ಥೆಯ ಅಸ್ತಿಭಾರವನ್ನು ಹಾಕಿ ಅನಂತರ ಅದರ ಅಭಿವೃದ್ಧಿಗೆ ಸ್ವಾಮಿ ರಾಮಕೃಷ್ಣಾನಂದಾಜೀಯವರೊಡನೆ ಬಹುವಾಗಿ ಕೆಲಸ ಮಾಡಿದರು.

ಸ್ವಾಮಿ ವಿವೇಕಾನಂದರವರ ಸಮ್ಮುಖದಲ್ಲಿ ಬೇಲೂರಿನಲ್ಲಿ ರಾಮಕೃಷ್ಣ ಮಠವು ಕ್ರಮವಾಗಿ ಸ್ಥಾಪನೆಯಾದನಂತರ ಆ ಸಂಸ್ಥೆಯ ಮೊದಲನೆಯ ಉಪಕಾರ್ಯದರ್ಶಿಯಾಗಿ ಇವರೇ ಆರಿಸಲ್ಪಟ್ಟರು. 1903 ನೇ ಇಸವಿಯಲ್ಲಿ ಸ್ವಾಮಿ ಅಭೇದಾನಂದಜೀಯವರ ಪ್ರಚಾರ ಕಾರ್ಯದಲ್ಲಿ ಅವರಿಗೆ ಸಹಾಯಕರಾಗಿ ಅಮೇರಿಕಾ ದೇಶಕ್ಕೆ ಪ್ರಯಾಣ ಮಾಡಿ 1906 ರಲ್ಲಿ ಇಂಡಿಯಾಕ್ಕೆ ಹಿಂದಿರುಗಿದರು. ಆ ಮೇಲೆ ಸನ್ಯಾಸಾಶ್ರಮ ಸ್ವೀಕಾರವಾದ ಪ್ರಥಮ ದಿವಸಗಳಲ್ಲಿ ಕೈಕೊಂಡಂತೆ ಇಡೀ ಭಾರತ ದೇಶ ಸಂಚಾರವನ್ನು ತಮ್ಮ ತಪಶ್ಸಾಧನೆಗಾಗಿ ಕೈಕೊಂಡರು. 1909 ರಲ್ಲಿ ಬೆಂಗಳೂರಿನ ರಾಮಕೃಷ್ಣ ಕೇಂದ್ರದ ಆಡಳಿತವನ್ನು ವಹಿಸಲು ನಿಯಮಿತರಾಗಿ ಅನಂತರ ನಿರಂತರ ಪರಿಶ್ರಮವನ್ನು ವಹಿಸಿ 29 ವರ್ಷಗಳ ಅವಿಶ್ರಾಂತ ಕೆಲಸವನ್ನು ಮಾಡಿದರು. ಶ್ರೀ ರಾಮಕೃಷ್ಣರ ಮನೆಗಳಿಗೆ ಮನೆಗೊಂಡರೆ ಶ್ರೀ ರಾಮಕೃಷ್ಣರ ಕಾರ್ಯವನ್ನು ಮುಂದೊತ್ತುತ್ತಿದ್ದವರಲ್ಲೇ ದಕ್ಷರಾಗಿದ್ದು ತಮ್ಮ ಕರ್ತವ್ಯವನ್ನು ಅನಿಚ್ಛೆಯಿಂದ ಪ್ರೇಮದಿಂದ ಮೌನವಾಗಿ ಮಾಡುವವರಲ್ಲೇ ಅವರು ಶ್ರೇಷ್ಠರೆಂದರು.

ನಾವು ನೋಡ ಕಡೆಗಳಲ್ಲೆಲ್ಲಾ ದಕ್ಷಿಣ ಭಾರತದಲ್ಲಿ ಶ್ರೀ ರಾಮಕೃಷ್ಣ-ವಿವೇಕಾನಂದರ ಸಂದೇಶವನ್ನು ಸ್ವಾಮಿ ನಿರ್ಮಲಾನಂದಜೀಯವರು ಸಾರುತ್ತಿದ್ದರು.

1929 ರಲ್ಲಿ ಕಲ್ಕತ್ತಾ ನಗರದಲ್ಲಿ ವಿವೇಕಾನಂದ ಸಂಸ್ಥೆಯೂ, ರಾಮಕೃಷ್ಣ-ಶಾರದಾ ಮಠವೂ ಸ್ಥಾಪಿತವಾದುವು. ಈ ಎರಡು ಸಂಸ್ಥೆಗಳ ವ್ಯವಸ್ಥಾಪಕರ ಕೋರಿಕೆಯನ್ನನುಸರಿಸಿ ಸ್ವಾಮಿಜೀಯವರು ಅವುಗಳ ಸಂಚಾಲಕರಾದರು. ಅವರು ಸಂಬಂಧವನ್ನಿಟ್ಟುಕೊಂಡಿದ್ದ ಎಲ್ಲಾ ಸಂಸ್ಥೆಗಳ ವಿಷಯದಲ್ಲಿ ಅವರು ಮಿತ್ರರೂ, ತತ್ವವೇತ್ತರೂ ಮತ್ತು ಮಾರ್ಗದರ್ಶಿಯೂ ಆಗಿದ್ದರು. ಸಾವಿರಾರು ಜನರು ಇವರ ಪವಿತ್ರ ಬೋಧನೆಯಿಂದ ಸತ್ಯವನ್ನರಿತು ಮಾತ್ರವಲ್ಲದೆ, ಸಂಕಷ್ಟಗೊಂಡಿದ್ದ ಅನೇಕ ಮನುಷ್ಯರು ಇವರ ಚೇತನವಾಣಿಯಿಂದ ತಮ್ಮ ಬಳಲಿದ ಜೀವನದ ಸಿಕ್ಕಿನಿಂದ ಪಾರಾಗಿ ತಮ್ಮ ಇಷ್ಟಾರ್ಥಪೂರ್ತಿಯನ್ನು ಪಡೆಯುವಂತಾದರು. ಭಾರತವರ್ಷದ ಮೂಲೆ ಮೂಲೆಗಳಲ್ಲಿರುವ ಸ್ತ್ರೀಯರಿಂದಿಯಾಗಿ ಇವರ ಸನ್ಯಾಸಿ ಮತ್ತು ಇತರ ಅಸಂಖ್ಯಾತ ಶಿಷ್ಯವರ್ಗದವರು ತಮ್ಮ ಪ್ರಿಯ ಗುರುದೇವನ ಅಗಲುವಿಕೆಯಿಂದ ಈ ದಿನ ಅಗಾಧ ವ್ಯಸನದಲ್ಲಿ ಮುಳುಗಿ ಹೋಗಿರುವರು.

ಶ್ರೀ ರಾಮಕೃಷ್ಣ ಪರಮಹಂಸರ ದಿವ್ಯ ಹಸ್ತದಿಂದ ಪಾರಮಾರ್ಥಿಕ ಸಾಧನೋಪದೇಶವನ್ನು ತಮ್ಮ ಶೈಶವದಲ್ಲಿಯೇ ಪಡೆದಂಥ ಮಹಾನುಭಾವರು ಒಬ್ಬೊಬ್ಬರಾಗಿ ಬಹಿರ್ವ್ಯಾಪಾರವನ್ನು ತೊರೆದು ಕಣ್ಮರೆಯಾಗುತ್ತಿರುವರು. ವಿವೇಕಾನಂದ ಸಂಸ್ಥೆಯ ಮತ್ತು ರಾಮಕೃಷ್ಣ-ಶಾರದಾ ಮಠದ ಅಧ್ಯಕ್ಷರಾದ ಶ್ರೀಮತ್ ಸ್ವಾಮಿ ನಿರ್ಮಲಾನಂದಜೀಯವರು ಗುರುವರ್ಯರ ದಿವ್ಯ ಮಾರ್ಗವನ್ನನುಸರಿಸಿ ತಮ್ಮ ಕಾರ್ಯ ಸಾಧನೆಯಲ್ಲಿ ಉತ್ತೀರ್ಣರಾಗಿ ಮಹಾ ಸಮಾಧಿಯನ್ನು ಪಡೆದವರಲ್ಲಿ ಸೇರಿದವರಾಗಿರುತ್ತಾರೆ. ಸ್ವಾಮಿ ವಿವೇಕಾನಂದರವರ ಸಹ-ಕಾರ್ಯಭಾಗಿಗಳಾಗಿದ್ದು ದಕ್ಷಿಣೇಶ್ವರದ ಮಹಾಮಹಿಮನ ಅನುವರ್ತಿಯಾಗಿ ಚಾರಿತ್ರ್ಯವಾತ್ಸಲ್ಯದಿಂದ ಜಾಜ್ವಲ್ಯಮಾನರಾದರು. ವಿಶ್ವದ ಅನೇಕ ಭಾಗಗಳಲ್ಲಿ ತನ್ನ ಗುರುವರ್ಯನ ಅಮೂಲ್ಯ ಸಂದೇಶವಾದ-ಜನತೆಯೇ ಜನಾರ್ದನನು-ಅಂಥಾ ಜನತೆಯ ಸೇವೆಯೇ ಜನಾರ್ದನನ ಸೇವೆಯೆಂಬ ಉತ್ತಮ ಸಂದೇಶವನ್ನು ಸಾರುವುದರಲ್ಲಿ ಇವರು ಸಹಾಯಕರಾದರು. ಅವರೆ ದಕ್ಷಿಣ ಭಾರತವು ಸ್ವಾಮೀಜೀಯವರನ್ನು ತನ್ನ ಮಡಿಲಲ್ಲಿ ಹಾಕಿಕೊಂಡದರಿಂದ ಅವರು ತಮ್ಮ ಜೀವಮಾನಕಾಲದ ಎಲ್ಲಾ ಸಮಯವನ್ನೂ ಇಲ್ಲಿಯೇ ಧಾರ್ಮಿಕ ತತ್ವಬೋಧನೆ ಮಾಡುತ್ತಾ ಕಳೆದರು. ಮತ್ತು ಅಂತಿಮ ಕಾಲವನ್ನೂ ಕೂಡ ದಕ್ಷಿಣ ಕೇರಳದಲ್ಲಿ. ಇವರು ದಕ್ಷಿಣ ಮಲಬಾರಿನಲ್ಲಿ ಮಹಾ ನಿರ್ಯಾಣವನ್ನು ಹೊಂದಿದರು. ಸನ್ಯಾಸಿ ಬಂಧುಗಳಿಗೆ ಇವರ ಅಂತರ್ಧಾನವು ಅಗಾಧವಾದ ಸಮುದ್ರದ ನಡುವಿನ ಒಂದು ಸಾಮಾನ್ಯ ಗುಳ್ಳೆಯಂತೆ ತೋರಬಹುದಾದರೂ ಲೌಕಿಕ ಜನರ ಪರಿಗಣನೆಗೆ ನಿಲ್ಲುವ ನಮಗೆ ಶ್ರೀ ಸ್ವಾಮಿ ನಿರ್ಮಲಾನಂದಜೀಯವರ ಅಗಲುವಿಕೆಯು ದಾರುಣವಾದ ದುಃಖವನ್ನು ತಂದೊಡ್ಡಿ ಅಂಧಕಾರದಲ್ಲಿ ಕೆಡವಿರುವುದು.

ಧ್ವಜ ಹಿಂಗಬೇಕೆಂದು ಕೇಳಿಕೊಳ್ಳಲಿಲ್ಲ. ಆದರೆ ಕಾಂಗ್ರೆಸ್ ಪ್ರಾಂತಗಳಲ್ಲಿ ತಾನು ವಿಷ ಮೂದಲು ಸಿದ್ಧನಿದೆ ಎಂಬುದನ್ನಷ್ಟೇ ತಿಳಿಸಿತು.

ಇಷ್ಟಕ್ಕೆ ಮಿ. ಜಿನ್ನಾರವರು ಚರ್ಚೆಯನ್ನು ಮುಂದೆ ಸಾಗಿಸುವ ಮೊದಲು ಲೀಗ್ ಕೌನ್ಸಿಲಿನ ಸಲಹೆ ತೆಗೆದುಕೊಳ್ಳಲು ಅವಕಾಶ ಕೊಡಬೇಕೆಂದು ಕೇಳಿಕೊಂಡರು.

ಕಾಂಗ್ರೆಸ್ ಧ್ವಜ ಹಾರಿಸಬಾರದು.

ಗಾಂಧಿಯವರೊಡನೆ ಇತ್ತೀಚೆಗೆ ನಡೆಸಿದ ಮಾತುಕತೆಯಲ್ಲಿ ಮಿ. ಜಿನ್ನಾರವರು ಒಪ್ಪಂದದ ಮಾತುಕತೆ ಮುಗಿಯುವವರೆಗೆ ಸಾರ್ವಜನಿಕ ಕಟ್ಟಡಗಳ ಮೇಲೆ ಕಾಂಗ್ರೆಸ್ ಧ್ವಜ ಹಾರಿಸತಕ್ಕದ್ದಲ್ಲವೆಂದು ತಿಳಿಸಬೇಕೆಂದು ಇಚ್ಛೆ ವ್ಯಕ್ತ ಮಾಡಿದರೆಂದೂ ತೋರಿಬರುತ್ತದೆ.

ವಂದೇ ಮಾತರಂ ಪ್ರಶ್ನೆ.

ವಂದೇ ಮಾತರಂ ಪದದ ಬಗ್ಗೆಯೂ ಸ್ವಲ್ಪ ಚರ್ಚೆ ನಡೆಯಿತು. ಈ ಎಲ್ಲಾ ಮಾತುಕತೆ ಫಲವಾಗಿ ಒಪ್ಪಂದವು ಶಕ್ಯವಿಲ್ಲೆಂದು ನಿರಾಶೆಯುಂಟಾದಾಗ ಮುಸ್ಲಿಂ ಲೀಗಿನ ಕೆಲವು ಜವಾಬ್ದಾರಿ ಜನರು ಈ ವಿಷಯವನ್ನು ವ್ಯಕ್ತಿಶಃ ಜಿನ್ನಾರವರಿಗೆ ಒಪ್ಪಿಸತಕ್ಕದ್ದಲ್ಲವೆಂದೂ, ಲೀಗಿನವರನ್ನು ವಿಚಾರಿಸತಕ್ಕದೆಂದೂ ಗಾಂಧೀಜೀಯವರಿಗೆ ಸೂಚಿಸಿದರೆಂದು ತಿಳಿಯುತ್ತದೆ.

ಸಂಯುಕ್ತ ಪ್ರಾಂತ ಬಂಗಾಳ ಮತ್ತು ಪಂಜಾಬಿನ ಲೀಗ್ ಪ್ರತಿನಿಧಿಗಳು ಒಪ್ಪಂದವಾಗುವಂತೆ ಶಕ್ತಿಮೀರಿ ಪ್ರಯತ್ನ ಮಾಡುವರೆಂದು ಕೆಲವರು ನಂಬಿದ್ದಾರೆ. ಸ್ಥಿರವಾದ ವಾತಾವರಣದಲ್ಲಿ ಆಸೆಯ ತಿರುವೆಂದರೆ ಇದೊಂದೇ ಇರುವದು.

ಪಾತ್ರ.

ಬಾತ್ಮೀದಾರರು ಪಡುವ ಅಭಿಪ್ರಾಯಗಳಿಗೆ ಪತ್ರಿಕಾಕರ್ತರು ಜವಾಬ್ದಾರರಲ್ಲ. [ಕೊ. ಸಂ.

ಬಸ್ಸು ಸರ್ವಿಸು.

ಅಯ್ಯಾ,

ಬಸ್ ಸರ್ವಿಸುಗಳ ಓಡಾಟವು ಎಂದಿನಂತೆ ನಡೆದರೂ ಅವರ ಟಿಕೇಟಿನ ದರದಲ್ಲಿ ಆಗಾಗ್ಗೆ ಹೆಚ್ಚು ಕಡಿಮೆಯಾಗುತ್ತಿರುವುದನ್ನು ನಾವು ಕಾಣದಿಲ್ಲ. ಹೀಗಾಗಲು ಕಾರಣಗಳೇನಿರಬಹುದು? ಒಂದು, ಬಸ್ ಚಾರ್ಜು ಹೆಚ್ಚಾಗಿದೆಯೆಂದು ಕಂಪೆನಿಯವರು ಕಮ್ಮಿ ಮಾಡಬೇಕು. ಇಲ್ಲವೇ ಬಸ್ ಕಂಪೆನಿಗಳಿಗೆ ಸ್ಪರ್ಧೆ ಬರಬೇಕು. ಸ್ಪರ್ಧೆ ಇರುವಾಗ ಚಾರ್ಜು ಕಮ್ಮಿ ಮಾಡಿ ಆಗಲೇ ಪ್ರಾರಂಭವಾಗಿರುವ ಹೊಸ ಸರ್ವಿಸುಗಳನ್ನು ನಿರ್ನಾಮ ಮಾಡಿ ತಮ್ಮ ಅಧಿಕಾರವನ್ನು ಚಿರಸ್ಥಾಯಿಯಾಗಿ ಮಾಡುವ ಏರ್ಪಾಡು ನಡೆಯುವದು ವಾಡಿಕೆ. ಆದರೆ ಇಂಥಾ ಸಂದರ್ಭದಲ್ಲಿ ದೇಶೀಯರು ಸ್ವಲ್ಪ ಯೋಚಿಸಬೇಕು. ಹೊಸ ಬಸ್ಸು ಸರ್ವಿಸುಗಳು ಬರುವ ಮೊದಲ. ಜನರನ್ನು ಸುಲಿಗೆ ಮಾಡುತ್ತಿರುವವರು ಆ ಮೇಲೆ ಹೀಗೆ ಸ್ಪರ್ಧೆ ನಡಿಸಿ ದೇಶೀಯ ಬಸ್ ಸರ್ವಿಸುಗಳನ್ನು ಮೂಲೆಗೊತ್ತಲು ಅವಕಾಶ ಕಲ್ಪಿಸಿ ಕೊಡಬಾರದು. ಬಸ ಕಂಪೆನಿಯವರು ಚಾರ್ಜು ಕಮ್ಮಿ ಮಾಡುವ ಕಾರಣವಾದರೂ ಹೊಸಬಸ್ ಸರ್ವಿಸ್. ಈ ಹೊಸ ಬಸ್ ಸರ್ವಿಸಿನವರು ಯಥೋಚಿತ ಚಾರ್ಜಿನಿಂದ ಬಸ್ಸು ಓಡಿಸಲು ಪ್ರಾರಂಭಿಸಿದ್ದರಿಂದ ಕಂಪೆನಿಯವರು ಕಡಿಮೆ ಮಾಡದೆ ಗತ್ಯಂತರವಿಲ್ಲದಾಯಿತು. ಈಗ ಸರ್ವಿಸು ನಿಂತರೆ ಕಂಪೆನಿಯವರು ತಮ್ಮ ಯಥಾ ಚಾರ್ಜಿಗೆಬಾರದಿರರು. ಹಾಗಿರುವಾಗ ನಾವು ನಮ್ಮ ದೇಶೀಯರು ಸ್ಥಾಪಿಸಿ ಓಡಿಸುತ್ತಿರುವ ಸರ್ವಿಸಿಗೆ ಪ್ರೋತ್ಸಾಹ ಕೊಡಬಾರದೇಕೆ?

'ಅನುಭವಿಸಿದವ.'

ಡಾ. ಮೇತ್ಯೂಸ್ ಎಬ್ರಹಾಮ್

ದಂತ ವೈದ್ಯರು.

(ಹಿಯರ್ಸ್ ಲೆಸ್ಲಿ ಬಂಗ್ಲೆ)

(ಸ್ಪೆನ್ಸರ್ಸ್ ಹತ್ತಿರ)

ಮಡಿಕೇರಿ.

For marriage Festivities and Social Functions order your Choicest Dishes,

or 'Indra Bhavan' Sweets and Delicacies at

Bombay Indra Bhavan,

(Sayaji Rao Road, Mysore.)

The premier Restaurant and Catering house in the City for high class varieties, reasonable fare and prompt Services.

Indra Bhavan Sweets win favour always and every where.

12-9

[ಚಿಕ್ಕ ಡಾಕ್ಟರ್] **ವೇಪ್ರಿನ್** [ರಿಜಿಸ್ಟರ್ಡ್]

ಚರ್ಮವ್ಯಾಧಿಗಳ ವೈರಿ—ಪ್ರತಿ ಒಬ್ಬರ ಸ್ನೇಹಿತ—ಸ್ವದೇಶಿ ವಸ್ತು.



ಇದರ ಉಪಯೋಗದಿಂದ ಕಜ್ಜಿ, ಹುಣ್ಣು, ವ್ರಣ, ಇಸಬು, ನಾರು ಹುಣ್ಣು, ಕುಷ್ಠವ್ಯಾಧಿ, ಸುಟ್ಟಿದ ಗಾಯ, ಮೊಡವೆ (Pimples) ಹಳೆಯ ಗಾಯ, ಕೆಟ್ಟ ಗಾಯ, ತೊದಲಿ, ಗಜಕರ್ಣ ಇವು ವಾಸಿಯಾಗುವವು. ಇದು ಸುರಿಯುತ್ತಿರುವ ರಕ್ತವನ್ನು ನಿಲ್ಲಿಸಿ ನೋವನ್ನು ನಿವಾರಿಸುವುದು. ಅಲ್ಲದೆ ಇಂದ್ರಜಾಲವೋ ಎಂಬಂತೆ ಸ್ವಲ್ಪ ಕಾಲದಲ್ಲಿಯೇ ಚರ್ಮವನ್ನು ಒಣಗಿಸುವುದು. ನಿಮ್ಮಲ್ಲಿ ಒಂದು ಬಾಟ್ಲಿ ಇದ್ದಲ್ಲಿ ಒಬ್ಬ ಡಾಕ್ಟರ್ ಇದ್ದಂತಾಗುವುದು. ಕ್ರಯ ಬಹಳ ಸುಲಭ. $\frac{1}{2}$ ಔನ್ಸ್ ಬಾಟ್ಲಿ 1ಕ್ಕೆ ಬೆಲೆ 0-8-0. $\frac{1}{4}$ ಔನ್ಸ್ ಬಾಟ್ಲಿ 1ಕ್ಕೆ ಬೆಲೆ 0-4-0.

ವಿ. ಸೂ:—ಪೆಟ್ಟು ತಾಗಿದ ಸ್ಥಳದಲ್ಲಿ ವೇಪ್ರಿನ್ ಚೆನ್ನಾಗಿ ಹಚ್ಚುವುದು. ಇಲ್ಲವೇ ಬಟ್ಟೆಯ ಮೇಲೆ ಹಾಕಿ ಅಂಟಿಸುವುದು. ನಂತರ ಸಾಬೂನಿನಿಂದ ಕೈ ತೊಳೆಯುವುದು. ಇದಲ್ಲದೆ ಇನ್ನೂ ಅನೇಕ ತರಹದ ಔಷಧಿಗಳು ನಮ್ಮಲ್ಲಿವೆ.

ಲಕ್ಷ್ಮೀ ಮ್ಯಾನಿಫ್ಯಾಕ್ಚರಿಂಗ್ ಕಂಪೆನಿ,
ಡಿ. ಪ್ರೊ. ಬೆಂಗಳೂರು ಸಿಟಿ.

62-43 ಲೋಕಲ್ ಏಜೆಂಟ್:—ಹರಿದಾಸ್ ಸಂಜೀವ ಗುಪ್ತ, ಮಡಿಕೇರಿ, (ಕೊಡಗು).

ಬೋಸ್-ಜಿನ್ನಾ ಮಾತುಕತೆ.

• • •

ಬೇಡಿಕೆಗಳನ್ನು ಬರಹದಲ್ಲಿ ಕೊಡಲು ಜಿನ್ನಾರವರ ನಕಾರ.

ಒಪ್ಪಂದದ ಮಾತುಕತೆ ಮುಗಿಯುವ ವರೆಗೆ ಕಾಂಗ್ರೆಸ್ ಧ್ವಜ ಹಾರಿಸಬಾರದಂತೆ.

ಬೋಸ್ ಜಿನ್ನಾ ಮಾತುಕತೆಯ ಸಂಪೂರ್ಣ ವಿವರಗಳು ಈಗ ಗೊತ್ತಾಗಿಗಿದ್ದು ಅವರ ಸಂಪೂರ್ಣ ಇತಿಹಾಸವನ್ನು ಇಲ್ಲಿ ಕೊಡಬಹುದಾಗಿದೆ.

ಜಿನ್ನಾರವರು ಮೊದಲು ಮೌಲಾನಾ ಅಬುಲ್ ಕಲಾಮ್ ಆಜಾದರನ್ನು ಕಾಣಬೇಕೆಂದು ಗಾಂಧಿಯವರು ಸೂಚಿಸಿದರೆಂದೂ ಅದರ ಸಲುವಾಗಿ ಗಾಂಧೀಜಿಯವರೊಡನೆ ತಾನು ಮಾತನಾಡುವುದಾಗಿ ಜಿನ್ನಾರವರು ತಿಳಿಸಿದರೆಂದೂ ತೋರಿಬರುತ್ತದೆ. ಇದಾದ ಬಳಿಕ ಗಾಂಧಿಯವರು ಲೀಗಿನ ಅಧ್ಯಕ್ಷರೂ, ಕಾಂಗ್ರೆಸಿನ ಅಧ್ಯಕ್ಷರೂ ಪರಸ್ಪರ ಮಾತುಕತೆಯಾಡಬೇಕೆಂದು ಸೂಚಿಸಿದರು. ಈ ಸೂಚನೆಯು ಸ್ವೀಕರಿಸಲ್ಪಟ್ಟಿತು. ನಂತರ ಜಿನ್ನಾ ಮತ್ತು ಬೋಸರಲ್ಲಿ ಮಾತುಕತೆ ಪ್ರಾರಂಭವಾಯಿತು. ಅವರ ಜಾತೀಯ ಪ್ರಶ್ನೆಯ ವಿಷಯವು ಬೋಸರಿಗೆ ಚೆನ್ನಾಗಿ ಗೊತ್ತಿರದ್ದರಿಂದ ಅವರು ಸ್ವಪಕ್ಷಕ್ಕೆ ಸೇರಿದವರ ವಿಶೇಷ ಗಾಂಧಿ, ಪಂಡಿತ ನೆಹರೂ, ಮೌಲಾನಾ ಆಜಾದ್ ಇವರ ಸಲಹೆಗಳನ್ನು ತೆಗೆದುಕೊಳ್ಳಬೇಕಾಯಿತು. ಇದರಿಂದ ಮಾತುಕತೆ ಸಾವಕಾಶವಾಗಿ ನಡೆದವು. ಈ ರೀತಿ ಸಾಮಾನ್ಯವಾದ ಚರ್ಚೆಯಲ್ಲಿಯೇ ಬಹಳ ವೇಳೆ ಹೋಯಿತು. ನಿಜವಾದ ವಾದಗ್ರಸ್ತ ಸಂಗತಿಗಳು ಮಾತುಕತೆಗಳಲ್ಲಿ ಹೊರಬೀಳಲಿಲ್ಲ. ಆಗ ಕೆಲವು ಕಾಂಗ್ರೆಸ್ ಮುಖಂಡರು ಶ್ರೀ ಸುಭಾಸ ಬೋಸರಿಗೆ ಯಾವ ಹದಗಳ ವಿಷಯದಲ್ಲಿ ಜಿನ್ನಾರವರು ಒಪ್ಪಂದ ಮಾಡಿಕೊಳ್ಳಲು ಬಯಸುವರೋ ಅವುಗಳನ್ನು ಬರಹದಲ್ಲಿ ಕೊಡಲು ಜಿನ್ನಾರವರಿಗೆ ವಿನಂತಿ ಮಾಡಿಕೊಳ್ಳಬೇಕೆಂದು ಸೂಚಿಸಿದರು.

ಜಿನ್ನಾರವರು ಬರಹದಲ್ಲಿ ಕೊಡಲು ಒಪ್ಪಲಿಲ್ಲ.

ಜಿನ್ನಾರವರು ಬರಹದಲ್ಲಿ ಏನೂ ಕೊಡಲು ನಿರಾಕರಿಸಿದರು. ಮತ್ತು ಭಿನ್ನತೆಗಳ ಸಂಬಂಧದಲ್ಲಿ ನಿಶ್ಚಿತ ನಿರ್ಧಾರ ಪೂರ್ವದಲ್ಲಿ ಕಾಂಗ್ರೆಸ್ ಮತ್ತು ಲೀಗಿನ ನಡುವೆ ಆಗಬಹುದಾದ ಯಾವದೇ ಒಪ್ಪಂದಕ್ಕೆ ಜೋಡಿಸಲ್ಪಡುವ ಪ್ರಸ್ತಾವನೆಯ ವಿಷಯವಾಗಿ ಮೊದಲು ಒಪ್ಪಂದಕ್ಕೆ ಬರುವುದು ಅವಶ್ಯವಾಗಿದೆಯೆಂದು ಅಭಿಪ್ರಾಯ ವ್ಯಕ್ತ ಮಾಡಿದರು. ಭಿನ್ನತೆಗಳ ವಿಷಯವನ್ನು ಒಂದುಗಡೆ ವಿಷಯಕ್ಕೆ ತೆಗೆದುಕೊಂಡರೂ ನಡೆಯುವದೆಂದು ಅವರು ಸೂಚಿಸಿದರು. ಕಾಂಗ್ರೆಸು ಹಿಂದೂ ಜನರ ಪರವಾಗಿ ಮುಸಲ್ಮಾನ ಪ್ರತಿನಿಧಿಕ ಸಂಸ್ಥೆಯಾದ ಲೀಗಿನೊಡನೆ ಈ ಕೆಳಗಿನ ಕರಾರುಗಳ ಮೇರೆಗೆ ಒಪ್ಪಂದ ಮಾಡಿಕೊಳ್ಳುತ್ತದೆ ಎಂಬುದಾಗಿ ಸ್ಪಷ್ಟವಾಗಿ ಪ್ರಸ್ತಾವನೆಯಲ್ಲಿ ಕಾಣಿಸಬೇಕೆಂದೇ ಅವರ ಆಶಯವಿತ್ತು.

ಮಂತ್ರಿಮಂಡಳಗಳೂ, ಮುಸಲ್ಮಾನರೂ.

ಜಿನ್ನಾರವರು ತಮ್ಮ ಸಂಭಾಷಣೆಯಲ್ಲಿ ಯಾವತ್ತೂ ಮಂತ್ರಿ ಮಂಡಳಗಳನ್ನು ಪುನಃ ರಚಿಸತಕ್ಕದ್ದೆಂದೂ ಹೀಗೆ ಹೊಸದಾಗಿ ರಚಿಸಲ್ಪಟ್ಟ ಮಂತ್ರಿ ಮಂಡಳಗಳಲ್ಲಿಯ ಮುಸಲ್ಮಾನ ಮಂತ್ರಿಗಳ ಸ್ಥಳಕ್ಕೆ ಲೀಗಿನವರು ಸೂಚಿಸಿದವರನ್ನೇ ತೆಗೆದುಕೊಳ್ಳತಕ್ಕದೆಂದೂ ಕೇಳಿದರೆಂದೂ ಹೇಳಲಾಗುತ್ತದೆ. ಬೋಸರು ಈ ಸಂಬಂಧದಲ್ಲಿ ಮುಂಬಯಿಯಲ್ಲಿ ಹಾಜರಿದ್ದ ಕಾಂಗ್ರೆಸ್ ಮುಖಂಡರ ಸಲಹೆ ತೆಗೆದುಕೊಂಡರು. ಮತ್ತು ಈ ಸಂಬಂಧದಲ್ಲಿ ಮಾತುಕತೆ ಮುರಿದು ಹೋಗುವ ಲಕ್ಷಣವೂ ತೋರಿತು. ಅವರ ದೀರ್ಘವಾದ ಚರ್ಚೆ ಮತ್ತು ವಿಚಾರವಿನಿಮಯದ ನಂತರ ಕಾಂಗ್ರೆಸ್ ಮುಖಂಡರು ಕಾಂಗ್ರೆಸಿನ ಸ್ಥಿತಿಯನ್ನು ಒಂದು ಮನವಿಯಲ್ಲಿ ಸ್ಪಷ್ಟೀಕರಿಸಲು ನಿರ್ಧರಿಸಿ ಅದನ್ನು ಜಿನ್ನಾರವರಿಗೆ ಒಪ್ಪಿಸಿದರು. ಕಾಂಗ್ರೆಸ್ಸು ರಾಷ್ಟ್ರೀಯ ಸಂಸ್ಥೆಯ ನಾತೆಯಿಂದ ಹಿಂದೂಸ್ಥಾನದಲ್ಲಿರುವ ಪಂಗಡಗಳನ್ನು ತೃಪ್ತಿಪಡಿಸುವ ಅವಶ್ಯಕತೆಯನ್ನು ಮನಗಂಡಿದ್ದು ಅವರ ಹಕ್ಕುಬಾಧ್ಯತೆಗಳು ಕಾಂಗ್ರೆಸಿನಲ್ಲಿ ಸುರಕ್ಷಿತವಾಗಿರುವವೆಂದೂ, ಈ ತತ್ವಕ್ಕನುಸಾರವಾಗಿ ಕಾಂಗ್ರೆಸು ಲೀಗಿನೊಡನೆ ಚರ್ಚೆ ಮಾಡಿ ಒಪ್ಪಂದ ಮಾಡಿಕೊಳ್ಳಲು ಸಿದ್ಧವಿದೆಯೆಂದೂ ಆದರೆ ಕಾಂಗ್ರೆಸ್ಸು ಜಾತೀಯ ಸಂಸ್ಥೆಯ ತರಗತಿಗೆ ಇಳಿಯಬೇಕೆಂದರೆ ಅದು ಸಾಧ್ಯವಿಲ್ಲೆಂದೂ ಅದರಲ್ಲಿ ಉಲ್ಲೇಖಿಸಲ್ಪಟ್ಟಿತು.

ಇನ್ನು ಮುಸಲ್ಮಾನ ಮಂತ್ರಿಗಳು ಲೀಗಿನವರಲ್ಲಿಯೇ ಆರಿಸಿಕೊಳ್ಳಲ್ಪಡತಕ್ಕದೆಂಬ ವಿಷಯವಾಗಿ ಕಾಂಗ್ರೆಸ್ಸು ತನ್ನ ಧೋರಣವನ್ನು ಕೆಳಗಿನಂತೆ ತಿಳಿಸಿತು. ಕಾಂಗ್ರೆಸ್ಸು ಸದ್ಯದ ಮಂತ್ರಿ ಮಂಡಳವನ್ನು ಬೆಳಿಸಿ ಅದರಲ್ಲಿ ಮುಸ್ಲಿಂ ಲೀಗಿನ ಪ್ರತಿನಿಧಿಗಳನ್ನು ತೆಗೆದುಕೊಳ್ಳಲು ಸಿದ್ಧವಿದೆ. ಆದರೆ ಸದ್ಯದ ಮಂತ್ರಿಗಳನ್ನು ತೆಗೆದುಹಾಕಿ ಅವರ ಸ್ಥಳದಲ್ಲಿ ಹೊಸಬರನ್ನು ನಿಯಮಿಸಿಕೊಳ್ಳಬೇಕೆಂಬುದು ಸಮಂಜಸವೂ ಅಲ್ಲ. ಇದಲ್ಲದೆ ಕಾಂಗ್ರೆಸ್ಸು ಒಂಗಾಲಿ ಮತ್ತು ಮಂತ್ರಿ ಮಂಡಳಗಳಲ್ಲಿ

ಕೊಡಗು ಜಮೀನ್ದಾರರ ಸಂಘದ ೨೫ನೇ ಅಧಿವೇಶನ.

ಕೊಡಗು ಜಮೀನ್ದಾರರ ಸಂಘದ 25 ನೇ ಅಧಿವೇಶನವು ಕಳೆದ ತಾರೀಕು 29 ರಲ್ಲಿ ನಾಪೋಕ್ಲಿನಲ್ಲಿ ಶ್ರೀಮಾನ್ ಎಲ್. ಯಸ್. ಕೃಷ್ಣ, ಬಿ. ಎ., ಬಿ. ಎಲ್. ರವರ ಅಧ್ಯಕ್ಷತೆಯಲ್ಲಿ ನಡೆಯಿತು. ಅದರ ನಡವಳಿಕೆಗಳು.

ತಾರೀಕು 29 ನೇ ಆದಿತ್ಯವಾರ ಹಗಲು 10½ ಗಂಟೆಗೆ ಅಧ್ಯಕ್ಷರನ್ನು ವಾದ್ಯ ಜಯಘೋಷಗಳೊಡನೆ ಮೆರವಣಿಗೆ ಸಭಾಸ್ಥಾನಕ್ಕೆ (ಶಾಲಾ ಹಾಲಿಗೆ) ಕರೆದೊಯ್ಯಲಾಯಿತು. ಅಲ್ಲಿ ರಾಷ್ಟ್ರಧ್ವಜಾರೋಹಣ ಮತ್ತು ಧ್ವಜವಂದನೆಯ ಕಾರ್ಯಕ್ರಮಗಳು ಮುಗಿದ ನಂತರ ಸಭೆಯ ಕಾರ್ಯಕಲಾಪಗಳು ಪ್ರಾರಂಭವಾದವು. ಸುಮಾರು 500 ಜನರು ನೆರೆದಿದ್ದರು. ಕೆಲವು ಮಹಿಳೆಯರೂ ಹಾಜರಿದ್ದರು.

ಕಾರ್ಯದರ್ಶಿಗಳಲ್ಲಿ ಸ್ವಾಗತಾಧ್ಯಕ್ಷರಾದ ಶ್ರೀ. ಕಂಗಾಂಡ ಬೆಳ್ಳಿಯಪ್ಪನವರು ತಮ್ಮ ಸ್ವಾಗತ ಭಾಷಣವನ್ನು ಓದಲು ಶ್ರೀ. ಚೆಪ್ಪುಡಿರ ಪೂಣಚ್ಚನವರಿಗೆ ಅನುಮತಿ ಕೊಟ್ಟ ಮೇಲೆ ಭಾಷಣವನ್ನು ಓದಿ ಸಭಿಕರಿಗೆ ಸುಸ್ವಾಗತವನ್ನು ಬಯಸಿ ಶ್ರೀಮಾನ್ ಎಲ್. ಎಸ್. ಕೃಷ್ಣ ಬಿ.ಎ., ಬಿ.ಎಲ್. ರವರನ್ನು ಅಧಿವೇಶನದ ಅಧ್ಯಕ್ಷಸ್ಥಾನಕ್ಕೆ ಸೂಚಿಸಿದರು. ನಂತರ ಅಧ್ಯಕ್ಷರಿಗೆ ಪುಷ್ಪಹಾರವನ್ನು ಹಾಕಲಾಯಿತು.

ಅಧ್ಯಕ್ಷರು ತಮ್ಮ ಅಧ್ಯಕ್ಷ ಭಾಷಣವನ್ನು (ಇಂಗ್ಲಿಷಿನಲ್ಲಿ) ಓದಿದರು. ಇದನ್ನು ಸಂಘದ ಉಪಾಧ್ಯಕ್ಷರಾದ ಮಿ. ಕೊಕ್ಕಲೆಮಾಡ ಕರುಂಬಯ್ಯನವರು ಕನ್ನಡದಲ್ಲಿ ತರ್ಜುಮೆ ಮಾಡಿ ಹೇಳಿದರು. ನಂತರ ಜನರ ಕೋರಿಕೆ ಮೇರೆ ಅಧ್ಯಕ್ಷರು ಅದರ ಸಾರಾಂಶವನ್ನು ಮಲೆಯಾಳ ಭಾಷೆಯಲ್ಲಿ ರಸಭರಿತವಾಗಿ ಹೇಳಿದರು. (ಈ ಭಾಷಣವನ್ನು ಬೇರೊಂದೆಡೆ ಕೊಡಲಾಗಿದೆ.)

ಇದಾದ ಮೇಲೆ ಊಟಕ್ಕಾಗಿ ಸಭೆಯು ಮುಕ್ತಾಯಗೊಂಡು ಪುನಃ ಮಧ್ಯಾಹ್ನ 2 ಗಂಟೆಗೆ ಸೇರಿ ಈ ಕೆಳಗಿನ ಠರಾವುಗಳು ಪಾಸಾದವು. ಸಂಘದ ಅಧ್ಯಕ್ಷರಾಗಿದ್ದ ಮಿ. ಐ. ಬೆಳ್ಳಿಯಪ್ಪನವರು ಸ್ಥಳದಲ್ಲಿಲ್ಲದ ಕಾರಣ ಉಪಾಧ್ಯಕ್ಷರಾದ ಮಿ. ಕೆ. ಸಿ. ಕರುಂಬಯ್ಯನವರು ಸಭಾಧ್ಯಕ್ಷರ ಬಳಿ ಅವರ ಸ್ಥಾನವನ್ನು ವಹಿಸಿದ್ದರು.

1 'ಈ 2-3 ವರ್ಷಗಳಿಂದ 1935 ನೇ ಆಕ್ಟಿನ ಪ್ರಕಾರ ಪ್ರಾಂತೀಯ ಸ್ವಾತಂತ್ರ್ಯ ಸರಕಾರ ಇತರ ಪ್ರಾಂತಗಳಿಗೆ ಕೊಟ್ಟಂತೆ ನಮಗೂ ಕೊಡಬೇಕೆಂದೂ ಮತ್ತು ವರ್ಷಕ್ಕೆ 5 ಲಕ್ಷ ರೂಪಾಯಿಗಳ ವಂತಿಗೆಯನ್ನು ಕೊಡಲೇಬೇಕೆಂದೂ ಸರ್ಕಾರದವರನ್ನು ಕೇಳಿಕೊಂಡು ಬಂದಿದ್ದರೂ ಕೂಡ ಸರ್ಕಾರದವರು ಏನೊಂದೂ ಸಿಗದಿದ್ದ ತಮ್ಮ ದೇಶವನ್ನು ಇತರ ಪ್ರಾಂತಗಳಿಗಿಂತ 30 ವರ್ಷ ಹಿಂದಕ್ಕಿಟ್ಟಿರುವ ಕಾರಣ, ಪೂರ್ಣ ಪ್ರಾಂತೀಯ ಸ್ವಾತಂತ್ರ್ಯ ಸರ್ಕಾರವನ್ನೂ ಮತ್ತು ವರ್ಷಕ್ಕೆ 5 ಲಕ್ಷ ರೂಪಾಯಿ ವಂತಿಗೆಯನ್ನೂ ಕೊಡುವ ವಿಷಯ ಈ ಬರುವ ಡಿಸೆಂಬರು ಕಡೆಯ ಅಂತ್ಯದೊಳಗೆ ಸರ್ಕಾರವು ತೀರ್ಮಾನಿಸಬೇಕೆಂದೂ ಈ ವರೆಗೆ ನಡೆಯುವಂತಹ ಶಿಸ್ತಿನ ಕರವಳಿಯನ್ನು ಕೊಡಲು ಸರ್ಕಾರವು ಜನರನ್ನು ಬಲಾತ್ಕರಿಸಿದೆಂತಾಗುವುದು' ಸೂಚಕರು–ಮಿ. ಮಣವಟ್ಟೀರ ಪೊನ್ನಪ್ಪನವರು. ಅನುಮೋದಕರು–ಮಿ. ನರವಂಡ ಗಣಪತಿಯವರು. ಇದಕ್ಕೆ ಪರವಾಗಿ ಮಿ. ಗೆಣಪ ಬಿದ್ದಂಡ ಬೋಪಯ್ಯನವರು, ಬಿದ್ದಂಡ ಸುಬ್ಬಯ್ಯನವರು ಮತ್ತು ಪುಲಿಯಂಡ ಐಯ್ಯಪ್ಪನವರೂ, ವಿರೋಧವಾಗಿ ಮಿ. ಚಪ್ಪುಡಿರ ಪೂಣಚ್ಚನವರೂ ಮಾತಾಡಿದರು. ಓಟಿಗೆ ಹಾಕಲಾಗಿ ಪರವಾಗಿ 53 ಜನರೂ, ವಿರೋಧವಾಗಿ 25 ಜನರೂ ಓಟು ಕೊಟ್ಟಿದ್ದರಿಂದ ಠರಾವು ಬಹುಮತದಿಂದ ಪಾಸಾಯಿತು.

2. 'ಕಳೆದ ಡಿಸೆಂಬರಿನಲ್ಲಿ ನಡೆದ ಕೌನ್ಸಿಲು ಚುನಾವಣೆಗಳಲ್ಲಿ, ಕಂದಾಯ ಬಾಕಿಗಾಗಿ ಹರಾಜಾಗುವ ಭೂಮಿಯನ್ನು ಕ್ರಯಕ್ಕೆ ಪಡೆಕೊಳ್ಳುವವರು ಯಾರೂ ಇಲ್ಲದಿದ್ದಲ್ಲಿ ಸರ್ಕಾರದವರೇ ಪಡೆಕೊಳ್ಳುವಂತೆ ಅನುಕೂಲಮಾಡಲು ಕೆಲವು ಮೇಸ್ತ್ರಿಗಳನ್ನು ತಿದ್ದುಪಡಿಮಾಡಬೇಕೆಂಬ ಮಸೂದೆಗೆ ಸಹಾಯಕೊಟ್ಟು ಅದನ್ನು ಪಾಸುಮಾಡಲು ಅನುಕೂಲಮಾಡಿಕೊಟ್ಟ ಮೊದಲು ಕೌನ್ಸಿಲಿನ ಆಯ್ಕೆಯ ಮೆಂಬರುಗಳ ಮತ್ತು ನಾಮಕರಣಗೊಂಡ ಜಮ್ಮ ಮೆಂಬರರ ವರ್ತನೆಯನ್ನೂ, ಈ ಮಸೂದೆಯನ್ನು ಚರ್ಚೆಗೆತಂದ ಸರ್ಕಾರದ ವರ್ತನೆಯನ್ನೂ ಈ ಸಭೆಯು ಖಂಡಿಸುತ್ತದೆ. ಮತ್ತು ತನ್ನ ಮೆಂಬರುಗಳಿಗೆ ರಾಜಿನಾಮೆ ಕೊಡಬೇಕೆಂದು ಮೋಲಿಸಿದವರನ್ನು ಕೇಳಿಕೊಳ್ಳುತ್ತದೆ." ಸೂಚಕರು–ಬಿದ್ದಂಡ ಸುಬ್ಬಯ್ಯನವರು. ಅನುಮೋದಕರು–ಮಾದೆಯಂಡ ದೇವಯ್ಯನವರು. ಸರ್ವಸಮ್ಮತದಿಂದ ಪಾಸಾಯಿತು.

3. 'ವ್ಯವಸಾಯಗಾರರ ಆರ್ಥಿಕ ಸ್ಥಿತಿಯು ಬಹು ಹದಗೆಟ್ಟು ಹೋಗಿದ್ದ ಕಾರಣ 1937-38 ರ ಕಂದಾಯದ 1/3 ಭಾಗವನ್ನು ಮಾಫಿ ಬಿಡಬೇಕೆಂದು ಕೌನ್ಸಿಲಿನಲ್ಲಿ ಪಾಸಾದ ಠರಾವನ್ನು ಸರಕಾರದವರು ಅಲಕ್ಷ್ಯ ಮಾಡಿರುವುದಕ್ಕಾಗಿ ಈ ಸಭೆಯು ವಿಷಾದಿಸುತ್ತದೆ. ಇನ್ನಾದರೂ ಅದನ್ನು ಜಾರಿಗೆ ತರಬೇಕಲ್ಲದೆ ಇತರ ಪ್ರಾಂತಗಳಲ್ಲಿ ಕಾಂಗ್ರೆಸ್ ಸರ್ಕಾರದವರು ತೀರ್ಮಾನಿಸಿರುವಂತೆ ಪ್ರೊಫೆಸನ್ ಟ್ಯಾಕ್ಸನ್ನು ವಸೂಲುಮಾಡಬಾರದೆಂದು ಈ ಸಭೆಯು ಅಭಿಪ್ರಾಯಪಡುತ್ತದೆ.' ಸೂಚಕರು ಮಿ. ಚೆಪ್ಪುಡಿರ ಪೂಣಚ್ಚನವರು. ಅನುಮೋದಕರು ಮಿ. ಕಾಳೇಂಗಡ ಚಿಣ್ಣಪ್ಪನವರು. ವಿರೋಧವಿಲ್ಲದೆ ಪಾಸಾಯಿತು.

4. 'ಮದರಾಸಿನಲ್ಲಿ ಜಾರಿಗೆ ಬಂದಿರುವ ವ್ಯವಸಾಯಗಾರರ ಋಣ ವಿಮೋಚನಾ ಆಕ್ಟಿನಂತಹದ್ದನ್ನೇ ಇಲ್ಲಿಯೂ ಜಾರಿಗೆ ತರಬೇಕೆಂದು ಈ ಸಭೆಯು ಸೂಚಿಸುತ್ತದೆ.' ಮಿ. ಬಿದ್ದಂಡ ಕಾರ್ಯಪ್ಪನವರು ಸೂಚಿಸಿದರು. ಮಿ. ಅಜ್ಜಮಾಡ ಮಾದಪ್ಪನವರು ಅನುಮೋದಿಸಿದರು. ಏಕಮತದಿಂದ ಪಾಸಾಯಿತು.

5. 'ಕೊಡಗಿನ ಆರ್ಥಿಕ ದುಸ್ಥಿತಿಗೆ ಈ ದೇಶದ ಪೂರ್ವದ ಅವಿಭಕ್ತ ಕುಟುಂಬ ಪದ್ಧತಿಯು ಸಡಿಲವಾದದ್ದೇ ಮುಖ್ಯ ಕಾರಣವಾಗಿರುವುದರಿಂದ ಆ ಪದ್ಧತಿಯನ್ನೆ ಇನ್ನು ಮುಂದಕ್ಕೂ ಜಾರಿಗೆ ತರಬೇಕೇ ವಿನಹ ಈಗ ಜಾರಿಯಲ್ಲಿರುವಂಥಾ ಜೀವನಾಂಶ ಪಾಲನ್ನು ಸರ್ಕಾರವು ಅಂಗೀಕರಿಸಬಾರದೆಂದು ಈ ಸಭೆಯು ಕೇಳಿಕೊಳ್ಳುತ್ತದೆ.' ಇದನ್ನು ಮಿ. ಮಣವಟ್ಟಿರ ಪೊನ್ನಪ್ಪನವರು ಸೂಚಿಸಿದರು. ಮಿ. ಬಿದ್ದಂಡ ತಿಮ್ಮಯ್ಯನವರು ಅನುಮೋದಿಸಿದರು. ವಿರೋಧವಿಲ್ಲದೆ ಪಾಸಾಯಿತು.

6. 'ಕಾಂಗ್ರೆಸ್ಸಿನ ರಚನಾ ಕಾರ್ಯಕ್ರಮವಾದ ಖಾದಿ ಪ್ರಚಾರ, ಗ್ರಾಮೋದ್ಧಾರ, ಅಸ್ಪೃಶ್ಯತೆ ನಿವಾರಣೆ ಮತ್ತು ಹರಿಜನೋದ್ಧಾರಕ್ಕೆ ಸಂಬಂಧಪಟ್ಟ ಕಾರ್ಯಗಳಿಗೆ ದೇಶದ ಜನರು ಮತ್ತು ಹರಿಜನ ಕೊಡವರೂ ಈ ಸಭೆಯು ಕೇಳಿಕೊಳ್ಳುತ್ತದೆ.' ಸೂಚಕರು–ಮಿ. ಕಾಳೇಂಗಡ ಚಿಣ್ಣಪ್ಪನವರು. ಅನುಮೋದಕರು–ಮಿ. ಮಣವಟ್ಟಿರ ಪೊನ್ನಪ್ಪನವರು. ಸರ್ವಸಮ್ಮತದಿಂದ ಪಾಸಾಯಿತು.

7. ಕೊಡಗಿನ ಭವಿಷ್ಯತ್ತಿನ ವಿಚಾರ ಸಭಿಕರ ಅಭಿಪ್ರಾಯವು 1 ನೇ ಠರಾವಿನಲ್ಲಿ ವಿಶದವಾಗಿರುವ ಕಾರಣ, ಅದನ್ನು ಕುರಿತ ಈ ಠರಾವನ್ನು ಮಿ. ಮುಕ್ಕಾಟಿರ ಕರುಂಬಯ್ಯನವರು ವಾಪಾಸು ತೆಗೆದುಕೊಂಡರು.

ಅನಂತರ ಮುಂದಿನ ವರ್ಷದ ಕಾರ್ಯಕಾರಿ ಮಂಡಳಿಯ ಮೆಂಬರುಗಳ ಚುನಾವಣೆಯು ನಡೆಯಿತು. ಸಂಘದ ಪ್ರೆಸಿಡೆಂಟ್ ಪದವಿಗೆ ಮಿ. ಬಿದ್ದಂಡ ಸುಬ್ಬಯ್ಯನವರ ಮತ್ತು ಮಿ. ಪಿ. ಐ. ಬೆಳ್ಳಿಯಪ್ಪನವರ ಹೆಸರುಗಳು ಸೂಚಿಸಲಾಗಿ ಮಿ. ಬೆಳ್ಳಿಯಪ್ಪನವರು ತನ್ನ ಹೆಸರನ್ನು ವಾಪಸು ತೆಗೆದುಕೊಂಡ ಕಾರಣ ಸ್ವೀಕರಿಸಲಾಗಿ ಮಿ. ಬಿದ್ದಂಡ ಯಂ. ಸುಬ್ಬಯ್ಯನವರೂ, ಉಪಾಧ್ಯಕ್ಷರಾಗಿ ಮಿ. ಗೆಣಪ ಚೆಟ್ಟಿಯರ್ ಪೂರ್ವಿಕ, ಮತ್ತು ಕೊಕ್ಕಲೆಮಾಡ ಕರುಂಬಯ್ಯನವರೂ, ಜನರಲ್ ಸೆಕ್ರೆಟರಿಯಾಗಿ ಮಿ. ಐನಂಡ ಕಾರ್ಯಪ್ಪನವರೂ, ಖಜಾಂಚಿಯವರಾಗಿ ಮಿ. ಪುಲಿಯಂಡ ಐಯ್ಯಪ್ಪ ಬಿ. ಎ. ಬಿ. ಎಲ್. ರವರೂ ಚುನಾಯಿತರಾದರು. ಕಮಿಟಿ ಮೆಂಬರುಗಳ ಹೆಸರುಗಳನ್ನು ಬರುವ ವಾರ ಕೊಡಲಾಗುವುದು.

ಸಂಘದ ಬರುವ ವರ್ಷದ ಸಮ್ಮೇಳನವನ್ನು ಭಾಗಮಂಡಲದಲ್ಲಿ ನಡಿಸಬೇಕೆಂದು ಮಿ. ಕೆದಂಬಾಡಿ ಗಣಪತಿಯವರು ಕೇಳಿಕೊಂಡರು.

ಹೊಸ ಅಧ್ಯಕ್ಷರಾದ ಮಿ. ಬಿ. ಎಂ. ಸುಬ್ಬಯ್ಯನವರು ಸಭಾಧ್ಯಕ್ಷರಿಗೂ, ಸ್ವಾಗತ ಕಮಿಟಿಯವರಿಗೂ, ಸ್ವಯಂ ಸೇವಕರಿಗೂ ಮತ್ತು ಶಾಲಾ ಕಟ್ಟಡವನ್ನು ಬಿಟ್ಟುಕೊಟ್ಟ ಕಮಿಷನರವರಿಗೂ ವಂದನೆಗಳನ್ನು ಅರ್ಪಿಸಿದ ಮೇಲೆ ಜಯಘೋಷದಿಂದ ಸಭೆಯು ಸಾಯಂಕಾಲ 5 ಗಂಟೆಗೆ ಮುಕ್ತಾಯವಾಯಿತು.

The Mysore Theatres Limited.

(Incorporated in Mysore State and British India.)

Film Producers, Exhibitors, Distributors and Owners of Touring Talkies, etc., etc.

"District Board Buildings" Bangalore City.

Applications are invited from gentlemen of influence and personality to represent the above company thro'out the Mysore State and COORG and British India, on commission basis or salary or both. Only men of influence and Organising ability need apply with references. Lady applicants are also entertained. For Particulars apply to:—The Organiser for Coorg or to the undersigned.

Organiser's Address:
B. M. Chengappa Esq.,
Organiser for Coorg,
The Mysore Theatres Ltd.,
Virajpet, (Coorg.)

R. N. Row,
Managing Directors,
The Mysore Theatres Ltd.,
"District Board Buildings"
Bangalore City.

(8-4)

ಜಗನ್ಮೋಹನ ಭವನದಿಂದ ವಿದುರಾಶ್ವತ್ಥಕ್ಕೆ

'ವಿಶ್ವಕರ್ಣಾಟಕ'ದಲ್ಲಿ ಪ್ರಕಟವಾದ ಕೆಲವು ಪ್ರಧಾನಲೇಖನಗಳ ಸಂಗ್ರಹ

ಎಲ್ಲರೂ ಅಗತ್ಯವಾಗಿ ಓದಬೇಕಾದ ಪುಸ್ತಕ.

ಸಾಧಾರಣ ಪ್ರತಿ	0—8—0
(ಅಂಚೆ ವೆಚ್ಚ)	0—1—6
ಉತ್ತಮ ಪ್ರತಿ	1—0—0
(ಅಂಚೆ ವೆಚ್ಚ)	0—2—0

ಅಪೇಕ್ಷಿಸುವವರು ಹಣವನ್ನು ಮುಂಗಡವಾಗಿ ಕಳುಹಿಸಬೇಕು. ಪ್ರತಿಗಳನ್ನು ವಿ. ಪಿ. ಮೂಲಕ ಕಳುಹಿಸುವುದಿಲ್ಲ. ಸ್ವಲ್ಪವೇ ಪ್ರತಿಗಳಿರುವುದರಿಂದ 'ಮ್ಯಾನೇಜರ್ ವಿಶ್ವಕರ್ಣಾಟಕ ಕಾರ್ಯಾಲಯ (ಬೆಂಗಳೂರು ನಗರ)'ಕ್ಕೆ ಬರೆದು ತರಿಸಿಕೊಳ್ಳಿ.

ಮ್ಯಾನೇಜರ್,
'ವಿಶ್ವಕರ್ಣಾಟಕ'
ಬೆಂಗಳೂರು ನಗರ.

ವರ್ತಮಾನ ಸಂಗ್ರಹ.

ಒಳದೇಶ.

ಕೊಡಗಿನ ಕೋರ್ಟು ಖಚೇರಿಗಳು ರೀಸೆಸ್ ರಜ ಮುಗಿದು ಈ ತಾ. 1 ರಂದ ತೆರೆಯಲ್ಪಟ್ಟವೆ.

ಸೋಮವಾರಪೇಟೆ ಸ್ಕೂಲ್ ಬಡಾವಣೆಗಾಗಿ ಕಟ್ಟಿರುವ ಚಿನ್ನಬಸಪ್ಪ ಹಾಲ್ ಚೀಫ್ ಕಮಿಷನರರವರಿಂದ ಈ ತಾರೀಕು 6 ನೇ ಸೋಮವಾರ ತೆರೆಯಲ್ಪಡುವವು.

ಕಳೆದ ಸತ್ಯಾಗ್ರಹ ಸಮರದಲ್ಲಿ 5 ತಿಂಗಳು ಕಾರಾಗ್ರಹ ವಾಸಮಾಡಿದ ಶ್ರೀಮತಿ ಮುಚ್ಚಿಯಂಡ ನಾಚಪ್ಪ ಅಮ್ಮವ್ವನವರು ಶಿವಾಧೀನರಾದರೆಂದು ತಿಳಿಯಲು ವಿಷಾದಿಸುತ್ತೇವೆ.

ಇಂಟರ್ ಮೀಡಿಯೇಟ್ ತರಗತಿಯಲ್ಲಿ ಓದುತ್ತಿದ್ದ ಮೂರ್ನಾಡಿನ ದಿವಂಗತ ಬಿದ್ದಂಡ ಗಣಪತಿಯವರ ಪುತ್ರ ಗಣಪತಿಯವರು ಮಡಿಕೇರಿಯಲ್ಲಿ ಮೃತಪಟ್ಟರೆಂದು ತಿಳಿಯಲು ವ್ಯಸನಪಡುತ್ತೇವೆ.

ಮಡಿಕೇರಿ ಚೌಕದಲ್ಲಿರುವ ಸಹಕಾರಿ ಸ್ಟೋರಿಗೆ ತಾ. 28-5-38 ರ ರಾತ್ರೆ ಯಾರೋ ನುಗ್ಗಿ ಸ್ವಲ್ಪ ಹಣ ಕಳವು ಮಾಡಿರುವರಾಗಿಯೂ, ಈ ವಿಚಾರ ಪೋಲೀಸು ತನಿಖೆ ನಡೆಯುತ್ತಿರುವದಾಗಿಯೂ ತಿಳಿಯುತ್ತೇವೆ.

ಮೈಸೂರು ಯೂನಿವರ್ಸಿಟಿ ಮಹಾರಾಜ ಕಾಲೇಜಿನಲ್ಲಿ ವ್ಯಾಸಂಗ ಮಾಡುತ್ತಿದ್ದ ಕುಂಞಾಳಿಯಂಡ ಪಿ. ಮಾದಪ್ಪನವರು ಬಿ. ಎ. ಆನರ್ಸ್ ಪರೀಕ್ಷೆಯಲ್ಲಿ 1, 2 ಮತ್ತು 3 ನೇ ಭಾಗಗಳಲ್ಲಿಯೂ ಉತ್ತೀರ್ಣರಾಗಿರುವರೆಂದು ತಿಳಿಸಲು ಸಂತೋಷಪಡುತ್ತೇವೆ.

ಕೊಡಗು ಜಮೀನ್ದಾರರ ಸಂಘದ 25ನೇ ಸಮ್ಮೇಳನವು ಕಳೆದ ತಾ. 29ರಲ್ಲಿ ನಾಪೋಕ್ಲಿನಲ್ಲಿ ಶ್ರೀ ಎಲ್. ಎಸ್. ಪ್ರಭುರವರ ಅಧ್ಯಕ್ಷತೆಯಲ್ಲಿ ಜರಗಿತು. ಮ. ಬಿದ್ದಂಡ ಸುಬ್ಬಯ್ಯನವರು ಜಮೀನ್ದಾರರ ಸಂಘದ ಮುಂದಿನ 3 ವರ್ಷಗಳ ಪ್ರೆಸಿಡೆಂಟರಾಗಿ ಆರಿಸಲ್ಪಟ್ಟಿರುವರು.

ಕಳೆದ ಮಾರ್ಚ ತಿಂಗಳಲ್ಲಿ ನಡೆದ ಸ್ಕೂಲ್ ಫೈನಲ್ ಪರೀಕ್ಷೆಗೆ ಮಡಿಕೇರಿ ಸೆಂಟ್ರಲ್ ಹೈಸ್ಕೂಲಿನಿಂದ ಒಟ್ಟು 31 ವಿದ್ಯಾರ್ಥಿಗಳಲ್ಲಿ ಮ. ಗಳಾದ (1) ಎಸ್.ಪಿ. ಡಿಸೋಜ, (2) ಐಚೆಟ್ಟಿರ ಪಿ. ಸುಬ್ರಣ್ಣ, (3) ಕೆ. ಕೆ. ನಂಜಪ್ಪ, (4) ಪಿ. ಯಸ್. ಶಿವರಾಯ, (5) ಬಿ. ಯಂ. ಚಿಕ್ಕಸುಬ್ಬಯ್ಯ, (6) ಮನೆಯಪಂಡ ಎ. ಬೆಳ್ಯಪ್ಪ, (7) ಕೆ. ಪಿ. ಅಯ್ಯಪ್ಪ, (8) ಕೆ. ಬಿ. ಚಿನ್ನಪ್ಪ, (9) ಕೊಡಂದೇರ ಯಸ್. ಗಣಪತಿ. (10) ಕೊಕ್ಕಲೆರ ಟಿ. ಕಾಳೈಯ್ಯ (11) ಎಸ್. ಎಸ್. ಕೃಷ್ಣರಾವ್, (12) ಚುಪ್ಪಂಡ ಕೆ. ಮಾದಯ್ಯ, (13) ಎ. ಯನ್. ನಾರಾಯಣ, (14) ಸಿ. ಎಸ್. ರಂಗನಾಥ (15) ಬಿಲ್ಲವರ ಅಣ್ಣಪ್ಪ, (16) ಬಿ. ಡಿ. ಅಪ್ಪಯ್ಯ, (17) ಐಲೀಕಂಡ ಸಿ. ಬೋಪಯ್ಯ, (18) ಯಂ. ಎ. ದೇವದಾಸ್, (19) ಕೋದಂಡ ಯಂ. ಕಾರ್ಯಪ್ಪ, (20) ಕೆ. ಯಸ್. ಕಾರ್ಯಪ್ಪ, (21) ಟಿ. ಯಸ್. ರಾಮಕೃಷ್ಣಶಾಸ್ತ್ರಿಚಾರ್ (22) ಕೇಂಬಡತಂಡ ಯಂ. ಪೊನ್ನಪ್ಪ (23) ಡಿ. ಕಾವೇರ್ಯಮ್ಮ (24) ಮುಂಜಾಂದಿರ ಎ. ಸೋಮಣ್ಣ, (25) ಮೊತಂಡ ಪಿ. ಚೀಯಣ್ಣ ಮತ್ತು (26) ವಿ. ಪಿ. ಮುನಿಸ್ವಾಮಿಯವರುಗಳೂ, ಮಡಿಕೇರಿ ಹುಡುಗಿಯರ ಹೈಸ್ಕೂಲಿನಿಂದ ಒಟ್ಟು 8 ವಿದ್ಯಾರ್ಥಿನಿಯರ ಪೈಕಿ ಶ್ರೀಮತಿಯವರಾದ (1) ಮಿಸ್. ಬಿ. ಶಾಂತಬಾಯಿ, (2) ಕರ್ತಮಾಡ ಬಿ. ಸೀತಮ್ಮ (3) ಕೊರವಂಡ ಯಂ. ಬೋಜಮ್ಮ, (4) ಕಂಬೀರಂಡ ಎಸ್. ಮುತ್ತಮ್ಮ, (5) ಕೇತಿಯಂಡ ಬಿ. ಪೊನ್ನಮ್ಮ, (6) ಬಿಟ್ಟಿಯಂಡ ಯಂ. ಬೋಜಮ್ಮ ಮತ್ತು (7) ಪಾಲಂಡ ಟಿ. ನಂಜಮ್ಮನವರುಗಳೂ ತೇರ್ಗಡೆಯಾಗಿರುವರಾಗಿ ತಿಳಿಯುತ್ತೇವೆ. ಇವರಿಗೆಲ್ಲಾ ನಮ್ಮ ಅಭಿನಂದನೆಗಳಿವೆ.

ಹಿಂದೂ ದೇಶ.

ದುಡುಕರು ಮಾಂಸವನ್ನು ಹೆಚ್ಚಾಗಿ ತಿನ್ನುವರಾದುದರಿಂದ ಇಂಡಿಯಾದಲ್ಲಿ ಕುಡಿತದ ವರ್ಗದಲ್ಲಿ ಕಾಮಾಟಿಗಳ ಸಂಖ್ಯೆಯು ಹೆಚ್ಚುವದೆಂದು ಮ. ಗಾಂಧಿಯವರು ಅಭಿಪ್ರಾಯಪಟ್ಟಿರುವರು.

ಕಲ್ಕತ್ತೆಯಲ್ಲಿ ಮಿಸ್ ಕಲ್ಯಾಣಿದಾಸ್ ಎಂಬ ಕ್ಯಾಂಪ್‌ಬೆಲ್ ಮೆಡಿಕಲ್ ಸ್ಕೂಲಿನ ವಿದ್ಯಾರ್ಥಿನಿ ಅಲ್ಲಿನ 'ಮೃತ್ಯು ಮಂದಿರ'ದಲ್ಲಿ ಒಂದೂ ಭೂತದ ಫೋಟೋ ತೆಗೆದಿರುವರೆಂದು ತಿಳಿದು ಬಂದಿದೆ.

ಮುಬ್ಬೈಯಲ್ಲಿ ಶ್ರೀ. ಹರ್ಡೀಕರರವರಿಂದ ಹೊರಡಿಸಲ್ಪಡುತ್ತಿದ್ದ 'ಪ್ರಜಾಮಿತ' ಪತ್ರಿಕೆಯು ಮೈಸೂರು ದೇಶದಲ್ಲಿ ಹೋರಾಟಗಾರರದೆಂದು ಆಪತ್ತಿ ಮೈಸೂರು ಸರಕಾರದವರು ಮುಟ್ಟುಗೋಲು ಹಾಕಿದ್ದಾರೆ.

ಜಾರ್ಜ್ ಚಕ್ರವರ್ತಿಗಳ ಪಟ್ಟಾಭಿಷೇಕಕ್ಕಾಗಿ ನ್ಯೂ ಡೆಲ್ಲಿಯ ರಾಜಭವನಗಳಲ್ಲಿ ವಿದ್ಯುತ್ ದೀಪಗಳನ್ನು ಹಾಕುವದಕ್ಕಾಗಿ 90 ಸಾವಿರ ರೂಪಾಯಿಗಳನ್ನು ಖರ್ಚು ಮಾಡಿದ್ದಕ್ಕೆ ಡೆಲ್ಲಿ ಅಸೆಂಬ್ಲಿ ಮೆಂಬರರು ಅನೇಕರು ಆಕ್ಷೇಪಿಸಿರುವರು.

ಮಾರ್ಲೆ ಸಂಸ್ಥಾನದ ದರಬಾರಿನವರು, ಅಲ್ಲಿನ ರೈತರಿಂದ ಸಂಸ್ಥಾನಕ್ಕೆ ಸಲ್ಲತಕ್ಕ 5 ಲಕ್ಷ ರೂಪಾಯಿಗಳನ್ನು ಮಾಫಿ ಬಿಟ್ಟಿರುವರಲ್ಲದೆ, ರೈತರಿಗೆ ಕಮ್ಮಿ ಬಡ್ಡಿಯಲ್ಲಿ ಸಾಲ ಕೊಡಲು, 12 ಲಕ್ಷ ರೂಪಾಯಿಗಳನ್ನೂ ಮೀಸಲಿರಿಸಿದ್ದಾರೆ.

'ಪ್ರಾಂತಿಕ ಸ್ವಾತಂತ್ರ್ಯ' ಅಥವಾ ಫೆಡರೇಶನಿನ ಪ್ರಶ್ನೆಗಳೆಂಬ ಯಾವ ದೃಷ್ಟಿಯಿಂದ ನೋಡಿದರೂ, ಭಾಷಾವಾರು ಪ್ರಾಂತಗಳ ನಿರ್ಮಾಣದ ಅಗತ್ಯವಿದೆ. ಫೆಡರೇಶನಿನ ಅನಿಶ್ಚಿತ ವಿದ್ಯಮಾನಗಳನ್ನು ನಾವು ಇನ್ನೂ ಕಾಯುವದಿಲ್ಲ' ಎಂದು ಡಾ. ಪಟ್ಟಾಭಿಯವರು ಪ್ರೆಸ್ ಪ್ರತಿನಿಧಿಗೆ ತಿಳಿಸಿದ್ದಾರೆ.

ಪಂಡಿತ ಜವಾಹಿರ್‌ಲಾಲ್ ನೆಹರೂರವರು ಇದೇ ತಾ. 2ಕ್ಕೆ ಬೊಂಬಾಯಿಯಿಂದ ಯೂರೋಪಿಗೆ ಪ್ರಯಾಣಮಾಡಿದರು. ಮೊದಲು, ಸ್ಪೈನ್ ಸರ್ಕಾರದ ಆಮಂತ್ರಣದಂತೆ, ಸ್ಪೈನಿಗೆ; ಬಳಿಕ ಇಂಗ್ಲೆಂಡು, ಫ್ರಾನ್ಸಿಗೆ; ಅನಂತರ, ಬಹುಶಃ ರಷ್ಯಾ-ಜುಗೋಸ್ಲಾವೋಕಿಯಕ್ಕೆ; ಅಲ್ಲದೆ ಅಮೇರಿಕಕ್ಕೂ ಅವರಿಗೆ ಕರೆಯುಂಟು. ಪಂಡಿತರಿಗೆ ಈ ಪ್ರವಾಸಕ್ಕೆ ಒಂದು ವರ್ಷ ಬೇಕಾಗಬಹುದು.

ಶಾಸನಭಂಗ ಚಳವಳದ ಕಾಲದಲ್ಲಿ ಭಾಗ ವಹಿಸಿದವರೆಂದು ಸಿಂಧ್ ಪ್ರಾಂತದ ಒಬ್ಬ ಜಮೀನ್ದಾರನ ಜಮೀನನ್ನು ಜಪ್ತಿ ಮಾಡಲಾಗಿತ್ತು. ಹಾಗೇ ನೌಕರಿಯ ಒಂದು ಜಾಗೀರಾ ದಾರರಾಜೆಯ ಆಸ್ತಿಸ್ವಾಸ್ತ್ಯಗಳನ್ನೂ ಅದೇ ತಪ್ಪಿಗಾಗಿ ಸರಕಾರವು ತನ್ನ ವಶಪಡಿಸಿಕೊಂಡಿದ್ದಿತು. ಈಗ ಆ ಜಮೀನನ್ನು ಬಿಡುವಂತೆ, ರಾಜೆಯ ಆಸ್ತಿಗಳನ್ನು ಹಿಂದಿರುಗಿಸುವಂತೆ ಸಿಂಧ್ ಸರಕಾರವು ಆಲೋಚಿಸುತ್ತಿದೆ.

ಸಿಂಧ್ ಪ್ರಾಂತ್ಯದ ಮಂತ್ರಿ ಮಂಡಲದ ಆರು ಮಂದಿ ಸದಸ್ಯರು ಕಾಂಗ್ರೆಸಿಗೆ ಸೇರಲು ಸಿದ್ಧರಾಗಿರುವರೆಂದೂ, ಹಿಂದೂ ಸ್ವತಂತ್ರ ಪಕ್ಷದವರೂ ಸೇರಲಿರುವರೆಂದೂ, ಕಾಂಗ್ರೆಸ್ ಮಂಡಲವು ಈಗಿನ ಎಸೆಂಬ್ಲಿಯ ಜೀವಮಾನದೊಳಗೆ ರಚಿಸಲ್ಪಡುವದೆಂದೂ ಈಗಿನ ಕಂದಾಯ ಮಂತ್ರಿಗಳಾದ ಮೌಲ್ವಿ ಪಿರ್ ಇಲಾಹಿ ಬಕ್ಷರವರು ಅಭಿಪ್ರಾಯಪಟ್ಟಿದ್ದಾರೆ.

ಮದ್ರಾಸ್ ನಗರದ ರಸ್ತೆಗಳಲ್ಲೂ ಸಾರ್ವಜನಿಕ ಕ್ಷೇತ್ರಗಳಲ್ಲೂ ಗಾಳಿ ಪಟಗಳನ್ನು ಹಾರಿಸಕೂಡದೆಂದೂ, ಹೀಗೆ ಹಾರಿಸುವುದರಿಂದ ಅನೇಕ ಅಪಾಯಗಳು ಸಂಭವಿಸಿವೆಯೆಂದೂ ಅಲ್ಲಿನ ಕಮಿಶನರು ತಿಳಿಸಿರುತ್ತಾರೆ. ಪಟಗಳನ್ನು ಹಾರಿಸುತ್ತಿದ್ದಲ್ಲಿ ಅವುಗಳನ್ನು ಕಿತ್ತುಕೊಂಡು ನಾಶಪಡಿಸುವಂತೆ ಪೋಲೀಸಿನವರಿಗೆ ಅಪ್ಪಣೆ ಮಾಡಿರುತ್ತಾರೆ. ಮತ್ತೆ ಅಂತವರ ಮೇಲೆ ಮೊಕದ್ದಮೆಗಳನ್ನೂ ಹೂಡಬೇಕೆಂದು ಆಜ್ಞೆ ಮಾಡಿರುತ್ತಾರೆ.

ಸಂಯುಕ್ತ ಪ್ರಾಂತದ ಕಾಂಗ್ರೆಸ್ ಕಮಿಟಿಯು ಮುಂದೆ ಬರತಕ್ಕ ಕೆಲವು ರಜಾವುಗಳಲ್ಲಿ-ಆ ಪ್ರಾಂತದ ಪ್ರತಿಯೊಂದು ಪೋಲೀಸ್ ಸ್ಟೇಷನಿನಲ್ಲಿ. ಆ ಪೋಲೀಸರ ಚಲನವಲನಗಳನ್ನು ನೋಡಿಕೊಳ್ಳಲಿಕ್ಕೆ, ಒಬ್ಬೊಬ್ಬ ನಂಬಿಗಸ್ಥನಾದ ಕಾಂಗ್ರೆಸ್‌ವಾಲನನ್ನು ನೇಮಿಸುವಂತಾಗಬೇಕೆಂದೂ ಒಂದಾಗಿದೆ.

ಪಂಡಿತ ಜವಾಹಿರ್‌ಲಾಲ್ ನೆಹರೂರವರು, ಅಲ್ಲಿನ ಕಾಂಗ್ರೆಸ್ ಆಫೀಸಿನ ಹೊಸ ಕಟ್ಟಡದ ಮೇಲೆ, ಕಾಂಗ್ರೆಸ್ ಧ್ವಜವನ್ನು ನಡುತ್ತಿದ್ದಾಗ ಸುಮಾರು ನೂರು ಮಂದಿ ಮುಸ್ಲೀಂ ಹುಡುಗರು ಕಾಂಗ್ರೆಸ್ ಆಫೀಸಿನ ಎದುರಿಗಿರುವ ಮಾರ್ಕೆಟ ಮೊಳಗೆ ಮುಸ್ಲಿಂ ಲೀಗಿನ ಧ್ವಜಗಳನ್ನು ತಂದು ಅಲ್ಲಿ ಅವನ್ನು ನೆಡಲು ಯತ್ನಿಸಿದ ಕಾರಣ ಅಂಗಡಿಗಾರರಿಗೂ, ಅವರಿಗೂ ಜೋರಾಗಿ ಗಲಭೆಯಾಯಿತೆಂದೂ, ಇದನ್ನು ಕೇಳಿ ಆ ಗಲಾಟೆಯನ್ನು ಶಾಂತಪಡಿಸಬೇಕೆಂದು ಪಂಡಿತರು ಅಲ್ಲಿಗೆ ಬಂದಾಗ ಅವರ ಮೇಲೆ ಕಲ್ಲು ಬಿದ್ದುವೆಂದೂ, ಆದರೆ ಏಟು ತಪ್ಪಿತೆಂದೂ ತಿಳಿದು ಬಂದಿದೆ.

ವಿದೇಶ

ದೇಹದಲ್ಲಿ ಸಹಿಸಲಾರದ ನೋವು ಇದ್ದಲ್ಲಿ, ಹೆಂಡದ ಇಂಜಕ್ಷನನ್ನು ಕೊಟ್ಟಲ್ಲಿ ಗುಣವಾಗುವುದೆಂದು ಪಾಶ್ಚಾತ್ಯ ಡಾಕ್ಟರರು ಅಭಿಪ್ರಾಯಪಟ್ಟಿರುವರು.

ಇಟಲಿಯಲ್ಲಿರುವ ವೆಸೂವಿಯಸ್ ಪರ್ವತದ ಶಿಖರದ ಮೇಲೆ ರಾತ್ರೀ ಹಗಲೂ ಹಿಟ್ಲರನ ಹೆಸರು ದೊಡ್ಡ ಅಕ್ಷರಗಳಲ್ಲಿ ಎಲ್ಲರಿಗೂ ಕಾಣುವಂತೆ ಒಂದು ಯಂತ್ರವನ್ನು ನಿರ್ಮಿಸಿರುವರೆಂದು ತಿಳಿಯಬಂದಿದೆ.

ಅಬ್ಸೀನಿಯದ ವೈಸರಾಯಿಯಾಗಿದ್ದ ಮಾರ್ಷಲ್ ಗ್ರಾಜಿಯಾನಿರವರು ಅಬ್ಸೀನಿಯಾ ಸಿಂಹಾಸನವನ್ನು ಇಟಲಿಯ ಮುಸೋಲಿನಿಯವರಿಗೆ ಕಳುಹಿಸಿರುವರು. ಅಬ್ಸೀನಿಯನ್ನರಲ್ಲಿ ಇದು ಬಹಳ ಕ್ರೋಧವನ್ನುಂಟುಮಾಡಿದೆ.

FOR SALE.

Two Gordons coffee pulpers in fair condition each complete with bullock gearing. Some bolts are missing only.

ONE oil cake crusher in fair condition.

ONE D. B. Hammerless ejector 12 bore shot gun by Cogswell and Harison, in canvas coverd case. Excellent order.

Apply to:-
ELIZA COFFEE ESTATE,
Pollibetta P. O.
Coorg.

ಮಾರಾಟಕ್ಕಿದೆ.

ಕೆಲವು ಭಾಗಗಳು ಮಾತ್ರ ಹಾಳಾಗಿರುವ, ಎತ್ತು ಕಟ್ಟುವ ಸಾಮಗ್ರಿಯೊಂದೊಡಗೂಡಿದ 2 ಗಾರ್ಡನರ ಕಾಫಿ ಪಲ್ಪರುಗಳು.

ಒಳ್ಳೆ ಸ್ಥಿತಿಯಲ್ಲಿರುವ ಹಿಂಡಿಯನ್ನು ಪುಡಿ ಮಾಡುವ ಒಂದು ಯಂತ್ರ.

ಹ್ಯಾರಿಸನ್ ಮತ್ತು ಕಾಗ್ಸ್‌ವೆಲ್ ಕಂಪೆನಿಯವರಿಂದ ತಯಾರಿಸಲ್ಪಟ್ಟ ಸುತ್ತಿಗೆ ಇಲ್ಲದ 12 ನೇ ಬೋರಿನ ತೋಟದ ಕೋವಿ. ಕ್ಯಾನ್‌ವಾಸ್ ಪೆಟ್ಟಿಗೆ ಸಮೇತ.

ಎಲಿಜಾ ಕಾಫಿ ತೋಟ,
ಪೊಳ್ಳಿಬೆಟ್ಟ,
ಕೊಡಗು.

WANTED.

Candidates for Telegraph Station Master, Radio and Electric class. Allowance Rs 28. Uniform, passage and quarter free. Service essential. Rules and Entrance form on annas eight. Director, Royal Telegraph and Ry. Duties College. Bombay 14. 8-5.

ಕೊಡಗು

ಜೂನ್ ತಾರೀಕು ೩ನೇ ಶುಕ್ರವಾರ ೧೯೩೮.

ಕೊಡಗು ಜಮೀನ್ದಾರರ ಸಂಘದ ಮಹಾ ಸಭೆ.

ಕೊಡಗು ಜಮೀನ್ದಾರರ ಸಂಘದ 25 ನೇ ವಾರ್ಷಿಕ ಸಮ್ಮೇಳನವು ಕಳೆದ ಮೇ ತಾ. 21 ರಲ್ಲಿ ನಾಪೋಕ್ಲಿನಲ್ಲಿ ನಡೆಯಿತು. ನಮ್ಮ ನೆರೆ ಜಿಲ್ಲೆಯಾದ ಮಲಬಾರಿನ ಒಬ್ಬ ಪ್ರಮುಖ ಕಾಂಗ್ರೆಸು ಕಾರ್ಯಕರ್ತರೂ, ತಲಚೇರಿಯ ಪ್ರಸಿದ್ಧ ವಕೀಲರೂ ಆದ ಶ್ರೀಮಾನ್ ಎಲ್. ಎಸ್. ಪ್ರಭುರವರು ಅಧ್ಯಕ್ಷಸ್ಥಾನವನ್ನು ವಹಿಸಿದ್ದರು. ಅಧ್ಯಕ್ಷರ ಭಾಷಣವೂ ಮತ್ತು ಸಭೆಯ ತೀರ್ಮಾನಗಳೂ ಇನ್ನೊಂದು ಕಡೆ ಕೊಡಲಾಗಿದೆ. ನಾಪೋಕ್ಲಿನಲ್ಲಿ ಈ ಸಂಘದ ವಾರ್ಷಿಕ ಮಹಾ ಸಭೆಯನ್ನು ನಡಿಸಿ ಸುಮಾರು ಹನ್ನೆರಡು ವರ್ಷಗಳಾಗಿದ್ದವು. ಜನರು ಉತ್ಸಾಹಭರಿತರಾಗಿ ನೆರೆದಿದ್ದರು. ಆರ್ಥಿಕ ಮುಗ್ಗಟ್ಟಿನ ಪೆಟ್ಟಿನಿಂದ ಚೇತರಿಸಿಕೊಳ್ಳಲಾರದಿದ್ದರೂ ಕೂಡ ಆ ನಾಡಿನವರು ತಮ್ಮ ಶಕ್ತಿ ಇರುವಷ್ಟು ಉತ್ತಮವಾದ ಸ್ವಾಗತ ಏರ್ಪಾಡುಗಳನ್ನು ಮಾಡಿದ್ದರು. ನೆರೆದವರಿಗೆಲ್ಲಾ ಸಮರ್ಪಕವಾಗಿ ಊಟ ಉಪಚಾರಗಳು ನಡೆದು, ಎಲ್ಲರಿಂಗಿನ ಸ್ವಾಗತ ಏರ್ಪಾಡು ತೃಪ್ತಿಕರವಾಗಿ ಮಾಡಲ್ಪಟ್ಟಿತ್ತು ಎಂಬುವುದರಲ್ಲಿ ಸಂಶಯವೇನೂ ಇಲ್ಲ.

ಸಭೆಯ ಕಾರ್ಯಕಲಾಪಗಳನ್ನು ಅಧ್ಯಕ್ಷರು ಬಹು ಶಿಸ್ತಿನಿಂದ ನಡಿಸಿದ ಕಾರಣ ಸಭೆಯು ಸಾಯಂಕಾಲ 5 ಗಂಟೆಯೊಳಗೆ ಎಲ್ಲರಿಗೂ ಅನುಕೂಲವಾಗುವಂತೆ ಮುಗಿಯಿತು. ಅಧ್ಯಕ್ಷರ ಸಮಾರಂಭದ ಮತ್ತು ಮುಕ್ತಾಯದ ಭಾಷಣಗಳು ಸ್ವಾತಂತ್ರ್ಯ ಹೋರಾಟದ ವಿಚಾರದಲ್ಲಿ ಸಭಿಕರಲ್ಲಿ ಹೊಸ ಹುರುಪನ್ನುಂಟುಮಾಡುವಂಥಾವಾಗಿದ್ದವು. ಸಮುಂದಾಳುತನದ ನಿರೀಕ್ಷಣೆ ಇಲ್ಲದೆ, ಕಳೆದ ಸತ್ಯಾಗ್ರಹ ಸಮರದಲ್ಲಿ, ಅವರ ಸಾಕ್ಷಾತ್ ತಾನೊಬ್ಬ 'ಸಿಪಾಯಿ' ಯಾಗಿ ತನ್ನ ಸರ್ವಸ್ವವನ್ನು ತ್ಯಾಗ ಮಾಡಿ, ಹಲವು ಸಾರಿ ಜೈಲುವಾಸವನ್ನು ಅನುಭವಿಸಿದ ಮತ್ತು ತನ್ನ ಪತ್ನಿಯೂ ಕೂಡ ಕಾರಾಗೃಹವನ್ನು ಸೇರುವ ಸಂದರ್ಭದಲ್ಲಿ ತನಗೆ ವಿಧಿಸಲ್ಪಟ್ಟ ಜುಲುಮಾನೆಗಾಗಿ ತನ್ನ ಮಾಂಗಲ್ಯ ಸೂತ್ರವಾದ 'ತಾಲಿ' ಯನ್ನೂ ಕೂಡ ಅರ್ಪಿಸಿದ ವೀರ ಪತ್ನಿಯ ಪತಿಯಾದ ಪ್ರಸಿದ್ಧ 'ಸಿಪಾಯಿ' ಯ ಭಾಷಣವು ಬೇರೆ ರೀತಿಯದಾಗಿರಲು ಕಾರಣವಿಲ್ಲ. ಅವರ ಭಾಷಣದಲ್ಲಿ ಆದಿಯಿಂದ ಅಂತ್ಯದ ವರೆಗೂ ಸ್ವಾತಂತ್ರ್ಯಕ್ಕೇ ಪ್ರಾಮುಖ್ಯತೆಯನ್ನು ಕೊಟ್ಟಿರುವರು. ವೀರ ಶಿವಾಜಿಯನ್ನೂ, ಆತನು ಹುಟ್ಟಿದ ಬೆಟ್ಟ ಪ್ರದೇಶವನ್ನೂ ಆರಾಧಿಸುವ 'ಸಿಪಾಯಿ' ಯು ಬೆಟ್ಟ ಸೀಮೆಯನ್ನೂ, ಅಲ್ಲಿಯ ನಿವಾಸಿಗಳನ್ನೂ ಮೆಚ್ಚದೆ ಹೇಗೆ ತಾನೇ ಇರುವನು? ಆದರೆ ಅಲ್ಲಿಯ ಸೌಂದರ್ಯವನ್ನು ಅವರು ಅಲ್ಲಿರುವ ಸ್ವಾತಂತ್ರ್ಯದಿಂದಲೇ ಅಳೆಯುವರು. ಈ ದೃಷ್ಟಿಯಿಂದ ಕೊಡಗು ಪ್ರಕೃತಿಯ ಸೌಂದರ್ಯದಿಂದ ತುಂಬಿದ್ದರೂ ಕೂಡ ಗುಲಾಮಗಿರಿಯಲ್ಲಿರುವುದರಿಂದ ಅವರಿಗೆ ಅಸಹ್ಯವಾಗಿ ಕಾಣುತ್ತದೆ. ಇದು ನಿಜವಾದ ಸ್ವಾತಂತ್ರ್ಯಪ್ರಿಯರ ಭಾವನೆಯಾಗಿದೆ. ಕೊಡಗಿನ ಭವಿಷ್ಯತ್ತನ್ನು ಕುರಿತು ಹೇಳುವಾಗಲೂ ಕೂಡ ಅವರು ಸ್ವಾತಂತ್ರ್ಯದ ದೃಷ್ಟಿಯಿಂದಲೇ ತಮ್ಮ ಅಭಿಪ್ರಾಯವನ್ನು ಸೂಚಿಸಿರುವರು. ಬ್ರಿಟಿಷ್ ಇಂಡಿಯಾದ ಬೇರೆ ಪ್ರಾಂತ್ಯಗಳನ್ನು ಸ್ವಾತಂತ್ರ್ಯ ಪಡೆಯಲು ಇಲ್ಲಿಯವರು ತಯಾರಿದ್ದರೆ ಪ್ರತ್ಯೇಕವಿರಬಹುದೆಂತಲೂ, ಇಲ್ಲವಾದರೆ ಕೂಡಲೇ ಬ್ರಿಟಿಷ್ ಇಂಡಿಯಾದ ಯಾವ ಪ್ರಾಂತ್ಯಕ್ಕಾದರೂ ಸೇರಬೇಕಾಗುವದೆಂತಲೂ, ಹೇಗೂ ಇಮ್ಮಡಿ ಗುಲಾಮಗಿರಿಯ ಆಶ್ರಿತ ರಾಜರ ಸಂಸ್ಥಾನಕ್ಕೆ ಎಂದಿಗೂ ಸೇರಬಾರದೆಂತಲೂ ತಮ್ಮ ಅಭಿಪ್ರಾಯವನ್ನು ಸ್ಪಷ್ಟ ಪಡಿಸಿದರು. ಜಾತಿ, ಮತ, ಭಾಷೆ, ಸಂಪ್ರದಾಯ ಮುಂತಾದವುಗಳು ಸ್ವಾತಂತ್ರ್ಯಹೋರಾಟದಲ್ಲಿ ಅಡ್ಡಿ ಬರುವ ಕಾರಣ ಅವುಗಳನ್ನೆಲ್ಲಾ ತೊಡೆದು ಹಾಕಿ, ಎಲ್ಲವನ್ನೂ ಸ್ವಾತಂತ್ರ್ಯದ ವೇದಿಕೆಯಲ್ಲಿ ಬಲಿದಾನ ಕೊಟ್ಟು, ಭಾರತೀಯರೆಲ್ಲರೂ ಒಗ್ಗಟ್ಟಾಗಿ ಮಾತೃ ಭೂಮಿಯ ಗುಲಾಮಗಿರಿಯನ್ನು ಹೋಗಲಾಡಿಸಲು ಸೊಂಟಕಟ್ಟಬೇಕೆಂದು ನೆರೆದಿದ್ದವರಲ್ಲಿ ಹುರಿದುಂಬಿಸಿದರು. ಕೊಡಗು ಬೆಟ್ಟ ಪ್ರದೇಶವಾದರೂ ಸ್ವಾತಂತ್ರ್ಯ ವಿಚಾರದಲ್ಲಿ ಬಹು ಹಿಂದೆ ಬಿದ್ದಿರುವ ಇಲ್ಲಿಯ ನಿವಾಸಿಗಳು ಈ ಧೀರ 'ಸಿಪಾಯಿ' ಯ ವೀರ ವಾಣಿಯನ್ನು ಕೇಳಿ ಇನ್ನಾದರೂ ತಮ್ಮ ದೇಶದ ಸ್ಥಿತಿಯ ವಿಚಾರದಲ್ಲಿ ಕೂಡಲೇ ಎಚ್ಚರಗೊಳ್ಳುವರಾಗಿ ಆಶಿಸುತ್ತೇವೆ.

ಈ ಸಾರಿಯ ಸಮ್ಮೇಳನದಲ್ಲಿ ಬರೇ ಆರು ಗೊತ್ತುವಳಿಗಳು ಮಾತ್ರ ಪಾಸಾದವು. ಅವುಗಳಲ್ಲಿ ರಾಜಕೀಯ ಸುಧಾರಣೆಯನ್ನು ಕುರಿತದ್ದೇ ಮುಖ್ಯವಾದದ್ದು. ಇಡೀ ಹಿಂದೂಸ್ಥಾನಕ್ಕೆ ಸಂಪೂರ್ಣ ಸ್ವಾತಂತ್ರ್ಯವು ಹೇಗೋ, ಹಾಗೆಯೇ ಪ್ರಾಂತ್ಯಗಳಿಗೆ ಪೂರ್ಣ ಪ್ರಾಂತಿಕ ಸ್ವಾತಂತ್ರ್ಯ ಸರ್ಕಾರವು ಈಗಿನ ಮುಖ್ಯಗುರಿಯಾಗಿದೆ. ಆದ್ದರಿಂದ ಪ್ರಥಮ ದರ್ಬಾರಿನಲ್ಲಿಯೇ ಪೂರ್ಣ ಪ್ರಾಂತಿಕ ಸ್ವಾತಂತ್ರ್ಯ ಸರ್ಕಾರವನ್ನೂ ಮತ್ತು ವರ್ಷಕ್ಕೆ ಐದು ಲಕ್ಷ ರೂಪಾಯಿ ವಂತಿಗೆಯನ್ನೂ ಕೂಡಲೇ ಕೊಡಬೇಕೆಂದು ಕೇಳಿದ್ದಾಗಿದೆ. ಈ ಸಂಘವು ಇತ್ತೀಚೆಗೆ ಕೆಲವು ವರ್ಷಗಳಿಂದ ಈ ತರಹದ ಠರಾವನ್ನೇ ಪಾಸು ಮಾಡುತ್ತಾ ಬಂದಿದೆ. ಆದರೆ ಈ ಸಾರಿಯ ದರ್ಬಾರಿನಲ್ಲಿ ಒಂದು ವಿಶೇಷವಿದೆ. ಬರುವ ಡಿಸೆಂಬರ್ ತಿಂಗಳೊಳಗೆ ಈ ಸುಧಾರಣೆಗಳು ಕೊಡಲ್ಪಡದಿದ್ದರೆ, ಇಷ್ಟು ವರ್ಷಗಳ ವರೆಗೆ ನಡಿಸದೆ ಇದ್ದಂಥಾ ತೀವ್ರವಾದ ಚಳವಳನ್ನು ನಡಿಸುವಂತೆ ಸರ್ಕಾರದವರೇ ಜನರನ್ನು ಬಲತ್ಕರಿಸಿದಂತಾಗುವುದೆಂದು ಸೂಚಿಸಲಾಗಿದೆ. ಸರ್ಕಾರದ ವರ್ತನೆಯಿಂದ ಜನರು ಬೇಸತ್ತು ಅಸಮಾಧಾನಗೊಂಡಿರುವ ಈ ಕಾಲದಲ್ಲಿ ಸರ್ಕಾರದವರು ಇದು ಬರೇ ಬೆದರಿಕೆಯ ಮಾತೆಂದು ಅಲಕ್ಷ್ಯ ಮಾಡುವುದು ಉಚಿತವಲ್ಲ. ಸುತ್ತಮುತ್ತಲು ರಾಜಕೀಯ ವಾತಾವರಣವು ಬಹುಮಟ್ಟಿಗೆ ಬದಲಾವಣೆ ಹೊಂದಿದೆ. ಇಲ್ಲಿಯೂ ಬದಲಾವಣೆ ಹೊಂದದೆ ಇರಬಾರದು. ಜನರ ತಾಳ್ಮೆಯನ್ನು ಇನ್ನೂ ಅಳೆಯುತ್ತಿರುವುದು ನ್ಯಾಯವೂ ಅಲ್ಲ; ಬುದ್ಧಿವಂತಿಕೆಯೂ ಅಲ್ಲ. ಇತ್ತ ಕಡೆ ಸಂಘದವರು, ಅಧ್ಯಕ್ಷರು ತಮ್ಮ ಮುಕ್ತಾಯ ಭಾಷಣದಲ್ಲಿ ಹೇಳಿದಂತೆ, ಠರಾವನ್ನು ಪಾಸು ಮಾಡಿದ ಮಾತ್ರಕ್ಕೆ ತಮ್ಮ ಕೆಲಸ ಮುಗಿಯಿತೆಂದು ತಿಳಕೊಳ್ಳಬಾರದು. ಅವನ್ನು ಕಾರ್ಯತಃ ಜಾರಿಗೆ ತರಲು ಬೇಕಾದ ತಯಾರಿಯನ್ನು ಮಾಡಲು ಕೂಡಲೆ ಪ್ರಾರಂಭಿಸಬೇಕು. ಬರೇ ಭಾಷಣಗಳ ಮತ್ತು ಠರಾವುಗಳ ಕಾಲವು ಹಿಂದಾಯಿತು. ಇದೀಗ ಎಲ್ಲರೂ ಒಗ್ಗಟ್ಟಾಗಿ ಕಾರ್ಯ ನಡಿಸುವ ಕಾಲ. ಇದನ್ನು ದೇಶದವರು ಮರೆಯದಿರಲಿ.

ರೈತರ ಇಂಥಾ ಕಷ್ಟ ಕಾಲದಲ್ಲೂ ಕೂಡ ಸರ್ಕಾರದವರು ಕಂದಾಯದ ಸಲ್ಪ ಭಾಗವನ್ನಾದರೂ ಮಾಫಿ ಬಿಡದ್ದನ್ನು ಖಂಡಿಸಿದ್ದೂ, ವ್ಯವಸಾಯಗಾರರ ಸಾಲ ನಿವಾರಣೆಗೆ ತಕ್ಕ ಕಾನೂನು ಮಾಡಬೇಕೆಂದೂ, ಅವಿಭಕ್ತ ಕುಟುಂಬ ಪದ್ಧತಿಯನ್ನು ಜಾರಿಗೆ ತರಬೇಕೆಂದೂ ಕೇಳಿಕೊಂಡದ್ದು ಜಮೀನ್ದಾರರ ಸಂಘದವರ ಕರ್ತವ್ಯವಾಗಿದೆ. ಕಾಂಗ್ರೆಸ್ಸಿನ ರಚನಾತ್ಮಕ ಕಾರ್ಯಕ್ರಮವಾದ ಖಾದಿ ಪ್ರಚಾರ, ನಿಷಾನಿಷೇಧ, ಅಸ್ಪೃಶ್ಯತಾ ನಿವಾರಣೆ ಮೊದಲಾದವುಗಳಿಗೆ ಈ ಮೊದಲಿಗಿಂತಲೂ ಹೆಚ್ಚಾಗಿ ಪ್ರೋತ್ಸಾಹವನ್ನೀಯಬೇಕಾಗಿ ದೇಶೀಯರಲ್ಲಿ ಮಾಡಿದ ವಿನಂತಿಯು ಬಹು ಮುಖ್ಯವಾದದ್ದಾಗಿದೆ. ದೇಶದ ಎಲ್ಲಾ ವಿಧದ ಏಳಿಗೆಗೆ ಅವಶ್ಯವಾದ ಮೇಲಿನ ಕಾರ್ಯಗಳನ್ನು ದೇಶೀಯರು ಮನಪೂರ್ತಿಯಾದ ಒತ್ತಾಸೆಯನ್ನೀಯುವರಾಗಿ ನಂಬುತ್ತೇವೆ.

ಅಧ್ಯಕ್ಷರ ಭಾಷಣ.

(ಹಿನೇ ಪುಟದಿಂದ ಸಾಗಿದ್ದು.)

ಸಾನುಕೂಲತೆ ಉಂಟು. ಎಲ್ಲೆಲ್ಲೂ ಪ್ರಜೆಗಳು ಪ್ರಜೆಗಳಿಂದಲೇ ಆಳಲ್ಪಡಬೇಕೆಂದು ಕೂಗಿರುವರು. ಬ್ರಿಟಿಷ್ ಇಂಡಿಯದಲ್ಲಿ ಒಬ್ಬ ಯಜಮಾನನಿರುವನು. ಆದರೆ ಆಶ್ರಿತ ಸಂಸ್ಥಾನದಲ್ಲಿ ಇಬ್ಬರಾಗುವರು. ದೇಶೀಯ ಅರಸರು, ಅವರ ಮೇಲೆ ಬ್ರಿಟಿಷ್ ಸಾಮ್ರಾಜ್ಯಶಾಹಿ. ದೇಶೀಯ ಅರಸರು ಒಳ್ಳೆಯವರಾಗಿರಬಹುದು. ಆದರೆ ರಾಜನಿಗೂ ಪ್ರಜೆಗಳಿಗೂ ಅಲ್ಲಿ ಸಂಬಂಧವಿಲ್ಲ. ಅಲ್ಲಿಯ ಆಳಿಕೆ ಮಾತ್ರ ಪ್ರಜೆಗಳಿಗೆ ಅನ್ವಯಿಸುತ್ತದೆ. ಆದರೆ ಮೈಸೂರಿನ ವಿಚಾರದಲ್ಲಿ ಇಂದು ನಮಗೆ ಇನ್ನೂ ವಿಚಿತ್ರವಾಗಿ ತೋರುತ್ತಿದೆ. ದೇಶೀಯ ರಾಜರಿಂದಲೇ ಆಳಲ್ಪಟ್ಟ ಸಂಸ್ಥಾನದ ಸರಕಾರವು ನಿರಾಯುಧರಾದ ಜನರ ಮೇಲೆ ಗುಂಡು ಹಾರಿಸುವಷ್ಟು ಕಠಿಣತೆಯನ್ನು ತಾಳಿತು. ಬ್ರಿಟಿಷ್ ಇಂಡಿಯಾವೇ ದಯಾನಂತರಹರಿಗೆ ಪ್ರೋತ್ಸಾಹ ಕೊಡುವದೆಂದು ತಿಳಿದಿದ್ದೆನು. ಆದರೆ ಆ ಡಯರನು ಸಮುದ್ರ ದಾಟಿ ಪ್ರಯಾಣ ಮಾಡಿ ನೆಪ್ಪೋ ವರ್ಷಗಳಾದರೂ ದೇಶದ ಮಧ್ಯದಲ್ಲಿರುವ ಒಂದು ಪ್ರಾಂತ, ಈ ವರೆಗೆ ಮಾದರಿ ಪ್ರಾಂತವೆಂದು ಹೆಸರುಗೊಂಡು ಈಗ ಅನೇಕ ಡಯರುಗಳನ್ನು ಹಿಂದೆ ಹಾಕಿತು. ಪರದೇಶೀಯನೊಬ್ಬನು ಈ ಕೃತ್ಯಮಾಡಿದ್ದರೆ ಸಹಿಸಬಹುದಿತ್ತು. ನಮ್ಮ ದೇಶೀಯರಿಂದ ಅದು ನಡೆಯಿತೆಂದರೆ ಅದು ಸಹಿಸಲಸಾಧ್ಯವಾದದ್ದೂ, ಕ್ಷಮಿಸಲಾಗದ್ದೂ ಆಗಿದೆ. ಆದ್ದರಿಂದ ಎಚ್ಚರಿಕೆ ತೆಗೆದುಕೊಳ್ಳಿ. ಮುರಿಯುವ ಹಿಡಿನಿಂದ ಬೆಂಕಿಗೆ ಹಾರಬೇಡಿರಿ. ರಾಜಕೀಯ ದೃಷ್ಟಿಯಿಂದ ನೋಡಿದರೆ ಆಶ್ರಿತ ಸಂಸ್ಥಾನವೊಂದಿಗೆ ಏಕೀಕರಿಸಿದರೆ ತೊಂದರೆ ಬಂದೀತು. ಏಕೀಕರಣದವರಲ್ಲಿ ಕೆಲವರಿಗೂ ನನಗೂ ಭಿನ್ನಾಭಿಪ್ರಾಯ ಬರಬಹುದು. ಆದರೆ ಮನುಷ್ಯನು ತನ್ನ ಮತವನ್ನು ತಿಳಿಸುವಾಗ ಪ್ರಮಾಣಿಕತೆಯಿಂದಿರಬೇಕು.

ಇನ್ನೊಂದು ದೃಷ್ಟಿಯಿಂದ ಇದೇ ಪ್ರಶ್ನೆಯನ್ನು ನೋಡಿದರೆ ಬ್ರಿಟಿಷ್ ಭಾರತವು ಸ್ವಾತಂತ್ರ್ಯವನ್ನು ಸಂಪಾದಿಸಿವಷ್ಟಕ್ಕೆ ಆವರ ಯುದ್ಧ ಮುಗಿಯಲಿಲ್ಲ. ಇಡೀ ಭಾರತವೇ ಸ್ವತಂತ್ರವಾಗಬೇಕು. ಆದರಿಂದ ನಾನು ಬ್ರಿಟಿಷ್ ಇಂಡಿಯಾದ ಒಂದು ಪ್ರಾಂತಕ್ಕೆ ಸೇರಿಕೊಳ್ಳುವದು ಹಿತವೆಂದು ಹೇಳುತ್ತೇನೆ. ಬ್ರಿಟಿಷ್ ಇಂಡಿಯಾದಲ್ಲಿ ನೀವು ಯಾವ ಪ್ರಾಂತವನ್ನು ಸೇರಿದರೂ ನನಗೆ ಚಿಂತೆ ಇಲ್ಲ. ನಿಮಗೆ ಯಾವುದು ಅನುಕೂಲ ಮತ್ತು ಹಿತವೋ ಅದನ್ನು ಸೇರಿರಿ. ಮದ್ರಾಸಿಗೆ ಸೇರಿದರೂ ಬೊಂಬಾಯಿಗೆ ಸೇರಿದರೂ ಅಲ್ಲಿ ಎಲ್ಲಿ ಇದ್ದರೂ ಮಾತೃಭೂಮಿಯ ಬಂಧವಿಮೋಚನೆಗೆ ಹೋರಾಡಲು ನನ್ನ ಸಹಸಿಪಾಯಿಗಳಾಗುವಿರಿ.

ಭಾಷೆ ಮತ್ತು ಸಂಪ್ರದಾಯ ಮೊದಲಾದ ಈ ಅನುಕೂಲತೆಗಳ ವಿಷಯಗಳಲ್ಲಿ ನಾನೇನೂ ಹೇಳಲಿಚ್ಛಿಸುವುದಿಲ್ಲ. ಜಾತಿ ಮತ,ಸಂಪ್ರದಾಯ,ಭಾಷೆ ಇವುಗಳ ವಿಚಾರ ಹೆಚ್ಚಿಸಿದಷ್ಟು ನಮ್ಮ ಧ್ಯೇಯವಾದ ಸ್ವಾತಂತ್ರ್ಯವು ದೂರಬೀಳಿಯುತ್ತೆಂದರೆ ನನ್ನನ್ನು ಹುಚ್ಚನೆಂದೆನ್ನಬಹುದೆಂದು ಹೆದರುತ್ತೇನೆ. ಮೋಕ್ಷವು ಹರಿಗತವಾಗಬೇಕಾದರೆ ಯಾವ ರೀತಿ ಒಬ್ಬನು ಸಾಧನ ಮಾಡಬೇಕೋ ಹಾಗೆಯೇ ಇದಕ್ಕೂ ಮಾಡಬೇಕಾಗಿದೆ.

ನೀವು ಇಚ್ಛಿಪಟ್ಟದ್ದಕ್ಕಿಂತ ಹೆಚ್ಚು ಸಮಯ ತೆಗೆದುಕೊಂಡೆನೆಂದು ಹೆದರುತ್ತೇನೆ. ನಿಮ್ಮ ದಯೆಗಾಗಿ ನಿಮ್ಮನ್ನು ವಂದಿಸುವವನಿದ್ದೇನೆ. ಇಂದಿನ ಕಾರ್ಯಕಲಾಪಗಳು ಯಶಸ್ವಿಯಾಗಿ ಜರಗುವಂತೆ ನೀವು ಸಹಕರಿಸುವಿರಾಗಿ ನಂಬುತ್ತೇನೆ.

ು ಹೋರಾಡುತ್ತಿರುವವರ ರಂಗಸ್ಥಳಕ್ಕೆ ಮ್ಮನ್ನು ಕರೆಸಿದೆ. ಈ ರಂಗಸ್ಥಳಕ್ಕೆ ನೀವು ಕಾಲಿಟ್ಟಮೇಲೆ ನೀವು ನಿಮ್ಮ ಬೇರೆ ಂಪ್ರದಾಯದಂತೆ ಒಂದು ಕಾಲದಲ್ಲಿ ಮೂವ ಭೂಮಿಯು ಜೀವಕ್ಕಿಂತಲೂ ಸ್ವಾತಂತ್ರ್ಯವನ್ನು ಮೇಲೆಂದು ಭಾವಿಸಿದ ಗಂಡಸರನ್ನೂ, ಹೆಂಗಸರನ್ನೂ ತವರಿಸಿತ್ತೋ ಂಥಾ ಭೂಮಿಯ ಮಕ್ಕಳೆಂಬುದನ್ನು ರ್ಥಮಾಡಿಕೊಳ್ಳಿರಿ.

ಬೇರೆ ಪ್ರಾಂತಗಳಲ್ಲಿ ನಡೆಯುತ್ತಿರು ವಿಚಾರಗಳನ್ನು ಹೇಳುತ್ತಾ ನಿಮ್ಮ ಸಮಯವನ್ನು ಕಳೆಯಲು ನಾನು ಇಚ್ಛಿಸುವುದಿಲ್ಲ. ನಿಮಗೆ ಗೊತ್ತಿರುವಂತೆ ನಕೀಯರ ಸೊಗದ ಭಾರವನ್ನು ಒಂದು ತಮಾನ ಹೊತ್ತ ಮೇಲೆ ಪೀಡಿತ ಕೆಲವು ಅಭಿಮಾನಿಗಳು ಸ್ವಾತಂತ್ರ್ಯಕ್ಕೋಸ್ಕರ ಚಳವಳಿಗಳನ್ನು 50 ವರ್ಷಗಳಿಗೆ ಹಿಂದೆ ಹೂಡಿದರು. ಮೊದಲು ಅದು ಅರ್ಜಿ ಕೊಡುವ ಇಲ್ಲವೇ ಅರ್ಜಿ ಬರೆದು ಕಳುವ ಒಂದು ಸಂಸ್ಥೆಯಾಗಿದ್ದು ಈಗ ಮೋಘ ಧ್ಯೇಯಗಳನ್ನೊಳಗೊಂಡದಾ ಅಭಿವೃದ್ಧಿ ಹೊಂದಿದೆ. ಇಂದು ನಾವು ಆ ಸ್ಥಿತಿಯನ್ನು ದಾಟಿ ಕೆಲವು ಸಮಯದ ವಿಪ್ಲವ ಚಳವಳವನಂತರ ಅದನ್ನು ಈಗ ಸತ್ಯಕ್ಕೆ ಸಿಲ್ಲಿಸಿರುವೆವು. ಯುದ್ಧವು ಮುಗಿದಿಲ್ಲ. ಇದು ಯೋಚನೆಯಲ್ಲಿರಲ್ಲಿ. ಯುದ್ಧ ಕ್ಕಾಗಿ ಪುನರ್ರಚನೆ ಮಾಡುತ್ತಾ ಮೊದಲಿನ ಯುದ್ಧಕ್ಕಿಂತಲೂ ಘೋರವಾದ, ದೈನೇಚ್ಛೆ ಇದ್ದರೆ ಅಂತ್ಯದ ಯುದ್ಧವಾಗಿ ಪರಿಣಮಿಸುವಂಥಾ ಒಂದು ಯುದ್ಧಕ್ಕೆ ತಯಾರಾಗುತ್ತಿದ್ದೇವೆ. ಸತ್ಯ ಅಹಿಂಸೆಯೆಂಬ ಖಡ್ಗದಿಂದ ನಾವು ನಿರಂಕುಶ ಅಧಿಕಾರ, ಸ್ವಾರ್ಥಪರ ಮತ್ತು ಬಲಾತ್ಕಾರವನ್ನು ಸಂಪೂರ್ಣ ನಿರ್ಮೂಲ ಮಾಡಲು ಪಣ ತೊಟ್ಟಿದ್ದೇವೆ.

ಆದುದರಿಂದ ಜಮೀನ್ದಾರರ ಸಂಘದ ಡೆಪ್ಯುಟೇಷನವರು ಜಾಗದ ಪರಿಶೀಲನೆಯ ಮೇಲೆ ನಿರ್ಬಂಧವಾಗಿ ಪರಿಣಮಿಸುವ ನಿಬಂಧನೆಗಳನ್ನು ತೆಗೆದು ಹಾಕಬೇಕೆಂದು ಸೂಚಿಸಿರುವದು ನ್ಯಾಯವಾಗಿದೆ. ಗಂಧದ ಬೆಲೆಯನ್ನು ಕೆಲಸದ ಮೇರೆ ನಿರ್ಧರಿಸುವುದರಿಂದ, ಕೆಲಸದ ಮೇರೆಯೇ ಬೋನಸ್ಸನ್ನು ಕೊಡುವುದು ಯೋಗ್ಯವಾಗಿದೆ. ರಿಜರ್ವ್ಸ್ ಜಾಗದ ಜನರಿಗೆ ಮರದ ಬೆಲೆಯ ಶೇಕಡ 75 ವರ್ಷ ಕೊಡುವುದು ಕಡಿಮೆ ಮೇರೆಯಾಗಿದೆ. ಈ ವಿಚಾರದಲ್ಲಿ ರಿಜರ್ವ್ಸ್ ಮತ್ತು ಅನ್‌ರಿಜರ್ವ್ಸ್ ಜಾಗಗಳ ಮಾಲೀಕರುಗಳಿಗೆ ಬೇರೆ ಬೇರೆ ನಿಬಂಧನೆಗಳನ್ನು ಮಾಡುವುದರಲ್ಲಿ ಅರ್ಥವಿಲ್ಲ. 50—60 ವರ್ಷಗಳ ವರೆಗೆ ಎಚ್ಚರಿಕೆ ತೆಗೆದುಕೊಳ್ಳಬೇಕಾದ ಗಂಧದ ಮರದ ಬೆಲೆಯಲ್ಲಿ ಶೇಕಡ 60 ರಷ್ಟಾದರೂ ಜಾಗದ ಮಾಲೀಕರಿಗೆ ಕೊಡದೆ ಹೋದರೆ ಅವರಿಗೆ ಸಾಕಷ್ಟು ಉತ್ತೇಜನ ಕೊಟ್ಟಂತಾಗುವುದಿಲ್ಲ. ಸರ್ಕಾರದವರು ಈ ನಿಬಂಧನೆಗಳನ್ನು ಒಡನೆ ಜಾರಿಗೆ ತರಬೇಕು; ಹಾಗೆ ಜಾರಿಗೆ ತಂದ ಕೂಡಲೇ ರೈತರ ಜಾಗದಲ್ಲಿರುವ ಎಲ್ಲಾ ಮರಗಳಿಗೂ ಬೋನಸು ಕೊಡಬೇಕಷ್ಟೆ. ಸಣ್ಣ ಮರಗಳನ್ನು ತೆಗೆಯುವುದು ಅನ್ಯಾಯವಾದ ನಿಯಮ. ಇಲ್ಲವಾದರೆ ಈ ಎಂಟನ ಜನರಿಗೆ ಉತ್ಸಾಹವನ್ನು ಕಡಿಮೆ ಉಪಯೋಗಿಸಿದಂತಾಗುವುದು. ಇದು ಎಂದೂ ನ್ಯಾಯವಲ್ಲ. ಸರ್ಕಾರದವರು ರೈತರ ಜಾಗದಿಂದ ತೆಗೆದು ಕೊಂಡು ಹೋಗುವ ಮರಗಳಿಗೆಲ್ಲಾ ಬೋನಸು ಕೊಡಬೇಕೆನ್ನುವುದರಲ್ಲಿ ಅನ್ಯಾಯವೇನೂ ಇಲ್ಲ. ಜಮೀನ್ದಾರರ ಸಂಘದ ಡೆಪ್ಯುಟೇಷನವರು ಸೂಚಿಸಿರುವ ತಿದ್ದುಪಡಿಗಳು ರೈತರ ಹಿತದ ದೃಷ್ಟಿಯಿಂದ ತೃಪ್ತಿಕರವಾಗಿವೆ. ಆದ್ದರಿಂದಲೇ ಈಗಾಗಲೇ ಹಲವು ಕಡೆ ಪಬ್ಲಿಕ್ ಮೀಟಿಂಗುಗಳು ನಡೆದು, ಈ ತಿದ್ದುಪಡಿಗಳಿಗೆ ಜನರು ಒಪ್ಪಿಗೆ ಕೊಟ್ಟಿರುವುದಾಗಿದೆ. ಡೆಪ್ಯುಟೇಷನವರು ಚೀಫ್ ಕಮಿಷನರಿಗೆ ಬರೆದಿರುವ ಪತ್ರದಲ್ಲಿ ಹೇಳಿರುವಂತೆ ಜನರ ಕೋರಿಕೆಯ ಮೇರೆ ತಿದ್ದುಪಡಿ ಮಾಡುವುದಕ್ಕಾಗಿ ಒಂದು ಕಮಿಟಿಯನ್ನು ನೇಮಿಸಲು ಇನ್ನೂ ಕಾಲವಾಗಿಲ್ಲ. ಇದು ಆಶ್ಚರ್ಯವೆಂದು ಚೀಫ್ ಕಮಿಷನರಿಗೆ ತೋರಿದರೆ ಜಮೀನ್ದಾರರ ಸಂಘದವರು ಕಳುಹಿಸಿರುವ ಮತ್ತು ದೇಶದ ಜನರು ಒತ್ತಾಸೆಯನ್ನು ಕೊಟ್ಟಿರುವ ತಿದ್ದುಪಡಿಗಳನ್ನಾದರೂ ಅವರು ಸಂಪೂರ್ಣವಾಗಿ ಅಂಗೀಕರಿಸುವರಾಗಿ ಆಶಿಸುತ್ತೇವೆ. ಇಲ್ಲವಾದರೆ ಚೀಫ್ ಕಮಿಷನರವರು ಜನರ ಅಭಿಪ್ರಾಯಗಳನ್ನು ಲಕ್ಷ್ಯಿಸದೆ ತಮ್ಮ ಮನಸ್ಸಿನ ಇಚ್ಛೆ ಅನುಸಾರ ನಡೆಯಿಟ್ಟುಕೊಂಡರೆಂದು ವಿಷಾದವಾಗುವುದು.

ಸಾರ್ವಜನಿಕ ಸಭೆಗಳು.

ಗಂಧದ ಬೋನಸ್ಸನ್ನು ಕುರಿತ ನಿಬಂಧನೆಗಳು.

ಶನಿವಾರಸಂತೆ ಸಭೆ.

ಮಾರ್ಚಿ ತಾರೀಕು 21ರಲ್ಲಿ ಶನಿವಾರಸಂತೆಯಲ್ಲಿ ಗಂಧದ ಮರದ ಬೋನಸು ಸಂಬಂಧದ ಕರಡು ನಿಬಂಧನೆಗಳನ್ನು ಕುರಿತು ಚರ್ಚಿಸಲು ಒಂದು ಪಬ್ಲಿಕ್ ಮೀಟಿಂಗು ನಡೆಯಿತು. ಮಿ. ಬಸವಣ್ಣಯ್ಯನವರು ಅಧ್ಯಕ್ಷರಾಗಿದ್ದರು.

ಮಿ. ಮುಣ್ಣಯ್ಯರು ಕರೆಗಿರಿಡದ ಸಭೆಯಲ್ಲಿ ಈ ಕೆಳಗೆ ಕಂಡಂತೆ ವಿಷಯವನ್ನೆಲ್ಲಾ ವಿವರಿಸಿದರು

1935ನೇ ಜುಲೈ ತಿಂಗಳಿನ ಕೊಡಗು ಗಜೆಟ್ಟಿನಲ್ಲಿ ರೈತರ ಅಸ್ವಾಧೀನ್ದ್ಲಾ ಜಾಗದ ಗಂಧದ ಮರಗಳಿಗೆ ಬೋನಸು ಕೊಡುವ ಬಗ್ಗೆ ಜಾರಿಗೆ ತರಬೇಕೆಂದಿರುವ ಕರಡು ರೂಲ್ಸ್‌ಗಳನ್ನು ಇಂಗ್ಲಿಷ್ ಭಾಷೆಯಲ್ಲಿ ಪ್ರಕಟಪಡಿಸಲಾಗಿತ್ತು. ಇದರ ವಿಷಯದಲ್ಲಿ ದೇಶದ ಅಭಿಪ್ರಾಯವನ್ನು ಸರ್ಕಾರದ ಮುಂದಿಡಲು ಶನಿವಾರಸಂತೆ, ಸೋಮವಾರಪೇಟೆ, ವಿರಾಜಪೇಟೆ ಮತ್ತು ಇನ್ನು ಇತರ ಕಡೆಗಳಲ್ಲಿ ಸಾರ್ವಜನಿಕ ಮೀಟಿಂಗು ನಡೆಯಿತು. ನಂತರ ರೂಲ್ಸ್‌ಗಳನ್ನು ದೇಶಭಾಷೆಯಲ್ಲಿ ಪ್ರಕಟಪಡಿಸಬೇಕೆಂದು ಅಪ್ಪಿಸಿದ್ದನ್ನು ತಿಳಿದಿದ್ದಾಗ ಸೆಪ್ಟೆಂಬರ ತಿಂಗಳ ಗಜೆಟ್ಟಿನಲ್ಲಿ ಕರಡು ರೂಲ್ಸ್‌ಗಳನ್ನು ಕನ್ನಡದಲ್ಲಿ ಪ್ರಕಟಪಡಿಸಿದ್ದಲ್ಲದೆ ಆ ವಿಷಯ ಆಕ್ಷೇಪಣೆ ಯಾ ಸಲಹೆಗಳನ್ನು ಕೊಡಲು 1935ನೇ ಡಿಸೆಂಬರ ಅಂತ್ಯದ ವರೆಗೂ ಅವಧಿಯನ್ನು ಕೊಟ್ಟರು. ಈ ಮಧ್ಯೆ ಕೊಡಗು ಕೌನ್ಸಿಲಿನ ಫೆಬ್ರವರಿ ಅಧಿವೇಶನ ನಡೆಯುವುದಕ್ಕೆ ಸ್ವಲ್ಪ ಮುಂಚೆ ದೇಶದ ಪ್ರತಿನಿಧಿಯಾದ ಕೊಡಗು ಜಮೀನ್ದಾರರ ಸಂಘದ ಕಾರ್ಯಕಾರಿ ಮಂಡಳಿಯವರು ಈ ರೂಲ್ಸ್‌ಗಳ ವಿಷಯದಲ್ಲಿ ಸಲಹೆಗಳನ್ನು ಮುಂದಿಡಲು, ಕೊಡಗು ಕಮಿಷನರ್ ಸಾಹೇಬರಲ್ಲಿಗೆ ಒಂದು ಡೆಪ್ಯುಟೇಷನ್ ಹೋಗಬೇಕೆಂದೂ, ಆ ಡೆಪ್ಯುಟೇಷನಿಗೆ ಸಮಯ ದೊರಕಿಸಿಕೊಡಬೇಕೆಂದೂ ಕಮಿಷನರ್ ಸಾಹೇಬರವರನ್ನು ಕೇಳಿಕೊಂಡರು. ಈ ಕೌನ್ಸಿಲು ಅಧಿವೇಶನವು ಮುಗಿಯುವ ವರೆಗೂ ಸಮಯವಾಗುವುದಿಲ್ಲವೆಂದೂ, ಮತ್ತು ಡೆಪ್ಯುಟೇಷನ್ ಪ್ರಯೋಜನವಿಲ್ಲವೆಂದೂ ಕಾರ್ಯಕಾರಿ ಮಂಡಳಿಯವರಿಗೆ ಜವಾಬು ಸಿಕ್ಕಿತು. ಈಗ ಕೌನ್ಸಿಲ್ ಅಧಿವೇಶನವು ಮುಗಿಯಿತು. ಅದ್ದರಿಂದ ಈಗಲಾದರೂ ಕರಡು ರೂಲ್ಸ್‌ಗಳ ವಿಷಯದಲ್ಲಿ ರೈತರಿಗನುಕೂಲವಾಗುವ ಸಲಹೆಗಳನ್ನು ಸರ್ಕಾರದವರ ಮುಂದಿಟ್ಟು ರೈತರಿಗೆ ಅನುಕೂಲವಾಗುವ ರೀತಿ ಯಾವ ರೂಲ್ಸ್‌ಗಳು ಜಾರಿಗೆ ಬಾರದಂತೆ ಮಾಡಲು ಮತ್ತು ರೈತರಿಗೆ ಸಹಾಯಕ ಪ್ರಯೋಜನ ದೊರೆಯುವಂತೆ ಮಾಡುವುದಕ್ಕಾಗಿ ಅವಶ್ಯವಾದ ಕಾರ್ಯಕಲಾಪಗಳನ್ನು ಕೈಕೊಂಡು ಕೆಳಗೆ ನಮೂದಿಸಿರುವ ಸಲಹೆಗಳ ಜಮೀನ್ದಾರರ ಸಂಘಕ್ಕೆ ಅಧಿಕಾರ ಕೊಡುವುದಕ್ಕೋಸ್ಕರ ಈ ದಿನ ಈ ಸಭೆಯು ಇಲ್ಲಿ ಸೇರಿದ್ದಾಗಿದೆ.

ಈ ಮೀಟಿಂಗಿನಲ್ಲಿ ಸ್ವೀಕಾರವಾದ ಠರಾವುಗಳು

1. ಗಂಧದ ಮರಗಳಿಗೆ ಬೋನಸ್ಸು ಕೊಡುವ ಬಗ್ಗೆ ಪ್ರಕಟಪಡಿಸಿರುವ ಕರಡು ರೂಲ್ಸ್‌ಗಳ ವಿಷಯದಲ್ಲಿ, ಈ ಕೆಳಗಿನ ಕೆಲವು ಸಲಹೆಗಳನ್ನು ಮತ್ತು ದೇಶದ ರೈತರಿಗೆ ಉಪಯುಕ್ತವಾದ ಇತರ ಸಲಹೆಗಳನ್ನು ಸರ್ಕಾರದ ಮುಂದಿಟ್ಟು ಕರಡು ರೂಲ್ಸ್‌ಗಳಿಂದ ರೈತರಿಗೆ ಉಂಟಾಗುವ ಯಾವ ಕಷ್ಟವನ್ನಾ ತಪ್ಪಿಸಲು ಅವಶ್ಯವಾದ ಕಾರ್ಯಗಳನ್ನು ಕೈಗೊಂಡು ನಡೆಸಲು, ಈ ಸಭೆಯು ದೇಶದ ಪ್ರತಿನಿಧಿಯಾದ ಕೊಡಗು ಜಮೀನ್ದಾರರ ಸಂಘಕ್ಕೆ ಅಧಿಕಾರ ಕೊಡುತ್ತದೆ.

ಸಲಹೆಗಳು:—

(I) ಯಾವ ತಾರತಮ್ಯವೂ ಇಲ್ಲದೆ ಶಿಕ್ಷ ಮರಗಳಿಗೆ ಶೇಕಡ 60% ರಂತೆ ಬೋನಸ್ಸು ಕೊಡಬೇಕು.

(II) ಗಂಧದ ಮರವನ್ನು ಕಾಪಾಡುವ ಬಗ್ಗೆ ರೈತರಿಗೆ ಯಾವ ನಿರ್ಬಂಧವೂ ಇರಕೂಡದು.

(III) ಗಂಧದ ಮರಗಳಿಗೆ ಅಧಿಕೃತವಾದ ಯಾವದೇ ಕರಾರು ಅಥವಾ ಸಂಭವಿಸಿದರೂ ಅದಕ್ಕೆ ರೈತನನ್ನು ಜವಾಬ್ದಾರನಾಗಿ ಮಾಡಕೂಡದು

2. ಈ ವಿಷಯಕ್ಕಾಗಿ ಕೊ. ಜಮೀನುದಾರರ ಸಂಘದ ವಿಶೇಷ ಮೊತ್ತವನ್ನು ಕೂಡಿಸಿಕೊಂಡು ಕೂಡಲೇ ಸೇರಬೇಕಾಗಿ ಈ ಸಭೆಯು ಸಂಘವನ್ನು ಕೇಳಿಕೊಳ್ಳುತ್ತದೆ.

3 ಈ ಮೀಟಿಂಗಿನ ನಡವಳಿಕೆಗಳನ್ನು ದೇಶೀಯ ಪತ್ರಿಕೆಗಳಲ್ಲಿ ಪ್ರಕಟಪಡಿಸಬೇಕಾಗಿ ಈ ಸಭೆಯು ಸಂಘವನ್ನು ಕೇಳಿಕೊಳ್ಳುತ್ತದೆ

ಕೊಡ್ಲಿಪೇಟೆಯ ಮೀಟಿಂಗು.

ಮಾರ್ಚಿ ತಾರೀಕು 22 ರಲ್ಲಿ ಕೊಡ್ಲಿಪೇಟೆಯ ಬಸವೇಶ್ವರ ದೇವಸ್ಥಾನದಲ್ಲಿ ಊರಿನ ಮತ್ತು ಸುತ್ತಲಿನ ಸ್ವಾಮಿಗಳವರ ಅಧ್ಯಕ್ಷತೆಯಲ್ಲಿ ಮೇಲ್ಕಂಡ ಉದ್ದೇಶಕ್ಕಾಗಿ ಒಂದು ಸಭೆಯು ಸೇರಿತ್ತು. ಮಿ. ಸಿದ್ದಲಿಂಗಪ್ಪನವರು ಸಭೆ ಸೇರಿದ ಉದ್ದೇಶವನ್ನು (ಮೇಲಿನ ಮೀಟಿಂಗಿನಂತೆಯೇ) ವಿವರಿಸಿದರು. ಶನಿವಾರಸಂತೆಯ ಮೀಟಿಂಗಿನಲ್ಲಿ ಪಾಸಾದ ಠರಾವುಗಳೇ ಈ ಮೀಟಿಂಗಿನಲ್ಲೂ ಸರ್ವಾನುಮತದಿಂದ ಪಾಸಾದವು.

ಗೋಣಿಕೊಪ್ಪಲು ಸಭೆ.

ಈ ಕಳೆದ ತಾ. 29 ನೇ ಆದಿತ್ಯವಾರ ಗೋಣಿಕೊಪ್ಪಲಲ್ಲಿ ಒಂದು ಪಬ್ಲಿಕ್ ಮೀಟಿಂಗು ಸೇರಿತು. ಮ. ರಾ. ಮನೆಯಪಂಡ ಪೂವಯ್ಯನವರು ಅಧ್ಯಕ್ಷರಾಗಿ ಆರಿಸಲ್ಪಟ್ಟರು. ಮಿ ಪಿ ಎ. ಚೆಟ್ಟಪ್ಪನವರು ಮೀಟಿಂಗಿನ ಉದ್ದೇಶವನ್ನು ವಿವರಿಸಿ, ಜಮೀನ್ದಾರರ ಸಂಘದ ಡೆಪ್ಯುಟೇಷನವರು ಗಂಧದ ಬೋನಸ್ಸಿನ ಕರಡು ರೂಲ್ಸ್‌ಗಳಲ್ಲಿ ಚೀಫ್ ಕಮಿಷನರವರಿಗೆ ಕಳುಹಿಸಿದ ತಿದ್ದುಪಡಿಗಳನ್ನು ಓದಿ ಹೇಳಿದರು. ಮಿ. ಚೆಪ್ಪುಡಿರ ಪೂಣ್ಣಚ್ಚನವರು ಇದಕ್ಕೆ ಒತ್ತಾಸೆಯಾಗಿ ಮಾತಾಡಿದರು. ನಂತರ ಈ ಕೆಳಗಿನ ಠರಾವುಗಳು ಸರ್ವಮತದಿಂದ ಪಾಸಾದವು.

1. 'ಜಮೀನ್ದಾರರ ಸಂಘದ ಡೆಪ್ಯುಟೇಷನವರು ಗಂಧದ ಬೋನಸು ಕರಡು ನಿಬಂಧನೆಗಳನ್ನು ಕುರಿತು ಚೀಫ್ ಕಮಿಷನರವರಿಗೆ ಕಳುಹಿಸಿರುವ ತಿದ್ದುಪಡಿಗಳಿಗೆ ಈ ಸಭೆಯವರು ಸಂಪೂರ್ಣ ಒತ್ತಾಸೆಯನ್ನೀಯುತ್ತಾರೆ.'

2. 'ಗಂಧದ ಬೋನಸು ರೂಲುಗಳ ತಿದ್ದುಪಡಿಯ ಸಂಬಂಧವಾಗಿ ಯುಕ್ತ ತೋರಿದ ರೀತಿಯಲ್ಲಿ ವರ್ತಿಸಲು ಜಮೀನ್ದಾರರ ಸಂಘಕ್ಕೆ ಈ ಸಭೆಯು ಸಂಪೂರ್ಣ ಅಧಿಕಾರವನ್ನು ಕೊಡುತ್ತದೆ.'

ವಿರಾಜಪೇಟೆ ಮೀಟಿಂಗು.

ಈ ಸಂಬಂಧ ವಿರಾಜಪೇಟೆಯಲ್ಲಿ ಈ ತಾ. 1ನೇ ಬುಧವಾರ ಸಾರ್ವಜನಿಕ ಸಭೆಯು ನೆರೆಯಿತು. ಮಿ. ಚೆಪ್ಪುಡಿರ ದೇವಯ್ಯನವರು ಅಧ್ಯಕ್ಷರಾಗಿ ಚುನಾಯಿಸಲ್ಪಟ್ಟರು. ಜಮೀನ್ದಾರರ ಸಂಘದ ಪ್ರೆಸಿಡೆಂಟರಾದ ಮಿ. ಪಿ. ಎ. ಚೆಟ್ಟಪ್ಪನವರು ಸಭೆ ಕೂಡಿಸಿದ್ದರ ಉದ್ದೇಶವನ್ನು ಹೇಳಿ, ಅಸ್ವಾಧೀನ್ದ್ಲಾ ಜಾಗದ ಗಂಧದ ಮರಗಳ ಬೋನಸ್ಸಿನ ಕರಡು ರೂಲ್ಸ್‌ಗಳನ್ನು ಓದುತ್ತಾ ಬಂದರು. ತರುವಾಯಿಗೆ ಆ ಸಂಘದ ಕಾರ್ಯದರ್ಶಿಯಾದ ಮಿ. ಐ. ಪಿ. ಕಾರ್ಯಪ್ಪನವರು ಡೆಪ್ಯುಟೇಷನವರು ಚೀಫ್ ಕಮಿಷನರಿಗೆ ಕಳುಹಿಸಿದ ಬದಲಾವಣೆಗಳನ್ನು ಓದಿ ವಿವರಿಸಿದರು. ಅನಂತರ ಮೇಲೆ ಸೂಚಿಸಿದಂಥ (ಗೋಣಿಕೊಪ್ಪಲು ಮೀಟಿಂಗಿನ) ಗೊತ್ತುವಳಿಗಳು ಸಭೆಯ ಮುಂದಿಡಲಾದವು. ಇವೆರಡು ಠರಾವುಗಳೂ ಏಕಮತದಿಂದ ಮಂಜೂರಾದವು. ಅಧ್ಯಕ್ಷರಿಗೆ ವಂದನೆಗಳೊಂದಿಗೆ ಸಭೆಯು ಮುಕ್ತಾಯವಾಯಿತು.

ಕರ್ನಾಟಕದ ತರುಣರು.

ಶ್ರೀ. ಡಾ. ಯನ್. ಯಸ್. ಹರ್ಡೀಕರ್, ಹುಬ್ಬಳ್ಳಿ.

ಕರ್ನಾಟಕವು ತನ್ನ ತರುಣರಿಗಾಗಿ ನಿಶ್ಚಯವಾಗಿಯೂ ಹೆಮ್ಮೆಪಡಬೇಕಾಗಿದೆ. ಯಾವ ಪ್ರಕಾರದಲ್ಲಿ ಹಿಂದೂಸ್ಥಾನದ ಇತರ ಪ್ರಾಂತಗಳು ಅನೇಕ ನಿಸ್ವಾರ್ಥ, ಉತ್ಸಾಹಭರಿತ, ಧೈರ್ಯಶಾಲಿಗಳಾದ ತರುಣರನ್ನು ಪಡೆದಿರುವುದೋ ಹಾಗೆಯೇ ಕರ್ನಾಟಕವೂ ಸಹ ಪಡೆದಿದೆ. ಕಳೆದ ಎರಡು ಸತ್ಯಾಗ್ರಹದ ಸಮಯಗಳಲ್ಲಿಯೂ, ಅದಕ್ಕಿಂತ ಮುಂಚಿತವಾಗಿಯೂ ಕರ್ನಾಟಕ ಯುವಕರು ಮಿಂಚಿನ ವೇಗದಲ್ಲಿ ಕರ್ನಾಟಕದ ಶ್ರೈಲೊಳ್ಳೆ ದೇಶಭಕ್ತಿಯ ಉರಿಯನ್ನು ಹರಡಿದರು. ಆ ಯುವಕರಲ್ಲಿ ಅನೇಕರು ಮಹಾತ್ಮರ ಆಜ್ಞೆಯನ್ನು ಪಾಲಿಸಲು, ಮುಂದೆ ಬಂದು ಯಾವ ಸಂಕಟವನ್ನು ಪ್ರಕಟಿಸದೆ ಕಾಂಗ್ರೆಸಿನ ಸೇವೆಯಲ್ಲಿ ಮಗ್ನರಾದರು. ಅವರು ಕರ್ತವ್ಯವನ್ನು ಅವರ ಶಕ್ತ್ಯನುಸಾರವಾಗಿ ಪಾಲಿಸಿದರು. ಒಳ್ಳೇ ಮುಂದಾಳುಗಳಿಲ್ಲದೆಯೂ, ಅವರ ಕೆಲಸಗಳನ್ನು ಮೆಚ್ಚುವವರೇ ಇಲ್ಲದೆಯೂ, ಉತ್ಸಾಹವನ್ನು ಕೊಡುವವರಿಲ್ಲದೆಯೂ ಇದ್ದ ಸನ್ನಿವೇಶದಲ್ಲೂ ಕೂಡ ಕನ್ನಡ ನಾಡಿನ ಯುವಕರು ಅವರ ಕರ್ತವ್ಯವನ್ನು ದೃಢ ಸಂಕಲ್ಪದಿಂದ ಒಂದಿಷ್ಟೂ ಗೊಣಗುಟ್ಟದೆ ನಿರ್ವಹಿಸಿದರು. ಅವರು ಮಾಡಿದ ಮಹತ್ವದ ಸೇವೆಯು ಜನರಿಂದಲೂ, ಅವರ ಮುಖಂಡರಿಂದಲೂ ಗ್ರಾಹ್ಯವಾಗದಿದ್ದು; ನಿರ್ಲಕ್ಷಿಸಲ್ಪಟ್ಟದ್ದಾದರೂ ಸಹ ಅದು ಅವರ ಹೊಣೆಗಾರಿಕೆಯನ್ನು ಕಡಿಮೆಗೊಳಿಸಿದೆ ಬಿಡಲಿಲ್ಲ. ಅವರ ಕರ್ತವ್ಯವನ್ನು ಮುಂದೊತ್ತಿ ಯಾವ ವಿಧದ ಫಲಾಪೇಕ್ಷೆಯಿಲ್ಲದೆ ಸನ್ಮಾನಿತರಾಗಬೇಕೆಂಬ ಕಾಂಕ್ಷೆ ಇಲ್ಲದೆ ತಮ್ಮ ಸೇವೆಯನ್ನು ಪೂರ್ಣಗೊಳಿಸಿದರು. ಈ ಪ್ರಕಾರದ ಸೇವೆಯಿಂದಲೇ ಕರ್ನಾಟಕವು ಇಂದು ಒಂದು ಪ್ರಾಂತದ ಗೌರವವನ್ನು ಪಡೆದಿದೆ. ಈ ಯುವಕರ ಸೇವೆಯಿಂದಲೇ ಕರ್ನಾಟಕಕ್ಕೆ ಈ ಗೌರವ ಈ ಯಶಸ್ಸು ಮತ್ತು ಈ ವೈಭವವು ಲಭಿಸಿದ್ದು. ಇತರ ಪ್ರಾಂತಗಳಲ್ಲಿರುವಷ್ಟು ಇಂಥಾ ಯುವಕರು ಕರ್ನಾಟಕದಲ್ಲಿಲ್ಲದಿಲ್ಲ. ಆದರೆ ಕರ್ನಾಟಕವು ಈ ವಿಷಯದಲ್ಲಿ ಎಷ್ಟು ಮಾತ್ರಕ್ಕೂ ಇತರ ಪ್ರಾಂತಗಳಿಗಿಂತ ಹಿಂದುಳಿದಿರುವದಿಲ್ಲ. ಕಳೆದ ಹದಿನೈದು ವರ್ಷಗಳ ಕರ್ನಾಟಕದ ಇತಿಹಾಸವು ಈ ವಿಷಯವನ್ನು ಸ್ಪಷ್ಟಗೊಳಿಸಿದೆ

ಅಂದ ಮೇಲೆ, ಕಳೆದು ಹೋದ ನಮ್ಮ ನಮ್ಮ ಯಶಸ್ಸಿನ ಮೇಲೆ ನಮ್ಮ ಭವಿಷ್ಯದ ವಿಷಯಗಳನ್ನು ನಾವು ಇಂಗಲಾಗದು. ನಿಸ್ಸಂದೇಹವಾಗಿಯೂ ಕರ್ನಾಟಕದ ಯುವಕರು ಅಪಾರವಾದ ಸೇವೆಯನ್ನು ಮಾಡಿರುವರು. ಆದರೆ "ಇನ್ನು ಮುಂದಕ್ಕೆ ಏನು ಮಾಡಬೇಕು" ಎಂಬುದೇ ಈಗಿನ ಪ್ರಶ್ನೆ. ಕಳೆದ ಯಶಸ್ಸನ್ನು ಕಟ್ಟಿಕೊಂಡರೆ ನಮ್ಮ ಭವಿಷ್ಯವು ಯಶಸ್ವಿಯಾಗಲಾರದು. ಕಳೆದ ಯಶಸ್ಸನ್ನೂ, ಈಗಿನ ನಮ್ಮ ಸ್ಥಿತಿಯನ್ನೂ ಒಟ್ಟುಗೂಡಿಸಿ ಪರಿಶೋಧಿಸಿದರೇನೇ ನಮಗೆ ಮುಂದಕ್ಕೆ ಹೇಗೆ ಮಾಡಬಹುದೆಂಬ ಕಲ್ಪನೆಯು ಹೊಳೆದು ಬರುತ್ತದೆ. ಇದಕ್ಕೆ ನಮ್ಮ ಇಂದಿನ ಸ್ಥಿತಿಯೂ ಸಹ ಗತಸಿದಂತೆ ಯಶಸ್ವಿಮತ್ತವಾಗಬೇಕು.

ಆದ್ದರಿಂದ ಈ ವಿಚಾರ ನೆನಪಿನಲ್ಲಿರಲಿ; ಏನೆಂದರೆ ಕರ್ನಾಟಕದ ಕೀರ್ತಿಯನ್ನು ಬೆಳಗಿಸಿದ ಆ ಯುವಕ ಗಣವು ಇಂದು ಎಂತಹ ನಿದ್ರಾವಸ್ಥೆಯಲ್ಲಿರುವರು? ಅವರ ಆ ಕೀರ್ತಿವಂತವಾದ ಪೂರ್ವದ ಕಾರ್ಯಗಳಿಗೆ ಇಂದಿನ ಅವರ ನಿರ್ಲಕ್ಷ್ಯಭಾವವು ಲಾಂಛನಪ್ರದವಾಗಿಲ್ಲವೇ? ಈ ಶಕ್ತಿಯು ಅವರ ಪ್ರಾಂತಕ್ಕೆ ದ್ರೋಹಕಾರವಾದದ್ದು. ಈಗ ಅವರ ತಮ್ಮ ನಿಷ್ಕಳಂಕಿತವಾದ ಕರ್ತವ್ಯದ ತಿಳುವಳಿಕೆಯಿಲ್ಲದವರಾಗಿ ಸ್ವಾರ್ಥದ ಕಡೆಗೆ ತಿರುಗುತ್ತಿರುವರು. ರಾಷ್ಟ್ರೀಯ ವಿಚಾರದ ಕಾರ್ಯಗಳಲ್ಲಿ ಅವರು ತೋರುತ್ತಿರುವ ನಿರ್ಲಕ್ಷ್ಯತೆ, ಮತಾಂತರ ವಿಚಾರಗಳಲ್ಲಿ ಅವರು ಅವಲಂಬಿಸಿರುವ ಸಂಕುಚಿತ ಭಾವನೆಗಳು, ಅವರ ಔದಾಸ್ಯಭಾವ, ವಿಲಾಸಜೀವನದ ಕಡೆಗೆ ಇರುವ ಅವರ ಮೋಹ ಮುಂತಾದವುಗಳು ಅವನತಿಯ ಚಿಹ್ನೆಗಳಾಗಿವೆ. ಇವು ಕರ್ನಾಟಕ ಯುವಕರಿಗೆ ಭೂಷಣವಲ್ಲ. ಕರ್ನಾಟಕವು ಅತೀ ಮುಂದುವರಿದ ಪ್ರಾಂತವಾಗಬೇಕಾದಲ್ಲಿ ಅದರ ಯುವಕರು ತಮ್ಮ ರಾಜ್ಯವಾದ ಈ ಪ್ರಾಂತವನ್ನು ಉಚ್ಚತರದ ಪ್ರಾಂತವನ್ನಾಗಿ ಮಾಡಲು ಪ್ರಯತ್ನಿಸಬೇಕು. ಯುವಕರ ಶಕ್ತಿಗಳು ಎದೆಗುಂದದೆ ಸತತ ಪ್ರಯತ್ನಪಡದಿದ್ದಲ್ಲಿ ಈ ಕಾರ್ಯವು ಆಗುವಂತಿಲ್ಲ. ಹಾಗೆ ಮಾಡಿದರೇನೇ ಕರ್ನಾಟಕ ತರುಣರು ತಮ್ಮ ಕರ್ತವ್ಯವನ್ನು ಪಾಲಿಸಿದಂತಾಗುವದು.

ಈಗಿನ ರಾಜಕೀಯ ವಾತಾವರಣವು ಮತ್ತು ಸನ್ನಿವೇಶಗಳು ಅನೇಕ ವೀರ ತರುಣರಿಗೆ ಅವರ ನಿಜತ್ವವನ್ನು ವ್ಯಕ್ತಗೊಳಿಸಲು ಪ್ರತಿಕೂಲವಿರುವದೆಂಬುದನ್ನು ನಾನೂ ಅರಿತಿರುವೆನು. ಆದರೆ ಆ ಸನ್ನಿವೇಶಗಳನ್ನು ತನ್ನ ಉತ್ಸಾಹಕ್ಕನುಗುಣವಾಗಿ ಮಾರ್ಪಡಿಸಲು ಯಾರೂ ಹಿಂದುಳಿಯಬಾರದು. ಆ ದಿಕ್ಕಿಗೆ ವಿನಮ್ರ ಗಮನಿಸದೆ ಮುಂದು ಸಾಗಬೇಕು. ಈಗಿನ ಈ ಮಂದ, ಈ ಬಂಧಿತ ವಾತಾವರಣವನ್ನು ಅಂತ್ಯಗೊಳಿಸಿ ನಮ್ಮ ಕರ್ತವ್ಯಪಾಲನೆಗೆ ಅನುಗುಣವಾದ ವಾತಾವರಣವನ್ನುಂಟುಮಾಡುವ ನೂತನ ಶಕ್ತಿಯನ್ನು ಎಬ್ಬಿಸುವಲ್ಲಿ ಪ್ರಧಾನ್ಯವಾಗಿ ಕಾರ್ಯಾಲೋಚಿಸಿದ್ದಲ್ಲಿ ಇದನ್ನು ಸುಲಭವಾಗಿ ಯೂ ಮಾರ್ಪಡಿಸಬಹುದು. ಕರ್ನಾಟಕದ ಯುವಜನರು ಈ ವಿಷಯದ ಆಲೋಚನೆಯನ್ನು ಮಾಡಬೇಕು. ಈ ವರೆಗೆ ಮಾಡಿದ್ದಲ್ಲಿ ಈಗಲಾದರೂ ಪೂರ್ವದ ಕೀರ್ತಿಯನ್ನು ಗಳಿಸಬೇಕು. ಇದೇನು ಅಸಂಭವವಾದದ್ದೆ?

ಇಂಡಿಯಾ ಸರಕಾರದ ಪ್ರಕಟಣೆ.

ಹೊಸ ದಿಲ್ಲಿ 27 ನೇ ಫೆಬ್ರವರಿ 36.

ಹಿಂದೂಸ್ಥಾನದಿಂದ ಇಂಡಿಯನರು ಆಫ್ರಿಕ ಕಾಲೊನಿಯಲ್ಲಿ ಬ್ರಿಟಿಷ್ ಮಲಯಾಕ್ಕೆ ಉದ್ಯೋಗಕ್ಕಾಗಿ ಹೋಗುತ್ತಿರುವರೆಂಬುದು ಸರಕಾರದ ದೃಷ್ಟಿಗೆ ಬಂದಿದೆ. ಅಲ್ಲಿಗೆ ಹೋದ ಮನೇಕರು ಅಲ್ಲೇ ಉದ್ಯೋಗ ಸಿಗದೆ ಕಷ್ಟಪಡುತ್ತಿರುವರು. ಅದ್ದರಿಂದ ಅಲ್ಲಿಯ ಸ್ಥಳೀಯ ಅಧಿಕಾರಿಗಳು ಆಗಾಗ್ಗೆ ಅಲ್ಲಿ ಕೆಲಸ ಸಿಗುವ ಸಂಭವವಿದೆಯೋ, ಆಗಾಗ್ಗೆ ಅಲ್ಲಿ ಕೆಲವು ತಿಂಗಳ ಜೀವನ ನಡೆಸುವಷ್ಟು ಹಣವಿದೆಯೋ ಎಂದು ಅರಿಯದೆ ಅಲ್ಲಿ ಯಾರಾದರೂ ಸಂಬಂಧಿಕರು, ಸ್ನೇಹಿತರುಮಾರೇ ಯಾವ ವಿಚಾರಗಳ ತಿಳುವಳಿಕೆ ಆ ಬಗ್ಗೆ ಸಹ ಗೊತ್ತುವಿಲ್ಲದವನ್ನು 'ಪ್ರಯಾಣಿಕರ ನಿರ್ಬಂಧದ 169ನೇ ವಿಶೇಷ ಕಾನೂನಿನ 9 ನೇ ಪ್ರಕರಣದ ಪ್ರಕಾರ ಅವರನ್ನು ಹಿಂದಕ್ಕೆ ಅವರ ದೇಶದ ಒಳಗಿನ ಬಂದರುಗಳಿಗೆ ವಾಪಾಸು ಕಳುಹಿಸುತ್ತಿರುವರು. ಅದ್ದರಿಂದ ಇನ್ನು ಮುಂದಕ್ಕೆ ಬ್ರಿಟಿಷ್ ಮಲಯಾಕ್ಕೆ ಹೋಗುವವರು ಅಲ್ಲಿ ಅವರಿಗೆ ಕೆಲಸ ದೊರೆತಿರುವ ಆರ್ಡರುಗಳನ್ನಾಗಲೀ ಯಾ ಅಲ್ಲಿ ಜೀವನ ನಡೆಸುವಷ್ಟು ದ್ರವ್ಯ ತಮ್ಮಲ್ಲಿದೆ ಎಂಬುದನ್ನಾಗಲೀ ರುಜುವಾತುಪಡಿಸದಿದ್ದಲ್ಲಿ ಅವರನ್ನು ಆ ದೇಶಕ್ಕೆ ಪ್ರವೇಶಿಸಲು ಬಿಡದೆ ಹಿಂತಿರುಗಿಸಲಾಗುವದೆಂದು ಈ ಮೂಲಕ ಎಲ್ಲರಿಗೂ ಎಚ್ಚರಿಸಲಾಗಿದೆ.

ಪ್ರಕಟಣೆ.

ಪೊನ್ನಂಪೇಟೆನಾಡು ಭದ್ರಗೊಳ ಗ್ರಾಮದಲ್ಲಿ ವಾಸವಿರುವ ಕಂಜಿತಂಡ ಕಾರ್ಯಪ್ಪನವರ ಪತ್ನಿ ದೇಚವ್ವನು ಈ ಮೂಲಕ ತಿಳಿಯಪಡಿಸುವುದೇನೆಂದರೆ:—

ನನ್ನ ಪತಿಯಾದ ಮೆ. ಕಂಜಿತಂಡ ಕಾರ್ಯಪ್ಪನವರು ಅವರ ಆಸ್ತಿಯನ್ನು ಪರಾಧೀನಪಡಿಸುವ ಉದ್ದೇಶದಲ್ಲಿರುತ್ತಾರೆ. ಆ ಪ್ರಕಾರ ಅವರಿಗೆ ಪರಾಧೀನಪಡಿಸುವ ಅಧಿಕಾರವಿರುವದಿಲ್ಲವಾದ್ದರಿಂದ ಅದನ್ನು ಯಾರಾದರೂ ಕ್ರಯಕ್ಕಾಗಲೀ ಭೋಗ್ಯಕ್ಕಾಗಲೀ ಯಾ ಗಿರ್ವಿಗಾಗಲೀ ಪಡೆಕೊಂಡಲ್ಲಿ ಆ ಸಂಬಂಧದ ಸಕಲ ನಷ್ಟಕ್ಕೂ, ಕಷ್ಟಕ್ಕೂ ಅವರೇ ಹೊಣೆಯಾಗಬೇಕಾಗುವದೆಂಬುದು ಈ ಮೂಲಕ ತಿಳಿಯಪಡಿಸಲಾಗಿದೆ.

ತಾ 2—1—36 ಕೆ. ದೇಚವ್ವ.

2—1

ಪ್ರಕಟಣೆ.

ಕೊಡಗು ವೀರಶೈವ ವಿದ್ಯಾಭಿವೃದ್ಧಿ ಸಂಘ.

ವೀರಶೈವ ಮಹಾ ಜನಗಳಲ್ಲಿ ವಿನಂತಿ.

ತಾರೀಕು 12—4—36 ನೇ ಭಾನುವಾರ ಬೆಳಿಗ್ಗೆ ಕೊಡಗು ವೀರಶೈವ ವಿದ್ಯಾಭಿವೃದ್ಧಿ ಸಂಘದ 6 ನೇ ವಾರ್ಷಿಕ ಜನರಲ್ ಮೀಟಿಂಗನ್ನು ದಿವಾನ್ ಬಹದ್ದೂರ್ ಕೆ. ಚಂಗಪ್ಪನವರ ಅಧ್ಯಕ್ಷತೆಯಲ್ಲಿ ಶನಿವಾರಸಂತೆ ಗುಡುಗಳಲೆ ಜಯದೇವ ಬಾಣಿಯಲ್ಲಿ ನಡೆಸಲು ಏರ್ಪಡಿಸಿರುವುದರಿಂದ ಎಲ್ಲಾ ವೀರಶೈವ ಮಹನೀಯರುಗಳು ಆ ದಿವಸ ದಯಮಾಡಿಸಬೇಕಾಗಿ ಈ ಮೂಲಕ ಕೇಳಿಕೊಳ್ಳಲಾಗಿದೆ. ಮೇಲ್ಕಂಡ ಸಂಘಕ್ಕೆ ಒಂದು ರೂಪಾಯಿ ಮೇಲ್ಪಟ್ಟು ವಂತಿಗೆ ಕೊಟ್ಟ ಪ್ರತಿಯೊಬ್ಬ ಮಹನೀಯರುಗಳೂ ವಿೂಟಿಂಗಿನಲ್ಲಿ ಮಾತನಾಡಲು ಮತ್ತು ಓಟು ಕೊಡುವುದಕ್ಕೆ ಹಕ್ಕು ಇರುತ್ತದೆ. ಸಂಘಕ್ಕೆ ಸಂಬಂಧಪಟ್ಟ ಎಲ್ಲಾ ಪ್ರಶ್ನೆಗಳನ್ನು ಸಿ ಹೆಚ್ ಜಿ. ಕಾಳೇಗೌಡರು ಪ್ರೆಸಿಡೆಂಟರು ಶನಿವಾರಸಂತೆ ಇವರಿಗೆ ತಾ 10—4—36ರ ಒಳಗೆ ತಲುಪುವಂತೆ ಕಳುಹಿಸಿಕೊಡಬೇಕಾಗಿ ಕೇಳಿಕೊಳ್ಳಲಾಗಿದೆ. ಸದರಿ ದಿವಸ ವಿೂಟಿಂಗಿಗೆ ಬರುವ ಎಲ್ಲಾ ಮಹನೀಯರುಗಳಿಗೆ ಊಟದ ಏರ್ಪಾಡು ಸಹ ಮಾಡಲ್ಪಡುತ್ತೆ.

ಶನಿವಾರಸಂತೆ, ಸಿ. ಹೆಚ್. ಜಿ. ಕಾಳೇಗೌಡ,

ತಾ. 25—3—36. ಪ್ರೆಸಿಡೆಂಟ್, ವೀರಶೈವ ವಿದ್ಯಾಭಿವೃದ್ಧಿ ಸಂಘ

2—1

ಸಮರ್ಥಕ ಆಡಳಿತದಿಂದ, ಕಡಿಮೆಯಾದ ವ್ಯಯದಿಂದ, ಕ್ರಮಕ್ರಮವಾದ ಅಭಿವೃದ್ಧಿಯಿಂದ ಭಾರತ ವಿಮಾರಂಗದಲ್ಲಿ ಯೋಗ್ಯಸ್ಥಾನವನ್ನೂ, ಉಚ್ಚಗೌರವವನ್ನೂ ಸಂಪಾದಿಸಿರುವ

ಮಂಗಳೂರಿನ

ದಿ ಪೊಪ್ಯುಲರ್ ಇನ್ಶ್ಯುರೆನ್ಸ್ ಕಂಪೆನಿ, ಲಿಮಿಟೆಡ್.

ಕನ್ನಡಿಗರ ಹೆಮ್ಮೆಯ, ನಿಮ್ಮ ಒಲುಮೆಯ ಈ ಸಂಸ್ಥೆಯಲಿ ತಪ್ಪದೆ ವಿಮೆಯನ್ನಿಳಿಸಿ.

ಮೊದಲಿನ 5 ವರ್ಷಗಳ ಮೌಲ್ಯವೇತನದ ಫಲಿತಾಂಶವಾಗಿ ಪ್ರತಿಯೊಂದು 1000 ರೂಪಾಯಿಗಳ ವಿಮಾಪತ್ರದ ಮೇಲೆ—

ವರ್ಷ 1ರ ರೂಪಾಯಿ 10ರ ಬೋನಸ್ ಕೊಡಲಾಗಿದೆ.

(ಪ್ರಥಮ ಮೌಲ್ಯವೇತನದಲ್ಲಿ ಇಷ್ಟು ಬೋನಸನ್ನು ಹಂಚಿದ ಹಿಂದೀ ವಿಮಾಕಂಪೆನಿಗಳು ಅತಿ ವಿರಳವೆಂಬುದನ್ನು ಮರೆಯದಿರಿ)

ನಮ್ಮ ಪ್ರಾತಿನಿಧ್ಯವಿಲ್ಲದ ಎಲ್ಲ ಕಡೆಗಳಲ್ಲಿ ವ್ಯವಹಾರಕುಶಲರೂ, ಪ್ರಾಮಾಣಿಕರೂ, ಯೋಗ್ಯರೂ ಆದ

ಏಜಂಟರು ಬೇಕು.

ಮಾಹಿತಿಪತ್ರ, ವಿವರಣೆಯ ಪತ್ರಿಕಾದಿಗಳಿಗೆ:—

ಮಂಗಳೂರಿನ ಕಾರ್ಯಾಲಯಕ್ಕೆ ಬರೆದು ಕೇಳಿ.

ಮಡಿಕೇರಿ ಏಜಂಟರು—

ಟಿ. ಕೆ. ಚೆಲ್ಲಪ್ಪನವರು,

ವಸ್ತ್ರಗಳ ವ್ಯಾಪಾರ, ಮಡಿಕೇರಿ. (52—6)

ಸೋಮವಾರಪೇಟೆ ಏಜಂಟರು—

ಬಿ. ಎಸ್. ಮಹದೇವಯ್ಯನವರು,

ವಸ್ತ್ರಗಳ ವ್ಯಾಪಾರ, ಸೋಮವಾರಪೇಟೆ.

ವಿವಿಧ ವಾರ್ತಾವಳಿ.

ದೇವಾಲಯ ಪ್ರವೇಶ ಚಳವಳಿ.

ಕೇರಳ ಪ್ರಾಂತೀಯ ಹರಿಜನ ಸೇವಕ ಸಂಘದ ದೇವಾಲಯ ಪ್ರವೇಶ ಸಮಿತಿಯವರು ಆ ಪ್ರಾಂತದಲ್ಲಿ ದೇವಾಲಯ ಪ್ರವೇಶ ಚಳವಳಿಯನ್ನು ಏಪ್ರಿಲ್ 5 ನೇ ತಾರೀಖಿನಿಂದ ಶುರುಮಾಡಬೇಕೆಂದು ಗೊತ್ತು ಮಾಡಿದ್ದಾರೆ

—೦೦೦—

ಹಿಂದೂ ದೇಶದ ಹೊರಗೆ ಕಳ್ಳುತ್ತಿರುವ ಸರಕಾರಿ ನೌಕರರ ಸಂಬಳ.

ಕಳೆದ ವರ್ಷದಲ್ಲಿ ಇಂಡಿಯಾ ಸರಕಾರದವರು ರೂ. 3 75 ಕೋಟಿಯನ್ನು ಹಿಂದೂ ದೇಶದ ಹೊರಗೆ ಸಲ್ಲಬೇಕಾದ ಪೆಂಶನುಗಳಿಗಾಗಿ ವ್ಯಯಿಸಿದೆ ಪ್ರಸ್ತುತ ವರ್ಷದಿಂದ ಇಂಡಿಯಾ ಸರಕಾರವು ರೂ. 8 ಕೋಟಿಯನ್ನು ಹಿಂದೂ ದೇಶದ ಹೊರಗೆ ಖರ್ಚು ಮಾಡಿದೆ ಇದೆಲ್ಲವೂ ಯುರೋಪಿಯನ್ ಉದ್ಯೋಗಸ್ಥರಿಗಾಗಿಯೇ

—೦೦೦—

ಹಿಂದೀ ಮಿಲಿಟರಿ ಶಾಲೆಗೆ ವೈಸರಾಯರ ಸಹಾಯ.

ಡಾ ಮೂಂಜೆ ಯವರು ತೆರೆಯಬೇಕೆಂದಿರುವ ಭೋಸಲೆ ಹಿಂದೂ ಯುವಕರ ದಂಡಿನ ಶಿಕ್ಷಣ ಶಾಲೆಗೆ ವೈಸರಾಯರು ದೇಣಿಗೆ ಸಹಾಯ ಮಾಡಬೇಕೆಂದು ಅವರನ್ನು ಕಂಡರು; ಅವರಿಗೆ ಆ ಶಾಲೆಯ ಉದ್ದೇಶ ಮುಂತಾದವುಗಳನ್ನು ತಿಳಿಸಿದರು ಆಗ ವೈಸರಾಯರು 250 ರೂಪಾಯಿ ಸಹಾಯ ಕೊಟ್ಟರು. ಸ್ವ. ಕೃ.

—೦೦೦—

ಅಮೇರಿಕದ ಭಯಂಕರ ನೆರೆ.

ಸಂಯುಕ್ತ ಅಮೇರಿಕದ ರಾಜಧಾನಿಯಾದ ನ್ಯೂಯೋರ್ಕಿನಲ್ಲಿ ಭಯಂಕರ ನೆರೆಯು ಕಾರಣವಾಗಿ 150 ಮಂದಿಗಳು ನಷ್ಟರಾಗಿರುವರು. ಅನೇಕರು ಗಾಯಹೊಂದಿರುವರು. ಮಾತ್ರವಲ್ಲದೆ ಈ ನೆರೆಯಿಂದ ಮಿಲಿಯ ಡಾಲರುಗಳು ನಷ್ಟವಾಗಿವೆಯೆಂದು ತಿಳಿದುಬರುತ್ತದೆ. ಅಲ್ಲಿನ ಓಹಿಯೋ ನದಿಯ ಅಣೆಕಟ್ಟು ಒಡೆದುಹೋದ್ದರಿಂದ ನೆರೆಯು ಸಂಭವಿಸಿತ್ತೆಂದು ತಿಳಿದುಬರುತ್ತದೆ. ನೆರೆಯಿಂದ ಕಷ್ಟಪಟ್ಟವರಿಗೆ ಸರಕಾರದಿಂದ ದ್ರವ್ಯಸಹಾಯ ಮಾಡುವ ಏರ್ಪಾಡಾಗಿದೆ.

—೦೦೦—

ಅಸಾಮಿನಲ್ಲಿ ಕಾಂಗ್ರೆಸಿಗೆ ಜಯ.

ಎಸೆಂಬ್ಲಿಯ ಸಭಾಸದರಾದ ಅಸಾಮಿನ ಶ್ರೀ ಎನ್ ಸಿ. ಬಾರ್ದೋಲಾಯಿ ಇವರ ನಿಧನದಿಂದ ಒದಗಿದ ಸ್ಥಳದ ಉಪ ಚುನಾವಣೆ ಇದ್ದಿತು. ಈ ಚುನಾವಣೆಗೆ ಕಾಂಗ್ರೆಸ್ ಪಕ್ಷದಿಂದ ಶ್ರೀ. ಕುಲಧರ ಚಲಿಹಾ, ರಾಷ್ಟ್ರೀಯ ಪಕ್ಷದಿಂದ ರಾವ್ ಬಹದ್ದೂರ್ ವೃಂದಾವನ ಚಂದ್ರ ಗೋಸ್ವಾಮಿ ಎಂಬವರೂ ಉಮೇದುವಾರರಾಗಿದ್ದರು. ಗೋಸ್ವಾಮಿಯವರು ತಮ್ಮ ಅರ್ಜಿಯನ್ನು ಹಿಂತೆಗೆದುಕೊಂಡದ್ದರಿಂದ ಶ್ರೀ. ಕುಲಧರ ಎಂಬವರು ಅವಿರೋಧವಾಗಿ ಆರಿಸಲ್ಪಟ್ಟರು

—೦೦೦—

ಜಗತ್ತಿನ ಪತ್ರಿಕೋದ್ಯಮ.

ಅಮೇರಿಕಾಕ್ಕಿಂತ ಜಪಾನ್ ಮೇಲು

ಕೊಲಂಬಿಯ ವಿಶ್ವವಿದ್ಯಾಲಯದ ಪತ್ರಿಕೋದ್ಯಮ ಶಾಲೆಯ ಪ್ರಿನ್ಸಿಪಾಲರಾದ ಮಿ ಕಾರ್ಲ್ ಡಬ್ಲ್ಯು ಆಕರ್ಮನ್ ಇವರು ಕಾನಡಾ, ಜಪಾನ್, ಚೈನಾ, ಫಿಲಿಪೈನ್ಸ್, ಮಲಯಾದ ಸ್ಟೇಟ್ಸ್, ಹಿಂದೂಸ್ಥಾನ, ಈಜಿಪ್ಟ್ ಮುಂತಾದ ಕಡೆಗಳಲ್ಲಿ ಸಂಚಾರ ಮಾಡಿದ್ದು ಈಗ 'ಪತ್ರಿಕೋದ್ಯಮದ ಸ್ವಾತಂತ್ರ್ಯ' ಈ ವಿಷಯದ ಮೇಲೆ ಪ್ಯಾರಿಸಿನಲ್ಲಿ ಭಾಷಣ ಮಾಡುತ್ತಿರುವರು. ಇವರು ತಮ್ಮ ಭಾಷಣದಲ್ಲಿ 'ಜಪಾನಿ ಪತ್ರಿಕಾಕರ್ತರು ಅಮೇರಿಕಾದವರಿಗಿಂತಲೂ ಮೇಲು' ಎಂದು ಅಭಿಪ್ರಾಯಪಟ್ಟಿರುವರು

—೦೦೦—

ಹರಿಜನ ಸೇವಕ ಸಂಘ.

ಅಖಿಲ ಭಾರತ ಹರಿಜನ ಸೇವಾ ಸಂಘದ ಕಾರ್ಯಕಾರಿ ಮಂಡಳಿಯ ಸಭೆಯೊಂದು ಶ್ರೀ. ಬಿರ್ಲಾರವರ ಅಧ್ಯಕ್ಷತೆಯಲ್ಲಿ ಹೊಸ ದಿಲ್ಲಿಯಲ್ಲಿ ಜರಗಿತು. ಹರಿಜನ ಸೇವೆಗಾಗಿ, ಡೆಲ್ಲಿಯಲ್ಲಿ ಒಂದು ಔದ್ಯೋಗಿಕ ಶಾಲೆಯನ್ನು ಸ್ಥಾಪಿಸಬೇಕೆಂದೂ, ಆಲ್ಲದೆ ಹರಿಜನ ಸೇವಾಕಾರ್ಯಕ್ಕಾಗಿ ರೂ. 4162 ವ್ಯಯಿಸಬೇಕೆಂದೂ, ರೂ 500 ನ್ನು ಉತ್ತರ ಹಿಂದೂಸ್ಥಾನದ ಹರಿಜನ ಸಂಸ್ಥೆಗೆ ಕೊಡಬೇಕೆಂದೂ, ವಿದ್ಯಾರ್ಥಿವೇತನಗಳಿಗಾಗಿ ಪಾಲ್ ಫಂಡ್‌ಗಳನ್ನು ನಡೆಸಲು ರೂ. 1000 ವನ್ನು ವ್ಯಯಿಸಬೇಕಾಗಿಯೂ, ವೈಸರಾಯರ ನಿಧಿಯಲ್ಲಿ 50 ಹರಿಜನ ವಿದ್ಯಾರ್ಥಿಗಳನ್ನು ಕಳುಹಿಸಬೇಕೆಂದೂ ಇವೇ ಮೊದಲಾದ ಹರಿಜನ ಸೇವೆಯ ಕಾರ್ಯದ ಕಾರ್ಯಗಳು ನಿರ್ಧರಿಸಲ್ಪಟ್ಟವು

—೦೦೦—

ಕಲ್ಕತ್ತಾ ನಗರ ಸಭೆಯಿಂದ ಮುಸ್ಲಿಮ್ ಬಂಧುಗಳು.

ಕೆಲ ಸಮಯದ ಹಿಂದೆ ಮುಸ್ಲಿಮರಿಗೆ ನಗರ ಸಭೆಯ ಉದ್ಯೋಗಗಳಲ್ಲಿ ಪ್ರಾತಿನಿಧ್ಯ ಸಿಕ್ಕುವ ವಿಚಾರದಲ್ಲಿ ಕೆಲವು ಮುಸ್ಲಿಮ್ ಸದಸ್ಯರು ತಮ್ಮ ಸದಸ್ಯತನಕ್ಕೆ ರಾಜಿನಾಮೆಯಿತ್ತಿದ್ದರು. ಈಗ ಅಲ್ಲಿನ ನಗರ ಸಭೆಯ ಸದಸ್ಯತನಕ್ಕೆ ಚುನಾವಣೆಯು ನಡೆಯುತ್ತದೆ ಬಹಳ ಗದ್ದಲವೂ ನಡೆಯುತ್ತದೆ ಮುಸ್ಲಿಮರು ತಮ್ಮ ಸ್ಥಳಗಳಿಗೆ ಯೋಗ್ಯ ಮನ್ನಣೆ ದೊರಕದುದರಿಂದ ಚುನಾವಣೆಯಲ್ಲಿ ಭಾಗವಹಿಸದೆ, ಅದಕ್ಕೆ ಬಹಿಷ್ಕಾರವನ್ನು ಹಾಕಬೇಕಾಗಿ ನಿರ್ಧಾರವಾಗಿರುವರು ಆ ಕುರಿತು ಬಹಳ ಚಳವಳಿ ನಡೆಯುತ್ತದೆ.

—೦೦೦—

ಭಾರತ ಮಂತ್ರಿಗಳ ಮೇಲೆ ದಾವೆ.

ನಾಸಿಕದ ಮುನಿಸಿಪಾಲಿಟಿಯವರು ವಿಲಾಯಿತಿಯಲ್ಲಿಯ ಭಾರತ ಮಂತ್ರಿಗಳ ಮೇಲೆ ಒಂದು ದಾವೆ ಹಾಕಿದ್ದರು. ತಮಗೆ ಸರಕಾರದಿಂದ ಶಿಕ್ಷಣಕ್ಕಾಗಿ ಬರತಕ್ಕ ಸಹಾಯ ದ್ರವ್ಯ ಮತ್ತು ಅದರಲ್ಲಿ 4, 193 ರೂಪಾಯಿ ಬರತಕ್ಕ ಹಣದ ಬಗ್ಗೆ ಸೆಶನ್ ಮುನ್ಸೀಫರ ಮುಂದೆ ವಿಚಾರಣೆ ನಡೆಯಿತು ಬಾಂಬಾಯಿಯ ಮತ್ತು ಮೂಫಿಯ ಪ್ರಾಥಮಿಕ ಶಿಕ್ಷಣಕ್ಕೆ ಕೊಡತಕ್ಕ ಸಹಾಯ ದ್ರವ್ಯದೊಳಗೆ ಕಡಿಮೆ ಮಾಡಲು ಸರಕಾರದವರಿಗೆ ಅಧಿಕಾರ ಇಲ್ಲವೆಂದೂ ಅವರು ಆ ಹಣವನ್ನು ಕೊಟ್ಟೇ ತೀರಬೇಕೆಂದೂ ಕೋರ್ಟು ತೀರ್ಪು ಕೊಟ್ಟಿರುವದೆಂದು ಪ್ರಕಟವಾಗಿದೆ.

—೦೦೦—

ಎಲ್ಲರೂ ಕಾಂಗ್ರೆಸ್ಸಿಗೆ ಹೊಂದಿದವರೇ.

ಮುಂಬಯಿ ಸರಕಾರದವರು ಅಹಮದಾಬಾದ ಮುನ್ಸಿಪಾಲಿಟಿಯ ಅಧ್ಯಕ್ಷರಿಗೆ ಮುನ್ಸಿಪಾಲಿಟಿಯಲ್ಲಿ ಕಾಂಗ್ರೆಸ್ಸಿಗೆ ಹೊಂದಿದವರೆಷ್ಟು ಜನ ಸಭಾಸದರಿರುವರೆಂಬ ಬಗ್ಗೆ ಕೇಳಿದ್ದರು. ಅದಕ್ಕೆ ಅಧ್ಯಕ್ಷರು ಉತ್ತರವಾಗಿ, ಕೇಳಿದ ಮಾಹಿತಿಯನ್ನು ಕೊಡಲು ನಿರಾಕರಿಸಿ, ಹೀಗೆನಂತ ಉತ್ತರ ಕೊಟ್ಟಿರುವರು.

'ಮುನ್ಸಿಪಲ್ ಆಫೀಸಿನಲ್ಲಿ ಇಂಥ ಮಾಹಿತಿಯು ಸಿಗಲು ಸಾಧ್ಯವಿಲ್ಲ. ಅದಕ್ಕಾಗಿ ನಾನು ಬಹಳ ವ್ಯಸನಪಡುತ್ತೇನೆ. ಮುನ್ಸಿಪಾಲಿಟಿಯ ಎಲ್ಲ ಸಭಾಸದರ ನಾಡಿಗೆ ಹಾಗೂ ಅವರ ರಾಜಕಾರಣ ಇವುಗಳನ್ನು ಶೋಧಿಸಿ ತೆಗೆಯಲು ನನಗೆ ತಕ್ಕ ವಿಲ್ಲ. ಮುನ್ಸಿಪಾಲಿಟಿಯಲ್ಲಿಯ ಅವರ ಕೃತಿಗಳ ಮೇಲಿನ ನನಗೆ ತಿಳಿದ ಮಟ್ಟಿಗೆ ವಿಚಾರ ಮಾಡಿದರೆ ಎಲ್ಲರೂ ಕಾಂಗ್ರೆಸ್ಸಿಗೆ ಹೊಂದಿದವರೇ'

—೦೦೦—

ಸ್ವಿಟ್ಸರಲ್ಲಿ ವಿಜಯಿ [illegible]

ಶ್ರೀಯುತ ಸತ್ಯಮೂರ್ತಿಯವರು.

ಸ್ವಿಟ್ಸರಲ್ಲಿ ಅನನ್ಯಯ ವಿಜ್ಞಾಪಾಯಿತೆಂದು ಸೂಚಿಸುವುದಕ್ಕಾಗಿ ಶ್ರೀ. ಸತ್ಯಮೂರ್ತಿಯವರು ಎಸೆಂಬ್ಲಿಯ ಮುಂದೆ ತಂದ ಕಟ್ ಮೋಶನ್ ಠರಾವು ಮಂಜೂರಾಯಿತು. 64 ಮಂದಿ ಠರಾವಿನ ಪರವಾಗಿಯೂ, 47 ಮಂದಿ ವಿರೋಧವಾಗಿಯೂ ಮತಕೊಟ್ಟರು

—೦೦೦—

ಕಣ್ಣಿಲ್ಲದವರಿಗೆ ನೂತನ ಪುಸ್ತಕಗಳು.

ಕುರುಡರಿಗೆ ವಿದ್ಯಾಭ್ಯಾಸ ನಡೆಸಲು ಪ್ರಪಂಚದ ವಿವಿಧ ಕಡೆಗಳಲ್ಲಿ ಉತ್ತಮ ಯೋಜನೆಗಳನ್ನು ಹುಡುಕುವ ಕಾರ್ಯವು ಇವತ್ತಿಗೆ ಅನೇಕ ವರ್ಷಗಳಿಂದ ನಡೆಯುತ್ತದೆ. ಪ್ರಕೃತದಲ್ಲೇ ಮಾತಾಡುವ ಪುಸ್ತಕಗಳೆಂಬ ಪುಸ್ತಕಗಳು ಬರುತ್ತಿವೆ ಈ ಪುಸ್ತಕವನ್ನು ಗ್ರಾಮಫೋನ್ ಉಪಕರಣದಿಂದ ಕೇಳಬಹುದು. ಈ ರೀತಿಯಲ್ಲಿ ಗ್ರಾಮಫೋನುಗಳು ವಿದ್ಯಾಭ್ಯಾಸದಲ್ಲಿ ಈಗ ಅನೇಕ ಕಡೆಗಳಲ್ಲಿ ಉಪಯೋಗಿಸಲ್ಪಡುತ್ತಿವೆ ಮಾತಾಡುವ ಪುಸ್ತಕಗಳನ್ನು ಅಮೇರಿಕದವರು, ಪ್ರಕಟಿಸಲೂ ತಯಾರಿಸುತ್ತಿದ್ದಾರೆ. ಇವುಗಳು ಮಾಮೂಲಿನ ನಡೆಯುವ ಗ್ರಾಮಫೋನು ಯಂತ್ರಗಳು. ಒಮ್ಮೆ ಮಾತಾಡಿದ ಮಾತುಗಳನ್ನು ಸರಿಯಾಗಿ ಪ್ರತಿ ಆಡಬಲ್ಲವು ಇದರಲ್ಲಿ ಉಪಯೋಗವಾಗುವ ರೆಕಾರ್ಡ 55 ನಿಮಿಷಗಳ ತನಕ ನಡೆದು 5000 ಮಾತುಗಳನ್ನು ಆಡುವದಂತೆ.

ಇದೇ ಅಮೇರಿಕನ್ ಜಾಣತನ

ಈ ತರದ ಕಳ್ಳತನವು ಹೆಚ್ಚಾಗಿ ಅಮೇರಿಕದಲ್ಲಿ ಮಾತ್ರ ನಡೆಯುತ್ತವೆ. ಮೊನ್ನೆ ರಾತ್ರಿ ಮುಂಬಯಿಯ ಓರ್ವ ಶ್ರೀಮಂತ ಮಾರವಾಡಿ ಮನೆಯನ್ನು ಒಂದು ಕಾರು ಮಾಡಿ ಕೆಲ ಮಂದಿ ಕಳ್ಳರು ಹೊಕ್ಕು 'ಕ್ಲೋರೋಫಾರಮ್' ಉಪಯೋಗದಿಂದ ಒಳಗಿದ್ದವರನ್ನು ಪ್ರಜ್ಞೆ ತಪ್ಪಿಸಿ, ತನುಮಧ್ಯೆ ಜೊಬ್ಬಿಟ್ಟ ಓರ್ವ ಮುದುಕನನ್ನು ಮ್ಯಾಕ್ ಪರಿಸಿ, ಮನೆಯಲ್ಲಿರುವ ಎಲ್ಲಾ ಆಭರಣ ದ್ರವ್ಯ ಇತ್ಯಾದಿಗಳನ್ನು ಹಿಡಿದು ಪಲಾಯನ ಮಾಡಿರುವರು. 'ಕ್ಲೋರೋಫಾರ್ಮ'ನಿಂದ ಪ್ರಜ್ಞೆತಪ್ಪಿದವರು ಬೆಳಗೆ ಪ್ರಜ್ಞೆ ಹೊಂದಿದ ರೀತಿ ಈ ಘಟನೆಯನ್ನು ಪೋಲೀಸರಿಗೆ ತಿಳಿಸಿರುವರು. ಪೋಲೀಸರು ಶೋಧ ನಡೆಸುತ್ತಿದ್ದಾರೆ.

—೦೦೦—

ವಿದ್ಯುಚ್ಛಕ್ತಿಯನ್ನು ಧಿಕ್ಕರಿಸಿದ ಅದ್ಭುತ ಸಾಹಸ

ಮನುಷ್ಯನನ್ನು ಕೊಲ್ಲಲು, ವಿದ್ಯುಚ್ಛಕ್ತಿಗೆ 800 ವೋಲ್ಟುಗಳ ವೇಗವು ಇದ್ದರೆ ಸಾಕಾಗುತ್ತದೆ ಆದರೆ, 400,000 ವೋಲ್ಟು ವೇಗವುಳ್ಳ ವಿದ್ಯುತ್ ಶಕ್ತಿ ಪ್ರವಾಹವನ್ನು ತನ್ನ ದೇಹದೊಳಗೆ ಚಲಿಸುವ ಯೋಗ್ಯತೆಯುಳ್ಳ ಒಬ್ಬ ಮನುಷ್ಯನಿರುವನಂತೆ ಈ ವಿದ್ಯುಚ್ಛಕ್ತಿ ಪ್ರವಾಹವು ಆತನ ದೇಹದಲ್ಲಿ ಚಲಿಸುತ್ತಿರುವಾಗ ಆತನ ಬೆರಳುಗಳಿಂದ ಕಿಡಿ ಹಾರುತ್ತದಂತೆ. ಆತನು ವಿದ್ಯುತ್ ಶಕ್ತಿ ಬಲ್ಬುಗಳನ್ನು ಉರಿಸಬಲ್ಲನಂತೆ. ಆತನು ಈ ಅದ್ಭುತವನ್ನು ನಡೆಯಿಸುವ ಉಪಾಯವು ಗುಟ್ಟಾಗಿಟ್ಟಿರುತ್ತದೆ ಆದರೆ ಆತನ ದೇಹದಿಂದ 400,000 ವೋಲ್ಟಿನ ಪ್ರವಾಹವು ಚಲಿಸುವುದು ಹಲವರು ಕಣ್ಣಾರೆ ಕಂಡಿರುವರು ಈ ಅದ್ಭುತ ಚಮತ್ಕಾರದ ಮರ್ಮವೇನಾಗಿರಬಹುದು ?

—೦೦೦—

ಲಖ್ನೋ ಕಾಂಗ್ರೆಸ್.

ಈ ಬಾರಿ ಲಖ್ನೋದಲ್ಲಿ ಜರಗಲಿರುವ ಕಾಂಗ್ರೆಸ್ಸಿಗೆ 700 ಮಂದಿ ಪ್ರತಿನಿಧಿಗಳು ಬರುವರಾಗಿ ತಿಳಿದುಬರುತ್ತದೆ. ಬಂಗಾಳದ ಕಾಂಗ್ರೆಸ್ ಕಲಹವು ತನಕ್ಕ ನಿವಾರಣೆಯಾಗದಿರುವುದರಿಂದ, ಇಲ್ಲಿ ಪ್ರಾತಿನಿಧ್ಯ ಕುರಿತು ಇನ್ನೂ ನಿರ್ಧಾರಗಳಾಗಲಿಲ್ಲ. ಮುಂಬಯಿಯಲ್ಲೂ ಈ ತರದ ಕಲಹವುಂಟಾಗಿತ್ತು. ಆದರೆ ಅದು ನಿವಾರಣೆಯಾಗುವುದಾಗಿ ತಿಳಿದುಬರುತ್ತದೆ. ತಮಿಳುನಾಡು, ಆಂಧ್ರದೇಶ, ಸಂಯುಕ್ತಪ್ರಾಂತ್ಯಗಳು, ಬಿಹಾರ, ಗುಜರಾತು ಈ ಪ್ರಾಂತ್ಯಗಳಿಂದ ಹೆಚ್ಚು ಪ್ರತಿನಿಧಿಗಳು ಬರುವವರಾಗಿ ತಿಳಿದುಬರುತ್ತದೆ ಕಾಂಗ್ರೆಸ್ಸಿನಲ್ಲಿ ಆಗಬೇಕಾದ ಯಾವತ್ತು ನಿರ್ಧಾರಗಳು ಈ ಪ್ರಾಂತ್ಯಗಳ ಮೇಲೆ ಹೊಂದಿವೆ ಈ ಬಾರಿಯ ಕಾಂಗ್ರೆಸಿನಲ್ಲಿ ಎಲ್ಲರೂ ಐಕ್ಯದಿಂದ ಕಾರ್ಯ ನಡೆಯಿಸುವರಾಗಿ ಕೆಲ ನಾಯಕರು ಭರವಸೆ ಕೊಟ್ಟಿರುವರಾಗಿ ತಿಳಿದುಬರುತ್ತದೆ.

—೦೦೦—

ಪೂರ್ವ ಜನ್ಮದ ಕಥೆಯನ್ನು ಹೇಳುವ ಮತ್ತೊಂದು ಹುಡುಗಿ.

ದಿಲ್ಲಿಯ ಶಾಂತಿದೇವಿಯೆಂಬ 9 ವರ್ಷದ ಹುಡುಗಿಯು ತನ್ನ ಹಿಂದಿನ ಜನ್ಮದ ಕಥೆಯನ್ನು ಹೇಳುತ್ತಿರುವದನ್ನು ವಾಚಕರು ಇಷ್ಟರಲ್ಲಿಯೇ ಮರೆತಿರಲಿಕ್ಕಿಲ್ಲ. ಈಗ ಆಂತಹದೇ ಮತ್ತೊಂದು ಸಂಗತಿಯು ಷೋಲಾಪುರ ಎಂಬಲ್ಲಿ ಸಂಭವಿಸಿದೆ ಅಹಿರ ಜಾತಿಯ (ಹಿಂದುಳಿದ) 4 ವರ್ಷದ ಭಗವತಿ ಎಂಬ ಹುಡುಗಿಯು ತನ್ನ ಹಿಂದಿನ ಜನ್ಮದ ಕಥೆಯನ್ನು ಸಂಪೂರ್ಣವಾಗಿ ಹೇಳುತ್ತಿದೆ. ಈ ಹುಡುಗಿಯ ಹಿಂದಿನ ಜನ್ಮದ ಹೆಸರು ಶಾಂತಿದೇವಿಯೆಂದು ಇವಳು ಸಾಯುವ ಮುಂಚೆ 2 ಗಂಡು ಮಕ್ಕಳನ್ನು ಮತ್ತು ಒಂದು ಹೆಣ್ಣು ಮಗಳನ್ನು ಬಿಟ್ಟು ಸತ್ತಿರುವಳಂತೆ. ಆವಳ ಗಂಡನ ಮನೆಯು ಭೋಲೆಪುರ. ಇಷ್ಟನ್ನು ಹೇಳುತ್ತಿದೆ

ಈ ಹುಡುಗಿಯನ್ನು ಭೋಲೆಪುರಕ್ಕೆ ಕರೆದುಕೊಂಡು ಹೋಗಲು, ತಾನು ಇದ್ದ ಮನೆಯನ್ನು ಮತ್ತು ಮಕ್ಕಳನ್ನು ಗುರುತು ಹಿಡಿದಳು. ಮಕ್ಕಳನ್ನು ನೋಡಿದ ಕೂಡಲೇ ಹುಡುಗಿಯು ಬಹಳ ಆನಂದಿತಳಾದಳು 3 ಮಕ್ಕಳೂ ದೊಡ್ಡವರಾಗಿದ್ದು ಹೆಣ್ಣು ಮಗಳಂತೂ 31 ವರ್ಷದವಳಾಗಿದ್ದು, ಆಕೆ ಸ್ಕೂಲ್ ಮಾಸ್ತರಳಾಗಿರುವಳು.

ಈ ಸಂಗತಿಯನ್ನು ಪರೀಕ್ಷೆ ಮಾಡುವದಕ್ಕೆ ಅನೇಕ ಪ್ರಶ್ನೆಗಳು ಕೇಳಲ್ಪಟ್ಟವು. ಅವೆಲ್ಲಕ್ಕೂ ಆ ಹುಡುಗಿಯು ಸರಿಯಾಗಿ ಉತ್ತರ ಕೊಟ್ಟಳು. ಆ ಹುಡುಗಿಯು ಈ 1 ಮನೆಯಿಂದ ಜಾತಿಯು ಕೇಳು ಇದ್ದು, ಅಲ್ಲಿ ಇವರಿಗೆ ಮನಸ್ಸಿಲ್ಲದವಳಾಗಿರುವಳು ತನ್ನ ಹಿಂದಿನ ಮಕ್ಕಳನ್ನು ನೋಡುವದಕ್ಕೆ ಕುಡುಗಿ ಭೋಲೆಪುರದ ಹಾದಿ ಹಿಡಿದು ಒಮ್ಮೊಮ್ಮೆ ಓಡುತ್ತಿರುವಳು

ಈ ಹುಡುಗಿಗೆ ಹಿಂದಿನ ಜನ್ಮದಲ್ಲಿ ಸಾಯುವಾಗ ಐವತ್ತು ವರ್ಷ ಪ್ರಾಯವಾಗಿತ್ತು. ಸತ್ತದ್ದಕ್ಕೂ ಮತ್ತು ಪುನಃ ಹುಟ್ಟಿದ್ದಕ್ಕೂ ಲೆಖ್ಖ ಹಾಕಿದರೆ 10 ತಿಂಗಳ ಅಂತರವಿರುವದು.

—೦೦೦—

Reg. No. M. 1550

3-4-1936

KODAGU

IF NOT delivered please return to "KODAGU" OFFICE, MERCARA.

ಕೊಡಗು

ಅಚ್ಚುಮೊಚ್ಚಿನ ಮುದ್ರಣ ಕೆಲಸಕ್ಕೆ "ಕೊಡಗು" ಪ್ರೆಸ್ಸ್ ಮಡಿಕೇರಿ. ಹೆಚ್ಚಿನ ವಿಷಯಕ್ಕೆ ಕಾಗದ ಬರೆಯಿರಿ.

ಪ್ರತಿ ಶುಕ್ರವಾರ ಪ್ರಕಟಿಸಲ್ಪಡುವದು.

ವಾರ್ಷಿಕ ಚಂದಾ ರೂ. ೩—೮—೦. ಸಂಪಾದಕ—ಪಂದ್ಯಂಡ ಐ. ಬೆಳ್ಯಪ್ಪ.

ಸಂಪುಟ ೧೫] ಮಡಿಕೇರಿ, ತಾ. ೩—೪—೧೯೩೬ [ಸಂಚಿಕೆ ೪೦

Telephon; 3145

By Appointment To H E The Governor of Madras.

Telegrams 'PRECIOUS.'

Brooch



Ring.

Ring

Necklace

V. SUBRAMANIA IYER.

Jeweller, & Diamond Merchant,

52-19 2 & 3 Kuppumuthu Street Tiruvateswaranpet. POST BOX 423 TRIPLICANE. P. O., MADRAS.

Catalogue & special designs with quotations (free) on enquiry

BANKING FACILITIES OF EVERY DESCRIPTION.

Head office.—UDIPI.

BRANCHES—
1. Madras,
2 Coondapoor.
3 Car Street, Mangalore,
4 Bunder Mangalore
5 Shimoga
6 Udipi
7. Mercara
8 Virarajendrapet

Security.

The financial strength and integrity of this Bank is shown by the growth of the RESERVES from a modest sum of Rs 83000 in 1927 to its present position with Rs 3.64 644

BANKERS AT—
1 Bombay.
2 Calcutta.
3. Karachi,
4. Bangalore
5. Mysore
6 Calicut
7. Cannanore
8 Cochin, and other important places

To those thinking of investments the following figures should strongly appeal

Capital Authorised, issued and subscribed—Rs. 3 50,000
Paid up Rs. 2.80 750
Deposits—Rs 27,99 323 Working Capital—Rs. 35.66.707.

Fixed Deposits now received upto 5%.

The Canara Banking Corporation Udipi Limited.

52—20 Estd 1906.

ಜನರಲ್
ಅಷ್ಯೂರೆನ್ಸ್ ಸೊಸೈಟಿ, ಲಿಮಿಟೆಡ್.

(ಸ್ಥಾಪಿತವಾದದ್ದು 1907 ರಲ್ಲಿ)

ಜೀವವಿಮೆಯಲ್ಲಿನ ಅತ್ಯುತ್ತಮ ಸೌಲಭ್ಯಗಳನ್ನೆಲ್ಲ ಕೊಡುತ್ತದೆ.

ಬೋನಸ್ಸು ಅತೀ ಹೆಚ್ಚು.

ಜೀವಾವಧಿ ಪಾಲಿಸಿಗಳ ಮೇಲೆ ವರ್ಷಕ್ಕೆ ರೂ 25%o
ಎಂಡೋವ್ಮೆಂಟ್ ಪಾಲಿಸಿಗಳ ಮೇಲೆ ವರ್ಷಕ್ಕೆ „ 20%o
ಪಾಲಿಸಿಯ ಕರಾರುಗಳು ಅತೀ ಸುಲಭ
ಎಷ್ಯೂರೆನ್ಸ್ ಯೋಜನೆಗಳು ಎಲ್ಲರಿಗೂ ಹಿತಕರವಾಗಿದೆ.
ಏಜೆನ್ಸಿ ನಿಯಮಗಳು ಅತೀ ಲಾಭದಾಯಕವಿದ್ದು ವಂಶಪಾರಂಪರ್ಯ ಕಮಿಷನ್ ದೊರೆಯುವಂತಿದೆ
ಹೆಚ್ಚಿನ ವಿವರಗಳಿಗೆ ಕೂಡಲೇ ಬರೆಯಿರಿ.

[illegible], ಎಫ್. ಎಸ್. ಎಸ್. (ಲಂಡನ್)
ಜನರಲ್ ಮೇನೇಜರ್. ದಿ ಜನರಲ್ ಅಷ್ಯೂರೆನ್ಸ್ ಸೊಸೈಟಿ ಲಿಮಿಟೆಡ್, ಅಜ್ಮೀರ್ ಅಥವಾ —
ಎ. ಎಸ್. ಎಸ್. ಅಯ್ಯಂಗಾರ್,
ಸುಪರಿಂಟೆಂಡೆಂಟ್, ಜನರಲ್ ಅಷ್ಯೂರೆನ್ಸ್ ಬಿಲ್ಡಿಂಗ್
ಚಾಮರಾಜಪೇಟೆ, 3ನೇ ರೋಡು
52—42 ಬೆಂಗಳೂರು

ಪ್ರಕಟಣೆ.

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್,
ಲಿಮಿಟೆಡ್, ಕೋ ಆಪರೇಟಿವ್ ಸೊಸೈಟೀಸ್
ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ

(ಸ್ಥಾಪಿತವಾದದ್ದು 1922ರಲ್ಲು)

		ರೂ.
ಶೇರ್ ಬಂಡವಾಳ	—	50,000— 0—0
ವಸೂಲಾದ ಶೇರ್ ಮೊಬಲಗು	—	37,180— 0—0
ಜವಾಬಂದ ಠೇವಣಾತಿ	—	25,9035—8—10
ವಸೂಲಾದ ಕ್ಷೇಮನಿಧಿ	—	1,03851— 4—0

ಈ ಬ್ಯಾಂಕಿನಿಂದ ಕೊಡಗು ಜಿಲ್ಲೆ ಸಹಕಾರಿ ಸಂಘಗಳಿಗೆ ಸಾಲ ಕೊಡಲಾಗುತ್ತದೆ.

ಒಂದು ವರ್ಷ ಮುದ್ದತಿನ ಠೇವಣಾತಿಗಳಿಗೆ ಶೇಕಡಾ 4—8—0 ರ ಬಡ್ಡಿಯೂ ಒಂದು ವರ್ಷದ ಠೇವಣಾತಿಗಳಿಗೆ ಶೇಕಡಾ 4 ರ ದರದಲ್ಲಿಯೂ ಬಡ್ಡಿ ದೊರೆಯುತ್ತೆ.

ವರ್ಷಕ್ಕೊಂದಾವರ್ತಿ ಆಡಿಟ್ ರಿಪೋರ್ಟು ಪ್ರಕಟಿಸಲಾಗುತ್ತದೆ.

ಪ್ರೆಸಿಡೆಂಟರು,	ಟ್ರೆಜರರ್
ಕಂಬ್ಯಂಡ ಐ. ಬೆಳ್ಯಪ್ಪನವರು.	ರಾ. ಸಾ. ಪಾಂಡಂಡ ಚಂಗಪ್ಪನವರು,

ಸೆಕ್ರೆಟರಿ
ಮನೆಯಪ್ಪಂಡ ಬೆಳ್ಯಪ್ಪನವರು.

ತಾರೀಖು 1—2—1936.

ಭಾರತದ ಮುಂದಿನ ಜನಾಂಗದ ಆರೋಗ್ಯ ಮತ್ತು ಕ್ಷೇಮ ವರ್ಧನೆಯು ಇಂದಿನ ಅನೇಕ ರಾಜಕೀಯ ಮತ್ತು ಸಾಮಾಜಿಕ ಮುಂದಾಳುಗಳ ದೃಷ್ಟಿಯಲ್ಲಿರುವ ಒಂದು ದೊಡ್ಡ ಸಮಸ್ಯೆಯಾಗಿರುತ್ತದೆ. ತನ್ನ ಮಕ್ಕಳ ದೇಹವು ಪುಷ್ಟಿಯಾಗಿಯೂ ಸುದೃಢವಾಗಿಯೂ ಇರಲಿಕ್ಕೆ ಬೇಕಾದ ಒಂದು ಅಪೂರ್ವವಾದ ಸಂಜೀವಿನಿಯನ್ನು ಎಲ್ಲರೂ ತಿಳಿದದ್ದಾಗಿದ್ದರೆ ಈ ವಿಚಾರವು ಇಷ್ಟು ಕಠಿಣವಾದದ್ದಾಗಿರುತ್ತಿರಲಿಲ್ಲ. ಈ ಸಂಜೀವಿನಿಯ ರೀತಿಯ ಔಷಧವನ್ನು ಹೆಚ್ಚು ಸಮಯದಿಂದ ಅನೇಕರು ಭಾರತದ ಉದ್ದಗಲಕ್ಕೂ ಕಳೆದ 50 ವರ್ಷಗಳಿಂದ ಉಪಯೋಗಿಸುತ್ತಿರುವರು ಮಗುವು ಹೆಚ್ಚು ಶಕ್ತವಾಗಿ, ಸರ್ವಲಕ್ಷಣದಿಂದ ಕೂಡಿರುವನ್ನು ನಡೆ ಬೇಗನೆ ಕಲಿಯಲಿಕ್ಕಾಗಿ, ಅಗಿಂದಾಗ್ಯ ಶೀತ, ಕೆಮ್ಮು ಮೊದಲಾದ ರೋಗಗಳಿಗೀಡಾಗದಂತೆ ಒಡನೆ ಪ್ರಸಿದ್ಧಿ ಹೊಂದಿರುವ

ಡೋಂಗರೆ ಬಾಲಾಮೃತವನ್ನು

ಕೊಡಬೇಕು. ಡೋಂಗರೆ ಬಾಲಾಮೃತವು ಒಂದು ಟಾನಿಕ್. ಎಲ್ಲ ಕಡೆಗಳಲ್ಲೂ ದೊರೆಯುವುದು.

ಪ್ರೊಪ್ರೈಯಟರ್—
ಕೆ. ಟಿ. ಡೋಂಗರೆ ಕಂಪೆನಿ,
(52—4) ಗಿರಿಗಾಂವ್, ಬೊಂಬಾಯಿ.

EMPIRE OF INDIA LIFE ASSURANCE CO., LTD.

ESTD. 1897.

TEN YEARS' PROGRESS.

	1925 Rs.	1935 Rs.
Income	45,50,127	73,28,467
New Assurances	78,07,000	1,47,57,880
Total Assets	2,46,08,120	4,50,03,372
Assurances in force	6,95,93,793	11,56,12,828

Form of proposal and other particulars will be sent on Application.

Head office:—		Branch Office:—
Empire of India Life Building, BOMBAY.	52—18	152/3—Commercial Street, BANGALORE.

ಪಂಡಿತ ಜವಾಹಿರಲಾಲ್ ನೆಹರೂ ಬಂದಾಗ್ಗೆ ಹುಬ್ಬಳ್ಳಿ ಪ್ರದರ್ಶನದಲ್ಲಿ ಸುವರ್ಣ ಪದಕವನ್ನು ಪಡೆದ,

ಒಂದೇ ಸಮನಾಗಿ ಮೂವತ್ತೈದು ವರ್ಷದ ಅನುಭವದಿಂದ ಹಿಂದುಸ್ಥಾನದ ಸಾವಿರಾರು ಜನರಿಂದ ಪ್ರಶಂಸಿಸಲ್ಪಟ್ಟ ಆಯುರ್ವೇದೋಕ್ತ ತಾಜಾ ಮತ್ತು ಪವಿತ್ರ ವನಸ್ಪತಿಗಳಿಂದ ತಯಾರಿಸಿರುವ ಮತ್ತು ಇತರ ಗುಣಗಳಿಗಾಗಿ ಅನೇಕ ಸರ್ಟಿಫಿಕೇಟುಗಳು ಮತ್ತು ಬಂಗಾರದ ಪದಕಗಳನ್ನು ಪಡೆದು ಪರದೇಶದಲ್ಲಿ ಧಾರಾಳವಾಗಿ ಖಪಾಗುವ

ಶಕ್ತಿವರ್ಧಕ ಉತ್ತಮ ತರಗತಿಯ ಟಾನಿಕ್

ದ್ರಾಕ್ಷಾಸ್ವಾರ

ಈ ವನಸ್ಪತಿ ರಸಾಯನಗಳಿಂದ ಶಾಸ್ತ್ರೋಕ್ತವಾಗಿ ಸ್ವದೇಶೀ ಯಂತ್ರೋಪಕರಣಗಳಿಂದ ತಯಾರಿಸಿದ ಮಧುರಾಮೃತ. ಇದರ ಸೇವನೆಯಿಂದ ಉಷ್ಣ (ಗರಮಿ), ಧಾತುಕ್ಷಯ, ಸ್ವಪ್ನಾವಸ್ಥೆ, ಕೈಕಾಲು, ಕಣ್ಣುಗಳ ಉರಿ, ಮಲಬದ್ಧತೆ ಮುಂತಾದವು ಗುಣವಾಗುವದಲ್ಲದೆ ಜೀರ್ಣಶಕ್ತಿಯು ಹೆಚ್ಚಿ ದೇಹದಾರ್ಢ್ಯವುಂಟಾಗುವುದು. ಇದರಿಂದ ನಪುಂಸಕತ್ವವು ಇಲ್ಲದಾಗಿ ವೀರ್ಯವೃದ್ಧಿಯಾಗುವದು. ಹೆಂಗಸರಿಗೂ ಗಂಡಸರಿಗೂ ಇದು ಗುಣಕಾರಿ ಇದೆ. ಮುಟ್ಟಿನ ಗಡಿಬಿಡಿ ಮತ್ತು ಉಷ್ಣ (ಗರಮಿ) ರೋಗಗಳಿದ್ದರೆ ಅವೆಲ್ಲವೂ ಗುಣವಾಗಿ ಹೆಂಗಸರಿಗೆ ಸಂತಾನವೃದ್ಧಿಯಾಗುವದು. ಈ ಔಷಧದ 3 ಬಾಟ್ಲಿಗಳ ಸೇವನೆಯಿಂದ ಪೂರ್ಣ ಗುಣ ಆಗುತ್ತದೆ. 1 ಬಾಟ್ಲಿಯನ್ನು ಸೇವಿಸುವದರಲ್ಲೇ ಇದರ ಗುಣ ಕಂಡುಬರುವದು. ಪ್ರಮಾಣ:—ಬೆಳಗಿನಲ್ಲಿ ಒಂದು ತೊಲೆ ಮತ್ತು ಸಂಜೆಗೆ ಒಂದು ತೊಲೆ ತೆಗೆದುಕೊಳ್ಳಬೇಕು.

ಬೆಲೆ—1 ಬಾಟ್ಲಿಗೆ ರೂ. 1—4—0, 3 ಬಾಟ್ಲಿಗೆ ರೂ. 3—8—0, 1 ಡಜನ್ ಬಾಟ್ಲಿಗಳಿಗೆ ರೂ. 12—0—0;

ಮ್ಯಾನೇಜರ್:—ದ್ರಾಕ್ಷಾಸ್ವಾರ ಡಿಪೋ ಪೋಸ್ಟ್ ಶಿವಾಪುರ ಜಿಲ್ಲಾ (ಬೆಳಗಾಮ್.)

52—29 ಕೊಡಗಿನ ಏಜಂಟರು.—ಪಾವಲ್ಲಿ ಸ್ಟೋರ್ಸ್, ಮಡಿಕೇರಿ

ಟಿ ಪುಟ್ಟಯ್ಯ ಶೆಟ್ಟಿ & ಸನ್ಸ್, ಸೋಮವಾರಪೇಟೆ.

ದೇಶಪಾಂಡೆ ಬ್ರದರ್ಸ್, ಶನಿವಾರಸಂತೆ.] ಎ. ಎನ್ ಹುಚ್ಚಯ್ಯ, ಮರ್ಚೆಂಟ್, ಗೋಣಿಕೊಪ್ಪಲು.

ಓರಿಯಂಟಲ್ ಗವರ್ನಮೆಂಟ್ ಸೆಕ್ಯೂರಿಟಿ ಜೀವ ವಿಮೆ ಕಂಪೆನಿ ಲಿಮಿಟೆಡ್.

ಗವರ್ನಮೆಂಟ್ ಅಂಗೀಕಾರದಲ್ಲಿ ಸ್ಥಾಪಿತವಾದದ್ದು) (ಹೆಡ್ ಆಫೀಸು— ಬೊಂಬಾಯಿ.

1934ನೇ ಇಸವಿಯ ಕಂಪೆನಿಯ ಕೆಲಸದ ಫಲಿತಾಂಶ—

ಹೊಸ ಪಾಲಿಸಿಗಳ ಪ್ರಿಮಿಯಂ	ರೂ.	7,62,42,761
ವಾರ್ಷಿಕ ಉತ್ಪತ್ತಿ	ರೂ.	3,14,01,970
ಚಾಲ್ತಿಯಲ್ಲಿರುವ ಒಟ್ಟು ಪಾಲಿಸಿಗಳು	ರೂ.	54,20,38,518
ಕ್ಲೇಮುದಾರರಿಗೆ ಕೊಟ್ಟ ಒಟ್ಟು ಹಣ	ರೂ.	16,29,88,814
ಫಂಡ್ಸ್ ಹೆಚ್ಚಿದ್ದು	ರೂ.	15,53,88,843

ಈ ಮೇಲಿನ ಫಲಿತಾಂಶಗಳು 'ಓರಿಯಂಟಲ್' ಕಂಪೆನಿಯ ಸುಸಂಘಟನೆಯನ್ನೂ ಮತ್ತು ಪ್ರಸಿದ್ಧಿಯನ್ನೂ ವಿಶದಗೊಳಿಸುತ್ತವೆ.

ಈ ಪ್ರಸಿದ್ಧಿಗೊಂಡಿರುವ ಮತ್ತು ಅಭಿವೃದ್ಧಿಯಲ್ಲಿರುವ ಇಂಡಿಯನ್ ಜೀವ ವಿಮಾ ಕಂಪೆನಿಯಲ್ಲಿ ವಿಮೆ ಇಳಿಸಲು ಸಾವಕಾಶ ಮಾಡಬೇಡಿ.

ಹೆಚ್ಚಿನ ಮಾಹಿತಿಗೆ ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳತಕ್ಕದ್ದು:—

ಮೇನೇಜರ್, ಓರಿಯಂಟಲ್ ಬಿಲ್ಡಿಂಗ್ಸ್, ಬೊಂಬಾಯಿ.

ಅಥವಾ ಕಂಪೆನಿಯ ಈ ಕೆಳಗಿನ ಯಾವ ಆಫೀಸುಗಳಿಗಾದರೂ ಬರೆಯಬಹುದು.

ಆಗ್ರ	ಕಲ್ಲಿಕೋಟೆ	ಕರಾಚಿ	ಮೌಂಟಾಸ್	ರಂಗೂನ್
ಅಹ್ಮದಾಬಾದು	ಕಲ್ಕತ್ತಾ	ಕೋಲಾಲಂಪೂರು	ನಾಗಪುರ	ರಾವಲ್‌ಪಿಂಡಿ
ಅಜ್ಮೀರ್	ಕೊಲಂಬೋ	ಲಾಹೋರ್	ಪಾಟ್ನಾ	ಸಿಂಗಪುರ
ಅಲ್ಲಾಹಾಬಾದು	ಢಾಕಾ	ಲಕ್ನೋ	ಪೂನ	ಸುಕ್ಕೂರು
ಅಂಬಾಲಾ	ಡೆಲ್ಲಿ	ಮದ್ರಾಸು	ರಾಯಪುರ	ತಿರುಚಿನಾಪಳ್ಳಿ
ಬೆಳ್ಗಾಂ	ಗೌಹಾತಿ	ಮಂಡಲೆ	ರಾಜಕೋಟು	ತಿರುವಾಂಕೂರು
ಬರೇಲಿ	ಜಲಗಾಂ	ಮೋಡಿನೀನ	ರಾಂಚಿ	ವಿಶಾಖಪಟ್ಣ
ಕೊಯಂಬತ್ತೂರು	ಗುಂಟೂರು	ಜಲಪೈಗುರಿ	ಜಬ್ಬಲ್‌ಪುರ	ಮಧುರೆ & ವೈಸೂರು

ಓರಿಯಂಟಲ್ ಬಿಲ್ಡಿಂಗ್ಸ್, ಮಿಷನ್ ಸ್ಟ್ರೀಟ್, ಬೆಂಗಳೂರು. 52—11

ಯಂ. ವಿ. ಮುತ್ತುಕೃಷ್ಣ ನಾಯುಡು,
(ಬ್ರಾಂಚ್ ಸೆಕ್ರೆಟರಿ.)

Printed & published by P I Belliappa at 'Kodagu" Press Mercara for "Kodagu" Ltd.

ಡಾಕ್ಟರ್ ನೋತ್ಯುಸ್ ಎಬ್ರಹಾಮ್.
ದಂತ ವೈದ್ಯರು.

ಗಿರಗಾಂವ ಬ್ಯಾಕ್ರೋಡ.

(ಪೋಸ್ಟಾಫೀಸು ಎದುರುಗಡೆ)

ಸಕಲ ಹಲ್ಲು ರೋಗಗಳನ್ನು ಶೀಘ್ರವಾಗಿ ಗುಣಪಡಿಸುವದು. ... ಕೃತ್ರಿಮ ಹಲ್ಲುಗಳನ್ನು ... ಒಮ್ಮೆ ಪರೀಕ್ಷಿಸಿ ... [52—2]

೫೦ ವರ್ಷಗಳಿಂದ ಅನುಭವಪಟು ಪ್ರಖ್ಯಾತಿ ಹೊಂದಿದ

ಕರ್ಕ ಕಂಪನಿ

ಜ್ವರದ ಗುಳಿಗೆಗಳು.

ಚಳಿಜ್ವರ, ಚಾತುರ್ಥಿ ಜ್ವರ, ... ಜ್ವರ, ಮಲೇರಿಯಾ ಜ್ವರ ಇತ್ಯಾದಿ ... ರಾಮಬಾಣದಂತೆ ಇವೆ. ... ರೂ. ೧. ... ತರಿಸಿಕೊಳ್ಳಿ.

ಗಣೇಶ ರಾಮಚಂದ್ರ ಕರ್ಕ,

(2—25) ಮತ್ತು ಕಂಪನಿ, ಗಿರಗಾಂವ, ಮುಂಬಯಿ.

ಗುಂಡು ಹೊಡೆಯುವ ಕ್ರಮಗಳು.
ಉಪಯುಕ್ತ ಸೂಚನೆಗಳು.

ಬೇಟೆಗಾರರಿಗೆ:— ನಮ್ಮ ಕೋವಿ ಮತ್ತು ಕೋಟಾಗಳ ... (Our arms and ammunition GUIDE 3) ಇದರಲ್ಲಿ ಗುಂಡು ಹೊಡೆಯುವ ... ವಿಷಯ ... ಉಚಿತ ...



Goolamhusain Allibhoy & Sons. Ltd.,

26—25 210, Abdulrehman Street, BOMBAY 3.

ಸನ್ 1882ನೇ ಇಸವಿ ಇಂಡಿಯನ್ ಟ್ರಸ್ಟ್ ಆಕ್ಟಿಗೆ ಒಳಪಟ್ಟು ಸರಕಾರದ ಭರವಸೆಯುಳ್ಳ

ದಿ ಬೊಂಬೆ ಲೈಫ್ ಎಶ್ಯೂರೆನ್ಸ್ ಕಂಪೆನಿ ಲಿಮಿಟೆಡ್:

ಅಧ್ಯಕ್ಷರು:—ಮಾನನೀಯ ಸರ್ ಲಲ್ಲುಭಾಯಿ ಸಾಮಳದಾಸ್,

ಕೆ. ಟಿ. ಸಿ. ಐ. ಇ., ಜೆ. ಪಿ. ಯವರು.

ಕೋಟ್ಯಕಾರ್ ಬ್ರದರ್ಸ್ ಮದ್ರಾಸು ಬ್ರಾಂಚ್ ಸೆಕ್ರೆಟರಿಗಳು.

ಕಳೆದ ಲಾಭ ಹಂಚುವಿಕೆಯಲ್ಲಿ ರೂ. 18ರಿಂದ 23ರ ವರೆಗೆ ಬೋನಸು ಡಿಕ್ಲೇರಾಗಿರುತ್ತೆ.

ಹಿಂದಿಯವರಿಂದ ಸ್ಥಾಪಿಸಲ್ಪಟ್ಟು ... ಲಕ್ಷಣಗಳಿಂದ ... ಪ್ರೀಮಿಯಮ್ ದರದಲ್ಲಿ ಪಾಲಿಸಿ ಕೊಡುವ ಕಂಪೆನಿ ಇದೆಂದು ... ಪಾಲಿಸಿ ... ಪ್ರೀಮಿಯಮ್ ದರದಲ್ಲಿ ... ಈ ಕಂಪೆನಿಯು ... ಉತ್ತಮ ... ಏಜೆನ್ಸಿ ... ಕೊಡಲಾಗುತ್ತೆ.

ಹೆಚ್ಚಿನ ಮಾಹಿತಿಗೆ—**ಬಿ. ಎಸ್. ಐಯ್ಯಪ್ಪ,**

ಕೊಡಗು ಚೀಫ್ ಏಜೆಂಟ್,

26—35 ಮಹದೇವಪೇಟೆ, ಮಡಿಕೇರಿ

SHRI UMANI NARAYANACHARYA

Choukhamba Benares City

ರುದ್ರಾಕ್ಷಿಗಳೇ ... ಆರೋಗ್ಯಕ್ಕೆ ... ಅವರು ರುದ್ರಾಕ್ಷಿಯನ್ನು ... ಧರಿಸಿದರೆ ... ಬುದ್ಧಿಶಕ್ತಿ ... ಇತ್ಯಾದಿ ... ರುದ್ರಾಕ್ಷಿ ... ದೊರೆಯುವ ...

THIS MAN
OUR CUSTOMER

... ರುದ್ರಾಕ್ಷಿ ... 1 ರಿಂದ ... 108 ರುದ್ರಾಕ್ಷಿಗಳುಳ್ಳ ... 3—4—5—6—7—8 ಮುಖಗಳ ... 9—10—11 ಮುಖಗಳುಳ್ಳ ... 12—13—14 ಮುಖದ ... ರುದ್ರಾಕ್ಷಿ ...

ರಿ. ಉಮಾಣಿ ನಾರಾಯಣಾಚಾರ್ಯ,

52—30 ಚೌಖಂಬಾ ಬೆನಾರಸ್. (ಕಾಶೀ)

ಮಾರಾಟಕ್ಕೆ ಸಿದ್ಧವಾಗಿದೆ.

ಸರಕಾರದ ಸಂಘಗಳ ಮತ್ತು ದವಸ ಭಂಡಾರಗಳ ... ಸಂಘದ ಮತ್ತು ದವಸ ಭಂಡಾರ ... ಫಾರಂಗಳು ... ಗುಮಾಸ್ತೆ ...

ಮೇನೇಜರ್

"ಕೊಡಗು" ಲಿಮಿಟೆಡ್,

ಮಡಿಕೇರಿ.

ಎರಡು ಕೆಲಸಕ್ಕೊಂದೇ ಸಾಬೂನು

"ಮೈಸೂರು ಗಂಧದ ಸಾಬೂನು."

ಈ ಸಾಬೂನು ನಾಜೂಕಾದ ಚರ್ಮವನ್ನು ಶುಭ್ರಗೊಳಿಸುವುದು ಮಾತ್ರವಲ್ಲ, ಸಂರಕ್ಷಣೆಯನ್ನೂ ಮಾಡುತ್ತದೆ. ಯಾರು ಯಾರು ತಮ್ಮ ಆರೋಗ್ಯದ ಕಡೆ ಗಮನವಿರುವರೋ ಯಾರು ಯಾರು ತಮ್ಮ

ಚರ್ಮವನ್ನು ಎಚ್ಚರಿಕೆಯಿಂದ ನೋಡುವರೋ ಅವರೆಲ್ಲರೂ ಉಪಯೋಗಿಸುವುದು ಮೈಸೂರು ಗಂಧದ ಸಾಬೂನು.

ಎಲ್ಲಾ ಅಂಗಡಿಗಳಲ್ಲಿ ಸಿಕ್ಕುತ್ತದೆ.

ಗವರ್ನಮೆಂಟ್ ಸೋಪ್ ಫ್ಯಾಕ್ಟರಿ,

52—56 ಬೆಂಗಳೂರು.

[illegible]

ಸಮರ್ಪಕ ಆಡಳಿತದಿಂದ, ಕಡಿಮೆಯಾದ ವ್ಯಯದಿಂದ, ಕ್ರಮಕ್ರಮವಾದ ಅಭಿವೃದ್ಧಿಯಿಂದ ಭಾರತ ವಿಮಾರಂಗದಲ್ಲಿ ಯೋಗ್ಯಸ್ಥಾನವನ್ನೂ, ಉಚ್ಚಗೌರವವನ್ನೂ ಸಂಪಾದಿಸಿರುವ

ಮಂಗಳೂರಿನ

ದಿ ಪೊಪ್ಯುಲರ್ ಇನ್ಶೂರೆನ್ಸ್ ಕಂಪೆನಿ, ಲಿಮಿಟೆಡ್.

ಕನ್ನಡಿಗರ ಹೆಮ್ಮೆಯು, ನಿಮ್ಮ ಒಲುಮೆಯು ಈ ಸಂಸ್ಥೆಯಲಿ ತಪ್ಪದೆ ವಿಮೆಯನ್ನಿಳಿಸಿ.

ಮೊದಲನೇ 5 ವರ್ಷಗಳ ಮೌಲ್ಯನಿರ್ಣಯದ ಫಲಿತಾಂಶವಾಗಿ ಪ್ರತಿಯೊಂದು 1000 ರೂಪಾಯಿಗಳ ವಿಮಾಪತ್ರದ ಮೇಲೆ—

ವರ್ಷ 1ರ ರೂಪಾಯಿ 10ರ ಬೋನಸ್ ಕೊಡಲಾಗಿದೆ.

(ಪ್ರಥಮ ಮೌಲ್ಯನಿರ್ಣಯದಲ್ಲಿ ಇಷ್ಟು ಬೋನಸನ್ನು ಘೋಷಿಸಿ ಹಿಂದೇ ವಿಮಾಕಂಪೆನಿಗಳು ಅತಿ ವಿರಳವೆಂಬುದನ್ನು ಮರೆಯದಿರಿ)

ನಮ್ಮ ಪ್ರಾತಿನಿಧ್ಯವಿಲ್ಲದ ಎಲ್ಲ ಕಡೆಗಳಲ್ಲಿ ವ್ಯವಹಾರಕುಶಲರೂ, ಪ್ರಾಮಾಣಿಕರೂ, ಯೋಗ್ಯರೂ ಆದ

ಏಜಂಟರು ಬೇಕು.

ಹೆಚ್ಚಿನ ವಿವರಗಳಿಗೆ ಮತ್ತು ಏಜನ್ಸಿಗಾಗಿ:—

ಮಂಗಳೂರಿನ ಕಾರ್ಯಾಲಯಕ್ಕೆ ಬರೆದು ಕೇಳಿ.

ಮಡಿಕೇರಿ ಏಜಂಟರು—
ಬಿ. ಕೆ. ಬೆಳ್ಯಪ್ಪನವರು,
ವರ್ತಕರ ವ್ಯಾಪಾರ, ಮಡಿಕೇರಿ. (52—5)

ಸುಂಟಿಕೊಪ್ಪ ಏಜಂಟರು—
ಬಿ. ಎಸ್. ತಿಮ್ಮಯ್ಯನವರು,
ವರ್ತಕರ ವ್ಯಾಪಾರ, ಸುಂಟಿಕೊಪ್ಪ.

[illegible]

ನನ್ನ ವಸ್ತ್ರಗಳನ್ನು ಒಗೆಯುವುದು ಈಗ 501 ಸಾಬೂನಿನಿಂದ ಬಹಳ ಬೇಗನೆ ಆಗುತ್ತದೆ.

ಹೌದು, ಅಲ್ಲದೆ ವಸ್ತ್ರಗಳು ಸಹ ಶುಭ್ರ ಮತ್ತು ಹೊಸದಾಗುವವಾಗಿ ನನಗೆ ಕಂಡುಬಂದಿದೆ.

ಹೆಚ್ಚು ನೊರೆ.
ಹೆಚ್ಚು ಬಾಳಿಕೆ.
ಸ್ವಲ್ಪ ಕ್ರಯ!

ಟಾಮ್ಕೋ ಮಾರಾಟದ ಮಳಿಗೆ, TOMCO ೧, ಸೆಂಟ್ರಲ್ ಸ್ಟ್ರೀಟ್, ಬೆಂಗಳೂರು ದಂಡು.

501 Soap

ತಯಾರಿಸುವವರು—ಟಾಟಾ ಆಯಿಲ್ ಮಿಲ್ಸ್, ಕಂಪೆನಿ, ಲಿಮಿಟೆಡ್, ಬೊಂಬಾಯಿ, ಮತ್ತು ಟಾಟಾಪುರ.

52-44. ಕೊಡಗಿನ ಡಿಸ್ಟ್ರಿಬ್ಯೂಟರ್—ಬಿ. ಎಸ್. ಸುಬ್ಬಣ್ಣ, ಸಂತೆಪೇಟೆ, ಮೈಸೂರು.

ನೂತನ! ಮನೋಲ್ಲಾಸಕರ!! ರುಚಿಕರ!!! ಅದರ ವಿಶ್ರಾಂತಿಗೃಹ!!!!

ಬೊಂಬಾಯಿ ರೆಸ್ಟೋರೆಂಟ್

ಇದೇ ತಾ. 19—12—1935ರಲ್ಲಿ ಮಡಿಕೇರಿ ಚೌಕದಲ್ಲಿರುವ ಹೊಸ ಕಟ್ಟಡದಲ್ಲಿ ತೆರೆಯುತ್ತಿದ್ದೇವೆ.

ಆರೋಗ್ಯಕರವೂ ಆಧುನಿಕವೂ ಆದ ಉಪಾಹಾರ ಗೃಹವೊಂದರ ಏಕೈಕ ಕೊರತೆಯು ಈ ಪಟ್ಟಣದ ಸೌಕರ್ಯಕ್ಕಾಗಿ ತೀರಿಸಲಾಗುವುದು.

ಶುದ್ಧವೂ, ರುಚಿಕರವೂ, ಆರೋಗ್ಯಕರವೂ ಆದ ತಿಂಡಿತಿನಸುಗಳನ್ನು

ಕಾಫಿ—ಚಹಾ—ಕೋಕೋ—ಶರಬತ್ತು ಇತ್ಯಾದಿ ಪಾನೀಯಗಳೂ—

ಕೇವಲ ಹಲವು ವರ್ಷಗಳ ಅನುಭವಿಕರಿಂದ ತಯಾರಿಸಲ್ಪಡುವುವು.

ಗಿರಾಕಿಗಳ ಸೌಕರ್ಯವನ್ನು ಲಕ್ಷಿಸಿ, ಆಸನಗಳು—ವಿಶಾಲ ಕೊಠಡಿಗಳು—ಕಾರ್ಯೋತ್ಸಾಹೀ ವಿನೀತ ಸೇವಕರ ಏರ್ಪಾಡು ಇದೆ.

ಆಯುಷ್ಯಕ್ಕೆ ತಕ್ಕ ವ್ಯಾಯಾಮ ಮಾಡುವವರು, ಶಕ್ತಿಗೆ ತಕ್ಕ ಆಯವನ್ನು ಹೊಂದಬೇಕಾದ ಅತ್ಯಾಧುನಿಕ ಈ ವಿಶ್ರಾಂತಿಗೃಹದಲ್ಲಿ—

ನೀವು ಅಪೇಕ್ಷಿಸಿದ—ನೀವು ನಿರೀಕ್ಷಿಸಿದ—ನೀವು ಹೊಂದಬೇಕಾದ—

ಸಕಲ ಅನುಕೂಲತೆಗಳನ್ನು ಕಂಡು, ಪೂರ್ಣ ತೃಪ್ತಿಹೊಂದಿರಿ.

ಮದುವೆ ಮತ್ತು ಉತ್ಸವಾದಿ ಸಮಾರಂಭಗಳಲ್ಲಿಯೂ ಮತ್ತು "ಟೀ"ಪಾರ್ಟಿ— "ಎಟ್‌-ಹೋಮ್"ಗಳಲ್ಲಿಯೂ ನಮ್ಮನ್ನು ಮರೆಯಬೇಡಿ.

52—15 ಪ್ರೊಪ್ರೈಟರ್.—ಎಸ್. ಎನ್. ರಾವ್, ಗಾಳಿಬೀಡು ರೋಡ್.

ಪ್ರಸಿದ್ಧ ಔಷಧಗಳು.

ಮಲೇರಿಯಾಕ್ಕೆ ಒಂದೇ ಸಿದ್ಧೌಷಧ.

ಶುದ್ಧವಾದ ಹಿಂದೂಸ್ಥಾನದ ಮೂಲಿಕೆಗಳಿಂದ ತಯಾರಾದದ್ದು.
ಕ್ವಿನಿನನ್ನು ಯಾವ ರೂಪದಲ್ಲೂ ಸೇರಿಸಿಲ್ಲ.

"ನವರತ್ನ ಅಲ್ಮಾರಿಯಾ"

ಹಿಂದೂದೇಶದ ಔಷಧಗಳ ವಿಚಾರದಲ್ಲಿ ಶ್ರೇಷ್ಠತೆಯನ್ನು ಪಡೆದ ಡಾ. ಕೆ. ಯಂ. ನಾಡಕರ್ಣಿ ಮತ್ತು ಡಾ. ಕೆ. ಸಿ. ಬೋಸ್‌ರವರ ಗ್ರಂಥಗಳಿಗನುಗುಣವಾಗಿ ಅತೀ ಪರಿಣಾಮಕಾರಕ ಔಷಧಗಳ ಸಂಯೋಜನೆಯಿಂದ ತಯಾರಿಸಲ್ಪಟ್ಟ ಈ ಔಷಧವು ಹೆಚ್ಚು ಫಲಕಾರಿಯಾಗಿರುವದು.

ಇದರಲ್ಲಿರುವ ಔಷಧಗಳು.

1. Andrographis Paniculate
2. Cocculas Cordifolius
3. Berriberies Aristata
4. Vernonis Cinerarea
5. Evolvulas Alsinoides
6. Dashmoola
7. Aconitum Heterophylum
8. Alstonia Scholaris

ಮಲೇರಿಯಾಕ್ಕೆ ಅತ್ಯುತ್ತಮ ಔಷಧಿ. ಕ್ವಿನಿನನ್ನು ಯಾವ ವಿಧದಲ್ಲೂ ಸೇರಿಸದೆ ಇರುವ ಬಾಧಿಸಲ್ಪಡುವ ಹಾನಿ ಪ್ರಮಾಣದ ಸಂದೇಹವಿಲ್ಲ. ಇದನ್ನು ಎಷ್ಟು ಸೇವಿಸಿದರೂ ಕ್ವಿನಿನ್ ಸೇವನೆಯಿಂದ ಉಂಟಾಗಬಹುದಾದ ಮಹಾ ಹಾನಿಗಳ ಭಯವೇ ಇಲ್ಲ. ಒಮ್ಮೆ ಪರೀಕ್ಷಿಸಿದಲ್ಲಿ ಮನಗಾಣಬಹುದು.

ತಯಾರಿಸುವವರು:—ದಿ ನವರತ್ನ ಫಾರ್ಮಸಿ,
ಪೋ. ಬಾ. ನಂಬರು 68, ಕೊಚಿನ್.

52—42 ಸ್ಟಾಕಿಸ್ಟ್—ಪಿ. ಎಸ್. ಮಾಚಯ್ಯ, ಚಿಕ್ಕ ವ್ಯಾಪಾರಿ, ಕುಂಟಿಕೊಪ್ಪ. } ಏಜೆಂಟ್—ವಿ. ಬಿ. ಕಾಮತ್, ಮಹದೇವಪೇಟೆ, ಮಡಿಕೇರಿ.

ನವರತ್ನ ಫಾರ್ಮಸಿ,

ನೋಟೀಸು.

ಈ ಕೆಳಗಿನ ಮಹನೀಯರು "ಕೊಡಗು" ಪತ್ರಿಕೆಯ ಚಂದಾ ಹಣವನ್ನು ವಸೂಲು ಮಾಡಲು ಒಪ್ಪಿಕೊಂಡಿದ್ದರಿಂದ, ಅವರನ್ನು ಏಜೆಂಟರುಗಳಾಗಿ ನೇಮಿಸಿ ಅವರಿಗೆ ನಮ್ಮ ರಶೀತಿ ಪುಸ್ತಕಗಳು ಕೊಡಲಾಗಿದೆ. ಕೆಳಗಿನ ಸಬ್ ಏಜೆಂಟರುಗಳಿಗೆ ಏಜೆಂಟ್‌ಗಳ ಜವಾಬ್ದಾರಿ ಮೇರೆ ರಶೀತಿ ಪುಸ್ತಕಗಳು ಕೊಡಲಾಗಿದೆ. ದಯವಿಟ್ಟು ಚಂದಾದಾರರೆಲ್ಲರೂ ಅವರಿಗೆ ಅನುಕೂಲವಿರುವ ಸ್ಥಳದಲ್ಲಿ ತಮ್ಮ ಚಂದಾವನ್ನು ಪಾವತಿ ಮಾಡಿ ರಶೀತಿ ಪಡೆಯಬೇಕಾಗಿ ಕೋರಿಕೆ

ಸಬ್ ಏಜೆಂಟರುಗಳು.

ವಿರಾಜಪೇಟೆ—ಮೆ. ಮುಂಡೇಟಿರ ಪೊನ್ನಪ್ಪಯ್ಯನವರು,
ಅಮ್ಮತ್ತಿ—ಸಿದ್ದಾಪುರ—ಮೆ. ಗಣಪತಿ ಮಾದಪ್ಪನವರು,
ಪೊನ್ನಂಪೇಟೆ ನಾಡು—ಮೆ. ಪಿ. ಜಿ. ಮುತ್ತಣ್ಣಯ್ಯನವರು
ಹುದಿಕೇರಿ & ತಿತಿಮತ್ತಿ—ಮೆ. ಜಿ. ಮಾದಪ್ಪಯ್ಯನವರು
ಕುಂಟಿಕೊಪ್ಪ—ಮೆ. ಅಪ್ಪಚೆಟ್ಟೋಳಂಡ ಮಾಚಯ್ಯನವರು,
ಸೋಮವಾರಪೇಟೆ—ಮೆ. ಕೆ. ನಂಜಪ್ಪನವರು
ನಾಪೋಕ್ಲು—ಮೆ. ಚೆಟ್ಟಿರಂಡ ಯಂ. ಪೂಣಚ್ಚನವರು,
(ನಾಪೋಕ್ಲು ಸ್ಟೋರ್ಸ್)

ಸೂಚನೆ.—ಪ್ರಿಂಟು ಆದ ರಶೀತಿ ಹೊಂದಿಕೊಳ್ಳದೆ ಚಂದಾ ಹಣ ಕೊಡಬಾರದಾಗಿ ಈ ಮೂಲಕ ತಿಳಿಸಲಾಗಿದೆ.

ಮೇನೇಜರ್,
"ಕೊಡಗು" ಲಿಮಿಟೆಡ್,
ಮಡಿಕೇರಿ,

ಪತ್ರವ್ಯವಹಾರ.

[ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ಪತ್ರಿಕಾ ಕರ್ತರು ಜವಾಬ್ದಾರರಲ್ಲ. ಸಂ]

ವೀರರಾಜಪೇಟೆ ಜೈನರ ಬೀದಿಯ ಬಾವಿ.

ಅಯ್ಯಾ,

ವೀರರಾಜಪೇಟೆಯ ಜೈನರ ಬೀದಿಯಲ್ಲಿ ಮುನ್ಸಿಪಾಲಿಟಿಯವರು ತೋಡಿಸುವ ಒಂದು ಬಾವಿ ಕೆಲಸವು ಪ್ರಾರಂಭವಾಗಿ ಒಂದು ವರ್ಷದ ಮೇಲಾಯಿತು. ಅದರೂ ಯಾರ ದುರದೃಷ್ಟದಿಂದಲೋ ಏನೋ ಇನ್ನೂ ಅದರ ಕೆಲಸವು ಪೂರ್ತಿಯಾಗಲಿಲ್ಲ; ಬೇಗನೆ ಪೂರೈಸುವಂತೆಯೂ ಕಾಣುವುದಿಲ್ಲ. ಕಟ್ಟುವುದಕ್ಕೆ ಕೊಡಲಿದಂದಿನಿಂದ ಇದು ವರೆಗೆ ಒಂದೆರಡು ವಿಘ್ನಗಳು ಬಂದಿತ್ತಲ್ಲ ಇದೆ. ಕಳೆದ ವರ್ಷ ಮಳೆಗಾಲದ ಪ್ರಾರಂಭದಲ್ಲಿ ಆ ಬಾವಿಯು ಅಗೆಸಿತ್ತು. ಕುಸಿದು ಅದರ ಕೆಲಸವನ್ನು ಅಲ್ಲೇ ನಿಲ್ಲಿಸಿ ಬಾವಿಯಲ್ಲಿ ಮಣ್ಣು ತುಂಬಿದರು. ತಿರಿಗಿ ಈ ಬೇಸಗೆಯಲ್ಲಿ ಕೆಲಸವನ್ನು ಪ್ರಾರಂಭಿಸುತ್ತಾರೆಂದು ಎಲ್ಲರೂ ಹಾರೈಸಿದ್ದರು. ಅಷ್ಟರಲ್ಲಿ ಒಂದೆರಡು ದಿವಸ ಒಪ್ಪೆಯರೂ ಕೆಲಸಕ್ಕೆ ಬಂದರು. ತಿರಿಗಿ ಕೆಲಸ ಮಾಡಿಸುವುದನ್ನು ನಿಲ್ಲಿಸಿಬಿಟ್ಟರು. ಇಷ್ಟರ ವರೆಗೆ ಯಾವ ಕಾರಣದಿಂದ ಕೆಲಸ ಮುಂದುವರಿಸಲಿಲ್ಲವೆಂದು ತಿಳಿಯದು. ಇನ್ನು ಮಳೆ ಬರುವ ಕಾಲವು ಬಂತು. ಆದ್ದರಿಂದ ಕೆಲಸ ಮಾಡುವುದಕ್ಕಾಗುವುದಿಲ್ಲವೆಂದು ಹೇಳಿ ಆ ಕೆಲಸ ನಿಂತುಹೋಗುವುದೋ ಎಂಬ ಸಂಶಯವು ನಮಗೆ ಇದೆ. ಅಂತೂ ಬಾವಿಯನ್ನು ತೋಡಿಸಿ ಕೆಲಸ ಪೂರೈಸದೆ ಅರ್ಧದಲ್ಲಿ ಬಿಟ್ಟಿರುವುದು ಮಕ್ಕಳಿಗೆ ಬಾಳ ಹಣ ಕೊಟ್ಟು ಕೊಂಡು ಬಿಟ್ಟ ಹಾಗೆ ಆಗಿದೆ. ಹೀಗಿರುವುದಕ್ಕಿಂತ ಬಾವಿಯ ಕೆಲಸವನ್ನು ಪೂರೈಸುವುದು ಇಲ್ಲವೇ ಬಾವಿಯನ್ನು ಪೂರ್ತಿ ಮುಚ್ಚಿಬಿಡುವುದು, ಇವೆರಡರಲ್ಲಿ ಒಂದನ್ನು ಮ್ಯುನಿಸಿಪಾಲಿಟಿಯವರು ಬೇಗನೆ ಮಾಡಿಸಿದ್ದರೆ ಆ ಬೀದಿಯವರಿಗೆ ನೆಮ್ಮದಿಯಾಗುತ್ತಿತ್ತು. ಇಲ್ಲದಿದ್ದರೆ ನೀರನ್ನು ಬೇರೆಯವರ ಹಿತ್ತಿಲಿನ ಬಾವಿಗಳಿಂದ ತರುವ ಕಷ್ಟದ ಜೊತೆಗೆ ಅಪಾಯಭಂಗದ ಕಷ್ಟವನ್ನು ಸಹಿಸಬೇಕಾಗುತ್ತದೆ. ಅದಲ್ಲದೆ ಈಗ ಇನ್ನೊಂದು ಕಷ್ಟವೂ ಸಂಭವಿಸುವ ಹಾಗಿದೆ. ಆ ಬಾವಿಯನ್ನು ಹಲಗೆಗಳಿಂದ ಮುಚ್ಚದೆ ಹಾಗೆ ಬಿಟ್ಟುಬಿಟ್ಟಿರುವರು, ಮಕ್ಕಳೂ ಇರುವ ಬೀದಿಯು ಬಹಳ ಅಪಾಯವಾಗಿದೆ. ಅದರಲ್ಲೂ ಒಂದು ಕಡೆ ಒಂದು ಅಗಲಕಿರಿದಾದ ಹಲಗೆಯನ್ನು ಇಟ್ಟಿದ್ದಾರೆ ಆದುದರಿಂದ ಆ ಬೀದಿಯವರು ತಮ್ಮ ಮಕ್ಕಳು, ತಮ್ಮ ದನಕರುಗಳು ಎಲ್ಲಿ ಬಾವಿಯೊಳಗೆ ಬಿದ್ದು ಬಿಡುವವೋ ಎಂಬ ಭಯದಿಂದ ಯಾವಾಗಲೂ ಇರಬೇಕಾಗುತ್ತದೆ. ಪಟ್ಟಣದ ಮುನಿಸಿಪಾಲಿಟಿಯ ಸದಸ್ಯರಲ್ಲಿ ಯಾರೂ ಈ ಸಂಗತಿಗಳನ್ನು ಮನಸ್ಸಿಗೆ ತೆಗೆದುಕೊಂಡಂತೆ ತೋರಲಿಲ್ಲ. 'ಹೊಟ್ಟೆ ತುಂಬಿದವನಿಗೆ ಹಸಿದವನ ಕಷ್ಟವೇನು ಗೊತ್ತು' ಎಂಬ ನಾಣ್ಣುಡಿಯಂತೆ ಅವರಿಗೆ ಆ ಬೀದಿಯವರ ನೀರಿನ ಕಷ್ಟ ಗೊತ್ತಿರಲಾರದು. ಆದರೂ ಆ ಬಾವಿಯ ವಿಷಯ ವಿಚಾರಿಸಿ ಕೊಂಡು ಕೆಲಸವನ್ನು ಇನ್ನಾದರೂ ಬೇಗನೆ ಮಾಡಿಸಬೇಕೆಂದು ಪ್ರಾರ್ಥನೆ

'ಪಟ್ಟಣಿಗ.'

ಆಟದ ವಿವಾದ.

ವಾಚಕ ಮಹಾಶಯರೇ,

ಸೋಲನ್ನು ಕಂಡಾ ಆಳ್, ಮಾಡುವುದು ಜಾಣನಿಗೆ ವಿರೋಧವಲ್ಲವೆಂತ ಮೆ. ಕೆ. ಎನ್‌ರವರು ಕಲೆ ಕಟ್ಟಿ ಆಳ್, ಮಾಡಿ ಹೋದರೆ ಶಿಕ್ಷೆಗೆ ಗುರಿಯಾಗುತ್ತಾರೆಂತ ಮೆ. ಕೆ. ಬಿ. ಯವರು ಇವರಿಬ್ಬರೂ ಪೂರ್ತಿ ಹೆಸರುಗಳನ್ನು ಹಾಕದೆ ಪತ್ರಿಕೆ ಮೂಲಕ ಮಾಡುತ್ತಿರುವ ವಾದವಿವಾದಗಳನ್ನು ನೋಡಿದ ವಿದ್ಯಾ [illegible]

ಅಬೀಸ ಜಪಾನಿನಲ್ಲಿ ಭಯ.

ಅಬೀಸ್ ಜಪಾನದಲ್ಲಿ 20 ವಿಮಾನಗಳು [illegible] ಎಲ್ಲ ಸೈನಿಕರು [illegible] ಮಾಡುತ್ತವೆ. [illegible]

[illegible] ತಾ. 23.

ಜಿಜಿಗಾದಲ್ಲಿ ನಷ್ಟ.

ನಿನ್ನೆ ದಿನದ ಧಾಳಿಯಿಂದ ಜಿಜಿಗಾದಲ್ಲಿ [illegible]. 19 ವಿಮಾನಗಳು ಧಾಳಿಯಲ್ಲಿ ಭಾಗವಹಿಸಿದ್ದು [illegible] ತಿಳಿಯಬರಲಿಲ್ಲ. 83 ಮಂದಿ [illegible]. [illegible] (ಸ್ವಿಡಿಷ್ [illegible]) ಪೂರ್ತಿ ಧ್ವಂಸವಾಯಿತು. [illegible] ವಿಮಾನಗಳನ್ನು [illegible] ಸಾಧ್ಯವಾಗಲಿಲ್ಲ.

[illegible] ತಾ. 24.

ರಾಜಿ [illegible].

ರಾಷ್ಟ್ರಗಳ ಸಂಘದವರಿಂದ ನಿಯಮಿಸಲ್ಪಟ್ಟ 13 ಮಂದಿಯ ಸಮಿತಿಯವರು [illegible] ಪ್ರಯತ್ನಿಸುತ್ತಿದ್ದಾರೆ.

ಜಿಜಿಗಾದ ಮೇಲೆ ಪುನಃ ಬಾಂಬು

ಜಿಜಿಗಾ ಪಟ್ಟಣ [illegible] 10 ಇಟೆಲಿ ವಿಮಾನಗಳು 2 ಗಂಟೆಯ ಕಾಲ ಧಾಳಿಯಿಟ್ಟವು. ಪಟ್ಟಣವು ಬಹಳ [illegible].

ವಿದೇಶ.

ನಮ್ಮ ಚಕ್ರವರ್ತಿಗಳ [illegible] ಸಂಬಂಧ [illegible] ಗೊತ್ತಾಗಿದೆ

1936–37 ನೇ ಇಸ್ವಿಯಲ್ಲಿ ಅಮೇರಿಕದ ಬಜೆಟ್ಟಿನಲ್ಲಿ ಸುಮಾರು 400 ಮಿಲ್ಯ ಡಾಲರುಗಳಿಂದ 620 ಮಿಲ್ಯ ಡಾಲರಿನ [illegible] 'ಡಿಫಿಸಿಟ್' [illegible] ಸುಮಾರು 300 ಮಿಲ್ಯ [illegible] ಪ್ರೆಸಿಡೆಂಟರು [illegible] ಪ್ರಕಟವಾಗಿದೆ.

[illegible] ಚಕ್ರವರ್ತಿ ಸಾರ್ವಭೌಮರ ಎಂಟನೇ ಎಡ್ವರ್ಡ್ [illegible] ಮಂತ್ರಿಯಾದ ಮಿ. [illegible] ಫ್ರೆಂಚ್ [illegible] ಮಂತ್ರಿಯಾದ ಮಿ. ಫ್ಲಾಂಡಿನ್, ಬೆಲ್ಜಿಯಂ [illegible] ಮಂತ್ರಿಯಾದ ಮಿ. [illegible] ಸಂಪ್ರದಾಯ [illegible] ಭೇಟಿಕೊಟ್ಟು ಸುಖಸಮಾಚಾರ ವಿಚಾರಿಸಿದರೆಂದು ಪ್ರಕಟವಾಗಿದೆ.

[illegible] ನಡೆದ [illegible] ಪ್ರತಿನಿಧಿಗಳು [illegible] ಎಲ್ಲದರಲ್ಲಿಯೂ [illegible] ಎಲ್ಲಾ ರಾಷ್ಟ್ರಗಳೂ ಸೇರಬೇಕೆಂದು ಅವರು ಸೂಚಿಸಿದರು.

ಚಕ್ರವರ್ತಿ ಸಾರ್ವಭೌಮರಾದ ಎಂಟನೇ ಎಡ್ವರ್ಡ್ [illegible] ತಾ. 18 ರಲ್ಲಿ [illegible]. [illegible] ಈ [illegible] 700 ಮಂದಿ [illegible] ಪ್ರಕಟವಾಗಿದೆ.

ಅಮೇರಿಕಾ ದೇಶದಲ್ಲಿ [illegible] ಹೊಂದಿದ [illegible] ರೋಗಗಳ [illegible]. [illegible] 43,000 0 [illegible] 2 5100 [illegible] ಹೇಳಲಾಗಿದೆ.

ಮಾರಾಟಕ್ಕಿದೆ.

ಹಟ್ಟಿ ಎಸ್ಟೇಟು.

(ಮಡಿಕೇರಿ ಸೋಮವಾರಪೇಟೆ ರೋಡು, 10ನೇ ಮೈಲು)

43 ಎಕರೆ ಕಾಫಿ ತೋಟ, 43 ಎಕರೆ [illegible] 10½ ಎಕರೆ ಭೂಮಿ, ಕಾಫಿ ರೈಟರ ಮನೆ, ಕೂಲಿಲೈನು [illegible] ಎಲ್ಲವೂ [illegible] ಮಾರಲ್ಪಡುವುದು. [illegible] ಈ ವಿಳಾಸಕ್ಕೆ ಬರೆಯಿರಿ:

ಮಿಸೆಸ್ ಡೇವಿಸ್,
ಸಂಟಿಕೊಪ್ಪ

4—2

ಪ್ರಸಿದ್ಧ ಪತ್ರಿಕೆ.

ಶ್ರೀ ಸ್ವಾಮಿ ರಾಮಲಿಂಗೇಶ್ವರ ಪ್ರಸನ್ನ।

ಕೊಡಗು [illegible] ಶ್ರೀ ರಾಮಲಿಂಗೇಶ್ವರ ದೇವರ [illegible] ಅಧ್ಯಕ್ಷರು

[illegible]

[illegible] ಶ್ರೀ ರಾಮಲಿಂಗೇಶ್ವರ [illegible]

ಕಾರ್ಯಕ್ರಮ.

ತಾ 29—3—1936ನೇ [illegible]

ತಾ 30—3—1936 [illegible]

ತಾ. 31—3—1936 ನೇ [illegible]

ತಾ. 1—4—1936 ನೇ [illegible] ತೆಪ್ಪೋತ್ಸವ.

ತಾ. 2—4—1936 ನೇ [illegible] ಮಂಗಳ ಸ್ನಾನ [illegible]

[illegible],
(ಅಧ್ಯಕ್ಷರು)

ಸೂಚನೆ.

[illegible]:—

[illegible] ತಾ 19—2—1936 [illegible]

ಪುತ್ತೂರು, **[illegible].**
ತಾ. 23—3—1936

ಏಜೆಂಟರು ಬೇಕಾಗಿದೆ.

(1) [illegible] ಪ್ರಸಿದ್ಧ [illegible] "[illegible]" "[illegible]", (2) [illegible] 'ಫ್ಯಾನ್ಸಿ, [illegible]' ಬಿಸ್ಕಿಟುಗಳು, (3) [illegible] ಇವುಗಳನ್ನು [illegible] ಏಜೆಂಟರು ಬೇಕಾಗಿರುವರು. [illegible] ವಿವರಕ್ಕಾಗಿಯೂ ಈ ಕೆಳಗಿನ ವಿಳಾಸಕ್ಕೆ ಪತ್ರವ್ಯವಹಾರ ನಡೆಸಬೇಕು:—

Popular Stores,
Car Street, Mangalore.

4—3

ಇಂದೇ ಆರಂಭಿಸಿರಿ!

ಸುಪ್ರಸಿದ್ಧ

ಆತಂಕನಿಗ್ರಹ ಮಾತ್ರೆ

ಗಳನ್ನು ಉಪಯೋಗಿಸಲಿಕ್ಕೆ.

[illegible] ಲೋಕ ದಲ್ಲಿ [illegible] ಜನರು ಅದನ್ನು ಪ್ರತಿ ದಿನವೂ ಉಪಯೋಗಿಸುತ್ತಿದ್ದಾರೆ.

ನರ ಮತ್ತು ಶಾರೀರಿಕ ದೌರ್ಬಲ್ಯಕ್ಕೆ ಭದ್ರತೆಯು.

[illegible] **[illegible]**

32 [illegible] ರೂ 1.

[illegible] ನಮ್ಮ

ಕಾಮಶಾಸ್ತ್ರವನ್ನೋದಿರಿ.

ಆತಂಕನಿಗ್ರಹ ಫಾರ್ಮಸಿ, [illegible],

54—1 ಬೆಂಗಳೂರು Ctl.

ಧಿಕ್ಕಾರವಿಟ್ಟು ನಿಂತಿರುವುದು ತಿಳಿಯಬಂದಿದೆ. ಒಟ್ಟಿನಲ್ಲಿ ವ್ಯವಸ್ಥಾಪಕ ಸಭೆಗಳಿಗೆ ಕಾಂಗ್ರೆಸಿನವರು ಅರಿಸಿ ಬರುವದಕ್ಕಾಗಿ ಕಾಂಗ್ರೆಸು ಪ್ರಯತ್ನಪಡಬೇಕೆಂದೂ, ಮಂತ್ರಿಪದವಿ ಸ್ವೀಕರಿಸುವ ಪ್ರಶ್ನೆಯು ತತ್ಕಾಲ ತಿರಸ್ಕರಿಸಲ್ಪಡಬೇಕೆಂದೂ ಎನ್ನುವ ತೀರ್ಮಾನವು ಬಹುಶಃ ಬರುವ ಲಕ್ನೋ ಕಾಂಗ್ರೆಸಿನಲ್ಲಿ ಆದಕ್ಕೆ ಒಪ್ಪಿಗೆ ಪಡೆಯಲು ಅವಕಾಶವಾಗುವಂತೆ ತೀರ್ಮಾನವಾಗಬೇಕೆಂದು ಸೂಚಿಸಲಾಗಿದೆ.

ಈ ಗಾಳಿ ಪ್ರಾಂತಿಕ ಕಾಂಗ್ರೆಸು ಮಹಾಸಭೆಯು ಒಂದು ಪ್ರಶ್ನೆಯ ಬಗ್ಗೆ ಎರಡು ಪಕ್ಷದವರ ವಾದವನ್ನು ಕೇಳಿ ಆ ವಿಷಯದ ತೀರ್ಮಾನಕ್ಕಾಗಿ ಒಂದು ಪ್ರತ್ಯೇಕ ಮಹಾಸಭೆಯನ್ನು ನಡೆಸುವಂತೆ ತೀರ್ಮಾನಿಸಲಾಯಿತು.

ಈ ಹಿಂದೆ ವಿಂಗಡಿಸುವಿಕೆಯ ವಿಷಯ ಮತ್ತು ಕೆಲಸ ಬಿಟ್ಟಿರುವವರ ಈ ಬಗ್ಗೆ ಸೂಚನೆಗಳು ಒಪ್ಪಿಗೆ ಪಡೆದು ಬಂದಿವೆ. ಇದರ ಪರಿಗೆ ಪ್ರಾಂತ ಕಾರ್ಯಕಾರಿ ಸಮಿತಿಯ ನಿರ್ಣಯಕ್ಕೆ ಬಿಡಲಾಯಿತು.

ಕಾಂಗ್ರೆಸು ಪಟ್ಟಿಯಲ್ಲಿ ಅಂಕಿತವಾದ ಬಡಜನರಿಗೆ ನ್ಯಾಯ ದೊರಕಿಸಿಕೊಡಬೇಕಾಗಿರುವ ಬಗ್ಗೆ ಸಭೆಯು ತನ್ನ ಅಭಿಪ್ರಾಯವನ್ನು ಪ್ರಕಟಿಸಿರುವದರಿಂದ ಆ ವಿಷಯದ ಚರ್ಚೆ ನಡೆಸಲು ಅವಕಾಶವಿಲ್ಲ.

ಕಾಂಗ್ರೆಸು ನೇತಾರರಲ್ಲಿ ಒಬ್ಬರಾದ ಕಾಂಗ್ರೆಸ್ಸಿನ ಇದರ ಬಗ್ಗೆ ತೀರ್ಮಾನಿಸಿರುವ ವಿಷಯಗಳ್ಳನ್ನು ಸಾಕಷ್ಟು ಅಧಿಕಾರ ದೊರೆಯದು ಅನ್ನುವ ಕಾರಣದಿಂದ ಆ ಬಗ್ಗೆ ಕಾಂಗ್ರೆಸ್ಸಿನಲ್ಲಿ ಹೆಚ್ಚಿನ ತಿದ್ದುಪಡಿಗಳನ್ನು ತಂದು ಅನ್ಯೋನ್ಯ ವಿಚಾರವಿನಿಮಯ ನಡೆಸಿದೆ.

ವರ್ತಮಾನ ಸಂಗ್ರಹ.

ಹಿಂದುಸ್ಥಾನ.

ಸ್ಕೂಲ್ ಫೈನಲ್ ಪರೀಕ್ಷೆಯು ಈ ತಾರೀಖು 23 ರಲ್ಲಿ ಪ್ರಾರಂಭವಾಗಿ, ತಾ. 27 ರಲ್ಲಿ ಮುಗಿಯಿತು.

ಈ ಪೇಟೆಯ ಕವಿ ಪಂಡಿತರಾಗಿದ್ದ ಮಿ. ಬಾಸ್ಕ್ಯುನ್ ಬಿ. ಸಿ. ಎಸ್. ರವರು ಈ ತಾರೀಖು 25 ರಲ್ಲಿ ಮಡಿಕೇರಿಯಿಂದ ಬೆಂಗ್ಳೂರಿಗೆ ಹೋಗಿರುತ್ತಾರೆ.

ಈ ವಾರ ಮಡಿಕೇರಿಯಲ್ಲಿ ಕಾಫಿ ಮೂಟೆಗೆ ರೂ. 117 ಮತ್ತು ಬಾಳೆಹಣ್ಣಿನಲ್ಲಿ ಧಾನ್ಯ ಗೋಣಿಗೆ ರೂ. 49 ಕ್ರಯ ಎಂದು ತಿಳಿಯುತ್ತೇವೆ.

ಸಿದ್ಧಾಪುರ ಇಲ್ಲಿ ಹಿಲ್ ಎಸ್ಟೇಟಿನ ಆಸ್ಪತ್ರೆಯಲ್ಲಿ ಬಂದ ಮೆ. ಕಾರ್ಯಕರ್ತರು ಈ ತಾ. 18 ರಲ್ಲಿ ಸ್ವರ್ಗಸ್ಥರಾದರೆಂದು ತಿಳಿಯುತ್ತೇವೆ.

ಅಮ್ಮತ್ತಿನಾಡು ಕಾರ್ಮಾಡು ಗ್ರಾಮದ ಭಗವತೀ ದೇವರ ಉತ್ಸವವು ಬರುವ ಏಪ್ರಿಲ್ ತಾ. 10 ಮತ್ತು 11 ರಲ್ಲಿ ನಡೆಯುವದೆಂದು ತಿಳಿಯುತ್ತೇವೆ.

ಮೆ. ಐ. ಎಂ. ಫ್ರೇಸರ್ ಐ. ಸಿ. ಎಸ್. ರವರು ಈ ತಾರೀಖು 22 ರಲ್ಲಿ ಮಡಿಕೇರಿಗೆ ಬಂದು ತಾರೀಖು 24 ರಲ್ಲಿ ಕವಿ ಪಸರ ಹುದ್ದೆಯ ಚಾರ್ಜನ್ನು ವಹಿಸಿಕೊಂಡಿರುವರು.

ಪೊನ್ನಂಪೇಟೆ ಮಲಿಯ ಸ್ಟೇಟಿನ ಪೊನ್ನಂಪೇಟೆಯಲ್ಲಿ ಇರುವ ಡಾಕ್ಟರ್ ಬಿನ್ನಂತ ಧರ್ಮಾಸ್ಪತ್ರೆಯ ಸ್ಥಿತಿಯು ಕಳೆದ ವಾರ ಪ್ರಕಟಿಸಿ ತಿಂಗಳಿಗೆ ಸಾರ್ವಜನಿಕರಾದರೆಂದು ತಿಳಿಯುತ್ತದೆ.

ಬರುವ ಏಪ್ರಿಲ್ ತಾರೀಖು 17 ರಲ್ಲಿ ಡಿಸ್ಟ್ರಿಕ್ಟ್ ಬೋರ್ಡ್ ಸ್ಟೇಟಿನ ಆಫೀಸಿನ ಮುಂದುಗಡೆಯಲ್ಲಿ ಕೆಲವು ಕ್ಯೇವ್ ಕೋಲ ವಿಗಳು ಮತ್ತು ಕೋಟು ಕೋವಿಗಳು ಹರಾಜು ಮಾಡಲ್ಪಡುವದೆಂದು ತಿಳಿಯಬರುತ್ತದೆ.

ಕೊಡಗು ಎಕ್ಸಿಬಿಟರ್ ಎಸೋಸಿಯೇಶನಿನ ಟೆನ್ನಿಸ್ ಟೂರ್ನಮೆಂಟು ಬರುವ ಏಪ್ರಿಲ್ ತಾರೀಖು 2 ರಿಂದ 11 ರ ವರೆಗೆ ಮಡಿಕೇರಿ ಪೋಲೀಸ್ ಪೈವಿಲಿಯನ್ ಟೆನ್ನಿಸ್ ಕೋರ್ಟಿನಲ್ಲಿ ನಡೆಯುವದು.

ಮಡಿಕೇರಿ ಪೋಸ್ಟಲ್ ಸ್ಟಾಂಪಿಯವರು ಈ ತಾರೀಖು 22 ರಲ್ಲಿ ಅವರ ಸುಪರಿಂಟೆಂಡೆಂಟರಾದ ಮೆ. ಗಣಪತಿಯವರ ಆಸ್ಪತ್ರೆಯಲ್ಲಿ ಒಂದು ಕ್ಲಬ್ಬನ್ನು ತೆರೆದಿರುವರೆಂದು ತಿಳಿಯುತ್ತೇವೆ.

ಬರುವ ಏಪ್ರಿಲ್ ತಾರೀಖು 5 ರಲ್ಲಿ ಕೋಣನಕಟ್ಟೆ ಕೋಲ ಮಂದನ್ನು ಅಸಿಸ್ಟೆಂಟ್ ಕಮಿಷನರಾದ ಮೆ. ಎಂ. ಎಸ್. ನಂಜುಂಡನವರ ಅಧ್ಯಕ್ಷತೆಯಲ್ಲಿ ದನಗಳ, ವ್ಯವಸಾಯ ಮತ್ತು ಕೈಗಾರಿಕೆ ಸಾಮಾನುಗಳ ಪ್ರದರ್ಶನವು ನಡೆಯುವುದು.

ಮಡಿಕೇರಿ ಮಹಮ್ಮದೀಯರ ಯುವಕ ಸಂಘದ ಆಶ್ರಯದಲ್ಲಿ ನಡೆದ ಬ್ಯಾಡ್ಮಿಂಟನ್ ಟೂರ್ನಮೆಂಟಿನ ತಾರೀಖು 21 ರ ಆಖೈರು ಆಟಗಳಲ್ಲಿ ಸಂಪಾಜೆ ಟೀಮಿನವರು 'ಡಬ್ಬಲ್ಸ್ ಮತ್ತು ಸಿಂಗಲ್ಸ್' ನಲ್ಲಿಯೂ ಜಯಶೀಲರಾದರು. ಆ ದೇ ದಿನ ಕವಿ ಪಸರವರು ಗೆದ್ದವರಿಗೆ ಇನಾಮುಗಳನ್ನು ಕೊಟ್ಟರು.

ವೀರಾಜಪೇಟೆ ಬಳಿ ಇರುವ ಕುರಿ ತೋಟದಲ್ಲಿ ಈ ತಾರೀಖು 19 ರಲ್ಲಿ ಒಬ್ಬ ಪಣಿಯರವನ ಶವವು ಸಿಕ್ಕಿ, ಶಾಂತಿನಂತೆ ಒಂದು ಮರಕ್ಕೆ ತೂಗಿಕೊಂಡಿತ್ತೆಂದೂ, ಬಳಿಕ ಕೊಡಲಿಯಿಂದ ಬಿರಿಯುವದರ ಕೊಲ್ಲಲ್ಪಟ್ಟು ತೂಗಿಸಲ್ಪಟ್ಟಿರುವುದೆಂದು ನಂಬುಗೆ ಕಂಡುಬಂದಿದೆಯೆಂದೂ, ಪೋಲೀಸಿನವರು ತನಿಖೆ ನಡೆಸುತ್ತಿರುವರೆಂದೂ ತಿಳಿಯಬರುತ್ತದೆ.

ಕಳೆದ ವಾರ ಪೊನ್ನಂಪೇಟೆಯ ನಿವಾಸಿ ಒಬ್ಬನು ಗ್ರಾಮದ ಮೆ. ಮಾಲೀಕರ ಬಲಿಷ್ಠರಾದವರ ಮನೆಗೆ ರಾತ್ರಿಯಲ್ಲಿ ಒಬ್ಬ ನುಗ್ಗಿ ಮನೆಯಲ್ಲಿನ ಸೊತ್ತುಗಳನ್ನು ಕದ್ದುಕೊಂಡು ಹೋಗುತ್ತಿದ್ದಾಗ ಮನೆಯವರು ಅವನನ್ನು ಹಿಡಿದು ಪೋಲೀಸರಿಗೆ ಒಪ್ಪಿಸಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಕೊಡಿಸುತ್ತಿರುವರೆಂದೂ, ಕೇಸು ಪೋಲೀಸಿನವರ ವಿಚಾರಣೆಯಲ್ಲಿರುವುದಾಗಿ ತಿಳಿಯಬರುತ್ತದೆ.

ಮೆ. ಪುತ್ತೂರಿನ ಸಾಹಿತ್ಯಾಸಕ್ತರಾದ ರಾಘವೇಂದ್ರರಾವ್ ರವರು ಕೊಡಗಿನ ಸಾಹಿತ್ಯದ ಬಗ್ಗೆ ಪತ್ರದಲ್ಲಿ ಬರೆದಿದ್ದಾರೆ. ಪ್ರಸಿದ್ಧರಾದ ಶ್ರೀಯುತರ ಸಾಹಿತ್ಯ ಸೇವೆ ಬಹಳ. 15 ನೇ ಮಾರ್ಚ್ ತಾರೀಖಿನ ಅನಂತರ ಬರುವ ಏಪ್ರಿಲ್ 1 ನೇ ತಾರೀಖಿಗೆ ಅಂತ್ಯಗೊಳ್ಳುವ ಸಮಿತಿ ಸಭೆಯಲ್ಲಿ ಏಪ್ರಿಲ್ 2 ರಲ್ಲಿ ಪರೀಕ್ಷೆ ನಡೆಸುವದೆಂದೂ, ಏಪ್ರಿಲ್ 3 ರಲ್ಲಿ ಫಲಿತಾಂಶಗಳು ಪ್ರಕಟಿಸಲ್ಪಡುವದೆಂದೂ ಗವರ್ನ್ಮೆಂಟಿನವರಿಂದ ಪ್ರಕಟಿಸಲ್ಪಟ್ಟಿದೆ.

ಹಿಂದುಸ್ಥಾನ.

ಕಳೆದ ತಾರೀಖಿನ ಕರ್ನಾಟಕದಲ್ಲಿ ನಡೆದ ವಾರದಲ್ಲಿ ಬಿ. ಎ. ಪರೀಕ್ಷೆ ಮುಗಿದು 68,80,291 ರೂಪಾಯಿಗಳ ಬಜೆಟ್ ಪಾಸಾಗಿದೆ.

ಗಂಗಾನದಿಯ ತೀರದಲ್ಲಿ ಬೆಂಕಿ ಬಿದ್ದು ಹಲವು ಮನೆಗಳು ಸುಟ್ಟು ಹೋದವು; 10 ಜನ ಸತ್ತರೆಂದು ವರ್ತಮಾನ ಬಂದಿದೆ.

ಬಿಹಾರ ಪ್ರಾಂತದಲ್ಲಿ ಕಳೆದ ವಾರ ಭೂಕಂಪದ ಹಾನಿ ಹೊಂದಿದವರ ಸಹಾಯಕ್ಕಾಗಿ ಹಣ ಕಳುಹಿಸಬೇಕೆಂದು ಪ್ರಕಟಣೆ ಹೊರಡಿಸಲಾಗಿದೆ.

ಹಿಂದೂ ಮಹಾಸಭೆಯ ಅಧಿವೇಶನವು ಏಪ್ರಿಲ್ ತಾ. 1 ರಿಂದ ಲಾಹೋರಿನಲ್ಲಿ ನಡೆಯಲಿದೆ ಎಂದು ಪ್ರಕಟಿಸಲಾಗಿದೆ.

ಮುಂಬಯಿ ಡೆಲ್ಲಿಯಲ್ಲಿ ಜೆಟ್ ಕಟ್ಟಡದ ಸರಕಾರವು ಎಪ್ಪತ್ತಕ್ಕೆ 20 ಸಾವಿರ ರೂಪಾಯಿಗಳ ಸಾಲ ಕೊಡುವುದಾಗಿ ಘೋಷಿಸಿದೆ. ಅಲ್ಲದೆ ಪಂಜಾಬಿನ 25 ಸಾವಿರ ರೂಪಾಯಿ ಬಹುಮಾನಗಳನ್ನು ಕೈಕೊಳ್ಳಬೇಕೆಂದು ತೀರ್ಮಾನಿಸಿದೆ.

ವಿಶಾಖಪಟ್ಟಣದಲ್ಲಿರುವ ಪಿಕೆಟಿಂಗಿನ ಫಲವಾಗಿ ಅಸ್ಪೃಶ್ಯರಿಗೆ ಇನ್ನೂ ದೇವಾಲಯಗಳನ್ನು ತೆರೆಯದೆ ಇರುವುದಕ್ಕೆ ಸರಕಾರದ ಸಹಾಯವಾಗಿ 10,000 ರೂಪಾಯಿಯನ್ನು ಮಂಜೂರಾಗಿ ಕೊಡಲಾಗಿದೆ ಎಂದು ಪ್ರಕಟವಾಗಿದೆ.

ಕೆಲವು ವರ್ಷಗಳಿಂದ ಬಡತನವನ್ನು ಅನುಭವಿಸುತ್ತಿರುವ ಮತ್ತು ಅನುಮತಿ ಇಲ್ಲದ ಮಠದ ಸಂಘವು ಅಸ್ಪೃಶ್ಯರಿಗೆ ಆಶ್ರಯ ಕೊಡದೆ ಇರುವದರಿಂದ ಉದ್ಯೋಗಸ್ಥರಿಗೆ ರಾಜೀನಾಮೆ ಕೊಡಬೇಕೆಂದು ಸೂಚಿಸಲಾಗಿದೆ.

ಶ್ರೀ ಗೋಪಾಲಕೃಷ್ಣಯ್ಯ, ಜೆ. ಎಸ್., ಶ್ರೀ ಸುಬ್ಬರಾಯರು ಮೊದಲಾದವರು ಕಾಂಗ್ರೆಸಿನ ಮೂಲಭೂತ ಸಿದ್ಧಾಂತಗಳನ್ನು ಅಂಗೀಕರಿಸಿದ ಕಾಂಗ್ರೆಸಿನವರ ಅಧಿಕಾರ ಸ್ವೀಕಾರದ ಪ್ರಶ್ನೆಯನ್ನು ಕಾಂಗ್ರೆಸಿಗೆ ಬಿಡಬೇಕೆಂದೂ, ಸ್ವಾತಂತ್ರ್ಯ ಹೋರಾಟದ ಅವಶ್ಯಕತೆ ಎಂದೂ ಪ್ರಕಟಿಸಿದರು.

ಪೂರ್ವ ಬಂಗಾಳ ಮತ್ತು ಅಸ್ಸಾಮಿಗೆ ಸೇರಿದ ಒಂದು ಊರಿನಲ್ಲಿ ಒಬ್ಬ ಸಾಧುವು ದೇವಸ್ಥಾನವನ್ನು ಕಟ್ಟಿಕೊಂಡಿದ್ದು ಅವನು ದುರ್ಗಾದೇವಿಯ ಪೂಜೆ ಮಾಡುತ್ತಿದ್ದನೆಂದು ಸ್ಥಳೀಯ ಸರಕಾರದವರು ಆ ದೇವಾಲಯವನ್ನು ಕೆಡವಿ ವಿಗ್ರಹವನ್ನು ತೆಗೆದು ದೇವಾಲಯಕ್ಕೆ ಬೀಗ ಹಾಕಿ ಅದರ ಆಸ್ತಿಯನ್ನು ವಶಪಡಿಸಿಕೊಳ್ಳುವುದಾಗಿ ಪ್ರಕಟಿಸಲಾಗಿದೆ.

ತಿರುಪೂರಿನಲ್ಲಿ ಮಳೆ ಸರಿಯಾಗಿ ಬಾರದೆ ಇರುವುದರಿಂದ ನೀರಿನ ಅಭಾವದಿಂದ ಜನರು ಬಹಳ ಕಷ್ಟಪಡುತ್ತಿದ್ದಾರೆ. ಆ ಊರಿನಲ್ಲಿ ಪ್ರಜೆಗಳು ಒಂದು ಕೂಡ ನೀರಿಗಾಗಿ ಮೈಲುಗಟ್ಟಲೆ ಹೋಗಬೇಕಾಗಿ ಬಂದಿದೆ. ಅಲ್ಲಿನ ಜನರು ದನಗಳಿಗೆ ನೀರು ದೊರಕದೆ ಪ್ರಾಣಾಪಾಯಕ್ಕೆ ಒಳಗಾಗುತ್ತಿದ್ದಾರೆ. ಕೂಡಲೇ ಸಹಾಯ ದೊರಕಬೇಕೆಂದು ವರ್ತಮಾನ.

ಮೈಸೂರಿನಲ್ಲಿ ಮೆ. ಟಿ. ರಂಗಯ್ಯ ಬಿ. ಎ. ಇವರು 'ಸಾಧ್ವಿ' ಎಂಬ ಹೆಸರಿನ ವಾರ ಪತ್ರಿಕೆಯನ್ನು ಪ್ರಾರಂಭಿಸಿ ನಡೆಸುತ್ತಿದ್ದಾರೆ. ಕೀರ್ತಿಶೇಷರಾದ ಮೆ. ಎಂ. ವೆಂಕಟಕೃಷ್ಣಯ್ಯನವರ ಮೊಮ್ಮಗ ಮೆ. ಎಂ. ಎಸ್. ರಾಮಕೃಷ್ಣಯ್ಯನವರು ಆ ಪತ್ರಿಕೆಯ ಸಂಪಾದಕರು. ಮೆ. ರಂಗಯ್ಯನವರು ನಡೆಸಲಿರುವ ಕಡೆಯ ಮಾತು ಆ ಪತ್ರಿಕೆಯ ಹಣ ವನ್ನು ಸಾಧ್ವಿಯ ಮೂಲಕ ಮೆ. ರಂಗಯ್ಯನವರ ಹೊಸ ಪುಸ್ತಕವು ಹೊರಬರುವುದಾಗಿ ಪ್ರಕಟವಾಗಿದೆ.

ಕಳೆದ ವಾರ ಸಾರ್ವಜನಿಕ ವ್ಯಾಯಾಮ ಶಿಕ್ಷಣ ಸಭೆಯಲ್ಲಿ ಮಿ. ಎಚ್. ಪಿ. ವೆಂಕಟರಾಯರು ವ್ಯಾಯಾಮದಿಂದ ಸಾಧ್ಯವಾದ ದೇಹದ ಆರೋಗ್ಯ ಶಕ್ತಿಯನ್ನು ಇತರ ದೇಶಗಳಿಗೆ

ಸೆರೆಯಾಳಾಗಿರುವರು. ಅವರು ತಿಳಿಸುತ್ತೇನೆಂದರೆ—ಇಂಡಿಯಾ ದೇಶದಲ್ಲಿ ಕೈಗಾರಿಕೆಯಿಂದ ಆದಾಯ ಒಬ್ಬರಿಗೆ ತಲಾ 39 ರೂ. (ಅಮೇರಿಕಾದಲ್ಲಿ 158 ರೂ., ಬ್ರಿಟನಿನಲ್ಲಿ 410 ರೂ., ಕೆನಡಾ 470 ರೂ., ಮತ್ತು ಅಮೇರಿಕಾ ಸಂಯುಕ್ತ ಸಂಸ್ಥಾನಗಳಲ್ಲಿ 720 ರೂ.) ಹಿಂದೂಸ್ಥಾನದಲ್ಲಿ ಸಾಮಾನ್ಯವಾಗಿ ಒಬ್ಬ ವ್ಯಕ್ತಿಯ ಆದಾಯ ರೂ. 100, (ಕೆನಡಾ 1,300, ಬ್ರಿಟನ್ 1,100, ಸಂಯುಕ್ತ ಸಂಸ್ಥಾನ 2,000, ಜಪಾನ್ 270 ರೂಪಾಯಿಗಳು.) ಹಿಂದೂಸ್ಥಾನದಲ್ಲಿ ಬ್ಯಾಂಕಿನ ಡಿಪಾಜಿಟ್ಟುಗಳು ತಲಾ 7 ರೂಪಾಯಿ (ಬ್ರಿಟನ್ 700 ಜಪಾನ್ 250 ರೂಪಾಯಿ.) ಇಂಡಿಯಾ ದೇಶದಲ್ಲಿ ಸೇವಿಂಗ್ಸ್ ಬ್ಯಾಂಕ್ ಡಿಪಾಜಿಟ್ಟುಗಳು ತಲಾ 2 ರೂಪಾಯಿ (ಬ್ರಿಟನ್ 270, ಜಪಾನ್ 90, ಫ್ರಾನ್ಸ್ 125 ರೂಪಾಯಿ)

ಯುದ್ಧ ವಾರ್ತೆ.

ಮಾರ್ಚಿ ತಾ 19.

ಅಬಿಸೀನಿಯದ ಚಕ್ರವರ್ತಿಯವರು.

ಅಂಬಾ ಅಲಾಜಿಯಲ್ಲಿ ಭಯಂಕರ ಕಾಳಗ.

ಇಟೆಲಿಯ ಸೈನಿಕರಿಗೂ, ಅಬಿಸೀನಿಯರಿಗೂ ಅಂಬಾ ಅಲಾಜಿಯಲ್ಲಿ ಘೋರ ಕದನವು ನಡೆಯುತ್ತಲಿದೆ. ಇಟೆಲಿಯವರು ತಿರುಗಿ ಸೇನೆಯನ್ನು ಹಿಂದಕ್ಕೆ ತೆಗೆದುಕೊಳ್ಳುತ್ತಲಿದ್ದರೆ ಅಬಿಸೀನಿಯರ ಪ್ರತಿಭಟನೆಯಿಂದ ಹಿಂದಾಗಬೇಕಾಯಿತು. ಅಬಿಸೀನಿಯರು ತಮ್ಮ ಸ್ಥಳವಿಂದ ಕದಲಿಸುವದಿಲ್ಲವಾದರೂ ಎರಡು ಪಕ್ಷದವರಿಗೂ ಭಾರೀ ನಷ್ಟವಾಗಿರುತ್ತದೆ. ಚಕ್ರವರ್ತಿಗಳೇ ಈ ಯುದ್ಧದ ಚಟುವಟಿಕೆಯನ್ನು ನಡೆಸುತ್ತಿರುವರಾಗಿ ತಿಳಿದು ಬಂದಿದೆ.

ರಾಜಿ ಪ್ರಸಕ್ತಿ ಬಂದು ಇದೆ.

ಈ ದಿನ ಬಂದ ಎರಡು ವಿಷಯ ಅನೇಕರಾದೆಂದರೆ 70 ವರ್ಷದ ಚಕ್ರವರ್ತಿ ಸಂಧಿಯ ವಿಷಯ ಅವರ ಮನದಲ್ಲಿ ಇದೆ. ಆ ಕಾಲದ ಮಂತ್ರಿಗಳಿಂದ ರಾಜಿಯ ಬಗ್ಗೆ ಅಲೋಚನೆ ನಡೆಯುತ್ತಲಿದೆ. ಇಟೆಲಿಯ ಸರಕಾರದವರು ಸಹ ಸಂಧಿಗೆ ಅನುಕೂಲವಾಗಿರುವರು. ಅವರು ರಾಜಿ ಮಾತುಗಳಲ್ಲಿ ಪ್ರವೇಶ ಮಾಡುತ್ತಿರುವರೆಂದು ಹೇಳಲಾಗಿದೆ. ಅವರು ತಪ್ಪುಮಾಡುತ್ತಿರುವ ಚಕ್ರವರ್ತಿಗಳನ್ನು ಶಿಕ್ಷೆ ಮಾಡಲು ಹೊರಟಿರುವರು.

ಮಾರ್ಚಿ ತಾ. 21.

ಮಕೇಲ್ ಬಳಿ ಯುದ್ಧ.

ಅಂಬಾ ಅಲಾಜಿ ಯುದ್ಧವು ಮಕೇಲ್ ಪ್ರಾಂತ್ಯಕ್ಕೂ ಹಬ್ಬಿದೆ. ಒಂದು ಭಾಗವನ್ನು ಚಕ್ರವರ್ತಿಗಳೇ ಸ್ವತಃ ಪ್ರತಿಭಟಿಸುತ್ತಲಿರುವರು. ಪಶ್ಚಿಮ ಭಾಗವನ್ನು ರಾಸ್ ಸಯಾಮರು ಮತ್ತು ರಾಸ್ ಕಸ್ಸರವರು ನಡೆಸುತ್ತಲಿರುವರು. ಹೀಗೂ ಯುದ್ಧದ ಜಯಾಪಜಯಗಳನ್ನು ಕುರಿತು ಏನೂ ತಿಳಿಯಬಂದಿರುವುದಿಲ್ಲ.

ದಕ್ಷಿಣದಲ್ಲಿ ತಡವು.

ಫ್ರೆಂಚರಿಂದ ಏಪ್ರಿಲ್ ಅಖೈರು ವರೆಗೆ ದಕ್ಷಿಣ ಭಾಗದಲ್ಲಿ ಮಳೆ ಬೀಳುವುದರಿಂದ ಏಪ್ರಿಲ್ ಆದ್ಯದಿಂದ ಅಂದರೆ ಉತ್ತರದಲ್ಲಿ ಮಳೆ ಪ್ರಾರಂಭವಾದ ಮೇಲೆ ದಕ್ಷಿಣದ ಕಡೆಯಿಂದ ಆಕ್ರಮಣವನ್ನು ಪ್ರಾರಂಭಿಸಲು ಇಟೆಲಿಯವರು ಅನೇಕ ಸಿದ್ಧತೆಗಳನ್ನು ಮಾಡುತ್ತಲಿರುವರು. ಇದನ್ನು ತಿಳಿದು ಅಬಿಸೀನಿಯರು ಕೂಡ ಅವರ ಸ್ಥಳಗಳನ್ನು ಭದ್ರಪಡಿಸುತ್ತಲಿರುವರು.

ಮಾರ್ಚಿ ತಾ. 22.

ಜಿಜಿಗಾದ ಮೇಲೆ ಬಾಂಬಿನ ಮಳೆ.

ಇಟೆಲಿಯ ವಿಮಾನಗಳು ಜಿಜಿಗಾ ಮೇಲೆ ಬಾಂಬು ಹಾಕಿದುದರಿಂದ ಸಂಭವಿಸಿದ ಸಾವು 27 ಮಂದಿ (ಕೆಲವರು ಮಕ್ಕಳು ಮತ್ತು ಹೆಂಗಸರು) ಸತ್ತಿರುವರು.

ಜಿಜಿಗಾ ಮೇಲೂ ಬಾಂಬು ಹಾಕಿದುದು ಇಟೆಲಿಯವರಾಗಿ ವಾರ್ತೆ ಬಂದಿದೆ. ಇಕ್ಕಟ್ಟಿನವರು ಆಗ ಎಲ್ಲಿ ವಾಸವಿರುವರೆಂದು ಇದುವರೆಗೆ ತಿಳಿದಿಲ್ಲ. ಅದನ್ನು ತಿಳಿದು ಆ ಉದ್ದೇಶದಿಂದ ಜಿಜಿಗಾ ಪಟ್ಟಣದ ಮೇಲೆ ಇಟೆಲಿಯವರು 400 ಬಾಂಬುಗಳನ್ನು ಹಾಕಿ ಧ್ವಂಸಗೊಳಿಸಿದರೂ ಅವರ ಉದ್ದೇಶವು ನೆರವೇರಲಿಲ್ಲ.

ಕೊಡಗು

ಜನವರಿ ತಾ. ೨೮ ನೇ ಮಂಗಳ ವಾರ ೧೯೩೬.

ಜೇನು ಮತ್ತು ಮೇಣದ ವ್ಯಾಪಾರ.

ಈಗ ಎಲ್ಲಿ ನೋಡಿದರೂ ಆರ್ಥಿಕ ಮುಗ್ಗಟ್ಟಿನ ದೆಸೆಯಿಂದ ಉಂಟಾಗಿರುವ ತೊಂದರೆ ಪರಂಪರೆಗಳನ್ನು ಕುರಿತು ವ್ಯಸನಪಡುವುದೇ ಕೇಳಬರುತ್ತದೆ. ವರ್ಷಗಳು ದಾಟುತ್ತಾ ಬಂದ ಹಾಗೆ ಹೊಸ ಕಷ್ಟಗಳು ಕಾಣುತ್ತಾ ಬರುತ್ತಿವೆ. ಕಷ್ಟ ನಷ್ಟಗಳು ಎಲ್ಲರಿಗೂ ವ್ಯಾಪಿಸಿದ್ದರೂ ವಿಶೇಷವಾಗಿ ವ್ಯವಸಾಯಗಾರರ ಸ್ಥಿತಿಯು ಶೋಚನೀಯವಾಗಿದೆ. ಕಾಲದ ಸ್ಥಿತಿಯು ಹೀಗೆ ಅದರಲ್ಲಿ ಇರುವ ಸಾಲದ ಹೊರೆಯಿಂದ ಪರಿಹಾರವಾದರೆ ಅದಕ್ಕಿಂತಲೂ ಹೆಚ್ಚು ಇನ್ನೊಂದಿಲ್ಲ. ವ್ಯವಸಾಯಗಾರರ ದೇಶವಾದ ಭಾರತ ದೇಶದಲ್ಲಿ, ಹಾಗೆಯೇ ನಮ್ಮ ಚಿಕ್ಕ ಕೊಡಗಿನಲ್ಲಿ ವ್ಯವಸಾಯಗಾರರ ಅಭಿವೃದ್ಧಿ ಎಂದರೆ ದೇಶದ ಅಭಿವೃದ್ಧಿ [illegible] ದೇಶದ ನಾಶವೆಂಬುದನ್ನು ಇತ್ತೀಚೆಗೆ ಹಲವರು ಮನಗಂಡಿರುವರು. ಆದುದರಿಂದಲೇ ರಾಜಕೀಯ, ಸಾಮಾಜಿಕ, ಮತ್ತು ಆರ್ಥಿಕ ಸುಧಾರಕರೂ, ಅಧಿಕಾರ ಸ್ಥಾನದಲ್ಲಿರುವವರೂ ಈಗ ರೈತರ ವಿಷಯದಲ್ಲಿ ಗಮನವನ್ನು ಹೆಚ್ಚಾಗಿ ಕೊಡುತ್ತಿರುವುದಾಗಿದೆ. ವ್ಯವಸಾಯಗಾರರ ಏಳಿಗೆಯ ಬಗ್ಗೆ ಎಲ್ಲರೂ ಆಲೋಚಿಸುತ್ತಿರುವರು. [illegible] ಸಹಕಾರ ಪದ್ಧತಿಯ ಪ್ರಕಾರ [illegible] ಮಾಡಲ್ಪಡುವ [illegible] ಎಂಬುದು ಇನ್ನು ಅದರ [illegible].

ರೈತರ ಆರ್ಥಿಕ ಸ್ಥಿತಿಯನ್ನು ಹೊಗಳಬೇಕಾದರೆ ಮುಖ್ಯವಾಗಿ ಎರಡು ಉಪಾಯಗಳನ್ನು ಸಾಧಿಸಬೇಕಾಗಿದೆ. ಅವರು [illegible] ಅಭ್ಯಾಸಮಾಡಿರುವ ಉದ್ಯೋಗದ ಜೊತೆಗೆ ಅಧಿಕ ಆದಾಯ [illegible] ಅವರ ಉತ್ಪತ್ತಿಯನ್ನು ಹೆಚ್ಚಿಸುವ [illegible]. ಕೊಡಗಿನ ರೈತರ ಮುಖ್ಯ ವ್ಯವಸಾಯವು ಭತ್ತವಾಗಿದೆ. ಉತ್ತರ ಕೊಡಗಿನಲ್ಲಿ ಕೆಲವರು ರಾಗಿಯನ್ನು ಬೆಳೆಸುತ್ತಾರೆ. [illegible] ಬೇರೆ ಧಾನ್ಯಗಳ ಬೆಳೆಯು [illegible] ರೈತರು ಈ ಬೆಳೆಯ [illegible] ಅವರಿಗೆ ವರ್ಷದ [illegible] ಕೆಲಸ [illegible] ಉಪಯೋಗಿಸುತ್ತಿಲ್ಲ. [illegible] ಅರ್ಧ ವರ್ಷ [illegible] ಉಪಯೋಗಿಸುವುದು ಅಗತ್ಯವಾಗಿದೆ. ಈ ಉದ್ದೇಶದಿಂದಲೇ ಗ್ರಾಮ ಸಹಕಾರ ಸಂಘಗಳು [illegible] ಗ್ರಾಮಸ್ಥರು ಹೆಚ್ಚಿನ [illegible] ಆದಾಯವನ್ನು ಹೆಚ್ಚಿಸಿಕೊಳ್ಳಲು ಅವರಿಗೆ ಪ್ರೋತ್ಸಾಹ ಕೊಡುತ್ತಿರುವ [illegible] ಜೇನು ಮೇಣ ಸಾಕುವುದು ಒಂದು ಮುಖ್ಯವಾದುದೆಂಬುದರಲ್ಲಿ ಸಂಶಯವಿಲ್ಲ.

ಜೇನು ಮನುಷ್ಯನ ಆಹಾರ ಪದಾರ್ಥಗಳಲ್ಲಿ ಒಂದು ಉತ್ಕೃಷ್ಟವಾದ ವಸ್ತುವೆಂಬುದನ್ನು ಯಾರೂ ಅಲ್ಲಗಳೆಯಲಾರರು. ಅದರಲ್ಲಿ ಮನುಷ್ಯನ ಆರೋಗ್ಯಕ್ಕೆ ಬೇಕಾದ ಅನೇಕ ಗುಣಗಳು, ಎಷ್ಟೋ ರೋಗಗಳಿಗೆ ಔಷಧಿಯ [illegible] ಗುಣಗಳೂ ಇವೆ [illegible]. ಹಲವು ತರಹದ ಔಷಧಿಗಳಿಗೆ [illegible] ಅನುಪಾನವಾಗಿ [illegible]. ಅದರ ಉತ್ಪನ್ನ ವ್ಯಾಪಾರವನ್ನು ಆಫ್ರಿಕಾ, ಅಮೇರಿಕಾ, ಆಸ್ಟ್ರೇಲಿಯಾ ಮೊದಲಾದ ದೇಶಗಳಲ್ಲಿ ಅದರ ಉತ್ಪತ್ತಿಗೆ ತುಂಬಾ ಹಿಗ್ಗಿಸಿ, ಈಗ ಅಲ್ಲಿ ಅದು ಎಷ್ಟೋ ಜನರಿಗೆ ಜೀವನದ ದಾರಿಯಾಗಿ ಪರಿಣಮಿಸಿದೆ. ಇದನ್ನೆಲ್ಲಾ ಮನಗಂಡು, ಇದ್ದ ಹೊತ್ತಿಗೆ ಶ್ರೀ [illegible] ಸ್ವಾಮಿ [illegible] ಜೇನು ಸಾಕುವ ವ್ಯಕ್ತಿಯನ್ನು ಕೊಡಗಿನಲ್ಲಿ ಸಾಧಿಸುವುದು ಉತ್ತಮವೆಂದು ಆಲೋಚಿಸಿದರು. ಅದಕ್ಕಾಗಿ ಅವರು ಕೆಲವು ವರ್ಷಗಳಿಂದ ಪರಿಶೋಧನಾ ಕಾರ್ಯಗಳನ್ನು ಮಾಡುತ್ತಾ ಬಂದ, ಗ್ರಾಮಸ್ಥರಿಗೆ [illegible] ಪ್ರಚಾರ ಕೆಲಸ ನಡೆಸಬೇಕೆಂದಿದ್ದರು. ಅದರ ಜೊತೆ ಸಂಗ್ರಹಿಸುವ ಜೇನಿಗೆ ಸಾಕಷ್ಟು ಉತ್ತಮವಾದ ಬೆಲೆಯು ಸಿಗದ ಹೊರತು ಆ ಕಾರ್ಯದಲ್ಲಿ ಕೈಹಾಕುವಂತೆ ಮಾಡುವುದು ಕಷ್ಟವೆಂದೂ, ಅದು ಜನರಿಗೆ ಹೆಚ್ಚು ಲಾಭದಾಯಕವಾಗಲಾರದೆಂದೂ ಕಂಡು ಬಂತು. ಆದ್ದರಿಂದ ಇಲ್ಲಿಯ ಜೇನಿಗೆ ಒಳ್ಳೇ ಬೆಲೆ ದೊರೆಯುವ ವಿಚಾರದ ವ್ಯವಸ್ಥೆ ಮಾಡಬೇಕಾದದ್ದು ಅತ್ಯವಶ್ಯವಾಯಿತು. ಈ ವಿಷಯ ಆಲೋಚನೆ ಮಾಡುತ್ತಿದ್ದಂಥ ಸ್ವಾಮಿ [illegible] ಸಹಕಾರ ಸಂಘಗಳ [illegible] ಮತ್ತು ಸಹಕಾರ ಸೆಂಟ್ರಲ್ ಬ್ಯಾಂಕಿನವರೊಂದಿಗೆ ಸೇರಿ ಚರ್ಚಿಸಿದ ಫಲಿತಾಂಶವಾಗಿ ಇದಕ್ಕಾಗಿ ಒಂದು ಸಹಕಾರ ಸಂಘವು ಸ್ಥಾಪಿಸಲ್ಪಟ್ಟಿದೆ. ಇದರ ಆಫೀಸು ಈ ತಾರೀಕು 29ರಲ್ಲಿ ವಿರಾಜಪೇಟೆಯಲ್ಲಿ ತೆರೆಯಲಿರುವುದು. ಅದು 'ಕೊಡಗು ಜೇನು ಮತ್ತು ಮೇಣ ತಯಾರಿಸುವವರ ವಿಕ್ರಯ [illegible] ಸಹಕಾರ ಸಂಘ' ವೆಂದು ಕರೆಯಲ್ಪಡಲಿದೆ.

ಬೆಟ್ಟ ಕಾಡುಗಳಿಂದ ಕೂಡಿದ ಕೊಡಗು ಪ್ರಾಂತ್ಯದ ಪ್ರಕೃತಿ ಸ್ಥಿತಿಯೇ ಜೇನುನೊಣ ಸಾಕಲು ಬಹು ಅನುಕೂಲವಾದದ್ದಾಗಿದೆ. ಈ ಸ್ಥಿತಿಯಿಂದಲೇ ಕಷ್ಟಕರವೇನಿಲ್ಲ. ರೈತರು ವಿರಾಮ ಕಾಲದಲ್ಲಿ ಹೆಚ್ಚಿನ ಪ್ರಯಾಸವಿಲ್ಲದೆ ಸುಲಭವಾಗಿ ಕೈಕೊಳ್ಳಬಹುದಾದ ವ್ಯವಸಾಯವಿದು. ಇದರಿಂದ ಅವರು ತಮ್ಮ ಉತ್ಪತ್ತಿಯನ್ನು ಸುಲಭವಾಗಿ ಹೆಚ್ಚಿಸಿಕೊಳ್ಳಬಹುದು.

ಕೊಡಗಿನ ಜೇನು ಅತ್ಯುತ್ತಮವಾದದೆಂದು ಕಂಡುಹಿಡಿಯಲಾಗಿದೆ. ಆದುದರಿಂದ ಅದನ್ನು ಸೋಸಿ, ನಿರ್ಮಲ ಮಾಡಿ, ಕೆಡದಂತೆ ಶೀಶೆಗಳಲ್ಲಿ ಇರಿಸಿ ಮಾರಿದರೆ ಅದನ್ನು ಕೊಡಗಿನ ಹೊರಗೆ ದೊಡ್ಡ ದೊಡ್ಡ ಪಟ್ಟಣಗಳಲ್ಲಿ ಒಳ್ಳೇ ಕ್ರಯಕ್ಕೆ ಮಾರಾಟ ಮಾಡಲು ಅನುಕೂಲವಾಗುವುದು. ಅದನ್ನು ಬಂದು ಸಿಕ್ಕಿದ ಬೆಲೆಗೆ ಕಾಯಿಸಿ, [illegible] ವಾಗಿಯೇ [illegible] ಮಾಡದಂತೆ ಮುಚ್ಚಿದರೆ ಜೇನು ಹುಳಿಯಾಗದೆ ಕೆಲ ಕಾಲ ಕಾಪಾಡಲ್ಪಡುವುದೆಂದು ಗೊತ್ತಾಗಿದೆ. ಈ ವಿಚಾರಗಳನ್ನೆಲ್ಲಾ ಮಾಡಲು ಯಂತ್ರಗಳ ಅವಶ್ಯಕತೆ ಇದೆ. ಈಗ ಸ್ಥಾಪಿಸಲ್ಪಟ್ಟಿರುವ ಸಹಕಾರ ಸಂಘವು ಈ ಕೆಲಸಗಳನ್ನೆಲ್ಲಾ ನಡೆಸಲು ಯಂತ್ರಗಳನ್ನು ತರಿಸುವುದಲ್ಲದೆ, ಹಾಗೆ ಜೇನು ತುಂಬಿದ ಶೀಶೆಗಳನ್ನು ಹೊರ ಪ್ರದೇಶಗಳಿಗೆ ಕಳುಹಿಸಿ ಉತ್ತಮ ಬೆಲೆಯಲ್ಲಿ ಮಾರಾಟ ಮಾಡುವ ವಿಚಾರವನ್ನು ಕೈಕೊಳ್ಳುವುದು. ಈ ವಿಚಾರವಿನಿಂದ ಕಷ್ಟ ಪಟ್ಟು ಜೇನಿಗೆ ಈಗ ಇಲ್ಲಿ ದೊರೆಯುವ ಬೆಲೆಯು ಎರಡಷ್ಟು ಹೆಚ್ಚಾದರೂ ದೊರೆಯಬಹುದೆಂದು ಊಹಿಸಲಾಗಿದೆ. ಜೇನು ವಿಕ್ರಯವಾಗದಂತೆ ನೋಡಿಕೊಳ್ಳುವುದು ಆ ಸಂಘದ [illegible] ಆದುದರಿಂದ ಜನರು ಜೇನನ್ನು ಆಗಾಗಲೆ ಹಿಂಡದೆ ಹಾಗೆಯೇ ತಂದು ಸಂಘಕ್ಕೆ ಸಂಗ್ರಹಿಸಿಕೊಡುವುದು ಲಾಭದಾಯಕವಾಗಿದೆ. ಈ ಸಂಘವು ಈಗಕ್ಕೆ ಇಲ್ಲಿಯ ವ್ಯಾಪಾರಿಗಳಿಂದ ಬೇರೆಯಾಗಿ [illegible] ಜೇನನ್ನು ಕೊಂಡುಕೊಂಡು ಹೊರಗೆ ಮಾರಾಟ ಮಾಡಿದ ಮೇಲೆ ಬರುವ ಲಾಭದ ಒಂದು ಭಾಗವನ್ನು ಬೋನಸು ರೂಪದಲ್ಲಿ ಜೇನು ಸಂಗ್ರಹಿಸಿ ಕೊಟ್ಟವರಿಗೆ ಕೊಡುವ ವಿಚಾರವೂ ಇದೆ. ಮುಖ್ಯವಾಗಿ ಈ ಸಂಘದಿಂದ ಜೇನು ಸಂಗ್ರಹಿಸುವ ಗ್ರಾಮಸ್ಥರಿಗೆ ಹೆಚ್ಚಿನ ಪ್ರಯೋಜನವಾಗಬೇಕೆಂಬುದೇ ಈ ಸಂಘ ಸ್ಥಾಪನೆಯ ಉದ್ದೇಶವಾಗಿದೆ. ಈಗ ಕೊಡಗಿನಲ್ಲಿ ಜೇನು ಮೇಣವು ವಿಸಂಗಲೂ ಕ್ರಯ ಸಿಕ್ಕದೆ ಅಥವಾ ಒಳ್ಳೇ ಕ್ರಯ ದೊರೆಯದೆ ಬಹು ಮಟ್ಟಿಗೆ ಹಾಳಾಗುತ್ತಿದೆ. ಇದನ್ನು ತಡೆದು, ವಿಕ್ರಯದ ಮೇಣ ಕ್ಕೂ ತಕ್ಕ ಯುಕ್ತವಾದ ಬೆಲೆ ದೊರಕಿಸುವುದೂ ಈ ಸಂಘದ ಕಾರ್ಯವಾಗಿದೆ. ಆದುದರಿಂದ ದೇಶದ ಗ್ರಾಮಸ್ಥರು ತಾವು ಸಂಗ್ರಹಿಸುವ ಜೇನು ಮತ್ತು ಮೇಣವನ್ನೆಲ್ಲಾ ಈ ಸಂಘಕ್ಕೇನೇ ಕಳುಹಿಸಿಕೊಟ್ಟು, ಅದಕ್ಕೆ ಪ್ರೋತ್ಸಾಹವನ್ನೇ ಬೇಕಾಗಿದೆ. ಈ ಸಂಘದ ಕೆಲಸ ಕಾರ್ಯಗಳು ಬಯಸಿದಂತೆ ನಡೆಯಬೇಕಾದರೆ ಪ್ರಥಮ ವರ್ಷ ನೂರಾರು ಉಂಡೆಗಳು [illegible] ಆದಾಯ ಬೇಕಾಗುವುದೆಂದು [illegible] ಆದುದರಿಂದ ಕೊಡಗಿನ ಎಲ್ಲಾ ಸಹಕಾರ ಸಂಘಗಳು ಇದರಲ್ಲಿ ಶೇರು ತೆಗೆದುಕೊಳ್ಳುವುದಲ್ಲದೆ ಖಾಸಗೀ ಮಹನೀಯರು ಶೇರು ತೆಗೆದುಕೊಳ್ಳುವುದರ ಮೂಲಕ ಇದಕ್ಕೆ ಧನ ಸಹಾಯ ಮಾಡುವುದು ಅವಶ್ಯವಾಗಿದೆ. ಶೇರು ಒಂದರ ಹಣ್ಣು ರೂಪಾಯಿ ಮಾತ್ರವಾದುದರಿಂದ ಹಲವರಿಗೆ ಇದರಲ್ಲಿ ಶೇರು ಮೆಂಬರುಗಳಾಗಿ ಸೇರಲು ಅನುಕೂಲವಿದೆ. ಕೊಡಗಿನ ಜೇನು ಮತ್ತು ಮೇಣಕ್ಕೆ ಉತ್ತಮವಾದ ಬೆಲೆಯನ್ನು ಪಡೆಯುವ ಸಂಘದ ಉದ್ದೇಶವು ಕೈಗೂಡಿದರೆ ಜೇನು ನೊಣ ಸಾಕುವ ಉದ್ಯಮವು ದೇಶದ ಮೂಲೆ ಮೂಲೆಗಳಲ್ಲಿ ಹರಡಿ ಅದರಿಂದ ರೈತರ ಉತ್ಪತ್ತಿಯನ್ನು ಹೆಚ್ಚಿಸಿಕೊಳ್ಳಲು ಸುಲಭ ದಾರಿಯಾಗುವುದು. ಆದಕಾರಣ ಈ ಸಂಸ್ಥೆಗೆ ಪ್ರತಿಯೊಬ್ಬರೂ ಉತ್ತೇಜನ ಕೊಡುವವರಾಗಿ ಆಶಿಸುತ್ತೇವೆ.

ಸುಭಾಷ್ಚಂದ್ರಬೋಸರ ಮೇಲೆ ನಿರ್ಬಂಧ.

ಸುಭಾಷ್ಚಂದ್ರಬೋಸರು ಒರುವ ಬಿಹಾರ ಕಾಂಗ್ರೆಸು ಸಮಯಕ್ಕೆ ಹಿಂದೂಸ್ಥಾನಕ್ಕೆ ಬರುವರೆಂದು ಪತ್ರಿಕೆಗಳಲ್ಲಿ ಪ್ರಕಟವಾಗಿತ್ತು. ಈ [illegible] ಮೇಲೆ ಬ್ರಿಟಿಷ್ ಸರಕಾರದ ಪರರಾಷ್ಟ್ರ ಮಂತ್ರಿಗಳು ವಿಯನ್ನದಲ್ಲಿರುವ ಬ್ರಿಟಿಷ್ ರಾಯಭಾರಿಗಳ ಮುಖಾಂತರ ಬೋಸರಿಗೆ, 'ಹಿಂದುಸ್ಥಾನಕ್ಕೆ ಹಿಂತಿರುಗಿದಲ್ಲಿ ನೀವು ಬಂಧಿಸಲ್ಪಡುವಿರಿ' ಎಂದು ತಿಳಿಸಿರುವರು. ಈ ಬಗ್ಗೆ ತಾ 21 ರಲ್ಲಿ ಎಸೆಂಬ್ಲಿಯಲ್ಲಿ ಶ್ರೀ ಸೀಲ ಕಾಂತ ದಾಸ್‌ರವರು ಸರ್ಕಾರದ ವರ್ತನೆಯನ್ನು ಖಂಡಿಸುವ ಠರಾವನ್ನು ತಂದು ಅದು ಚರ್ಚಿಸಲ್ಪಟ್ಟು 62 ಜನರು ಪರವಾಗಿಯೂ 59 ಮಂದಿ ವಿರೋಧವಾಗಿಯೂ ಮತ ಕೊಟ್ಟು ಅಂಗೀಕಾರವಾಯಿತು.

ಈ ವಿಷಯದಲ್ಲಿ ಠರಾವಿಗೆ ಬೆಂಬಲವಾಗಿ ಭಾಷಣ ಮಾಡಿದ ಎಸೆಂಬ್ಲಿ ಸದಸ್ಯರು ಸರ್ಕಾರದವರ ವರ್ತನೆಯನ್ನು ಬಲವಾಗಿ ಖಂಡಿಸಿದರು. ಸರ್ಕಾರದವರು ಒಂದು ಕಡೆಯಿಂದ 'ಭಾರತೀಯರು ತಮ್ಮ ಸ್ವರಾಜ್ಯವನ್ನು ಪಡೆಯಲು ಅರ್ಹರಾಗಿರುವದಿಲ್ಲ, ಅವರಿಗೆ ತಮ್ಮ ಸ್ವಾಮ್ಯವಾಗಿ ಆ ಅರ್ಹತೆಯು ಬಂದಿರುವುದರಿಂದ ಶಿಕ್ಷಣವನ್ನು ಸಾವಧಾನವಾಗಿ ಕೊಡಲ್ಪಡುತ್ತಿರುವದೆಂದು ಘೋಷಿಸುತ್ತಿರುವ' ಅದೇ ಸಮಯದಲ್ಲಿ ಬುದ್ಧಿವಂತಿಕೆ, ವಿವೇಕ ಸ್ವಾರ್ಥತ್ಯಾಗ, ಜನ ಸೇವಾ ತತ್ಪರತೆ, ದೇಶದಲ್ಲಿ ಅಗ್ರಸ್ಥಾನ ಪಡೆದ, ದೇಶದ ಸೇವೆಯೇ ಜೀವನದ ಧ್ಯೇಯವನ್ನಾಗಿ ಮಾಡಿಕೊಂಡ ಜನನಾಯಕರನ್ನು ಬಂಧಿಸುತ್ತಿರುವರು. ಕೆಲ ಸಮಯದ ಹಿಂದೆ ಬೋಸರನ್ನು ಇಂಗ್ಲೆಂಡಿಗೆ ಹೋಗಲು ಬಿಡದೆ ಅಲ್ಲಿ ಮನವಿದಾಗ ಅನೇಕ ಪ್ರಮುಖ ಇಂಗ್ಲೀಷರು [illegible] ಸ್ವಾತಂತ್ರ್ಯದ ಹಕ್ಕುಗಳ ಮೇಲೆ ಸರಕಾರದವರು ನಿಷ್ಕಾರಣವಾಗಿ ಹಾಕಿರುವ ನಿರ್ಬಂಧವನ್ನು ಖಂಡಿಸಿದರು. ಆದರೂ ಸರಕಾರದವರು ಅದಕ್ಕೆ ಲಕ್ಷ್ಯ ಕೊಡದೆ ಈಗ ಸ್ವದೇಶಕ್ಕೆ ಬರಲು ಉದ್ದೇಶಿಸಿರುವ ಬೋಸರ ಮೇಲೆ ಪುನಃ ನಿರ್ಬಂಧವನ್ನು ಹಾಕಿರುವರು.

'ಬೋಸರು ಕ್ರಾಂತಿಕಾರರ ಪಕ್ಷದವರು' ಎಂಬುದೊಂದೇ ಸರಕಾರದವರ ಹೇಳಿಕೆ. ಆದರೆ, ಹಾಗೆ ಕ್ರಾಂತಿಕಾರರೆಂದು ಇಂದಿಗೆ ಸ್ಪಷ್ಟವಾಗಿ ತೋರಿ ಬಂದಲ್ಲಿ ನ್ಯಾಯ ಕೋರ್ಟುಗಳಲ್ಲಿ ಆ ಬಗ್ಗೆ ಅದರ ವಿಚಾರಣೆ ನಡೆಸಿ ಆ ನಂತರ ತಕ್ಕ ಶಿಕ್ಷೆ ವಿಧಿಸಬಹುದಷ್ಟೆ. ಆದರೆ, ಆ ಪ್ರಕಾರ ಸರಕಾರದವರಿಗೆ ನ್ಯಾಯ ಸ್ಥಾನದಲ್ಲಿ ಸಪ್ರಮಾಣವಾಗಿ ಕಾರಣಗಳನ್ನು ತೋರಿಸಲು ಸಾಧ್ಯವಿಲ್ಲದ್ದರಿಂದಲೇ, ಅವರು ಹಿಂದೂಸ್ಥಾನಕ್ಕೆ ಬಂದಲ್ಲಿ ಕ್ರಾಂತಿಯ ಪ್ರಚಾರ ಮಾಡುವರೆಂದು ಊಹಿಸಿಯೇ ಅವರನ್ನು ಈಗ ನಿರ್ಬಂಧಿಸುವರೆಂದು ಹೇಳಬೇಕಾಗುವುದು. ಆಗಿನ ಸಂದರ್ಭಕ್ಕೆ ಸಭಾಸದರು ಮಾಡುವ ಅಧಿಕಾರಕ್ಕೆ ಏನೂ ಕೂಡ ತಿಳಿಯದು. ಇದಕ್ಕೆ ಕಳೆದ ಎಸೆಂಬ್ಲಿಯಲ್ಲಿ ಸಂಸ್ಥಾನದ 'ಚಟಿಸ್ಟಿ' ಎಂಬಲ್ಪಟ್ಟ 'ಕ್ರಿಮಿನಲ್ ಲಾ ಎಮೆಂಡ್‌ಮೆಂಟ್' ಶಾಸನದ ಮೇಲೆ ಉದಾಹರಣೆ ಅಥವಾ ಸಾಕಷ್ಟು ವಾದವನ್ನು ಈ ಪ್ರಕಾರ ತಪ್ಪು ಮಾಡುವನೆಂದು ಊಹಿಸಿ ಅವನ ಮೇಲೆ ಬೆಟ್ಟ ನಡೆಸುವ ಅಧಿಕಾರವನ್ನು ಹಿಂದೆಗೆದು [illegible] ಆ ದೇಶದ ಅನ್ಯಾಯವೆಂಬುದು ಊಹಿಸಬೇಕು. ಇದ್ದರಿಂದ ಸರಕಾರದವರು ಈ ನ್ಯಾಯದ ತತ್ವ ಪೋಷಣೆಯನ್ನು ಒಪ್ಪಿಕೊಂಡು ನಾಗರಿಕ ಸ್ವಾತಂತ್ರ್ಯದ ಬಗ್ಗೆ ತಮ್ಮ ನೀತಿಯನ್ನು ಪುನರ್ವಿಮರ್ಶಿಸಿ ನಾಗರಿಕ ಪ್ರಜೆಗಳ ಜನ್ಮಸಿದ್ಧ ಹಕ್ಕುಗಳನ್ನು ರಕ್ಷಿಸಬೇಕು.

ಕಾಂಗ್ರೆಸ್ ವರ್ಕಿಂಗ್ ಕಮಿಟಿ ಮೀಟಿಂಗು.

ಕಾಂಗ್ರೆಸು ಕಾರ್ಯಕಾರಿ ಮಂಡಲದ ಸಭೆಯು ಈ ತಾ 21 ನೇ ತಾರೀಕು ಆರಂಭವಾಗಿ ದೆಹಲಿಯಲ್ಲಿ ನಡೆಯಿತು. ಶ್ರೀ ಅಬ್ದುಲ್ ಗಫಾರ್‌ಖಾನರು ಜೈಲಿನಲ್ಲಿರುವುದರಿಂದ ಅವರೂ ಮತ್ತು ಅಬ್ದುಲ್ ಕಲಾಂ ಆಜಾದರವರಲ್ಲದೆ ಮಿಕ್ಕವರೆಲ್ಲರೂ ಹಾಜರಿದ್ದರು.



(ಸಭೆಯ ಅಧ್ಯಕ್ಷ ಬಾಬು ರಾಜೇಂದ್ರ ಪ್ರಸಾದರು)

ಮಂತ್ರಿ ಪದವಿ ಸ್ವೀಕಾರದ ವಿಷಯದ ಚರ್ಚೆಯಲ್ಲಿ ತಕ್ಕ ಸಲಹೆಗಳನ್ನು ಪಡೆಯಲಿಕ್ಕಾಗಿ ಕಾಂಗ್ರೆಸು ಪಾರ್ಲಿಮೆಂಟರಿ ಬೋರ್ಡಿನ ಅಧ್ಯಕ್ಷರಾದ ಶ್ರೀ ಭುಲಾಭಾಯಿ ದೇಸಾಯಿಯವರೂ ಮತ್ತು ಗೋವಿಂದ ವಲ್ಲಭ ಪಂತರೂ ನಿಮಂತ್ರಿತರಾಗಿದ್ದರು.

ಚರ್ಚೆಯ ಹೆಚ್ಚು ಭಾಗವು ಬರುವ ಲಕ್ನೋ ಕಾಂಗ್ರೆಸಿನ ಕಾರ್ಯಕಲಾಪಗಳ ವಿಷಯವಾಗಿತ್ತು. ಮಂತ್ರಿ ಪದವಿ ಸ್ವೀಕಾರದ ಚರ್ಚೆಯ ವಿಷಯದಲ್ಲಿ ಬಹುಮತದವರು ಲಕ್ನೋ ಕಾಂಗ್ರೆಸಿನಲ್ಲಿ ಈ ವಿಷಯ ಇತ್ಯರ್ಥವಾಗತಕ್ಕದೆಂದೂ, ಉಳಿದವರು ಹೊಸ ರಾಜ್ಯ ಘಟನೆಯು ಕಾರ್ಯರೂಪದಲ್ಲಿ ಬರಲು ಇನ್ನೂ ಬಹು ವರ್ಷದ ಮೇಲೆ ಸಮಯ ಬೇಕಾಗುವದರಿಂದ ಈ ವಿಷಯವು ಈಗಲೇ ಇತ್ಯರ್ಥವಾಗಬೇಕಾಗಿಲ್ಲವೆಂದೂ ಅ

ಶ್ರೀಮತಿ ಕಮಲಾ ದೇವಿಯವರ ಭಾಷಣ

ಕಲ್ಕತ್ತೆಯಲ್ಲಿ ಜರುಗಿದ ಅಂತರಾಷ್ಟ್ರ ಸಭೆಯ ಸ್ತ್ರೀ ಸಮ್ಮೇಳನದಲ್ಲಿ ಮಾಡಿದ ಭಾಷಣದ ಸಾರಾಂಶ

'ಅಧ್ಯಕ್ಷೆಯರು ಮಹಾರಾಣಿಯವರಾಗಿರುವರೆಂದು ನಾನಿಂದು ಅವರನ್ನು ಪ್ರಶಂಸಿಸುವುದಿಲ್ಲ. ಕಾರಣ ರಾಜಮನೆತನದ ವೈಭವದಲ್ಲಿ ನನ್ನ ಮನಸ್ಸೇರಿರುವುದಿಲ್ಲ. ಆದರೆ ಇಂದು ಎಂದೂ ಅಂಗನೆಯರಾಗಲೂ ಪಚ್ಛನ್ನವಾಗದ ಸಹೋದರ ಭಾವದಿಂದ ದೇಶದ ಯಾವತ್ತೂ ಭಾಗಗಳಿಂದಲೂ ವಿವಿಧ ಮತಗಳ ಹಾಗೂ ಬೇರೆ ಬೇರೆ ಭಾಷೆಯನ್ನಾಡುತ್ತಿರುವ ಭಗಿನಿಯರೆಲ್ಲರೂ ಇಲ್ಲಿ ಸೇರಿರು. ಈ ಇತ್ತಟ್ಟಿನ ಭಗಿನಿಯರ [illegible] ಜೀವನದ ಅರ್ಥವನ್ನು [illegible] ಜನಾಂಗವೆಂಬ [illegible] ನಮ್ಮ ಕರ್ತವ್ಯಗಳನ್ನು [illegible] ನಾವು ಧನ್ಯವಾದಗಳನ್ನರ್ಪಿಸಬೇಕಾಗಿದೆ. ನಾವೆಲ್ಲರೂ ಈ ಸುಂದರವಾದ ಪ್ರಾಂತವನ್ನು ಪ್ರವೇಶಿಸುವ ವೇಳೆಯಲ್ಲಿ ಇಲ್ಲಿಯ ಹಿಂದಿನ ವೈಭವ [illegible] ನಮ್ಮ ಕಣ್ಣಿಗೆ [illegible]. ಆದರೇನು? [illegible] ಸ್ವಾತಂತ್ರ್ಯಕ್ಕಾಗಿ ಬಾಯ್ದೆರೆಯುವ ದೇಶವಾಗಿದೆ. [illegible] ಇಂಥ ದುಃಖಪ್ರದವಾದ [illegible] ನಾವು ನಮ್ಮ ಚಿತ್ತದಲ್ಲಿ [illegible]. ನಿಜವಾಗಿ ಮತ್ತು [illegible] ಹೃದಯವನ್ನು [illegible] ನಮ್ಮ ದೇಶದಲ್ಲಿ ಒಂದಾಗಿ ಸೇರಲಿ? ನಿಮ್ಮ ನಾಡ. [illegible] ದೇಶದ ಇಂದಿನ ಸ್ಥಿತಿಯನ್ನು [illegible] ಭೋಜನವನ್ನು [illegible] ಅನೇಕರಿದ್ದಾರೆ. ನಮ್ಮ ಸಹೋದರ ಸಹೋದರಿಯರು ಇನ್ನೊಂದೆಡೆಯಲ್ಲಿ [illegible] ನಾವೆಂದೂ ಹೇಗೆ [illegible]? ನಾವು ಸಂಕಟಗಳಿಂದ ಬಿಡುಗಡೆ ಹೊಂದದ ಹೊರತು ನಮಗೆ ಸ್ವಾತಂತ್ರ್ಯವೆಲ್ಲಿ?

ಆರೋಗ್ಯ ವಿಚಾರ.

ಸಕ್ಕರೆ.

ಕೃತಕವಾದ ವಿಧವಿಧ ಸಕ್ಕರೆಗಳಲ್ಲಿರುವ ಮುಖ್ಯ ದೋಷಗಳನ್ನು ತಿಳಿದುಕೊಳ್ಳುವುದು ಅತ್ಯವಶ್ಯವು. ಸ್ತ್ರೀಯರೂ, ಬಾಲಕರೂ ಈ ಸಕ್ಕರೆಗಳನ್ನು ಅಧಿಕವಾಗಿ ಸೇವಿಸುವುದರಿಂದ ಸ್ವಾಸ್ಥ್ಯಕ್ಕುಂಟಾಗುವ ಕೆಡುಕು ಅವರಲ್ಲಿ ವಿಶೇಷವಾಗಿ ಕಾಣುತ್ತದೆ. ಮಾಗಿದ ಹಣ್ಣುಗಳು, ಖರ್ಜೂರ, ಅಂಜೂರ, ಜೇನುತುಪ್ಪ, ತರಕಾರಿಗಳು, ದ್ವಿದಳ ಧಾನ್ಯಗಳು ಇವೇ ಮುಂತಾದವುಗಳನ್ನು ಸೇವಿಸಿಯೇ ನಾವು ದೇಹಕ್ಕೆ ಬೇಕಾದಷ್ಟು ಸಕ್ಕರೆಯನ್ನು ಒದಗಿಸಿಕೊಳ್ಳಬೇಕು. ಶುದ್ಧ ಬಿಳಿ ಸಕ್ಕರೆಗಳಿಗಿಂತ ನಾಡು ಸಕ್ಕರೆಯು ಉತ್ತಮವಾದುದು. ಅದರ ಬಣ್ಣವು ಕಪ್ಪಾಗಿರುವುದುಂಟು.

ಸಕ್ಕರೆಯನ್ನು ಶುದ್ಧಗೊಳಿಸುವಾಗ ಕಬ್ಬಿನ ರಸ ಮುಂತಾದುವುಗಳಲ್ಲಿರುವ ಬಿಳಿ ಸಂಬಂಧವಾದ ಪದಾರ್ಥಗಳೂ, ಹುಳಿ [illegible] ಮುಂತಾದ ಪದಾರ್ಥಗಳೂ, ಜೀವಸತ್ವಗಳೂ, ಇತರ ಔಷಧ ಪದಾರ್ಥಗಳೆಂದೂ ಹೋಗಿ ನಿಸ್ಸತ್ವವಾದ ಸತ್ವ ಭಾಗಗಳು ಮಾತ್ರ ಉಳಿಯುವುವು. ಇಂತಹ ಸಕ್ಕರೆಯ ಭಾಗವು ರಕ್ತನಾಳಗಳಲ್ಲಿಯೂ, [illegible] ಇರುವ ಬಿಳಿ ಪದಾರ್ಥಗಳಿಗೆ ವಿರೋಧವಾಗಿ [illegible], ರಕ್ತಕ್ಷಯ, ಹಲ್ಲುಗಳು ಕೊಳೆಯುವುದು ಇವೇ ಮುಂತಾದ ವ್ಯಾಧಿಗಳಿಗೆ ಕಾರಣವಾಗುವುದು.

ಹಿಟ್ಟು ಅಧಿಕವಾಗಿರುವ ಆಹಾರಗಳು ಎಂದರೆ ರೊಟ್ಟಿ, ಆಲುಗೆಡ್ಡೆ, (ಗೆಣಸುಗೆಡ್ಡೆ) ಕಡಲೆ ಮುಂತಾದವು ನಮ್ಮ ಬಾಯಲ್ಲಿನ ರಸದ ಸಂಯೋಗದಿಂದ ಸಕ್ಕರೆಗಳಾಗಿ ರಕ್ತಗತವಾಗುವುವು. ಈ ಪದಾರ್ಥಗಳನ್ನು ಮಿತಿಮೀರಿ ಸೇವಿಸುತ್ತಾ ಬರುವುದರಿಂದ ಸಕ್ಕರೆಯಲ್ಲಿಯೂ, ಪೆಪ್ಪರಮೆಂಟು ಮುಂತಾದ ಪದಾರ್ಥಗಳಲ್ಲಿಯೂ, ಹಿಟ್ಟು ಕೂಡಿರುವ ಪದಾರ್ಥಗಳಲ್ಲಿಯೂ ಅಭಿರುಚಿಯು ಹೆಚ್ಚುವುದು.

ಈಜುವುದರಿಂದಾಗುವ ಪ್ರಯೋಜನಗಳು.

ಈಜುವವನು ತನ್ನ ದೇಹದ ಸಮಸ್ತ ಭಾಗಗಳನ್ನು ಚೆನ್ನಾಗಿ ನೀಡಿ ತನ್ನ ದೇಹಶಕ್ತಿ ಎಲ್ಲವನ್ನು ಉಪಯೋಗಿಸಲು ಅನುಕೂಲವಾಗುವುದು. ಆತನ ದೇಹವೆಲ್ಲವೂ ಆತನ ಅಧೀನದಲ್ಲಿಯೇ ಇರುವುದರಿಂದ ಮನಬಂದಂತೆ ಉಪಯೋಗಿಸಿದ [illegible] ಈಜುವುದು ಶಿಕ್ಷಕನನ್ನು [illegible] ಕೂಡ ಆತನು ತೇಲಿದ ರೀತಿಯಲ್ಲಿ ಈಜುವುದು.

ವ್ಯಾಯಾಮದಿಂದ ಸಾಧ್ಯವಾಗುವ ಗುಣ ಭಾಗಗಳನ್ನು ಸಾಧಿಸಲು ಈಜುವಿಕೆಯೇ ಅತ್ಯುತ್ತಮವಾದ ಸಾಧನೆಯು. ಈಜುವುದರಿಂದ ರಕ್ತ ಸಂಚಾರವು ವೇಗವಾಗಿ ನಡೆಯುವುದು. ದೇಹದಲ್ಲಿರುವ ಮಾಲಿನ್ಯವಾದ ಮಲಿನ ಬಿಂದುಗಳಿಗೆ ಸಾಧನವಾಗುವುದು. ಬಹುವಾಗಿ ಈಜುವಾಗ ನಾವು ಹೊರಗೆ ಬಿಡುವ ಗಾಳಿಯು ಸರೋವರದ ತಳಭಾಗದಿಂದ ಬರುವುದು. ಇದರಿಂದ ನಮ್ಮ ಶ್ವಾಸಕೋಶಗಳು ಚೆನ್ನಾಗಿ ಬೆಳೆದು [illegible] ಈ ಅಂಗ ಸಾಧನೆ [illegible] ಒಳ್ಳೆಯದಾಗುವುವು. [illegible] ಈಜುವುದರಿಂದ ಹೊಟ್ಟೆಯಲ್ಲಿನ [illegible] ಚೆನ್ನಾಗಿ ಬೆಳೆಯುವುವು. [illegible] ಮುಂತಾದವುಗಳಲ್ಲಿರುವ [illegible] ಸಮಸ್ತ ಜಾಡ್ಯಗಳಲ್ಲ [illegible]. ಈ ಸಾಧನೆಯು [illegible] ಹಾಗೆಯೇ [illegible] ದೇಹದ ಸಮಸ್ತ ಭಾಗಗಳಿಗೂ ವಿಶ್ರಾಂತಿ ಸುಖವನ್ನು ಕೊಡುವುದು. ಈಜುವಾಗ ಎಲ್ಲಾ ಮಾಂಸ ಖಂಡಗಳನ್ನು ಉಪಯೋಗಿಸುವುದರಿಂದ ರಕ್ತ ಸಂಚಾರವು ವೇಗವಾಗಿ ನಡೆಯುವಂತಾಗಿ ದೇಹದಲ್ಲಿ ಕಟ್ಟಿಕೊಂಡಿರುವ ಕಶ್ಮಲಾದಿಗಳನ್ನು ಶ್ವಾಸೋಚ್ಛ್ವಾಸಗಳ ಮೂಲಕವಾಗಿ ಹೊರಗೆ ತಳ್ಳಲು ಅನುಕೂಲವಾಗುವುದು.

'ರಾ. ಬ.'

ಕುದಿ.

(ಆರ್. ಎಸ್. ಭಾರದ್ವಾಜ, ಕೊಡಗು.)

ಎಂದೋ ಎಲ್ಲೋ ಕಂಡ ರೂಪಿನ |
ಅಂದಾದೇವಿಯು ನಡೆದ ಭೂಮಿಯು
ಇಂದಿಗೆ ಕನಸಿನ ರಾಜ್ಯವಾದುದೇ ?
ಮಿಂಚಿದ ದಿನಗಳು ಮುಂದೆ ತೋರವೆ ? || ೧ ||

ಭಾರತ ಮಾತೆಯ ಕೊರಳ ಮಣಿಮಾಲೆ
ಇಂದೀ ವಿಧದಲಿ ಕಾಂತಿ ಗುಂದಿತೆ ?
ಚದರಿದ ಉದುರಿದ ಮಣಿಯು ನಮ್ಮವ
ನಲ್ಲಿಹ ನಾರಿಗೆ ಹಾರವ ಕೊಡದೆ ? || ೨ ||

ಅವ್ವನೋ ರಾಜ್ಯವು ಅವರ ಬಾಳ್ವೆಯು
ಮಾಯೆಯು ದೀರೂಬೂದು ಭಾವವ
ತಗ್ಗಿಸಿ, ಕನಸೋ ನನಸೋ ತಿಳಿಯದ
ಮಬ್ಬಿನಲಿ ತಳಮಳಗೊಳಿಸಿ ಕಾಡುವುದು || ೩ ||

ಎಂದಿಗೆ ನಿಲುವುದು ತಾಯ ದುಃಖವು ?
ಎಂದಿಗೆ ಕಾಣ್ಬುದೊ ಸೋದರರ ಮನ ?
ಎನ್ನಂದಿಗೆ ಸಂತಸವು ಬರುವುದೋ ?
ಹಿಮಗಿರಿ ಇಂದಿಳಿವ ಬಿಸಿಲ ಹೊಳಹು ? || ೪ ||

ಭಾರತ ಭಾಗ್ಯದ ತಂದ ಭಾಸ್ಕರ |
ನಸ್ತಮಿಸೆ, 'ಕಮಲವು' ಬಾಡಿದ್ದುದು |
ಮುದುಡುವುದನಿತೋ ಕುಸುಮ ಸಾರಂಥ
ಪೊಂಗುವ ನೆಸಯುತ ಕಣ್ಣ ತಾಯಿಗೆ ? || ೫ ||

ಉದುರಿತು ಕಂಬನಿ ಮಾತೆ ಬಳಲುತ
ಸುತ್ತಿತು ಕತ್ತಲೆ | ಬಿಟ್ಟಿ ರಾಣಿಯ |
ಎಡವಿಯೆಡೋ ತಡವಿಯೋ ಗತಿಯ ಸೇರದೆ
ಎದೆಗುಂದುವರೇ ವೀರ ಪುತ್ರರು ? || ೬ ||

ಮುಂದಿನ ಪಥದಲಿ ಬೆಳಕ ಬೀರುವ
ತಾರಾ ಬಳಗದ ಸೇರಿ, ಪಥಿಕರ
ಧೈರ್ಯವನಿತ್ತು, ಉದಿಸಲು ಹೊರಟ
ಅರಳುತ 'ಕಮಲಿನಿ' ನೋಟಗೆ ಸುಗಂಧಗಳ ? || ೭ ||

ಸೂಚನೆ:—ಶ್ರೀಮತಿ ಕಮಲಾ ನೆಹರುರವರನ್ನು ಕುರಿತ ಚರಮಗೀತೆಯೋ ಇದಾದರೂ ಇದರಲ್ಲಿ ಉಳಿದ ಹಿಂದಿನ ಭಾರತ ಜ್ಯೋತಿಗಳ ಕುರಿತೂ ಸಮನ್ವಯವಾಗಿರುವುದರಿಂದ 'ಕುದಿ' ಎಂಬ ಸಾರ್ವತ್ರಿಕಾರ್ಥವುಳ್ಳ ಶೀರ್ಷಿಕೆಯನ್ನು ಈ ಕವನಕ್ಕೆ ಕೊಡಬೇಕಾಯಿತು.

ವಿಜ್ಞಾಪನೆ.

ಮಹಾಶಯರುಗಳಲ್ಲಿ ವಿನಂತಿ:—

ಕೊಡಗಿನ [illegible] ದೇವಸ್ಥಾನಗಳು—ಶ್ರೀ ಕಾವೇರಿ ಮತ್ತು ಶ್ರೀ ಓಂಕಾರೇಶ್ವರ ಮಲ್ಲಿಕಾರ್ಜುನ ದೇವಾಲಯಗಳಾಗಿರುತ್ತವೆ. ಶ್ರೀ ಓಂಕಾರ ಮಲ್ಲೇಶ್ವರ ಮಲ್ಲಿಕಾರ್ಜುನ ದೇವಾಲಯವು ಉತ್ತರ ಕೊಡಗು ತಾಲೋಕು [illegible] ಗ್ರಾಮದ ಹೆಗ್ಗಡೆ ಮನೆಯಲ್ಲಿರುವ ಪುಷ್ಪಗಿರಿಯ ಬುಡದಲ್ಲಿರುವ ದೇವಾಲಯವಾಗಿರುತ್ತದೆ. ಈ ದೇವಾಲಯವನ್ನು ನೋಡದವರು ಕವಿಯು ಸರ್ವಶ್ರೇಷ್ಠ ಮೋಳಬೇಕಾಗಿರುತ್ತದೆ. ಸ್ವಾಮಿಯವರ ಪವಿತ್ರವನ್ನು ಕೇಳದವರು ಯಾರೂ ಇಲ್ಲವೆಂದು ಹೇಳಿದರೆ ತಪ್ಪಾಗಲಾರದು.

ಈ ದೇವಾಲಯವು ಅಂದ್ರ ಪ್ರದೇಶದಲ್ಲು ಇದ್ದಾಗ್ಯೂ ಅನೇಕ ಭಕ್ತಾದಿಗಳು ದೇವರ ದರ್ಶನಕ್ಕೆ ಬಹು ದೂರದಿಂದ ಬರುತ್ತಿರುತ್ತಾರೆ. ಇಂಥಾ ದೇವಾಲಯವು ಜೀರ್ಣಾವಸ್ಥೆಯಲ್ಲಿ ಇರುವುದನ್ನು ನೋಡಿದರೆ ಎಂತವರ ಮನಸ್ಸೂ ಕರಗದೇ ಇರಲಾರದು.

ಈ ದೇವಾಲಯದ ಕಟ್ಟೋಣವು ಜೀರ್ಣಾವಸ್ಥೆಯಲ್ಲಿದ್ದುದನ್ನು ಈಗ ಸುಮಾರು 15 ವರ್ಷಗಳ ಹಿಂದೆ ಅಪ್ಪಿನಾಥ: ಗುರುಗಳಾದ ಶ್ರೀ ಮಲ್ಲಿಕಾರ್ಜುನ ಸ್ವಾಮಿಗಳವರ ಧನಸಹಾಯದಿಂದಲೂ, ಆ ಕಾಲದಲ್ಲಿ ನಾಡು ಪಾರುಪತ್ಯಗಾರರಾಗಿದ್ದ ಮ. ರಾ. ಕೇ. ಕಾಳಪ್ಪನವರು ಮತ್ತು ಆ ಕಾಲದಲ್ಲಿ ಪೋಲೀಸ್ ಸಬ್ ಇನ್ಸ್ಪೆಕ್ಟರುಗಳಾಗಿದ್ದ [illegible] ಸಹಾಯದಿಂದಲೂ ಮತ್ತು ನಾಡಿನ ಕೆಲವು ಮಹನೀಯರುಗಳ ಪ್ರೋತ್ಸಾಹದಿಂದಲೂ [illegible] ಕಟ್ಟೋಣವನ್ನು [illegible] ಇವರುಗಳಿಗೆ ಎಷ್ಟು ವಂದಿಸಿದರೂ ಅತ್ಯಲ್ಪವೆಂದೇ ಹೇಳಬೇಕಾಗಿರುತ್ತದೆ.

ದೇವಾಲಯವು ಶಿಥಿಲಗೊಂಡು ಇರುವುದರಿಂದಲೂ ದೇವಾಲಯದ ಎಲ್ಲಾ ಭಾಗಗಳು ಅತ್ಯಲ್ಪವಾದುದರಿಂದಲೂ ಕಟ್ಟೋಣವು ಬಹಳ ಜೀರ್ಣಾವಸ್ಥೆಯಲ್ಲಿ ಇರುತ್ತದೆ. ಈ ಕಟ್ಟೋಣವನ್ನು ಪೂರೈಸಲು ದೇವರ ಭಂಡಾರದಲ್ಲು ಸಾಕಷ್ಟು ಹಣವಿಲ್ಲದ ಪ್ರಯುಕ್ತ ನಡೆಸಲು ಬಹಳ ಕಷ್ಟವಾಗಿರುತ್ತದೆ. ಈ ಬಗ್ಗೆ ಕೆಲವು ಮಹನೀಯರುಗಳು ದೇವಾಲಯದ ಕಟ್ಟೋಣವನ್ನು ಪೂರೈಸಲು ಕೈಹಚ್ಚಿರುತ್ತಾರೆ.

ದೇವರ ಭಂಡಾರದಲ್ಲಿ ಕಟ್ಟೋಣಕ್ಕೆ ಸಾಕಷ್ಟು ಹಣವಿಲ್ಲದೆ ಕಟ್ಟೋಣದ ಕೆಲಸವನ್ನು ಪೂರೈಸಲು ಅಸಾಧ್ಯವಾದುದರಿಂದ ಚಂದಾ ವಸೂಲು ಮಾಡಿಯಾದರೂ ದೇವರ ಕಾರ್ಯ ನೆರವೇರಿಸಬೇಕೆಂದು ನಿಶ್ಚೈಸಿರುತ್ತಾರೆ. ಮತ್ತು ವಸೂಲಾದ ಚಂದಾ ಹಣವನ್ನು ದುರುಪಯೋಗಪಡಿಸದಂತೆಯೂ ಕಟ್ಟೋಣದ ಕೆಲಸವನ್ನು ಸರಿಯಾಗಿ ನಡೆಸುವುದಕ್ಕಾಗಿಯೂ ಈ ಕೆಳಗಿನವರುಗಳ ಒಂದು ಕಮಿಟಿಯನ್ನು ಆರಿಸಲಾಗಿರುತ್ತದೆ.

ದೇವರ ಭಕ್ತಾದಿಗಳು ಮತ್ತು ಎಲ್ಲಾ ಮಹನೀಯರುಗಳು ಈ ದೇವರ ಕಟ್ಟೋಣದ ಕೆಲಸವನ್ನು ಪೂರೈಸಲು ಧನಸಹಾಯ ಮಾಡಿ ದೇವರ ಕೃಪೆಗೆ ಪಾತ್ರರಾಗಬೇಕೆಂದು ಈ ಮೂಲಕ ಅರಿಕೆ ಮಾಡಿಕೊಳ್ಳುವವರಾಗಿರುತ್ತಾರೆ.

ಚಂದಾ ಕೊಡುವ ಮಹನೀಯರುಗಳು ಪ್ರಿಂಟಾಗಿರುವ ರಶೀತಿಯನ್ನು ಹೊಂದಿಕೊಳ್ಳದೆ ಹಣ ಕೊಡಬಾರದಾಗಿಯೂ, ಇಲ್ಲವೆ ಈ ಕೆಳಗಿನ ಕಮಿಟಿಯವರಿಗೆ ರೂಪಾಯಿ ಕೊಟ್ಟು ರಶೀತಿ ಹೊಂದಿಕೊಳ್ಳಬಹುದಾಗಿಯೂ ಯಾ ಮಣಿಯಾರ್ಡರು ಮೂಲಕ ಸೆಕ್ರೆಟರಿಯವರಿಗೆ ಕಳುಹಿಸಬಹುದಾಗಿಯೂ ಕೇಳಿಕೊಳ್ಳಲಾಗಿದೆ. ಚಂದಾ ವಸೂಲು ಮಾಡುವ ವಿವರಗಳನ್ನು ಗಳವರಿಗೆ ಯೋಗ್ಯ ಕಮಿಷನ್ ಕೊಡಲಾಗುವುದು. ಹೆಚ್ಚಿನ ವಿಷಯಗಳಿಗೆ ಈ ಕೆಳಗಿನವರುಗಳಿಗೆ ಬರೆದು ತಿಳಿದುಕೊಳ್ಳಬಹುದು.

ಕೆಟ್. ರುದ್ರಯ್ಯ,
(ಪ್ರೆಸಿಡೆಂಟ್.)

ಕ. ಮೆಂಬರುಗಳು.	ಕೆ. ಎಸ್. ಜಂಗಪ್ಪ.
ಕೆ. ಬಸಪ್ಪ.	(ಸೆಕ್ರೆಟರಿ.)
ಬಿ. ಕೃಷ್ಣಪ್ಪ.	ಡಿ. ಕೆ. ಪೂಣ್ಣಪ್ಪ,
ಬಿ. ಎ. ತಮ್ಮಯ್ಯ.	(ಜಾಯಿಂಟ್ ಸೆಕ್ರೆಟರಿ.)

ವಿವಿಧ ವಾರ್ತಾವಳಿ.

ಕಲ್ಕತ್ತದಲ್ಲಿ ರೋಗದ ಹಾವಳಿ

ಕಲ್ಕತ್ತದಲ್ಲಿ ಹೋದ ವಾರ 1047 ಮಂದಿ ಮಡಿದರು. ಅದಕ್ಕಿಂತ ಹಿಂದಿನ ವಾರದಲ್ಲಿ 937 ಮಂದಿ ಸತ್ತಿದ್ದರು. 464 ಜನರಿಗೆ ಸಿಡುಬು ತಗಲಿ 330 ಜನರು ಸತ್ತರು. ವಾಂತಿಭೇದಿಯು 188 ಜನರಿಗೆ ತಗಲಿ 68 ಜನರು ಮಡಿದರು.

—೦೦೦—

ಪೋಲೀಸ್ ಅಧಿಕಾರಿಗೆ ಶಿಕ್ಷೆ.

ಕಲ್ಕತ್ತದ ಪೋಲೀಸ್ ಸಬ್ ಇನ್ಸ್‌ಪೆಕ್ಟರ್, ದಿಲ್ ಮಹಮ್ಮದ್ ಖಾ ಎಂಬ ಅಧಿಕಾರಿಗೆ, ಕೈದಿಗಳ ಒಪ್ಪಿಗೆಯನ್ನು ಬಲಾತ್ಕಾರದಿಂದ ಹಿಂಸಿಸಿ ಪಡೆದ ಅಪಾದನೆಯ ಮೇಲೆ ಕಲ್ಕತ್ತ ಮೆಜಿಸ್ಟ್ರೇಟರು ಮೂರು ವರ್ಷಗಳ ಕಠಿಣ ಸಜಾ ವಿಧಿಸಿದ್ದಾರೆ.

—೦೦೦—

ಪ್ರೇಮ ಕಸ್ಟ ಬಿಕಟಿಂಗೇ?

ಕೇರಾಸ್ಟೀ ಎಂಬ 23 ವರ್ಷದ ಇಂಗ್ಲಿಷ್ ಯುವತಿಯು ಹಾಲಿವುಡ್ಡಿನಲ್ಲಿ ನಟನಾದ ಹೆನ್ರಿಮ್ಯಾಥಿಸನ್ ಎಂಬುವನನ್ನು ಪ್ರೇಮಿಸುತ್ತಿದ್ದಾಳೆ. ಅವನಿಗದು ಸರಿಬೀಳದು. ಆದರೆ ಯುವತಿಯು ಪಟ ಹಿಡಿದು ಅವನ ಮನೆಯ ಮುಂದೆ ಪಿಕೆಟಿಂಗ್ ಮಾಡಿದಳು. ಪೋಲೀಸರು ಬಂದು ಅವಳನ್ನು ಹಿಡಿದು ಮತ್ತೆ 60 ದಿನಗಳ ಸಜ ವಿಧಿಸಿದರು

—೦೦೦—

ವರ್ಷಕ್ಕೆ ಇನ್ನೊಂದು ದೃಷ್ಟಾಂತ.

ಕಾಂಗ್ರೆಸ್ ಅಧಿವೇಶನದ ನಾಲ್ಕು ದಿನಗಳೂ, ದಿನಕ್ಕೆ 10 ಸಾವಿರ ಜನರಿಗೆ ಉಚಿತ ಭೋಜನದ ಏರ್ಪಾಟನ್ನು ಮಾಡುವದಾಗಿ ಅಖಿಲ ಭಾರತ ಮಹಿಳಾ ಸಮ್ಮೇಳನದ ಕಾರ್ಯದರ್ಶಿಗಳಾದ ಶ್ರೀಮತಿ ಅಮೃತಕೌರದವರು ಕಾಂಗ್ರೆಸ್ಸಿನ ಸ್ವಾಗತಮಂಡಳಿಯ ಜನರಲ್ ಸೆಕ್ರೆಟರಿಯವರಿಗೆ ಬರೆದಿದ್ದಾರೆ. ಹಿಂದೀ ಹೆಂಗಸರ ದಕ್ಷತೆಗೆ ಇನ್ನೊಂದು ದೃಷ್ಟಾಂತವಿದು.

—೦೦೦—

ಡಾ. ವೆಂಕಟ್ರಮಣರವರಿಗೆ ಚಕ್ರವರ್ತಿಗಳ ಸನ್ಮಾನ

ವಿದೇಶಗಳ ಪಾರ್ಲಿಮೆಂಟ ಶಿಕ್ಷಣವನ್ನು ಪಡೆಯಲು ಇಂಗ್ಲಂಡಿಗೆ ಹೋಗಿರುವ ಇಟಲಿ ಸ್ವಾಸಿಕೋರಿಯ ಮಿಸ ಸೋಮಣ್ಣರವರ ಪುತ್ರರಾದ ಡಾ. ವೆಂಕಟ್ರಮಣರವರಿಗೆ ಬಕಿಂಗ್‌ಹೆಮ್ ಅರಮನೆಯಲ್ಲಿ ಚಕ್ರವರ್ತಿ ಎಂಟನೆ ಎಡ್ವರ್ಡರು ದರ್ಶನವನ್ನು ಕೊಟ್ಟರು. ಚಕ್ರವರ್ತಿಗಳು ಮಾತನಾಡಿದರು... ಚಕ್ರವರ್ತಿಯವರಿಂದ ಈ ಪದವಿ ಪಡೆದ ಹಿಂದೀ ವ್ಯಕ್ತಿ ಡಾ. ವೆಂಕಟ್ರಮಣರವರೇ ಮೊದಲನೆಯವರು.

—೦೦೦—

ಲಖನೌ ಕಾಂಗ್ರೆಸ್ಸಿಗೆ ಹೋಗುವ ಪ್ರೇಕ್ಷಕರಿಗೆ ಟಿಕೇಟು ದರಗಳು.

ಸ್ವಾಗತ ಮಂಡಳಿಯ ಅಧ್ಯಕ್ಷರಾದ ಚಂದ್ರಭಾನುಗುಪ್ತರ ನೇತೃತ್ವದಲ್ಲಿ ಪ್ರೇಕ್ಷಕರು ಅಧಿವೇಶನದಲ್ಲಿ ಹಾಜರಾಗಬೇಕಾದರೆ ಕೊಡಬೇಕಾದ ಟಿಕೇಟುಗಳ ಬೆಲೆಯು ನಿರ್ಣಯವಾಗಿದೆ. ಅಧಿವೇಶನದ ಪೂರ್ತಿ ಹಾಜರಿರಲು ಇಚ್ಛಿಸುವ ಪ್ರೇಕ್ಷಕರು 10 ರೂ. ಬೆಲೆಯ ಟಿಕೇಟನ್ನು ಕೊಳ್ಳಬೇಕು. ಈ ತರಗತಿಯಲ್ಲಿ ಒಂದೇ ದಿನ ಒಂದರೆ 5 ರೂ. ಕೊಡಬೇಕಾಗುವದು. ಇ ತರಗತಿಯಲ್ಲಿ ಪೂರ್ತಿ ಅಧಿವೇಶನಕ್ಕೆ ರೂ. ಅಥವಾ ಒಂದು ದಿನಕ್ಕೆ 2 ರೂ.

ಹೆಂಗಸರಿಗೆ ಇಡೀ ಅಧಿವೇಶನಕ್ಕೆ ರೂ. 2—8—0 ಬೆಲೆ ಮಾಡಲಾಗುವದು.

—೦೦೦—

'ಜನವಾಣಿ' ಪತ್ರಿಕೆಯ ಮೇಲೆ ಮಾನನಷ್ಟದ ಮೊಕದ್ದಮೆ

ಬೆಂಗಳೂರಿನ 'ಕಾರ್ಯನಿರತ' ಪತ್ರಿಕೆಯ ಸಂಪಾದಕರಾದ ಶ್ರೀಯುತ ರಾಮಯ್ಯನವರು 'ಜನವಾಣಿ'ಯ ಸಂಪಾದಕರ ಮೇಲೆ ಮಾನನಷ್ಟಕ್ಕೆ ದಾವೆ ಹೂಡಿದ್ದಾರೆ.

ಶ್ರೀ ಕಮಲಾದೇವಿಯವರು ಮೈಸೂರು ಹೊಂದಿದ ದಿನ ಮಕ್ಕಳು ಕಮಲಾದೇವಿಯ ಚಿತ್ರವನ್ನು ಹಾಕಿ ಅದರ ಕೆಳಗೆ ಬೆಂಗಳೂರು ಕಮಲಾದೇವಿಯರೆಂದು 'ಕಾರ್ಯನಿರತ'ದಲ್ಲಿ ಪ್ರಕಟವಾದುದರ ಬಗ್ಗೆ 'ಜನವಾಣಿ'ಯಲ್ಲಿ ಕೆಲವು ಟೀಕೆಗಳಿದ್ದವು. ಇವು ಕಾರ್ಯನಿರತದ ಸಂಪಾದಕರ ಮಾನಕ್ಕೆ ಲೋಪಕರವಾದವುಗಳೆಂದು ಫಿರ್ಯಾದಿಯ ವಾದ.

—೦೦೦—

ಅಮೇರಿಕದಲ್ಲಿ ನಿರುದ್ಯೋಗಿಗಳಿಗೆ ಸಹಾಯ.

ಅಮೇರಿಕ ಅಧ್ಯಕ್ಷರಾದ ಮಿ. ರೂಸ್‌ವೆಲ್ಟರು ನಿರುದ್ಯೋಗಿಗಳಿಗೆ ಸಹಾಯ ಮಾಡುವದಕ್ಕಾಗಿ ಈ ವರ್ಷ 1500 ಮಿಲಿಯ ಡಾಲರುಗಳನ್ನು ಮಂಜೂರು ಮಾಡಬೇಕೆಂದು ಸೂಚಿಸಿರುವರು. ಆದರೆ ಶಾಸನಸಭೆಗಳ ಮತ್ತು ಇತರ ಸಂಸ್ಥೆಗಳ ನಿರುದ್ಯೋಗಿಗಳಿಗೆ ಸಹಾಯ ಮಾಡಬೇಕೆಂದೂ ಪ್ರಾರ್ಥಿಸಿರುವರು.

ಮಾಜಿ ಗ್ರೀಸಿನ ಪ್ರಧಾನ ಮಂತ್ರಿಗಳ ನಿಧನ.

ಗ್ರೀಸಿನಲ್ಲಿ ಬಹಳ ಕಾಲದ ವರೆಗೆ ಪ್ರಧಾನ ಮಂತ್ರಿಗಳಾಗಿದ್ದ ಪ್ರಜಾಪಕ್ಷದ (ರಿಪಬ್ಲಿಕನ್ ಪಕ್ಷ) ಮುಂದಾಳುಗಳಾಗಿದ್ದ ಮತ್ತು ಇತ್ತೀಚೆಗೆ ಸಂಭವಿಸಿದ ಗ್ರೀಕ್ ಸೇನಾಪಾಳೆಯದ ದಂಗೆಯಲ್ಲಿ ಮುಖ್ಯಸ್ಥರೆಂದು ಗಣಿಸಲ್ಪಟ್ಟ ಮಾಜಿ ಪ್ರಧಾನ ಮಂತ್ರಿ ವೆನಿಜೆಲಾಸರು ತಾ. 18 ರಲ್ಲಿ ಇನ್‌ಫ್ಲುಯೆಂಜಾದಿಂದ ಕಾಲವಾದರು.

—೦೦೦—

ಜವಾಹಿರ್‌ಲಾಲರಿಗೆ ಚಕ್ರವರ್ತಿಗಳ ಆಮಂತ್ರಣ.

ಶ್ರೀ. ಜವಾಹಿರಲಾಲರು ಲಂಡನಿನಲ್ಲಿದ್ದಾಗ ಈಗಿನ ಚಕ್ರವರ್ತಿಗಳಿಂದ ಎಡ್ವರ್ಡ್ ಪ್ರಭುಗಳು ಯುವರಾಜರಾಗಿ ಅವರ ಸೆಕ್ರೆಟರಿಯವರು ಜವಾಹಿರಲಾಲರಿಗೆ ಚಕ್ರವರ್ತಿಗಳ ಭೇಟಿ ಮಾಡಬೇಕೆಂದು ಆಮಂತ್ರಣ ಕಳುಹಿಸಿದ್ದರೆಂದೂ, ಕಾಂಗ್ರೆಸು ಮಹಾ ಸಂಸ್ಥೆಯು ತನ್ನನ್ನು ಮುಂದಿನ ಅಧ್ಯಕ್ಷನನ್ನಾಗಿ ಆರಿಸಿರುವದರಿಂದ ಆ ಸಂಸ್ಥೆಯ ಅನುಮತಿ ಇಲ್ಲದೆ ತಾನು ಆಮಂತ್ರಣವನ್ನು ಸ್ವೀಕರಿಸಲಾಗುವುದಿಲ್ಲವೆಂದು ಪಂಡಿತರು ಉತ್ತರಿಸಿದರೆಂದೂ 'ರಿಯಾಸತ್' ಪತ್ರಿಕೆಯ ಲಂಡನ್ ಬಾತ್ಮಿದಾರರು ಬರೆದಿರುವ ಒಂದು ಬಾತ್ಮಿಯು 'ಇಂಡಿಯನ್ ಎಕ್ಸ್‌ಪ್ರೆಸ್' ಪತ್ರಿಕೆಯಲ್ಲಿ ಪ್ರಕಟವಾಗಿದೆ.

—೦೦೦—

ಯಾರು ಬೇಕಾದರೂ ಆಯುಧಗಳನ್ನು ಇಟ್ಟುಕೊಳ್ಳಬಹುದು.

ಅಮೇರಿಕದ ಯುನೈಟೆಡ್ ಸ್ಟೇಟ್‌ಸನಲ್ಲಿ ಯಾವ ಆಯುಧಕ್ಕೂ ಲೈಸೆನ್ಸು ಬೇಕಾಗಿಲ್ಲ. ಯಾರು ಬೇಕಾದರೂ ಒಂದು ಗುಂಡಿನ ಪಿಸ್ತೂಲಿನಿಂದ ಹಿಡಿದು ಮೆಷಿನ್ ಗನ್ನುಗಳ ವರೆಗೆ ಕೊಳ್ಳಬಹುದು.

ಯುನೈಟೆಡ್ ಸ್ಟೇಟ್ಸಿನ ಯುದ್ಧ ಸಾಮಗ್ರಿಗಳ ತಯಾರಕರು ವಿಚಾರಣೆಯನ್ನು ನಡೆಸುತ್ತಿದ್ದಾಗ ಈ ವಿಷಯ ಗೊತ್ತಾಯಿತು. ಜೋಸೆಫ್ ಪ್ಲಾಲೀ ಎಂಬುವನು ಇನ್ನೂ ತನ್ನ ಉಪಯೋಗಕ್ಕಾಗಿ ಇಟ್ಟುಕೊಂಡಿದ್ದಾನೆ. ಪ್ರಸ್ತುತ ವರ್ಷ ... ಮೆಷೀನ್ ಗನ್ನುಗಳನ್ನು ಮಾರಾಟ ಕೊಂಡುಕೊಂಡು ಅವನ್ನು ಸರಿಪಡಿಸಿ ದೇಶ ... ಗಳಿಗೆ ಮಾರುತ್ತಾನಂತೆ. ಆತನು ಹಳೆಯ ಗನ್ನುಗಳನ್ನು 6 ಪೆನ್ನಿಗಳಿಗೊಂದರಂತೆ 380 ಮೆಷೀನ್ ಗನ್ನುಗಳನ್ನು ಆತನು ಕೊಂಡು 1 ಪೌಂಡು 11 ಶಿಲ್ಲಿಂಗಿಗೊಂದರಂತೆ ಮಾರಿದನಂತೆ.

—೦೦೦—

ಹರಿಜನರಿಗೆ ಶಿವಮಂತ್ರೋಪದೇಶ.

ಪಂ. ಮದನಮೋಹನ ಮಾಲವೀಯರು ನಾಸಿಕದಲ್ಲಿ ಅನೇಕ ಹರಿಜನರಿಗೆ ಶಿವಮಂತ್ರ ದೀಕ್ಷೆಯನ್ನು ಕೊಟ್ಟರು. ಪಂಡಿತರ ಭಾಷಣಗಳನ್ನು ಕೇಳ ವುದಕ್ಕೆ ಅನೇಕ ಸಾವಿರ ಹರಿಜನರು ಬಂದಿದ್ದರು. ಅವರಲ್ಲಿ ಡಾ. ಅಂಬೇಡ್ಕರರ ಅನುಯಾಯಿಗಳೂ ಇದ್ದರು.

'ನನ್ನಿಂದ ಸಾಧ್ಯವಾದದ್ದು ಪ್ರಯತ್ನ ಮಾಡಿದ್ದೇನೆ. ಆದರೆ ನನಗೆ ತೃಪ್ತಿಯಾಗುವಷ್ಟು ಫಲವು ದೊರೆಯಲಿಲ್ಲ. ಆದರೂ ನಾನು ನಿರಾಶೆ ಹೊಂದಲಿಲ್ಲ. ಇನ್ನು ಆಗಾಗ್ಗೆ ಇಲ್ಲಿಗೆ ಬಂದು ಹರಿಜನರು ಕೇಳಿದ ಎಲ್ಲವನ್ನು ಎಂದರೆ ಶ್ರೀ ರಾಮಮಂದಿರದಲ್ಲಿ ಪ್ರವೇಶ, ಧರ್ಮಶಾಲೆಯಲ್ಲಿ ಭಾಗವಹಿಸುವುದು, ಬಾವಿಯಿಂದ ನೀರು — ಈ ಹಕ್ಕುಗಳನ್ನು ಅವರಿಗೆ ಕೊಡಿಸುವ ಯತ್ನ ಮಾಡುತ್ತೇನೆ. ಅದರಲ್ಲಿ ಸಂಪೂರ್ಣ ಜಯ ಸಿಗುವ ವರೆಗೂ ಆ ಪ್ರಯತ್ನ ಬಿಡುವುದಿಲ್ಲ' ಎಂದು ತಮ್ಮ ಭಾಷಣದಲ್ಲಿ ಹೇಳಿದರು.

ಹಿಂದೀ ನಾಗರೀಕತೆಯ ಅಭ್ಯಾಸ ಬೃತಿ.

ಪೋಲೆಂಡಿನ ಆ ವಿಶ್ವವಿದ್ಯಾಲಯದ ಪ್ರೊಫೆಸರರಾದ ಡಾ. ಸ್ಟೀಫನ್ ಸ್ಟೇಸಿಯಾಕ್ ಶಾಂತಿನಿಕೇತನವನ್ನು ಸಂದರ್ಶಿಸಿದರು. ಈ ಸಂದರ್ಭದಲ್ಲಿ ಪೋಲೆಂಡಿನ ಆರು ವಿಶ್ವವಿದ್ಯಾನಿಲಯಗಳಲ್ಲಿಯೂ ಸಂಸ್ಕೃತವು ಕಲಿಸಲ್ಪಡುವುದೆಂದೂ, ಹಿಂದೀ ನಾಗರಿಕತೆಯ ವಿಷಯ ಉಚ್ಚಶಿಕ್ಷಣಕ್ಕೆ ಮೂರು ವಿಶ್ವವಿದ್ಯಾಲಯಗಳು ಹೆಚ್ಚಿನ ಗಮನಕೊಡುವುದಾಗಿಯೂ ಪೌರ್ವಾತ್ಯ ವಿಷಯಗಳ ಬಗ್ಗೆ ಒಂದು ಪತ್ರಿಕೆಯು ಇರುವುದಾಗಿಯೂ ತಿಳಿಸಿದರು.

—೦೦೦—

ಸುಭಾಸರು ಹಿಂದೂಸ್ಥಾನಕ್ಕೆ ಬಂದರೆ ಸೆರೆ ಹಿಡಿಯಲ್ಪಡುವರು.

ಸುಭಾಷ್ ಚಂದ್ರಬೋಸರು ಡೈಲಿ ಹೆರಾಲ್ಡ್ ಪತ್ರಿಕೆಗೆ ಪತ್ರ ಬರೆದು ವಿಯೆನ್ನಾದಲ್ಲಿರುವ ಬ್ರಿಟಿಷ್ ರಾಯಭಾರಿಯಿಂದ ತಮಗೆ ಬಂದ ಪತ್ರವನ್ನು ಅದರಲ್ಲಿ ಪ್ರಸಿದ್ಧ ಮಾಡಿದ್ದಾರೆ. 'ಸುಭಾಷರು ಮಾರ್ಚಿನಲ್ಲಿ ಹಿಂದೂಸ್ಥಾನಕ್ಕೆ ಹಿಂತಿರುಗುವದಾಗಿ ಪತ್ರಿಕೆಗಳಲ್ಲಿ ಪ್ರಕಟವಾದ್ದರಿಂದ ಅವರು ಹಿಂದೂಸ್ಥಾನದಲ್ಲಿ ಕಾಲಿಟ್ಟರೆ ಹಿಂದೂಸ್ಥಾನ ಸರಕಾರದವರು ಅವರನ್ನು ದಸ್ತಗಿರಿ ಮಾಡುವರೆಂದು ಎಚ್ಚರಿಕೆ ಕೊಡಬೇಕೆಂದು ಸರಕಾರದ ಸೆಕ್ರೆಟರಿಯವರು ತಮಗೆ ತಿಳಿಸಿರುವದಾಗಿ ವಿಯೆನ್ನಾದಲ್ಲಿನ ಬ್ರಿಟಿಷ್ ರಾಯಭಾರಿಗಳು ಆ ಪತ್ರದಲ್ಲಿ ಬರೆದಿದ್ದಾರೆ.

—೦೦೦—

ಅಮೇರಿಕಾದಲ್ಲಿ ಮಹಾ ಜಲಪ್ರಳಯ.

ಅನೇಕ ಶತಮಾನಗಳಿಂದ ನಡೆಯದಷ್ಟು ಹಾವಳಿ ಪೂರ್ವ ಅಮೇರಿಕ ಸಂಸ್ಥಾನಗಳಲ್ಲಿ ಜಲಪ್ರಳಯದಿಂದ ಆಗಿದೆ. ಓಹಿಯೋ, ಪೊಟೊಮಾಕ್, ಅಲ್‌ಘನಿ ನದಿಗಳು ಏಕಕಾಲದಲ್ಲಿ ಪ್ರವಾಹ ಬಂದು ಅನೇಕ ಊರುಗಳನ್ನು ಮುಳುಗಿಸಿವೆ. ಕೋಟ್ಯಂತರ ದ್ರವ್ಯ ನಷ್ಟವೂ ಅನೇಕ ಪ್ರಾಣ ನಷ್ಟವೂ ಆಗಿರುವಂತೆ ವರ್ತಮಾನ ಬಂದಿದೆ.

ಓಹಿಯೋ ನದಿಯಲ್ಲಿ ಯಾವಾಗಲೂ ಇಷ್ಟು ಅಗಾಧವಾಗಿ ಪ್ರವಾಹ ಬಂದಿಲ್ಲವಂತೆ. ಸಾವಿರಾರು ಚದರ ಮೈಲುಗಳ ಕ್ಷೇತ್ರವು ಮಹಾ ಸಮುದ್ರವಾಗಿ ಪೆನ್ಸಿಲ್ವೇನಿಯಾದ ಜಾನ್ ಸ್ಟೌನ್ ಹಿಂಗ್ ಅಣೆ ಕಟ್ಟೆಯು ಕಿತ್ತುಹೋಗುವಷ್ಟು ಭಯಂಕರ ಸ್ಥಿತಿಯಲ್ಲಿದೆ. ಇತರ ಸಣ್ಣ ಪುಟ್ಟ ನದಿಗಳೂ ಪ್ರವಾಹದಿಂದ ತುಂಬಿವೆ. ಆ ನದಿಗಳ ಬಯಲಿನಲ್ಲಿ ಅನೇಕ ಊರುಗಳು ಕೊಚ್ಚಿಕೊಂಡು ಹೋಗಿವೆ. ಸಾವಿರಾರು ಮಂದಿ ನಿಲ್ಲಲು ನೆಲೆಯಿಲ್ಲದೆ ನರಳುತ್ತಿದ್ದಾರೆ.

ಅಲ್‌ಘನಿ ನದಿಯ ಪ್ರವಾಹವು 27 ಅಡಿಗಳಷ್ಟು ಏರಿದೆ. ಊರು ಊರುಗಳ ಸಂಬಂಧವನ್ನೇ ಹಾಳು ಮಾಡಿದೆ. ಮೋಗನ್‌ಟೌಂಡಿನಲ್ಲಿ 5 ಅಡಿ ನೀರು ನಿಂತಿದೆಯಂತೆ. ಅಲ್ಲದೆ ಗಂಟೆಗೆ 3 ಅಡಿಗಳಂತೆ ಏರುತ್ತಿದೆ. ದೀಪ ಸೌಕರ್ಯಗಳೂ ವರ್ತಮಾನ ಸೌಕರ್ಯಗಳೂ ನಾಶವಾಗಿವೆ.

ಇಥಾಕಾ ಎಂಬ ಊರು ದ್ವೀಪವಾಗಿದೆಯೆಂದು ಇತ್ತೀಚಿನ ವಾರ್ತೆಯ ಸುದ್ದಿ. ಟೆಲಿಫೋನ್, ತಂತಿ ವರ್ತಮಾನಗಳು ನಿರ್ಮೂಲವಾಗಿವೆ. ನ್ಯೂಯಾರ್ಕ್ ಫರ್ಗ್ಯುಸನ ಅಣೆ ಕಟ್ಟೆಯು ಒಡೆದುಹೋಗಿ ಅನಾಹುತ ಅಪಾರ ಹಾನಿಯಾಗಿದೆಯಂತೆ.

ನದಿಯ ದಡದಲ್ಲಿರುವ ಪಿಟ್ಸ್‌ಬರ್ಗಿನ ಉಕ್ಕು ತಯಾರಿಸುವ ಕಾರ್ಖಾನೆಯು ವಿಪರೀತವಾಗಿ ನಷ್ಟಗೊಂಡಿದೆ. ಅಲ್ಲದೆ ರೆನ್ಸೆಲೆರ್‌ನ ಪ್ರಸಿದ್ಧ ಎ. ಟಿ. ಕಾರ್ಖಾನೆಗಳೂ ನಾಶವಾಗಿವೆ.

ಇನ್ನೂ ಹಾವಳಿಯಾಗುತ್ತಿರುವುದು. ಜಾನ್‌ಸ್ಟೌನ್ ಸುತ್ತ ಮುತ್ತ ಊರುಗಳು ನೀರೊಳಗಿವೆ. ನೀರು ಆ ಊರುಗಳ ಮೇಲೆ ಸುಳಿಸುತ್ತ ಕಡೆಯ ಘಂಟೆಗೆ 15 ಮೈಲುಗಳ ವೇಗದಲ್ಲಿ ಹರಿಯುತ್ತಿದೆಯಂತೆ. ಆ ಸ್ಥಳಕ್ಕೆ ಸಿಕ್ಕ ಸರ್ವವೂ ನಾಶವಾಗುತ್ತಿವೆ.

ರೆಡ್‌ಕ್ರಾಸ್ ಸಂಘದ ಸಮಸ್ತ ಸಿಬ್ಬಂದಿಯೂ ಪ್ರವಾಹ ಪೀಡಿತರಿಗೆ ಸಹಾಯ ಕೊಡಲು ಪ್ರಯತ್ನ ಮಾಡುತ್ತಿದ್ದಾರೆ.

Reg. No. M. 1550 27—3—1936

KODAGU

IF NOT delivered please return to "KODAGU" OFFICE, MERCARA.

ಕೊಡಗು

ಅಚ್ಚುಮೆಚ್ಚಿನ ಮುದ್ರಣ ಕೆಲಸಕ್ಕೆ "ಕೊಡಗು" ಪ್ರೆಸ್ಸು. ಮಡಿಕೇರಿ.
—
ಹೆಚ್ಚಿನ ವಿಷಯಕ್ಕೆ ಕಛೇರಿ ವಿಚಾರಿಸಿ.

ಪ್ರತಿ ಶುಕ್ರವಾರ ಪ್ರಕಟಿಸಲ್ಪಡುವದು.

ವಾರ್ಷಿಕ ಚಂದಾ ರೂ. ೩—೮—೦. ಸಂಪಾದಕ—ಪಂದ್ಯಂಡ ಐ. ಬೆಳ್ಯಪ್ಪ.

ಸಂಪುಟ ೧೫] ಮಡಿಕೇರಿ, ತಾ. ೨೭—೩—೧೯೩೬ [ಸಂಚಿಕೆ ೪೦

Telephone: 3145

By Appointment To H. E. The Governor of Madras.

Telegrams: 'PRECIOUS.'



Brooch

Ring. Necklace. Ring.

V. SUBRAMANIA IYER.

Jeweller, & Diamond Merchant,

52—18 2 & 3 Kuppumuthu Street Tiruvateswaranpet. POST BOX 423 TRIPLICANE. P. O., MADRAS.

Catalogue & special designs with quotations (free) on enquiry

BANKING FACILITIES OF EVERY DESCRIPTION.

Head office:—UDIPI

BRANCHES:—
1. Madras.
2. Coondapoor.
3. Car Street, Mangalore
4. Bunder, Mangalore.
5. Shimoga.
6. Udipi
7. Mercara.
8. Virarajendrapet

Security.

The financial strength and integrity of this Bank is shown by the growth of the RESERVES from a modest sum of Rs. 83000 in 1927 to its present position with Rs. 3.64.644.

BANKERS AT—
1. Bombay.
2. Calcutta.
3. Karachi.
4. Bangalore.
5. Mysore.
6. Calicut.
7. Cannanore.
8. Cochin, and other important places.

To those thinking of investments the following figures should strongly appeal.

Capital: Authorised. issued and subscribed—Rs. 3.50,000.
Paid up Rs. 2.80.750.
Deposits—Rs. 27,99.323. Working Capital—Rs. 35.66.707.

Fixed Deposits now received upto 5%.

The Canara Banking Corporation Udipi Limited.

52—19 Estd. 1906.

ಜನರಲ್

ಅಷ್ಯೂರೆನ್ಸ್ ಸೊಸೈಟಿ, ಲಿಮಿಟೆಡ್.

(ಸ್ಥಾಪಿತವಾದದ್ದು 1907 ರಲ್ಲಿ)

ಜೀವವಿಮೆಯಲ್ಲಿನ ಅತ್ಯುತ್ತಮ ಸೌಲಭ್ಯಗಳನ್ನೆಲ್ಲ ಕೊಡುತ್ತದೆ.

ಬೋನಸ್ಸು ಅತೀ ಹೆಚ್ಚು.

ಜೀವಾವಧಿ ಪಾಲಿಸಿಗಳ ಮೇಲೆ ವರ್ಷಕ್ಕೆ ರೂ. 25%o
ಎಂಡೋವ್ಮೆಂಟ್ ಪಾಲಿಸಿಗಳ ಮೇಲೆ ವರ್ಷಕ್ಕೆ ,, 20%o
ಪಾಲಿಸಿಯ ಶರತ್ತುಗಳು ಅತೀ ಸುಲಭ
ಎಷ್ಯೂರೆನ್ಸ್ ಯೋಜನೆಗಳು ಎಲ್ಲಾಗೂ ಹಿತಕರವಾಗಿದೆ.
ಏಜೆನ್ಸಿ ನಿಯಮಗಳು ಅತೀ ಲಾಭದಾಯಕವಿದ್ದು ಪಂಶಪಾರಂಪರ್ಯ ಕಮಿಶನ್ ದೊರೆಯುವಂತಿದೆ.
ಹೆಚ್ಚಿನ ವಿವರಗಳಿಗೆ ಕಛೇರೀ ಬರೆಯಿರಿ.

ಸಿ. ವಿ. ಭಾರ್ಗವ, ಎಫ್. ಎಸ್. ಎಸ್. (ಲಂಡನ್).
ಜನರಲ್ ಮೇನೇಜರ್, ದಿ ಜನರಲ್ ಅಷ್ಯೂರೆನ್ಸ್ ಸೊಸೈಟಿ ಲಿಮಿಟೆಡ್, ಅಜ್ಮೀರ್. ಅಥವಾ:—
ಎ. ಎಸ್ ಎಸ್ ಅಯ್ಯಂಗಾರ್,
ಸುಪರಿಂಟೆಂಡೆಂಟ್, ಜನರಲ್ ಅಷ್ಯೂರೆನ್ಸ್ ಬಿಲ್ಡಿಂಗ್, ಚಾಮರಾಜಪೇಟೆ, 3ನೇ ರೋಡ

52—12

ಪ್ರಕಟಣೆ.

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್,
ಲಿಮಿಟೆಡ್, ಕೋ-ಆಪರೇಟಿವ್ ಸೊಸೈಟೀಸ್
ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ.

(ಸ್ಥಾಪಿತವಾದದ್ದು 1922ರಲ್ಲು)

		ರೂ.
ಶೇರ್ ಬಂಡವಾಳ	—	80,000— 0—0
ವಸೂಲಾದ ಶೇರ್ ಮೊಬಲಗು	—	37,180— 0—0
ಜಮೆಯಾದ ಠೇವಣಾತಿ	—	23,9035—8—10
ವಸೂಲಾದ ಕ್ಷೇಮನಿಧಿ	—	1,03851— 4—0

ಈ ಬ್ಯಾಂಕಿನಿಂದ ಕೊಡಗು ದೇಶದ ಸಹಕಾರಿ ಸಂಘಗಳಿಗೆ ಸಾಲ ಕೊಡಲಾಗುವುದು ... ಸಾಲ ಕೊಡಲಾಗುತ್ತದೆ.

ಒಂದು ವರ್ಷ ಮಾಯಿದೆ ಅಥವ ಹೆಚ್ಚಿನ ಮಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ ರೂ. 4-8-0ರ ದರದಲ್ಲಿಯೂ ಒಂದು ವರ್ಷದ ಠೇವಣಾತಿಗಳಿಗೆ ಶೇಕಡ ಸಾಲಿಯಾನ 4ರ ದರದಲ್ಲಿಯೂ ಬಡ್ಡಿ ಕೊಡಲಾಗುತ್ತೆ.

ಪಬ್ಲಿಕ್ಕಿನವರು ಕೊಡಗು ಸೆಂಟ್ರಲ್ ಕೋ-ಆಪರೇಟಿವ್ ... ಸಹಾಯಕ್ಕೆ ... ಮಾಡುತ್ತಾರೆ.

ಪ್ರೆಸಿಡೆಂಟರು,	ಸೆಕ್ರೆಟರಿ
ಪಾಲ್ಯಂಡ ಐ. ಬೆಳ್ಯಪ್ಪನವರು.	ರಾ. ಸಾ. ಪಾಂಡಂಡ ಚಂಗಪ್ಪನವರು,

ಟ್ರೆಝರರ್
ಮುಕ್ಕಾಟಿರ ... ... ನವರು.

ತಾರೀಖು 1—2 —1936.

ಭಾರತದ ಮುಂದಿನ ಜನಾಂಗದ ಆರೋಗ್ಯ ಮತ್ತು ಕ್ಷೇಮ ವರ್ಧನೆಯು ಇಂದಿನ ಅನೇಕ ರಾಜಕೀಯ ಮತ್ತು ಸಾಮಾಜಿಕ ಮುಂದಾಳುಗಳ ದೃಷ್ಟಿಯಲ್ಲಿರುವ ಒಂದು ದೊಡ್ಡ ಸಮಸ್ಯೆಯಾಗಿರುತ್ತದೆ. ತಮ್ಮ ಮಕ್ಕಳ ದೇಹವು ಪುಷ್ಟಿಯಾಗಿಯೂ ಸುದೃಢವಾಗಿಯೂ ಇರಲಿಕ್ಕೆ ಬೇಕಾದ ಒಂದು ಅಪೂರ್ವವಾದ ಸಂಜೀವಿನಿಯನ್ನು ಎಲ್ಲರೂ ತಿಳಿದವರಾಗಿದ್ದರೆ ಈ ವಿಚಾರವು ಇಷ್ಟು ಕಠಿಣವಾದ್ದಾಗಿರುತ್ತಿದ್ದಿಲ್ಲ. ಈ ಸಂಜೀವಿನಿಯಂತಿರುವ ಔಷಧವನ್ನು ಹೆಚ್ಚು ಸಂಖ್ಯೆಯಿಂದ ಅನೇಕರು ಭಾರತದ ಉದ್ದಗಲಕ್ಕೂ ಕಳೆದ 50 ವರ್ಷಗಳಿಂದ ಉಪಯೋಗಿಸುತ್ತಿರುವರು. ಮಗುವು ಹೆಚ್ಚು ಕೃಶವಾಗಿ, ಬಾಲಕತನದಿಂದ ಕೂಡಿದುದನ್ನು ಸಹ ಬೇಗ ಸರಿಪಡಿಸಲಿಕ್ಕಾಗಿ, ಅಗಿಂದಾಗ್ಗೆ ಶೀತ, ಕೆಮ್ಮು ಮೊದಲಾದ ರೋಗಗಳಿಗೀಡಾಗಿರುವಾದರೆ ಒಡನೆ ಪ್ರಸಿದ್ಧಿ ಹೊಂದಿರುವ

ಡೋಂಗರೆ ಬಾಲಾಮೃತವನ್ನು

ಕೊಡಬೇಕು. ಡೋಂಗರೆ ಬಾಲಾಮೃತವು ಒಂದು ಟಾನಿಕ್. ಎಲ್ಲ ಕಡೆಗಳಲ್ಲೂ ದೊರೆಯುವುದು.

ಪ್ರೊಪ್ರೈಯಟರ್ಸ್—
ಕೆ. ಟಿ. ಡೋಂಗರೆ ಕಂಪೆನಿ,
(52-3) ಗಿರಗಾಂವ್, ಬೊಂಬಾಯಿ.

EMPIRE OF INDIA LIFE ASSURANCE CO., LTD.

ESTD. 1897.

TEN YEARS' PROGRESS.

	1925 Rs.	1935 Rs.
Income	45,50,127	73,28,467
New Assurances	78,07,000	1,47,57,880
Total Assets	2,46,08,120	4,50,03,372
Assurances in force	6,95,93,793	11,56,12,828

Form of proposal and other particulars will be sent on Application.

Head office:—		Branch Office:—
Empire of India Life Building, BOMBAY.	52—17	152/3—Commercial Street, BANGALORE.

ಪಂಡಿತ ಜವಾಹೀರಲಾಲ್ ನೆಹರೂ ಬಂದಾಗ್ಗೆ ಹುಬ್ಬಳ್ಳಿ ಪ್ರದರ್ಶನದಲ್ಲಿ ಸುವರ್ಣ ಪದಕವನ್ನು ಪಡೆದ,

ಒಂದೇ ಸಮನಾಗಿ ಮೂವತ್ತೈದು ವರ್ಷದ ಅನುಭವದಿಂದ ಹಿಂದುಸ್ಥಾನದ ಸಾವಿರಾರು ಜನರಿಂದ ಪ್ರಶಂಸೆಗೊಳ್ಳಲ್ಪಟ್ಟ ಆಯುರ್ವೇದೋಕ್ತ ತಾಜಾ ಮತ್ತು ಪೌಷ್ಟಿಕ ವನಸ್ಪತಿಗಳಿಂದ ತಯಾರಿಸಿರುವ ಮತ್ತು ಇದರ ಗುಣಕ್ಕಾಗಿ ಅನೇಕ ಸರ್ಟಿಫಿಕೇಟುಗಳು ಮತ್ತು ಭಂಗಾರದ ಪದಕಗಳನ್ನು ಪಡೆದು ಪರದೇಶದಲ್ಲಿ ಧಾರಾಳವಾಗಿ ಖರ್ಚಾಗುವ

ಶಕ್ತಿವರ್ಧಕ ಉತ್ತಮ ತರಗತಿಯ ಟಾನಿಕ್

ದ್ರಾಕ್ಷಾಮೃತ

ಈ ಕ ವನಸ್ಪತಿ ರಸಾಕರ್ಷಗಳಿಂದ ಶಾಸ್ತ್ರೋಕ್ತವಾಗಿ ಸ್ವದೇಶೀ ಯಂತ್ರೋಪಕರಣಗಳಿಂದ ತಯಾರಿಸಿದ ಮಧುರಾಮೃತ. ಇದರ ಸೇವನೆಯಿಂದ ಉಷ್ಣ (ಗರಮಿ), ಧಾತುಸ್ರಾವ, ಸ್ವಪ್ನಾವಸ್ಥೆ, ಕೈಕಾಲು, ಕಣ್ಣುಗಳಿಗೆ ಉರಿ, ಮಲಬದ್ಧತೆ ಮುಂತಾದವು ಗುಣವಾಗುವದಲ್ಲದೆ ಜೀರ್ಣಶಕ್ತಿಯು ಹೆಚ್ಚಿ ದೇಹದಾರ್ಢ್ಯವುಂಟಾಗುವುದು. ಇದರಿಂದ ನಪುಂಸಕತ್ವವಿದ್ದಲ್ಲಿ ಅದು ಹೋಗಿ ವೀರ್ಯ ವೃದ್ಧಿಯಾಗುವದು. ಹೆಂಗಸರಿಗೂ ಗಂಡಸರಿಗೂ ಇದು ಗುಣಕಾರಿ ಇದೆ. ಮುಟ್ಟಾಗದಿದ್ದರೆ ಮತ್ತು ಉಷ್ಣ (ಗರಮಿ) ರೋಗಗಳಿದ್ದರೆ ಅವೆಲ್ಲವೂ ಗುಣವಾಗಿ ಹೆಂಗಸರ ಸಂತತಿ ವೃದ್ಧಿಯಾಗುವದು. ಈ ಔಷಧದ 3 ಬಾಟ್ಲಿಗಳ ಸೇವನೆಯಿಂದ ಪೂರ್ಣ ಗುಣ ಆಗುತ್ತದೆ. 1 ಬಾಟ್ಲಿಯನ್ನು ಸೇವಿಸುವದರಲ್ಲೇ ಇದರ ಗುಣ ಕಂಡುಬರುವದು. ಪ್ರಮಾಣ:—ಬೆಳಗಿನಲ್ಲಿ ಒಂದು ತೊಲೆ ಮತ್ತು ಸಂಜೆಗೆ ಒಂದು ತೊಲೆ ತಕ್ಕೊಳ್ಳಬೇಕು.

ಬೆಲೆ—1 ಬಾಟ್ಲಿಗೆ ರೂ. 1—4 0, 3 ಬಾಟ್ಲಿಗೆ ರೂ. 3—8—0, 1 ಡಜನ್ ಬಾಟ್ಲಿಗಳಿಗೆ ರೂ. 12—0—0;

ಮ್ಯಾನೇಜರ್:—ದ್ರಾಕ್ಷಾಮೃತ ಡಿಪೊ ಪೋಸ್ಟ್ ನಿಪ್ಪಾಣಿ ಜಿಲ್ಲಾ (ಬೆಳಗಾಮ್.)

52—28 ಕೊಡಗಿನ ಏಜಂಟರು—ನಾವೆಲ್ಲಿ ಸ್ಟೋರ್ಸ್, ಮಡಿಕೇರಿ

ಟಿ ಕೃಷ್ಣಯ್ಯ ಶೆಟ್ಟಿ & ಸನ್ಸ್, ಸೋಮವಾರಪೇಟೆ.

ಭಕ್ತ ಬ್ರದರ್ಸ್, ಶಾಸರಗೋಡು.] ಎ. ಎನ್ ಹ.ಚ್ಚಯ್ಯ, ಮರ್ಚೆಂಟ್, ಗೋಣಿಕೊಪ್ಪಲು.

ಓರಿಯಂಟಲ್ ಗವರ್ನಮೆಂಟ್ ಸೆಕ್ಯೂರಿಟಿ ಜೀವ ವಿಮೆ ಕಂಪೆನಿ ಲಿಮಿಟೆಡ್.

ಗಟಟಕಟ್ಟ ... ಸ್ಥಾಪಿತವಾದದ್ದು) (ಹೆಡ್ ಆಫೀಸು—ಬೊಂಬಾಯಿ.

1934ನೇ ಇಸವಿಯ ಕಂಪೆನಿಯ ಕೆಲಸದ ಫಲಿತಾಂಶ—

ಹೊಸ ಪಾಲಿಸಿಗಳ ಪ್ರಿಮಿಯಂ	....	....	ರೂ.	7,62,42,761
ವಾರ್ಷಿಕ ಉತ್ಪತ್ತಿ	....	....	ರೂ.	3,14,01,970
ಚಾಲ್ತಿಯಲ್ಲಿರುವ ಒಟ್ಟು ಪಾಲಿಸಿಗಳು		....	ರೂ.	54,20,38,578
ಕ್ಲೇಯಿಮ್ಸ್‌ಗಳಿಗೆ ಕೊಟ್ಟ ಒಟ್ಟು ಹಣ		....	ರೂ.	16,29,88,814
ಫಂಡ್ಸ್ ಹೆಚ್ಚಿದ್ದು	....	....	ರೂ.	15,53,48,843

ಈ ಮೇಲಿನ ಫಲಿತಾಂಶಗಳು 'ಓರಿಯಂಟಲ್' ಕಂಪೆನಿಯ ಸುಸಂಘಟನೆಯನ್ನೂ ಮತ್ತು ಪ್ರಸಿದ್ಧಿಯನ್ನೂ ವಿಶದಗೊಳಿಸುತ್ತವೆ.

ಈ ಪ್ರಸಿದ್ಧಿಗೊಂಡಿರುವ ಮತ್ತು ಅಭಿವೃದ್ಧಿಯಲ್ಲಿರುವ ಇಂಡಿಯನ್ ಜೀವ ವಿಮಾ ಕಂಪೆನಿಯಲ್ಲಿ ವಿಮೆ ಇಳಿಸಲು ಸಾವಕಾಶ ಮಾಡದೇ.

ಹೆಚ್ಚಿನ ಮಾಹಿತಿಗೆ ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳತಕ್ಕದ್ದು:—

ಮೇನೇಜರ್, ಓರಿಯಂಟಲ್ ಬಿಲ್ಡಿಂಗ್ಸ್, ಬೊಂಬಾಯಿ.

ಅಥವಾ ಕಂಪೆನಿಯ ಈ ಕೆಳಗಿನ ಯಾವ ಆಫೀಸಿಗಾದರೂ ಬರೆಯಬಹುದು.

ಆಗ್ರ	ಕಲ್ಲಿಕೋಟೆ	ಕರಾಚಿ	ಪೆಶಾವರ	ರಂಗೂನ
ಅಹ್ಮದಾಬಾದು	ಕಲ್ಕತ್ತಾ	ಕೌಲಾಲಂಪೂರು	ನಾಗಪೂರ	ರಾವಲ್‌ಪಿಂಡಿ
ಅಜ್ಮೀರ್	ಕೊಲಂಬೊ	ಲಾಹೋರ್	ಪಾಟ್ನ	ಸಿಂಗಪೂರ
ಅಲಹಾಬಾದು	ಢಕ್ಕಾ	ಲಕ್ನೌ	ಪೂನ	ಸುಕ್ಕೂರು
ಅಂಬಾಲಾ	ಡೆಲ್ಲಿ	ಮದ್ರಾಸು	ರಾಯಪೂರ	ತಿರುಚಿನಾಪಳ್ಳಿ
ಬಳ್ಳಾರಿ	ಗೌಹತಿ	ಮಂಡಲೆ	ರಾಜಕೋಟ	ತಿರುವೆಂದ್ರಮ್
ಬರೇಲಿ	ಜಲಗಾಂ	ಮಡಿಕೇರಿ	ರಾಂಚಿ	ವಿಶಾಖಪಟ್ಟ
ಬೆಂಗಳೂರು	ಗುಂಟೂರು	ಬಲ್‌ಗಾಂ	ಜಬ್ಬಲ್‌ಪೂರ	ಮಧುರೆ & ಮೈಸೂರು

ಓರಿಯಂಟಲ್ ಬಿಲ್ಡಿಂಗ್ಸ್, ಪಾರ್ಕ್ ರೋಡ್, ಬೆಂಗಳೂರು, } 52—10 ಎಂ. ವಿ. ಸುಬ್ರಹ್ಮಣ್ಯ ನಾಯುಡು, (ಬ್ರಾಂಚ್ ಸೆಕ್ರೆಟರಿ.)

Printed & published by P I Belliappa at "Kodagu" Press, Mercara for "Kodagu" Ltd.

ಡಾಕ್ಟರ್ ಬೋತ್ಯಸ್ ಎಬ್ರಹಾಮ್.
ದಂತ ವೈದ್ಯರು.
ಗಿಂಡಾಂಬಲಿ ಬಂಗ್ಲೆ.
(ಹೀರ್ಸ್ ಹೌಸ್ ಎದುರುಗಡೆ)

ಸಕಲ ಹಲ್ಲು ರೋಗಗಳನ್ನು ಶೀಘ್ರವಾಗಿ ಗುಣಪಡಿಸುವದಲ್ಲದೆ, ಕೃತಕ ಹಲ್ಲುಗಳನ್ನು ಮನ ಒಪ್ಪುವಂತೆ ಕಟ್ಟಿಕೊಡುವರು. [illegible] [52—22]

೬೦ ವರ್ಷಗಳಿಂದ ಅನುಭವವಿರುವ ಪ್ರಖ್ಯಾತಿ ಹೊಂದಿದ

ಕರ್ಕಿ ಕಂಪನಿ

ಜ್ವರದ ಗುಳಿಗೆಗಳು.

ಚಳಿಜ್ವರ, ಚಾತುರ್ಥಿ ಜ್ವರ, ದಿನಬಿಟ್ಟು ಬರುವ ಜ್ವರ, ಮಲೇರಿಯಾ ಜ್ವರ ಇತ್ಯಾದಿ [illegible] ರಾಮಬಾಣದಂತೆ ಇವೆ. [illegible]

[illegible]

(2—24) [illegible]

[illegible]

SHIROMANI NARAYANACHARYA
Chaukhamba Benares City

ತಾಪತ್ರಯಗಳು, ಪೂರ್ವಕರ್ಮ ... ಆರೋಗ್ಯದ ... ರುದ್ರಾಕ್ಷಿ ... [illegible]

ಕಜ್ಜ ಆದ್ಯ ಪ್ರಸಾದದ ಕಾಂತಿ 1ಕ್ಕೆ ಆಣೆ 1 ರಿಂದ ರೂ 25ರ ವರೆಗೆ, 118 ರುದ್ರಾಕ್ಷಿಗಳುಳ್ಳ ಸರ 1ಕ್ಕೆ ಆಣೆ 30ರಿಂದ ರೂ 25ರ ವರೆಗೆ. [illegible] ರುದ್ರಾಕ್ಷಿ 1ಕ್ಕೆ ರೂ 30ರಿಂದ ರೂ 50ರ ವರೆಗೆ ಮತ್ತು 2—4—5—6—7—8 ಮುಖಗಳ ಕಾಳು 1ಕ್ಕೆ ಆಣೆ 4 ರಿಂದ ರೂ 10, ಮತ್ತು 9—10—11 ಮುಖಗಳುಳ್ಳ ಕಾಳು 1ಕ್ಕೆ ರೂ 10ರಿಂದ 30ರ ವರೆಗೆ, 12—13—14 ಮುಖದ ಕಾಳು 1ಕ್ಕೆ ರೂ 40ರಿಂದ ... [illegible]

ಶಿರೋಮಣಿ ನಾರಾಯಣಾಚಾರ್ಯ,
52—19 ಚೌಖಂಬಾ ಬೆನಾರಸ್, (ಕಾಶೀ)

ಮಾರಾಟಕ್ಕೆ ಸಿದ್ಧವಾಗಿವೆ.

ಸರ್ಕಾರದ ಫಾರಂ ಮತ್ತು ದವಸ ಭಂಡಾರಗಳ ಪ್ರತಿ ... [illegible] ... ಪುಸ್ತಕಗಳು ... ಮತ್ತು ಚೆಕ್ ಪುಸ್ತಕಗಳೂ ನಮ್ಮಲ್ಲಿ ಕಡಿಮೆ ಕ್ರಯದಲ್ಲಿ ದೊರೆಯುತ್ತವೆ. [illegible]

ಮೇನೇಜರ್
"ಕೊಡಗು ಲಿಮಿಟೆಡ್",
ಮಡಿಕೇರಿ.

ಗುಂಡು ಹೊಡೆಯುವ ಕ್ರಮಗಳು.
ಉಪಯುಕ್ತ ಸೂಚನೆಗಳು.

ಶಿಕಾರಿಗರಿಗೆ:—
ನಮ್ಮ ಕೋವಿ ಮತ್ತು ಕೋವಿಗಳ ಪಿಸ್ತೂಲ್ (Our arms and ammunition GUIDE 3) ಇದರಲ್ಲಿ ಗುಂಡು ಹೊಡೆಯುವ ಸೂಕ್ಷ್ಮ ವಿಧಾನಗಳ ವಿಷಯ ಅತಿ ಉಪಯುಕ್ತ ಸೂಚನೆಗಳಿವೆ.



Goolamhusain Allibhoy & Sons, Ltd.,
26—24 210, Abdulrehman Street, BOMBAY 3.

ಸನ್ 1882ನೇ ಇಸವಿ ಇಂಡಿಯನ್ ಟ್ರಸ್ಟ್ ಆಕ್ಟಿಗೆ ಒಳಪಟ್ಟ ಸರಕಾರದ ಭರವಸೆಯುಳ್ಳ

ದಿ ಬೊಂಬೆ ಲೈಫ್ ಎಶ್ಯೂರೆನ್ಸ್ ಕಂಪೆನಿ ಲಿಮಿಟೆಡ್.

ಅಧ್ಯಕ್ಷರು—ಮಾನನೀಯ ಸರ್ ಚುನಿಲಾಲ್‌ಭಾಯಿ ಮಾಧವಲಾಲ್,
ಕೆ. ಟಿ. ಸಿ. ಐ. ಇ., ಜೆ. ಪಿ. ಯವರು.
ಕೆಂಚ್ವಿಕಾರ್ ಬ್ರದರ್ಸ್ ಮದ್ರಾಸು ಬ್ರಾಂಚ್ ಸೆಕ್ರೆಟರಿಗಳು.

ಕಳೆದ ಲಾಭ ಹಂಚುವಿಕೆಯಲ್ಲಿ ರೂ. 18ರಿಂದ 23ರ ವರೆಗೆ ಬೋನಸು ಡಿಕ್ಲೇರಾಗಿರುತ್ತೆ.

ಹಿಂದಿಯುಂದ [illegible] ... (ಜಾಯಿಂಟ್ ಲೈಫ್) ... [illegible]

ಜಿಲ್ಲಾ ಪ್ರತಿನಿಧಿ—ಬಿ. ಎಸ್. ಐಯ್ಯಪ್ಪ,
ಕೊಡಗು ಚೀಫ್ ಏಜೆಂಟು,
ಮಹದೇವಪೇಟೆ, ಮಡಿಕೇರಿ

[illegible]—14

ಎರಡು ಕೆಲಸಕ್ಕೊಂದೇ ಸಾಬೂನು
"ಮೈಸೂರು ಗಂಧದ ಸಾಬೂನು."

ಈ ಸಾಬೂನು ಸಾಬೂನಿನಂತೆ ಚರ್ಮವನ್ನು ಶುಭ್ರಗೊಳಿಸುವುದು ಮಾತ್ರವಲ್ಲ, ಸೌಂದರ್ಯವನ್ನೂ ಮಾಡುತ್ತದೆ. ಯಾರು ಯಾರು ತಮ್ಮ ಆರೋಗ್ಯದ ಕಡೆ ಗಮನವಿರುವರೋ ಯಾರು ಯಾರು ತಮ್ಮ

ಚರ್ಮವನ್ನು ಎಚ್ಚರಿಕೆಯಿಂದ ನೋಡುವರೋ ಅವರೆಲ್ಲರೂ ಉಪಯೋಗಿಸುವುದು ಮೈಸೂರು ಗಂಧದ ಸಾಬೂನೇ.

ಎಲ್ಲಾ ಅಂಗಡಿಗಳಲ್ಲಿ ಸಿಕ್ಕುತ್ತವೆ.
ಗವರ್ನಮೆಂಟ್ ಸೋಪ್ ಫ್ಯಾಕ್ಟರಿ.
52—55 ಬೆಂಗಳೂರು.

[illegible] 20–4–35, 21–10–35 ಮತ್ತು 25–10–35 ರ [illegible] 22–12–35 ರ [illegible] 12–11–35 ರಲ್ಲಿ [illegible] 5–12–35 ಕ್ಕೆ [illegible] 12–4–36 ರಲ್ಲಿ [illegible]

'ಮನನೊಂದವ.'

ಮಡಿಕೇರಿ ಪಟ್ಟಣದ ಆರೋಗ್ಯ ಸ್ಥಿತಿ.

[illegible] (1) [illegible] (2) [illegible] (3) [illegible] (4) [illegible] (5) [illegible]

[illegible]

[illegible] 1928ನೇ [illegible] 223 [illegible] 493 [illegible]

[illegible]

ಒಟ್ಟಾರೆ ಹೇಳುವುದಾದರೆ, [illegible] ವಿವೇಚನೆ ಇಲ್ಲದೆ [illegible]

[illegible]

ಸುಂಟಿಕೊಪ್ಪ ಕ್ಲಬ್ ದಿನ.

ಸುಂಟಿಕೊಪ್ಪ ಯೂನಿಯನ್ ಕ್ಲಬ್ ದಿನವು ಈ ತಾ 15 ರಲ್ಲಿ [illegible]

'ಈ ಕ್ಲಬ್ 1928 ನೇ [illegible] ಸ್ಥಾಪಿಸಲ್ಪಟ್ಟಿತು. [illegible] 8 [illegible] 31 [illegible]

[illegible]

'ಪಿಂಚು' [illegible]

[illegible]

ಎ. ಯಸ್. ಮಣಿಯಯ್ಯ.

ಸಮರ್ಪಕ ಆಡಳಿತದಿಂದ, ಕಡಿಮೆಯಾದ ವ್ಯಯದಿಂದ, ಕ್ರಮಕ್ರಮವಾದ ಅಭಿವೃದ್ಧಿಯಿಂದ ಭಾರತ ವಿಮಾರಂಗದಲ್ಲಿ ಯೋಗ್ಯಸ್ಥಾನವನ್ನೂ, ಉಚ್ಚಗೌರವವನ್ನೂ ಸಂಪಾದಿಸಿರುವ

ಮಂಗಳೂರಿನ

ದಿ ಪೊಪ್ಯುಲರ್ ಇನ್ಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್.

ಕನ್ನಡಿಗರ ಹೆಮ್ಮೆಯ, ನಿಮ್ಮ ಜೀವವಿಮೆಯು ಈ ಸಂಸ್ಥೆಯಲ್ಲಿ ತಪ್ಪದೆ ವಿಮೆಯನ್ನಿಳಿಸಿ.

ಮೊದಲನೇ 5 ವರ್ಷಗಳ ವಾಲ್ಯುವೇಶನದ ಫಲಿತಾಂಶವಾಗಿ ಪ್ರತಿಯೊಂದು 1000 ರೂಪಾಯಿಗಳ ವಿಮಾಪತ್ರದ ಮೇಲೆ—

ವರ್ಷ 1ರ ರೂಪಾಯಿ 10ರ ಬೋನಸ್ ಕೊಡಲಾಗಿದೆ.

(ಪ್ರಥಮ ವಾಲ್ಯುವೇಶನದಲ್ಲಿ ಇಷ್ಟು ಬೋನಸನ್ನು ಘೋಷಿಸಿದ ಹಿಂದೀ ವಿಮಾಕಂಪೆನಿಗಳು ಅತಿ ವಿರಳವೆಂಬುದನ್ನು ಮರೆಯದಿರಿ)

ನಮ್ಮ ಪ್ರಾತಿನಿಧ್ಯವಿಲ್ಲದ ಎಲ್ಲ ಕಡೆಗಳಲ್ಲಿ ವ್ಯವಹಾರಕುಶಲರೂ, ಪ್ರಾಮಾಣಿಕರೂ, ಯೋಗ್ಯರೂ ಆದ

ಏಜಂಟರು ಬೇಕು.

ಮಾಹಿತಿಪತ್ರ, ವಿವರಗಳು ಹಕ್ಕುಪತ್ರಗಳಿಗೆ:—

ಮಂಗಳೂರಿನ ಕಾರ್ಯಾಲಯಕ್ಕೆ ಬರೆದು ಕೇಳಿ.

ಮಡಿಕೇರಿ ಏಜಂಟರು— ಬಿ. ಜಿ. ಬೆಳ್ಳಿಯಪ್ಪನವರು, ವಸ್ತ್ರಗಳ ವ್ಯಾಪಾರಿ, ಮಡಿಕೇರಿ.

(52—4)

ಸುಂಟಿಕೊಪ್ಪ ಏಜಂಟರು— ಬಿ. ಎಸ್. ಮೊಣ್ಣಯ್ಯನವರು, ವಸ್ತ್ರಗಳ ವ್ಯಾಪಾರಿ, ಸುಂಟಿಕೊಪ್ಪ.

"ಆಹ! ನಿನಗೆ ಎಂಥ ಜಾಣನಾದ ಅಗಸನು ಬಟ್ಟೆ ಒಗೆಯುತ್ತಿರುವನು! ನಿನ್ನ ವಸ್ತ್ರಗಳೆಲ್ಲವೂ ಕಣ್ಣು ಕುಕ್ಕುವಷ್ಟು ಶುಭ್ರವಾಗಿವೆ."

"ಅಗಸನೇ? ನಾನು ನನ್ನ ಈ ವಸ್ತ್ರಗಳೆಲ್ಲವನ್ನು ನಾನೇ 501 ಮಾರ್ಕಿನ ಸಾಬೂನಿನಿಂದ ಒಗೆದೆನು."

ನೊರೆ ಅಧಿಕ.
ವಸ್ತ್ರ ಬಾಳಿಕೆ.
ಶ್ರಮ ಅತೀ ಕಡಮೆ!

ಟಾಟಾ ಕಂಪನಿ ಮಾರಾಟದ ಮಳಿಗೆ, ೧. ಸೆಂಟ್ರಲ್ ಸ್ಟ್ರೀಟ್, ಬೆಂಗಳೂರು ದಂಡು

TOMCo

501 Soap

ತಯಾರಿಸುವವರು—ಟಾಟಾ ಆಯಿಲ್ ಮಿಲ್ ಕಂಪೆನಿ ಲಿಮಿಟೆಡ್, ಬೊಂಬಾಯಿ, ಮತ್ತು ಟಾಟಾಪುರ.

52—43. ಕೊಡಗಿನ ಡಿಸ್ಟ್ರಿಬ್ಯೂಟರ್—ಬಿ ಎಸ್ ಸುಬ್ಬಣ್ಣ, ಸಂತೆಪೇಟೆ, ಮೈಸೂರು.

ನೂತನ! ಮನೋಲ್ಲಾಸಕರ!! ಶುಚಿಕರ!!! ಅವರ್ಣ್ಯ ವಿಶ್ರಾಂತಿಗೃಹ!!!!

ಬೊಂಬಾಯಿ ರೆಸ್ಟೋರೆಂಟ್

ಇದೇ ತಾ. 19—12—1935ರಲ್ಲಿ ಮಡಿಕೇರಿ ಚೌಕದಲ್ಲಿರುವ ಹೊಸ ಕಟ್ಟಡದಲ್ಲಿ ತೆರೆಯಲ್ಪಟ್ಟಿದೆ.

ಆರೋಗ್ಯಕರವೂ ಅಧಿಕ ನಿಕಟವೂ ಆದ ಉಪಹಾರ ಗೃಹವೊಂದನ್ನು ನಿರೀಕ್ಷಿಸುವ ಮಹಾಜನಗಳ ಸೌಕರ್ಯಕ್ಕಾಗಿ ತೆರೆಯಲಾಗಿರುವುದು.

ಶುಭ್ರವೂ, ಪುಷ್ಟಿಕರವೂ, ಆರೋಗ್ಯಕರವೂ ಆದ ತಿಂಡಿಗಳನ್ನು

ಕಾಫಿ—ಚಹಾ—ಕೋಕೋ—ಶರ್ಬತ್ತು ಇತ್ಯಾದಿ ಪಾನೀಯಗಳೂ—

ಕೇವಲ ಹಲವು ವರ್ಷ ಅನುಭವಿಕರಿಂದ ತಯಾರಿಸಲ್ಪಡುವುವು.

ಗಿರಾಕಿಗಳ ಸೌಕರ್ಯಗಳನ್ನು ಲಕ್ಷಿಸಿ, ಆಸನಗಳ—ವಿಶಾಲ ಕೊಠಡಿಗಳ—ಕಾರ್ಯೋತ್ಸಾಹೀ ವಿನೀತ ಸೇವಕರ ಏರ್ಪಾಡು ಇದೆ.

ಅಚ್ಚುಕಟ್ಟಾದ ನಮ್ಮ ಉಪಹಾರ ಗೃಹಕ್ಕೆ ತಕ್ಕ ರುಚಿಯನ್ನು ಹೊಂದಬೇಕಾದ ಅತ್ಯಾಧುನಿಕ ಈ ವಿಶ್ರಾಂತಿಗೃಹದಲ್ಲಿ—

ನೀವು ಅಪೇಕ್ಷಿಸಿದ—ನೀವು ನಿರೀಕ್ಷಿಸಿದ—ನೀವು ಹೊಂದಬೇಕಾದ—

ಸಕಲ ಅನುಕೂಲತೆಗಳನ್ನು ಕಂಡು, ಪೂರ್ಣ ತೃಪ್ತಿ ಹೊಂದಿರಿ.

ಮದುವೆ ಮತ್ತು ಉಪನಯನ ಸಮಾರಂಭಗಳಲ್ಲಿಯೂ ಮತ್ತು "ಟೀ"ಪಾರ್ಟಿ—

"ಎಟ್-ಹೋಮ"ಗಳಲ್ಲಿಯೂ ನಮ್ಮನ್ನು ಮರೆಯಬೇಡಿ.

52—14 ಪ್ರೊಪ್ರೈಟರ್:—ಎಸ್. ಎನ್. ರಾವ್, ಗಾಂಧಿತೋಂಡೆ.

ಪ್ರಸಿದ್ಧ ಔಷಧಗಳು.

ಮಲೇರಿಯಾಕ್ಕೆ ಒಂದೇ ಸಿದ್ಧೌಷಧ.

ಶುದ್ಧವಾದ ಹಿಂದೂಸ್ಥಾನದ ಮೂಲಿಕೆಗಳಿಂದ ತಯಾರಾದದ್ದು.
ಕ್ವಿನಿನನ್ನು ಯಾವ ರೂಪದಲ್ಲೂ ಸೇರಿಸಿಲ್ಲ.

"ನವರತ್ನ ಮಲ್ಯಾರಿಯಾ"

ಹಿಂದೂದೇಶದ ಔಷಧಗಳ ವಿಚಾರದಲ್ಲಿ ಶ್ರೇಷ್ಠತೆಯನ್ನು ಪಡೆದ ಡಾ. ಕೆ ಎಂ ನಾಡ್ಕರ್ಣಿ ಮತ್ತು ಡಾ. ಕೆ. ಸಿ. ಬೋಸ್ ರವರ ಗ್ರಂಥಗಳಿಗನುಗುಣವಾಗಿ ಅತೀ ಪರಿಣಾಮಕಾರಕ ಔಷಧಗಳ ಸಂಯೋಜನೆಯಿಂದ ತಯಾರಿಸಲ್ಪಟ್ಟ ಈ ಔಷಧವು ಹೆಚ್ಚು ಫಲಕಾರಿಯಾಗಿರುವದು.

ಇದರಲ್ಲಿರುವ ಔಷಧಗಳು.

1. Andrographis Paniculate
2. Cocculas Cordifolius
3. Berriberies Aristata
4. Vernonis Cinerarea
5. Evolvulas Alsinoides
6. Dashmoola
7. Aconitum Heterophylum
8. Alstonia Scholaris

ಮಲೇರಿಯಾಕ್ಕೆ ಅತ್ಯುತ್ತಮ ಔಷಧಿ. ಕ್ವಿನಿನನ್ನು ಯಾವ ವಿಧದಲ್ಲೂ ಸೇರಿಸದೆ ಯಾವ ಬಾಧಿಸಲ್ಲೂ ಹಾನಿಕರವಾಗದ ಸಂಜೀವಿನಿ. ಇದನ್ನು ಎಷ್ಟು ಸೇವಿಸಿದರೂ ಕ್ವಿನೀನ್ ಸೇವನೆಯಿಂದ ಉಂಟಾಗಬಹುದಾದ ಮಹಾ ಹಾನಿಗಳ ಭಯವೇ ಇಲ್ಲ. ಒಮ್ಮೆ ಉಪಯೋಗಿಸಿದಲ್ಲಿ ಮತ್ತೆ ಬಿಡಲಾರಿರಿ.

ತಯಾರಿಸುವವರು:—ದಿ ನವರತ್ನ ಫಾರ್ಮಸಿ,
ಪೋ. ಬಾ. ನಂಬರು 68, ಕೊಚಿನ್.

ಸ್ಟಾಕಿಸ್ಟ್—ಎ. ಎಸ್. ನಾಗಯ್ಯ, ಟಿಪ್ಪು ವ್ಯಾಪಾರ, ಸುಂಟಿಕೊಪ್ಪ. } ಏಜೆಂಟ್—ವಿ. ಬಿ. ಕಾಮತ್, ಮಹದೇವಪೇಟೆ, ಮಡಿಕೇರಿ.

52—41

ನವರತ್ನ ಫಾರ್ಮಸಿ.

ಟೆಂಡರು ನೋಟೀಸು.

ಕೊಡಗು ಟೆಂಪಲ್ ಫಂಡ್ಸ್ ಕಮಿಟಿ ಪ್ರೆಸಿಡೆಂಟರವರ ಆಫೀಸಿನಿಂದ.

ಇಲಾಖೆ ದೇವಸ್ಥಾನಗಳ ಖರ್ಚಿಗೆ ಈ ಕೆಳಗೆ ನಮೂದು ಮಾಡಿದ ಸಾಮಾನುಗಳನ್ನು ೧ ಬರುವ ಏಪ್ರಿಲ್ ತಾರೀಖಿನಿಂದ ಒಂದು ವರ್ಷದ ವರೆಗೆ ಮಡಿಕೇರಿ ಟೌನಿನಲ್ಲಿ ಸಪ್ಲೈ ಕೊಡುವಂತೆ ಯಾರ ಯಾರದರಲ್ಲಿ ಕಂಟ್ರಾಕ್ಟು ವಹಿಸಿಕೊಳ್ಳಲು ಇಷ್ಟವುಂಟೋ ಅವರು ನಮೂದಿಸಿ ಸೀಲು ಮಾಡಿದ ಅರ್ಜಿಯ ಟೆಂಡರುಗಳನ್ನು ಈ ತಾರೀಖು ಆಖೈರೊಳಗೆ ಈ ಕೆಳಗೆ ಸೈನು ಮಾಡಿದವರಿಗೆ ತಲುಪುವಂತೆ ಕಳುಹಿಸಿ ಕೊಡುವುದು.

ಬೇಕಾಗುವ ಸಾಮಾನುಗಳ ತಪಶೀಲು.

ಉಪ್ಪು, ತೆಂಗಿನಕಾಯಿ, ಸಂಬಾರ, ಸಾಸುವೆ, ಉದ್ದು, ಹೆಸರು, ಕಡಲೆ, ಮೆಂತೆ, ಅವರೆ, ಕಡಲೆ. (ಸೇರು ಲೆಕ್ಕದಲ್ಲಿ) ಹಸುವಿನ ತುಪ್ಪ, ದನದ ತುಪ್ಪ, ಒಳ್ಳೆಣ್ಣೆ, ತೆಂಗಿನೆಣ್ಣೆ, ಬೆಲ್ಲ, ಮೆಣಸಿನಕಾಯಿ, ಹುಣಸೆಹಣ್ಣು, ಬೇಳೆ, ಅರಸಿನ, ಸಕ್ಕರೆ, ಕರ್ಪೂರ ಸಾಂಬ್ರಾಣಿ, (ಮಣ ಲೆಕ್ಕದಲ್ಲಿ) ಸಪ್ಲೈ ಕೊಡುವಂತೆ ಟೆಂಡರು. ಕಳುಹಿಸಿಕೊಡುವದು.

ಕೆ. ಕಾಳಪ್ಪ,
(ಪ್ರೆಸಿಡೆಂಟ್)

ಆದಿ ಶ್ರೀ ಕಾವೇರಿ ಬಸ್ಸ್ ಸರ್ವಿಸ್ ಲಿಮಿಟೆಡ್, ಮಡಿಕೇರಿ.

ಮೇಲ್ಕಂಡ ಕಂಪೆನಿಯಿಂದ ಶೇರು ಹೊಂದಿಕೊಂಡ ಮಾಹನೀಯರುಗಳು.

(ಮುಂದುವರಿದದ್ದು)

ಮ. ನಂಜಪ್ಪ ಮಣಿಯಂಡ ಪೊನ್ನಪ್ಪನವರು. 5 ಶೇರುಗಳು
ಪ್ಲಾಂಟರು, ಮರನಾಡು.

(ಆದಿ ಶ್ರೀ ಕಾವೇರಿ ಬಸ್ಸು ಸರ್ವಿಸಿನ ಪಾಲಿಗರಿಂದ ಈ ಮೊದಲು ಕೊಡಲ್ಪಟ್ಟ ಫ್ರೀಪಾಸು ಮತ್ತು ರಿಯಾಯಿತಿಯ ಪಾಸುಗಳು ಇನ್ನು ಮುಂದೆ ರದ್ದಾಗತಕ್ಕದೆಂದು ಈ ಮೂಲಕ ತಿಳಿಸಲಾಗಿದೆ. ಮುಂದಕ್ಕೆ ಉಪಯೋಗಿಸುವರು ಬೇಕಾದವರು ಆದಿ ಶ್ರೀ ಕಾವೇರಿ ಬಸ್ ಸರ್ವಿಸ್ ಲಿಮಿಟೆಡ್, ಮಡಿಕೇರಿ, ಇವರ ಸೆಕ್ರೆಟರಿಯವರಿಗೆ ಬರೆದುಕೊಳ್ಳಬೇಕು.)

ಯಂ. ಯಂ. ಅಣ್ಣಯ್ಯ,
8—6 ಸೆಕ್ರೆಟರಿ.

ನೋಟೀಸು.

ಕಡಗದ ಗ್ರಾಮದಲ್ಲಿರುವ (1) ಬಸವರಾಜಯ್ಯ. (2) ಸೋಮಶೇಖರ ಸಹ ಇದರಿಂದ ಸಮಸ್ತ ಜನರಿಗೂ ತಿಳಿಯಪಡಿಸುವುದೇನೆಂದರೆ:—

ನಮ್ಮ ದೊಡ್ಡ ತಂದೆ ಮಗನಾದ ಒಸಪ್ಪನೆಂಬವನು ಪೌತಾಗಿ ಆತನ ಹೆಂಡತಿ ಕೆಂಪಮ್ಮನೆಂಬವಳೂ, ಮತ್ತೂ ಮೂರು ವರ್ಷ ಪ್ರಾಯದ ಒಬ್ಬ ಹೆಣ್ಣು ಮಗಳೂ ಸಹ ಇರುತ್ತಾರೆ.

ಇವರು ನಮಗಳ ಪಿತ್ರಾರ್ಜಿತವಾದ ಸ್ವತ್ತನ್ನು ಯಾ ಸ್ವತ್ತಿನ ಕೆಲವು ಭಾಗಗಳನ್ನು ಸಾಲಕ್ಕಾಗಿ ಯಾರಿಗಾದರೂ ಮಾಡುತ್ತಾಳೆಂಬ ವರ್ತಮಾನ ತಿಳಿಯುತ್ತೇವೆ. ಹಾಗೆ ಆವಳು ಪರಾಧೀನ ಮಾಡಲು ನಮ್ಮ ವಿನಹ ಆಕೆಗೆ ಯಾವ ಅಧಿಕಾರವೂ ಇರುವುದಿಲ್ಲ. ಇದನ್ನು ವಿಚಾರ ಮಾಡದೆ ಆಗಲೀ ಆಕೆಯಿಂದ ನಮ್ಮ ಸಮ್ಮತಿ ವಿನಹ ಗಿರವಿ, ಬೋಗ್ಯ, ಕ್ರಯ ವಗೈರೆ ಮಾಡಿಸಿಕೊಂಡಲ್ಲಿ ಅದು ಊರ್ಜಿತವಾಗತಕ್ಕದ್ದಲ್ಲವೆಂಬ ಸಂಗತಿಯನ್ನು ಈ ಮೂಲಕ ತಿಳಿಸಿರುತ್ತೇವೆ.

ಕಡಗ, ಬಸವರಾಜಯ್ಯ,
ತಾ॥ 17—3—36. ಸೋಮಶೇಖರ,

ಪತ್ರವ್ಯವಹಾರ.

[ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ಪತ್ರಿಕಾಕರ್ತರು ಜವಾಬ್ದಾರರಲ್ಲ. ಸಂ]

ಕೊಡಗು ವೀರಶೈವ ವಿದ್ಯಾ ನಿಧಿ.

ಆಯ್ಯಾ,

ಕೊಡಗು ವೀರಶೈವ ವಿದ್ಯಾ ನಿಧಿಯು ಕೆಲವು ವರ್ಷಗಳಿಂದ ನಿದ್ರಾವಸ್ಥೆಯಲ್ಲಿದ್ದದನ್ನು ಎಚ್ಚರಿಸಿ, ಅದರ ಉದ್ದೇಶವನ್ನು ನೆರವೇರಿಸಲು ಹೊಸತು ಕೆಲಸ ಪ್ರಾರಂಭಿಸಬೇಕೆಂದು ಆ

ಮಾರ್ಚ ತಾ. 1೦.

ರಾಸ್ ಕದಮಿಯರು ಪೂನಾ

ಹಿಸ್ಸು, ಜನಗಳ ವರೆಗೆ ಸುಮ್ಮನಿದ್ದು ಪೂನಾ ರಾಸ್ ಕ ದಮಿಯರು ಯುದ್ಧ ಪ್ರಾರಂಭಿಸುವರು. ಈ ಕದನದಲ್ಲಿ ಕೆಲವೆಡೆಗಳಲ್ಲಿ ಸೋಲಿಸಲ್ಪಟ್ಟರು. ಗ್ರಾಮವಂತರು ಸುನ್ನಿಯರ ಪೂರ್ವ ಪಕ್ಷದವರು ತಿಳಿದು ಬಂದಿದೆ. ಅಬಿಸೀನಿಯ ಮತ್ತು ಸೈನಿಕರು ಎಲ್ಲಿ ದೊಡ್ಡ ಕದನಗಳಾಗಿ ಇಟಲಿಯ ಸೈನ್ಯಗಳು. ಹಿಂದೆಗೆದಿವೆ. ರಾಸ್ ಕದಮಿಯರು ಅನೇಕ ಜನ ರಿಂದ ಸೈನ್ಯಗಳನ್ನು ಹಿಂತೆಗೆದುಕೊಳ್ಳಲು, ಮುಂದೆಯೂ, ಕ್ಷಿಪ್ರ ಅವನೆಂದು ತಿಳಿಯಬರುತ್ತದೆ.

ಇಟಲಿಯವರ ಮುಖ್ಯ ವಾರ್ತೆಗಳು.

ಕೆಲವೇ ದಿವಸ ಇಟಲಿಯವರ ಪ್ರಚಾರವಾಗುತಿರುವ, ರಾಸ್ ಕಾಸ್ಸನನು ಇಟಲಿಯವರೊಡನೆ ರಾಜಿ ಸಂಧಾನ ಕಾರ್ಯ ನಡೆಸುತ್ತಿರುವರೆಂದೂ, ಚಕ್ರವರ್ತಿಗಳಿಗೆ ದೇಶಸ್ವಾತಂತ್ರ್ಯವಿಲ್ಲ ದೆಂದೂ ಇಟಲಿಯವರು ಪ್ರಕಟಿಸಿದ ವಾರ್ತೆಗಳು. ನಿರಾಧಾರ ವಾದುವೆಂದು ಅಬಿಸೀನಿಯದ ಪ್ರಕಟಣೆ. ಚಕ್ರವರ್ತಿಗ ಳು ಯುದ್ಧ ರಂಗಗಳೆಲ್ಲವನ್ನು ಸಂದರ್ಶಿಸುತ್ತಿರುವರು. ಅವ ರ ಸಂದರ್ಶನದಿಂದ ಸೈನಿಕರಲ್ಲಿ ಉತ್ಸಾಹವು ಇಮ್ಮಡಿಯಾ ಗಿರುವುದು.

ಮಾರ್ಚ ತಾ. 17.

ವಿಷಗಾಳಿಯ ಬಾಂಬುಗಳು.

ಏಳು ಇಟಲಿಯ ವಿಮಾನಗಳು ಕೊರೆ ಮೇಲೆ ವಿಷಗಾ ಳಿಯ ಬಾಂಬುಗಳನ್ನು ಎಸೆದವು. ಅದರೆ ಹೆಚ್ಚಿನ ಅನಾಹು ತಗಳೇನೂ ಆಗಿಲ್ಲ.

ಗಲ್ಲಾಗಳ ರಾಜಭಕ್ತಿ.

ಅಬಿಸೀನಿಯದ ಸರಕಾರದ ಮೇಲೆ ದಂಗೆ ಎಬ್ಬಿಸಬೇಕೆಂ ದು ಪ್ರೇರೇಪಿಸಿ ಇಟಲಿಯವರು 5000 ಗಲ್ಲಾ ಎಂಬ ಜನರಿಗೆ ಶಸ್ತ್ರಾಸ್ತ್ರಗಳನ್ನು ಒಳಗೊಳಗೆ ಕೊಟ್ಟಿದ್ದರು. ಅವರ ಜನಗಳು ಅವುಗಳೆಲ್ಲಾ ಅಬಿಸೀನಿಯಾ ಶ ಕ್ರವರ್ತಿಗಳಿಗೊಪ್ಪಿಸಿ ತಾವು ಅವರಿಗಾಗಿ ಪ್ರಾಣವನ್ನು ಕೊಡ ಲೂ ಸಿದ್ಧರಿರುವೆವೆಂದು ವಿಶದಪಡಿಸಿದರು.

ಪಾಶ್ಚಾತ್ಯ ವಿದ್ಯಾಭ್ಯಾಸ.

(ಲೇಖಕ—ಕೆ. ಎಲ್. ಕಾವೇರಿ, ಮಡಿಕೇರಿ.)

ಇಂಗ್ಲೀಷ್ ವಿದ್ಯಾಭ್ಯಾಸವು, ನಮ್ಮಲ್ಲಿ ಪ್ರಾಚೀನದಿಂದ ಬಂದ ಪಾಶ್ಚಾತ್ಯ ನಾಗರಿಕತೆಯ ದಿನದಿನಕ್ಕೆ ಉತ್ಕರ್ಷತೆಯ ನ್ನು ಹೊಂದುತ್ತಿರುವುದಲ್ಲದೆ ಹಾಗೆ ಅಧ್ಯಯನಾಭ್ಯಾಸಗಳಲ್ಲಿ ವಿಚಾರಶೀಲರಾದ ಕೆಲವು ಮಂದಿಯ ವಿಷಯ ಮಿಕ್ಕ ಅ ನೇಕರು, ಆ ಪರದೇಶಿಯರ ಕೇವಲ, ವೇಷಭೂಷಾ, ಭಾಷಾ ಚಾರಿಗಳಿಗೆ ಮರುಳಾಗಿ ಅವರು ಹಾಕುವ ತಾಳಕ್ಕೆ ಸರಿಯಾ ಗಿ ಕುಣಿಯುತ್ತಾ, ಅವರನ್ನು ಅನುಸರಿಸತೊಡಗಿರುವರು. ನಮ್ಮ ಹಾಡನ್ನ ಇದ ಅಯಾರ ಪೂರ್ವಿಕರಾಚರಣೆಗಳೇ ಅವರಿಗೆ ಅಸ ಹ್ಯವಾಗಿ ತೋರಲು ದ್ಯೋತಕವಾದುವು ಸಹೋದರರೇ ಇದಾ 'ಮುದಿಯ ಕಾಲಕ್ಕೆ ಮದ್ದಿಲ್ಲ ಕೆಡುವ ಕಾಲಕ್ಕೆ ಬುದ್ಧಿಯಿಲ್ಲ' ಎಂಬ ಹಿರಿಯರ ಗಾದೆಯಂತಾಯಿತು. ಗಾದೆಯು ಒಕ್ಕಲಿ ಗರಿಗೆ, ನಮ್ಮ ಪೂರ್ವಿಕರಾಚಾರಗಳನ್ನು ಅನುಸರಿಸುವುದು ನಡು ಹುಚ್ಚು ಜನವೆಂದು ತಮ್ಮ ತನ್ನಾಳಗೆ ಗುಣಾಕಾರವನ್ನು ಮಾ ಡುತ್ತಾ ಪಾಶ್ಚಾತ್ಯಯನಗಳನ್ನು ಮಾಡತೊಡಗಿದರು. ಈ ನ ವೀನ ನಾಗರಿಕತೆಯು ಅಷ್ಟಕ್ಕೆ ನಿಂತಿತೇ! ಇಲ್ಲ ಮುಂದುವ ರಿಯುತ್ತಲೇ ಇದೆ. ಅದಕ್ಕೆ ಕಾಲುಗಳಾದರೂ ನೋಡಿಯೇನ ? ನೀವೆಲ್ಲರೂ ನೋಡುವಂತೆ ರಾತ್ರಿ, ಹಗಲೂ ನಡೆಯು ತ್ತಲೇ ಇದೆ.

ಸಹೋದರರೇ ನಿವೆಲ್ಲರೂ, ವೀರವನಿತೆಯ ಪುತ್ರರಲ್ಲ ವೇ ? ಅದನ್ನು ತಡೆಯಲು, ನಿಮ್ಮಿಂದ ಸಾಧ್ಯವಿಲ್ಲವೇ ? ಅಥವಾ ನಿಮ್ಮ ಬಾಹುಗಳಲ್ಲಿ ಶಕ್ತಿ ಇಲ್ಲವೆ? ಹಿಂದಿನ ವೀರ ತ್ವವೆಲ್ಲಿ ಹೋಯಿತು ? ಇದೇನು ಆಲಸ್ಯ ಇದೇನು ಅನಾಚಾರ ಇದೇನು ನಕಲು ಇದೇನು ಗುಲಾಮತನ? 'ಮಾತೆ, ಭೂಮಾತೆ ನಿನ್ನ ಪುತ್ರರು ಅನ್ಯದಾರಿಯನ್ನು ಹಿಡಿದು ಆ ಕಷ್ಟ ತಾಳಕ್ಕೆ ಗಾನವಾಡುತ್ತಾ, ಕುಣಿಯುವುದು ನಡು ನಿನ್ನ ಕಣ್ಣಾರೆ ನೋ ಡಬೇಕಾಯಿತೆ' ?

ಇರಲಿ, ಇದು ಇಷ್ಟು ಮಾತ್ರಕ್ಕೆ ನಿಂತಿತೇನು ? ಇದು ನ ಮ್ಮ ಗೃಹವೊಳಗೂ ಪ್ರವೇಶಿಸಿತು. ಮತ್ತೇನು, ಕೇಳುವು ದು ? ಮನೆಗೆ ಒಂದರು ಹೊಸವಿಲ್ಲವೇ ? ಕೆಲ ಕೆಲವು ಸ್ಥ ಳಗಳಲ್ಲಿ ಸ್ತ್ರೀಯರು ಆ ಪಾಶ್ಚಾತ್ಯ ಸ್ತ್ರೀಯರನ್ನು ನೋಡಿದ್ದ ಕತ, ತಮ್ಮ ನಿತ್ಯ ಕರ್ಮಕ್ಕೆ ಉಡುಗೆ ತೊಡಿಗೆಗಳಿಗೂ, ತ ಲಾಂಜಲಿಯನ್ನೇ ಕೊಟ್ಟಿದ್ದಾರೆ. ಸಹೋದರಿಯರೇ ನೀವು ನಿಮ್ಮ ಉಡಿಗೆ ತೊಡಿಗೆಗಳಿಗೆಲ್ಲಾ, ತಿಲಾಂಜಲಿಯನ್ನು ಕೊ ಟ್ಟು ನಿತ್ಯಕರ್ಮವನ್ನು ನಡು ಮರೆತುಬಿಟ್ಟರೋ ? ಆಹಾರ ಪಾನೀಯಗಳೂ, ಉಡಿಗೆ ತೊಡಿಗೆಗಳೂ, ವಿನೋದ ವಿನಯಗಳಿಂದ ಕೆ ಇರುವುದಕ್ಕಲ್ಲ. ಹಾಗೆಯೇ ವಿದ್ಯಾಭ್ಯಾಸವೂ ನಡು ಬಂ ಧಿಸಕ್ಕೊಳ್ಳುವ ವಂತವ್ಯ ಪ್ರತಿಭೆಯಂತಹ್ನ ಉದ್ದೇಶವಿದೆ; ಪ್ರಕೃತಿಯಂತಹ್ನ ಅಥವಿದೆ ನೀವು ನೋಡು 'ಹೋಂಗನ, ಹಿಂದು ಮುಂದು ನೋಡದೆ ಬಾವಿಗೆ ದುಮುಕಿದ ಹಾಗೆ' ದಾ ರಸ್ಸ್ಯ್ಯಲ್ಲಿ ಬಿಟ್ಟಿರ್ ನಿನ್ನ ಲ್ಲದೆ ಅಂದು ಅಲ್ಲದೆ ಅವುಗಳ ಅ ತಿರಸ್ಕಾರಗಳನ್ನು ತಿಳಿ. ಯೋಚಿಸಲಿ ! ಇಲ್ಲ. ಯೋಚಿ ದ್ದರೆ ಅವುಗಳ ಘನವಾದ ಉದ್ದೇಶಗಳು ಗೋಚರಿಸುತ್ತಿದ್ದುವು

ಹೊಸ್ಸಗಿ ಈಗಿನ ಭಗಿನಿಯರ ಭಾವನೆಯೇನೆಂದರೆ ಸ್ತ್ರೀ ಯರು ಪರದಾಧೀನರಾಗಿಯೂ, ಪುರುಷನು ಸ್ವತಂತ್ರನಾಗಿಯೂ ಇರುವನು. ಪುರುಷನಿಗೆ ಸರ್ವ ಸ್ವಾತಂತ್ರ್ಯವೂ ಇದೆ. ಸ್ತ್ರೀ ಯು ಮಾತ್ರ ದಾಸಿಯಂತೆ ಮನೆಯಲ್ಲಿ ದುಡಿಯುತ್ತಿರುವಳು ಇದು ತಪ್ಪು ಭಾವನೆ. ಒಂದು ಮಗುವನ್ನು ಅದರ ಮಾತಾ ಪಿತೃಗಳು, ತನ್ನ ಮಗು ತನ್ನ ಮಗು ಎಂದು ಪ್ರಾಣಪ್ರಿಯವಾಗಿ ಸಾಕುವರು. ಅಲ್ಲದೆ ಎರಡು ಆಕ್ಷಿಗಳು ಐಕ್ಯಭಾವದಿಂದ ಒಂದು ಪದಾರ್ಥವನ್ನು ನೋಡುವಂತೆಯೇ ಇವರಿಬ್ಬರೂ ತಾ ನು ಮೇಲು ತಾನು ತಾನು ಕೀಳು ಎಂದು ಭಾವಿಸದೆ ತಮ್ಮ ಗೃಹಕೃತ್ಯಗಳನ್ನು ನಡೆಸಬೇಕು. ತನ್ನ ಮನೆಯ ಸುಖಸಂ ತೋಷಗಳಿಗಾಗಿ ಮಾಡುವ ಕೆಲಸವನ್ನು ದಾಸ್ಯವೆಂದು ತಿಳಿ ಯುವುದಾದರೆ, ಪುರುಷನು ಸಂಸಾರಕ್ಕಾಗಿ ದುಡಿದು ಹಾಕ ಬೇಕಾದ ತನ್ನ ವೃತ್ತಿಯನ್ನು ಪ್ರತಿ ದಿನವು ಒಂದಿಮೆಳೆಯುವ ಎನ್ನಸಂತೆಯೇ ನರಿ. ಸಹೋದರರೂ, ನಡು ಸ್ತ್ರೀಯರು ಮಾ ಡುವ ಕೆಲಸವು ದಾಸ್ಯವೆಂದೇ ತಿಳಿದಿರುವರು. ಈ ಭಾವನೆ ಯು ತಪ್ಪು. ನಮ್ಮ ಭಾರತ ಮಾತೆಯ ಸ್ಮೃತಿಯಲ್ಲಿ ದಿನಕ ಒಂದೊಂದು ಕೃತಿಯೂ, ನಮ್ಮ ಜೀವನದ ಯಾತ್ರೆಯಲ್ಲಿನ ಆ ತ್ಮಾಭಿವೃದ್ಧಿಯ ಮಾರ್ಗದಲ್ಲಿ ಒಂದೊಂದು ಅಡಿಯಿಟ್ಟಂತೆ ತಾ. ಜನ್ಮಸಾರ್ಥಕ್ಯದ ಕಡೆಗೆ ನಡೆಯಲು ಅನುಕೂಲವಾಗಿ ವಿಸರ್ಜಿಸಿದ ಭಗಿನಿಯರೇ ಮನೆಗೆಲಸಗಳು ದಾಸ್ಯಕ್ಕಾಗಿ ಮಾ ಡುವುವುಗಳಲ್ಲ ಇದರಿಂದ ಅಶಕ್ಯತ್ವವು ಆಗಸಾಧ್ಯವೆ ಎಂದ ರಾಣಗುವುದು. ಇದರಿಂದ ಇಂಗ್ಲೀಷ ವಿದ್ಯೆಯನ್ನು ಕಲಿ ಯಬಾರದೆಂದಲ್ಲ ಮತ್ತು ಅದನ್ನು ಕಲಿಯುವುದರಿಂದಲೇ ಈ ಅನರ್ಥವು ಸಂಭವಿಸುವುದೆಂದಲ್ಲ. ಹಿಂದೂ ನಾಗರಿಕತೆಯ ಶ್ರೇಷ್ಠತತ್ವಗಳನ್ನು ಗಮನಿಸಿ ಆರ್ಯ ಸ್ತ್ರೀ ಯೋಗ್ಯರಾದ ಘ ನ ಗ್ರಂಥಗಳನ್ನು ಯೋಚಿಸಿ ಪಾಶ್ಚಾತ್ಯ ಸ್ತ್ರೀಯರನ್ನು ನೋಡಿ ಅವರಲ್ಲಿಯ ಆವಶ್ಯಕವು ಗುಣಗಳನ್ನು ಗ್ರಹಿಸಿ, ಅದನ್ನು ನಮ್ಮವರ ಅಭಿವೃದ್ಧಿಗಾಗಿ ಉಪಯೋಗಿಸಬೇಕಲ್ಲದೆ, ಅವರನ್ನು ಅನುಕರಿಸುವುದಲ್ಲ. ಪ್ರಾಜ್ಞರಾದ ಕರ್ನಾಟಕ ಸ ಹೋದರ ಸಹೋದರಿಯರೇ ಈ ವಿಷಯವನ್ನು ಗುಣಕ್ಕೆ ತಂದು ತಮ್ಮೊಳಗೆ ಆತರಂಗ, ಮಾರ್ಗದರ್ಶನಂಗಳು, ಬ ರಬೇಕೆಂಬುದೇ ಈ ಲೇಖನದ ಉದ್ದೇಶ.

Dr. Francis Pinto,
DENTIST.
Virajpet, S Coorg.

Free consultation.

Treatment for any kind of tooth trouble. Extraction and stuffing done with out any pain. Artificial teeth set very atractively and durability gaurenteed Charges very Moderate

4—4

FOR SALE

Hutti Estate for Sale

Mercara—Somwarpet Mile 10.

43 acers Coffee, 43 acres Jungle, 10½ acers Wet-lands. pulp house. lines, and bungalow. No reasonable offer refused

Apply—
Mrs Davies.
Suntikoppa

4—1

ಏಜೆಂಟರು ಬೇಕಾಗಿದೆ.

(1) ಬೊಂಬಾಯಿಯ ಪ್ರಸಿದ್ಧ ಬೆಬ್ ಕೆಮಿಕಲ್ ವರ್ಕ್ಸ್ ಇವರ "ಬೆಬ್ ಲಿನ್" "ಹೆಪೆಟೋಲಿನ" ಬೆಯೊಕಾಡಿರ್ಯಾಲ್, (2) ಹೆಸ್ರ ದಿವಾನ್ ಇವರ 'ಕ್ರೀಮ, ಬಟರ್, ಮೇರಿ,' ಬಿಸ್ಕಿಟುಗಳು, (3) ಬಸ್ಸರ ಮೆನುಫೆಕ್ಚರಿಂಗ್ ಕಂಪೆನಿ ಯವರ "ಒಕ್ಸರಿ, ಮೋಹಧ್ವಂಸಿನಿ, ವೆಸ್ಲಿನ್, ದಂತಮಂಜನ," ಇವುಗಳನ್ನು ಮಾರಾಟಮಾಡಲು ಕೊಡಗಿನ ಮುಖ್ಯ ಪಟ್ಟಣಗಳಲ್ಲಿ ಏಜಂಟರು ಬೇಕಾಗಿರು ವರು. ಸ್ಥಳೀಯ ಕಂಟ್ರಾಕ್ಟರವರು, ಶರ್ತಗಳಿಗಾಗಿಯೂ, ವಿವರಕ್ಕಾಗಿಯೂ ಈ ಕೆಳಗಿನ ವಿಳಾಸಕ್ಕೆ ಪತ್ರವ್ಯವಹಾರ ಮಾಡಬೇಕು —

X.
C/o **"Kodagu" Ltd.,**
Mercara.

4—2

ನೋಟೀಸು.

ಈ ಕೆಳಗಿನ ಮಹನೀಯರು "ಕೊಡಗು" ಪತ್ರಿಕೆಯ ಚಂದಾ ಹಣವನ್ನು ವಸೂಲಿ ಮಾಡಲು ಒಪ್ಪಿಕೊಂಡಿರುವುದರಿಂದ, ಅವರನ್ನು ಏಜೆಂಟರುಗಳಾಗಿ ನೇಮಿಸಿ ಅವರಿಗೆ ನಮ್ಮ ರಶೀತಿ ಪುಸ್ತಕಗಳು ಕೊಡಲಾಗಿದೆ. ಕೆಳಗಿನ ಸಬ್ ಏಜೆಂಟರುಗಳಿಗೆ ಏಜೆಂಟ್‌ಗವರ ಜವಾಬ್ದಾರಿ ಮೇಲೆ ರಶೀತಿ ಪುಸ್ತಕಗಳು ಕೊಡಲಾಗಿದೆ. ದಯವಿಟ್ಟು ಚಂದಾದಾರರೆಲ್ಲರೂ ಅವರಿಗೆ ಅನುಕೂಲವಿರುವ ಸ್ಥಳದಲ್ಲಿ ತಮ್ಮ ಚಂದಾವನ್ನು ಪಾವತಿ ಮಾಡಿ ರಶೀತಿ ಪಡೆಯಬೇಕಾಗಿ ಕೋರಿದೆ.

ಸಬ್ ಏಜೆಂಟರುಗಳು.

ವಿರಾಜಪೇಟೆ—ಮೆ. ಮಂಡೇಪಂಡ ಸೋಮಯ್ಯನವರು,
ಅಮ್ಮತ್ತಿ—ಸಿದ್ಧಾಪುರ—ಮೆ. ಬನಂಗ ಮಾಚಪ್ಪನವರು,
ಪೊನ್ನಂಪೇಟೆನಾಡು—ಮೆ. ಪಿ. ಜಿ. ಮುತ್ತಮ್ಮಯ್ಯನವರು
ಹುದಿಕೇರಿ & ತಿತಿಮತ್ತಿ—ಮೆ. ಜೆ ಮಾಚಮ್ಮಯ್ಯನವರು,
ಸುಂಟಿಕೊಪ್ಪ—ಮೆ. ಅಪ್ಪಚೆಟ್ಟೋಳಂಡ ಮಾಚಯ್ಯನವರು,
ಸೋಮವಾರಪೇಟೆ—ಮೆ. ಕೆ. ಪೊಗಪ್ಪನವರು
ನಾಪೋಕ್ಲು—ಮೆ, ಬೆಳ್ಳಿಯಂಡ ಗುಂ, ಪೂಣಚ್ಚನವರು,
(ನಾಪೋಕ್ಲು ಸ್ಟೋರ್ಸ್)

ಸೂಚನೆ.—ಪ್ರಿಂಟು ಆದ ರಶೀತಿ ಹೊಂದಿಕೊಳ್ಳದೆ ಯಾ ರೂ ಚಂದಾ ಕೊಡಬಾರದಾಗಿ ಈ ಮೂಲಕ ತಿಳಿಸಲಾಗಿದೆ.

ಮೇನೇಜರ್,
"ಕೊಡಗು" ಲಿಮಿಟೆಡ್
ಮಡಿಕೇರಿ.

ಜಿಳದೇಶ.

ವಿರಾಜಪೇಟೆಯಿಂದ: ಐಮಂಗಲ ಗ್ರಾಮದ ಬೆಳ್ಯಪ್ಪ ಎಂಬ ವ್ಯಕ್ತಿಯವರು ಗುಂಡು ಹೊಡೆದುಕೊಂಡು ಈ ತಾ. 12 ರಲ್ಲಿ ಆತ್ಮಹತ್ಯ ಮಾಡಿಕೊಂಡರಾಗಿ ತಿಳಿದು ಬರುತ್ತದೆ

ಈ ವಾರ ಕೊಡಗಿನ ಹಲವು ಕಡೆಗಳಿಗೆ ಒಳ್ಳೇ ಮಳೆ ಬಿದ್ದಿದೆ. ಇದರಿಂದ ಕಾಫಿ ತೋಟಗಳಿಗೆ ತುಂಬಾ ಪ್ರಯೋಜನವಾಗಿದೆ. ಈ ತಾರೀಖು 19 ರಲ್ಲಿ ಮಡಿಕೇರಿಯಲ್ಲಿ ಜೋರಾಗಿ ಮಳೆ ಹೊಡೆಯಿತು

ಈ ವಾರ ವಿರಾಜಪೇಟೆಯಲ್ಲಿ ಪಕ್ಕ ಗಾಡಿಗೆ ರೂ. 42 ಮತ್ತು ಮಡಿಕೇರಿಯಲ್ಲಿ ಕಾಫಿ ಖಂಡಿಗೆ ರೂ. 1150ರಿಂದ 1200 ವರೆಗೂ, ಏಲಕ್ಕಿ ಮಣಂಗೆ ರೂ. 31 ಕ್ರಯವಿತ್ತೆಂದು ತಿಳಿಯಬರುತ್ತದೆ.

ಅಮ್ಮತ್ತಿ—ಪೊಳ್ಳಿಬೆಟ್ಟ ರಸ್ತೆ ಬಳಿ ಇದ್ದ ಮ. ಕೋದಂಡ ಬೆಳ್ಯಪ್ಪನವರ ಮನೆಗೆ ಆಕಸ್ಮಾತ್ ಬೆಂಕಿ ಬಿದ್ದು ಮನೆಯೂ, ಅದರೊಳಗಿದ್ದ ಸ್ವಲ್ಪ ಭತ್ತವೂ ಬೆಂದು ಹೋಗಿದೆ ಯೆಂದು ತಿಳಿಯಬರುತ್ತದೆ

ಕೊಡಗು ಜೇನು ಮತ್ತು ಮೇಣ ತಯಾರಿಸುವವರ ಸಂಘದ ಆಫೀಸು ವಿರಾಜಪೇಟೆಯಲ್ಲಿ ಈ ತಾ. 29ರಲ್ಲಿ ತೆರೆಯಲ್ಪಡುವುದು. ಈ ಸಂಘದ ಹಕ್ಕು ಪತ್ರಿಕೆಯು ಈ ಸಂಚಿಕೆಯ ಪುರವಣಿಯಾಗಿ ಕಳುಹಿಸಲ್ಪಟ್ಟಿದೆ

ಮಡಿಕೇರಿ ಮುನಿಸಿಪಲ್ಟಿಗೆ ನೇಮಿಸಲ್ಪಟ್ಟ ಮ. ಪುಟ್ಟಿಚಂಡ ನಾಣಯ್ಯನವರು ತಮ್ಮ ಕೌನ್ಸಿಲು ಮೆಂಬರುತನಕ್ಕೆ ಕೊಟ್ಟ ರಾಜಿನಾಮೆಯನ್ನು ಚೀಫ್ ಕಮಿಷನರವರು ಅಂಗೀಕರಿಸಿರುವರಾಗಿ ಸಮಾಚಾರ

ಕೊಡಗು ಡಿಸ್ಟ್ರಿಕ್ಟ್ ಬೋರ್ಡಿನ ಬಜೆಟ್ಟು ಮೀಟಿಂಗು ಈ ತಾ. 11ರಲ್ಲಿ ಕೌನ್ಸಿಲ್ ಹಾಲಿನಲ್ಲಿ ನಡೆಯಿತು. ರಾ. ಸಾ. ಪಿ. ಎ. ಚಂಗಪ್ಪನವರು ಅಧ್ಯಕ್ಷರಾಗಿದ್ದರು. ಇದರ ವಿವರವು ಇನ್ನೊಂದು ಕಡೆ ಕೊಡಲಾಗಿದೆ

ಕೊಡಗು ಸಹಕಾರ ಸೆಂಟ್ರಲ್ ಬ್ಯಾಂಕಿನ ಡೈರೆಕ್ಟರುಗಳ ಮೀಟಿಂಗು ಈ ತಾ. 28ನೇ ಶನಿವಾರ ಬೆಳಿಗ್ಗೆ 11 ಗಂಟೆಗೂ, ಸುಪರ್‌ವಿಜನ್ ಬೋರ್ಡಿನ ಡೈರೆಕ್ಟರುಗಳ ಮೀಟಿಂಗು ಮಧ್ಯಾಹ್ನದ ಮೇಲೆ 3 ಗಂಟೆಗೂ ಬ್ಯಾಂಕಿನ ಆಫೀಸಿನಲ್ಲಿ ನಡೆಯುವುದು.

ಸೋಮವಾರಪೇಟೆಯಿಂದ: ಸಹಕಾರ ಯೂನಿಯನ್ನಿನ ಜನರಲ್ ಮೀಟಿಂಗು ಸಹಕಾರ ಸೆಂಟ್ರಲ್ ಬ್ಯಾಂಕ್ ಪ್ರೆಸಿಡೆಂಟರ ಅಧ್ಯಕ್ಷತೆಯಲ್ಲಿಯೂ, ಸಹಕಾರ ಪರಿಷತ್ತು ರಿಜಿಸ್ಟ್ರಾರರವರ ಅಧ್ಯಕ್ಷತೆಯಲ್ಲಿಯೂ ಈ ತಾ. 19ರಲ್ಲಿ ಸೋಮವಾರಪೇಟೆಯಲ್ಲಿ ನಡೆದವು.

ಬೇರೆ ಕಡೆ ವರ್ಗಾಯಿಸಲ್ಪಟ್ಟಿರುವ ಕಮಿಷನರವರಾದ ಮಿ. ಬಾಸ್‌ಮೇಯರವರಿಗೆ ವಿರಾಜಪೇಟೆಯ ನಿವಾಸಿಗಳು ಈ ತಾ. 20ರಲ್ಲಿಯೂ, ಮಡಿಕೇರಿಯಲ್ಲಿ ಫೋಟೋ ಕೃಷ್ಣನವರು ತಾ. 22ರಲ್ಲಿಯೂ, ಹಿತಚಿಂತಕರು ತಾ. 23ರಲ್ಲಿಯೂ ಟೀ ಪಾರ್ಟಿ ಕೊಡುವರಾಗಿ ತಿಳಿಯುತ್ತೇವೆ.

ಲ್ಯಾಂಡ್ ರೆಕಾರ್ಡ್ ಆಫೀಸಿನ ರಿಟಾಯರ್ಡ್ ಹೆಡ್ ಶಿರಸ್ತೇದಾರರಾದ ಮ. ಪಟ್ಟಮಾಡ ಮುತ್ತಪ್ಪನವರ ಪುತ್ರ, ದೇವಯ್ಯನವರು ಅವರ ಮಡಿಕೇರಿ ಮನೆಯಲ್ಲಿ ಈ ತಾ. 13ರ ರಾತ್ರಿ ಅಫೀಮು ಸೇವಿಸಿ ಆತ್ಮಹತ್ಯ ಮಾಡಿಕೊಂಡರೆಂದು ತಿಳಿಯುತ್ತೇವೆ

ಸೋಮವಾರಪೇಟೆ ಹೋಬಳಿಯ ತೊರೆನೂರು ಮತ್ತು ಗದ್ದೆಹೊಸಳ್ಳಿ ಗ್ರಾಮಗಳಿಗಾಗಿ ಹತ್ತು ಮೆಂಬರುಗಳ ಒಂದು ಪಂಚಾಯಿತಿಯನ್ನು ಬರುವ ಏಪ್ರಿಲ್ ತಾರೀಖು 1ರಿಂದ ಸ್ಥಾಪಿಸುವಂತೆಯೂ, ಅದರಲ್ಲಿ ತೊರೆನೂರಿಗೆ 9 ಮೆಂಬರುಗಳು ಮತ್ತು ಗದ್ದೆಹೊಸಳ್ಳಿಗೆ ಒಬ್ಬ ಮೆಂಬರನು ಇರುವಂತೆಯೂ ಚೀಫ್ ಕಮಿಷನರು ಪ್ರಕಟಿಸಿರುವರು.

ಈ ತಾ. 14ರಲ್ಲಿ ಅಮ್ಮತ್ತಿನಾಡು ಕಾರ್ಮಾಡು ಗ್ರಾಮದ ಮ. ಉದ್ದಪಂಡ ಕಾರ್ಯಪ್ಪನವರು ತಮ್ಮ ತೋಟಕ್ಕೆಗೆ ಆಕಸ್ಮಾತ್ ಬೆಂಕಿ ಹತ್ತಿದನ್ನು ನಂದಿಸಲಿಕ್ಕಾಗಿ ಮಾಡಿದ ಮೇಲ ಹಕ್ಕಿ ಪ್ರಯತ್ನಿಸಿದಾಗ್ಯೂ ಬೆಂಕಿಯಿಂದ ಆವರಿಸಲ್ಪಟ್ಟು ಕೆಳಗೆ ಬಿದ್ದು ದೇಹ ಪೂರಾ ಸುಟ್ಟು ಹೋಗಿ ಆ ದಿನ ಸಾಯಂಕಾಲ ಮೃತರಾದರೆಂದು ತಿಳಿಯಲು ವಿಷಾದಿಸುತ್ತೇವೆ.

ಹಿಂದೂದೇಶ.

ಬರ್ಮ ಕೌನ್ಸಿಲಿನವರು ಎರಡೆರಡು ಸಲ ಮಂಜೂರು ಮಾಡಲು ನಿರಾಕರಿಸಿರುವ ಕ್ರಿಮಿನಲ್ ಲಾ ಎಮೆಂಡ್‌ಮೆಂಟ್ ಆಕ್ಟನ್ನು ಗವರ್ನರವರು ಸರ್ಟಿಫೈ ಮಾಡಿರುವರು.

ತಾ. 12ನೇ ಗುರುವಾರ ಬೆಂಗಳೂರಿನಲ್ಲಿ ಹವೆಯ ಬಿಸಿ ಕಾವು 100.6 ಡಿಗ್ರಿ ಇದ್ದಿತೆಂದೂ, ಸುಮಾರು ಒಂದು ಶತಮಾನದಿಂದೀಚೆಗೆ ಅಲ್ಲಿ ಯಾವ ವರ್ಷವೂ ಈ ವರ್ಷದಷ್ಟು ಸೆಕೆಯನ್ನು ಜನರು ಅನುಭವಿಸಿರಲಿಲ್ಲವೆಂದೂ ಪ್ರಕಟವಾಗಿದೆ.

1921ನೇ ಇಸವಿಯಿಂದೀಚೆಗೆ ದಕ್ಷಿಣ ಇಂಡಿಯಾದಲ್ಲಿ 50,000 ಜನರು ಹಿಂದೀ ಭಾಷಾಭ್ಯಾಸ ಮಾಡಲು ಪ್ರಾರಂಭಿಸಿದ್ದಾರೆಂದೂ, ಅವರ ಪೈಕಿ 12,891 ಜನರು ದಕ್ಷಿಣ ಭಾರತ ಹಿಂದೀ ಪ್ರಚಾರ ಸಭೆಯವರು ನಡೆಸುತ್ತಿರುವ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರುತ್ತಾರೆಂದೂ ತಿಳಿಯುವುದು.

ಶ್ರೀ ಸುಭಾಷ ಚಂದ್ರಬೋಸರು ಶ್ರೀಮತಿ ಕಮಲಾ ನೆಹರೂರವರ ಅಂತಿಮ ಕಾಲದಲ್ಲಿ ಲೋಸೇನಿನಲ್ಲಿ ಅವರೊಂದಿಗಿದ್ದರು. ಈಗ ಆಸ್ಟ್ರಿಯಾದ ಆರೋಗ್ಯ ಮನೆಯೊಂದಕ್ಕೆ ಹೋಗಿರುವರು. ಶ್ರೀ ಬೋಸರು ಏಪ್ರಿಲ್ ತಾ. 10ಕ್ಕೆ ಬೊಂಬಾಯಿಗೆ ಮುಟ್ಟಲಿರುವರೆಂದು ತಿಳಿದು ಬರುತ್ತದೆ

ಜರ್ಮನಿಯ ಡಾ. ಸಿ. ಕ್ರೀಶ್ ಎಂಬವರು ಮೈಸೂರು ಸೀಮೆಯ ಕಾಡುಗಳಲ್ಲಿ ಶಿಕಾರಿನ ಅಪ್ಪಣೆಯನ್ನು ಪಡೆದು ಹತ್ತು ಆನೆ ಮರಿಗಳು, ಮೂರು ಕಾಡುಕೋಣಗಳು, ಮೂರು ಹುಲಿ ಮರಿಗಳನ್ನು ಜೀವಸಹಿತ ಹಿಡಿದು ಅವನ್ನು ಮದರಾಸಿಗೆ ಸಾಗಿಸಿಕೊಂಡು ಹೋಗಿ ಅಲ್ಲಿಂದ ಹಡಗಿನಲ್ಲಿ ಅವನ್ನು ಜರ್ಮನಿಗೆ ರವಾನೆ ಮಾಡಿದರು.

ಕೌನ್ಸಿಲ್ ಆಫ್ ಸ್ಟೇಟ್ ಎಂಬ ಸಭೆಗೆ ಮಹಿಳೆಯರು ಚುನಾವಣೆ ಪಡೆದು ಮೆಂಬರಾಗಲು ಅಥವಾ ಸರ್ಕಾರದವರೇ ನೇಮಕ ಮಾಡಲು ಅವಕಾಶವಿಲ್ಲ. ಆ ಸಭೆಗೆ ಮೆಂಬರಾಗಲು ಇರುವ ಈ ನಿರ್ಬಂಧಗಳನ್ನು ತೆಗೆದುಬಿಡಬೇಕೆಂದು ಕಳೆದ ವಾರದ ಅಧಿವೇಶನದಲ್ಲಿ ಸರ್ ಕೆ. ರಾಮುಣ್ಣಿ ಮೇನನ್‌ರವರು ಸೂಚಿಸಿದ ನಿರ್ಣಯವು ಸರ್ವಾನುಮತದಿಂದ ಪಾಸಾಯಿತು

ಮೈಸೂರು ಸಂಸ್ಥಾನದಲ್ಲಿ 1934—35ನೇ ಸಾಲಿನಲ್ಲಿ 1,04,553 ಜನನಗಳಾದವು, ಇದು ಹಿಂದಿನ ಸಾಲಿಗಿಂತಲೂ 9,010 ಕಡಿಮೆಯಾಗಿದೆ. ಈ ಸಾಲಿನಲ್ಲಿ 33—34ನೇ ಸಾಲಿಗಿಂತ 29,345 ಮರಣಗಳು ಕಡಿಮೆಯಾಗಿದೆ. ಇದೇ ಸಾಲಿನಲ್ಲಿ ಸಿಡುಬು ಉಪದ್ರವದಿಂದ 4,562, ಪ್ಲೇಗಿನಿಂದ 3,181, ಕಾಲರಾ ತಗಲಿ 318 ಈ ರೀತಿ ಮರಣಗಳಾದವು. ಮೈಸೂರು ಸಂಸ್ಥಾನದ ಜನಸಂಖ್ಯೆ 65,57,302.

ಟ್ರೇಡ್ ಯೂನಿಯನ್ ಕಾಂಗ್ರೆಸಿನ ಪ್ರೆಸಿಡೆಂಟರಾದ ಶ್ರೀ ರೂಯಿಕರರವರು ಕಳೆದ ಏಪ್ರಿಲ್‌ನಲ್ಲಿ ಒಂದು ರಾಜದ್ರೋಹಾತ್ಮಕ ಭಾಷಣವನ್ನು ಮಾಡಿದರೆಂದು ಅವರಿಗೆ ಒಂದು ವರ್ಷ ಸಜೆಯು ವಿಧಿಸಲಾಗಿತ್ತು. ಅದು ಅಪೀಲಿನಲ್ಲಿದ್ದು ಮೊನ್ನೆ ಕಲ್ಕತ್ತಾ ಹೈಕೋರ್ಟಿನವರು ಮೊದಲಿನ ಶಿಕ್ಷೆಯನ್ನು ಖಾಯಂ ಮಾಡಿದರು. ಮಿಸ್ ಮಣಿಬೆನ್ ಕಾರಾರವರು, ಅವರ ಸ್ಥಾನದಲ್ಲಿ ಅಖಿಲಭಾರತ ಟ್ರೇಡ ಯೂನಿಯನ್ ಕಾಂಗ್ರೆಸಿನ ಅಧ್ಯಕ್ಷೆಯಾಗಿ ಆರಿಸಲ್ಪಟ್ಟಿರುವರು

ಕರಾಚಿ ಮುನ್ಸಿಪಲ್ ಸಭೆಯವರು ಹೊಸ ವೈಸರಾಯರು ಲಾರ್ಡ್ ಲಿನ್‌ಲಿತ್‌ಗೋರವರಿಗೆ ಏಪ್ರಿಲ್ ತಾ. 16ರಲ್ಲಿ ಸ್ವಾಗತ ಕೊಡುವುದಕ್ಕಾಗಿ 500 ರೂ. ಮಂಜೂರು ಮಾಡಿದರು. ಆ ಸಂದರ್ಭದಲ್ಲಿ ಮೆಂಬರುಗಳು ಧರಿಸಬೇಕೆಂದು ಸೂಚಿಸಲ್ಪಟ್ಟ ಉಡುಪಿನ ವಿಷಯವಾಗಿ ಕೆಲವು ಮೆಂಬರುಗಳು ತೀವ್ರವಾಗಿ ಚರ್ಚಿಸಿದರು. ಬಜೆಟ್ಟಿನ ವಿಷಯವಾಗಿ ಚರ್ಚೆ ಪ್ರಾರಂಭ ಮಾಡಿದಾಗ ಕಾಂಗ್ರೆಸ್ ಪಕ್ಷದ ಮೆಂಬರುಗಳೆಲ್ಲ ಸಭೆಯನ್ನು ತ್ಯಜಿಸಿ ಹೊರಟು ಹೋದರೆಂದು ಹೇಳಲಾಗಿದೆ

ಕಲ್ಕತ್ತಾ ಪಟ್ಟಣದ ಪೋಕಿಫೆಂಪ್ ಎಂಬಾತನಿಗೆ 40 ಸಾರಿ ಬಂದೀಖಾನೆಯಾಗಿತ್ತು. ಕಳೆದ ವಾರ ಆತನು ಏನೂ ಕೆಲಸವಿಲ್ಲದಿದ್ದಾಗ್ಯೂ ಯಾವನೋ ಒಂದು ಬೀದಿಯಲ್ಲಿ ಸುಮ್ಮನೆ ಸುತ್ತಾಡುತ್ತಿದ್ದನೆಂದು ಪೋಲೀಸಿನವರು ದಸ್ತಗಿರಿ ಮಾಡಿ ಕೋರ್ಟಿಗೆ ತಂದುಕೊಂಡು ಹೋದರು. ಆತನು ಜಡ್ಜಿಯವರನ್ನು 'ಮಹಾಸ್ವಾಮಿ, ನನ್ನ ಜೀವಮಾನವನ್ನೆಲ್ಲಾ ಬಂದೀಖಾನೆಯಲ್ಲೇ ಕಳೆದು ಬಿಟ್ಟಿದ್ದೇನೆ. ದಯವಿಟ್ಟು ಕ್ಷಮಿಸಬೇಕು" ಎಂದು ಪ್ರಾರ್ಥಿಸಲು ಜಡ್ಜಿಯವರು ಅವನಿಗೆ ಒಂದು ತಿಂಗಳ ಸಜಾ ಶಿಕ್ಷೆ ವಿಧಿಸಿದರೆಂದು ಹೇಳಲಾಗಿದೆ.

ಮಹಾತ್ಮ ಗಾಂಧಿಯವರ ದೇಹಸ್ಥಿತಿಯು ಈಗ ಸ್ವಲ್ಪ ಉತ್ತಮವಾಗಿದ್ದಾಗ್ಯೂ ಇದ್ದಕ್ಕಿದ್ದ ಹಾಗೆಯೇ ರಕ್ತ ಒತ್ತಡವು ಹೆಚ್ಚಾಗಿ ಕೂಡಲೇ ಸಮಾಧಾನವಾಗುತ್ತದೆಂದು ಹೇಳಲಾಗಿದೆ. ಡಾ. ಅನ್ಸಾರಿಯವರು ಅವರನ್ನು ಪರೀಕ್ಷಿಸಿ ಪೂರ್ಣ ವಿಶ್ರಾಂತಿ ತೆಗೆದುಕೊಳ್ಳಬೇಕೆಂದು ಹೇಳಿರುತ್ತಾರೆ. ಅದಕ್ಕಾಗಿ ಮಹಾತ್ಮ ಗಾಂಧಿಯವರು ಬೆಳಿಗ್ಗೆ 10 ಗಂಟೆಯಿಂದ ಸಾಯಂಕಾಲ 5 ಗಂಟೆಯ ವರೆಗೆ ಯಾರ ಜೊತೆಯಲ್ಲೂ ಮಾತನಾಡದೆ ಮೌನದಿಂದಿರುತ್ತಾರೆ. ಪ್ರತಿ ದಿನವೂ ಸಾಯಂಕಾಲ ಸಂಚಾರ ಹೊರಡುತ್ತಾರೆ. ಶ್ರೀ. ವಲ್ಲಭಾಯಿ ಪಟೇಲರು ಮಹಾತ್ಮರ ಶುಶ್ರೂಷೆ ಮಾಡುತ್ತಾ ಯಾರೂ ಅವರೊಡನೆ ಹೆಚ್ಚಾಗಿ ಮಾತುಕಥೆಯಾಡಿ ತೊಂದರೆ ಕೊಡದಂತೆ ನೋಡಿಕೊಳ್ಳುತ್ತಿದ್ದಾರೆ. ಮಹಾತ್ಮ ಗಾಂಧಿಯವರು ಲಕ್ನೋ ಕಾಂಗ್ರೆಸ್ ಅಧಿವೇಶನದಲ್ಲಿ ಭಾಗ ವಹಿಸುವರೋ ಎಂಬುದು ಇನ್ನೂ ಅನುಮಾನಾಸ್ಪದವಾಗಿದೆ.

ಪಂಡಿತ ಜವಾಹಿರ್‌ಲಾಲ್ ನೆಹರೂರವರು ಕಳೆದ ತಾ 11ನೇ ಬುಧವಾರ ಬೆಳಿಗ್ಗೆ ಅಲಹಾಬಾದಿನ ಬಳಿ ಇರುವ ಬಮ್ರೌಲಿ ಎಂಬ ವಿಮಾನಗಳ ನಿಲ್ದಾಣದಲ್ಲಿ ವಿಮಾನದಲ್ಲಿ ಬಂದಿಳಿದರು. ಅವರ ಬಂಧುಗಳೂ, ಹಿತಮಿತ್ರರೂ ಅನೇಕರು ಆ ಸ್ಟೇಶನಿನಲ್ಲಿ ಅವರಿಗಾಗಿ ಕಾದಿದ್ದರು. ಪಂಡಿತರು ವಿಮಾನದಿಂದಿಳಿದೊಡನೆಯೇ ನಿಶ್ಶಬ್ದವು ಮಾಡಿ ಸಮೂಹವೆಲ್ಲವೂ ಶೋಕಗ್ರಸ್ತವಾಯಿತು. ಹೆಂಗಸರು ಬಿಕ್ಕಿ ಬಿಕ್ಕಿ ಅಳಲು ಪ್ರಾರಂಭಿಸಿದರು. ಒಬ್ಬರ ಬಾಯಲ್ಲೂ ಮಾತೇ ಹೊರಡದಂತಾಯಿತು. ಜನರೆಲ್ಲರೂ ಮೂಕರಂತೆ ತಲೆಬಾಗಿ ನಿಂತರು. ಈ ದೃಶ್ಯವನ್ನು ನೋಡಿದೊಡನೆಯೇ ಪಂಡಿತರೂ ವ್ಯಸನಾಕ್ರಾಂತರಾದರು. ಅದೇ ದಿನ ಸಾಯಂಕಾಲ ಶ್ರೀಮತಿಯವರ ಶವಭಸ್ಮವನ್ನು ಗಂಗಾ ನದಿಯಲ್ಲಿ ಕಲಸಿದರು. ಸುಮಾರು 40,000 ಜನರು ಜವಾಹಿರ್ ಲಾಲರ ಜೊತೆಯಲ್ಲಿ ಗಂಗಾ ನದಿಗೆ ಹೋಗಿದ್ದರು. ಅಲ್ಲಿ ಬಾಬು ರಾಜೇಂದ್ರ ಪ್ರಸಾದರವರು ಶ್ರೀಮತಿಯವರ ದೇಶ ಸೇವೆಯನ್ನೂ, ಪತಿಭಕ್ತಿಯನ್ನೂ, ಪವಿತ್ರ ಜೀವನವನ್ನೂ ಸ್ಮರಿಸಿ ಭಾಷಣ ಮಾಡಿದರು.

ವಿದೇಶ.

ಜರ್ಮನಿ ದೇಶದ ಡಾ. ಹರ್ಮನ್ ಗೋಯರ್ಟ್ಸ್ ಎಂಬ ಒಬ್ಬ ಗೃಹಸ್ಥನು ಲಂಡನ್ ಪಟ್ಟಣದಲ್ಲಿ 'ವಾಸಮಾಡಿಕೊಂಡಿದ್ದು ಅಲ್ಲಿನ ವಿಮಾನಯಂತ್ರ ಸೈನ್ಯದ ಒಳಗುಟ್ಟುಗಳನ್ನೆಲ್ಲಾ ತಿಳಿದು ಶತ್ರುಪಕ್ಷದವರಿಗೆ ತಿಳಿಸಲು ಪ್ರಯತ್ನಪಡುತ್ತಿದ್ದನೆಂಬ ಆಪಾದನೆಯ ಮೇಲೆ ಕಳೆದ ಸೋಮವಾರ ಅವನಿಗೆ ನಾಲ್ಕು ವರ್ಷ ಕಠಿಣ ಸಜಾ ಶಿಕ್ಷೆ ವಿಧಿಸಲಾಯಿತೆಂದು ಪ್ರಕಟವಾಗಿದೆ.

ಸಿಲೋನ್ ದ್ವೀಪವನ್ನು ಶತ್ರುಪಕ್ಷದವರು ವಾಯುಮಂಡಲದ ಮೂಲಕ ಮುತ್ತಿಗೆ ಹಾಕಿದ ಪಕ್ಷದಲ್ಲಿ ಅಲ್ಲಿನ ಪ್ರಜೆಗಳಿಗೆ ವಿಷ ಗಾಳಿಯಿಂದ ಏನೂ ಅಪಾಯ ಸಂಭವಿಸದಂತೆ ರಕ್ಷಣೆ ಪಡೆಯಲು ವಾಯುವನ್ನು ಶುದ್ಧ ಮಾಡುವ ಗ್ಯಾಸ್ ಮ್ಯಾಸ್ಕ್ ಎಂಬ ಮುಖವಾಡಗಳನ್ನು ಪ್ರತಿಯೊಬ್ಬ ಪ್ರಜೆಗೂ ಒದಗಿಸಿ ಕೊಡಲು ಸರ್ಕಾರದವರು ಆಲೋಚಿಸುತ್ತಿರುವುದಾಗಿ ಪ್ರಕಟವಾಗಿದೆ.

ಸ್ಪೈನಿನಲ್ಲಿ ಬಿಡುಗಡೆ ಹೊಂದಿರುವ ರಾಜಕೀಯ ಕೈದಿಗಳಿಗೆ ಸ್ವಾಗತವೀಯಲು ಪ್ರಚಂಡ ಮೆರವಣಿಗೆಗಳು ನಡೆದು ಕೆಲವೆಡೆ ಗಲಾಟೆ ಕಲಹ ನಡೆಯುವುವು. ಕೇಡಿಜ್ ಎಂಬಲ್ಲಿ ಜನರು, ಪೋಲೀಸರು ನೋಡುತ್ತಿರುವಂತೆಯೇ 13 ಚರ್ಚು ಕಾನ್ವೆಂಟು ಮತ್ತು ಶಾಲೆಗಳನ್ನು ನಾಶಮಾಡಿರುವರು. ಕೆಥೋಲಿಕರ 3 ವಾರ್ತಾಪತ್ರ ಕಟ್ಟಡಗಳು ಮೂಕ್ಕನೆ ದಹಿಸಲ್ಪಟ್ಟವೆ. ತೀವ್ರಗಾಮಿ ಪಕ್ಷದ ಸ್ತ್ರೀ ಮೆಂಬರರ ಸನ್ಮಾನಾರ್ಥವಾಗಿ ಮೆಡ್ರಿಡಿನಲ್ಲಿ ದೊಡ್ಡ ಪ್ರದರ್ಶನ ನಡೆದು ಪ್ರಥಮವಾಗಿ ಸ್ತ್ರೀಯರೇ ಭಾಷಣಗಳನ್ನಿತ್ತರು.

ಯುದ್ಧ ವಾರ್ತೆ.

ಮಾರ್ಚ ತಾ. 12.

ರಾಜಧಾನಿಯಲ್ಲಿ ಸಿದ್ಧತೆಗಳು.

ಇಟಲಿಯವರು ಒಂದು ಭಾರೀ ಆಕ್ರಮಣಕ್ಕೆ ತರಪಡಿಸುತ್ತಿರುವರೆಂದು ತಿಳಿದುಬಂದಿರುವುದರಿಂದ ರಾಜಧಾನಿಯಲ್ಲಿ ಸೈನಿಕರನ್ನು ಸೇರಿಸುವ ಕಾರ್ಯವು ಭರದಿಂದ ಸಾಗುತ್ತಲಿದೆ. ಸೇನಾನಿಯೂ [illegible] ವೃದ್ಧರಾದ ರಾಸ್ ಮುಲುಗೇಟಾರವರ ಬದಲಿಗೆ ಫಿಟರಾರಿ ಟಿರು ಎಂಬವರು ಮುಖ್ಯ ಸೈನ್ಯಾಧಿಕಾರಿಯಾಗಿ ನೇಮಿಸಲ್ಪಟ್ಟಿರುವರು.

ಮಾರ್ಚ ತಾ. 14.

ಸುಡಾನಿನ ಕಡೆಯಾಗಿ ಆಕ್ರಮಣ.

ಇಟಲಿಯ ಸೈನಿಕರು ಈಗ ಇಜಿಪ್ಟಿನ ಸುಡಾನಿನ ಕಡೆಯಾಗಿ ಅಬಿಸೀನಿಯಕ್ಕೆ ನುಗ್ಗಲು ಪ್ರಾರಂಭಿಸಿವೆ. ಸೆಟಿಟ್ ನದಿಯ ದಡಕ್ಕಾಗಿ ಅಬಿಸೀನಿಯಕ್ಕೆ ಒಂದು ಸುಲಭ ದಾರಿ ಇರುವದಾಗಿಯೂ, ಆ ಮೂಲಕ ಅಬಿಸೀನಿಯಕ್ಕೆ ನುಗ್ಗಲು ಸುಲಭವೆಂದೂ ತಿಳಿದುಬಂದಿರುವದರಿಂದ ನಾಲ್ಕು ಸೈನ್ಯ ವಿಭಾಗಗಳು ಒಂದೇ ದಾರಿಯಾಗಿ ಈ ಕಡೆಯಿಂದ ಮುಂದುವರಿಯುತ್ತಲಿವೆ.

ಬಾಂಬಿನ ಧಾಳಿಗೆ ಮಿತಿಯಿಲ್ಲ.

ಇಟಲಿಯ ವಿಮಾನಗಳು ಕೊರೆಂ ಬಳಿಯೂ ಮತ್ತು ಅಲಮಾಟ ಎಂಬಲ್ಲಿಗೂ ಬಾಂಬುಗಳನ್ನು ಎಸೆದವು. ಇದರಿಂದ ಇಬ್ಬರು ಮತ್ತು ಎರಡು ಹೇಸರ ಕತ್ತೆಗಳು ಮಡಿದವು. ಹೆಚ್ಚಿನ ಅನಾಹುತಗಳು ತಿಳಿದುಬಂದಿರುವದಿಲ್ಲ. ರಾಜಧಾನಿಯಾದ ಅಡಿಸ್ ಅಬಾಬದಲ್ಲಿ ಯುದ್ಧ ಸಾಮಗ್ರಿಗಳನ್ನು ಸಾಗಿಸುವ ಕೆಲಸವಲ್ಲದೆ ಮತ್ತಾವ ವಿಧದ ಆಫೀಸು ಕೆಲಸವೂ ನಡೆಯುವದಿಲ್ಲವಂತೆ.

ಮಾರ್ಚ ತಾ. 15.

ಉತ್ತರದಲ್ಲಿ ಅಬಿಸೀನಿಯರು ಯುದ್ಧ ಪ್ರಾರಂಭಿಸಿದರು.

ಅಂಬ ಅಲಗಿ ಎಂಬಲ್ಲಿ ಅಬಿಸೀನಿಯರು ಪುನಃ ಯುದ್ಧ ಪ್ರಾರಂಭಿಸಿರುವರೆಂದೂ, ಭಯಂಕರ ಕಾಳಗವು ನಡೆಯುತ್ತಿದೆಯೆಂದೂ, ಅಸಂಖ್ಯಾತ ಇಟಾಲಿಯನರು ಮಡಿದಿರುವರೆಂದೂ ತಿಳಿದು ಬಂದಿದೆ.

ಮುಸೋಲಿನಿಯ ಮಕ್ಕಳಿಗೆ ಬಹುಮಾನ.

ಮುಸೋಲಿನಿಯವರ ವಿಟ್ಟೋರಿಯೋ ಮತ್ತು ಬ್ರುನೋ ಎಂಬ ಇಬ್ಬರು ಪುತ್ರರು ಯುದ್ಧರಂಗದಲ್ಲಿರುವರಷ್ಟೆ. ಕಳೆದ ಯುದ್ಧ ಸಮಯದಲ್ಲಿ ಅವರು ತೋರಿದ ಅಪ್ರತಿಮ ಸಾಹಸ ಶೌರ್ಯಗಳಿಗಾಗಿ ಇಟಲಿಯ ಸೇನಾನಾಯಕರಾದ ಬಡೋಗ್ಲಿಯೋರವರು ಅವರಿಬ್ಬರಿಗೂ ಬಹುಮಾನಾರ್ಥವಾಗಿ ಪದಕಗಳನ್ನು ಸನ್ಮಾನಿಸಿರುವರು.

ಕೆಲವು ಪಗು

ಫೆಬ್ರುವರಿ ತಾ. ೨೦ ನೇ ಶನಿವಾರ ೧೯೩೭.

ಬಸ್ಸು ಚಾರ್ಜಿನ ದರಗಳು.

ಬೆಟ್ಟ ಗುಡ್ಡಗಳ ಸೀಮೆಯಾದ ಕೊಡಗಿನಲ್ಲಿ ಪ್ರಯಾಣದ ಅನುಕೂಲತೆಯು ಬಹು ಕಡಿಮೆ ಇದೆ. ಬೇರೆ ಕಡೆಗಳಲ್ಲಿರುವಂತೆ ಇಲ್ಲಿ ರೈಲ್ವೆಗಳ ಮತ್ತು ಟ್ರಾಮ್ವೆಗಳ ಅನುಕೂಲತೆ ಇಲ್ಲ. ಇಲ್ಲಿ ಇತ್ತೀಚೆಗೆ ಬಸ್ಸು ಸರ್ವೀಸುಗಳು ಆರಂಭವಾಗಿ ಒಳ್ಳೇ ಪ್ರಮಾಣದಲ್ಲಿ ಜನ ಸಂಚಾರವನ್ನು ನಡೆಸುತ್ತಿವೆ. ಹೀಗಿರುವದನ್ನು ನೋಡಿದರೆ ಬಸ್ಸುಗಳ ಮಾಲೀಕರ ಮತ್ತು ಪ್ರಯಾಣ ಮಾಡುವವರ ಹಿತದ ದೃಷ್ಟಿಯಿಂದ ಬಸ್ಸು ಸರ್ವೀಸುಗಳ ವಿಚಾರದಲ್ಲಿ ಸರಕಾರದವರು ಸ್ವಲ್ಪ ಗಮನಕೊಡಬೇಕಾಗಿದೆ.

ಈಗ ಜಾರಿಯಲ್ಲಿರುವಂತೆ ಬಸ್ಸು ಸರ್ವೀಸುಗಳು ವ್ಯಾಪಾರದ ದೃಷ್ಟಿಯಿಂದ ಮತ್ತು ಲಾಭದ ಆಶೆಯಿಂದ ನಡೆಸಲ್ಪಡುತ್ತಿರುವವುಗಳಾಗಿವೆ. ಆದರೆ ದೇಶದ ಜನರ ಪ್ರಯಾಣವನ್ನು, ಸಾಮಾನುಗಳ ಸಾಗಣೆಯನ್ನು ಸುಲಭ ಮಾಡುವ ಸಾಧನಗಳನ್ನು ಒದಗಿಸುವದು ಸರಕಾರದವರ ಕರ್ತವ್ಯವಾಗಿದೆ. ಆದುದರಿಂದಲೇ ಸರಕಾರದವರು ಕೆಲವು ರೈಲ್ವೆಗಳನ್ನು ನಡೆಸುತ್ತಿರುವುದಲ್ಲದೆ ಬೇರೆ ರೈಲ್ವೆ ಮತ್ತು ಸ್ಟೀಮರು ಕಂಪೆನಿಗಳ ಮೇಲೆ ಅಧಿಕಾರವನ್ನು ಇಟ್ಟುಕೊಂಡಿರುವುದಾಗಿದೆ. ಅಲ್ಲದೆ ಬಸ್ಸು ಸರ್ವೀಸುಗಳ ಮೇಲೆಯೂ ಕೆಲವು ನಿರ್ಬಂಧಗಳನ್ನು ಹಾಕಿರುವುದಾಗಿದೆ. ಬಸ್ಸು, ಲಾರಿ, ಕಾರುಗಳ ಸಂಚಾರದಿಂದ ರಸ್ತೆಗಳಿಗೆ ಆಗುತ್ತಿರುವ ಹಾನಿಯ ದುರಸ್ತಿ ಮಾಡಲು ಈ ವಾಹನಗಳ ಮೇಲೆ ಸರಕಾರದವರು ದೊಡ್ಡ ತೆರಿಗೆಗಳನ್ನು ಹಾಕುತ್ತಿರುವುದು ನಿಜ. ಇದು ಉತ್ಪತ್ತಿಯ ದೃಷ್ಟಿಯಿಂದಾಗಿದೆ. ಆದರೆ ವಾಹನಗಳ ರಕ್ಷಣೆಗಾಗಿ ನಿರ್ಬಂಧಿಸುವದಕ್ಕಿಂತ ಹೆಚ್ಚು ಪ್ರಯಾಣಿಕರನ್ನಾಗಲೀ, ಸಾಮಾನುಗಳನ್ನಾಗಲೀ ಒಯ್ಯಬಾರದೆಂತಲೂ, ನಿಯಮ ಮಾಡಿದ ವೇಗಕ್ಕಿಂತ ಜೋರಾಗಿ ಓಡಿಸಬಾರದೆಂತಲೂ, ನಿರ್ಣಯಿಸಿದ ಸಮಯ ತಪ್ಪಿ ನಡೆಸಬಾರದೆಂತಲೂ ಸರಕಾರದವರು ನಿರ್ಬಂಧನೆ ಮಾಡುತ್ತಿರುವುದು ಪ್ರಯಾಣಿಕರ ಹಿತದ ದೃಷ್ಟಿಯಿಂದಾಗಿದೆ. ಎಷ್ಟರವಲ್ಲ ಮೈಲಿಗೆ ಒಂದಾಣೆಗಿಂತ ಹೆಚ್ಚು ಚಾರ್ಜು ಮಾಡಬಾರದೆಂದು ನಿರ್ಬಂಧಿಸುವುದೂ ಪ್ರಯಾಣಿಕರ ಪ್ರಯೋಜನಕ್ಕಾಗಿಯಾಗಿದೆ. ಮೊದಲು ಬಸ್ಸು ಸರ್ವೀಸುಗಳ ಸಂಖ್ಯೆಯು ಬಹು ಕಡಿಮೆಯಾಗಿದ್ದು, ಸ್ಪರ್ಧೆಯು ಎಳ್ಳಷ್ಟು ಇಲ್ಲದ್ದರಿಂದ ಹೆಚ್ಚು ಚಾರ್ಜು ಮಾಡದಂತೆ ಇಂಥ ನಿಯಮವು ಅವಶ್ಯವಾಗಿದ್ದಿತು. ಚಾರ್ಜು ಕಡಿಮೆ ಮಾಡಿದಷ್ಟು ಪ್ರಯಾಣಿಕರಿಗೆ ಅನುಕೂಲವಾಗುವದರಿಂದ ಕನಿಷ್ಠ ಚಾರ್ಜಿನ ನಿಯಮವು ಅಗತ್ಯ ಮಾಡದೆ ಇದ್ದಿರಬಹುದಾಗಿ ತೋರುತ್ತದೆ. ಆದರೆ ಇತ್ತಲಾಗಿ ಬಸ್ಸು ಸರ್ವೀಸುಗಳ ಸಂಖ್ಯೆಯು ಹೆಚ್ಚುತ್ತಾ ಬಂದು ಸ್ಪರ್ಧೆಗೆ ತುಂಬಾ ಅವಕಾಶವಾಗುವುದರಿಂದ ಹೆಚ್ಚಿನ ದರದ ನಿಯಮಕ್ಕಿಂತ ಕಡಿಮೆ ದರದ ನಿಯಮದ ಅವಶ್ಯಕತೆಯು ಕಂಡುಬರುತ್ತದೆ.

ಒಳ್ಳೇ ಬಂಡವಾಳದ ಲಾಭದ ದೃಷ್ಟಿಯಿಂದ ಬಸ್ಸು ಸರ್ವೀಸುಗಳನ್ನು ನಡೆಸುತ್ತಿರುವವರು ಸ್ಪರ್ಧೆಯನ್ನು ಸಹಿಸಲಾರದೆ ಒಂದೊಂದು ಲೈನಿನಲ್ಲಿ ತಮ್ಮದಲ್ಲದ ಬೇರೆ ಸರ್ವೀಸುಗಳು ನಡೆಯದಂತೆ ಮಾಡಲು ಪ್ರಯತ್ನಿಸುವುದು ಜನರಿಗೆ ತಿಳಿಯದ ವಿಷಯವಲ್ಲ. ಒಂದು ಲೈನಿನಲ್ಲಿ ಬಲಾಢ್ಯ ಕಂಪೆನಿಯೊಂದು ಸ್ಪರ್ಧೆಯಿಂದ ನಡೆಸುತ್ತ ತನ್ನ ಚಾರ್ಜನ್ನು ಅತಿ ಕಡಿಮೆ ದರಕ್ಕೆ ಇಳಿಸಿ, ಅಥವಾ ಕೆಲಕಾಲ ಚಾರ್ಜಿಲ್ಲದೇ ನಡೆಸಿ ಚಿಕ್ಕ ಚಿಕ್ಕ ಸರ್ವೀಸುಗಳನ್ನು ಮುಳುಗಿಸುವದು ಈಗ ಅನುಭವದ ವಿಷಯವಾಗಿದೆ; ಹಾಗೆಯೇ ನಡೆಸಲ್ಪಡುತ್ತಲೂ ಇದೆ. ಹೀಗೆ ಚಿಕ್ಕ ಸರ್ವೀಸುಗಳನ್ನು ಕೊಂದುಹಾಕಿದ ಮೇಲೆ ದೊಡ್ಡ ಸರ್ವೀಸಿನವರು ತಮ್ಮ ಮನಸ್ಸಿನಂತೆ ಇಷ್ಟೆ ಸ್ಪರ್ಧೆ ಇಲ್ಲದೆ ನಿಯಮ ಮಾಡಿದ ಹೆಚ್ಚಿನ ದರವನ್ನು ಚಾರ್ಜು ಮಾಡುತ್ತಾ ಪ್ರಯಾಣಿಕರ ಸುಖದುಃಖಗಳಿಗೆ ಗಮನಕೊಡದೆ ಸರ್ವೀಸು ನಡೆಸಲು ಅವರಿಗೆ ಎಡೆಯಾಗುತ್ತದೆ. ಇದರಿಂದ ಪ್ರಯಾಣಿಕರಿಗೆ ಕಂಟಕ ನಷ್ಟವೂ, ತೊಂದರೆಯೂ ಉಂಟಾಗುವುದಲ್ಲದೆ ಸರಕಾರದ ಈ ಬಾಬಿನ ಉತ್ಪತ್ತಿಯೂ ಕಡಿಮೆಯಾಗುತ್ತದೆ. ದೊಡ್ಡ ಸರ್ವೀಸಿನೊಂದಿಗೆ ಚಿಕ್ಕ ಸರ್ವೀಸಿಗೆ ಸ್ಪರ್ಧೆಯ ನಡೆಸಲು ಸಾಧ್ಯವಿಲ್ಲದ್ದರಿಂದ ಒಂದು ಲೈನಿನಲ್ಲಿ ಬಲಾಢ್ಯ ಸರ್ವೀಸಿನ ಬಸ್ಸುಗಳು ಮಾತ್ರ ಓಡಾಡುವ ಕಾರಣ ಬಸ್ಸುಗಳ ಸಂಖ್ಯೆಯು ಕಡಿಮೆಯಾಗಿ ಸರಕಾರಕ್ಕೆ ದೊರೆಯುವ ತೆರಿಗೆಯೂ ಕಡಿಮೆಯಾಗುವದು. ಆದುದರಿಂದ ಒಂದು ಲೈನಿನಲ್ಲಿ ಒಂದಕ್ಕಿಂತ ಹೆಚ್ಚು ಬೇರೆ ಬೇರೆ ಸರ್ವೀಸುಗಳು ಇರುವಂತೆ ಮಾಡಿ ಸ್ಪರ್ಧೆಗೆ ಎಡೆ ಕಲ್ಪಿಸುವದು ಅತ್ಯಗತ್ಯವಾಗಿದೆ.

ಈಗಿನ ಸ್ಥಿತಿಯಲ್ಲಿ ಚಿಕ್ಕ ಸರ್ವೀಸುಗಳು ಬಲಾಢ್ಯ ಸರ್ವೀಸುಗಳೊಂದಿಗೆ ಸ್ಪರ್ಧೆ ನಡೆಸಲಾರವೆ ಅಂಥಾ ದೊಡ್ಡ ಸರ್ವೀಸುಗಳ ಶಕ್ತಿಯಂತೆ ಉತ್ಪತ್ತಿಯನ್ನು ವಿಭಾಗಿಸಿಕೊಳ್ಳಲು ಅವುಗಳೊಂದಿಗೆ ಜೊತೆ ಸೇರುತ್ತಿರುವುದು ಕಂಡು ಬರುತ್ತದೆ. ಒಂದು ಲೈನಿನಲ್ಲಿ ಓಡಾಡುವ ಬೇರೆ ಬೇರೆ ಬಸ್ಸು ಸರ್ವೀಸುಗಳು ಹೀಗೆ ಜೊತೆ ಸೇರಿದರೆ ಅದು ಒಂದೇ ಸರ್ವೀಸಿನವರ ಕೆಲವು ಬಸ್ಸುಗಳು ನಡೆಸಲ್ಪಟ್ಟಂತಾಗುತ್ತದೆ. ಸ್ಪರ್ಧೆ ಇಲ್ಲದ್ದರಿಂದ ಅವರಿಗೆ ಮನಸ್ಸು ಬಂದಂತೆ, ನಿಯಮ ಮಾಡಿದ ಹೆಚ್ಚಿನ ದರವನ್ನು ವಿಧಿಸಿ ಚಾರ್ಜು ವಸೂಲುಮಾಡುವರು. ಪ್ರಯಾಣಿಕರು ಯಾವದಾದರೊಂದು ಬಸ್ಸಿನಲ್ಲಿ ಹೋಗಲೇ ಬೇಕಾಗಿರುವುದರಿಂದಲೂ, ಅವರು ಯಾವ ಬಸ್ಸಿನಲ್ಲಿ ಹೋದರೂ ಕನಿಷ್ಠ ಅದೇ ಚಾರ್ಜಿನ ದರವು ಎಲ್ಲಾ ಬಸ್ಸುಗಳಿಗೂ ದೊರೆಯುವುದರಿಂದಲೂ ಹಾಗೆ ಜತೆಗೂಡಿದ ಯಾವ ಬಸ್ಸಿನವರೂ ಪ್ರಯಾಣಿಕರ ಸೌಕರ್ಯಗಳಿಗೆ ಗಮನಕೊಟ್ಟು ಅವರ ಪ್ರೀತಿಯನ್ನು ಸಂಪಾದಿಸುವ ಅಗತ್ಯವಿರುವುದಿಲ್ಲ. ಈ ಸರ್ವೀಸುಗಳ ಉದ್ದೇಶವು ಲಾಭ ಸಂಪಾದನೆಯಾದುದರಿಂದ ತಮಗೆ ಹೆಚ್ಚಿನ ಉತ್ಪತ್ತಿಯು ಸಿಕ್ಕುವಂತಿದ್ದರೆ ಮಾತ್ರ ಅವು ಜನಪ್ರಿಯವಾಗಲು ಯತ್ನಿಸುವವು. ಆದುದರಿಂದ ಪ್ರಯಾಣಿಕರ ಹಿತದ ದೃಷ್ಟಿಯಿಂದ ಆಲೋಚಿಸುವದಾದರೆ ಪ್ರತಿಯೊಂದು ಲೈನಿನಲ್ಲಿಯೂ ಸ್ಪರ್ಧೆಗೆ ಅವಕಾಶವಿರಬೇಕು. ಹೀಗೆ ಸ್ಪರ್ಧೆಗೆ ಅವಕಾಶ ಕಲ್ಪಿಸಬೇಕಾದರೆ ದೊಡ್ಡ ಸರ್ವೀಸುಗಳಿಗೆ ಚಿಕ್ಕ ಸರ್ವೀಸುಗಳು ಬಲಿಯಾಗದಂತಾಗಬೇಕು. ಇದನ್ನು ಸಾಧಿಸಲು ಸರಕಾರದವರು ಬಸ್ಸು ಚಾರ್ಜಿನ ಅತೀ ಕಡಿಮೆ ದರವನ್ನು ನಿಯಮ ಮಾಡಬೇಕು.

ಜನ ಸಾಮಾನ್ಯರ ಹಿತಕ್ಕಾಗಿ ಬಸ್ಸು ಚಾರ್ಜಿನ ಅತೀ ಹೆಚ್ಚಿನ ದರವನ್ನು ನಿಶ್ಚಯಿಸಿರುವ ಅಧಿಕಾರಿಗಳಿಗೆ ಅತೀ ಕಡಿಮೆ ದರವನ್ನು ನಿರ್ಣಯಿಸುವ ಹಕ್ಕು ಇದೆ ಎಂಬುದರಲ್ಲಿ ಸಂಶಯವಿಲ್ಲ. ಈ ಆಧಾರದಿಂದಲೇ ಹೊರ ಪ್ರಾಂತ್ಯಗಳ ಕೆಲವು ಕಡೆಗಳಲ್ಲಿ ರೈಲ್ವೆಗಳೊಂದಿಗೆ ಸ್ಪರ್ಧೆ ನಡೆಸುತ್ತಿರುವ ಬಸ್ಸು ಸರ್ವೀಸುಗಳು ರೈಲ್ವೆ ಚಾರ್ಜಿಗಿಂತ ಕಡಿಮೆ ಮಾಡಕೂಡದೆಂದು ಸರಕಾರದವರು ನಿರ್ಬಂಧನೆ ಮಾಡುವರು; ಕಲ್ಕತ್ತಾ, ಮುಂಬಯಿ ಮುಂತಾದ ದೊಡ್ಡ ಪಟ್ಟಣಗಳಲ್ಲಿ ಬಾಡಿಗೆ ಕಾರು, ಕುದುರೆ ಗಾಡಿ ಮೊದಲಾದವುಗಳ ಚಾರ್ಜಿನ ದರವನ್ನು ಮುನ್ಸಿಪಾಲಿಟಿಯವರು ನಿಗದಿ ಮಾಡಿರುವರು. ಹಾಗೆಯೇ ಕೊಡಗಿನಲ್ಲಿ ಬಸ್ಸು ಚಾರ್ಜಿನ ದರವನ್ನು ನಿರ್ಣಯಿಸುವುದು ಅಗತ್ಯವೂ, ನ್ಯಾಯವೂ ಆಗಿದೆ. ಈ ದೇಶದ ಸ್ಥಿತಿಗತಿಗಳನ್ನು ಗಮನಿಸಿ ತೆಗೆದುಕೊಂಡು ಇಲ್ಲಿ 20 ಮೈಲುಗಳೊಳಗಿನ ದೂರಕ್ಕೆ ಮೈಲಿಗೆ 6 ಕಾಸಿಗಿಂತ ಕಡಿಮೆಯಾಗದೆಯೂ, 20 ಮೈಲುಗಳಿಗಿಂತ ಹೆಚ್ಚಿನ ಪ್ರಯಾಣಕ್ಕೆ ಮೈಲಿಗೆ 4 ಕಾಸಿಗಿಂತ ಕಡಿಮೆಯಾಗದೆಯೂ ಮತ್ತು ಯಾವ ಸಂದರ್ಭದಲ್ಲೂ ಮೈಲಿಗೆ ಒಂದಾಣೆಗಿಂತ ಹೆಚ್ಚಾಗದೆಯೂ ಚಾರ್ಜು ಮಾಡತಕ್ಕದ್ದು ಎಂದು ನಿರ್ಬಂಧನೆ ಮಾಡುವುದು ಯೋಗ್ಯವಾಗಿದೆ. ಹೀಗೆ ಮಾಡದೆ ಈಗಿನಂತೆಯೇ ಬಿಟ್ಟರೆ ಜನರಿಗೂ ಹಾಗೆಯೇ ಸರಕಾರದವರಿಗೂ ಕಷ್ಟನಷ್ಟಗಳು ಸಂಭವಿಸದೆ ಇರದು. ಇದನ್ನು ಅಧಿಕಾರಿಗಳು ಈ ವಿಷಯಕ್ಕೆ ಕೂಡಲೇ ತಕ್ಕ ಗಮನ ಕೊಡುವರಾಗಿ ಹಾರೈಸುತ್ತೇವೆ.

ಕಾಂಗ್ರೆಸಿಗೆ ಸಹಾಯವನ್ನೀಡಿ.

ಸ. ವ. ಪಟೇಲರ ಉಜ್ವಲ ಭಾಷಣ.

ಕಳೆದ ವಾರದಲ್ಲಿ ಡೇರಾಡೂನ್‌ನಲ್ಲಿ ಒಂದು ಸಾರ್ವಜನಿಕ ಸಭೆಯಲ್ಲಿ ಭಾಷಣವನ್ನೀಯುತ್ತ, ಸರದಾರ ವಲ್ಲಭಭಾಯಿ ಪಟೇಲರು ಈ ಪ್ರಕಾರ ಹೇಳಿದರು:—"ಭಾರತದ ದಿವ್ಯ ಧ್ಯೇಯವಾದ ಸ್ವರಾಜ್ಯವು ದೊರೆಯುವ ವರೆಗೆ ಭಾರತೀಯರು ಎದೆಗುಂದದೆ ಧೈರ್ಯವಾಗಿ ತಮ್ಮ ಸ್ವತಂತ್ರ ಹೋರಾಟವನ್ನು ಮುಂದರಿಸುವರು. ಆ ಬಗ್ಗೆ ಎಡೆಬಿಡದೆ ಚಳವಳವನ್ನು ನಡೆಸುವ ಕಾಂಗ್ರೆಸ್ ಸಂಸ್ಥೆಯು ಬಹು ಜನರಿದ್ದಾಗಿರುವುದಲ್ಲದೆ ಧನವಂತರಾಗಿರದಲ್ಲ. ಕಾಂಗ್ರೆಸಿಗೆ ಧನದ ಸಹಾಯವಲ್ಲ ಬೇಕಾಗಿರುವದು; ಜನ ಜನರ ನಿಷ್ಕಳಂಕ ಸಹಾನುಭೂತಿಯೇ ಬೇಕಾಗಿರುವದು. ಅದ್ದರಿಂದ ಪ್ರತಿಯೊಬ್ಬ ಕಾಂಗ್ರೆಸ್ ಕೆಲಸಗಾರನು ಅಂಥ ದಿವ್ಯ ಸಹಾನುಭೂತಿಯ ವಾತಾವರಣವನ್ನುಂಟುಮಾಡಲು ಪ್ರಯತ್ನಿಸಬೇಕು. ಜನ ಜನರು ಕಾಂಗ್ರೆಸ್ಸಿನಲ್ಲಿ ಇಡುವ ದೃಢ ನಂಬಿಕೆಯೇ ಕಾಂಗ್ರೆಸಿನ ಧ್ಯೇಯಸಾಧನೆಗೆ ಅತ್ಯವಶ್ಯವಾದ ಬೆಂಬಲ. ಸಮಸ್ತ ಭಾರತದಲ್ಲಿರುವ 35 ಕೋಟಿ ಜನರನ್ನು ದಾರಿದ್ರ್ಯದ ದ್ವೇಷಗಳ ನಿವಾಸಿಗಳು ಅರ್ಧ ನೇಸ್ತುಗಳ ಮತ್ತು ಪೋಲೀಸು ಬಲಗಳ ಮುಖಾಂತ ಆಳುವರು. ಈ ಕಾರಣದಿಂದ ಅನೇಕರಿಗೆ ಈ ಬಲ್ಕಿಕೆಯಿಂದ ಮುಕ್ತಿ ಹೊಂದುವ ಆಶೆಯೇ ಇಲ್ಲದಾಗಿದೆ. ಆದರೆ ಕಾಂಗ್ರೆಸು ಕೆಲಸಗಾರರು ಈ ಪ್ರಕಾರ ನಿರಾಶೆಗೊಂಡಿರುವದಿಲ್ಲ. ಅಲ್ಲದೆ ಅವರು ಹಾಗೆ ನಿರಾಶರಾಗಲೂ ಬಾರದು. ಅವರ ಪವಿತ್ರ ನಾಡಿನಲ್ಲಿ ಕರ್ಮಯೋಗಿ ಜ್ಯೋತಿಗಳಾದ ಮಹಾತ್ಮರಂಥವರೂ, ತ್ಯಾಗ ಮೂರ್ತಿಗಳಾದ ಜವಾಹರಲಾಲರಂಥವರೂ ಅವತರಿಸಿರುವವರೆಗೆ ನಿರಾಶೆಗೆ ಕಾರಣವಿರುವದಿಲ್ಲ.

ಕಳೆದ ಸತ್ಯಾಗ್ರಹದಲ್ಲಿ ಲಕ್ಷಾವಧಿ ಮಂದಿ ಸ್ತ್ರೀಪುರುಷರು ಕಾರಾಗೃಹವಾಸವನ್ನು ಕೈಕೊಂಡರು. ಅವರ ಅಮೋಘವಾದ ತ್ಯಾಗದಿಂದ ಸ್ವರಾಜ್ಯ ದೊರೆಯಲಿಲ್ಲವೆಂಬ ನಿರಾಶೆಯು ಅವರಲ್ಲಿ ಉಂಟಾಗಿರುವದು. ಆದರೆ ಅವರು ಅವರ ಕಾರ್ಯವನ್ನು ಮೊದಲಿನಂತೆಯೇ ಮುಂದರಿಸಬೇಕು. ಹಾಗೆ ಮಾಡಿದಲ್ಲಿ ಜಯವು ಖಚಿತ. ಬಿಳಿಯರು ಸರಕಾರದವರಲ್ಲಿ ಹಲವು ಬಲವು ಇದೆ. ನಮ್ಮಲ್ಲಿ ಮಹಾತ್ಮರಿಂದ ಪ್ರೇರಿತವಾದ ಆತ್ಮಬಲ ಮಾತ್ರವಿದೆ. ಆತ್ಮಬಲವು ದೈವಸಂಭೂತವಾದ್ದರಿಂದ ಅದಕ್ಕೆ ಸೋಲಿಲ್ಲ. ಸತ್ಯಾಗ್ರಹವು ತಾತ್ಕಾಲಿಕ ನಿಲ್ಲಿಸಲ್ಪಟ್ಟಿರುವ ದಾರಣ ಅದು ಪುನಃ ಪ್ರಾರಂಭವಾಗುವುದು. ಅದು ಯಾವಾಗ ಮತ್ತು ಹೇಗೆ ಆಗುವುದು ಈಗಲೇ ಹೇಳಬರುವದಿಲ್ಲ. ಮಹಾತ್ಮರು ಕಳೆದ ದಂಡಿ ಯಾತ್ರೆಯನ್ನು ಕೈಕೊಂಡಾಗ ಜನರೆಲ್ಲ ಹಾಗೆ ಪ್ರತಿಭಟಿಸುವವರೆಂಬುದರ ಕಲ್ಪನೆಯು ಅವರಿಗಿರಲಿಲ್ಲ. ಅದು ಎಷ್ಟರ ಮಟ್ಟಿಗೆ ಜಯಪ್ರದವಾಯಿತೆಂಬುದು ನಮಗೆ ತಿಳಿದಿದೆ. ಆದರೆ ಮುಂದಿನ ಸತ್ಯಾಗ್ರಹವು 1930—32ಕ್ಕಿಂತ ಪ್ರಬಲವಾದದ್ದಾಗುವದು.

ಸರಕಾರದವರ ದಮನಕಾರ್ಯಗಳು ಪ್ರತಿಯೊಂದು ಹಳ್ಳಿಯಲ್ಲೂ ಮೊಳಗಿರುವಂತೆಯೇ ಹಾಗೆಯೇ ಕಾಂಗ್ರೆಸಿನ ಸಂದೇಶವೂ ಸಹ ಪ್ರತಿ ಹಳ್ಳಿಗಳಲ್ಲೂ ಇರತಕ್ಕದ್ದು. ನಾವು ಶಾಸನಸಭೆಗಳಲ್ಲೂ ಲೋಕಲ್ ಬೋರ್ಡುಗಳ



(ಸರ್ದಾರ್ ವಲ್ಲಭಭಾಯಿ ಪಟೇಲ್)

ಲ್ಲೂ ಮಾತ್ರ ನಮ್ಮಲ್ಲಿನ ಪ್ರತಿನಿಧಿಗಳನ್ನಿರಿಸಿ ಅವರಲ್ಲಿ ಭರವಸೆಯನ್ನಿಡುವದು ನಮ್ಮ ಕೊರತೆಯಾಗಿದೆ. ನಮ್ಮ ಪ್ರತಿನಿಧಿಗಳು ಪ್ರತಿಯೊಂದೆಡೆಯಲ್ಲೂ ಇರಬೇಕು. ಹಳ್ಳಿಗಳಲ್ಲೂ ಹೆಚ್ಚಿನ ಸಂಖ್ಯೆಯಲ್ಲಿರಬೇಕು.

ಕಾಂಗ್ರೆಸ್ಸಿನ ಬಲವು ದಿನೇ ದಿನೇ ವರ್ಧಿಸುತ್ತಲಿರುವದರಿಂದ ನನಗೆ ನಮ್ಮ ಭವಿಷ್ಯವನ್ನು ಕುರಿತು ಎಳ್ಳಷ್ಟೂ ನಿರಾಶೆಯಿಲ್ಲ. ಮಹಾತ್ಮರು ಕಾಂಗ್ರೆಸ್ಸನ್ನು ತ್ಯಜಿಸಿರುವರೆಂಬ ನಿರಾಶೆಯೂ ನನಗಿಲ್ಲ. ಅವರು ವಸಂತ ಕಾಲದ ಸೂರ್ಯನಂತೆ ಮತ್ತೊಮ್ಮೆ ಕಾಂಗ್ರೆಸಿನಲ್ಲಿ ಉದಯಿಸುವರೆಂಬುದೂ ಕಾಂಗ್ರೆಸ್ಸು ನವಚೇತನಭರಿತವಾಗುವದರಲ್ಲಿ ಸಂಶಯವಿಲ್ಲ.

ನಮ್ಮಲ್ಲಿ ಸಂಘಟನೆಯಾಗಬೇಕಾಗಿದೆ. ನಮ್ಮ ಕಾರ್ಯಸಾಫಲ್ಯಕ್ಕೆ, ನಮ್ಮ ಧ್ಯೇಯಸಾಧನೆಗೆ ನಾವು ನಮ್ಮೊಳಗಿನ ಸಣ್ಣ ಪುಟ್ಟ ವಿಚಾರಗಳನ್ನು ಬದಿಗಿಟ್ಟು ಐಕ್ಯಮತ್ಯದಿಂದ ವರ್ತಿಸಬೇಕು. ಈ ಸಣ್ಣ ಪುಟ್ಟ ವಿಚಾರಗಳೂ, ವೈಷಮ್ಯಗಳೂ ಮತ್ತು ವೈಯಕ್ತಿಕ ತೊಡಕುಗಳೂ ಪ್ರತಿಯೊಂದು ಸಮಾಜದಲ್ಲಿರುವವೇ ಅದ್ದರಿಂದ ನಮ್ಮಲ್ಲಿರುವದೂ ಸಹಜವಾಗಿದೆ. ಆದರೆ ಅತೀ ಮುಖ್ಯ ವಿಚಾರವಾದ ಸ್ವಾತಂತ್ರ್ಯ ಹೋರಾಟದ ಕಾರ್ಯದಲ್ಲಿ ಇವಕ್ಕೆ ಪ್ರಧಾನತೆಯನ್ನು ಕೊಡದೆ ಅವುಗಳನ್ನು ಬದಿಗಿಡಬೇಕು. ಬೇರೆ ರಾಷ್ಟ್ರದವರು ತಮ್ಮ ಸ್ವಾತಂತ್ರ್ಯವನ್ನು ಹೊಂದಬೇಕಾದರೆ ಈ ಪ್ರಕಾರದ ಸಣ್ಣ ಪುಟ್ಟ ವಿಚಾರಗಳನ್ನು ಬದಿಗೊತ್ತಿ ದೇಶದ ಸೇವೆಯಲ್ಲಿ ನಿರತರಾದುದರಿಂದಲೇ ಜಯಶೀಲರಾದರು. ಭಾರತದ ಶಕ್ತಿಯಾಗವು ಭಾರತದ ಹಳ್ಳಿಗಳನ್ನವಲಂಬಿಸಿರುತ್ತದೆ. ಅದ್ದರಿಂದ ಹಳ್ಳಿಗಳಲ್ಲಿ ಪ್ರಚಾರ ಮತ್ತು ಸಂಘಟನಾ ಕಾರ್ಯಗಳು ಸಾಗಬೇಕು. ನನಗೆ ಕೌನ್ಸಿಲುಗಳನ್ನು ಹೊಕ್ಕುವದರಲ್ಲಿ ನಂಬಿಕೆಯಿಲ್ಲದಿದ್ದರೂ ಅದರಿಂದ ಪ್ರಯೋಜನವೇ ಇಲ್ಲವೆಂದು ಹೇಳಲಾರೆನು. ಅಲ್ಲಿ ನಮ್ಮವರು ಸೇರಿ ಕೌನ್ಸಿಲುಗಳ ಧೋರಣೆಯನ್ನು ಬದಲಾಯಿಸಲಿ. ಎಲ್ಲೆಲ್ಲೂ ನಮ್ಮ ಕಾರ್ಯಕರ್ತರು ಇದ್ದು ಸ್ವತಂತ್ರ ಹೋರಾಟದ ಧ್ವಜವನ್ನು ಎತ್ತಿ ನಡೆಸಲಿ. ಅದ್ದರಿಂದ ಸಕಲರೂ ಯಾವ ಪಕ್ಷ ವಿಚಾರವನ್ನು ಇರದೆ ಕಾಂಗ್ರೆಸಿನ ಸದಸ್ಯರಾಗಿ ಬಂದು ಪ್ರೋತ್ಸಾಹಕರಾಗಿ ದೇಶದ ಮುಂದಿರುವ ದೃಢಸಂಕಲ್ಪ ಸಾಧನೆಗೆ ದುಡಿಯುವವರಾಗಿ.'

ಕೊಡಗು ಡಿಸ್ಟ್ರಿಕ್ಟ್ ಬೋರ್ಡು ಮೀಟಿಂಗು.

ಈ ತಾ 17 ನೇ ಮಂಗಳವಾರ ಕೊಡಗು ಕೌನ್ಸಿಲು ಹಾಲ್‌ನಲ್ಲಿ ರಾ ಸಾ ಬಿಳಾಮಲೆ ಚಂಗಪ್ಪನವರ ಅಧ್ಯಕ್ಷತೆಯಲ್ಲಿ ಸೇರಿತು. ಸದಸ್ಯರುಗಳೆಲ್ಲರೂ ಹಾಜರಾಗಿದ್ದರು.

(1) ಸಾರ್ವಭೌಮ ಐದನೇ ಜಾರ್ಜ್ ಚಕ್ರವರ್ತಿಗಳ ನಿಧನಕ್ಕೆ ಸಂತಾಪ ಸೂಚಿಸುವ ಮತ್ತು ಈಗಿನ ಚಕ್ರವರ್ತಿಗಳಾದ ಎಂಟನೇ ಎಡ್ವರ್ಡ್ ಚಕ್ರವರ್ತಿಗಳಲ್ಲಿ ರಾಜಭಕ್ತಿಯನ್ನು ಸೂಚಿಸುವ ಠರಾವು ಅಧ್ಯಕ್ಷರಿಂದ ಸೂಚಿಸಲ್ಪಟ್ಟು ವಿರೋಧವಿಲ್ಲದೆ ಪಾಸಾಯಿತು.

(2) 1936—37 ನೇ ವರ್ಷದ ಆದಾಯ ವೆಚ್ಚಗಳ ಬಜೆಟ್ಟನ್ನು ಕುರಿತು ಚರ್ಚೆ ಪ್ರಾರಂಭವಾಯಿತು.

(a) ಡಿ. ಬೋ. ಮೆಂಬರುಗಳ ಪ್ರಯಾಣದ ಭತ್ಯಕ್ಕಾಗಿ ರೂ 2000 ಬಜೆಟ್ಟಿನಲ್ಲಿ ತೋರಿಸಿರುವುದನ್ನು 1500 ಕ್ಕೆ ಇಳಿಸಬೇಕೆಂದು ಮಿ. ಯಂ. ಯಸ್. ರಾಮಶೆಟ್ಟಿಯವರು ಸೂಚಿಸಿದರು. ಸ್ವಲ್ಪ ಚರ್ಚೆ ಆದ ನಂತರ ಸೂಚನೆಯು ಸ್ವೀಕೃತವಾಯಿತು.

(b) ಔಷಧಗಳಿಗೂ ಮತ್ತು ವೈದ್ಯಕೀಯ ಉಪಕರಣಗಳಿಗೂ ಇಡಲ್ಪಟ್ಟಿರುವ ರೂ 14,050 ರ ವಿಷಯದಲ್ಲಿ ಸರ್ಕಾರದವರು ಧಾರಾಳವಾಗಿ ಹಣ ಸಹಾಯ ಕೊಡಬೇಕೆಂದೂ ಇಲ್ಲವಾದರೆ ಆ ಇಲಾಖೆಯನ್ನು ಸರ್ಕಾರದವರೇ ವಹಿಸಿಕೊಳ್ಳಬೇಕೆಂದೂ ರಾ ಬ ಅಪ್ಪಾರಂಡ ಚಂಗಪ್ಪನವರು ಸೂಚಿಸಿದರು. ಮಿ ಯಂ ಯಸ್ ರಾಮಶೆಟ್ಟಿಯವರು "ಸರ್ಕಾರದವರು ಧಾರಾಳ ಹಣ ಸಹಾಯ ಕೊಡಬೇಕೆಂದು" ಠರಾವನ್ನು ತಿದ್ದುಪಡಿ ಮಾಡಿದರು. ತಿದ್ದುಪಡಿ ಪಾಸಾಯಿತು.

(c) ಗ್ರಾಮಾಂತರ ರಸ್ತೆಗಳ ರಿಪೇರಿಗಾಗಿ ರೂ. 13,000 ಇರುವುದನ್ನು 14,500 ಕ್ಕೆ ಏರಿಸಬೇಕೆಂದು ಮಿ. ಸಿ. ಕ. ತಿಮ್ಮಯ್ಯನವರು ಸೂಚಿಸಿದರು. ಆ ಕಮಿಷನರವರು ರೂ 16,000 ಬಜೆಟ್ಟಿನಲ್ಲಿ ಇಡಬೇಕೆಂದು ಸೂಚಿಸಿ ಅದಂತೆಯೇ ಪಾಸಾಯಿತು.

(d) ಶಾಲೆಗಳಿಗೆ ಪಾಠಗಳನ್ನು ಹಾಕಲು ಬಜೆಟ್ಟಿನಲ್ಲಿ ಇಟ್ಟಿರುವ ರೂ. 1000 ರೂ. 1300 ಕ್ಕೆ ಏರಿಸಬೇಕೆಂದು ಆ ಕಮಿಷನರವರು ಸೂಚಿಸಿದ್ದನ್ನು ಒಪ್ಪಲಾಯಿತು.

(e) ಡಿ ಸ್ಟ್ರಿಕ್ಟ್ ಇಂಜಿನಿಯರು 1936—37 ನೇ ವರ್ಷದ ಬಜೆಟ್ ಎಸ್ಟಿಮೇಟನ್ನು ಸರಿಮಾಡಿರಲಾಯಿತು.

ಶಾಲೆಗಳ ಕಟ್ಟೋಣಗಳ ರಸ್ತೆಗಳ ರಿಪೇರಿಗೆ ಬಜೆಟ್ಟಿನಲ್ಲಿ ಕಾದಿರಿಸಿದ ರೂ 15,500 ನ್ನು 12,500 ಕ್ಕೆ ಇಳಿಸಿ ಎಗ್ಸಿಕ್ಯೂಟಿವ್ ಇಂಜಿನಿಯರ್‌ರವರು ಅದನ್ನು ತಮ್ಮ ನಿಷ್ಕರ್ಷೆ ಪ್ರಕಾರ ಖರ್ಚು ಮಾಡುವಂತೆ ತೀರ್ಮಾನಿಸಲಾಯಿತು.

ಈ ಬದಲಾವಣೆಗಳಿಂದ 1936—37 ನೇ ವರ್ಷದ ಬಜೆಟ್ಟು ಒಪ್ಪಲಾಯಿತು.

[ಸ್ವೀಕೃತವಾಗಿರುವ ಬಜೆಟ್ಟಿನಲ್ಲಿ ರೂ. 36,358 ಖರ್ಚು ಆದಾಯವನ್ನು ಮೀರಿರುತ್ತೆ.]

(3) ಸಂಪಾಜೆಯಲ್ಲಿ ಪ್ರತಿ ವರ್ಷವೂ ಅಕ್ಟೋಬರ್ 15 ರಿಂದ ಜೂನ್ 15 ರ ವರೆಗೆ ವಾಕ್ಸಿನೇಟರ್ ಒಬ್ಬನನ್ನು ನೇಮಿಸಬೇಕೆಂದು ಸಿವಿಲ್ ಸರ್ಜನರು ಕೇಳಿಕೊಂಡದ್ದು ಪಾಸಾಯಿತು.

(4) ಖರ್ಚನ್ನು ಸರಿಮಾಡಲು ಎಗ್ಸಿಕ್ಯೂಟಿವ್ ಇಂಜಿನಿಯರು ನೀಡಿದ ವ್ಯತ್ಯಾಸಗಳ ಸ್ಟೇಟ್‌ಮೆಂಟನ್ನು ಒಪ್ಪಲಾಯಿತು.

(5) ಕೊಡಗು ಸ್ಕೌಟು ಸಂಘಕ್ಕೆ ರೂ. 100 ಕೊಡಬೇಕೆಂದು ಡಿ ಇನ್ಸ್‌ಪೆಕ್ಟರವರು ಕೇಳಿಕೊಂಡ ಮೇರೆ ಮಂಜೂರು ಮಾಡಲಾಯಿತು.

(6) ಬಿಟ್ಟಂಗಾಲ ಶಾಲಾ ಕಟ್ಟಡವನ್ನು ಗ್ರಾಮಸ್ಥರಿಗೆ ಬಿಟ್ಟು ಕೊಡಲು ಗ್ರಾಮಸ್ಥರು ಬಂದೊಂದ ಅರ್ಜಿ ಮೇರೆ ಅವರಿಗೆ ಬಿಟ್ಟುಕೊಡಲಾಯಿತು.

(7) ಕೊಡಗು ಡಿಸ್ಟ್ರಿಕ್ಟ್ ಸ್ಕೌಟು ಕಮಿಷನರವರು ಸ್ಕೌಟಿಂಗ್ ಕಾರ್ಯಕ್ಕಾಗಿ ಪ್ರವಾಸ ಮಾಡುವಾಗ್ಯೆ ಪ್ರಯಾಣ ಭತ್ಯ ಕೊಡಬೇಕೆಂದು ಸ್ಕೌಟ್ ಅಸೋಸಿಯೇಷನಿನ ಗವರ್ನರ ಕಾರ್ಯದರ್ಶಿಗಳು ಬರೆದ ತಾ. 9ನೇ ಫೆಬ್ರವರಿಯ ಪತ್ರವನ್ನು ಓದಲಾಗಿ ಅನರಂತೆ ಬಿಟ್ಟುಕೊಡಲು ತೀರ್ಮಾನಿಸಲಾಯಿತು.

(8) ಗೋಣಿಕೊಪ್ಪಲು ಮಾರ್ಕೆಟಿನ ಕಂಟ್ರಾಕ್ಟುದಾರರಾಗಿದ್ದ ಮಿ. ಪಿ. ಹೆಚ್. ಅಬ್ದುಲ್ ರಹಿಮಾನ್ ಸಾಹೇಬರು ರೂ. 100 ಮಾಫಿ ಮಾಡಬೇಕೆಂದು ಬರೆದೊಂದ ಅರ್ಜಿಯನ್ನು ಓದಿ ಮಾಫಿ ಮಾಡುವಂತೆ ತೀರ್ಮಾನಿಸಲಾಯಿತು.

(9) ಬೆಳ್ಳುಮಾಡ ಸೇತುವೆಯ ಕೆಲಸವನ್ನು ಪೂರೈಸಲು ರೂ. 2057 ಮಂಜೂರು ಮಾಡಲಾಯಿತು.

(10) ಮಡಿಕೇರಿಯ ಬಟ್ಟಿ ಜಾಗದಲ್ಲಿಯನ್ನು ಬಿಟ್ಟುಕೊಡಲು ಸಾಧ್ಯವಾಗುವದಿಲ್ಲವೆಂದು ಬಂದಿರುವ ಕೋರ್ಟ ಆಫೀಸರ ಬರೆದ ಪತ್ರ ಓದಲಾಗಿ, ತಿಂಗಳಿಗೆ ರೂ. 6 ಕೊಟ್ಟಲ್ಲಿ ಬಟ್ಟಿ ಜಾಗದಲ್ಲಿಯನ್ನು ನೇಮಿಸುವಂತೆ ತೀರ್ಮಾನಿಸಲಾಯಿತು.

(11) ಪೆಬ್ರವರಿಯಲ್ಲಿ ಜೂನ್ 1 ರಿಂದ ಟೋಲುಗೇಟು ತೆರೆಯುವಂತೆ ತೀರ್ಮಾನಿಸಲಾಯಿತು.

(12) ಅಮ್ಮತ್ತಿಯಲ್ಲಿ ಜಾಗದಲ್ಲಿ ವಾಗಿದ್ದ ಹೆಂಗಸು ತನಗೆ ಪಿಂಚಿನು ಕೊಡಬೇಕೆಂದು ಬರೆದ ಅರ್ಜಿ ಓದಲಾಗಿ ಆಕೆಗೆ ಮೂರು ತಿಂಗಳ ಸಂಬಳವನ್ನು ಕೊಡುವಂತೆ ನಿರ್ಧರಿಸಲಾಯಿತು.

(13) ಡಿ. ಬೋ. ಪ್ರೈಮರಿ ಟೀಚರು ತರಬೇತಿಗೆ ಬರುವಾಗ ರಜೆಯಿಂದ ಮುಂದಾದರಾದ ಮೇಲೆ ಸಂಬಳ ಪಡೆಯುವ ವಿಷಯದಲ್ಲಿ ಎಡ್ಯುಕೇಷನ್ ಇನ್ಸ್‌ಪೆಕ್ಟರರು ಬರೆದ ಪತ್ರ ಓದಿ ಸಂಬಂಧಪಟ್ಟ ನಿಯಮಗಳನ್ನು ಡಿ ಬೋ ಪ್ರೆಸಿಡೆಂಟರೇ ಚೀಫ್ ಕಮಿಷನರವರ ಅನುಮತಿ ಮೇರೆ ಬದಲಾವಣೆ ಮಾಡಬಹುದೆಂದು ತೀರ್ಮಾನಿಸಲಾಯಿತು.

(14) ಕಂಟ್ರಾಕ್ಟು ಪತ್ರ ಬರೆಯುವ ಕೆಲಸ ಸಾವಿರಾರು ಗಳನ್ನು, ಇಂಜಿನಿಯರಿನಲ್ಲಿ ಇಡಬೇಕಾಗುವ ಉತ್ತರಗಳನ್ನು ಸ್ವಲ್ಪ ಕಾಲ ಕಳೆದು ಇತರ ಗಳಿಗೆ ಬಿಡಬೇಕೆಂದು ಆಫೀಸ್ ಗಳಿಗೆ ಕಳಿಸಬೇಕೆಂದು ತೀರ್ಮಾನಿಸಲಾಯಿತು.

(15) ಬೇಕಲ್ ಫಾರೆಸ್ಟ್ ರೇಂಜಿಗೆ ರಸ್ತೆಯನ್ನು ಹಾಕಿಸುವ ವಿಷಯದಲ್ಲಿ ಚೀಫ್ ಕಮಿಷನರು ಸಿದ್ಧಪಡಿಸಿದ ಪತ್ರ ಓದಲಾಯಿತು.

(16) ಮಡಿಕೇರಿ ನಾಡಿನ ಬೆಟ್ಟಗೇರಿ ಬಳಿ ನಾಡಿನ ಲ್ಯಾಂಡ್ ಮೇಜರ್‌ಗೆ 30 ರೂ ಕೊಡಬೇಕೆಂದು ಮಡಿಕೇರಿ ಮುನಿಸಿಪಾಲಿಟಿಯವರು ಬರೆದ ಪತ್ರ ಓದಲಾಯಿತು.

(17) ಕಡಮಕಲ್ ಸ್ಕೂಲಿನ ರಸ್ತೆ ಅಂದರೆ 2 ನೇ ಮೈಲಿನ ಭಾಗದಿಂದ ಭಾಗದವರೆಗೆ ಡಿ ಬೋ ರಸ್ತೆ ಮಾಡಲು ಹಣ ಕೊಡಬೇಕೆಂದು ಕಮಿಷನರು ಬರೆದ ಪತ್ರ ಓದಿ ದಾಖಲೆ ಮಾಡಲಾಯಿತು.

(18) ಡಿ. ಬೋ. ಉದ್ಯೋಗಸ್ಥರಿಗೆ ಸರ್ಕಾರಿ ಉದ್ಯೋಗಸ್ಥರುಗಳಿಗೆ ಕೊಡುವಂತೆ ಬೋನಸ್ ಕೊಡುವ ವಿಷಯದಲ್ಲಿ ಬಂದ ಪತ್ರಗಳನ್ನು ಓದಿ ದಾಖಲೆ ಮಾಡಲಾಯಿತು.

(19) ಸೋಮವಾರಪೇಟೆಯ ಬಳಿ ಮತ್ತು ತಿತಿಮತಿ ಪೋಸ್ಟ್ ಆಫೀಸಿನ (ತಿತಿಮತಿ ಬಳಿ) ಬಾವಿ ತೋಡಲು ಹಣ ಕೊಡಲಾಗುವದಿಲ್ಲವೆಂದು ಕಮಿಷನರವರ ಪತ್ರ ಓದಿ ದಾಖಲೆ ಮಾಡಲಾಯಿತು.

(20) ಡಿ ಬೋರ್ಡ್ ಪ್ರೆಸಿಡೆಂಟರವರ ಐದನೇ ಅಧ್ಯಾಯದಲ್ಲಿ ಚೀಫ್ ಕಮಿಷನರವರು ಮಾಡಿದ ಕೆಲವು ತಿದ್ದುಪಡಿಗಳನ್ನು ಅಂಗೀಕರಿಸಲು ಅನುಮತಿ ನೀಡಲಾಯಿತು.

(21) ಕೋಟೆ ಪಿ ಪಾಸ್ ಬಂದದ್ದನ್ನು ಕೆಡಿಸಬೇಕೆಂದಿದನ್ನು ತಿರಸ್ಕರಿಸಲಾಯಿತು.

(22) ಸಾಪ್ರೋಕ್ಸಿನಲ್ಲಿರುವ ಸೂಲಗಿತ್ತಿಯನ್ನು ಕಸಿನಾರಾಂತರ ವರ್ಗಾಯಿಸಬೇಕೆಂದು ಸಿವಿಲ್ ಸರ್ಜನರು ಬರೆದದ್ದನ್ನು ಅಂಗೀಕರಿಸಲಿಲ್ಲ.

(23) ಸಬ್-ಅಸಿಸ್ಟೆಂಟ್ ಸರ್ಜನರುಗಳ ಸಂಬಳದ ದರವನ್ನು 50—5—100 ಕ್ಕೆ ಇಳಿಸಬೇಕೆಂಬ ವಿಷಯ ಚರ್ಚೆಯಾಗಿ ಚೀಫ್ ಕಮಿಷನರು ಹೊಸ ಸರ್ಕ್ಯುಲರಿನ ಪ್ರಕಾರ ಅನುಸರಿಸುವಂತೆ ತೀರ್ಮಾನವಾಯಿತು.

(24) ಸಬ್ ಅಸಿಸ್ಟೆಂಟ್ ಸರ್ಜನರುಗಳ ಪರ್ಯಾಯಾಧಿಯ ಖರ್ಚನ್ನು ಸರ್ಕಾರದವರೇ ವಹಿಸಿಕೊಳ್ಳಬೇಕೆಂದು ತಿರಸ್ಕರಿಸಲ್ಪಟ್ಟಿತು.

(25) ಗೋಣಿಕೊಪ್ಪಲು ವೈದ್ಯರು ರೋಗಿಗಳ ಬಳಿಯಿಂದ ಬಂದ ಹಣ ಮತ್ತು ನರ್ಸಿಂಗ್ ಬಾಕಿ ವಸೂಲಿಯ ಬಗ್ಗೆ ಸರ್ಕಾರದವರಿಂದ ಬಂದ ಜವಾಬುಗಳನ್ನು ದಾಖಲೆ ಮಾಡಲಾಯಿತು.

(26) ನೊಣ್ಣು ಹೊಳೆಗೂ ಮತ್ತು ಕೀರೆ ಹೊಳೆಗೂ ಸೇತುವೆ ಹಾಕಿಸಬೇಕೆಂದು ಮಿ. ಕಾಳ್ಯಮಾಡ ಪೆಮ್ಮಯ್ಯನವರ ಠರಾವಿನ ಮೇರೆ ಪ್ರತಿಯೊಂದು ಸೇತುವೆಗೆ ರೂ 10 ರಂತೆ ಮಂಜೂರು ಮಾಡಲಾಯಿತು.

(27) ಸಬ್—ಅಸಿಸ್ಟೆಂಟ್ ಸರ್ಜನರುಗಳನ್ನು ಒಂದು ಸ್ಥಳದಲ್ಲಿ ಮೂರು ವರ್ಷಗಳಿಗಿಂತ ಹೆಚ್ಚು ಅವಧಿ ಇಡಬಾರದೆಂಬ ಮಿ ಐನಂಡ ಕಾರ್ಯಪ್ಪನವರ ಠರಾವು ಚರ್ಚೆಗೆ ಬಂದು ಸಿವಿಲ್ ಸರ್ಜನು ಆ ತಕ್ಷಣವೇ ಅನುಸರಿಸುತ್ತಿರುವದಾಗಿ ಎಂದು ಭರವಸೆ ಕೊಟ್ಟದ್ದರಿಂದ ಅವರ ನಿಷ್ಕರ್ಷೆ ಪ್ರಕಾರ ವರ್ಗ ಮಾಡುವಂತೆ ತೀರ್ಮಾನಿಸಲಾಯಿತು.

(28) ಕಸಿನಾರಾಂತರ ವಾರ್ಡುಗಳು ಒಮ್ಮೆ ಕಡಿಮೆ ಮಾಡುವಂತೆ ಹೆಂಚಿನಾಗಿರುವುದರಿಂದಲೂ ರೂ. 240 ವರೆಗೆ ಇದರ ತೆಗೆಯುವದರಿಂದಲೂ ಆ ವಾರ್ಡನ್ನು ಮತ್ತೊಮ್ಮೆ ಹರಾಜು ಮಾಡಬೇಕೆಂಬ ಮಿ. ಸಿ. ಬಿ. ಕಾಳೇಗೌಡರ ಠರಾವು ಚರ್ಚೆಗೆ ಬಂದು ಮೊದಲಿನ ಹರಾಜನ್ನೇ ಖಾಯಂ ಮಾಡುವಂತೆ ತೀರ್ಮಾನಿಸಲಾಯಿತು.

(29) ಕಕ್ಕಬೆ ಸ್ಕೂಲ್ ಕಟ್ಟಡಕ್ಕೆ ರೂ. 2000 ಮಂಜೂರು ಮಾಡಬೇಕೆಂದು ಮಿ ಕಾಳಿಯಂಡ ಪೂಣಚ್ಚನವರು ತಂದ ಠರಾವು ಪಾಸಾಯಿತು.

(30) ಡಿ. ಬೋ. ಶಾಲೆಗಳಿಗೆ ಹಣ ಇಲ್ಲದ್ದರಿಂದ ಸ್ವಲ್ಪ ಸರ್ಕಾರದವರು ರೂ. 2 ಲಕ್ಷ ಸಾಲ ಕೊಡಬೇಕೆಂದು ರಾ ಬ. ಅಪ್ಪಾರಂಡ ಚಂಗಪ್ಪನವರು ಸೂಚಿಸಿದರು. ಮಿ. ಯಸ್. ಪಿ. ರಾಮಶೆಟ್ಟಿಯವರು ಅನುಮೋದಿಸಿದರು, ಠರಾವು ಪಾಸಾಯಿತು.

(31) ಬಂಗುಡಿ ಕಟ್ಟಡಕ್ಕೆ ಮತ್ತು ಇತ್ಯಾದಿಗಳಿಗೆ ಲೈಸೆನ್ಸ್ ದೊರಕಿಸುವುದನ್ನು ಕೈಬಿಟ್ಟು ಕೊಳ್ಳಲು ತೀರ್ಮಾನವಾಯಿತು.

(32) ಈ ವರ್ಷದ ಟೋಲುಗೇಟುಗಳ ಹರಾಜುಗಳನ್ನು ಖಾಯಂ ಮಾಡಲಾಯಿತು.

(33) ಅಭಿಮನ ಮೂರನೇ ಕ್ಲಾರ್ಕ್‌ರು ಹೊಸ ದರದ ಪ್ರಕಾರ ಸಂಬಳ ಕೊಡಬೇಕೆಂದು ಬರೆದಿದ್ದ ಅರ್ಜಿಯನ್ನು ತಿರಸ್ಕರಿಸಲಾಯಿತು.

(34) ಪ್ಲೇಗಿನ ರಜೆಯಿಂದ ತನಗೆ ನಷ್ಟವಾಯಿತೆಂದು ಸಂತೆಯ ವಾರ್ಷಿಕ ಕಂಟ್ರಾಕ್ಟುದಾರರು ಬರೆದಿದ್ದ ಅರ್ಜಿಯ ಮೇರೆ ರೂ. 60 ಮಾಫಿ ಮಾಡುವಂತೆ ತೀರ್ಮಾನಿಸಲಾಯಿತು.

(35) ಅಬ್ದುಲ್ ರಹಿಮಾನ್ ಸಾಹೇಬರ ಠರಾವು ಮೇರೆ ಅಂಜುಮನ್ ಸಂಘಕ್ಕೆ ವಿದ್ಯಾ ಪ್ರಸಾರಕ್ಕಾಗಿ ರೂ. 100 ಮಂಜೂರು ಮಾಡಲಾಯಿತು.

ಸ್ಥಳೀಯ ಸರ್ಕಾರದಿಂದ ಸಾಲ ಕೇಳಿರುವುದರಿಂದ ಜಾತಿಪ್ರಶ್ನೆ ಠರಾವುಗಳನ್ನು ಸಾಲ ದೊರೆತ ನಂತರ ಆಲೋಚಿಸುವಂತೆ ತೀರ್ಮಾನವಾದದರಿಂದ ಸದಸ್ಯರುಗಳು ಕಳುಹಿಸಿದ್ದ ಜಾತಿ ಠರಾವುಗಳೊಂದೂ ಚರ್ಚೆಗೆ ಬರಲಿಲ್ಲ.

ಆರೋಗ್ಯ ವಿಚಾರ.

ಎನಾಮಲ್ ಪಾತ್ರೆಗಳಲ್ಲಿ ಆಂಟಿಮೊನಿ ಎಂಬ ಲೋಹದ ವಿಷ.

ಕೆಲವು ಕಾರ್ಖಾನೆಯವರು ಟಿನ್ ಆಕ್ಸೈಡಿಗೆ ಬದಲಾಗಿ ಆಗ್ಗದಾಗಿ ಸಿಕ್ಕುವ ಆಂಟಿಮೊನಿ ಎಂಬ ಲೋಹದ ಆಕ್ಸೈಡನ್ನು ಉಪಯೋಗಿಸಿ ಎನಾಮಲ್ ಪಾತ್ರೆಗಳನ್ನು ತಯಾರಿಸುವರು. ಇಂಥಾ ಪಾತ್ರೆಗಳ ಉಪಯೋಗದಿಂದ ಅನೇಕ ವೇಳೆ ವಿಷ ಭಕ್ಷಣದಿಂದ ಉಂಟಾಗುವುದು. ಈ ಎನಾಮಲ್ ಪಾತ್ರೆಗಳಿಗೆ ಉಪಯೋಗಿಸುವಂಥಾ ಆಂಟಿಮೊನಿ ಲೋಹದಲ್ಲಿ ಟಾರ್ಟರಿಕ್ ಆಸಿಡ್, ಸಿಟ್ರಿಕ್ ಆಸಿಡ್ ಮೊದಲಾದ ಆಮ್ಲಗಳಲ್ಲಿ ಬಹು ಬೇಗನೆ ಕರಗಿಹೋಗಿ ಪ್ರಭಾವಶಾಲಿಯಾದ ವಿಷವಾಗುವುದು. ಲೆಮನೇಡ್ ಮೊದಲಾದ ಪಾನೀಯಗಳನ್ನು ಮಾಡಲು ಪುಡಿಕ್ಕೆ ಆ ಪಾತ್ರೆಗಳ ಉಪಯೋಗಿಸಲ್ಪಡುವವು. ಇಂಥಾ ಪಾನೀಯಗಳನ್ನು ಆ ಎನಾಮಲ್ ಪಾತ್ರೆಗಳಲ್ಲಿ ಕಾಯಿಸಿದರೆ ಆ ಆಂಟಿಮೊನಿ ಲೋಹದ ಟ್ರೈಯಾಕ್ಸೈಡನ್ನು ಕರಗಿಸಿಬಿಟ್ಟು ವಿಷಸಂಬಂಧವನ್ನು ಉಂಟು ಮಾಡುವುದು. ಈ ವಿಷಗಳಿಂದ ಕರುಳು, ಹೊಟ್ಟೆ, ಮುಂತಾದ ಅಂಗಗಳಿಗೆ ಉರಿಯನ್ನು ಹುಟ್ಟಿಸಿ, ವಾಂತಿ ಮೊದಲಾದ ತೀವ್ರ ಬಾಧೆಗಳಿಗೆ ಕಾರಣವಾಗುವದು. ಕೆಲವು ವೇಳೆ ಈ ವಿಷಸಂಬಂಧದಿಂದ ಥಟ್ಟನೆ ಮರಣವೂ ಉಂಟಾಗಬಹುದು. ಇದಕ್ಕಾಗಿ ಮಿನಿಸ್ಟ್ರಿ ಆಫ್ ಹೆಲ್ತ್ ಇಲಾಖೆಯವರು ಇಂತಹ ಅಗ್ಗವಾದ ಎನಾಮಲ್ ಪಾತ್ರೆಗಳನ್ನು ಉಪಯೋಗಿಸಬಾರದೆಂದು ಜನರಿಗೆ ಎಚ್ಚರಿಸುತ್ತಿರುವರು.

ಕಾಫಿಯಿಂದ ಗಂಡಸರಿಗಿಂತ ಹೆಂಗಸರಿಗೆ ಹೆಚ್ಚು ಅಪಾಯವು.

ಕಾಫಿಯಿಂದ ಗಂಡಸರಿಗಿಂತಲೂ ಹೆಂಗಸರಿಗೆ ಹೆಚ್ಚು ಅಪಾಯವುಂಟು. ಇದು ಮಿಚಿಗನ್ ವಿಶ್ವವಿದ್ಯಾಲಯದ ವೈದ್ಯಕೀಯ ಶಾಲೆಗೆ ಸೇರಿದ ಡಾಕ್ಟರ್ ಕ್ಲಿಫರ್ಡ್ ಹೋರ್ಸ್, ಮತ್ತು ಡಾಕ್ಟರ್ ಜೆ ರಾಬರ್ಟ್‌ಸನ್ ಇವರಿಬ್ಬರೂ ನಡೆಸಿದ ಪರೀಕ್ಷೆಗಳಿಂದ ವ್ಯಕ್ತವಾಗುವುದು. ಮತ್ತು ಅವರು ಈ ವಿಚಾರವನ್ನು ಅಮೇರಿಕಾ ದೇಶದ ಫಾರ್ಮಕಾಲಜಿ ಎಂಡ್ ಎಕ್ಸ್‌ಪೆರಿಮೆಂಟಲ್ ಥೆರಪ್ಯೂಟಿಕ್ಸ್ (ಸೈನ್ಸ್ ಸರ್ವಿಸ್) ಎಂಬ ಸಂಘಕ್ಕನ್ನು ತಿಳಿಸಿರುವರು. ಇವರು ಏಳು ಮಂದಿ ಗಂಡಸರನ್ನೂ ಏಳು ಮಂದಿ ಹೆಂಗಸರನ್ನೂ ಪರೀಕ್ಷೆಗೆ ಒಂದೇ ವಿಧವಾಗಿ ಕಾಫಿ ಕುಡಿಯುವಂತೆ ನಿರ್ಧರಿಸಿದರು. ಉಳಿದ ಆರು ದಿನಗಳಲ್ಲಿಯೂ ಅವರು ಕಾಫಿನ್ ಇಲ್ಲದ ಕಾಫಿಯನ್ನು ಕುಡಿಯುತ್ತಾ ಬಂದರು. ಹೀಗೆ ಕೆಲವು ವಾರಗಳ ವರೆಗೆ ನಡೆಯಿತು.

ಅವರು ಆ ಸಮಯದಲ್ಲಿ ಮಂದಿಯ ಕೈಬೆರಳ ನಡುಕವನ್ನು ಜಾಗ್ರತೆಯಾಗಿ ಅಳತೆ ಮಾಡಿ ಅದರಿಂದ ಕಾಫಿ ಕುಡಿದ ಗುಣ ದೋಷಗಳನ್ನು ನಿರ್ಣಯಿಸಿದರು. ನಿರೀಕ್ಷಣೆಯಿಂದ ಕ್ಕೆ ಅಂಗಗಳ ಕಾರ್ಯಗಳ ನಡುಕಗಳಲ್ಲಿ ವ್ಯತ್ಯಾಸ ಉಂಟಾಗಲಿಲ್ಲ. ಆದರೆ ಕಾಫಿ ಕುಡಿದ ಮೇಲೆ ಕೆಲವು ಗಂಟೆಗಳ ಕಾಲದ ವರೆಗೆ ಆ ನಡುಕದ ವೇಗವು ಹೆಚ್ಚು ಹೆಚ್ಚಾಗಿದ್ದಿತು. ಗಂಡಸರಲ್ಲಿ ಇಂತಹ ಚಿಹ್ನೆಗಳುಂಟಾಗುವುದಕ್ಕೆ ಸ್ತ್ರೀಯರಿಗಿಂತ ಎರಡು ಪಾಲು ಕಾಫೀನ್ ಬೇಕಾಗುವುದೆಂದು ತಿಳಿದು ಬಂದಿತು.

'ರಾ. ಜ.'

ವಿವಿಧ ವಾರ್ತಾವಳಿ.

ಕಳ್ಳರನ್ನು ಹಿಡಿಯುವ ವ್ಯವಸ್ಥೆ.

ದೇವಾಲಯಗಳಿಂದ ದ್ರವ್ಯ ಕದಿಯುವವರು ಹೆಚ್ಚು ಜಾಗ್ರತರಾಗಬೇಕಾಗಿದೆ. ಜಪಾನಿನ ಒಂದು ಬೌದ್ಧ ದೇವಾಲಯದಿಂದ, ಒಬ್ಬನು ದೇವರ ಕೊಳಗದಿಂದ ಹಣ ಕದಿಯಲು ಪ್ರಯತ್ನ ಮಾಡಿದನು. ಕೂಡಲೇ ದೇವಾಲಯದಲ್ಲೆಲ್ಲಾ ಒಂದು ಬೆಲ್ಲು ಬಾರಿಸಲಾಯಿತು. ಎಲ್ಲರಿಗೂ ಎಚ್ಚರವಾಯಿತು, ಕಳ್ಳನನ್ನು ಹಿಡಿದರು. ಇಂಥಾ ಯೋಜನೆಗಳು ನಮ್ಮ ದೇವಾಲಯಗಳಿಗೆ ಬೇಕಾಗಿದೆ.

—೦೦೦—

'ಹಿಂದೂ ಮುಸ್ಲಿಂ ಐಕ್ಯವಾಗಬೇಕು.'

ಕಳೆದ ವಾರದ ಒಕ್ಕಿದಿನ ಸಮಯ, ಮದ್ರಾಸಿನ ತ್ರಿಸೂರ್ ಕಂಭದ ಸಂಸ್ಥೆಯಲ್ಲಿ ಒಂದು ಸಾರ್ವಜನಿಕ ಸಭೆಯು ಜರಗಿತು. ಅನೇಕ ಜಾತಿ ಮತ್ತು ಮತದ ಜನರು ಮುಸ್ಲಿಮರೊಡನೆ ಕೂಡಿದ್ದರು. ಹಿಂದೂ ಮುಸ್ಲಿಂ ಐಕ್ಯವಾಗಬೇಕೆಂದೂ, ಭಾರತೀಯರು ಕೋಮುವಾರು ಭೇದವನ್ನು ಮರೆತುಬಿಡಬೇಕೆಂದೂ ಭಾಷಣಗಳಾದುವು. ಅಲ್ಲಿನ ಪ್ರಮುಖರಾದ ಡಾ. ಪಿ. ವರದರಾಜುಲು ನಾಯುಡುರವರು ಸಭೆಯ ಅಧ್ಯಕ್ಷರಾಗಿದ್ದರು.

—೦೦೦—

ಕೃತಕ ರಬ್ಬರು ಮತ್ತು ಎಣ್ಣೆ.

ಜರ್ಮನಿಯ ವಿಜ್ಞಾನ ಶಾಸ್ತ್ರಜ್ಞರು ಕೃತಕ ರಬ್ಬರನ್ನೂ ಕೃತಕ ಪೆಟ್ರೋಲನ್ನೂ ತಯಾರಿಸಿದ್ದಾರೆ. ಅವುಗಳನ್ನು ಪರೀಕ್ಷಿಸಿ ಉಪಯೋಗಿಸಿದಲ್ಲಿ ಸ್ವಾಭಾವಿಕವಾಗಿರುವ ರಬ್ಬರಿಗಿಂತ ಕೃತಕ ರಬ್ಬರು ಸೇಕಡ 10 ರಿಂದ 30 ರಷ್ಟು ಹೆಚ್ಚು ಬಾಳಿಕೆ ಬರುವುದಾಗಿ ಹಿಟ್ಲರರು ತಿಳಿಸಿದರು. ಜರ್ಮನಿಗೆ ಬೇಕಾಗುವ ಪೆಟ್ರೋಲನ್ನು ನಮ್ಮ ವಿಜ್ಞಾನ ಶಾಸ್ತ್ರಜ್ಞರು ತಾವೇ ತಯಾರಿಸಬಲ್ಲರೆಂದೂ ತಿಳಿಸಿದರು.

—೦೦೦—

ಆಕಾಶದಲ್ಲಿ ಹಾರುವ ಮೋಟರ್ ಬಂಡಿ!

ಅಮೇರಿಕದ ಸಂಯುಕ್ತ ಸಂಸ್ಥಾನಗಳ 'ಓಹಿಯೋ' ಗಿರಿಸ್' ಕಾರ್ಖಾನೆಯವರು ಒಂದು ನೂತನವಾದ ಮೋಟರನ್ನು ತಯಾರಿಸಿದ್ದಾರೆ. ಅದರ ಮೇಲ್ಭಾಗದಲ್ಲಿ ರೆಕ್ಕೆಗಳುಳ್ಳ ಹಾರುವ ಯಂತ್ರವಿದೆ. ಮೋಟರು, ರಸ್ತೆಯಲ್ಲಿ ಓಡುವಾಗ ಆ ರೆಕ್ಕೆಗಳು ತನ್ನಷ್ಟಕ್ಕೆ ಮುಚ್ಚಿಕೊಳ್ಳುವುವು. ಅದರ ಮೇಲಕ್ಕೆ ಹಾರುವ ಸಂದರ್ಭದಲ್ಲಿ ಒಂದು ಯಂತ್ರದ ಸಹಾಯದಿಂದ ಸ್ವಲ್ಪ ಕಾಲದಲ್ಲಿ ಚಕ್ರಗಳನ್ನು ನಡೆಸುವ ಶಕ್ತಿಯಿಂದ ರೆಕ್ಕೆಗಳನ್ನು ನಡೆಸುವ ಹಾಗೆ ಮಾಡುತ್ತಾರೆ. ಕೂಡಲೆ ರೆಕ್ಕೆಗಳು ಬಿಚ್ಚಿ ಮೋಟರು ಆಕಾಶಕ್ಕೇರುವುದು.

—೦೦೦—

ಭೂಕಂಪದ ಕಾರಣಗಳೇನು ?

ಭೂಗರ್ಭದಲ್ಲಿ ಬಂಡೆಗಳು ಒಡೆಯುವುದರಿಂದ ಭೂಕಂಪಗಳು ಉಂಟಾಗುತ್ತವೆ. ಅದಲ್ಲದೆ, ಒಳಗಿರುವ ಮಹತ್ವದ ಬಂಡೆಗಳು ಕುಸಿಯುವುದರಿಂದಲೂ ಭೂಕಂಪನಗಳಾಗುವುದುಂಟು. ಈ ಭೂಮಿಗೆ ಎರಡು ಭೂಕಂಪದ ಪ್ರದೇಶಗಳಿವೆ. ಒಂದು ಸ್ಪೈನ್, ದಕ್ಷಿಣ ಇಟಲಿ, ಕಾಕಸಸ್ಸ ಪರ್ವತ, ಹಿಮಾಲಯ ಪರ್ವತ ಮತ್ತು ಚೀನಾದಿಂದಾಗಿ ಹಾದು ಹೋಗುತ್ತದೆ. ಇನ್ನೊಂದು ಉತ್ತರ ಮತ್ತು ದಕ್ಷಿಣ ಅಮೇರಿಕಾ, ಜಪಾನು ಮತ್ತು ನ್ಯೂಜಿಲೆಂಡಿನಿಂದ ಹಾದು ಹೋಗುತ್ತದೆ.

—೦೦೦—

ಮಹಾ ಯುದ್ಧ.

ಪಶ್ಚಿಮಾಗ್ರದಲ್ಲಿ ಭಯಂಕರ ಯುದ್ಧ ಸಿದ್ಧತೆಗಳು ನಡೆಯುತ್ತಿದೆಯೆಂದೂ, ಅತ್ಯಧಿಕ ಪ್ರಮಾಣ ಮಾಡಿದ ಹಿರ್ ಅಮೇರಿಕಾ ಪತ್ರಿಕಾ ಪ್ರತಿನಿಧಿಗಳಿಂದ ತಿಳಿದು ಬರುತ್ತದೆ. ಈ ಯುದ್ಧವು ಜಪಾನಿಗೂ ರಷ್ಯಕ್ಕೂ ನಡೆಯುವುದು. ಮಂಚೂರಿಯಾ ಮತ್ತು ಸೋವಿಯಟ್ ಗಡಿನಾಡಿನಲ್ಲಿ ಎಲ್ಲೆಲ್ಲೂ ಸಂಗ್ರಾಮ ಸಿದ್ಧತೆಗಳು ಕಾಣಬರುತ್ತಿವೆಯಂತೆ. 1934 ರಲ್ಲಿ ಯುರೋಪು ಹಿಂದಿನದಲ್ಲಿ ನಡೆದಂತೆ. ಜಪಾನಿಯರ ಮಾತಿನ ಪ್ರಕಾರದಲ್ಲಿ, ರಾಜಯೋಜನೆಗಳಿಂದ ಕೂಡಿದ, 50—60 ದೈತ್ಯ ಗಾತ್ರಗಳನ್ನು, ಅಲ್ಲಿನ ಎಲ್ಲಾ ಟ್ರೈನುಗಳಲ್ಲಿ ಜಪಾನಿಯರು ಸಂಗ್ರಹ ಮಾಡುತ್ತಾರೆ, ಅತ್ಯಧಿಕ ಪ್ರಮಾಣ ಮಾಡುವುದನ್ನು ಕಂಡಿರುವರಂತೆ. ಟ್ರಾನ್ಸ್ ಸೈಬೀರಿಯನ್ ಮಾರ್ಗದಿಂದ, ಮಂಚೂರಿಯ ಗಡಿಗೆ, ದಿವಸಕ್ಕೆ—35 ಟ್ರೈನುಗಳು 75 ಗಾಡಿಗಳಿಂದ ಕೂಡಿದ, ಸೈನಿಕರನ್ನು ಯುದ್ಧ ಸಾಮಗ್ರಿಗಳನ್ನು ಸಾಗಿಸುವುದು ಕಂಡು ಬರುತ್ತದೆ. ಅಲ್ಲದೆ ಗಡಿನಾಡಿನ ಪ್ರದೇಶದಲ್ಲಿ ಸಾಧಾರಣ 1000 ವಿಮಾನಗಳನ್ನು, ರಷ್ಯದವರು ತಂದಿರಿಸಿದ್ದಾರಂತೆ.

—೦೦೦—

ಹಿಂದೀಯರಿಗೆ ಅಪಮಾನವಲ್ಲ.

ಹಿಟ್ಲರರು ಹಿಂದೀಯರಿಗೆ ಒಂದು ಅಪಮಾನಕರ ವಾಕ್ಯವನ್ನಾಡಿದ್ದರಂತೆ. ಹೀಗೆ ಹೇಳಿದುದರ ಅರ್ಥವೇನು? ಎಂದು ಒಬ್ಬರು ಹಿಂದೀ ಪ್ರಮುಖರು ಹಿಟ್ಲರರನ್ನು ಸಂದರ್ಶಿಸಿ ಕೇಳಿದರಂತೆ. ಆಗ ಹಿಟ್ಲರರು—'ನಾವು ಹಿಂದೀಯರನ್ನು ಅಪಮಾನಿಸಲಿಲ್ಲ. ಯಾರನ್ನೂ ಅಪಮಾನಿಸಲಿಲ್ಲ. ನಿಮ್ಮ ರಕ್ತ ಬೇರೆ; ಸಂಸ್ಕೃತಿ ಬೇರೆ. ಆದುದರಿಂದ ನಮ್ಮವರು ಇತರರೊಡನೆ ಬೆರೆಯಬಾರದು. ಆಗಬಾರದು ಎಂದಷ್ಟೇ ನಾವು ಹೇಳುವುದು. ಯಹೂದ್ಯರ ವಿಷಯದಲ್ಲಿಯೂ ದೂ ನಮ್ಮ ಅಭಿಪ್ರಾಯವಿಷ್ಟೆ—ನಾವು ಯಾರನ್ನೂ ಹೀನೈಸುವುದಿಲ್ಲ. ನಾವು ಮಾತ್ರ ಬೇರೆಯಾಗಿ ಇರುತ್ತೇವೆ' ಇದಲ್ಲವೇ ಬುದ್ಧಿವಂತಿಕೆಯ ಮಾತು?

ರೈನ್‌ಲ್ಯಾಂಡಿಗೆ ಹಿಟ್ಲರರ ಆಗಮನ.

ತಾ. 12ನೇ ರಾತ್ರಿ ಹಿಟ್ಲರರು ರೈನ್‌ಲ್ಯಾಂಡಿಗೆ ಬಂದು ಒಂದು ಭಾಷಣ ಮಾಡಿದರು. ಇವರು ಭಾಷಣ ಮಾಡಿದ ಪ್ರದೇಶವು ಫ್ರೆಂಚ್ ಎಲ್ಲೆಕಟ್ಟಿನಿಂದ 10 ಮೈಲು ದೂರದಲ್ಲಿತ್ತು. ಸುಮಾರು ಒಂದು ಲಕ್ಷ ಜನರು ಉಪನ್ಯಾಸ ಕೇಳುವುದಕ್ಕೆ ನೆರೆದಿದ್ದರು.

—೦೦೦—

ಫ್ರೆಂಚ್ ಪ್ರಧಾನರ ಹೇಳಿಕೆ

ಫ್ರೆಂಚ್ ಪ್ರಧಾನ ಮಂತ್ರಿಗಳಾದ ಯಂ. ಡಲೆಡಿಯರರು ಹಿಟ್ಲರರ ಪ್ರಸಂಗಕ್ಕೆ ಈ ರೀತಿ ಉತ್ತರಕೊಟ್ಟಿರುವರು.—'ನ್ಯಾಯವಾಗಿ ಒಪ್ಪಿ ಮಾಡಿಕೊಂಡ ಕರಾರು ಒಪ್ಪಂದಗಳನ್ನು ಮುರಿದು ಹಾಕುವುದು ಸರಿಯಲ್ಲ. ಜನಾಂಗ ಸಂಘದ ರಚನೆ ಮತ್ತು ವಿಧಿಸಿದ ಮೇರೆಗೆ ಜರ್ಮನಿಯ ಸ್ಥಾನವನ್ನು ಕಾಪಾಡಬೇಕು. ಫ್ರಾನ್ಸಿಗೆ ಜರ್ಮನಿಯನ್ನು ಆಕ್ರಮಿಸುವುದಾಗಲೀ, ಅಥವಾ ಜರ್ಮನಿಯ ಗೌರವನ್ನು ನಾಶಪಡಿಸುವುದಾಗಲೀ ಉದ್ದೇಶವಿಲ್ಲ. ಫ್ರಾನ್ಸ್ ದೇಶವು ಜರ್ಮನಿಯೊಡನೆ ರಾಜಿಪಂಚಾಯಿತಿಗೆ ಹೋಗುವುದಕ್ಕೆ ಸಿದ್ಧವಿರುವುದು. ಆದರೆ ಜನಾಂಗಗಳೊಡನೆ ಮಾಡಿಕೊಂಡ ಒಪ್ಪಂದಗಳನ್ನು ಮುರಿದು ಹಾಕುವುದಕ್ಕೆ ಫ್ರೆಂಚರು ಒಪ್ಪುವುದಿಲ್ಲ' ಎಂದರು.

—೦೦೦—

ಫ್ರೆಂಚರ ಸೇನಾ ಚಲನೆ.

ಫ್ರೆಂಚ್ ಸಿಪಾಯಿಗಳಿಂದಲೂ, ಟ್ಯಾಂಕುಗಳಿಂದಲೂ, ಯುದ್ಧದ ಮೋಟಾರು ವಾಹನಗಳಿಂದಲೂ ತುಂಬಿದ್ದ 20 ರೈಲು ಬಂಡಿಗಳು ಜರ್ಮನಿಯ ಎಲ್ಲೆಕಟ್ಟಿನ ಕಡೆಗೆ ಹೊರಟಿರುವುವು.

—೦೦೦—

ಬೆಲ್ಜಿಯಮಿನ ನಿರ್ಧಾರ

ಬೆಲ್ಜಿಯಮಿನ ಪ್ರಧಾನ ಮಂತ್ರಿಗಳಾದ ವೇನ್‌ಜ಼ೀಲೆಂಡರು ಲೊಕಾರ್ನೋ ಒಪ್ಪಂದಕ್ಕೆ ಸರಿಯಾಗಿ ತಾವು ನಡೆಯುವುದಾಗಿಯೂ, ಬ್ರಿಟನ್ ಮತ್ತು ಫ್ರಾನ್ಸ್‌ಗಳೊಡನೆ ಸೇರಿ ತಾವು ಕೆಲಸ ಮಾಡುವುದಾಗಿಯೂ ತಿಳಿಸಿದರು.

—೦೦೦—

ಡಚ್ ಸರಕಾರದ ಮುನ್ನೆಚ್ಚರಿಕೆ.

ಡಚ್ ಸರಕಾರದ ಪ್ರಧಾನ ಮಂತ್ರಿಗಳು ತಮ್ಮ ರಾಜ್ಯದ ಸೇನೆಗಳನ್ನು ತಯಾರಾಗಿರುವಂತೆ ಆಜ್ಞೆ ಮಾಡಿದ್ದಾರೆ. ಕಾಲಾಳು ಮತ್ತು ಟೆಕ್ನಿಕಲ್ ಸೇನಾವಿಭಾಗಗಳು ಸದಾ ಉದ್ಯೋಗದಲ್ಲಿರುವಂತೆ ಹುಕುಂ ಕೊಟ್ಟಿರುವರು. ಯೂರೋಪಿನ ಪ್ರಕೃತದ ರಾಜಕೀಯ ಪರಿಸ್ಥಿತಿಯೇ ಇದಕ್ಕೆ ಕಾರಣ.

—೦೦೦—

ಶಾಹಿದ್‌ಗಂಜ್ ಜಗಳದಿಂದ ಸರಕಾರಕ್ಕೆ ನಷ್ಟ.

ಶಾಹಿದ್‌ಗಂಜ್ ಜಗಳದಿಂದಾಗಿ ಪಂಜಾಬು ಸರಕಾರಕ್ಕೆ ರೂ. 2,75 000 ಖರ್ಚಾಗಿದೆಯೆಂದು ಸರ್ಕಾರದ ಅರ್ಥ ಸಚಿವರಾದ ಸರ್ ಜೋಗೇಂದ್ರ ಸಿಂಗ್ ಬಳಿಯಲ್ಲಿ ಪಂಜಾಬಿನ ನ್ಯಾಯವಿಧಾಯಕ ಸಭೆಯಲ್ಲಿ ತಿಳಿಸಿದರು.

—೦೦೦—

ಧೈರ್ಯಶಾಲಿಯಾಗುವಂತೆ ಚಿಕಿತ್ಸೆ.

ಜಪಾನಿನ ಒರ್ವ ವೈದ್ಯನು ಅಂಜುಬುರುಕರನ್ನು ಧೈರ್ಯಶಾಲಿಗಳಾಗುವಂತೆ ಮಾಡಲು ಒಂದು ಔಷಧವನ್ನು ಕಂಡು ಹಿಡಿದಿರುವನಂತೆ! ಈ ಔಷಧವನ್ನು ಅಂಜುಬುರುಕನ ರಕ್ತಕ್ಕೆ 'ಇಂಜಕ್ಷನ್' ಮೂಲಕ ಸೇರಿಸುವರಂತೆ. ಅನಂತರ ಅವನು ತುಂಬಾ ಧೈರ್ಯಶಾಲಿಯಾಗುವನಂತೆ. ಹೀಗೆ ಉಂಟಾದ ಧೈರ್ಯವು ಚಿರಕಾಲ ಇರುವುದಂತೆ!

—೦೦೦—

ಇಂಗ್ಲೆಂಡಿನ ಥೇಮ್ಸ್ ನದಿಯ ಸುರಂಗ.

ಇಂಗ್ಲೆಂಡಿನಲ್ಲಿ 3,000 000 ಪೌಂಡು ವೆಚ್ಚಮಾಡಿ, 1 ಮೈಲಿಗೆ ಹೆಚ್ಚಾಗಿ ಉದ್ದವಿರುವ 20 ಅಡಿ ವ್ಯಾಸವುಳ್ಳ ಅಲ್ಲಿನ ಎರಡು ಪಟ್ಟಣಗಳನ್ನು ರೈಲ್ವೆಯ ಮೂಲಕ ಜೋಡಿಸಲು ಒಂದು ಸುರಂಗವನ್ನು ತೋಡುವದಾಗಿ ತಿಳಿದುಬರುತ್ತದೆ. ಈ ಸುರಂಗವು ಅಲ್ಲಿನ ಥೇಮ್ಸ್ ನದಿಯ ಅಡಿಯಿಂದ ಹಾದು ಹೋಗುವುದು. ಇದೊಂದು ಮಹತ್ವಾದ ಸಾಹಸವೆನ್ನಬಹುದು. ಈ ಸುರಂಗದಲ್ಲಿ ಬೇಕಾದ ಗಾಳಿಯನ್ನು ಹೊರಗಿನಿಂದ ಒದಗಿಸುತ್ತಿರುವರಂತೆ.

—೦೦೦—

ಸಮುದ್ರದಲ್ಲಿನ ನೀರು ಉಪ್ಪಾಗಲು ಕಾರಣವೇನು?

ಸಮುದ್ರದ ನೀರು ಉಪ್ಪಾಗಲು ಕಾರಣ ಅದಕ್ಕೆ ಸೇರುವ ನದಿಗಳಿಂದ. ಈ ನದಿಗಳು ಭೂಮಿಯ ಮೇಲಿಂದ ಹರಿಯುತ್ತಿಂದು ಬರುತ್ತಿರುವಾಗ ಅನೇಕ ಲವಣಗಳನ್ನು ಕರಗಿಸಿ ತರುತ್ತವೆ. ಸೂರ್ಯನ ಬಿಸಿಲಿಗೆ ಸಮುದ್ರದ ನೀರು ಆವಿಯಾಗಲು ಸಮುದ್ರದ ಉಪ್ಪಿನಾಂಶವು ಅಧಿಕವಾಗುತ್ತದೆ. ಸಮುದ್ರದ ಪ್ರತಿಯೊಂದು ಗ್ಯಾಲನ್ ನೀರಿನಲ್ಲಿ 4 ಔನ್ಸು ಉಪ್ಪಿರುತ್ತದೆ. ಸಮುದ್ರದ ಎಲ್ಲಾ ಉಪ್ಪು ತೆಗೆಯುವುದಾದರೆ ಅದನ್ನು ಶೇಖರಿಸಿ ಇಡಲು 5,000,000 ಕ್ಯೂಬಿಕ್ ಮೈಲುಗಳ ಪ್ರಮಾಣವಿರುವ ಉಗ್ರಾಣ ಬೇಕಾಗುವುದು.

—೦೦೦—

ಬಿಳಿ ಗುಲಾಮರು.

ಅಮೇರಿಕದಲ್ಲಿ ಗುಲಾಮಗಿರಿಯು ಸಂಪೂರ್ಣವಾಗಿ ನಾಶವಾಗಿಲ್ಲ. ಅದರಲ್ಲಿಯೂ ವಿಶೇಷವೇನೆಂದರೆ ಬಿಳಿ ಜನರನ್ನು ಗುಲಾಮರನ್ನಾಗಿ ವಿಕ್ರಯಿಸುತ್ತಿದ್ದಾರೆ. ಅಮೇರಿಕದ ಪೋಲೀಸರು 41 ಕಡೆಗಳಲ್ಲಿ ಒಟ್ಟಿಗೆ 71 ಮಂದಿ ಗುಲಾಮರನ್ನು ದಸ್ತಗಿರಿ ಮಾಡಿದ್ದಾರೆ. ದೇಶದ ಎಲ್ಲಾ ಭಾಗಗಳಿಂದ ಲಕ್ಷ ಸುಮಾರು 2000 ಮಂದಿ ಹುಡುಗಿಯರನ್ನು ನ್ಯೂಯಾರ್ಕಿಗೆ ತಂದಿರುವುದಾಗಿ ಪೋಲೀಸರು ಊಹಿಸುತ್ತಾರೆ.

—೦೦೦—

ಎರಡಾಣೆ ಕಿಮ್ಮತ್ತಿನ ಟೆಲಿಗ್ರಾಮುಗಳು.

ಹದಿನೈದು ಶಬ್ದಗಳಿಂದ ಕೂಡಿದ ಟೆಲಿಗ್ರಾಮು (ಎಡ್ರೆಸು ಕೂಡ) ಇನ್ನು ಎರಡಾಣೆ ಕೊಟ್ಟಲ್ಲಿ ಜಪಾನಿನ ಟೋಕಿಯೋದಿಂದ ಜಪಾನಿನ ಯಾವತ್ತೂ ಭಾಗಗಳಿಗೂ, ನಾಲ್ಕಾಣೆ ಕೊಟ್ಟಲ್ಲಿ ಬಾಹ್ಯ ದೇಶಗಳಾದ ಮಂಚೂರಿಯಾ ಇತ್ಯಾದಿಗಳಿಗೂ ಕಳುಹಿಸಬಹುದಂತೆ! ನಾಲ್ಕಾಣೆ ಕೊಟ್ಟಲ್ಲಿ ಟೆಲಿಗ್ರಾಮುಗಳನ್ನು ರೇಡಿಯೋ ಮೂಲಕ ಅಲ್ಲಲ್ಲಿ ಸಂಚರಿಸುತ್ತಿರುವ ಜಪಾನಿಯ ನಾವಿಕರಿಗೆ ಕಳುಹಿಸಬಹುದಂತೆ. ನವವರ್ಷದ ಸಂದೇಶಗಳನ್ನು ಕಳುಹಿಸಲು ಜಪಾನಿಯ ಸರಕಾರದ ವಿಶೇಷ ದಯೆಯಿತು. ಅಲ್ಲಿಯ ಸಹಜವಾದ ದರವು ನಾಲ್ಕಾಣೆ (15 ಶಬ್ದಗಳು ಮತ್ತು ಎಡ್ರೆಸು)

—೦೦೦—

ಹಿಂದೂ ದೇಶದಲ್ಲಿ ಅಮೇರಿಕನ್ ಪ್ರವಾಸಿಗಳು.

ಅಮೇರಿಕಾದ ಕೆಲವು ಮಹಾಶಯರು ಈಗ ಹಿಂದೂ ದೇಶವನ್ನು ನೋಡುತ್ತಿದ್ದಾರೆ. ಇವರ ತಂಡವೊಂದು ಮೊನ್ನೆ ಒಂದು ಸ್ಪೆಶ್ಯಾಲ್ ಟ್ರೈನಿನಲ್ಲಿ ಮದ್ರಾಸಿಗೆ ಬಂದಿತ್ತು. ಹಿಂದೂದೇಶವನ್ನು ಕಂಡು ಬಹಳ ಕೃತಜ್ಞತೆಪಡುತ್ತಾರೆ. ಇವರಲ್ಲೊಬ್ಬರು ಹಿಂದೂ ದೇಶದ ಕುರಿತು ಅಮೇರಿಕಾದಲ್ಲಿ ಪ್ರಸಿದ್ಧಿಯಲ್ಲಿರುವ ಗ್ರಂಥಗಳು ಅದರ ನಿಜವಾದ ಚಿತ್ರ ಕೊಡುವುದಿಲ್ಲವೆಂದೂ, ಹಿಂದೂ ದೇಶದ ನಿಜವಾದ ಚಿತ್ರಗಳನ್ನು ಕೊಡುವ ಗ್ರಂಥಗಳು ಬೇಕಾಗಿವೆ ಎಂದೂ, ಮಿಸ್ ಮೇಯೋ ಪುಸ್ತಕವು ಅದರಲ್ಲಿ ಅನೇಕ ತಪ್ಪಭಿಪ್ರಾಯಗಳನ್ನು ಉಂಟುಮಾಡುತ್ತದೆಂದೂ ತಿಳಿಸಿದರು. ಅಮೇರಿಕಾವು ಪಾಶ್ಚಾತ್ಯದ ಕಲಹದಲ್ಲಿ ಸೇರುವುದಿಲ್ಲವೆಂದು ಇವರಿಂದ ತಿಳಿದುಬಂತು. ಹಿಂದೂದೇಶದ ಪತ್ರಿಕೆಗಳನ್ನು (ಇಂಗ್ಲೀಷು ಪತ್ರಿಕೆ) ಬಹಳ ಕೊಂಡಾಡಿದರು. ಮಹಾತ್ಮ ಗಾಂಧಿಯವರ ಬಗ್ಗೆ ಸಮಸ್ತ ಅಮೇರಿಕಾ ಖಂಡಕ್ಕೂ ಇರುವುದೆಂದು ಇವರಿಂದ ತಿಳಿಯಿತು. ಹಿಂದೂ ದೇಶದ ಪ್ರಾಚೀನ ವೈಭವಗಳನ್ನು ನೋಡಿ ಇವರು ಬೆರಗಾಗಿರುವರು.

—೦೦೦—

Reg. No. M. 1550 — KODAGU — **20—3—1936**

IF NOT *delivered* *please return to* "KODAGU" OFFICE, MERCARA.

ಕೊಡಗು

ಅಚ್ಚುಮೊಳೆಯ ಮುದ್ರಣ ಕೆಲಸಕ್ಕೆ "ಕೊಡಗು" ಪ್ರೆಸ್, ಮಡಿಕೇರಿ.
—•—
ಚಾರ್ಜಿನ ವಿಷಯಕ್ಕೆ ಕೂಡಲೆ ವಿಚಾರಿಸಿ.

[illegible]

ಪ್ರತಿ ಶುಕ್ರವಾರ ಪ್ರಕಟಿಸಲ್ಪಡುವದು.

ವಾರ್ಷಿಕ ಚಂದಾ ರೂ. ೩—೮—೦.   ಸಂಪಾದಕ—ಪಂದ್ಯಂಡ ಐ. ಬೆಳ್ಯಪ್ಪ

ಸಂಪುಟ ೧೫]   ಮಡಿಕೇರಿ, ತಾ. ೨೦—೩—೧೯೩೬   [ಸಂಚಿಕೆ ೪೭

Telephon: 3145 | By Appointment To H. E. The Governor of Madras. | Telegrams 'PRECIOUS.'



V. SUBRAMANIA IYER.

Jeweller, & Diamond Merchant,

52—17   2 & 3 Kuppumuthu Street Tiruvateswaranpet. POST BOX 423 TRIPLICANE. P O, MADRAS.

Catalogue & special designs with quotations (free) on enquiry

BANKING FACILITIES OF EVERY DESCRIPTION.

Head office.—UDIPI

BRANCHES.—
1. Madras.
2. Coondapoor.
3. Car Street Mangalore
4. Bunder, Mangalore
5. Shimoga
6. Udipi
7. Mercara.
8. Virarajendrapet

Security.

The financial strength and integrity of this Bank is shown by the growth of the RESERVES from a modest sum of Rs 83000 in 1927 to its present position with Rs 3.64.644

BANKERS AT—
1. Bombay.
2. Calcutta
3. Karachi
4. Bangalore.
5. Mysore
6. Calicut.
7. Cannanore
8. Cochin, and other important places.

To those thinking of investments the following figures should strongly appeal.

Capital Authorised, issued and subscribed—Rs 3 50,000
Paid up Rs. 2.80 750
Deposits—Rs 27,99.323.   Working Capital—Rs 35.66.707.

Fixed Deposits now received upto 5%.

The Canara Banking Corporation Udipi Limited.

52—18   Estd. 1906.

ಜನರಲ್

ಅಷ್ಯೂರೆನ್ಸ್ ಸೊಸೈಟಿ, ಲಿಮಿಟೆಡ್.

(ಸ್ಥಾಪಿತವಾದದ್ದು 1907 ರಲ್ಲಿ)

ಜೀವವಿಮೆಯಲ್ಲಿನ ಅತ್ಯುತ್ತಮ ಸೌಲಭ್ಯಗಳನ್ನೆಲ್ಲ ಕೊಡುತ್ತದೆ.

ಬೋನಸ್ಸು ಅತೀ ಹೆಚ್ಚು.

ಜೀವಾವಧಿ ಪಾಲಿಸಿಗಳ ಮೇಲೆ ವರ್ಷಕ್ಕೆ ರೂ 25%o
ಎಂಡೋವ್ಮೆಂಟ್ ಪಾಲಿಸಿಗಳ ಮೇಲೆ ವರ್ಷಕ್ಕೆ ,, 20%o
ಪಾಲಿಸಿಯ ಶರತ್ತುಗಳು ಅತೀ ಸುಲಭ
ಇನ್ಶೂರೆನ್ಸ್ ಯೋಜನೆಗಳು ಎಲ್ಲರಿಗೂ ಹಿತಕರವಾಗಿದೆ
ಏಜೆನ್ಸಿ ನಿಯಮಗಳು ಅತೀ ಲಾಭದಾಯಕವಿದ್ದು
ವಂಶಪಾರಂಪರ್ಯ ಕಮಿಶನ್ ದೊರೆಯುವಂತಿದೆ
ಹೆಚ್ಚಿನ ವಿವರಗಳಿಗೆ ಕೂಡಲೇ ಬರೆಯಿರಿ

ಟಿ. ಡಿ. ಭಾರ್ಗವ, ಎಮ್. ಎಸ್. ಎಸ್. (ಲಂಡನ್)
ಜನರಲ್ ಮೇನೇಜರ್, ದಿ ಜನರಲ್ ಅಷ್ಯೂರೆನ್ಸ್ ಸೊಸೈಟಿ ಲಿಮಿಟೆಡ್, ಅಜ್ಮೀರ್. ಅಥವಾ.—
ಎ. ಎಸ್ ಎಸ್ ಅಯ್ಯಂಗಾರ್,
ಸುಪರಿಂಟೆಂಡೆಂಟ್, ಜನರಲ್ ಅಷ್ಯೂರೆನ್ಸ್ ಬಿಲ್ಡಿಂಗ್, ಚಾಮರಾಜಪೇಟೆ, 3ನೇ ರೋಡ
ಬೆಂಗಳೂರು

52—41

ಪ್ರಕಟಣೆ.

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್, ಲಿಮಿಟೆಡ್, ಕೊಡಗು ಕೋಆಪರೇಟಿವ್ ಸೊಸೈಟೀಸ್ ಅಲ್ಲಿ ಪ್ರಕಾರ ರಜಿಸ್ಟರಾಗಿದೆ.

(ಸ್ಥಾಪಿತವಾದದ್ದು 1922ರಲ್ಲಿ)

		ರೂ.
ಶೇರ್ ಬಂಡವಾಳ	—	50,000— 0—0
ವಸೂಲಾದ ಶೇರ್ ಮೊಬಲಗು	—	37,181— 0—0
ಠೇವಣಿ	—	25,9035—8—10
ಖಾಯಂ ನಿಧಿ	—	1,03851— 4—0

ಈ ಬ್ಯಾಂಕಿನಿಂದ ಕೊಡಗು ... ಸಹಕಾರಿ ಸಂಘ ... ಸಾಲ ಕೊಡಲಾಗುತ್ತದೆ.

ಒಂದು ವರ್ಷ ... ಠೇವಣಿದಾರರಿಗೆ ಶೇಕಡ ... ರೂ. 4-8-0 ... ವರ್ಷದ ಠೇವಣಿಗಳಿಗೆ ಶೇಕಡ ... 4 ರ ದರದಲ್ಲಿಯೂ ಬಡ್ಡಿ ಕೊಡಲಾಗುತ್ತದೆ.

... ಅಪೇಕ್ಷಿಸುವವರು ... ನೋಡಬಹುದು.

ಪ್ರೆಸಿಡೆಂಟರು, — ಕ್ಯಾಪ್ಟನ್ ... ಬೆಳ್ಯಪ್ಪನವರು. — ರಾ. ಸಾ. ... ಬೋಪಣ್ಣನವರು,

ಸೆಕ್ರೆಟರಿ — ... ಬೆಳ್ಯಪ್ಪನವರು.

ಮಡಿಕೇರಿ, 1—2—1936.

ಭಾರತದ ... ಆರೋಗ್ಯ ... ಹೆಚ್ಚು ... ಬಾಲಾಮೃತವನ್ನು ...

ರೋಹಿಣಿ ಬಾಲಾಮೃತವನ್ನೆ

ಕೊಡಬೇಕು. ರೋಹಿಣಿ ಬಾಲಾಮೃತವು ಒಂದು ಟಾನಿಕ್. ... ದೊರೆಯುವುದು.

ತಯಾರಕರು:—

ಕೆ. ಟಿ. ದೊಂಗ್ರೆ ಕಂಪೆನಿ,

(52—2) ಗಿರಿಗಾಂವ್, ಬೊಂಬಾಯಿ.

EMPIRE OF INDIA LIFE ASSURANCE CO., LTD.

ESTD. 1897.

TEN YEARS' PROGRESS.

	1935 Rs.	1925 Rs.
Income	45,50,127	73,28,467
New Assurances	78,07,000	1,47,57,880
Total Assets	2,46,08,120	4,50,03,372
Assurances in force	6,95,93,793	11,56,12,828

Form of proposal and other particulars will be sent on Application.

Head office:— **Empire of India Life Building, BOMBAY.** 52—16 Branch Office:— **152/3—Commercial Street, BANGALORE.**

ಪಂಡಿತ ಜವಾಹಿರಲಾಲ್ ನೆಹರೂ ಬಂದಾಗ್ಗೆ ಹುಬ್ಬಳ್ಳಿ ಪ್ರದರ್ಶನದಲ್ಲಿ

ಸುವರ್ಣ ಪದಕವನ್ನು ಪಡೆದ,

... ಶಕ್ತಿವರ್ಧಕ ಉತ್ತಮ ತರಗತಿಯ ಟಾನಿಕ್

... ಬಾಟ್ಲಿ ...

ಬೆಲೆ—1 ಬಾಟ್ಲಿಗೆ ರೂ. 1—4—0, 3 ಬಾಟ್ಲಿಗೆ ರೂ. 3—8—0, 1 ಡಜನ್ ಬಾಟ್ಲಿಗಳಿಗೆ ರೂ. 1?—0—0;

ಮ್ಯಾನೇಜರು:—ದ್ರಾಕ್ಷಾಸ್ಮುರಿ ... (ಬೆಳಗಾವಿ.)

52—27 ಕೊಡಗಿನ ಏಜಂಟರು.—ನಾವಲ್ಲಿ ಸ್ಟೋರ್ಸ್, ಮಡಿಕೇರಿ

... ಶೆಟ್ಟಿ & ಸನ್ ...

ಫರ್ಮ್ ಬ್ರದರ್ಸ್, ... | ಎ. ಎನ್. ಸುಬ್ಬಯ್ಯ, ...

ಓರಿಯಂಟಲ್ ಗವರ್ನಮೆಂಟ್ ಸೆಕ್ಯೂರಿಟಿ

ಜೀವ ವಿಮೆ ಕಂಪೆನಿ ಲಿಮಿಟೆಡ್.

(... ಸ್ಥಾಪಿತವಾದದ್ದು) (ಹೆಡ್ ಆಫೀಸು—ಬೊಂಬಾಯಿ.)

1934ನೇ ಇಸವಿಯ ಕಂಪೆನಿಯ ಕೆಲಸದ ಫಲಿತಾಂಶ—

ಹೊಸ ಪಾಲಿಸಿಗಳ ಪ್ರೀಮಿಯಂ	ರೂ.	7,62,42,761
ವಾರ್ಷಿಕ ಉತ್ಪತ್ತಿ	ರೂ.	3,11 01,970
ಚಾಲ್ತಿಯಲ್ಲಿರುವ ಒಟ್ಟು ಪಾಲಿಸಿಗಳು	ರೂ.	54,20,38,518
ಕ್ಲೇಯಿಮ್ಸ್‌ಗಳಿಗೆ ಕೊಟ್ಟ ಒಟ್ಟು ಹಣ	ರೂ.	16 29 88 814
ಫಂಡ್ಸ್ ಹೆಚ್ಚಳ	ರೂ.	15 53,88 843

ಈ ಮೇಲಿನ ಫಲಿತಾಂಶಗಳು "ಓರಿಯಂಟಲ್" ಕಂಪೆನಿಯ ಸುಸಂಘಟಿತೆಯನ್ನು ಮತ್ತು ಪ್ರಸಿದ್ಧಿಯನ್ನು ವಿಶದಗೊಳಿಸುತ್ತವೆ

ಈ ಪ್ರಸಿದ್ಧಿಗೊಂಡಿರುವ ಮತ್ತು ಅಭಿವೃದ್ಧಿಗೊಳ್ಳುತ್ತಿರುವ ... ಕಂಪೆನಿಯಲ್ಲಿ ವಿಮೆ ಇಳಿಸಲು ...

ಹೆಚ್ಚಿನ ವಿವರಗಳಿಗೆ ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳತಕ್ಕದ್ದು:—

ಮೇನೇಜರ್, ಓರಿಯಂಟಲ್ ಬಿಲ್ಡಿಂಗ್ಸ್, ಬೊಂಬಾಯಿ.

ಅಥವಾ ಕಂಪೆನಿಯ ಈ ಕೆಳಗಿನ ಯಾವ ಆಫೀಸಿಗಾದರೂ ಬರೆಯಬಹುದು.

ಆಗ್ರ	ಕಲ್ಲಿಕೋಟೆ	ಕರಾಚಿ	ಮೊಂಬಾಸ	ರಂಗೂನು
ಅಹ್ಮದಾಬಾದು	ಕಲ್ಕತ್ತ	ಕೋಲಾಲಂಪೂರು	ನಾಗಪೂರ	ರಾವಲ್ಪಿಂಡಿ
ಅಜ್ಮೀರ್	ಕೊಲಂಬೊ	ಲಾಹೋರ್	ಪಾಟ್ನ	ಸಿಂಗಪೂರ
ಅಲಹಾಬಾದು	ಢಾಕಾ	ಲಕ್ನೌ	ಪೂನ	ಸುಕ್ಕೂರು
ಬೆಂಗಳೂರು	ಡೆಲ್ಲಿ	ಮದ್ರಾಸು	ರಾಯಪೂರ	ತಿರುಚಿನಾಪಳ್ಳಿ
ಬೈರೂತಿ	ಗೌಹತಿ	ಮಂಡಲೆ	ರಾಜಕೋಟು	ತ್ರಿವೆಂಡ್ರಮ್
ಬರೇಲಿ	ಜಲಗಾಂ	ಮಂಗಳೂರು	ರಾಂಚಿ	ವಿಶಾಖಪಟ್ಣ
ಕೊಯಮುತ್ತೂರು	ಗುಂಟೂರು	ಜಬ್ಬಲ್ಪೂರ ...	...	ಮಧುರೆ & ವೈಜಗ

ಓರಿಯಂಟಲ್ ಬಿಲ್ಡಿಂಗ್ಸ್, ಸೌತ್ ಪೆರೇಡ್, ಬೆಂಗಳೂರು, 52—9 ರಾ. ವಿ. ... ನಾಯುಡು, (ಬ್ರಾಂಚ್ ಸೆಕ್ರೆಟರಿ.)

Printed & published by P I Belliappa at "Kodagu" Press Mercara for 'Kodagu' Ltd.

ಡಾಕ್ಟರ್ ಮೋತ್ಯಾಸ್ ಎಬ್ರಹಾಮ್.
ದಂತ ವೈದ್ಯರು.
ಗೀತಾಂಜಲಿ ಬಿಲ್ಡಿ.
(ಪೋಸ್ಟಾಫೀಸು ಎದುರುಗಡೆ)

ಸಕಲ ಹಲ್ಲುರೋಗಗಳನ್ನು ಶೀಘ್ರವಾಗಿ ಗುಣಪಡಿಸುವದಲ್ಲದೆ, ಸುಂದರವಾದ ಕೃತ್ರಿಮ ಹಲ್ಲುಗಳನ್ನು ಮನ ಒಪ್ಪುವಂತೆ ಕಟ್ಟುವರು. ಒಮ್ಮೆ ಪರೀಕ್ಷಿಸಿದಲ್ಲಿ ತಿಳಿಯುವುದು [52—21]

---

೪೦ ವರ್ಷಗಳಿಂದ ಅನುಭವದಿಂದ ಪ್ರಖ್ಯಾತಿ ಹೊಂದಿದ

ಕರ್ಕಿ ಕಂಪನಿ

ಜ್ವರದ ಗುಳಿಗೆಗಳು.

ಚಳಿಜ್ವರ, ಚಾತುರ್ಥಿಕ ಜ್ವರ, ದಿನಬಿಟ್ಟು ಬರುವ ಜ್ವರ, ಮಲೇರಿಯಾ ಜ್ವರ ಇತ್ಯಾದಿ ಜ್ವರಗಳ ಮೇಲೆ ರಾಮಬಾಣದಂತೆ ಇವೆ. ಬಾಟ್ಲಿಗೆ ರೂ. ೧. ಟಿ. ಪಿ. ಓ. ಅಣೆ. ಬರೆದು ತರಿಸಿಕೊಳ್ಳಿ.

ಗಣೇಶ ರಾಮಚಂದ್ರ ಕರ್ಕಿ.

(2—23) ಕರ್ಕಿ ಕಂಪನಿ, ಸಿರಗಾಂವ, ಮುಂಬಯಿ.

SHIROMANI NARAYANACHARYA
Choukhamba Benares City.

ಶಾಸ್ತ್ರಗಳೇ, ಪುರಾಣಗಳು ಆರೋಗ್ಯದ ಲಕ್ಷಣ ತಿಳಿಸುವದೇ? ರಾಮಾಯಣಾದ್ಯನವರೇ. ಪೂರ್ವಿಕರ ಆರೋಗ್ಯವೇ ಸಹಜವಾದ ಆರೋಗ್ಯ. ಅದಕ್ಕೆ ಕಾರಣವೇನು? ಅವರು ರುದ್ರಾಕ್ಷಿಯನ್ನು ಬಹಳ ರೀತಿಯಾಗಿ ಧಾರಣೆಮಾಡುತ್ತಿದ್ದರು. ಅದರಿಂದ ಏನು ಫಲ? ಅದನ್ನು ಧರಿಸಿದರೆ ಜೀವಶಕ್ತಿ, ಬುದ್ಧಿಶಕ್ತಿ, ವಿದ್ಯಾಭಿವೃದ್ಧಿ, ದೀರ್ಘವೃದ್ಧಿ ಸಂಪತ್ತು, ಕೀರ್ತಿ ಇವುಗಳೆಲ್ಲಾ ಆಗುವು. ಹಾಗಾದರೆ ನಮಗೆ ಅಂತಹ ರುದ್ರಾಕ್ಷಿ ಎಲ್ಲಿ ದೊರೆಯುವುದು? ಅದು ಲೋಕಪ್ರಸಿದ್ಧಿ ಹೊಂದಿದ ನಮ್ಮ ಕಾಶೀ ಚೌಖಂಬಾ ಶಿರೋಮಣೀ ನಾರಾಯಣಾಚಾರ್ಯರಲ್ಲಿಯೇ ಯೋಗ್ಯವಾದ ಕ್ರಯಕ್ಕೆ ಉತ್ತಮ ತರದ ರುದ್ರಾಕ್ಷಿ ದೊರೆಯುವುದು.

ಸಣ್ಣ ಗಡ್ಡೆ ಪ್ರಮಾಣದ ರುದ್ರಾಕ್ಷಿ 1ಕ್ಕೆ ಆಣೆ 1 ರಿಂದ ರೂ. 25ರ ವರೆಗೆ. 108 ರುದ್ರಾಕ್ಷಿಗಳುಳ್ಳ ಸರ 1ಕ್ಕೆ ಆಣೆ 30ರಿಂದ ರೂ. 25ರ ವರೆಗೆ. ಗೌರೀಶಂಕರ ರುದ್ರಾಕ್ಷಿ 1ಕ್ಕೆ ರೂ. 3ರಿಂದ ರೂ. 50ರ ವರೆಗೆ. ಮತ್ತು 3—4—5—6—7—8 ಮುಖಗಳ ಕಾಳು 1ಕ್ಕೆ ಆಣೆ 4 ರಿಂದ ರೂ. 10. ಮತ್ತು 9—10—11 ಮುಖಗಳುಳ್ಳ ಕಾಳು 1ಕ್ಕೆ ರೂ. 10ರಿಂದ 30ರ ವರೆಗೆ. 12—13—14 ಮುಖದ ಕಾಳು 1ಕ್ಕೆ ರೂ. 45ರಿಂದ 100ರ ವರೆಗೆ. ಸಣ್ಣ ರುದ್ರಾಕ್ಷಿ ಅವರ ಕಾಳಿಗಿಂತ ಕಂಪದಾಗುತ್ತ ಕ್ರಯ ಜಾಸ್ತಿ. ದೊಡ್ಡ ರುದ್ರಾಕ್ಷಿ ಅದಕ್ಕಿಂತ ಗಟ್ಟಿದಾಗುತ್ತ ಕ್ರಯ ಜಾಸ್ತಿ ಆಗುವುದು. (ವಿವರಕ್ಕೆ ಕಾರ್ಡಿಗೆ ಬರೆದರೆ ಇನಾಮಾಗಿ ಕಳುಹಿಸುತ್ತೇವೆ. 1 ಆಣೆ ಸ್ಟ್ಯಾಂಪು ಕಳುಹಿಸಿದರೆ 3 ಇನಾಮುಗಳು—೩ ದಿಕ್ಸೂಚ್ಯರ ಪಟ, 1 ಕಾಶೀ ನಕ್ಷೆ, 1 ಕಾಶಿ ವಿಶ್ವನಾಥರ ಪಟಗಳಾಗಿ ಎಲ್ಲಾ 3 ಇನಾಮುಗಳು.)

ಶಿರೋಮಣಿ ನಾರಾಯಣಾಚಾರ್ಯರ್,

52—28 ಚೌಖಂಬಾ ಬನಾರಸ್, (ಕಾಶೀ)

ಮಾರಾಟಕ್ಕೆ ಸಿದ್ಧವಾಗಿವೆ.

ಸಹಕಾರ ಸಂಘಗಳ ಮತ್ತು ಭವನ ಭಂಡಾರಗಳ ಪ್ರತಿಯೊಬ್ಬ ಮೆಂಬರನಿಗೂ ಬೇಕಾದ ಅಮಿತ ಬಡಾವಣೆ ಪರಿಸ್ಕೃತ ಸಹಕಾರಿ ಸಂಘದ ಮತ್ತು ಭವನ ಭಂಡಾರದ ಉಪನಿಬಂಧನೆಗಳೂ, ಪಾಸ್ ಬುಕ್ಕುಗಳೂ, ಎಲ್ಲಾ ಸಹಕಾರಿ ಸಂಘಗಳ ಮತ್ತು ಭವನ ಭಂಡಾರಗಳ ಕೆಲಸಗಳನ್ನು ಕ್ರಮಪ್ರಕಾರ ನಡಿಸಲು ಅತ್ಯವಶ್ಯವಾಗಿರುವ, ರಜಿಸ್ಟ್ರಾರರವರಿಂದ ಮಂಜೂರಿಸಲ್ಪಟ್ಟಿರುವ ರೀತಿ ಫಾರಮುಗಳೂ, ಬಿಲ್ಲು ಫಾರಮುಗಳೂ, ಪದ್ದು ಸಂಬಂಧಪಟ್ಟ ಫಾರಮುಗಳೂ, ಕಟುಂಬಸ್ಥರಿಗೆ ಫಾರಮುಗಳೂ, ರಸೀದಿ ಫಾರಮುಗಳೂ, ಮೆಂಬರ್ ರಿಜಿಸ್ಟರ್ ಫಾರಮುಗಳೂ, ಮಿನಿಟ್ ಪುಸ್ತಕಗಳೂ, ರಶೀದಿ ಪುಸ್ತಕಗಳೂ, ಜನರಲ್ ಲೆಡ್ಜರ್ ಪುಸ್ತಕಗಳೂ, ಮತ್ತು ಚೆಕ್ ಪುಸ್ತಕಗಳೂ ನಮ್ಮಲ್ಲಿ ಕಡಿಮೆ ಕ್ರಯದಲ್ಲಿ ದೊರೆಯುತ್ತವೆ. ಮುದ್ದಾ ಒಂದಕ್ಕೆ ಅರ್ಧ ಆಣೆ. ಆರ್ಡರು ಕೊಟ್ಟಲ್ಲಿ ವಿ. ಪಿ. ಮೂಲಕ ಕಳುಹಿಸಲಾಗುವುದು.

ಮ್ಯಾನೇಜರ್
"ಕೊಡಗು, ಲಿಮಿಟೆಡ್",
ಮಡಿಕೇರಿ.

ಗುಂಡು ಹೊಡೆಯುವ ಶಸ್ತ್ರಗಳು.
ಉಪಯುಕ್ತ ಸೂಚನೆಗಳು.

ಶಿಕಾರಿಗಳಿಗೆ:—
ನಮ್ಮ ಶಸ್ತ್ರ ಮತ್ತು ತೋಟಾಗಳು ಲಿಸ್ಟ್ (Our arms and ammunition GUIDE 3) ಇದರಲ್ಲಿ ಗುಂಡು ಹೊಡೆಯುವ ಸೂಕ್ಷ್ಮ ವಿಧಾನಗಳ ವಿಷಯ ಅತಿ ಉಪಯುಕ್ತ ಸೂಚನೆಗಳಿವೆ.

Goolamhusain Allibhoy & Sons, Ltd.,

26—23 210, Abdulrehman Street, BOMBAY 3.

ಸನ್ 1882ನೇ ಇಸವಿ ಇಂಡಿಯನ್ ಟ್ರಸ್ಟ್ ಆಕ್ಟಿಗೆ ಒಳಪಟ್ಟ ಸರಕಾರದ ಭರವಸೆಯುಳ್ಳ

ದಿ ಬೊಂಬೆ ಲೈಫ್ ಎಶ್ಯೂರೆನ್ಸ್ ಕಂಪೆನಿ ಲಿಮಿಟೆಡ್.

ಅಧ್ಯಕ್ಷರು—ಮಾನನೀಯ ಸರ್ ಚಿನ್ನುಭಾಯಿ ಮಾಧವಲಾಲ್,
ಕೆ. ಟಿ. ಸಿ. ಐ. ಇ., ಜೆ. ಪಿ. ಯವರು.

ಕೆ. ಜೆ. ಕಾರ್ ಬ್ರದರ್ಸ್ ಮತ್ತು ಬ್ರಾಂಚ್ ಸೆಕ್ರೆಟರಿಗಳು.

ಕಳೆದ ಲಾಭ ಹಂಚುವಿಕೆಯಲ್ಲಿ ರೂ. 18ರಿಂದ 23ರ ವರೆಗೆ ಬೋನಸ್ ಡಿಕ್ಲೇರಾಗಿರುತ್ತೆ.

ಹಿಂದಿಯಿಂದ ಸ್ಥಾಪಿಸಲ್ಪಟ್ಟು ಹಿಂದೂದೇಶದವರಿಗಾಗಿ ಜೀವವಿಮೆಗೆ ನಮ್ಮಿಂದಲ್ಪಟ್ಟಿರುವ ಅತ್ಯುತ್ತಮ ತರದ ಲಕ್ಷಣಗಳಿಂದ ಕಡಿಮೆ ಪ್ರೀಮಿಯಮ್ ದರದಲ್ಲಿ ಪಾಲಿಸಿ ಕೊಡುವ ಕಂಪನಿ ಇದೆಂದು ಮನಪೂರ್ತಿ ನಂಬಿರಿ. ಪತಿ ಪತ್ನಿಯರು ಮತ್ತು ವ್ಯಾಪಾರಸ್ಥರು ಪಾಲ್ಗೊಳ್ಳುವಂಥ ಏಕೀಭವಿಸಿ (ಜಾಯಿಂಟ್ ಲೈಫ್) ಪಾಲಿಸಿ ಕಡಿಮೆ ಪ್ರೀಮಿಯಮ್ ದರದಲ್ಲಿ ಕೊಡುವ ಈ ಕಂಪೆನಿಯು ಹೆಸರುಗೊಂಡಿದೆ. ಪಾಲಿಸಿದಾರರು ಅಶಕ್ತರಾಗಿ ಅಂಗಹೀನರಾದರೆ ಅಂಥವರಿಗೆ ಪಾಲಿಸಿಯ ಮೊಬಲಗನ್ನು ಮುಂದಣ ಪ್ರೀಮಿಯಮ್ ಪಡೆಯದೆ ಇಲ್ಲದೆ ಪೆನ್ಶನ್ ರೀತಿಯಲ್ಲಿ ಉದಾರತ್ವದಿಂದ ಕೊಡಲು ಈ ಕಂಪೆನಿಯು ಮುಂದೆ ನಿಂತಿದೆ ಎಂದು ನೆನಪಿಸಿರಿ. ಮುಖ್ಯವಾಗಿ ಈ ಕಂಪೆನಿಗೆ ಕೆಲಸ ಮಾಡಲು ಇಚ್ಛಿಸುವ ಗಣ್ಯರು ಮತ್ತು ಹೊಸಬರಿಗೆ ಉತ್ತಮ ತರದ ಕಮಿಶನ್ ವಗೈರೆಯಿಂದ ಏಜೆನ್ಸಿ ಕೊಡಲಾಗುತ್ತೆ.

ಹೆಚ್ಚಿನ ಮಾಹಿತಿಗೆ—ಬಿ. ಎಸ್. ಐಯ್ಯಪ್ಪ,
ಕೊಡಗು ಚೀಫ್ ಏಜೆಂಟ್,
26—14 ಮಹದೇವ ಪೇಟೆ, ಮಡಿಕೇರಿ.

ಎರಡು ಕೆಲಸಕ್ಕೊಂದೇ ಸಾಬೂನು

"ಮೈಸೂರು ಗಂಧದ ಸಾಬೂನು."

ಈ ಸಾಬೂನು ಸಾಬೂನಾದ ಚರ್ಮವನ್ನು ಶುಭ್ರಗೊಳಿಸುವುದು ಮಾತ್ರವಲ್ಲ; ಸೌಂದರ್ಯವನ್ನು ಮಾಡುತ್ತದೆ. ಯಾರು ಯಾರು ತಮ್ಮ ಆರೋಗ್ಯದ ಕಡೆ ಗಮನವಿರುವರೋ ಯಾರು ಯಾರು ತಮ್ಮ

ಚರ್ಮವನ್ನು ಎಲ್ಲ ರೀತಿಯಿಂದ ನೋಡುವರೋ ಅವರೆಲ್ಲರೂ ಉಪಯೋಗಿಸುವುದು ಮೈಸೂರು ಗಂಧದ ಸಾಬೂನು.

ಎಲ್ಲಾ ಅಂಗಡಿಗಳಲ್ಲಿ ಸಿಕ್ಕುತ್ತದೆ.

ಗವರ್ನಮೆಂಟ್ ಸೋಪ್ ಫ್ಯಾಕ್ಟರಿ.

52—54 ಬೆಂಗಳೂರು

ಗ್ರಾಮೋದ್ಧಾರಕ್ಕಾಗಿ ಇಂಡಿಯಾ ಸರ್ಕಾರದ ಗ್ರ್ಯಾಂಟು—ಖರ್ಚು.

ಇಂಪೀರಿಯಲ್ ಸರಕಾರದಿಂದ ಗ್ರಾಮೋದ್ಧಾರಕ್ಕಾಗಿ ಕೊಡಗಿಗೆ ದಯಪಾಲಿಸಲ್ಪಟ್ಟಿರುವ 30,000 ರೂಪಾಯಿಗಳ ವಿನಿಯೋಗವನ್ನು ತಿಳಿಸಿಕೊಳ್ಳಲು ಕುತೂಹಲಪಡುತ್ತೇವೆ. ಕೆಲವು ಮಂದಿ ಅಧಿಕಾರಿಗಳನ್ನು ಕೇಳಿದಾಗ ಅವರು ಒಂದು ಗ್ರಾಮಸುಧಾರಕಗಳಿಗೆ ಕೊಡುವಂಥ [illegible] ಮತ್ತು [illegible] ಬೇಕಾದ [illegible] ವ್ಯವಸ್ಥೆಗಳನ್ನು ಅಲ್ಲದೆ ಆರೋಗ್ಯಕ್ಕೆ ಸಂಬಂಧಪಟ್ಟ [illegible] ಹಣವನ್ನು ವಿನಿಯೋಗಿಸುವರೆಂದೂ ಹೇಳಿದರು. ಅದನ್ನು ನಾವು [illegible] ಸರ್ಕಾರದ [illegible] ಕೊಡುವಾಗ ಅದು ಹಿಡಿಯಲ್ಲವೆಂದು ತಿಳಿಯಿತು. ಮುನಿಸಿಪಾಲಿಟಿಯ [illegible] ಭಾಗದಲ್ಲಿ ಒಂದು ನೀರಿನ [illegible] ಇದೆ. ಅದರ [illegible] [illegible] ಅಷ್ಟು ಹೊಲಸಾಗಿದೆ. [illegible] ಇರುವುದರಿಂದ ಅದರಲ್ಲೇ [illegible] ಬರುವಾಗ [illegible] ಅಲ್ಲದೆ [illegible] [illegible] ಅದನ್ನು ಸಿವಿಲ್ ಸರ್ಜನರ, ಮುನಿಸಿಪಾಲ್ ಅಧಿಕಾರಿ ಮತ್ತು ಸ್ಥಳೀಕ ದಾಕ್ತರುಗಳ ಅವಗಾಹನೆಗೆ ತಂದೆವು. ಅವರು ಈ ವಿಷಯವನ್ನು [illegible] ಕಮಿಷನರು ಸಾಹೇಬರವರ ಅವಗಾಹನೆಗೆ ತರುತ್ತೇವೆಂದು ಹೇಳಿದರು. ಇದನ್ನು [illegible] [illegible] ತಂದರೋ ತಿಳಿಯದು. ಇದರ ರಿಪೇರಿಗೆ ಮುನಿಸಿಪಾಲಿಟಿಯ ಸಿಬ್ಬಂದಿಗಳೆಲ್ಲರೂ ಒಪ್ಪಿಕೊಂಡು ಒಂದು ಅರ್ಜಿಯನ್ನು ಕಮಿಷನರು ಸಾಹೇಬರವರಿಗೆ ಕಳುಹಿಸಲಾಯಿತು. ಅದಕ್ಕೆ ಕಮಿಷನರು ಸಾಹೇಬರು [illegible] ಎಂಜಿನಿಯರ್ ಅವರ [illegible] ನೋಡಿದರೆ ತಿಳಿಯುವುದು. ಈಗ ಸರಕಾರದಲ್ಲಿ [illegible] ಮುನಿಸಿಪಾಲಿಟಿಯ ಪಾಲಿಗೆ 250 ರೂ. ಗಳನ್ನು ಕೊಡಲು [illegible] ಹಾಗೂ 250 ರೂ. ಗಳನ್ನು [illegible] ಹೇಳಿರುವುದು ನೋಡಿದರೆ ಇಂಪೀರಿಯಲ್ ಸರಕಾರದವರು ಗ್ರಾಮೋದ್ಧಾರಕ್ಕಾಗಿ ದಯಪಾಲಿಸಿರುವ ಹಣವು ನಮ್ಮ ಮುನಿಸಿಪಾಲಿಟಿಯ ಪ್ರಯೋಜನಕ್ಕೆ ಇಲ್ಲವೆಂದೇ ಹೇಳಬೇಕಾಗಿದೆ. ಪ್ರಪಂಚದ ಎಲ್ಲಾ ಭಾಗಗಳು ಆರ್ಥಿಕ ಮುಗ್ಗಟ್ಟಿಗೀಡಾಗಿರುವಾಗ ಒಂದು ಬಡವಾದ ಮುನಿಸಿಪಾಲಿಟಿಯವರು [illegible] ಹೇಗೆ? ಮುನಿಸಿಪಾಲಿಟಿಯಲ್ಲಿ 250 ರೂ. ಗಳನ್ನು ಒಟ್ಟಿಗೇ ಕೊಡಲು [illegible]. ಅನೇಕ ಮಂದಿ ಇರುವುದು [illegible] ಇಂಥ ಸಾರ್ವಜನಿಕ ಕಾರ್ಯಕ್ಕೆ ಮುಂದೆ ಬರುವಷ್ಟು [illegible] ಇಲ್ಲವೆಂದು [illegible]. ಇಂಥಾ ಮಹಾಮಾರಿಯ ಸ್ಥಿತಿ [illegible] ಇಷ್ಟು [illegible] ಅವಶ್ಯಕತೆಯೇ ಇಲ್ಲ ಅದನ್ನು [illegible] ಎಂದು ಅಧಿಕಾರಿಯವರ [illegible]. [illegible] [illegible] ತಿಂಗಳುಗಳಲ್ಲಿ ಇಲ್ಲಿಯ ನಿವಾಸಿಗಳಿಗೆ [illegible] ಅಭಾವವಾಗುತ್ತದೆ. [illegible] ಹೋಗಬೇಕಾಗುತ್ತದೆ. ಪಟ್ಟಣದ ಅಧಿಕಾರಿಗಳು ಒಂದೆರಡು ಸಿಲ ಸಾಕ್ಷಿಗಳಿಗೆ [illegible] ಸೌಕರ್ಯಗಳ ಅವಶ್ಯಕತೆ ಹೆಚ್ಚಾಗಿಯೇ ಇದೆ. ಆದಲ್ಲದೆ [illegible] ಇರುವ ನಿವಾಸಿಗಳು ಪಟ್ಟಣದಲ್ಲಿ ಎಷ್ಟು [illegible] ಸ್ಥಳೀಕ ದಾಕ್ತರರನ್ನು ಕೇಳಿದರೆ ವೇದ್ಯವಾಗುತ್ತದೆ. ಗ್ರಾಮೋದ್ಧಾರ ಕಾರ್ಯವನ್ನು ಮಾಡಲು [illegible] ಸರಕಾರದವರು ಒಂದು ನಿವಾಸಿಗಳಾದ ಮುನಿಸಿಪಾಲಿಟಿಯವರ ಗೋಳನ್ನು ಚಿತ್ತಕ್ಕೆ ತಂದುಕೊಂಡು ಈ ಕೆರೆಯನ್ನು ದುರಸ್ತು ಮಾಡಿಸಿಕೊಡಬೇಕೆಂದು ಪ್ರಾರ್ಥಿಸುವ

ಮುನಿಸಿಪಾಲಿಟಿಯ ನಿವಾಸಿಗಳಲ್ಲೊಬ್ಬ.

ನೋಟೀಸು.

ಈ ಕೆಳಗಿನ ಮಹಾಶಯರು "ಕೊಡಗು" ಪತ್ರಿಕೆಯ ಚಂದಾ ಹಣವನ್ನು ವಸೂಲ್ಮಾಡಲು ಒಪ್ಪಿಕೊಂಡಿರುತ್ತಾರೆ. ಅವರನ್ನು ಏಜೆಂಟರುಗಳನ್ನಾಗಿ ನೇಮಿಸಿ ಅವರಿಗೆ ನಮ್ಮ ರಶೀತಿ ಪುಸ್ತಕಗಳು ಕೊಡಲಾಗಿದೆ. ಕೆಳಗಿನ ಸಬ್ ಏಜೆಂಟರುಗಳಿಗೆ ಏಜೆಂಟರವರ ದಸ್ತಖತ್ತಿನ ಮೇಲೆ ರಶೀತಿ ಪುಸ್ತಕಗಳು ಕೊಡಲಾಗಿದೆ. ದಯವಿಟ್ಟು ಚಂದಾದಾರರೆಲ್ಲರೂ ಅವರಿಗೆ ಅನುಕೂಲವಿರುವ ಸ್ಥಳದಲ್ಲಿ ತಮ್ಮ ಚಂದಾವನ್ನು ಪಾವತಿ ಮಾಡಿ ರಶೀತಿ ಪಡೆಯಬೇಕಾಗಿ ಕೋರಿದೆ.

ಸಬ್ ಏಜೆಂಟರುಗಳು.

ವಿರಾಜಪೇಟೆ—ಮೆ. ಮಂಡೀರಂಡ ಸೋಮಯ್ಯನವರು,
ಅಮ್ಮತ್ತಿ—ಸಿದ್ದಾಪುರ—ಮೆ. ಚಿಸಂಡ ಮಾದಪ್ಪನವರು,
ಪೊನ್ನಂಪೇಟೆನಾಡು—ಮೆ. ಪಿ ಜಿ. ಮುದ್ದವ್ವಯ್ಯನವರು
ಕುಡಿಕೇರಿ & ತಿತಿಮತ್ತಿ—ಮೆ. ಪಿ. ಮಾದಯ್ಯನವರು.
ಹುಂಡಿಕೊಪ್ಪ—ಮೆ. ಅಪ್ಪಚೆಟ್ಟೋಳಂಡ ಪೂಣಚ್ಚಯ್ಯನವರು,
ಸೋಮವಾರಪೇಟೆ—ಮೆ. ಕೆ. ಮೊಗಪ್ಪನವರು
ನಾಪೋಕ್ಲು—ಮೆ, ಬೆಳ್ಳಿಯಂಡ ಯಂ, ಪೂಣಚ್ಚನವರು,
(ನಾಪೋಕ್ಲು ಸ್ಟೋರ್ಸ್)

ಸೂಚನೆ.—ಪ್ರತಿಯು ಚಂದಾ ರಶೀತಿ ಹಾಜರುಪಡಿಸಬೇಕು ರೂ [illegible] ಚಂದಾ ಕೊಡದವರಿಗಾಗಿ ಈ ಮೂಲಕ ತಿಳಿಸಲಾಗಿದೆ

ಮೆನೇಜರ್,
"ಕೊಡಗು" ಆಫೀಸ್.
ಮಡಿಕೇರಿ.

ಕೊಡಗು ಸೆಂಟ್ರಲ್ ಬ್ಯಾಂಕ್ ಮೀಟಿಂಗ್.

ಕೊಡಗು ಸೆಂಟ್ರಲ್ ಸಹಕಾರ ಬ್ಯಾಂಕಿನ ಡೈರೆಕ್ಟರುಗಳ ಮೀಟಿಂಗು ಈ ತಾರೀಖು 28–2–1936 ರಲ್ಲು ಬೆಳಗ್ಗೆ 11 ಗಂಟೆಗೆ ಬ್ಯಾಂಕಿನ ಆಫೀಸಿನಲ್ಲಿ ನಡೆಯಿತು.

ಈ ಕೆಳಗಿನ ಡೈರೆಕ್ಟರುಗಳು ಹಾಜರಿದ್ದರು. ಮೆ. ಗಳಾದ (1) ಪಂದ್ಯಂಡ ಬಿ ಬೆಳ್ಯಪ್ಪನವರು (ಪ್ರೆಸಿಡೆಂಟರು) (2) ಯಂ, ಯಂ. ಬೆಳ್ಯಪ್ಪನವರು (ಗೌರವ ಕಾರ್ಯದರ್ಶಿಯವರು) (3) ರಾ. ಸಾ ಪಾಂಡಂಡ ಚಂಗಪ್ಪನವರು (ಟ್ರೆಜರರ್) (4) ಐನಂಡ ಕಾರ್ಯಪ್ಪನವರು (5) ಕೊಳ್ಳಿಮಾಡ ಕರುಂಬಯ್ಯನವರು (6) ಪಿ ಜಿ ಮುದ್ದವ್ವಯ್ಯನವರು (7) ಕಂಬೀರಂಡ ಬೆಳ್ಯಪ್ಪನವರು (8) ಪಟ್ಟಮಾಡ ಬೆಳ್ಯಪ್ಪನವರು (9) ಬಲ್ಲಚಂಡ ಬೆಳ್ಯಪ್ಪನವರು (10) ಉದಿಯಂಡ ಪೂಣಚ್ಚಯ್ಯನವರು (11) ಪಾಲೇಕಂಡ ತಮ್ಮಯ್ಯನವರು (12) ನಾಪಂಡ ಸೋಮಯ್ಯನವರು ಮತ್ತು (13) ಬಲ್ಲಂಡ ಗಣಪತಿಯವರು.

ಈ ಕೆಳಗಿನ ಡೈರೆಕ್ಟರುಗಳು ಗೈರು ಹಾಜರಾಗಿದ್ದರು. ಮೆ. ಗಳಾದ (1) ಕೆ ಯಂ. ಬೆಳ್ಯಪ್ಪನವರು ಮತ್ತು (2) ಬಲ್ಯಮಾಡ ಮಾದಪ್ಪನವರು.

ಕೋಆಪರೇಟಿವ್ ಸಂಘಗಳ ರಿಜಿಸ್ಟ್ರಾರವರೂ ಸಹ ಹಾಜರಿದ್ದರು.

1. ಕಳೆದ ಮೀಟಿಂಗಿನ ಪ್ರೊಸೀಡಿಂಗ್ಸನ್ನು ಓದಿ ಒಪ್ಪಲಾಯಿತು.

2. ಸೂಪರ್ ವಿಜನ್ ಬೋರ್ಡಿನ ಕಳೆದ ಮೀಟಿಂಗಿನ ಪ್ರೊಸೀಡಿಂಗ್ಸನ್ನು ಓದಿ ರೆಕಾರ್ಡು ಮಾಡಲಾಯಿತು.

3. ಕಳೆದ ಜನವರಿ ತಿಂಗಳ ಜಮಾ ಮತ್ತು ಖರ್ಚಿನ ಲೆಕ್ಕ ಓದಿ ಮಂಜೂರ್ಮಾಡಲಾಯಿತು.

ಹಿಂದಿನ ತಿಂಗಳ ಸಿಲ್ಕು	ರೂ	33,812 1 1
ಸದರಿ ತಿಂಗಳಲ್ಲಿ ವಸೂಲಾತಿ		7,172 12 0
	ಜುಮ್ಲ	40,984 13 1
ಸದರಿ ತಿಂಗಳಲ್ಲಿ ಖರ್ಚು		7582 1 0
ಬಾಕಿ ಸಿಲ್ಕು ರೂ		33,402 12 1

4. ಈ ಕೆಳಗಿನ ಸೊಸೈಟಿಗಳಿಗೆ ಸಾಲಗಳು ಮಂಜೂರಾದವು (1) ಕಡಂಗ ಮರೂರು ಸೊಸೈಟಿಗೆ ರೂ. 500 (2) ಹುತ್ತರಿ ದಡೂರು ಸೊಸೈಟಿಗೆ ರೂ. 3000 (3) ಕಿಗ್ಗಟ್ಟುನಾಡು ಕ್ರೆಡಿಟ್, ಲೋನ್, ಸೇಲ್ ಅಂಡ್ ಸಪ್ಲೈ ಸೊಸೈಟಿಗೆ ರೂ. 5000 (4) ಗೋಣಿಕೊಪ್ಪ ಸೊಸೈಟಿಗೆ ರೂ 1000 (5) ಮಡಿಕೇರಿ ಸೊಸೈಟಿಗೆ ರೂ. 250 (6) ಅತ್ತೂರು ಸೊಸೈಟಿಗೆ ರೂ 1200 (7) ತಿತಿಮತಿ ಶ್ರೀರಾಮ ಸೊಸೈಟಿಗೆ ರೂ. 1800 (8) ಸೋಮವಾರಪೇಟೆ ಟೌನ್ ಸೊಸೈಟಿಗೆ ರೂ. 2000 (9) ಕೊಡಗು ಉಪಾಧ್ಯಾಯರ ಸಹಕಾರ ಸೊಸೈಟಿಗೆ ರೂ. 1000 (10) ಅಮ್ಮತ್ತಿ ಕ್ರೆಡಿಟ್, ಲೋನ್ ಅಂಡ್ ಸೇಲ್ ಸೊಸೈಟಿಗೆ ರೂ. 3000 (11) ವೀರಾಜಪೇಟೆ ಕ್ರೆಡಿಟ್ ಲೋನ್, ಸೇಲ್ ಅಂಡ್ ಸಪ್ಲೈ ಸೊಸೈಟಿಗೆ ರೂ. 3000 (12) ದಕ್ಷಿಣ ಕೊಡಗು ಸಹಕಾರ ಸೊಸೈಟಿಗೆ ರೂ. 1000 (13) ಮುನಿಸಿಪಲ್ ಸ್ಟೋರಿಗೆ ರೂ. 500 ಮತ್ತು (14) ಕಡಗದಾಳು ಸೊಸೈಟಿಗೆ ರೂ. 325.

5. ಈ ಕೆಳಗಿನ ಸೊಸೈಟಿಗಳ ಮೆಂಬರುಗಳು ಶೇಕಡ 50 ರಷ್ಟು ಜಮೆ ಮತ್ತು ಅವುಗಳ ಸಾಲದ ಅರ್ಜಿಗಳನ್ನು ಬರುವ ಮೀಟಿಂಗಿನಲ್ಲಿ [illegible] ಆ ವರೆಗೆ ಅವರ ರಿವೈಸ್ಡ್ ಕ್ರೆಡಿಟ್ ಬ್ಯಾಲೆನ್ಸ್ ಸ್ಟೇಟ್ಮೆಂಟು ಸಹ ತರಿಸಬೇಕೆಂದು ತೀರ್ಮಾನಿಸಲಾಯಿತು. (1) ಕೋಲಕಟ್ಟೆ ಸೊಸೈಟಿ (2) [illegible] ಸೊಸೈಟಿ ಮತ್ತು (3) ಕಾರಂಡ [illegible] ಸೊಸೈಟಿ

6 ಕಿಕ್ಕರ [illegible] ಸಂಘದವರ ಅರ್ಜಿಯನ್ನು ಸಾಲದ [illegible] ತಿರಸ್ಕರಿಸಲಾಯಿತು ಮತ್ತು ಮರನಾಡು ಸಂಘದ ಸಾಲದ ಅರ್ಜಿಯನ್ನು ಬರುವ ಏಪ್ರಿಲ್ ತಿಂಗಳಲ್ಲಿ ಆಲೋಚಿಸುವಂತೆ ತೀರ್ಮಾನಿಸಲಾಯಿತು.

7. ಸೆಂಟ್ರಲ್ ಬ್ಯಾಂಕಿನ ಸಿಬ್ಬಂದಿಗಳ ಕಾನ್‌ಫರೆನ್ಸ್ ಪ್ರೊಸೀಡಿಂಗ್ಸನ್ನು ಓದಲಾಗಿ ಸದರಿ ಕಾನ್‌ಫರೆನ್ಸಿನ ಪ್ರೊಸೀಡಿಂಗ್ಸ್ ನಕಲನ್ನು ಎಲ್ಲಾ ಡೈರೆಕ್ಟರುಗಳಿಗೆ ಕಳುಹಿಸುವಂತೆ ತೀರ್ಮಾನಿಸಲಾಯಿತು.

8 ಮರೆನಾಡು ಸಂಘದ ಮೆಂಬರು ಮೆ. ಚೋನಿರ [illegible] ಪ್ಪನವರ, [illegible] ಮೇಲೆ ಕ್ರಿಮಿನಲ್ ಕಳ್ಳತನಗಳ ಮೊಕದ್ದಮೆ [illegible] ಹಾಕಿದ್ದನ್ನು ರದ್ದು ಪಡಿಸಬೇಕೆಂಬ ವಿಷಯ ಶ್ರೀಮಂಗಲನಾಡು ಯೂನಿಯನ್ನಿನ ಪ್ರೆಸಿಡೆಂಟರು ರಿಪೋರ್ಟು ಬರೆದಿರುವ ಮೇರೆ—ಸದರಿ ಸೊಸೈಟಿಯ ಪ್ರೆಸಿಡೆಂಟರು ತಪ್ಪುಕಟ್ಟಿರೆಂದು ತಿಳಿದು ಬಂದ ದರಿಂದ ಅವರು ಇನ್ನು ಮುಂದಕ್ಕೆ ಇಂಥಾ ತಪ್ಪು ಮಾಡಬಾರದೆಂದು ಅವರನ್ನು ಎಚ್ಚರಿಸುವಂತೆ ತೀರ್ಮಾನಿಸಲಾಯಿತು.

9. ಮೀಟಿಂಗು ಪ್ರೊಸೀಡಿಂಗ್ಸ್ ಪ್ರತಿಗಳನ್ನು ಡಾಕ್ಟ್ರ ಕ್ರೆಡಿಟ್ ಸೊಸೈಟಿಯ ಇನ್ಸ್‌ಪೆಕ್ಟರರ ಮೂಲಕ ಅವರಿಗೆ ಕಳುಹಿಸಬೇಕೆಂದು ರಿಜಿಸ್ಟ್ರಾರವರು ತಾರೀಖು 20—11—35 ರಲ್ಲು ಕಳುಹಿಸಿದ ನಂಬ್ರ 691 ರ ಪತ್ರವನ್ನು ಓದಲಾಗಿ ಸದರಿ ಪತ್ರವನ್ನು ಡೈರೆಕ್ಟರುಗಳು ಈ ಮೊದಲೇ ಮಾಡಿದ ತೀರ್ಮಾನವನ್ನು ಬದಲಾಯಿಸಲಿಕ್ಕೆ ಕಾರಣ, ಕಾಣುಗಳೇನೂ ಇಲ್ಲವೆಂದು ತೀರ್ಮಾನಿಸಲಾಯಿತು.

10. ಬ್ಯಾಂಕಿನ ಆಫೀಸು ಸಿಬ್ಬಂದಿಗಳು ತಮ್ಮ ದಿನಚರಿಯ ಕೆಲಸ ಕಾರ್ಯಗಳ ಸಮಯವನ್ನು ಬದಲಾಯಿಸಿ ಕೊಡಬೇಕೆಂದು ಕೇಳಿಕೊಂಡ ಅರ್ಜಿ ಓದಲಾಯಿತು.

ಈಗ ಜಾರಿಯಲ್ಲಿರುವ ಪ್ರಕಾರ ಅವರ ಕೆಲಸ ಕಾರ್ಯಗಳ ಸಮಯವು ಬೆಳಗ್ಗೆ 9 ಗಂಟೆಯಿಂದ 12 ಗಂಟೆಯ ವರೆಗೂ ಅನಂತರ 2 ಗಂಟೆಯಿಂದ ಸಾಯಂಕಾಲ 5 ಗಂಟೆಯ ವರೆಗೂ ಮತ್ತು ಮೀಟಿಂಗು ದಿವಸಗಳಲ್ಲದ ಶನಿವಾರಗಳಲ್ಲಿ ಮಾತ್ರ ಬೆಳಗ್ಗೆ 9 ಗಂಟೆಯಿಂದ ಮಧ್ಯಾಹ್ನ 1 ಗಂಟೆಯ ವರೆಗೂ ಇರತಕ್ಕದೆಂದು ತೀರ್ಮಾನಿಸಲಾಯಿತು.

11. ಬ್ಯಾಂಕಿನ ಕಾಶ್ಯುಯಲ್ ಗಾರ್ಡ್ ಫಂಡಿನಿಂದ ತನ್ನ ಬಿಡುಗಡೆಗೆ ಹಣ ಸಹಾಯ ಮಾಡಬೇಕೆಂದು ಮೆ. [illegible] ರವರು ಬರೆದಿರುವ ಸಾಲದ ಅರ್ಜಿಯನ್ನು ತಿರಸ್ಕರಿಸಲಾಯಿತು.

12 ಬೆಳ್ಳೂರು ಸೊಸೈಟಿಯ ಕಮಿಟಿ ಮೆಂಬರುಗಳು ತಮಗೆ ಬ್ಯಾಂಕಿನಿಂದ ಮಂಜೂರ್ಮಾಡಿದ ಹೊಸ ಸಾಲಗಳಿಗೆ ಬಡ್ಡಿ ದರವನ್ನು ಇಳಿಸಬೇಕೆಂತಲೂ, ಹಳೆಯ ಸಾಲಗಳನ್ನು ವಸೂಲಿಮಾಡಬೇಕೆಂತಲೂ ಬರೆದಿರುವ ಅರ್ಜಿಯನ್ನು ಓದಲಾಯಿತು.

ಸಾಲಗಳ ಮೇಲೆ ಹಾಕಲ್ಪಡುವ ಬಡ್ಡಿಯ ದರವನ್ನು ಡೈರೆಕ್ಟರುಗಳು ಈ ಮೊದಲೇ ತಗ್ಗಿಸಿರುವುದರಿಂದ ಸದರಿ ವಿಷಯ ಎಲ್ಲಾ ಸೊಸೈಟಿಗಳಿಗೂ ಸರ್ಕ್ಯುಲರ್ ಕಳುಹಿಸುವಂತೆ ತೀರ್ಮಾನಿಸಲಾಯಿತು.

13 [illegible] ಸೊಸೈಟಿಯವರು ತಮಗೆ ಹೆಚ್ಚು ಸಾಲ ಕೊಡಬೇಕೆಂದು ಪ್ರೊಸೀಡಿಂಗ್ಸ್ ಮಾಡಿದ್ದರ ಮೇರೆ ಅದನ್ನು ನಾಡು ಯೂನಿಯನ್ ಪ್ರೆಸಿಡೆಂಟರು ಬರೆದ ರಿಪೋರ್ಟನ್ನು ಓದಲಾಗಿ, ಸದರಿ ಸೊಸೈಟಿಯ ಈ ವಿಷಯದಲ್ಲಿ ತಮ್ಮ ಹಾಲ್ ಹವಾಲ್ ಕುರಿತು ಅಲ್ಲಿಯದ ರಿಪೋರ್ಟನ್ನು ಕಳುಹಿಸುವಂತೆಯೂ ಈ ಸಂಬಂಧ ಎಲ್ಲಾ ಸೊಸೈಟಿಗಳಿಗೆ ಸರ್ಕ್ಯುಲರನ್ನು ಕಳುಹಿಸುವಂತೆಯೂ ತೀರ್ಮಾನಿಸಲಾಯಿತು.

14. ಚೇರಂಬಾಣೆ [illegible] ಸಂಘದವರು ಈಗ ಬ್ಯಾಂಕಿಗೆ ಮುಂಗಡವಾಗಿ ಪಾವತಿ ಮಾಡಬೇಕಾದ ಸಾಲಗಳಿಗೆ ಹೆಚ್ಚು ಕಂತುಗಳನ್ನು ಕೊಡಬೇಕೆಂದು ಕೋಆಪರೇಟಿವ್ ಇನ್ಸ್‌ಪೆಕ್ಟರ ಮತ್ತು ಎಡೆನಾಲ್ಕುನಾಡು ಯೂನಿಯನ್ ಪ್ರೆಸಿಡೆಂಟರ ರಿಪೋರ್ಟುಗಳೊಡನೆ ಬ್ಯಾಂಕಿಗೆ ಕಳುಹಿಸಿದ ಪತ್ರವನ್ನು ಓದಲಾಗಿ ಅದನ್ನು ತಿರಸ್ಕರಿಸಲಾಯಿತು.

15 ಬ್ಯಾಂಕಿನಲ್ಲಿ ಕರೆಂಟ್ ಎಕೌಂಟ್ ಇರಿಸುವ ಸಂಬಂಧ ಗವರ್ನಮೆಂಟಿನಿಂದ ಬಂದ ಪತ್ರವನ್ನು ಓದಲಾಯಿತು.

ಈ ವಿಷಯದಲ್ಲಿ ಇಂಪೀರಿಯಲ್ ಬ್ಯಾಂಕಿನ ಶಾಖೆಯು ಕೊಡಗಿನಲ್ಲಿ ಇಲ್ಲದ ಕಾರಣ ಬ್ಯಾಂಕಿನ ಚಾಲ್ತಿ ವ್ಯವಹಾರಗಳಿಗೆ ಅನುಕೂಲವಾಗುವುದಿಲ್ಲವೆಂದು ಚೀಫ್ ಕಮಿಷನರವರಿಗೆ ತಿಳಿಸುವಂತೆಯೂ, ಸದರಿಯವರು ಇಂಡಿಯಾ ಗವರ್ನ್‌ಮೆಂಟಿನವರು ಮಾಡಿರುವ ಆರ್ಡರನ್ನು ಪುನರಾಲೋಚಿಸುವಂತೆ ಬರೆದು ಕಳುಹಿಸಬೇಕೆಂದೂ ಚೀಫ್ ಕಮಿಷನರವರನ್ನು ಕೇಳಿಕೊಳ್ಳುವ ಹಾಗೆ ತೀರ್ಮಾನಿಸಲಾಯಿತು

16. ವೀರಾಜಪೇಟೆ ಟೌನ್ ಸೊಸೈಟಿಯ ಕೆಲಸ ಕಾರ್ಯಗಳ ವಿಷಯ ಬ್ಯಾಂಕಿನ ಸೂಪರ್‌ವಿಜನ್ ಬೋರ್ಡಿನವರು ಬರೆದು ಕಳುಹಿಸಿದ ರಿಪೋರ್ಟನ್ನು ಓದಿ ರೆಕಾರ್ಡು ಮಾಡಲಾಯಿತು.

17 ಪಾಲಿಬೆಟ್ಟ ವಿಭಾಗದ ಬಾಕಿದಾರರಾಗಿರುವ ಸೊಸೈಟಿಗಳಿಗೂ ಕಡಿಮೆ ಬಡ್ಡಿಯ ದರವನ್ನು ಕಮ್ಮಿ ಮಾಡಬೇಕೆಂಬ ವಿಷಯ ಅಮ್ಮತ್ತಿನಾಡು ಯೂನಿಯನ್ನಿನವರ ಪ್ರೊಸೀಡಿಂಗ್ಸನ್ನು ಓದಲಾಗಿ ಸದರಿ ವಿಷಯ ಮೊದಲೇ ತೀರ್ಮಾನಿಸಿರುವುದರಿಂದ ಹೆಚ್ಚಾಗಿ ಆಲೋಚಿಸಲಿಲ್ಲ.

18 ಬ್ಯಾಂಕಿನ ಮೆಂಬರುಗಳಾಗಲು ತಿತಿಮತಿ ಶ್ರೀರಾಮ ಸೊಸೈಟಿ ಮತ್ತು ಮೆ. ಚೇರಂಡ ಎಸ್. ಮಂದಣ್ಣನವರು ಅರ್ಜಿ ಬರೆದಿರುವ ಮೇರೆ ಅವರನ್ನು ಮೆಂಬರುಗಳಾಗಿ ಅಂಗೀಕರಿಸಲಾಯಿತು.

19 ತಾರೀಖು 6–12–35 ರಲ್ಲು ಮಂಜೂರಾದ ರೂ. 200 ಕ್ಕೆ ಮರುಪಾವತಿ ಮಾಡಲು ಕೊಟ್ಟಿರುವ ಕಂತುಗಳನ್ನು ಮಾರ್ಚಿ ತಿಂಗಳಲ್ಲಿ ಪಾವತಿ ಮಾಡಲು ಆಗ ಭತ್ತಕ್ಕೆ ಬೆಲೆ ಇಲ್ಲದ್ದರಿಂದ ಡಿಸೆಂಬರು ತಿಂಗಳಿಗೆ ಮುಂದರಿಸಿಕೊಡಬೇಕೆಂದು ನಿರವಂಡ ಕುಟುಂಬ ಧರ್ಮ ಭಂಡಾರವು ಬರೆದ ಅರ್ಜಿ ಮೇರೆ ಅವರ ಕೋರಿಕೆಯನ್ನು ನೆರವೇರಿಸುವಂತೆ ತೀರ್ಮಾನಿಸಲಾಯಿತು

20 ಅಪ್ಪ ಮಹಜೀಯವರು [illegible] ತನ್ನ ಗಂಡನ ಹೆಸರಿನಲ್ಲಿ ಬ್ಯಾಂಕಿನಲ್ಲಿರುವ ಡಿಪಾಜಿಟ್ಟು ಮೊಬಲಗುಗಳನ್ನು ತನ್ನ ಹೆಸರಿಗೆ ವರ್ಗಾಯಿಸಿಕೊಡಬೇಕೆಂದು ಅರ್ಜಿ ಬರೆದಿರುವ ಮೇರೆ ಶಾನುಭೋಗರು ಹಾಗಿದೆಯೆಂದು ವಿಚಾರಿಸಿ ತಹಶೀಲ್ದಾರರು ವರ್ಗಾಯಿಸಲು ಏರ್ಪಾಡು ಮಾಡತಕ್ಕದ್ದೆಂತ ತೀರ್ಮಾನಿಸಲಾಯಿತು

ಪಿ. ಬಿ. ಬೆಳ್ಯಪ್ಪ,
(ಅಧ್ಯಕ್ಷರು.)

ದಶಕದಕ್ಕಾಗಿ ಒಪ್ಪಿಸಿದ ಪ್ರತಿಫಲಕ್ಕಾಗಿ ಈಗ 'ಬಿಸ್ಕಾ ಭವತಿ ದೇಹಿ' ಎಂದು ಕೇಳಬೇಕಾದ ಸಂದರ್ಭ ಒದಗಿದೆ. [illegible] ಕೊಡಗಿನ ಬಹು ಪಕ್ಷದ ... ವಿಷಯಗಳನ್ನು ಪ್ರತ್ಯೇಕವಾಗಿ ನಡೆಸುತ್ತಾ ಬರುವುದು ಕೊಡಗಿನವರಿಗೆ ಹಾನಿಯಾಗಿರುತ್ತೆ ಎಂಬ ತಾತ್ಪರ್ಯಗಳನ್ನು ... ಫೈನಾನ್ಸ್ ಮೊದಲಾದ ಪ್ರಕಾರ ಕೊಡಗನ್ನು ಪ್ರತ್ಯೇಕ ಸಂಸ್ಥಾನವಾಗಿ ನಡೆಯಿಸುವುದು ಬಹಳ ಕಷ್ಟವಾಗಿರುತ್ತೆ. ಅದ್ದರಿಂದ ಈ ಸಭೆಯು ಕೊಡಗನ್ನು ಮದ್ರಾಸಿಗಾಗಲಿ ... ಕೊಡಗಿನ ಅವಸ್ಥೆಯು ಇದೇ ಪ್ರಕಾರ ನಡೆಯುತ್ತಾ ಬಂದರೆ ನಮ್ಮ ದೇಶವು ಇತರ ಪ್ರಾಂತ್ಯಗಳಿಗೆ ... ಎಂಬುದಾಗಿ ಅಧ್ಯಕ್ಷರು ಭಾಷಣ ಮಾಡಿದನಂತರ ಸಭೆಯು ಬಹುಮತದಿಂದ ತೀರ್ಮಾನಿಸಿತು.

ಮುಂದಿನ ವರ್ಷಕ್ಕೆ ಶ್ರೀಮಾನ್ ಕೆ. ಚೆಂಗಪ್ಪನವರು ಶ್ರೀ ... ಸಿ. ಸುಬ್ಬಯ್ಯನವರು ಅನುಮೋದಿಸಿದ ಪ್ರಕಾರ ಶ್ರೀಮಾನ್ ... ಅಧ್ಯಕ್ಷರಾಗಿ ನೇಮಿಸಲ್ಪಟ್ಟರು. ಶ್ರೀ ಕೆ. ಚೆಂಗಪ್ಪನವರು ಸೆಕ್ರೆಟರಿಯಾಗಿ ... ರಾಮಯ್ಯನವರು ... ನಿಯಮಿಸಲ್ಪಟ್ಟರು. ಅದೇ ರಾತ್ರಿ ... 'ಶನೀಶ್ವರ ಕಲ್ಯಾಣ' ಎಂಬ ಹರಿಕಥೆಯನ್ನು ನಡೆಸಿದ ಸಭೆಯು ಬರ್ಖಾಸ್ತು ಮಾಡಲಾಯಿತು.

ಡಾಕ್ಟರ್ ಫ್ರಾನ್ಸಿಸ್ ಪಿಂಟೋ
ದಂತ ವೈದ್ಯರು.

ನಿಮ್ಮ ಹಲ್ಲನ್ನು ಉಚಿತವಾಗಿ ಪರೀಕ್ಷಿಸುವರು.

ನಿಮ್ಮ ಶರೀರಕ್ಕೆ ನೋವಿಲ್ಲದಂತೆ ನಿಮ್ಮ ದಂತಕ್ಕೆ ಶಸ್ತ್ರ ಕ್ರಿಯೆ ನಡೆಸಿ ಹಲ್ಲು ಕೀಳುವರು, ... ಸೊಗಸಾಗಿ ಕಾಣುವಂಥಾ ಕೃತಕ ಹಲ್ಲುಗಳನ್ನು ಬಹಳ ಉತ್ತಮ ... ನಿಮ್ಮ ಮನಸ್ಸೊಪ್ಪುವಂತೆ ಕಟ್ಟಿ ಕೊಡುವರು.

4—3 ವೀರಾಜಪೇಟೆ, (ದ. ಕೊಡಗು

ಪತ್ರವ್ಯವಹಾರ.

[ಬರಹಗಾರರು ಪಡುವ ಅಭಿಪ್ರಾಯಗಳಿಗೆ ನಾವು ಜವಾಬ್ದಾರರಲ್ಲ. ಸಂ]

ಕೂಲಿಗಾರರು ಮನುಷ್ಯರು ಆಗಬಾರದೇ?

ಮೊನ್ನೆ ನಡೆದ ಕಾಫಿ ವ್ಯವಸಾಯಗಾರರ ಸಭೆಯಲ್ಲಿ ಕಾಫಿ ಕೆಲಸ ಮಾಡುವ ಕೂಲಿಯವರಿಗೆ ಇನ್ನು ಮುಂದಕ್ಕೆ ದಿನ ಒಂದರ ಗಂಡಸಿಗೆ ... ಮತ್ತು ಗಂಡಸಿಗೆ ... ಕೂಲಿಯನ್ನು ಕೊಡಬೇಕೆಂದು ತೀರ್ಮಾನಿಸಿದ್ದಾರೆ. ... ಕೆಲಸ ಮಾಡಿ ತಮ್ಮ ಸಂಸಾರವನ್ನು ... ಇಷ್ಟು ಕಡಿಮೆ. ... ಅವರ ಜೀವನವು ಹೇಗೆ ನಡೆಯಬೇಕು; ... ಎಂಬ ಸಂಗತಿಯನ್ನು ಇವರ ಕಡೆಯ ... ಕೂಲಿಯವರಿಗೆ ಹೆಚ್ಚಿನ ವಿಟ್ಟಿನ ಅನುಕೂಲತೆಯನ್ನು ಕೊಡಬೇಕಾದದ್ದು ನಮಗಳ ಕೆಲಸ ಅಲ್ಲದೆ ನಾವು ಅವರಿಂದ ಬೇಕಾದ ಅನುಕೂಲತೆಯನ್ನು ಪಡೆಯುವವರಾಗಿದ್ದೇವೆ ಎಂದು ... ಹೇಳುತ್ತಿರುವುದು ನ್ಯಾಯವಾಗಿದೆ. ಹೀಗಿದ್ದು ಕಾಫಿ ತೋಟದವರು ಕೂಲಿಯವರ ... ಸೌಕರ್ಯವನ್ನು ಕೊಡದಂತೆಯೋ ಎಂಬುದು. ... ಹೀಗಿರುವುದರಿಂದ ಕೂಲಿ ... ಇವರ ಅನುಕೂಲತೆ ಬಗ್ಗೆ ಒಂದು ಚಳವಳಿ ಹೂಡುವುದು ಅಗತ್ಯ ಕಾಣುತ್ತೆ. ... ಕೂಲಿಯವರು ... ಹೀಗೆ ... ಅನುಕೂಲತೆ ... ಅದುದರಿಂದ ಇವರ ಅನುಕೂಲತೆ ಬಗ್ಗೆ ಹೆಚ್ಚು ... ನಮ್ಮೆಲ್ಲರ ಕೆಲಸವಾಗಿದೆ.

ಹಿತಚಿಂತಕ.

"ಅಹ! ನಿನಗೆ ಎಂಥ ಜಾಣನಾದ ಅಗಸನು ಒಟ್ಟೆಯೊಗೆಯುತ್ತಿರುವನು! ನಿನ್ನ ವಸ್ತ್ರಗಳೆಲ್ಲವೂ ಮನಮೆಚ್ಚುವಷ್ಟು ಶುಭ್ರವಾಗಿವೆ."

"ಅಗಸನೇ? ಇದು ನನ್ನ ಈ ವಸ್ತ್ರಗಳನ್ನೆಲ್ಲವನ್ನು ನಾನೇ 501 ಮಾರ್ಕಿನ ಸಾಬೂನಿನಿಂದ ಒಗೆದೆನು."

ನೊರೆ ಅಧಿಕ.
ವಸ್ತ್ರ ಬಾಳಿಕೆ.
ಕ್ರಿಮಿನಾಶಕ ಕಡಿಮೆ!

ಟಾಟಾ ಕಂಪನಿ ... ಮಾರ್ಕಿನ ಮುದ್ರೆ. ... ಮಂಗಳಕರ ...

501 Soap

ತಯಾರಿಸುವವರು—ತಾತಾ ಆಯಿಲ್ ಮಿಲ್ಸ್ ಕಂಪೆನಿ, ಲಿಮಿಟೆಡ್. ಬೊಂಬಾಯಿ, ಮತ್ತು ತಾತಾಪುರ.

52- 42. ಕೊಡಗಿನ ಡಿಸ್ಟ್ರಿಬ್ಯೂಟರ್—ಬಿ. ಎಸ್. ಸುಬ್ಬಣ್ಣ, ಸಂತೆಪೇಟೆ, ಮೈಸೂರು.

ನೂತನ! ಮನೋಲ್ಲಾಸಕರ!! ರುಚಿಕರ!!! ಆಹಾರ ವಿಶ್ರಾಂತಿಗೃಹ!!!!

ಬೊಂಬಾಯಿ ರೆಸ್ಟೋರೆಂಟ್

ಇದೇ ತಾ. 19—12—1935ರಲ್ಲಿ ಮಡಿಕೇರಿ ಚೌಕದಲ್ಲಿರುವ ಹೊಸ ಕಟ್ಟಡದಲ್ಲಿ ತೆರೆಯಲ್ಪಟ್ಟಿದೆ.

ಆರೋಗ್ಯಕರವೂ ಆಧುನಿಕವೂ ಆದ ಉತ್ತಮ ಗೃಹಪ್ರೋಪಸ್ಕರ, ನಿರೀಕ್ಷಿಸುವ ಮಹನೀಯರುಗಳ ಸೌಕರ್ಯಕ್ಕಾಗಿ ತೆರೆಯಲಾಗಿರುವುದು.

ಶುದ್ಧವೂ, ಪುಷ್ಟಿಕರವೂ, ಆರೋಗ್ಯಕರವೂ ಆದ ತಿಂಡಿಗಳನ್ನೂ

ಕಾಫಿ—ಚಹಾ—ಕೋಕೋ—ಶರ್ಬತ್ತು ಇತ್ಯಾದಿ ಪಾನೀಯಗಳೂ—

ಕೇವಲ ಹಲವು ವರ್ಷಗಳ ಅನುಭವಿಕರಿಂದ ತಯಾರಿಸಲ್ಪಡುವುವು.

ಗಿರಾಕಿಗಳ ಸೌಕರ್ಯವನ್ನು ಲಕ್ಷಿಸಿ, ಆಸನಗಳ—ವಿಶಾಲ ಕೊಠಡಿಗಳ—ಕಾಯಿಲೆ ತಪ್ಪಿಸೋ ವಿಸೇಷ ಸೇವಕರ ಏರ್ಪಾಡು ಇದೆ.

... ಆಧುನಿಕ ಈ ವಿಶ್ರಾಂತಿಗೃಹದಲ್ಲಿ—

ನೀವು ಅಪೇಕ್ಷಿಸಿದ—ನೀವು ನಿರೀಕ್ಷಿಸಿದ—ನೀವು ಹೊಂದಲೇಬೇಕಾದ—

ಸಕಲ ಅನುಕೂಲತೆಗಳನ್ನು ಕಂಡ, ಪೂರ್ಣ ತೃಪ್ತಿ ಹೊಂದಿರಿ.

ಮದುವೆ ಮತ್ತು ಉಪನಯನ ಸಮಾರಂಭಗಳಿಗೂ ಮತ್ತು "ಟೀ"ಪಾರ್ಟಿ—

"ಎಟ್-ಹೋಮ"ಗಳಿಗೂ ನಮ್ಮನ್ನು ಮರೆಯಬೇಡಿ.

52—13 ಪ್ರೊಪ್ರೈಟರ್— ... ರಾವ್, ಗೋಣಿಕೊಪ್ಪಲು.

ಪ್ರಸಿದ್ಧ ಔಷಧಗಳು.

ಮಲೇರಿಯಾಕ್ಕೆ ಒಂದೇ ಸಿದ್ಧೌಷಧ.

ಶುದ್ಧವಾದ ಹಿಂದೂಸ್ಥಾನದ ಮೂಲಿಕೆಗಳಿಂದ ತಯಾರಾದದ್ದು.

ಕ್ವಿನಿನನ್ನು ಯಾವ ರೂಪದಲ್ಲೂ ಸೇರಿಸಿಲ್ಲ.

"ನವರತ್ನ ಅಬ್ಕಾರಿಯಾ"

ಹಿಂದೂದೇಶದ ಔಷಧಗಳ ವಿಚಾರದಲ್ಲಿ ಶ್ರೇಷ್ಠತೆಯನ್ನು ಪಡೆದ ಡಾ. ಕೆ. ಎಂ. ನಾಡ್ಕರ್ಣಿ ಮತ್ತು ಡಾ. ಕೆ. ಸಿ. ಬೋಸ್‌ರವರ ಗ್ರಂಥಗಳಿಗನುಗುಣವಾಗಿ ... ಔಷಧಗಳ ... ನೆರವಿನಿಂದ ತಯಾರಿಸಲ್ಪಟ್ಟ ಈ ಔಷಧವು ಹೆಚ್ಚು ಫಲಕಾರಿಯಾಗಿರುವುದು.

ಇದರಲ್ಲಿರುವ ಔಷಧಗಳು.

1. Andrographis Paniculate	2. Cocculas Cordifolius
3. Berriberies Aristata	4. Vernonis Cinerarea
5. Evolvulas Alsinoides	6. Dashmoola
7 Aconitum Heterophylum	8. Alstonia Scholaris

ಮಲೇರಿಯಾಕ್ಕೆ ಅತ್ಯುತ್ತಮ ಔಷಧಿ. ಕ್ವಿನಿನನ್ನು ಯಾವ ವಿಧದಲ್ಲೂ ಸೇರಿಸದೆ ಯಾವ ಬಾಧೆಯಲ್ಲೂ ... ಸಂಜೀವಿನಿ. ಇದನ್ನು ಎಷ್ಟು ಸೇವಿಸಿದರೂ ಕ್ವಿನಿನ್ ಸೇವನೆಯಿಂದ ಉಂಟಾಗಬಹುದಾದ ಮಹಾ ವ್ಯಾಧಿಗಳ ಭಯವೇ ಇಲ್ಲ. ಒಮ್ಮೆ ಪರೀಕ್ಷಿಸಿದಲ್ಲಿ ಮತ್ತೆ ಬಿಡಲಾರಿರಿ.

ತಯಾರಿಸುವವರು:—ದಿ ನವರತ್ನ ಫಾರ್ಮಸಿ,
ಪೋ. ಬಾ. ನಂಬರ. 68, ಕೊಚ್ಚಿನ್.

ಸ್ಟಾಕಿಸ್ಟ್—ಎ. ಎಸ್. ಸುಬ್ಬಯ್ಯ, ಬಟ್ಟೆ ವ್ಯಾಪಾರಿ, ಕುಂಟಿಕೊಪ್ಪ. | ಏಜೆಂಟ್—ಡಿ. ಬಿ. ... , ಸೋಮವಾರಪೇಟೆ, ...

52—40

ಕಿದು ಬಂದಿದೆ. ಆ ಸಮಿತಿಯು ಮಾರ್ಚಿ 11 ರಂದ ಅದರ ಕಾರ್ಯವನ್ನು ಪ್ರಾರಂಭಿಸುವದು.

ಮಾರ್ಚಿ ತಾ. 8.

ಲಾರ್ಡ್ ಮುಲುಗೇಟಿಂವರ ಮರಣ.

ಯುದ್ಧ ಮಂತ್ರಿಗಳಾಗಿದ್ದ 70 ವರ್ಷ ಪ್ರಾಯದ ಸೇನಾಪತಿಗಳಾದ ಲಾರ್ಡ್ ಮುಲುಗೇಟಿಂವರು ನಿನ್ನೆ ನಿದ್ರೆಯಲ್ಲಿ ಕಾಯಿಲೆಯಿಂದ ಮೃತರಾದರೆಂದು ತಿಳಿದುಬಂದಿದೆ. ಇವರು ಕಾಳಿಂಗ ರಣರಂಗದ ಸೇನಾಧಿಪತಿಯಾಗಿದ್ದರು.

ಯುದ್ಧವನ್ನು ನಿಲ್ಲಿಸಿದರು.

ಮುಂದೆ ಆಗುವ ರಾಜಿ ಪ್ರಯತ್ನಗಳ ಕಾರಣದಿಂದ ಈ ಜಪಾನಿನ ಅಧಿಕಾರಿಗಳು ಯುದ್ಧವನ್ನು ತಾತ್ಕಾಲಿಕವಾಗಿ ನಿಲ್ಲಿಸಲು ಅಪ್ಪಣೆ ಕೊಟ್ಟಿರುವುದಾಗಿ ತಿಳಿದು ಬಂದಿದೆ. ಹೀಗೆಯೇ ಈ ಅಪ್ಪಣೆ ವಿಷಯವಾಗಿ ಬೇರೆ ತಿಳಿಸುವವರೆಗೆ ಅನ್ವಯಿಸುತ್ತದೆ. ಸ್ಪೈನ್ನಲ್ಲಿ ಇದೇ ಅನುಭವ ಬಂದಿದೆಯಂತೆ.

ಮಾರ್ಚಿ ತಾ. 9.

ರಾಜಿ ಪ್ರಯತ್ನದ ಮುರಿತ

ಇಟೆಲಿಯ ವಿಮಾನಗಳು ಪುನಃ ತಮ್ಮ ಧಾಳಿಯನ್ನು ಕೈಕೊಂಡಿವೆ.

ಬ್ರಿಟಿಷ್ ಹಡಗಿನ ಮೇಲೆ ಪುನಃ ಬಾಂಬು

ಇಟೆಲಿ ವಿಮಾನಗಳು ತಿರುಗಿ ಬಂದು, ಬ್ರಿಟಿಷ್ ರಿಲೀಫ್ ಹಡಗಿನ ಮೇಲೆ ಪುನಃ ಬಾಂಬುಗಳ ಮಳೆಗರೆದರೂ ಹೆಚ್ಚು ಹಾನಿಯಾಗಲಿಲ್ಲ. ಧ್ವಂಸವಾಗಲಿಲ್ಲವೆಂದೂ, ಬ್ರಿಟಿಷ್ ರಿಲೀಫ್ ಕಂಪೆನಿಯು ಈ ವಿಷಯದಲ್ಲಿ ಬಲವಾಗಿ ಪ್ರತಿಭಟಿಸುವದೆಂದೂ ತಿಳಿದುಬಂದಿದೆ.

ಅಡೀಸ್ ಅಬಾಬದಲ್ಲಿ ಗಲಭೆ

ಎಡ್ಡಿದರೂ ಇಟಲಿ ವಿಮಾನಗಳು ರಂಜಾಗಡ ಕಡೆ ಬಂದಲ್ಲಿ ಬರುವ ತಿಳಿವಳಿಕೆಯು ಅಲ್ಲಲ್ಲಿ ದೇಶಗಳ ಜನರಿದ್ದ ಬ್ಬುದರಿಂದ ಅವಾಂತರಗಳು ಎರಡು ವಿಮಾನಗಳು ಬಂದವೆಂಬ ವಾರ್ತೆಯು ಹಬ್ಬಿದೊಡನೆಯೇ ಅಡೀಸ್ ಅಬಾಬದಲ್ಲಿ ಬಹಳ ಗಲಭೆಯಾಯಿತು. ಕ್ಷಣ ಹೊತ್ತಿನಲ್ಲಿ ಪುರಜನರಿಗೆ ಪಟ್ಟಣವನ್ನು ಬಿಟ್ಟರು. ಬೀದಿಗಳಲ್ಲಿ ಓಡುವವರಿಗೆ ಗುಂಡು ಹೊಡೆದ ಕೊಲೆಗಳು ಸಂಭವಿಸಿದವು. ಆದರೆ ವಿಮಾನಗಳು ಬರಲೇ ಇಲ್ಲ. ಆದರೆ ಆ ವಿಮಾನಗಳು ಹೊರ ರಾಜ್ಯಗಳಲ್ಲಿ ಯದ ಎರಿಟ್ರೀಯನ್ ಎಂಬಲ್ಲಿಗೆ 14 ಬಾಂಬುಗಳನ್ನು ಹಾಕಿ ಹಾನಿ ಮಾಡಿದವು.

ಮಾರ್ಚಿ ತಾ. 10.

ಯುದ್ಧವು ನಿಲ್ಲುವದಿಲ್ಲ.

ಯುದ್ಧವು ನಿಲ್ಲಿಸಲ್ಪಟ್ಟು ರಾಜಿ ಪ್ರಯತ್ನಗಳು ಮುಂದುವರಿಯುವವೆಂಬ ವಾರ್ತೆಗಳು ತೀರಾ ಸುಳ್ಳೆಂದು ರೋಮಿನಿಂದ ಪ್ರಕಟವಾಗಿದೆ. ಇಟೆಲಿಯ 3000 ಸೈನ್ಯಗಳು ಆಫ್ರಿಕಾ ರಣರಂಗಕ್ಕೆ ಕಳುಹಿಸಲ್ಪಟ್ಟಿರುವವು. ಶೀಘ್ರದಲ್ಲೇ ಇನ್ನೂ ಕಳುಹಿಸಲ್ಪಡುವುದಂತೆ. ಹಾಗೂ ಯುದ್ಧ ಕಾರ್ಯಗಳನ್ನು ಸ್ಥಿರವಾಗಿ ಮುಂದರಿಸಬೇಕೆಂದು ಇಟೆಲಿಯ ನಾಯಕರು ಅಭಿಪ್ರಾಯಪಡುತ್ತಿರುವರು.

ಬೆಂಗಳೂರು ಕೊಡಗು ಸಂಘ.

ಮೇಲಿನ ಸಂಘದ 15ನೇ ವಾರ್ಷಿಕ ಮಹೋತ್ಸವವು ಇದೇ ತಾರೀಖು 1ನೇ ರವಿವಾರ ಮೆ. ಕೆ. ಎ. ಚಂಗಪ್ಪನವರ ಅಧ್ಯಕ್ಷತೆಯಲ್ಲಿ ಜರುಗಿತು. ಈ ಸಂದರ್ಭದಲ್ಲಿ ಬೆಂಗಳೂರು ಪಟ್ಟಣಕ್ಕೆ ಕೂಡಿಯಲು ಸಿದ್ಧರನ್ನು ಒಳಗೊಂಡ ಮಿತ್ರವಾದ ಸಹೋದರರಿಗೆಲ್ಲ ಒಂದಾಗಿ ಬೆಂಗಳೂರಿನಿಂದ ಸುಮಾರು 15 ಮೈಲು ದೂರವಿರುವ ವಿಹಾರ ಸರೋವರಕ್ಕೆ ಹೋಗಿ 'ಪಿಕ್‌ನಿಕ್' ಪಾರ್ಟಿಯು ಏರ್ಪಡಿಸಲ್ಪಟ್ಟಿತು. ಸುಮಾರು 25 ಸದಸ್ಯರುಗಳು ಹಾಜರಿದ್ದರು.

ಸರೋವರದ ದಡಕ್ಕೆ ಸದಸ್ಯರುಗಳೆಲ್ಲರೂ ಮಧ್ಯಾಹ್ನ 11 ಗಂಟೆಗೆ ತಲುಪಿ ಒಂದೆರಡು ತಾಸು ಆಟವಿನೋದಗಳಿಂದ ಸಮಯವನ್ನು ಕಳೆದರು. ತದನಂತರ ಎಲ್ಲರೂ ಮಧ್ಯಾಹ್ನದ ಊಟವನ್ನು ಮುಗಿಸಿಕೊಂಡು 3 ಗಂಟೆಗೆ ಮೀಟಿಂಗಿಗೆ ಕುಳಿತರು. ಆದಿಯಲ್ಲಿ ಸಂಘದ ಕಾರ್ಯದರ್ಶಿಯವರು ವಾರ್ಷಿಕ ವರದಿಯನ್ನು ಓದಿ ಸಂಘದ ಮುಂದಿಟ್ಟರು. ಸದಸ್ಯರುಗಳ ಅಭಿಪ್ರಾಯದಂತೆ ವರದಿಯು ಕೆಲವು ಬದಲಾವಣೆಯೊಡನೆ ಒಪ್ಪಲ್ಪಟ್ಟಿತು. 1935 ನೇ ವರ್ಷದ ಆಖ್ಯದಲ್ಲಿ ಸಂಘದ ಜಮಾ ರೂ. 210 ಎಂದು ವರದಿಯಲ್ಲಿ ತೋರಿಸಲ್ಪಟ್ಟಿತು.

ಆ ಮೇಲೆ 1936 ನೇ ವರ್ಷಕ್ಕೆ ಈ ಕೆಳಗಿನ ಸದಸ್ಯರುಗಳು ಹೊಸ ಕಾರ್ಯ ಮಂಡಳಿಯ ಸದಸ್ಯರುಗಳಾಗಿ ಆರಿಸಲ್ಪಟ್ಟರು.

ಮೆ ಗಳಾದ ಯಂ. ಯಸ್. ಮುತ್ತಣ್ಣನವರು, (ಅಧ್ಯಕ್ಷರು) ಪಿ ಪಿ ಸೋಮಯ್ಯನವರು (ಕಾರ್ಯದರ್ಶಿ) ಯಂ. ಪಿ ಬೆಳ್ಳಿಯಪ್ಪನವರು (ಖಜಾಂಚಿ) ಕಮಿಟಿ ಮೆಂಬರುಗಳಾಗಿ ಮಿಸೆಸ್ ಪಿ. ಪೂವಮ್ಮನವರು ಮೆ. ಗಳಾದ ಬಿ ಸಿ. ಸೋಮಯ್ಯನವರು ಮತ್ತು ಯನ್. ಯಸ್. ಉತ್ತಯ್ಯನವರನ್ನು ಆರಿಸಲಾಯಿತು.

ಆ ಮೇಲೆ ಅಧ್ಯಕ್ಷರ ಅನುಮತಿ ಮೇರೆ ಸದಸ್ಯರುಗಳು ಒಂದೆರಡು ಸೂಚನೆಗಳನ್ನು ಸಭೆಯ ಮುಂದಿಟ್ಟರು. ಮುಖ್ಯವಾಗಿ ಸಂಘಕ್ಕೆ ಒಂದು ಲಾಯಬ್ರರಿ ಏರ್ಪಡಬೇಕೆಂದು ಮೆ. ಪಿ.ಬಿ. ಯಸ್. ಮುತ್ತಣ್ಣನವರು ಸೂಚಿಸಿದರು. ಸಭ್ಯರು ಸಂಘದ ಕಾರ್ಯದರ್ಶಿಯವರ ಏರ್ಪಾಟಿನಲ್ಲಿ ಸಂಘದ ಏರ್ಪಾಡಾಗಿ ನಿಶ್ಚಯಿಸಲ್ಪಟ್ಟಿತು. ಮೆ. ಎ. ಸದಾಶಿವರಾವ್‌ರವರು ಸಂಘದ ವಾರ್ಷಿಕ ಚಂದಾ ಹಣವನ್ನು ರೂ 1 ರಿಂದ 3 ಕ್ಕೆ ಏರಿಸಬೇಕೆಂದು ಸೂಚಿಸಿದರು. ಈ ವಿಷಯ ಕೆಲವು ಚರ್ಚೆಯ ನಂತರ ಸೂಚನೆಯು ಓಟಿಗೆ ಹಾಕಲ್ಪಟ್ಟು ಬಹುಮತದಿಂದ ಮಂಜೂರಾಯಿತು.

ಆಖ್ಯದಲ್ಲಿ ಮೆ ಯಂ ಬೆಳ್ಳಿಯಪ್ಪನವರು ಸಂಘದ ಪರವಾಗಿ ನಿವೃತ್ತರಾದ ಕಾರ್ಯ ಮಂಡಳಿಯವರನ್ನೂ, ಮೆ. ಯಂ. ಮುತ್ತಣ್ಣನವರು ಹೊಸ ಕಾರ್ಯ ಮಂಡಳಿಯವರ ಪರವಾಗಿ ಸಭಿಕರನ್ನೂ ವಂದಿಸಿದ ನಂತರ ಸಭೆಯು ಬರಖಾಸ್ತಾಯಿತು.

5 ಗಂಟೆಗೆ ತಿಂಡಿ ತೀರ್ಥಗಳಾದ ನಂತರ ಸದಸ್ಯರುಗಳೆಲ್ಲರೂ ಸರೋವರದಿಂದ ಹೊರಟು 5½ ಗಂಟೆಗೆ ಬೆಂಗಳೂರು ಪಟ್ಟಣಕ್ಕೆ ಹಿಂತಿರುಗಿದರು.

113 ಹಿಂದೂ ಕಾಲನಿ, ದಾವರ್, ಬೆಂಗಳೂರು. — ಪಿ ಸಿ ಸೋಮಯ್ಯ, (ಗೌ ರವ ಕಾರ್ಯದರ್ಶಿ.)

ನೋಟೀಸು.

ಕೊಡಗಿನ ಗ್ರಾಮದಲ್ಲಿರುವ (1) ಬಸವರಾಜಯ್ಯ (2) ನೀಲಮ್ಮನವರ ಸರ ಇವರಿಂದ ನಮಗೆ ಬರಬೇಕಾದ ಹಣವು ತಿಳಿಯಪಡಿಸುವುದೇನೆಂದರೆ.—

ನಮ್ಮ ಜೊತೆ ತಂದೆ ಮಗನಾದ ಬಸಪ್ಪನವರು ಈ ನಡತೆಯಿಂದ ನಮ್ಮ ಮಾತನ್ನು ಕೇಳದೆ ಹೊರಗೆ ಹೋಗಿರುವರು ಮೂರು ವರ್ಷ ಪ್ರಾಯದ ಒಂದು ಕೂಸು ಮಗುವಿನ ಸಹ ಇರುತ್ತಾರೆ.

ಇವರು ನಮಗೆ ಪಿತ್ರಾರ್ಜಿತವಾದ ಸ್ಥಿರಸ್ವತ್ತಿನ ಕೆಲವು ಭಾಗಗಳನ್ನು ನಾಶಮಾಡಿ ಹೊರಟು ಹೋಗಿರುವ ವರ್ತಮಾನ ತಿಳಿಯುತ್ತೇವೆ. ಹಾಗೆ ಅವರು ಏನಾದರೂ ಸಾಲ ಮಾಡಿದರೆ ನಮ್ಮ ವಿನಾ ಅದಕ್ಕೆ ಯಾವ ಅಧಿಕಾರವೂ ಇರುವುದಿಲ್ಲ. ಇದನ್ನು ಬಿಟ್ಟು ಯಾರೇ ಆಗಲಿ ಅವರ ಸ್ವತ್ತಿನ ವಿಷಯ ಗಿರ್ವಿ, ಭೋಗ್ಯ, ಕ್ರಯ ವಗೈರೆ ಮಾಡಿ ಸಿದ್ದರೆ ಅದು ಊರ್ಜಿತವಾಗತಕ್ಕದ್ದಲ್ಲವೆಂಬ ಸಂಗತಿಯನ್ನು ಈ ಮೂಲಕ ತಿಳಿಸುತ್ತೇವೆ

ಕೊಡಗು,
೫೮ 15—3—38 — ಬಸವರಾಜಯ್ಯ, ನೀಲಮ್ಮ.

ಆದಿ ಶ್ರೀ ಕಾವೇರಿ ಬಸ್ಸ್ ಸರ್ವಿಸ್ ಲಿಮಿಟೆಡ್, ಮಡಿಕೇರಿ.

ಮೇಲ್ಕಂಡ ಕಂಪೆನಿಯಿಂದ ಶೇರು ಕೊಂಡಿರುವಂಥ ಮಹನೀಯರುಗಳು.

(ಮುಂದುವರಿದದ್ದು)

ಮೆ. ಕುಪ್ಪಂಡ ಚಂಗಪ್ಪನವರು	100	ಶೇರುಗಳು
,, ಬಾಚೆಟ್ಟಿರ ಕುಟ್ಟಪ್ಪನವರು	200	,,
,, ಅಮ್ಮತ್ತಿರ ರಾಮಯ್ಯನವರು	1	,,
,, ಮೂಕೊಂಡ ಐಯ್ಯಣ್ಣನವರು	1	,,
,, ಕಲ್ಲೆಂಗಡ ಜಿ. ಐಯ್ಯಣ್ಣನವರು	5	,,
ದಿವಾನ್ ಬಹದ್ದೂರ್ ಕೆ. ಚಂಗಪ್ಪನವರು ಬಿ.ಎ. (ರಿಟಯರ್ಡ್ ಆಫೀಸಿಯೇಟಿಂಗ್ ಕಮಿಶನರು)	10	,,

ಯು ಯಂ. ಅಣ್ಣಯ್ಯ,
ಸೆಕ್ರೆಟರಿ.

8—5

ಅಶ್ವಿನಿ ಕೊಡಗು ವಿದ್ಯಾರ್ಥಿಗಳ ಸಭೆ.

ಕೊಡಗು ವಿದ್ಯಾರ್ಥಿಗಳ ವಾರ್ಷಿಕ ಸಭೆಯು ತಾ. 8 ನೇ ಆದಿತ್ಯವಾರ ಕಾಲೇಜಿನಲ್ಲಿ ಪ್ರೊಫೆಸರ್ ಕಾಳಪ್ಪನವರ ಅಧ್ಯಕ್ಷತೆಯಲ್ಲಿ ಬಹು ವಿಜೃಂಭಣೆಯಲ್ಲಿ ನಡೆಯಿತು. ಸಭೆಯ ಮೆಂಬರಲ್ಲದೆ ಇನ್ನು ಅನೇಕ ಮಹನೀಯರುಗಳು ಮತ್ತು ಕೆಲವು ಯುರೋಪಿಯನ್ನರುಗಳು ಸಹ ಹಾಜರಿದ್ದರು. ಸಭೆಗೆ ಬರಮಾಡಿಕೊಳ್ಳಲಾಗಿ ಶ್ರೀ ಸಿ. ಕೆ. ಅಪ್ಪಚ್ಚನವರು ಕಳುಹಿಸಿದ ಕಾಗದವನ್ನು ಸಭೆಯ ಮುಂದೆ ಓದಲಾಯಿತು. ನಂತರ ಸಪ್ತ ಚಕ್ರವರ್ತಿಯವರ ಮರಣದ ಶೋಕ ವಾರ್ತೆಗಾಗಿ ಸಭಿಕರೆಲ್ಲರೂ ಒಂದು ನಿಮಿಷ ಎದ್ದು ನಿಂತಿದ್ದು ಯಿತು. ಅಲ್ಲದೆ ಶ್ರೀ ಮತಿ ಕಮಲ ಸೋಮಯ್ಯನವರ ಮರಣದಿಂದ ಹಿಂದುಸ್ಥಾನಕ್ಕೆ ಉಂಟಾದ ನಷ್ಟವನ್ನು ವರ್ಣಿಸಲಾಯಿತು. ಅಲ್ಲದೆ ಸಭೆಯಿಂದ ಶ್ರೀ ಜ. ನೆಹರುರವರಿಗೆ ಶೋಕವಾರ್ತೆಯ ತಂತಿಯನ್ನು ಕಳುಹುವುದಾಗಿ ಅಧ್ಯಕ್ಷರು ತೀರ್ಮಾನಿಸಿದರು. ಸಭೆಯಲ್ಲಿ ಕಮಿಟಿ ಮೀಟಿಂಗಿನಲ್ಲಿ ನಡೆದ ವರದಿಗಳನ್ನು ಓದಲಾಯಿತು. ಆ ಮೇಲೆ ಅಧ್ಯಕ್ಷರು ಕೊಡಗು ಕನ್ನಡವನ್ನು ಕುರಿತು ಉಪನ್ಯಾಸ ವಿಷಯ ತಿಳಿಸಿ ನಾನಾ ಸಭಾರಂಜನೆಯು. ಕೊಡಗು ಸರಕಾರದ ಈಗಿನ ಪರಿಸ್ಥಿತಿಯು ಬಹು ಶೋಚನೀಯವಾಗಿ ಕಾಣುತ್ತದೆ. ಕೊಡಗನ್ನು ತಾವಾಗಿಯೇ ಬ್ರಿಟಿಷ್ ಸ

ಏಜೆಂಟರು ಬೇಕಾಗಿದೆ.

(1) ಬೆಂಗಳೂರಿನ ಪ್ರಸಿದ್ಧ ಬಿಟ್ ಕೆಮಿಕಲ್ ವರ್ಕ್ಸ್ ಇವರ "ಬೆಟು ಲಿನ್" "ಹಿಮಶೋಭ" ಬಯೋಕೆಮಿಕಲ್, (2) ಹೆನ್ರಿ ದಿವಾನ್ ಇವರ 'ಫೆಮಿಲಿ, ಜನರ್, ಮೇರಿ,' ಬಿಸ್ಕಟುಗಳು, (3) ಲಕ್ಷ್ಮೀ ಮೆನುಫೆಕ್ಚರಿಂಗ್ ಕಂಪೆನಿಯವರ "ಲಕ್ಷ್ಮೀ, ಮೋಹನ್ಯಂತ್ರಿ, ವೆಸ್ಲಿನ್, ದಂತಮಂಜನ," ಇವುಗಳನ್ನು ಮಾರಾಟ ಮಾಡಲು ಕೊಡಗಿನ ಮುಖ್ಯ ಪಟ್ಟಣಗಳಲ್ಲಿ ಏಜಂಟರು ಬೇಕಾಗಿರುವರು. ಕಮಿಶನ್ ಕೊಡಲಾಗುವದು, ಶರ್ತಗಳಿಗಾಗಿಯೂ, ವಿವರಕ್ಕಾಗಿಯೂ ಈ ಕೆಳಗಿನ ವಿಳಾಸಕ್ಕೆ ಪತ್ರವ್ಯವಹಾರ ಮಾಡಬೇಕು:—

X.
C/o. "Kodagu" Ltd.,
Mercara.

4—1

ಸೂಚನೆ.

ಇನ್ನು ಮುಂದೆ ನಮ್ಮ ಪತ್ರಿಕೆಯು ಪ್ರತಿ ವಾರ ಈ ಕೆಳಗೆ ಸೂಚಿಸಿರುವ ಏಜಂಟರುಗಳಿಂದ ಆಯಾಯ ಸ್ಥಳಗಳಲ್ಲಿ ಹಂಚಲ್ಪಡುವವು.

ಅಮ್ಮತ್ತಿ— ಮಿ. ನೆಲ್ಲಮಕ್ಕಳ ಅಪ್ಪಯ್ಯನವರು, ವ್ಯಾಪಾರಿ.
ಗೋಣಿಕೊಪ್ಪಲು— ಮಿ. ಮಲ್ಲೇಂಗಡ ಚಂಗಪ್ಪನವರು, ಮಿ ಎ. ಕಾಳಪ್ಪಯ್ಯನವರ ಹೋಟೇಲು.
ಪೊನ್ನಂಪೇಟೆ— ಮಿ ಪಿ. ಜಿ. ಮುದ್ದಪ್ಪಯ್ಯನವರ, ಯೂನಿಯನ್ ಆಫೀಸು.
ಕುಂಬಾರಗಡಿಗೆ— ಮಿ. ಎ. ಎಸ್. ಮಹಾಬಲೇಶ್ವರ, ಟಿಪ್ಪು ವ್ಯಾಪಾರಿ.

'ಕೊಡಗು' ಆಫೀಸ್, ಮೇನೇಜರು.
ತಾ. 13—3—36.

ಒಳದೇಶ.

ಮಡಿಕೇರಿ ಬಳಿಯ ಬೇ ತಪ್ಪಿನಲ್ಲಿ ಅಕ್ಕಿ ಮಾಡುವ ಗಿರಣಿಯೊಂದು ತೆರೆಯಲ್ಪಟ್ಟಿದೆ.

'ಕೊಡಗು' ಕಂಪೆನಿಯ ಷೇರುದಾರರುಗಳ ವಿಚಾರಗೆಂದು ಈ ತಾ. 11ರಲ್ಲಿ ವೀರಾಜಪೇಟೆಯಲ್ಲಿ ನಡೆಯಿತು.

ಈ ವಾರ ಮಡಿಕೇರಿಯ ಬಾಣಿಮೊಟ್ಟೆಯಲ್ಲಿ ಇಬ್ಬರಿಗೆ ಪ್ಲೇಗು ಅಂಟಿ ಆಸ್ಪತ್ರೆಗೆ ಸಾಗಿಸಲ್ಪಟ್ಟಿರುವರೆಂದು ತಿಳಿಯುತ್ತೇವೆ.

ಕೊಡಗು ಟಿರಿಟೋರಿಯಲ್ ಪಟಾಲಮಿಗೆ ಹೊಸದಾಗಿ ಸೇರಿಸಲ್ಪಟ್ಟಿರುವವರ ತರಪೇತು ಈ ತಾ. 9 ರಲ್ಲಿ ಮಡಿಕೇರಿಯಲ್ಲಿ ಪ್ರಾರಂಭವಾಗಿದೆ.

ಈ ವಾರ ವೀರಾಜಪೇಟೆಯಲ್ಲಿ ಭತ್ತ ಗಾಡಿಯೊಂದಕ್ಕೆ ರೂ. 41 ಮತ್ತು ಮಡಿಕೇರಿಯಲ್ಲಿ ಕಾಫಿ ಖಂಡಿಗೆ ರೂ. 127 ಕ್ರಯವಿತ್ತೆಂದು ತಿಳಿಯಬರುತ್ತದೆ.

ಪ್ರಸಿದ್ಧ ಪ್ರೊಫೆಸರ್ ಟಿ ಎಂ. ಶ್ರೀನಿವಾಸಾಚಾರ್ಯರು ಈ ತಾ. 11 ನೇ ತಾ 12ರಲ್ಲಿ ಮಡಿಕೇರಿ ಹೈಸ್ಕೂಲು ಹಾಲಿನಲ್ಲಿ ತಮ್ಮ ಸಂಗೀತ ಯಂತ್ರಗಳ ವಿದ್ಯೆಯನ್ನು ಪ್ರದರ್ಶಿಸಿದರು.

ಶ್ರೀಮತಿ ಕಮಲ ಸಹಾಯವನ ಮುದಣಕ್ಕೆ ದುಃಖ ಸಹಿಷ್ಣುತೆ ಮಾಡಲು, ಹಿಂದೂ ದೇಶದ ದೇವಾಲಯ ಕಡೆಗಳಲ್ಲಿ ನಡೆಸಿದಂತೆ ಈ ತಾ. 11ರಲ್ಲಿ ವೀರಾಜಪೇಟೆಯಲ್ಲಿ ಸಂತಾಪದ ಸಾರ್ವಜನಿಕ ಸಭೆಯೊಂದು ನಡೆಸಲ್ಪಟ್ಟಿತು.

ಡಿ. ಪಿ ಡಬ್ಲ್ಯು. ಹೆಡ್ಡಾಫೀಸಿನ ಟೆಬಲ್ ಡಾಕ್ ಹೆಡ್ ಕ್ಲಾರ್ಕರಾದ ಮಿ. ಪದ್ಮನಾಭ ಮೊದಲಿಯಾರವರ ಏಗನು ಕೃಷ್ಣಸ್ವಾಮಿ ಮೊದಲಿಯಾರರವರು ಈ ತಾ 12ರ ಮಧ್ಯಾಹ್ನ ಮಡಿಕೇರಿ ಪಂಪು ಕೆರೆಗೆ ಬಿದ್ದು ಆತ್ಮಹತ್ಯ ಮಾಡಿಕೊಂಡರೆಂದು ತಿಳಿಯಬರುತ್ತದೆ.

ಮಡಿಕೇರಿ ಸಿವಿಲ್ ಆಸ್ಪತ್ರೆಯ ಚಾರ್ಜಿನಲ್ಲಿದ್ದ ಮಿ. ಕೋಳಿಯಂಡ ಕಾರ್ಯಪ್ಪ ಎಲ್. ಎಂ. ಪಿ ಯವರು ಮಲೇರಿಯಾ ಜ್ವರದ ವಿಷಯ ಹೆಚ್ಚಿನ ವ್ಯಾಸಂಗ ಪಡೆಯಲು 6 ವಾರಗಳ ಮಟ್ಟಿಗೆ ಮದರಾಸಿನ ಕಸೌಲಿಗೆ ಈ ತಾರೀಖು 10 ರಲ್ಲಿ ಕಳುಹಿಸಲ್ಪಟ್ಟಿರುವರು. ಇವರ ಸ್ಥಳಕ್ಕೆ ಡಾಕ್ಟರ್ ಮಾಚಪ್ಪನವರೂ, ಮಾಚಪ್ಪನವರ ಬದಲಿಗೆ ಮಿ. ಮಾಣಿಕರ ಪಮ್ಮಯ್ಯನವರೂ ನೇಮಿಸಲ್ಪಟ್ಟಿರುವರೆಂದು ತಿಳಿಯುತ್ತೇವೆ.

ಹಿಂದೂದೇಶ.

ಪೋರ್ ಬಂದರಿನಲ್ಲಿ ಹೆಣ್ಣು ಮಕ್ಕಳಿಗೊಂದು ಕನ್ಯಾ ಗುರುಕುಲವನ್ನು ಸ್ಥಾಪಿಸಲು ಸೇಟ್ ನಾನ್ಜಿ ಕಾಳಿದಾಸ ಎಂಬ ಶ್ರೀಮಂತರು 3 ಲಕ್ಷ ರೂಪಾಯಿಗಳನ್ನು ದಾನಮಾಡಿದ್ದಾರೆ.

ಯೂನಿವರ್ಸಿಟಿ ಸ್ಟೂಡೆಂಟ್ಸ್ ಯೂನಿಯನ್ನಿನ ಪ್ರೆಸಿಡೆಂಟರನ್ನು ಹೊರದೂಡಿದುದಕ್ಕೆ ರಂಗೂನ್ ಯೂನಿವರ್ಸಿಟಿ ಕಾಲೇಜಿನ 1,000 ಕ್ಕೆ ಮೇಲ್ಪಟ್ಟ ವಿದ್ಯಾರ್ಥಿ, ವಿದ್ಯಾರ್ಥಿನಿಯರು ಮುಷ್ಕರ ಹಿಡಿದಿರುವರು.

ಬರೋಡಾ ಸಂಸ್ಥಾನಕ್ಕೆ ಸೇರಿದ ವಿಜಾಪೂರ್ ತಾಲೋಕು ಉಳಿಕ ಎಂಬ ಹಳ್ಳಿಯಲ್ಲಿ ಒಬ್ಬ ಹೆಂಗಸು ವಿಕಾಲದಲ್ಲಿ ಇಬ್ಬರು ಗಂಡು ಮಕ್ಕಳನ್ನೂ, ಏಕ ಮಂದಿ ಹೆಣ್ಣು ಮಕ್ಕಳನ್ನೂ ಹೆತ್ತಿರುವಳೆಂಬ ಅಪರೂಪ ಸುದ್ದಿ ಪ್ರಕಟವಾಗಿದೆ.

ಕ್ವೆಟ್ಟಾದ ವೂಡ್ಸ್ಟಂಗ್ ರೈಲ್ವೆ ಸ್ಟೇಶನಿನಲ್ಲಿ ಈಚೆಗೆ ಸುಮಾರು 5 ಸೆಕೆಂಡುಗಳ ವರೆಗೆ ಭಯಂಕರ ಭೂಕಂಪವುಂಟಾಯಿತು. ಆದರೆ ಪ್ರಾಣಹಾನಿಯೇನೂ ಆಗಿಲ್ಲ. ಜನರೆಲ್ಲರೂ ಗಾಬರಿಗೊಂಡು ಕೆಲಕಾಲ ಹೊರ ಅಂಗಣದಲ್ಲೇ ಮಲಗಿಕೊಳ್ಳುತ್ತಿದ್ದಾರೆ.

ಆನೆಯ ಬಹಳ ಹೆಚ್ಚು ಕಾಲ ಬದುಕುವ ಪ್ರಾಣಿ. ಇದರ ಆಯುಷ್ಯವು ಸಾಧಾರಣ 200 ವರ್ಷ. ಕಡಲಿನ ತಿಮಿಂಗಿಲಗಳು ಇದಕ್ಕಿಂತ ಹೆಚ್ಚಿನ ಕಾಲ ಬದುಕುವವು. ಇವುಗಳ ಆಯುಷ್ಯವು 300 ವರ್ಷವಂತೆ. ಮೊಸಳೆಗಳಿಗೂ ತಿಮಿಂಗಿಲಗಳಿಗೂ ಇದಕ್ಕಿಂತ ಹೆಚ್ಚಿನ ಆಯುಷ್ಯವಿದೆಯಂತೆ!

ಉತ್ತರ ಪ್ರಾಂತದ ಜಿಲ್ಲೆಯೊಂದರಲ್ಲಿ 400 ಮಂದಿ ಸಾಧುಗಳು, ಇವರಿಗೆ ಆ ಗ್ರಾಮದವರು 4 ಗಂಟೆ ಹೊತ್ತಿಗೆಯು, ರಾತ್ರಿ ಅಗ್ನಿಷ್ಟಿಕೆ ಹಾಕಲು ಕೊಡಲಿತಪ್ಪಿಸಲ್ಪಡದುದು ಸಿಟ್ಟಿಗೆದ್ದು, ಗ್ರಾಮಸ್ಥರ ಮನೆ ನಗ್ಗಿ, ಲೂಟಿ ಮಾಡಿ, ಹೊಡೆದು ಬಡಿದು, ಜಾನುವಾರುಗಳನ್ನು ಬಡಿದೋಡಿಸಿ, ಹೊಲದ ಬೆಳೆಗಳನ್ನು ನಾಶಮಾಡಿ, ಕೆಲವು ಮನೆಗಳಿಗೆ ಬೆಂಕಿ ಕೊಟ್ಟು ಪೋಲೀಸರು ಬರುವಷ್ಟರಲ್ಲಿ ಪಲಾಯನ ಮಾಡಿದ್ದಾರೆ.

ಭೂಕಂಪದಿಂದ ಕ್ವೆಟ್ಟಾ ನಗರದಲ್ಲಿ ಹಾಳಾಗಿಹೋದ ಆಸ್ತಿ ಪಾಸ್ತಿಗಳ ಪೈಕಿ ಫೆಬ್ರವರಿ ತಾ. 13ಕ್ಕೆ ಮುಗಿದ ವಾರದಲ್ಲಿ 2,97 687 ರೂಪಾಯಿಯಷ್ಟು ಸಾಮಾನುಗಳನ್ನು 1923 ಜನಗಳಿಗೆ ಕೊಡಲಾಯಿತೆಂದು ತಿಳಿಯುವುದು. ಅದರ ಈ ವರೆಗೆ 48,78 385 ರೂಪಾಯಿನ ಆಸ್ತಿ ಪಾಸ್ತಿಗಳೂ 6 785 ಜನಗಳಿಗೂ ದೊರೆತಂತಾಗಿದೆ. ಫೆಬ್ರವರಿ ತಾ. 13ನೆ ತಾರೀಖಿಗೆ 2,38,979 ರೂಪಾಯಿನ ಪರಿಹಾರ ಒದಗಿಸಿಕೊಡಲಾಗಿದೆಯೆಂದು ವರ್ತಮಾನ.

ಮಹಾತ್ಮ ಗಾಂಧಿಯವರು ಆಲ್ ಇಂಡಿಯಾ ಅಧ್ಯಕ್ಷರಾದ ಬಾಬು ರಾಜೇಂದ್ರ ಪ್ರಸಾದರೊಡನೆ ತಾ. 8ರಲ್ಲಿ ದೇಹಲಿಯನ್ನು ಸೇರಿರುವರು.

ಶಾನ್ ಪುರದಲ್ಲಿ ಪಂಡಿತ ವಿದ್ಯಾಧರರೆಂಬವರ ಮನೆಗೆ ಒಂದು ರಾತ್ರಿ ನುಗ್ಗಿ ಕಳ್ಳರು ಸಹಸ್ರಾರು ರೂಪಾಯಿಗಳ ನೋಟುಗಳನ್ನು ಕೊಂಡೊಯ್ದರು ಹೊರಟ ಈ ಕಳ್ಳರು ಸಿಕ್ಕಿ ಬಿದ್ದಿದ್ದಾರೆ!

ವಿದೇಶ.

ಚಕ್ರವರ್ತಿ ಎಡ್ವರ್ಡರು ನಾಳೆಗಾಗಿ ಸಭೆಯೊಂದನ್ನು ಕರೆದು ಚಿತ್ರವೊಂದು ಹೊಸ ಕಟ್ಟಡವನ್ನು... ಇದೇ ಸಮಯದಲ್ಲಿ ಅನೇಕ ದೇಶಗಳಿಗೆ ಸಾಮ್ರಾಜ್ಯದಲ್ಲಿ ಪ್ರಚಾರಕ್ಕೆ ಬರಲಿರುವ ಏರ್ಪಾಡುಗಳಾಗಿವೆ.

ಮಾರ್ಚಿ ತಾ. 5ಕ್ಕೆ ಮುಗಿದ ಒಂದು ವಾರದಲ್ಲಿ ಗ್ರೇಟ್ ಬ್ರಿಟನಿನ ರಸ್ತೆಗಳಲ್ಲಿ ವಾಹನಗಳಿಗೆ ಸಿಕ್ಕಿ 112 ಜನ ಅಕಾಲ ಮರಣ ಹೊಂದಿದರೆಂದೂ, 3 263 ಮಂದಿಗೆ ಗಾಯಗಳಾದುವೆಂದೂ ಪ್ರಕಟವಾಗಿದೆ.

ಬೇರೆ ಸೋವಿಯಟ್ ರಷ್ಯ ರಾಜ್ಯದಲ್ಲಿರುವ 18 ವರ್ಷಕ್ಕೆ ಮೇಲ್ಪಟ್ಟು 45 ವರ್ಷದೊಳಗಿರುವ ಪ್ರತಿಯೊಬ್ಬ ವ್ಯಕ್ತಿಯೂ ಮಿಲಿಟರಿ ಶಿಕ್ಷಣವನ್ನು ಎರಡು ವರ್ಷಗಳ ಕಾಲ ಪಡೆಯತಕ್ಕದೆಂದು ಪ್ರಕಟಣೆ ಮಾಡಿರುತ್ತಾರೆ.

ರಷ್ಯ-ಜಪಾನುಗಳೊಳಗೆ ಸದ್ಯದಲ್ಲೇ ಭೀಷಣ ಯುದ್ಧವಾಗುವುದೇ? ಅಲ್ಲದಿದ್ದರೆ ಸೋವಿಯಟ್-ಮಂಚುಕಾವೊ ಗಡಿಗಳಲ್ಲಿ ದೊಡ್ಡ ಪ್ರಮಾಣದಲ್ಲಿ ಯುದ್ಧದ ಸಿದ್ಧತೆಗಳು ನಡೆಯುತ್ತಿರುವುದೇಕೆ?—ಹೀಗೆಂಬ ತರ್ಕವೆದ್ದಿದೆ. ಅನುಮಾನದ ಇವುಗಳೊಳಗೆ ಥಟ್ಟನೆ ಯುದ್ಧ ಆರಂಭವಾದರೆ ಆಶ್ಚರ್ಯವೇನೂ ಇಲ್ಲ.

ಕಲಿ ತೂಕದ ಕೊಟ್ಟಿದ್ದಕ್ಕೆ ಈಗಾಗಲೇ ಅನೇಕರಿಗೆ ಜುಲ್ಮಾನೆಯಾಗಿದೆಯೆಂದು ಮಿ. ಕೆ. ಬಿ. ಯವರು ಬರೆದಿರುವರು. ಯಾವ ಪೋಲೀಸ್ ರಿಪೋರ್ಟುಗಳು ಯಾವ ಅಕ್ಟ್ ಮೇರೆ ಯಾವ್ಯಾವ ರೀತಿಯ ಜಡ್ಜಿಮೆಂಟ್ ಕೊಟ್ಟಿರುವರೆಂದು ದಯವಿಟ್ಟು ಅವರು ತಿಳಿಸಬೇಕೆಂದು ಕೇಳಿಕೊಳ್ಳುತ್ತೇನೆ. ಲೋಕದ ಎಲ್ಲ ಭಾಗಗಳಲ್ಲೂ ವಂಚನೆಗೆ ಶಿಕ್ಷೆಯಿದ್ದರೆ ಕೊಡಗಿನಲ್ಲಿ ಪ್ರಾಮಾಣಿಕತೆಗೆ ಶಿಕ್ಷೆ ಸಿಕ್ಕುವುದರಿಂದ ಈ ಜಡ್ಜಿಮೆಂಟುಗಳು ಲಾಂಪೋರ್ಟುಗಳಲ್ಲಿ ಪತ್ರಿಕೆ ಪುಸ್ತಕಗಳಲ್ಲೂ ಸ್ಥಿರವಾಗಿರುವಂತೆ ಮಾಡಬೇಕು. ಈ ಜಡ್ಜಿಮೆಂಟುಗಳಿಗೆ ಮೇಲಿನ ಕೋರ್ಟಿನವರು ಏನು ಹೇಳುವರು? ಮೇಲಿನ ಕೋರ್ಟಿನವರಿಗೆ ಇರುವ ಅಂತರ್ಗತವಾದ (Inherent) ಅಧಿಕಾರದಿಂದ ಈ ಜಡ್ಜಿಮೆಂಟುಗಳನ್ನು ರದ್ದು ಮಾಡಬೇಕೆಂದು ನಾನು ಮೇಲಿನ ಕೋರ್ಟಿನ ನ್ಯಾಯಾಧಿಕಾರಿಗೆ ಈ ಮೂಲಕ ಪ್ರಾರ್ಥಿಸುತ್ತೇನೆ.

ಮಿ. ಕೆ. ಬಿ. ಯವರ ಖಾನೂನಿನ ಜ್ಞಾನವು ಸಮೀಕ್ಷಕವಲ್ಲವೆಂದು ಕಾಣುತ್ತದೆ. ಅವರಿಗೆ ಇಷ್ಟಬೇಕಾದ ಒಂದು ಸೇರಿನ ಪಾತ್ರೆಗೆ ಬದಲಿಗೆ ಒಂದು ರಾಶಿಯ ಪಾತ್ರೆ ಪಕ್ಕದಲ್ಲಿಟ್ಟರಾಗಲಿ, ಮುಂದಿನ ವರ್ಷದ ಕಂದಾಯವನ್ನು ಈ ವರ್ಷವೇ ಪಾವತಿ ಮಾಡಿದರಾಗಲಿ, 40 ರೂ. ಕಂದಾಯ ಕೊಡಬೇಕಾದಲ್ಲಿ 50 ರೂ. ಕಂದಾಯ ಪಾವತಿ ಮಾಡಿದರಾಗಲಿ, 10 ರೂ. ಇನ್‌ಕಂಟ್ಯಾಕ್ಸ್ ಕೊಡಬೇಕಾದಲ್ಲಿ 100 ರೂ. ಪಾವತಿ ಮಾಡಿದರಾಗಲಿ, ಮುಣಿಸಿಪಾಲಿಟಿಗೆ ತಕ್ಕ ಮನೆ ತೆರಿಗೆಯಿಂದು ಗಿರಾಕಿಗಳಿಗೆ ಎಷ್ಟೇ ರಿಯಾಯಿತಿ ತೋರಿಸಿದರಾಗಲಿ, ತಿಗ್ಗಳು ಯಾವ್ಯಾವುದೇಂದು ಕೆ. ಬಿ. ಯವರು ದಯವಿಟ್ಟು ತಿಳಿಸುವರೆ? ಕೆ. ಎನ್.

ಪ್ರಸಿದ್ಧ ಔಷಧಗಳು.

ಮಲೇರಿಯಾಕ್ಕೆ ಒಂದೇ ಸಿದ್ಧೌಷಧ.

ಶುದ್ಧವಾದ ಒಂದೊಂದಕ್ಕೆ ಗಿಡ ಮೂಲಿಕೆಗಳಿಂದ ತಯಾರಾದದ್ದು. ಕ್ವಿನೈನನ್ನು ಯಾವ ರೂಪದಲ್ಲೂ ಸೇರಿಸಿಲ್ಲ.

"ನವರತ್ನ ಅಲ್ಲಾರಿಯಾ"

ಹಿಂದೂದೇಶದ ಔಷಧಗಳ ವಿಚಾರದಲ್ಲಿ ಕೀರ್ತಿಯನ್ನು ಪಡೆದ ಡಾ. ಕೆ ಯಂ ನಾಡ್ಕರ್ಣಿ ಮತ್ತು ಡಾ. ಕೆ. ಸಿ. ಬೋಸ್‌ರವರ ಗ್ರಂಥಗಳಿಗನುಗುಣವಾಗಿ ಈ ಪರಿಣಾಮಕಾರಕ ಔಷಧಗಳ ಸಂಯೋಜನೆಯಿಂದ ತಯಾರಿಸಲ್ಪಟ್ಟ ಈ ಔಷಧವು ಹೆಚ್ಚು ಫಲಕಾರಿಯಾಗಿರುವದು.

ಇದರಲ್ಲಿರುವ ಔಷಧಗಳು.

1. Andrographis Paniculate
2. Cocculas Cordifolius
3. Berriberies Aristata
4. Vernonis Cinerarea
5. Evolvulas Alsinoides
6. Dashmoola
7. Aconitum Heterophylum
8. Alstonia Scholaris

ಮಲೇರಿಯಾಕ್ಕೆ ಅತ್ಯುತ್ತಮ ಔಷಧಿ. ಕ್ವಿನೈನನ್ನು ಯಾವ ವಿಧದಲ್ಲೂ ಸೇರಿಸದೆ ಯಾವ ಬಾಧಿನಲ್ಲೂ ಹಾನಿಕರವಾಗದ ಸಂಜೀವಿನಿ. ಇದನ್ನು ಎಷ್ಟು ಸೇವಿಸಿದರೂ ಕ್ವಿನೈನ್ ಸೇವನೆಯಿಂದ ಉಂಟಾಗುವ ದಾಡ ಮೊದಾ ಹಾನಿಗಳ ಭಯವೇ ಇಲ್ಲ. ಒಮ್ಮೆ ಪರೀಕ್ಷಿಸಿದಲ್ಲಿ ಮತ್ತೆ ಬಿಡಲಾರಿರಿ.

ತಯಾರಿಸುವವರು:—ಡಿ ನವರತ್ನ ಫಾರ್ಮಸಿ, ಪೋ. ಬಾ. ನಂಬರು 68, ಕೊಚಿನ್.

ಸ್ಟಾಕಿಸ್ಟ್—ವಿ. ಎಸ್. ಪೊಣಚ್ಚ, ಚಿಕ್ಕ ಪ್ಯಾಪಾರಿ, ಪೊಂಟೆಪೇಟೆ. | ಏಜೆಂಟ್—ಡಿ. ಜಿ. ಲಾಡಿಯಪ್ಪ, ಮಹದೇವಪೇಟೆ, ಮಡಿಕೇರಿ.

52—37

ನವರತ್ನ ಫಾರ್ಮಸಿ.

ಜಿಲ್ಲಾ ಸುದ್ದಿ.

ಕಳೆದ ವಾರ ಫೇಬ್ರುವರಿ ೮ ರಲ್ಲಿ ಇಲ್ಲಿಗೆ ಹೊಸದಾಗಿ ಪ್ಲೇಗು ಉಂಟಾಯಿತು. ವರ್ತಮಾನ.

ಕೊಡಗು ಸಹಕಾರಿ ಸೆಂಟ್ರಲ್ ಬ್ಯಾಂಕಿನ ಡೈರೆಕ್ಟರುಗಳ ಮೀಟಿಂಗು ಈ ತಾರೀಕು 29ನೇ ಶನಿವಾರ ಬೆಳಗ್ಗೆ 11 ಗಂಟೆಗೆ ಬ್ಯಾಂಕಿನ ಆಫೀಸಿನಲ್ಲಿ ನಡೆಯುವುದು.

ಹಲವು ವರ್ಷಗಳಿಂದ ಮಡಿಕೇರಿಯಲ್ಲಿ ಪಿ. ಡಬ್ಲ್ಯು. ಡಿ. ಇಂಗಡಿ ಇಟ್ಟುಕೊಂಡಿದ್ದ ಮಿ| ಕೆಂಗಣ್ಣಪ್ಪನವರು ಈ ತಾರೀಕು 14ರಲ್ಲಿ ಅವರ ಊರಾದ ತುಕ್ಕಾರಿನಲ್ಲಿ ತೀರಿಹೋದರೆಂದು ತಿಳಿಯುತ್ತದೆ.

ಈ ತಾ. 24ರಲ್ಲಿ ಪ್ರಾರಂಭವಾಗುವ ಕೊಡಗು ನ್ಯಾಯವಿಧಾಯಕ ಸಭೆಯ ಮೀಟಿಂಗಿಗಾಗಿ ಚೀಫ್ ಕಮಿಷನರವರು ಈ ತಾರೀಕು 20ರ ಸಾಯಂಕಾಲ ಬೆಂಗಳೂರಿನಿಂದ ಮಡಿಕೇರಿಗೆ ಬಂದಿರುವರು.

ಈ ವಾರ ಗೋಣಿಕೊಪ್ಪಲಲ್ಲಿ ಭತ್ತ ಗಾಡಿಯೊಂದಕ್ಕೆ ರೂ. 37—8—0, ಸಿದ್ದಾಪುರದಲ್ಲಿ ಕಾಫಿ ಖಂಡಿಗೆ ರೂ 335 ಮತ್ತು ಏಲಕ್ಕಿ ಮಣಕ್ಕೆ ರೂ. 30 ಕ್ರಯವಿದ್ದಂತೆ ತಿಳಿಯಬರುತ್ತದೆ.

ಶಾಲಾ ಇನ್ಸ್‌ಪೆಕ್ಟರಾಗಿದ್ದ ಮಿ| ಯಫ್. ಯಫ್ ಎಡ್ಮಂಡ್ಸ್‌ರವರು ರಜೆ ತೆಗೆದುಕೊಂಡಿರುವುದರಿಂದ ಅವರ ಬದಲು ಇನ್ಸ್‌ಪೆಕ್ಟರಾಗಿರುವ ಮಿ| ಥಾಮ್ಸನ್‌ರವರು ಕೊಡಗು ನ್ಯಾಯವಿಧಾಯಕ ಸಭೆಯ ಮೆಂಬರಾಗಿ ನೇಮಿಸಲ್ಪಟ್ಟಿರುವರು.

ಮಡಿಕೇರಿ ಸಿದ್ದಾಪುರ ರಸ್ತೆಯ 8ನೇ ಮೈಲು ಕಲ್ಲು ಬಳಿ ಇದ್ದ ಒಬ್ಬ ಕ್ರಿಸ್ತನನ್ನು ಕೆಲವು ದಿವಸಗಳ ಹಿಂದೆ ಕೊಲೆ ಮಾಡಿದ ಕೇಸಿನಲ್ಲಿ ವಾಲೆ ಅಣ್ಣನೆಂಬವನು ಸೆಷನ್ಸ್ ಕೋರ್ಟಿನ ವಿಚಾರಕ್ಕೆ ಗುರಿಮಾಡಲ್ಪಟ್ಟಿದ್ದನು. ಕಳೆದ ವಾರ ಆ ಕೇಸಿನ ವಿಚಾರಣೆಯನ್ನು ಮುಗಿಸಿ ಸೆಷನ್ ಜಡ್ಜರು ಆಗಲನು ತಪ್ಪಿತಸ್ಥನಲ್ಲವೆಂದು ತಾರೀಕು 15ರಲ್ಲಿ ಅವನನ್ನು ಬಿಡುಗಡೆ ಮಾಡಿದರು.

ಕೊಡಗಿನಲ್ಲಿ ದೊರೆಯುವ ಜೇನು ಮತ್ತು ಮೇಣಕ್ಕೆ ಉತ್ತಮವಾದ ಬೆಲೆ ದೊರೆಯುವಂತೆ ಹೊರ ಪ್ರಾಂತ್ಯಗಳಲ್ಲಿ ಮಾರಾಟ ಮಾಡುವ ಉದ್ದೇಶ್ಯ ವೀರರಾಜಪೇಟೆ ಕೇಂದ್ರಸ್ಥಾನವಾಗಿ ಒಂದು ಸಹಕಾರಿ ಸಂಘವು ರಿಜಿಸ್ಟರು ಮಾಡಲ್ಪಟ್ಟು ಈ ತಾ. 14ರಲ್ಲಿ ಅದರ ಪ್ರಥಮ ಜನರಲ್ ಮೀಟಿಂಗು ವೀರರಾಜಪೇಟೆಯಲ್ಲಿ ನಡೆಯಿತು.

ಕೊಡಗಿನಲ್ಲಿರುವ ಜೇನು ಮತ್ತು ಮೇಣ ಸಹಕಾರಿ ಸೊಸೈಟಿಗಳಿಗೆ ಹೊರ ಪ್ರಾಂತ್ಯಗಳಿಂದ ಸಾಮಾನುಗಳನ್ನು ತರಿಸಿ ಕೊಡಲು ಒಂದು ಮಧ್ಯವರ್ತಿ ಸ್ಟೋರು ವೀರರಾಜಪೇಟೆಯಲ್ಲಿ ಸ್ಥಾಪಿಸಲ್ಪಟ್ಟಿದೆ. ಅದರ ಪ್ರಥಮ ಜನರಲ್ ಮೀಟಿಂಗು ಈ ತಾರೀಕು 14ರಲ್ಲಿ ನಡೆದು ಕಾರ್ಯಕಾರಿ ಮಂಡಳಿಯ ಚುನಾವಣೆಯಾಯಿತು.

ಸಿ. ಪಿ. ಓ. ಬಸ್ಸ್ ಸರ್ವಿಸಿನ ಡ್ರೈವರಾಗಿದ್ದ ಮಿ| ಮಣವಟ್ಟಿರ ಬೋಪಯ್ಯನವರ ಬಸ್ಸು ತಾ 13ರಲ್ಲಿ ಮಂಗಳೂರಿನಿಂದ ಮಡಿಕೇರಿಗೆ ಬರುತ್ತಿದ್ದಾಗ್ಗೆ ದಾರಿಯಲ್ಲಿ ನಿಂತು ನೇರ ನೆ ಮಾಡಿದ್ದ ಒಬ್ಬ ಮುದುಕಿಗೆ ತಗಲಿ ಅವಳಿಗೆ ಜಖಂ ಆಗಿತ್ತೆಂತಲೂ, ಮರು ದಿನ ಬೋಪಯ್ಯನವರು ತನ್ನ ಹೆಂಡತಿ ಮಕ್ಕಳನ್ನು ಅವರ ತವರು ಮನೆಯಾದ ನೆಲಜಿ ಮನೆಯಿಂದ ಮನೆಗೆ ಕರೆದುಕೊಂಡು ಹೋಗಿ ಅಲ್ಲಿ ತಾರೀಕು 16ರ ರಾತ್ರಿ ತುಪಾಕಿ ಗುಂಡು ಹೊಡೆದುಕೊಂಡು ಆತ್ಮಹತ್ಯ ಮಾಡಿಕೊಂಡಿರುವರೆಂತಲೂ ತಿಳಿಯುತ್ತದೆ.

ಅನಾಥೀಕವಾಗಿ ಜಾಗದಲ್ಲಿರುವ ಗಂಧದ ಮರಗಳಿಗೆ ಬೋನಸು ಕೊಡುವುದನ್ನು ಕಾಲಕ ಕವರು ನಿಬಂಧನೆಗಳ ತಿದ್ದುಪಡಿಯ ವಿಷಯ ಮಹಾಶಯರು ಚರ್ಚಿಸಿ ಆ ಸಂಘದ ಒಂದು ಡೆಪ್ಯುಟೇಶನಿಗೆ ಅವಕಾಶ ಕೊಡಬೇಕೆಂದು ಆ ಸಂಘದ ಕಮಿಟಿಯ ಕಾರ್ಯದರ್ಶಿಯವರು ಕೇಳಿಕೊಂಡಿದ್ದರು. ಕಮಿಷನರವರಿಗೆ ಬರೆದಿದ್ದ ಪತ್ರಕ್ಕೆ—'ಈ ವಿಷಯ ಬರುವ ಕೌನ್ಸಿಲು ಮೀಟಿಂಗಿನಲ್ಲಿ ಚರ್ಚಿಸಲ್ಪಡುವುದು; ಅಲ್ಲಿಯ ಚರ್ಚೆಯು ಮುಗಿಯುವ ವರೆಗೆ ಡೆಪ್ಯುಟೇಶನ್ ಬರುವುದು ಪ್ರಯೋಜನವಾಗಲಾರದೆಂದು' ಕಮಿಷನರವರ ಜವಾಬು ಬಂದಿರುವುದಾಗಿ ತಿಳಿಯುತ್ತದೆ.

ಹಿಂದೂದೇಶ.

ರಾಜಕೀಯ ಬಂದಿಗಳ ವಿಷಯದಲ್ಲಿ ಆಲೋಚಿಸಿ, ಅವರ ಬಿಡುಗಡೆಗಾಗಿ ಪ್ರಯತ್ನಿಸಲು ಕಾಂಗ್ರೆಸಿನ ಕಡೆಯಿಂದ ಒಂದು ಕಮಿಟಿ ನೇಮಿಸಲಾಗಿದೆ.

ದಿವಂಗತ ಚಕ್ರವರ್ತಿಗಳಿಗಾದ ಬಡಸಿಯ ಚಾರ್ಜ್ ಒಂದು ಕ್ರಿಕೆಟೆಯನ್ನು ಯೋಗ್ಯ ಸ್ಥಳದಲ್ಲಿ ಸ್ಥಾಪಿಸಬೇಕೆಂದು ಅಲ್ಲಿ ಮುನಿಸಿಪಾಲಿಟಿ ನಿರ್ಧರಿಸಿದೆ.

ಬೊಂಬಾಯಿ, ಧುಳಿ, ಪಾಟ್ನಾ, ಕಾಶಿ, ಮತ್ತು 'ಖಾನಪುರ' ಮೊದಲಾದ ಕಡೆಗಳಲ್ಲಿ ಭೂಮಿ ಕಂಪಿಸಿತು! ಧೀಗಲ್ಪುರದಲ್ಲಿ ಒಂದು ಗೋಡೆ ಬಿದ್ದು ಇಬ್ಬರು ಸತ್ತರು.

ಹೊಸ ಶಾಹಿದ್‌ಗಂಜ್ ಚಳವಳಿಯಲ್ಲಿ ತಿಳ್ಳೆದುಳುಗಳ ಜ ಪಟೇಲಾಬಾದ್ ಮತ್ತು ಮುಸಲ್ಮಾನ್ ಹಕ್ಸನ್ ಎಂಬ ಇಬ್ಬರಿಗೆ ತಲಾ 6—6 ತಿಂಗಳ ಕಠಿಣ ಸಜೆ ವಿಧಿಸಲಾಗಿದೆ.

ಬರುವ ಏಪ್ರಿಲಿನಲ್ಲಿ ಉಂಟಾಗುವ ಸಂದರ್ಭದಲ್ಲಿ, ಆಧ್ಯಕ್ಷರು ಕರ್ನಲ್. I ಆರ್ಟಿ ಕವನಗಳನ್ನು ಬಾರಿಗೆ ಆರಿಸಿಕೊಂಡು, ಕರಾಚಿ ಹಿಂದೀ ಪಠಕ ಸಂಘವು ಇಂಡಿಯಾ ಸರಕಾರಕ್ಕೆ ಮಾಡಿದೆ.

ಆಂಧ್ರ ಪ್ರಾಂತದ ಎಲ್ಲೂರು, ಗುಂಟೂರು, ಅನಂತಪುರ, ನರಸಾಪುರ ಮೊದಲಾದ ಕಡೆಗಳಲ್ಲಿ ವಿಪರೀತ ಮಳೆ. ಪರಿಣಾಮಗಳಿಂದ ವಿಪರೀತ ಅನರ್ಥವಾಗಿದೆ. ಮನೆಗಳು ಉರುಳಿದವು. ಬೆಳೆಗೆ ಒಟ್ಟು ನಷ್ಟ ಸಂಭವಿಸಿತು. ಮರಗಳು ಬಿದ್ದವು. ಒಬ್ಬ ಗ್ರಾಮನಿವಾಸಿ ಸತ್ತ. ಎಷ್ಟೋ ಹಸು ಪಕ್ಷಿಗಳೂ ಮೃತಪಟ್ಟವು. ಅನಂತಪುರ ಪ್ರಾಂತದಲ್ಲಿ ಕಿತ್ತಳೆಯನ್ನು ಬೆಳೆವ ಅನೇಕಲ್ಲುಗಳು ಬಿದ್ದಿವೆ ಎಂದು ವಾರ್ತೆ.

'ಈ ಯುದ್ಧ ಮುಗಿದ ಮೇಲೆ ತಿಕ್ಷಣಕ್ಕಾಗಿ ಅಬಿಸೀನಿಯದ ಹುಡುಗರನ್ನು ಇಂಡಿಯಕ್ಕೆ ಕಳುಹಿಸಬೇಕೆಂಬ ಆಶೆ ನನಗಿದೆ. ಇಂಡಿಯವು ಇಥಿಯೋಪಿಯಕ್ಕೆ ನೆರೆ ಆತ್ಮೀಯ ನೆರೆಯವನೆಂದು ಇಟಲಿಯ ಮೇಲಿನ ವಿಜಯಸ್ತ್ರ ಶಾಸ್ತ್ರನ್ನು ಇಂಡಿಯದ ಸ್ವಯಂಸೇವಕರು ನೀಡುವುದು ಪ್ರಯೋಜನಕಾರಿ' ಎಂದು ಅಬಿಸೀನಿಯದ ಚಕ್ರವರ್ತಿಯವರು, ಅಸೋಸಿಯೇಟೆಡ್ ಪ್ರೆಸ್ ಪತ್ರಿಕಾ ಪ್ರತಿನಿಧಿಗಳೊಡನೆ ಅಪ್ಪಣೆ ಕೊಡಿಸಿರುವುದಾಗಿ ಪ್ರಕಟವಾಗಿದೆ.

ವಿದೇಶ.

ನಮ್ಮ ಹೊಸ ಚಕ್ರವರ್ತಿಗಳು ಇನ್ನೂ ಮದುವೆಯಾಗಿರುವುದಿಲ್ಲ. ಅವರ ಮದುವೆ ಇದೇ ವರ್ಷದೊಳಗೆ ಜರುಗಬಹುದು ಎಂದು ಪಾಶ್ಚಿಮಾತ್ಯ ದೇಶಗಳ ಪತ್ರಿಕೆಗಳು ಭವಿಷ್ಯ.

ಇಥಿಯೋಪಿಯದ ಹಲವು ಮಂದಿ ಹೆಂಗಸರು ತಮ್ಮ ಸ್ವಾಧೀನದಲ್ಲಿದ್ದ ಚಿನ್ನದ ಆಭರಣಗಳನ್ನು ಅಬಿಸೀನಿಯದ ಚಕ್ರವರ್ತಿಗಳಿಗೆ ಒಪ್ಪಿಸಿ ತಮ್ಮ ರಾಜಭಕ್ತಿಯನ್ನು ಪ್ರದರ್ಶಿಸಿದರು.

ಶಾಂಘಾಯ ಪ್ರಾಂತದಲ್ಲಿ ಪ್ರಯೋಗಾಲಯದ ಒಬ್ಬ ಚೀನಾ ಸಂಶೋಧಕನು ಅಲ್ಲಿನ ಸರಕಾರದ ವಿರುದ್ಧವಾಗಿ 2 ಸಾವಿರ ಕಮ್ಯುನಿಸ್ಟ್ ಸೈನಿಕರನ್ನು ಕಟ್ಟಿಕೊಂಡು ಕಾರ್ಯಾಚರಣೆಯನ್ನು ತಲ್ಲಣಗೊಳಿಸುವನು.

ಜಿನೀವದ ಎಂಟೆ ಸ್ವಾತಂತ್ರ್ಯದ ಕಮಿಟಿಯು ಎಂದು ಪ್ರಕಟವಾಗಿದೆ. ಈ ಅಭಿಪ್ರಾಯಕ್ಕೆ ಅನೇಕರ ಸಹಾನುಭೂತಿ ಇದೆ ಆದರೆ; ಇದು ಜಾರಿಗೆ ಬರಲು ಇನ್ನೂ ಮೂರು ತಿಂಗಳು ಬೇಕು ಎಂಬುದು ಮನಗಾಣ ಸಾಧಾರಣ. ಇನ್ನು ಈ ಕಮಿಟಿಯ ತೀರ್ಮಾನ ಒಂದು ತಿಂಗಳ ಅವಧಿಯಲ್ಲಿ ಹೊರಬೀಳುವುದು.

ಯುದ್ಧ ವಾರ್ತೆ.

ಫೆಬ್ರವರಿ ತಾ. 13

ಕೊರೊಬ್ಬಿ ಮೇಲೆ ಬಾಂಬು.

ಕೊರೊಬ್ಬಿ ಎಂಬಲ್ಲಿ ಇಟಲಿಯ ವಿಮಾನಗಳು ಬಾಂಬುಗಳನ್ನು ಎಸೆದವು. ಆದರೆ ಹೆಚ್ಚಿನ ನಷ್ಟ ಆಗಿರುವುದಿಲ್ಲ.

ಕಬ್ಬಾಟಿ ಎಂಬಲ್ಲಿ ಯುದ್ಧ.

ಕಬ್ಬಾಟಿ ಎಂಬಲ್ಲಿ ಇಥಿಯೋಪಿಯದ ನಾಯಕರಾದ ನಾಸಿಬುರವರ ದಳಕ್ಕೂ ಯುದ್ಧವಾಗಿ ಸುಮಾರು 300 ಮಂದಿ ಇಟಲಿಯನ್ ಸೈನಿಕರುಗಳು ಮೃತರಾದರಲ್ಲದೆ ಅನೇಕ ಕೋವಿ ಕೋಟೆಗಳು ಅಬಿಸೀನಿಯರ ಸ್ವಾಧೀನವಾಯಿತೆಂದು ಒಂದು ಪ್ರಕಟನೆ.

ಸ್ತ್ರೀಯರು ಸೈನಿಕರಾಗಿ,

ಟಿಂಬಿಯನ್ ಪ್ರಾಂತ್ಯದ ಸರಹದ್ದುಗಳ ರಣಾಂಗಣಕ್ಕೆ ಹೋಗುವ ಸೈನ್ಯದಲ್ಲಿ ಶೇ ಕಡ 10 ರಷ್ಟು ಸ್ತ್ರೀಯರು ಸೈನಿಕರ ಉಡುಪಿನಲ್ಲಿರುವರೆಂದು ತಿಳಿಯಲಾಗಿದೆ.

ಫೆಬ್ರವರಿ ತಾ 14.

ಇಟಾಲಿಯರ ಪರ ವಿಜಯ.

ಇಟಲಿಯ ವಿಮಾನಗಳು ಈಗ ಗ್ರಾಮಗಳ ಮೇಲೆ ಗ್ರಾಮಗಳಲ್ಲಿನ ದನಕರುಗಳ ಗುಂಪುಗಳನ್ನೂ ಚಿಕ್ಕ ಮಕ್ಕಳ ತಂಡಗಳನ್ನೂ ಕಂಡ ಕಂಡಲ್ಲಿ ಬಾಂಬುಗಳಿಂದ ಧ್ವಂಸಗೈಯುತ್ತಿರುವುದರಿಂದ ಇದೇ ಇಟೇಲಿಯವರ ವೀರತ್ವವೆಂದು ಅಬಿಸೀನಿಯಾದ ಪ್ರಕಟನೆ.

ಫೆಬ್ರವರಿ ತಾ. 15.

ಅಕ್ಸಂಟನ ಮೇಲೂ ಬಾಂಬು.

ಲೇಕ್ ಹೈಕ್ ಎಂಬಲ್ಲಿ ಇಟಲಿಯ ವಿಮಾನಗಳು ಒಂದು ಅಕ್ಸಂಟಿನ ಮೇಲೆ ಬಾಂಬು ಹಾಕಿದವು. ಆದರೆ ದೈವವಶಾತ್ ಜಾಸ್ತಿಯೇನೂ ಆಗಿರುವುದಿಲ್ಲ.

ಇಥಿಯೋಪಿಯದಲ್ಲಿ ಜೋರು ಮಳೆ.

ತಾರೀಕು 15ರಿಂದ ಜೋರು ಮಳೆ ಪ್ರಾರಂಭವಾಗಿದೆ. ಆ ದ್ದಿಸ್ ಅಬಾಬದಲ್ಲಿ ಒಂಬತ್ತು ಗಂಟೆಗಳ ವರೆಗೆ ವಿಪರೀತ ಮಳೆ ಬಿದ್ದು ರಸ್ತೆಗಳೆಲ್ಲವೂ ಬಂದಾಗಿದೆ.

ಫೆಬ್ರವರಿ ತಾ. 16

ಎಂಡರ್ಟಾ ಎಂಬಲ್ಲಿ ಭಯಂಕರ ಕದನ.

ಫೆಬ್ರವರಿ ತಾ 10 ರಲ್ಲಿ ಎಂಡರ್ಟಾ ಸರಹದ್ದಿನಲ್ಲಿ ಇ...

ಟಲಿಯ ಸೈನಿಕರಿಗೂ ಅಬಿಸೀನಿಯರಿಗೂ ಭಾರಿ ಕದನವಾಗಿ ಇಟಲಿಯವರು ಅಂಬ ಅರದಮ್ ಎಂಬ ಮುಖ್ಯ ಪರ್ವತವನ್ನು ಸ್ವಾಧೀನ ಮಾಡಿರುವರು. ಈ ಕದನವು ತಾ. 15 ರ ವರೆಗೆ ನಡೆದು ಅದರಲ್ಲಿ 500 ಇಟಲಿ ಸೈನಿಕರು ಮಡಿದರು. ಸುಮಾರು 5000 ಅಬಿಸೀನಿಯರು ಮಡಿದಿರುವರೆಂದೂ ಹೇಳಲಾಗಿದೆ.

ಆದಿ ಶ್ರೀ ಕಾವೇರಿ ಬಸ್ಸ್ ಸರ್ವಿಸ್ ಲಿಮಿಟೆಡ್, ಮಡಿಕೇರಿ.

ನೋಟೀಸಿಂದ ಕಂಪೆನಿಯಿಂದ ಶೇರು ತೊಗೊಂಡಿರೂವ ಮಹನೀಯರುಗಳು.

(ಮುಂದುವರಿದದ್ದು)

ಮಿ|	ರಾ ಕೆ ಐ ಜಿ ಶೇಷಗಿರಿ ಎಂ ಎ ಬಿ ಎಲ್.	10	ಶೇರು
,,	ಎ ಎಸ್ ರಾಮಯ್ಯ ಬಿ ಎ ಬಿ, ಎಲ್,	10	,,
,,	ಕೀತಿಯಂಡ ಮಾಚಯ್ಯನವರು	10	,,
,,	ಬಿದ್ದಂಡ ಬೆಳ್ಯಪ್ಪನವರು	100	,,
,,	ಕುಟ್ಟಂಡ ಮುತ್ತಣ್ಣನವರು	5	,,
,,	ಬಿಟ್ಟಿಯಂಡ ಉತ್ತಯ್ಯನವರು	1	,,
,,	ಬಿಟ್ಟಿಯಂಡ ಕಾಳಪ್ಪನವರು	10	,,
,,	ಪಾರಂಬಂಡ ಪಿ. ಸೋಮಪ್ಪನವರು	30	,,
,,	ಸೆಟ್ಟನಕ್ಕಳ ಅಣ್ಣಪ್ಪನವರು	50	,,
,,	ಅಪ್ಪಣ್ಣ ಕುಟ್ಟಂಡ ಚಂಗಪ್ಪನವರು	1	,,
,,	ಪಾರಂಬಂಡ ಮುದ್ದಪ್ಪನವರು	5	,,
,,	ಜಾಲಿಪ್ಪಿರ ಅಪ್ಪಯ್ಯನವರು	4	,,
,,	ಬೋಯಿಪಟ್ಟಿ ಪದ್ಮನಾಭನವರು	1	,,
,,	ಕಿಕ್ಕರ ಪೂವಯ್ಯನವರು	1	,,
,,	ಪುತ್ತರಿರ ತಿಮ್ಮಯ್ಯನವರು	1	,,
,,	ಮಲ್ಲಂಗೇರಿರ ಕಾರ್ಯಪ್ಪನವರು	1	,,
,,	ಮಿಸೆಸ್ ಕಾಡ್ಯಮಾಡ ಚಂಗಪ್ಪ ಗಂಗಣ್ಣನವರು	1	,,
,,	ಅಜ್ಜಮಾಡ ಬೆಳ್ಯಪ್ಪನವರು	1	,,
,,	ಮಹಮ್ಮದ್ ಸೇಕ್‌ಹಮ್ಮದ್‌ರವರು	1	,,
,,	ಬಲ್ಯಮಾಡ ಚಂಗಪ್ಪನವರು	1	,,
,,	ಚೇಂದ್ರಿಮಾಡ ಉತ್ತಯ್ಯನವರು	1	,,
,,	ಸೈಯದ್ ಬಡ್ರುದ್ದೀನ್‌ರವರು	1	,,
,,	ಯಂ ಎ. ಮಹಮದ್ ಖಾನ್‌ರವರು	1	,,
,,	ಕೊಂಗೆಟ್ಟಿರ ಪಿ. ಸುಬ್ಬಯ್ಯನವರು	2	,,
,,	ಕೊಂಗೆಟ್ಟಿರ ಪಿ ಮುದ್ದಪ್ಪನವರು	2	,,
,,	ಬಿಟ್ಟಂಗಾಲ ಕೆ ಅಪ್ಪಯ್ಯನವರು	1	,,
,,	ಪಿ ಆರ್. ಚನ್ನಬಸಪ್ಪನವರು	1	,,

ತಿದ್ದುಪಡಿ:—ಪ್ರಥಮ ಪ್ರಕಟವಾದ ಪಟ್ಟಿಯಲ್ಲಿ ಮಿ| ಬಿಜೆಟ್ಟಿರ ಸಿ. ಬೋಪಯ್ಯನವರ, 2 ಶೇರೆಂದು ಪ್ರಕಟವಾದದ್ದು ತಪ್ಪು. ಅವರದು 5 ಶೇರಾಗಿದೆ.

ಯು ಯಂ. ಅಂಕಯ್ಯ,

8—4 ಸೆಕ್ರೆಟರಿ.

ಸ್ಥಳ ಬೇಕು.

ಸಿದ್ದಾಪುರದ ಪಟ್ಟಣದಿಂದ ರಸ್ತೆಯಿಂದ ಸುಮಾರು 1½ ಮೈಲು ದೂರದಲ್ಲಿ ಸರಿಯಾಗಿ ಗಾಡಿ ಹೋಗುವ ರಸ್ತೆ ಬಳಿಯಲ್ಲಿ 25 ಎಕ್ರೆ ಕುತ್ತಗೆಗೆ ಕಟ್ಟಿದ (ರೈತುವಾರ್) ಕಾಡು, ತೋಟ ಮಾಡಲು ಕಾಡು ಕಡಿದು ನಾಟಿಗೆ ಅನುಕೂಲವಾದ ಸಾವಿರಾರು ಮರಗಳನ್ನು ಕಡಿದು ಹಾಕಲ್ಪಟ್ಟಿದೆ. ಸ್ಥಳ ಕೊಳ್ಳುವುದಕ್ಕೆ ಆಸಕ್ತಿ, ದಾರಿಯ ಬದಿಯಲ್ಲಿ ಇರುವದರಿಂದ ಬರುವಟ್ಟು ಕೆಳಗಿನ ವಿಳಾಸದವರನ್ನು ಕಂಡು ಅಥವಾ ಬರೆದು ಕೇಳಿದಲ್ಲಿ ಎಲ್ಲಾ ಸಂಗತಿ ತಿಳಿಯುವುದು. ಅನೇಕ ಪಣಗಾದ ಮರಗಳೂ ಸಾವಿರಾರು ಹಲಸು ಮರಗಳೂ ಸಾಗಿಸಲು ತಯಾರಾಗಿವೆ.

ಕೆ. ಬಿ. ಕಾರ್ಯಪ್ಪ,

ಚಾರ್ಲೆಟ್ಟ್ ತೋಟ, ಸಿದ್ದಾಪುರ.

ಬೇಕಾಗಿದ್ದಾರೆ.

ತಿಗ್ಗಟ್ಟೆನಾಡು ಲ್ಯಾಂಡ್, ಲೋನ್ ಸೇಲ್ ಅಂಡ್ ಸಪ್ಲೈ ಸಂಘಕ್ಕೆ ಒಬ್ಬ ಮ್ಯಾನೇಜರು ಬೇಕಾಗಿದೆ.

ಅವರು ಎಸ್. ಎಸ್. ಎಲ್. ಸಿ. ಪಾಸಾಗಿರಬೇಕು. ಬುಕ್ ಕೀಪಿಂಗ್ ಗೊತ್ತಿದ್ದರೆ ಉತ್ತಮ. ನಗದು ಮತ್ತು ಜಾಮೀನ್ ಜಾಮೀನು ಕೊಡಬೇಕಾಗಿದೆ. ಅರ್ಜಿಗಳು ಈ ತಿಂಗಳ ಅಖೈರು ಒಳಗೆ ಕಳುಹಬೇಕು.

ಹೆಚ್ಚಿನ ವಿಷಯಕ್ಕೆ ಈ ಕೆಳಗಿನ ವಿಳಾಸಕ್ಕೆ ಬರೆಯಬೇಕು. ಗೌ ಕಾರ್ಯದರ್ಶಿ,

ತಿಗ್ಗಟ್ಟೆನಾಡು ಲ್ಯಾಂಡ್, ಲೋನ್ & ಸಪ್ಲೈ ಸಂಘ,

19—2—36. ಪೊನ್ನಂಪೇಟೆ.

ಕೊಡಗು

ಫೆಬ್ರವರಿ ತಾ. ೨೧ನೇ ಶುಕ್ರವಾರ ೧೯೪೭.

ದೇಶದವರ ಅಭಿಪ್ರಾಯ.

ಜಮ್ಮಾನ್ವಿತರ ಸಂಘವು ಕೊಡಗಿನಲ್ಲಿ ಏಕ ಮಾತ್ರ ರಾಜಕೀಯ ಸಂಸ್ಥೆಯಾಗಿದೆ. ಈ ಸಂಘವು ಸುಮಾರು 27 ವರ್ಷಗಳ ಹಿಂದೆ ಪ್ರಾರಂಭವಾದಂದಿನಿಂದಲೂ ಈ ದೇಶದ ಜನರ ಅಭಿಲಾಷೆ ಹೆಚ್ಚಾಗಿ ಸ್ವಂತ ಹಿತವನ್ನು ಸಾಧಿಸಲು ಎಡೆಬಿಡದೆ ಪ್ರಯತ್ನಿಸುತ್ತಿರುವುದು ಎಲ್ಲರಿಗೂ ತಿಳಿದ ವಿಷಯವಾಗಿದೆ. ಈ ಮಧ್ಯೆ ಈ ಪ್ರಾಂತ್ಯದಲ್ಲಿ ಕೆಲವು ಸಂಸ್ಥೆಗಳು ಹಣಬೆಯಂತೆ ಥಟ್ಟನೆ ಹುಟ್ಟಿ ಹಣಬೆಯಂತೆಯೇ ನಶಿಸಿ ಹೋಗಿರುವವು. ಆದರೆ ದೇಶೀಯರ ಏಳಿಗೆಯನ್ನೇ ಗುರಿಯಾಗಿಟ್ಟುಕೊಂಡು ಕೆಲಸ ಮಾಡುತ್ತಿರುವ ಜಮ್ಮಾನ್ವಿತರ ಸಂಘವು ತನ್ನ ಪ್ರಯತ್ನವನ್ನು ಸತತ ನಡೆಸುತ್ತಲೇ ಬಂದಿದೆ, ಈಗಲೂ ನಡೆಸುತ್ತಲೇ ಇದೆ. ಇಂಥಾ ಸಂಸ್ಥೆಗೆ ದೇಶಾಭಿಮಾನಿಗಳು ಹೆಚ್ಚೆಚ್ಚಾಗಿ ಸೇರಿ ಅದನ್ನು ಮತ್ತಷ್ಟು ಬಲಪಡಿಸಬೇಕಾದದ್ದು ಅತ್ಯಾವಶ್ಯಕವಾಗಿದೆ.

ಪ್ರಸ್ತುತದಲ್ಲಿ ಕೊಡಗಿನ ನಿವಾಸಿಗಳಿಗೆ ಅತೀ ಪ್ರಾಮುಖ್ಯವಾದ ಮೂರು ವಿಷಯಗಳಲ್ಲಿ—ಅಂದರೆ ಭೂಮಿ ಗಿರ್ವಿ ಬ್ಯಾಂಕಿನ ಸ್ಥಾಪನೆ, ಕಂದಾಯ ಕಡಿಮೆ ಮತ್ತು ರಾಜಕೀಯ ಸುಧಾರಣೆಗಳೆಂಬ ಮೂರು ವಿಷಯಗಳಲ್ಲಿ—ಗ್ರಾಮಾಂತರಗಳಲ್ಲಿರುವ ಜನಸಾಮಾನ್ಯರ ಸಾಕಷ್ಟು ತಿಳುವಳಿಕೆಗಳನ್ನು ಕೊಟ್ಟು, ಅವುಗಳ ಮೇಲೆ ಅವರ ಅಭಿಪ್ರಾಯವನ್ನು ತಿಳಿಯಬೇಕೆಂದು ಪ್ರಯತ್ನವನ್ನು ಜಮ್ಮಾನ್ವಿತರ ಸಂಘವು ಕೈಕೊಂಡಿತ್ತು. ಕಳೆದ ಒಂದು ವಾರದಿಂದ ದೇಶದ ಹಲವು ಮುಖ್ಯ ಸ್ಥಳಗಳಲ್ಲಿ ಸಾರ್ವಜನಿಕ ಸಭೆಗಳು ನೆರೆದಿದ್ದುವು. ಒಂದು ವಾರಕ್ಕಿಂತ ಮುಂಚಿತವಾಗಿಯೇ ಪತ್ರಿಕೆಯ ಮೂಲಕ ನೋಟೀಸು ಪ್ರಕಟವಾಗಿದ್ದರಿಂದ ಆ ಮೀಟಿಂಗಿಗೆ ಬರುವ ಅವಕಾಶವು ಎಲ್ಲರಿಗೂ ಇತ್ತು. ಹಾಗೆಯೇ ಹಲವರು ಬಂದು ಆ ಸಭೆಗಳಲ್ಲಿ ನೆರೆದಿದ್ದರು.

ಆ ಸಭೆಗಳಲ್ಲಿ ಚರ್ಚಿಸಿ ತೀರ್ಮಾನಿಸಲ್ಪಟ್ಟ ಮೂರು ಸಂಗತಿಗಳಲ್ಲಿ ಜನರಿಗೆ ಹೊಸ ವಿಷಯವಾದ ಭೂಮಿ ಗಿರ್ವಿ ಬ್ಯಾಂಕಿನ ಸ್ಥಾಪನೆಯೇ ಚರ್ಚಾಸ್ಪದವಾದದ್ದಾಗಿತ್ತು. ಆ ಭೂಮಿ ಗಿರ್ವಿ ಬ್ಯಾಂಕಿನ ಸ್ಥಾಪನೆಯ ಈ ವಿಷಯವು ಕೊಡಗಿನ ಕಳೆದ ಸಹಕಾರಿ ಸಮ್ಮೇಳನದಲ್ಲಿ ಚರ್ಚಿಸಲ್ಪಟ್ಟು ಅಲ್ಲಿ ಅದು ಹೇಗೆ ಬಹು ಚಿಕ್ಕ ಬಹುಮತದಿಂದ ಸೋತು ಹೋಯಿತೆಂಬುದನ್ನು ಅವರು ಹೇಳಿದರು. ಆದರೆ ಆ ನಿರ್ಣಯವೇ ಅಂತಿಮವಾದದ್ದಲ್ಲ ಎಂದು ಕೂಡಲೇ ಬಂದಿದ್ದವು. ನಂತರ ಆ ವಿಚಾರವಾಗಿ ಸ್ಥಳೀಯ ಪತ್ರಿಕೆಗಳಲ್ಲಿ ವಿರೋಧ ಮತ್ತು ಪಕ್ಷಗಳವರ ಅಭಿಪ್ರಾಯಗಳು ವಿವರವಾಗಿ ಬರೆಯಲ್ಪಟ್ಟಿದ್ದವು. ಅಲ್ಲದೆ ಎಲ್ಲಾ ಸಭೆಗಳಲ್ಲಿ ಈ ಸಂಗತಿಯು ಕೂಲಂಕಷವಾಗಿ ಚರ್ಚಿಸಲ್ಪಟ್ಟಿತು. ಭೂಮಿ ಗಿರ್ವಿ ಬ್ಯಾಂಕಿನ ಸ್ಥಾಪನೆಯಿಂದ ಜಮ್ಮಾ ಪದ್ಧತಿಗೆ ಧಕ್ಕೆಯುಂಟಾಗುವುದೆಂದು ಕೆಲವು ಕೆಲವರು ಹೆದರಿಸುತ್ತಿರುವ ಸಹಕಾರಿ ಸಂಘಗಳಿಗೂ ಹಾಗೂ ಮಧ್ಯ ಸಂಸ್ಥೆಯಾದ ಸಹಕಾರಿ ಸೆಂಟ್ರಲ್ ಬ್ಯಾಂಕಿಗೂ ಧಕ್ಕೆ ತಗಲುವುದೆಂದೂ, ಕೊಡಗಿನಂಥ ಚಿಕ್ಕ ಪ್ರಾಂತ್ಯದಲ್ಲಿ ಅದರಲ್ಲಿಯೂ ದೊಡ್ಡ ಜಮ್ಮಾನ್ವಿತರ ಸಂಖ್ಯೆಯು ಬಹು ಕಡಿಮೆಯಾಗಿರುವಲ್ಲಿ ಮತ್ತು ಮಳೆ ಸೀಸನ್ನೇ ಸಂಬಂಧಿತ ವ್ಯವಸಾಯ ಮಾಡುತ್ತಾ ಭೂಮಿಯ ಬೆಲೆಯು ಏರುತ್ತಾ ಇರುವಾಗ ಇಲ್ಲಿ ಭೂಮಿ ಗಿರ್ವಿ ಬ್ಯಾಂಕು ಅನುಪಯುಕ್ತವಾಗಬಹುದೆಂದೂ, ಆದ್ದರಿಂದ ಈಗ ಇರುವ ಸಹಕಾರ ಸಂಘಗಳ ಮತ್ತು ಹೆಚ್ಚು ಬಡ್ಡಿಯಿಂದ ನಡೆಸಲ್ಪಡಬೇಕಾದ ಆ ಬ್ಯಾಂಕಿನಿಂದ ನಿರೀಕ್ಷಿತ ಹೆಚ್ಚು ನಷ್ಟವಾಗುವದೆಂದೂ ಜಮ್ಮಾನ್ವಿತರ ಸಂಘದ ಕಡೆಯವರು ಮೀಟಿಂಗಿನಲ್ಲಿ ನೆರೆದಿದ್ದ ಮಹನೀಯರಿಗೆ ವಿಶದವಾಗಿ ತಿಳಿಸಿಕೊಟ್ಟದ್ದಲ್ಲದೆ ಆ ಬ್ಯಾಂಕಿನಿಂದ ಉಂಟಾಗುವ ಪ್ರಯೋಜನವನ್ನು ವಿವರಿಸಿ ಹೇಳಿದರು. ನಂತರ 'ಕೊಡಗಿನಲ್ಲಿ ಪ್ರತ್ಯೇಕ ಭೂಮಿ ಗಿರ್ವಿ ಬ್ಯಾಂಕನ್ನು ಸ್ಥಾಪಿಸುವುದರ ಬದಲು ಸಹಕಾರಿ ಸೆಂಟ್ರಲ್ ಬ್ಯಾಂಕಿನಲ್ಲೇ ದೀರ್ಘ ಕಾಲದ ಸಾಲ ಕೊಡುವ ಏರ್ಪಾಡನ್ನು ಮಾಡುವುದು ಉತ್ತಮ' ವೆಂಬ ಗೊತ್ತುವಳಿಯು ಸಭೆಗಳ ಮುಂದಿಡಲಾಯಿತು. ಸರ್ಕಾರದವರು ಸಹಕಾರಿ ಖಾತೆಯ ಮೂಲಕ ಸೆಂಟ್ರಲ್ ಬ್ಯಾಂಕಿನಲ್ಲೇ ದೀರ್ಘ ಕಾಲದ ಸಾಲಗಳನ್ನು ಕೊಟ್ಟು ಕೃಷಿಕರಿಗೆ ಸಹಾಯ ಮಾಡಬೇಕಾದ ದೀರ್ಘ ಕಾಲದ ಸಾಲ ಕೊಡುವ ಏರ್ಪಾಡು ಮಾಡಬೇಕೆಂದೂ ಒತ್ತಾಯ ಪಡಿಸಲಾಯಿತು. ಕೊಡಗಿನಲ್ಲಿ ಈ ಸಂಬಂಧ ನಡೆಸಿದ ಒಟ್ಟು ಹತ್ತು ಸಾರ್ವಜನಿಕ ಸಭೆಗಳ ಪೈಕಿ ಶ್ರೀಮಂಗಲದ ಮೀಟಿಂಗಿನಲ್ಲಿ ಮಾತ್ರ ಚ-

ಲ್ಲಿ ಸದಸ್ಯರು ಹಾಗು ಹಿತೈಷಿಗಳ ಸಹಕಾರದಿಂದಾಗಿಯೂ, ನೆರೆದಿದ್ದವರ ಸಂಖ್ಯೆಯು ಕಡಿಮೆಯಾಗಿಯೂ ಇದ್ದ ಕಾರಣ ಈ ವಿಷಯದ ತೀರ್ಮಾನವು ಮುಂದಕ್ಕೆ ಹಾಕಲಾಯಿತು. ಅದಲ್ಲದೆ ಮತ್ತು ಮೂರ್ನಾಡು ಮೀಟಿಂಗುಗಳಲ್ಲಿ ಒಬ್ಬೊಬ್ಬರು ಹೊರತಾಗಿ ವಿರೋಧವಾಗಿ ನಿಂತಿದ್ದರು. ಸೋಮವಾರಪೇಟೆ, ಗೋಣಿಕೊಪ್ಪಲು ಮತ್ತು ವೀರಾಜಪೇಟೆ ಸಭೆಗಳಲ್ಲಿ ಕೆಲವರು ಪ್ರಶ್ನೆ ಕೇಳಿ ಸಂಶಯಗಳನ್ನು ಪರಿಹರಿಸಿಕೊಂಡರು. ಮೂರ್ನಾಡು ಮೀಟಿಂಗಿನಲ್ಲಿ ಮೊತ್ತದ ಗೊತ್ತುವಳಿಗೆ ವಿರೋಧವಾಗಿ ಇಬ್ಬರು ಓಟು ಕೊಟ್ಟದ್ದರಿಂದ ಅದೊಂದು ಬಹುಮತದಿಂದ ಪಾಸಾಯಿತು. ಬಾಕಿ ಎಲ್ಲಾ ಕಡೆಗಳಲ್ಲಿ ಠರಾವು ಸರ್ವಸಮ್ಮತದಿಂದಲೇ ಮಂಜೂರಾಯಿತು. ಇದರಿಂದ ಭೂಮಿ ಗಿರ್ವಿ ಬ್ಯಾಂಕಿನ ವಿಷಯದಲ್ಲಿ ದೇಶದವರ ಅಭಿಪ್ರಾಯವು ಹೇಗಿದೆ ಎಂಬುದು ವಿಶದವಾಗುತ್ತದೆ. ಇನ್ನು ದೇಶದವರು ಯಾವುದೊಂದು ನಿರ್ಬಂಧವಿಲ್ಲದೆ ಸರಾಗವಾಗಿ ಕೊಟ್ಟಂಥ ಅಭಿಪ್ರಾಯ. ಈ ಮೀಟಿಂಗುಗಳಲ್ಲಿ ಜಾಗರೂಕ ಠರಾವುಗಳ ಪ್ರತಿಯನ್ನು ಅಯಾಯ ಮೀಟಿಂಗಿನ ಅಧ್ಯಕ್ಷರು ಕಮಿಷನರವರಿಗೆ ಕಳುಹಿಸಿರುವುದಲ್ಲದೆ, ಮೀಟಿಂಗಿನಲ್ಲಾದ ಭಾಷಣ, ಚರ್ಚೆಗಳನ್ನೆಲ್ಲಾ ನಮ್ಮ 'ಶಾರ್ಟ್ ಹ್ಯಾಂಡ್' ರಿಪೋರ್ಟರ್ ಬರೆದುಕೊಂಡಿರುವುದರಿಂದ ಎಲ್ಲಾ ವಿವರವನ್ನೂ ಮೇಲಧಿಕಾರಿಗಳಿಗೆ ತಿಳಿಸಿಕೊಳ್ಳಲು ಅನುಕೂಲವಾಗಿದೆ. ಆದುದರಿಂದ ಸರ್ಕಾರದವರು ದೇಶದವರ ನಿಜವಾದ ಅಭಿಪ್ರಾಯಕ್ಕೆ ಬೆಲೆಕೊಟ್ಟು, ಅದರ ಮೇರೆಗೆ ನನ್ನನ್ನು ನಡೆಸಿಕೊಡಲು ಹಿಂಜರಿಯಲಿಕ್ಕಿಲ್ಲವಾಗಿ ನಂಬುತ್ತೇವೆ.

ಈ ಕೂಟಗಳಲ್ಲಿ ತೀರ್ಮಾನಿಸಿದ ಉಳಿದೆರಡು ವಿಷಯಗಳ ಪ್ರಾಮುಖ್ಯತೆಯನ್ನು ಕಡಿಮೆಯವೇನಲ್ಲ. ಆದರೆ ಅವುಗಳ ವಿಷಯದಲ್ಲಿ ಭಿನ್ನಾಭಿಪ್ರಾಯವು ಎಲ್ಲಿಯೂ ಇರಲಿಲ್ಲ. ಕೃಷಿಕರ ಈ ವರ್ಷದ ಬೆಳೆಯೂ ಮತ್ತು ಬೆಲೆಯೂ ಕಡಿಮೆಯಾಗಿರುವುದರಿಂದ ಕಂದಾಯದ ಮೂರರಲ್ಲಿ ಒಂದು ಭಾಗವನ್ನು ಮಾಫಿ ಮಾಡಬೇಕೆಂದೂ, ಕಳೆದ ಎರಡು ವರ್ಷಗಳ ಕಂದಾಯದಲ್ಲಿ ಕೋರಿದ ತಾತ್ಕಾಲಿಕ ರಿಯಾಯಿತಿಯನ್ನು ಪೂರ್ಣ ಮಾಫಿ ಮಾಡಬೇಕೆಂದೂ ಕೇಳುವುದು ನ್ಯಾಯಸಮ್ಮತವಾದ ಪ್ರಾರ್ಥನೆಯಾದ ಕೋರಿಕೆಯಾಗಿದೆ. ಕೃಷಿಕರ ಅಧಿಕ ಮುಗ್ಗಟ್ಟಿನ ಕಾಲದಲ್ಲಿ ಸಹಾಯಕ್ಕೆ ಬರಬೇಕಾದದ್ದು ರಾಜಧರ್ಮ. ಪ್ರಭುಗಳು ತಮ್ಮ ಧರ್ಮವನ್ನು ಮರೆತರೆ ಯಾರ ಸಿಟ್ಟಿಗೆ ಪ್ರಜೆಗಳ ಸ್ಥಿತಿಯು ಮರಿಮಾ ಕೆಟ್ಟು ಹೋಗಿ ಅದರಲ್ಲಿ ಆಶ್ಚರ್ಯವು ಬಲವಾಗುವುದರಲ್ಲಿ ಸಂಶಯವಿಲ್ಲ.

ಎಲ್ಲದಕ್ಕಿಂತಲೂ ಮುಖ್ಯವಾದದ್ದು ಮೂರನೇ ಗೊತ್ತುವಳಿಯಾಗಿದೆ. ಅದು ನೇರದ ಆಡಳಿತದ ಸುಧಾರಣೆಯನ್ನು ಕುರಿತದ್ದು. ಹಿಂದೂ ದೇಶದ ಬೇರೆ ಎಲ್ಲಾ ಪ್ರಾಂತ್ಯಗಳಿಗೂ, ಅವರಲ್ಲೂ ರಾಜಕೀಯ ಮಾರ್ಪಾಡಿನ ಮಟ್ಟಿಗೆ ಕೊಡಗಿಗಿಂತ ಹಿಂದಿದ್ದ ಪ್ರಾಂತ್ಯಗಳಿಗೂ ಕೂಡ ಜವಾಬ್ದಾರಿ ಸ್ವಾತಂತ್ರ್ಯ ಸರ್ಕಾರದ ರಚನೆಯನ್ನು ಮಂಜೂರು ಮಾಡಿ, ಅದನ್ನು ನಡೆಸಲು ಹಣ ಸಾಲದಕ್ಕೆ ಮಧ್ಯವರ್ತಿ ಸರ್ಕಾರದಿಂದ ಸಹಾಯ ನಂತರ ಕೊಡುವಂತೆ ನಿಶ್ಚಯಿಸಿರುವಾಗ್ಗೆ ಕೊಡಗಿಗೆ ಏನೊಂದು ಸುಧಾರಣೆ ನನ್ನೂ ಕೊಡದ ಏರ್ಪಾಡು ಮಾಡದಿರುವುದು ತೀರಾ ಅನ್ಯಾಯವಾಗಿದೆ. ಇದರಿಂದ ದೇಶದವರಲ್ಲಿ ಉಂಟಾಗಿರುವ ಅಸಮಾಧಾನವು ಅಷ್ಟಿಷ್ಟಲ್ಲ. ಈ ವಿಚಾರದಲ್ಲಿ ದೇಶದಲ್ಲಿ ಅಶಾಂತಿಯು ಹರಡುವ ಮುಂಚೆಯೇ ಸರ್ಕಾರದವರು ಜನರ ನ್ಯಾಯವಾದ ಕೋರಿಕೆಗಳನ್ನು ಸಲ್ಲಿಸಿಕೊಡುವುದು ಬುದ್ಧಿವಂತಿಕೆಯಾಗಿದೆ.

ಸಾರ್ವಜನಿಕ ಸಭೆಗಳು.

ಕೊಡಗು ಜಮ್ಮಾನ್ವಿತರ ಸಂಘದ ಆಶ್ರಯದಲ್ಲಿ ಕಳೆದ ಎರಡು ವಾರಗಳಲ್ಲಿ ನಡೆಸಿದಂತೆಯೇ ಕಂದಾಯ ಮಾಫಿ, ಭೂಮಿಗಿರ್ವಿ ಬ್ಯಾಂಕು ಮತ್ತು ರಾಜಕೀಯ ಸುಧಾರಣೆಗಳನ್ನು ಕುರಿತ ಈ ಕೆಳಗಿನ ಸ್ಥಳಗಳಲ್ಲಿ ಪಬ್ಲಿಕ್ ಮೀಟಿಂಗುಗಳು ನಡೆಸಲ್ಪಟ್ಟವು. ಅಲ್ಲಿ ಪಾಸಾದ ಠರಾವುಗಳ ಪ್ರತಿಯು ಮೀಟಿಂಗಿನ ಅಧ್ಯಕ್ಷರಿಂದ ಕಮಿಷನರವರಿಗೆ ಕಳುಹಿಸಲ್ಪಟ್ಟಿತು.

ನಾಪೋಕ್ಲು

ಈ ತಾರೀಕು 15 ನೇ ಶನಿವಾರ ಮಧ್ಯಾಹ್ನ 2 ಗಂಟೆಗೆ ನಾಪೋಕ್ಲು ಶಾಲಾ ಬಳಿ ಮೈದಾನದಲ್ಲಿ ಒಂದು ದೊಡ್ಡ ಸಾರ್ವಜನಿಕ ಸಭೆಯು ಸೇರಿತ್ತು. ಮೆ. ಬಿದ್ದಂಡ ಕಾರ್ಯಪ್ಪನವರು ಅಧ್ಯಕ್ಷರಾಗಿ ಆರಿಸಲ್ಪಟ್ಟರು. ಅಧ್ಯಕ್ಷರ ಕೋರಿಕೆಯ ಮೇರೆ ಜಮ್ಮಾನ್ವಿತರ ಸಂಘದ ಪ್ರೆಸಿಡೆಂಟರಾದ ಮೆ. ಪಿ. ಐ. ಬೆಳ್ಯಪ್ಪನವರು ಮೀಟಿಂಗಿನ ಉದ್ದೇಶವನ್ನು ಸಂಕ್ಷೇಪವಾಗಿ ಹೇಳಿ ಕೊಡಗಿನಲ್ಲಿ ಪ್ರತ್ಯೇಕವಾಗಿ ಭೂಮಿಗಿರ್ವಿ ಬ್ಯಾಂಕನ್ನು ಸ್ಥಾಪಿಸುವುದರಿಂದುಂಟಾಗುವ ಅಪಾಯಗಳನ್ನು ಕುರಿತು ದೀರ್ಘ ಭಾಷಣ ಮಾಡಿದರು. ನಂತರ ಈ ಕೆಳಗಿನ ಠರಾವನ್ನು ಸಭೆಯ ಮುಂದಿಟ್ಟರು.

'ಕೊಡಗಿನಲ್ಲಿ ಪ್ರತ್ಯೇಕ ಭೂಮಿಗಿರ್ವಿ ಬ್ಯಾಂಕನ್ನು ಸ್ಥಾಪಿಸುವುದರ ಬದಲು ಸಹಕಾರಿ ಸೆಂಟ್ರಲ್ ಬ್ಯಾಂಕಿನಲ್ಲೇ ದೀರ್ಘ ಕಾಲದ ಸಾಲ ಕೊಡುವ ಏರ್ಪಾಡು ಮಾಡತಕ್ಕದ್ದು.'

ಮೆ. ಗಳಂಡ ಬಿದ್ದಪ್ಪ ಅವರು ಚಿಂಗಪ್ಪನವರು ಮತ್ತು ಕೋಳೇರಿಯ ಸುಬ್ಬಯ್ಯನವರು ಠರಾವಿಗೆ ಅನುಮೋದನೆ ಕೊಟ್ಟರು. ಠರಾವು ಸರ್ವಸಮ್ಮತದಿಂದ ಮಂಜೂರಾಯಿತು.

ಆ ಮೇಲೆ ಜಮ್ಮಾನ್ವಿತರ ಸಂಘದ ಗವರ್ನರ ಕಾರ್ಯದರ್ಶಿಯವರಾದ ಮೆ. ಬಿದ್ದಂಡ ಕಾರ್ಯಪ್ಪನವರು ಕೊಡಗಿಗೆ ಪ-

ನೊಂದಲೂ ರಾಜಕೀಯ ಸುಧಾರಣೆಗಳನ್ನು ಕೊಡಲು ಏರ್ಪಾಡು ಮಾಡದೆ ಇರುವುದರ ಅನ್ಯಾಯವನ್ನು ಕುರಿತು ಸ್ವಾರಸ್ಯವಾಗಿ ಉಪನ್ಯಾಸ ಮಾಡಿ ಈ ಕೆಳಗಿನ ಗೊತ್ತುವಳಿಯನ್ನು ಸೂಚಿಸಿದರು.

'ಕೊಡಗಿಗೆ ರಾಜಕೀಯ ಸುಧಾರಣೆಗಳನ್ನ ಇನ್ನೂ ಕೊಡದೆ ಏರ್ಪಾಡು ಮಾಡದಿರುವುದು ತುಂಬಾ ಅಸಮಾಧಾನಕರ ಮತ್ತು ಅನ್ಯಾಯಕರ. ಆದುದರಿಂದ ಪೂರ್ಣ ಜವಾಬ್ದಾರಿ ಸರ್ಕಾರ ರಚನೆಯನ್ನು ಕೊಡಲು ಕೂಡಲೇ ಏರ್ಪಾಡು ಮಾಡುವುದು ಅವಶ್ಯಕ.'

ಈ ಠರಾವು ಯಾರದೊಬ್ಬರ ವಿರೋಧವಿಲ್ಲದೆ ಪಾಸಾಯಿತು.

ಮೆ. ಸಿ. ಎಂ. ಭೀಮಯ್ಯನವರು—ಪೂರ್ಣ ಕಂದಾಯ ಕೊಡಲು ಸ್ವಕೀಯ ಅಶಕ್ತತೆಯನ್ನು ಸಕಾರಣಗಳಿಂದ ಸೂಚಿಸಿ ಭಾಷಣ ಮಾಡಿದ ಮೇಲೆ ಈ ಕೆಳಗಿನ ಠರಾವನ್ನು ಸಭೆಯ ಮುಂದಿಟ್ಟರು.

'ಈ ವರ್ಷದ ಬೆಳೆ ಫಸಲು ಉತ್ತಮವಾಗಿಲ್ಲದ್ದರಿಂದಲೂ, ಬೆಲೆ ಕಡಿಮೆಯಾಗಿರುವುದರಿಂದಲೂ ಈ ವರ್ಷದ ಕಂದಾಯದಲ್ಲಿ ಮೂರರಲ್ಲಿ ಒಂದು ಭಾಗವನ್ನು ಮಾಫಿ ಮಾಡಬೇಕೆಂದೂ, ಕಳೆದ ಎರಡು ವರ್ಷಗಳಲ್ಲಿ ಕೋರಿಸಿದಂಥಾ ತಾತ್ಕಾಲಿಕ ಕಂದಾಯ ರಿಯಾಯಿತಿಯನ್ನು ಖಾಯಂ ಮಾಫಿ ಮಾಡಬೇಕೆಂದೂ ಈ ಸಭೆ ಮಾನ್ಯರ ಕೋರಿಕೆಯಾಗಿದೆ.'

ಈ ಗೊತ್ತುವಳಿಯು ಏಕಮತದಿಂದ ಮಂಜೂರಾಯಿತು.

ದೇಶದ ಸ್ವಂತ ಹಿತಕ್ಕಾಗಿ ಹಲವು ವರ್ಷಗಳಿಂದ ಪ್ರಯತ್ನಿಸುತ್ತಿರುವ ಜಮ್ಮಾನ್ವಿತರ ಸಂಘಕ್ಕೆ ಎಲ್ಲರೂ ಸೇರಿ ಅದರ ಕಾರ್ಯಕರ್ತರುಗಳಿಗೆ ಉತ್ತೇಜನ ಕೊಡಬೇಕೆಂದೂ, ಇಲ್ಲಿ ಪಾಸಾದ ಠರಾವುಗಳ ಪ್ರಚಾರವನ್ನು ಗ್ರಾಮಗಳ ಸಂಘಗಳೊಂದುಗಳಲ್ಲಿಯೂ ಹರಡಬೇಕೆಂದೂ ಮುಂತಾಗಿ ಅಧ್ಯಕ್ಷರು ಭಾಷಣ ಮಾಡಿದ ನಂತರ, ಅಧ್ಯಕ್ಷರಿಗೂ, ಜಮ್ಮಾನ್ವಿತರ ಸಂಘದವರಿಗೂ ಮತ್ತು ನೆರೆದಿದ್ದ ಸಭಿಕರಿಗೂ ವಂದನೆಗಳನ್ನರ್ಪಿಸಿದ ಮೇಲೆ ಸಭೆಯು ಮುಕ್ತಾಯಗೊಂಡಿತು.

ಮೂರ್ನಾಡು

ಮೂರ್ನಾಡಿನ ವಾರದಸಂತೆಯಲ್ಲಿ ಈ ತಾ 20ನೇ ಗುರುವಾರ ಮಧ್ಯಾಹ್ನ 2 ಗಂಟೆಗೆ ಒಂದು ಪಬ್ಲಿಕ್ ಮೀಟಿಂಗು ಸೇರಿತ್ತು. ಮೆ. ಪಡಿಯಂಡ ದೇವಯ್ಯನವರ ಸೂಚನೆ ಮೇರೆ ಮೆ. ಚಾಕಿಂಡ ಅಪ್ಪಯ್ಯನವರು ಅಧ್ಯಕ್ಷಸ್ಥಾನವನ್ನು ವಹಿಸಿದ್ದರು. ಅಧ್ಯಕ್ಷರ ಅನುಮತಿಯಿಂದ ಶ್ರೀ ಪಿ. ಐ. ಬೆಳ್ಯಪ್ಪನವರು ಸಭೆಯನ್ನು ಕರೆಸಿದ್ದರ ಉದ್ದೇಶವನ್ನು ಸಂಕ್ಷೇಪವಾಗಿ ಹೇಳಿ ಭೂಮಿ ಗಿರ್ವಿ ಬ್ಯಾಂಕಿನ ಸಾಧಕ ಬಾಧಕಗಳನ್ನು ಕುರಿತು ಉಪನ್ಯಾಸ ಮಾಡಿದರು. ನಂತರ ಈ ವಿಚಾರವನ್ನು ಕುರಿತು ನಾಪೋಕ್ಲು ಮೀಟಿಂಗಿನಲ್ಲಿ ಪಾಸಾದಂಥಾ ಗೊತ್ತುವಳಿಯನ್ನು ಸೂಚಿಸಿದರು. ಪ್ರತ್ಯೇಕ ಭೂಮಿ ಗಿರ್ವಿ ಬ್ಯಾಂಕು ಅಗತ್ಯವೆಂದು ಹೇಳುತ್ತಾ, ಠರಾವನ್ನು ವಿರೋಧಿಸಿ ಮೆ. ಕಂಬಡಕಂಡ ಮೊಣ್ಣಪ್ಪನವರು ಮತ್ತು ಮೆ. ತೆಕ್ಕಡ ಅಪ್ಪಯ್ಯನವರು ಭಾಷಣ ಮಾಡಿದರು. ಮೆ. ಗಳಂಡ ಬೋಳ್ಳ ಚಿಟ್ಟಿಯಪ್ಪ ಅಪ್ಪಯ್ಯನವರು, ಮೆ. ಚಾಗಂಡ ಕುಂಞಪ್ಪನವರು ಮತ್ತು ಪಡಿಯಂಡ ದೇವಯ್ಯನವರು ಠರಾವಿಗೆ ಅನುಮೋದನೆ ಕೊಟ್ಟರು. ವಿರೋಧಿಸಿದವರಿಗೆ ಮೆ. ಬೆಳ್ಯಪ್ಪನವರು ಉತ್ತರವಿತ್ತ ಮೇಲೆ ಠರಾವು ದೊಡ್ಡ ಬಹುಮತದಿಂದ ಪಾಸಾಯಿತು. ಇಬ್ಬರು ವಿರೋಧವಾಗಿಯೂ, ಒಬ್ಬರು ಯಾವ ಕಡೆಗೂ ಇಲ್ಲದೆಯೂ, ಉಳಿದವರೆಲ್ಲರೂ ಪರವಾಗಿಯೂ ಓಟು ಕೊಟ್ಟರು.

ಆ ಮೇಲೆ ಜಮ್ಮಾನ್ವಿತರ ಸಂಘದ ಅಧ್ಯಕ್ಷರು ಕಂದಾಯ ಮಾಫಿ ಬಗ್ಗೆ ಮತ್ತು ರಾಜಕೀಯ ಸುಧಾರಣೆಗಳನ್ನು ಕುರಿತ ಠರಾವುಗಳನ್ನು ಮೇಲೆ ಕಾಣಿಸಿದ ರೀತಿಯಲ್ಲಿಯೇ ಸಭೆಯ ಮುಂದಿಟ್ಟರು. ಇವೆರಡು ಗೊತ್ತುವಳಿಗಳೂ ಸರ್ವಸಮ್ಮತದಿಂದ ಮಂಜೂರಾದವು. ಮೆ. ಪಡಿಯಂಡ ದೇವಯ್ಯನವರು ಜಮ್ಮಾನ್ವಿತರ ಸಂಘದ ಪ್ರೆಸಿಡೆಂಟರಿಗೂ, ಮೀಟಿಂಗಿನ ಅಧ್ಯಕ್ಷರಿಗೂ, ಸಭೆ ನೆರೆದಿದ್ದ ಮಹನೀಯರಿಗೂ ವಂದನೆಗಳನ್ನರ್ಪಿಸಿದ ನಂತರ ಮೀಟಿಂಗು ಬರಖಾಸ್ತಾಯಿತು.

ನಾಪೋಕ್ಲು
ಗವರ್ನಮೆಂಟು ಮೋಡಲ್ ಶಾಲೆಯ
ಮಣಿಮಹೋತ್ಸವದ ಕಾಣಿಕೆ.

ಕಥೆ ಮೊದಲಾದ ವಿವಿಧ ಲೇಖನಗಳಿಂದಲೂ ಶಾಲೆಯ ಚಟುವಟಿಕೆಗಳ ವಿಷಯಗಳಿಂದಲೂ ಕೂಡಿದ ಪುಸ್ತಕ ಕೊಡಗಿನ ಪ್ರತಿಯೊಬ್ಬ ಮಹನೀಯರೂ ಸಂಗ್ರಹಿಸತಕ್ಕ ಪುಸ್ತಕ ಅಪರೂಪದ ಪುಸ್ತಕ. ಬೆಲೆ ಆಣೆ 0—2—0 ಮಾತ್ರ.

ಬರುವ ಹಣವು ಉಳಿಕೆಯನ್ನ ಹಣವೆಲ್ಲವೂ ಶಾಲೆಯ ಬಡ ಹುಡುಗರ ಫಂಡಿಗೆ ಸೇರುತ್ತದೆ.

ಪುಸ್ತಕ ದೊರೆಯುವ ಸ್ಥಳ:—

ಕಾರ್ಯದರ್ಶಿ,	ಏಜೆಂಟರು,
ನಾಪೋಕ್ಲು ಸಹಕಾರ ಸ್ಟೋರ್ಸ್ ಲಿಮಿಟೆಡ್, ನಾಪೋಕ್ಲು.	'ವಿಶ್ವಕರ್ನಾಟಕ', ಮಡಿಕೇರಿ.

ಸನ್ 1882ನೇ ಇಸವಿ ಇಂಡಿಯನ್ ಟ್ರಸ್ಟ್ ಆಕ್ಟಿಗೆ ಒಳಪಟ್ಟ ಸರಕಾರದ ಭದ್ರತೆಯುಳ್ಳ

ದಿ ಬೊಂಬೆ ಲೈಫ್ ಎಶ್ಯೂರೆನ್ಸ್ ಕಂಪೆನಿ ಲಿಮಿಟೆಡ್,

ಅಧ್ಯಕ್ಷರು—ಮಾನನೀಯ ಸರ್ ಚಿಮನ್ಲಾಲ್ ಸೆಟಲ್ವಾಡ್,
ಕೆ. ಟಿ. ಸಿ. ಐ. ಇ., ಜೆ. ಪಿ. ಯವರು.

ಕೆ. ಚೈಕರ್ ಬ್ರದರ್ಸ್ ಮದ್ರಾಸು ಬ್ರಾಂಚ್ ಸೆಕ್ರೆಟರಿಗಳು.

ಕಳೆದ ಲಾಭ ಹಂಚುವಿಕೆಯಲ್ಲಿ ರೂ. 18ರಿಂದ 23ರ ವರೆಗೆ ಬೋನಸು ಡಿಕ್ಲೇರಾಗಿರುತ್ತೆ.

ಹಿಂದಿನಿಂದ ಸ್ಥಾಪಿಸಲ್ಪಟ್ಟ ಹಿಂದೂಸ್ಥಾನದವರಿಗಾಗಿ ಜೀವವಿಮೆಗೆ ನಿರ್ಬಂಧವಿಟ್ಟಿರುವ ಅತ್ಯುತ್ತಮ ಕರಾರು ಲಕ್ಷಣಗಳಿಂದ ಕೂಡಿ ಕಮ್ಮಿ ಪ್ರೀಮಿಯಮ್ ದರದಲ್ಲಿ ಪಾಲಿಸಿ ಕೊಡುವ ಕಂಪೆನಿ ಇದೊಂದು ಮಾತ್ರವೇ ಸಂದಿರಿ.
ಪತಿ ಪತ್ನಿಯರು ಮತ್ತು ವ್ಯಾಪಾರಸ್ಥರು ವಗೈರೆಯವರಿಗೆ ಜತೆಭಾಗಿ (ಜಾಯಿಂಟ್ ಲೈಫ್)
ಪಾಲಿಸಿ ಕಮ್ಮಿ ಪ್ರೀಮಿಯಮ್ ದರದಲ್ಲಿ ಕೊಡುವ ಈ ಕಂಪೆನಿಯು ಹೆಸರುಗೊಂಡಿದೆ.
ಪಾಲಿಸಿದಾರರು ಅಕಸ್ಮಾತಾಗಿ ಅಂಗಹೀನರಾದರೆ ಅಂಥವರಿಗೆ ಪಾಲಿಸಿಯ ಮೊಬಲಗನ್ನು ಮುಂದಣ
ಪ್ರೀಮಿಯಮ್ ವಸೂಲಾತಿ ಇಲ್ಲದೆ ಪೆನ್ಷನ್ ರೀತಿಯಲ್ಲಿ ಉದಾರತ್ವದಿಂದ ಕೊಡಲು
ಈ ಕಂಪೆನಿಯು ಎಡರು ಪಡಲಿಲ್ಲ ಎಂದು ನೆನಪಿಸಿರಿ.
ಮುಂದಿನ ಏಜಂಟ ಕೆಲಸ ಮಾಡಲು ಇಷ್ಟಪಡುವ ಗಣಕರು ಮತ್ತು ಹೊಗಳಿಗೆ
ಉತ್ತಮ ತರಹದ ಕಮಿಶನ್ ವಗೈರೆಯಿಂದ ಏಜೆನ್ಸಿ ಕೊಡಲಾಗುತ್ತೆ.

ಹೆಚ್ಚಿನ ಮಾಹಿತಿಗೆ—ಬಿ. ಎಸ್. ಐಯ್ಯಪ್ಪ,
ಕೊಡಗು ಚೀಫ್ ಏಜೆಂಟ್,
26—11 ಮಹದೇವಪೇಟೆ, ಮಡಿಕೇರಿ



ಉತ್ತಮ ಪ್ರತಿಫಲ ಯಾವದರಲ್ಲಿ?

501 ಸಾಬೂನು — ಅತ್ಯಲ್ಪ ನೀರಾಂಶದಿಂದ ಕೂಡಿದ,
ಒಳ್ಳೇ ಘಟ್ಟಿ ಸಾಬೂನು



ಆಧಾರಾಂಶಕ್ಕಿಂತ ಹೆಚ್ಚು ನೀರು ಬೆರೆತಿದ್ದು, ನೋಟಕ್ಕೆ
ಒಳ್ಳೇ ಸಾಬೂನಿನಂತೆ ಕಾಣುವ ಇತರ ಸಾಬೂನು

ಆಗ್ಗವಾದ—ಸಾಬೂನುಗಳನ್ನು ಕೊಂಡುಕೊಳ್ಳುವದು ಹೆಚ್ಚು ಖರ್ಚಿಗೆ ಕಾರಣ. ಯಾತಕ್ಕೆಂದರೆ ಸಾಬೂನಾಗಿ ನೀವು ಹಣಕೊಟ್ಟು ಅರ್ಧ ಕಂಡು ಸಾಬೂನನ್ನು ಮಾತ್ರ ಪಡೆಯುವಿರಿ. ಈ ಸಾಬೂನುಗಳಲ್ಲಿ ನೀರು ಹೆಚ್ಚು. 501 ಸಾಬೂನು ಚೆನ್ನಾಗಿ ಕೊಳೆಯನ್ನು ತೆಗೆವ ಎನ್ನುದೆ ಮತ್ತು ಹೆಚ್ಚು ಬಾಳಿಕೆ ಬರುವದರಲ್ಲಿ ಆಶ್ಚರ್ಯವಿಲ್ಲ!

501 Soap

ಬೆಲೆ ಕಡಿಮೆ.
ವಸ್ತ್ರ ಬಾಳಿಕೆ.
ಶ್ರಮ ಅತೀ ಕಡಿಮೆ!

ಟಾಮ್‌ಕೋ ಮಾರಾಟದ ಮಳಿಗೆ, ೧, ಸೆಂಟ್ರಲ್ ಸ್ಟ್ರೀಟ್, ಬೆಂಗಳೂರು ದಂಡು.

ತಯಾರಿಸುವವರು—ಟಾಟಾ ಆಯಿಲ್ ಮಿಲ್ಸ್, ಕಂಪೆನಿ. ಲಿಮಿಟೆಡ್, ಬೊಂಬಾಯಿ, ಮತ್ತು ಟಾಟಾಪುರ.

52—39 ಕೊಡಗಿನ ಡಿಸ್ಟ್ರಿಬ್ಯುಟರ್—ಬಿ. ಎಸ್. ಸುಬ್ಬಣ್ಣ, ಸಂತೆಪೇಟೆ, ಮೈಸೂರು.

ನೂತನ! ಮನೋಲ್ಲಾಸಕರ!! ರುಚಿಕರ!!! ಆದರ್ಶ ವಿಶ್ರಾಂತಿಗೃಹ!!!!

ಬೊಂಬಾಯಿ ರೆಸ್ಟೋರೆಂಟ್

ಇದೇ ತಾ. 19—12—1935ರಲ್ಲಿ ಮಡಿಕೇರಿ ಚೌಕದಲ್ಲಿರುವ
ಹೊಸ ಕಟ್ಟಡದಲ್ಲಿ ತೆರೆಯಲ್ಪಟ್ಟಿದೆ.

ಆರೋಗ್ಯಕರವೂ ಅಧಿಕವೂ ಆದ ಉಪಹಾರ ಗೃಹವೊಂದನ್ನು ನಿರೀಕ್ಷಿಸುವ ಮಹನೀಯರುಗಳ ಸೌಕರ್ಯಕ್ಕಾಗಿ ತೆರೆಯಲಾಗುವುದು.

ಶುದ್ಧವೂ ಪುಷ್ಟಿಕರವೂ, ಆರೋಗ್ಯಕರವೂ ಆದ ತಿಂಡಿತಿನಸುಗಳನ್ನೂ

ಕಾಫಿ—ಚಹಾ—ಕೋಕೋ—ಶರ್ಬತ್ತು ಇತ್ಯಾದಿ ಪಾನೀಯಗಳೂ—
ಕೇವಲ ಹಲವು ವರ್ಷಗಳ ಅನುಭವಿಕರಿಂದ ತಯಾರಿಸಲ್ಪಡುವುವು.

ಗಿರಾಕಿಗಳ ಸೌಕರ್ಯವನ್ನು ಲಕ್ಷಿಸಿ, ಆಸನಗಳ—ವಿಶಾಲ ಕೋಣೆಗಳ—ಕಾಯೋ ರಷ್ಯಾ ವಿನೀತ ಸೇವಕರ ಏರ್ಪಾಡು ಇದೆ.

ಆಯಕ್ಕೆ ತಕ್ಕ ವ್ಯಯಮಾಡುವವರು, ವ್ಯಯಕ್ಕೆ ತಕ್ಕ ಆಯವನ್ನು ಹೊಂದಬೇಕಾದ ಆತ್ಯಾಧುನಿಕ ಈ ವಿಶ್ರಾಂತಿಗೃಹದಲ್ಲಿ—

ನೀವು ಅಪೇಕ್ಷಿಸಿದ—ನೀವು ನಿರೀಕ್ಷಿಸಿದ—ನೀವು ಹೊಂದಬೇಕಾದ—
ಸಕಲ ಅನುಕೂಲತೆಗಳನ್ನು ಕಂಡು, ಪೂರ್ಣ ತೃಪ್ತಿಹೊಂದಿರಿ.

ಮದುವೆ ಮತ್ತು ಉಪನಯನ ಸಮಾರಂಭಗಳಲ್ಲಿಯೂ ಮತ್ತು "ಟೀ" ಪಾರ್ಟಿ—
"ಎಟ್-ಹೋಮ್"ಗಳಲ್ಲಿಯೂ ನಮ್ಮನ್ನು ಮರೆಯಬೇಡಿ.

52—10 ಪ್ರೊಪ್ರೈಟರ್:—ವಾಮನ ರಾವ್, ಗಾಯತ್ರಿ ಎಂಡ್.

ಮುಂಬಯಿ ಕೊಡಗು ಸಂಘ.

ಮಿ ಎ. ಕೆ. ನಂಜುಂಡರಾವ್‌ರವರು ಮುಂಬಯಿಯಿಂದ ಈ ರೀತಿ ಬರೆಯುತ್ತಾರೆ.—

ಮುಂಬಯಿ ಕೊಡಗು ಸಂಘದ ಆಶ್ರಯದಲ್ಲಿ ಶ್ರೀಯುತ ಬೇಲೂರು ಕೇಶವದಾಸರು ತಾರೀಖು 25—1—36 ರಲ್ಲಿ 'ಸುಭದ್ರಾಹರಣ' ವೆಂಬ ಹರಿಕಥೆಯನ್ನು ಮಿ ಬಿಂ ಎಸ್, ಮುತ್ತಣ್ಣ ಬಿ. ಎ., ಎಲ್ ಎಲ್ ಬಿ. ಯವರ ಭವನದಲ್ಲಿ ಮಾಡಿದರು. ಮುಂಬಯಿಯ ಪ್ರಕೃತದ ಚಳಿಯು ತೀಕ್ಷ್ಣವಾಗಿದ್ದರೂ ಅದನ್ನು ಗಣನೆಗೆ ತಾರದೆ ಅನೇಕ ಮೆಂಬರುಗಳೂ ಹಾಜರಿದ್ದರಲ್ಲದೆ ಹೊರಗಿನಿಂದ ಕೆಲವು ಅತಿಥಿಗಳೂ ಗೌರವಿಸಿದ್ದರು. ಅವರಲ್ಲಿ ಮುಖ್ಯವಾಗಿ ಮಿ. ನೆಟ್ಟೂರರೂ ಮತ್ತು ಮಿಸೆಸ್ ನೆಟ್ಟೂರರು, ಮಿ. ನೀಲಕಂಠರಾವ್‌ರವರೂ ಮತ್ತು ಮುಂಬಯಿ ಕರ್ನಾಟಕ ಸಂಘದ ಕಾರ್ಯದರ್ಶಿಗಳಾದ ಮಿ. ಪಟ್ಟಿಗೇರಿ ಮುಂತಾದವರೂ ಆಗಿದ್ದರು.

ಶ್ರೀಯುತ ದಾಸರು ಕರ್ನಾಟಕ ರಂಗಭೂಮಿಯಲ್ಲಿ ಪರಿಚಿತ ವ್ಯಕ್ತಿಗಳಲ್ಲಿ ಕೀರ್ತನಾಚಾರ್ಯನೆನಿಸಿದಂತ ಬಹು ಪಾಂಡಿತ್ಯವನ್ನು ಪಡೆದವರು. ಅವರಿಗೂ ನಮ್ಮ ಪುಸ್ತಕಕ್ಕಾಗಿ ಗ ಹೊಸಬರೇನೂ ಅಲ್ಲ. ಅವರ ಹೆಸರನ್ನು ಅರಿಯದವರು ಅತಿ ವಿರಳವೆನ್ನಬೇಕು. ಕೊಡಗಿನ ಒಂದು ಮೂಲೆಯಲ್ಲಿ ಹರಿಕೀರ್ತನೆಯಾಗುವದೆಂದರೆ—'ಬಡವ' ನಮ್ಮ ಕೇಶವದಾಸರೆ? ಅಂದರೆ ನಡೆಯಿರಿ, ಹೋಗೋಣ' ಎಂಬ ಉದ್ಗಾರಗಳು ಪ್ರತಿ ವ್ಯಕ್ತಿಯ ಬಾಯಿಂದ ಹೊರಡುವದರಿಂದ ಅಂದ ಮೇಲೆ ಕೊಡವರೆಲ್ಲ ಅವರ ಸಂಗೀತಕ್ಕೆ ಉದಾರತ್ವಕ್ಕೆ ಮತ್ತು ಇತರನ್ನು ತಿಳಿಸಿಕೊಡುವ ಕಲೆಯಾಗಿರುವದೆಂದು ಶ್ರೀಯುತದಾಸರು ಹೇಳಿದರಲ್ಲಿ ಆಶ್ಚರ್ಯವೇನು?

ಕಥೆಯು ಮಹಾಭಾರತದಲ್ಲಿನ ಒಂದು ಚಿಕ್ಕ ಘಟನೆಯು. ಪ್ರಸ್ತುತದಲ್ಲಿ ಅದನ್ನು ಇಲ್ಲಿ ಹೇಳುವ ಅವಶ್ಯವಿಲ್ಲ. ಏಕೆಂದರೆ 'ಸುಭದ್ರಾಹರಣ'ವನ್ನು ಕೇಳದವರಿಲ್ಲ. ಓದದವರಿಲ್ಲ. ನಾಟಕಗಳಲ್ಲಿ ನೋಡದವರಿಲ್ಲ. ಶ್ರೀಯುತ ದಾಸರು ನಾಟಕದಲ್ಲಿ ನಾವು ನೋಡುವಂತೆ ಕೀರ್ತನೆ ನಡೆಸುವವರಲ್ಲ. ಅರ್ಜುನನು ಸನ್ಯಾಸಿಯ ವೇಷದಿಂದ ಬಂದು ಯಾರೂ ಇಲ್ಲದ ವೇಳೆಯಲ್ಲಿ ಒಬ್ಬ ಸುಂದರ ಯುವತಿಯನ್ನು ಕದ್ದೊಯ್ಯುವುದಂತೆ! ಅಲ್ಲದೆ ಒಬ್ಬ ಸ್ತ್ರೀಯು ಎರಡು ಪತಿಗಳನ್ನು ವಿವಾಹ ಮಾಡಿಕೊಂಡು ಪ್ರತಿ ಒಂದು ವರ್ಷವೂ ಒಬ್ಬೊಬ್ಬ ಪತಿಯೊಡನೆ ಸಂಸಾರ ನಡೆಸುವುದಂತೆ!! ನೋಡುವವರಿಗೆ ಮನೋರಂಜಿತವಾಗುವಂತೆ ಉತ್ಪ್ರೇಕ್ಷೆ ಬೆರಸಿ ನಡೆಸಲ್ಪಡುವ ಕಥೆಗೆ ಸಾಧಾರಣ ವ್ಯಕ್ತಿಯು ಬೆರಗು ಗೊಳ್ಳಬೇಕಾಗುವದು. ಆದರೆ ಅದರ ಗೂಢಾರ್ಥವನ್ನು ತಿಳಿದುಕೊಳ್ಳುವ ಕಾರ್ಯದಲ್ಲಿ ಪ್ರವೃತ್ತನಾಗುವುದಿಲ್ಲ. ಗ್ರಂಥಕರ್ತನ ಕವಿತಾಶಕ್ತಿಯನ್ನು ಪ್ರಕಟಿಸುವದು ಮಾತ್ರ. ಇದರಿಂದ ನಿತ್ಯಜೀವನಕ್ಕೆ ಏನಾದರೊಂದು ಹಾನಿಯನ್ನು ತಂದೊಡ್ಡುವದೆಂದು ಯೋಚಿಸಿದರೆ ಬಹು ಪರಿತಾಪವಾಗುವುದು. ಏಕೆಂದರೆ ಎಲ್ಲಾ ಪುರಾಣ ಕಥೆಗಳ ಉತ್ಪ್ರೇಕ್ಷೆಯಿಂದ ಹೇಳಲ್ಪಟ್ಟಿರುವದರಿಂದ ಪಾಶ್ಚಾತ್ಯ ನಾಗರೀಕತೆಗೆ ಬಲಿಬಿದ್ದು ಶುಷ್ಕ ನಾಸ್ತಿಕರಾದ ನಾವು ನಮ್ಮಲ್ಲಿ ಕೆಲವರು, 'ಇಂಥಾ ಪೊಳ್ಳು ಕಥೆಯೆ, ನಮ್ಮ ಪುರಾಣಗಳು! ಇವನ್ನು ನಂಬಲು ನಾವೇನೂ ಮೂರ್ಖರಲ್ಲ!' ಎಂಬುವುದಾಗಿ ಹೇಳುವುದುಂಟು. ನಮ್ಮನ್ನು ನಾವೇ ಪರರ ಇದಿರಿಗೆ ನಗೆಗೀಡಾಗಿ ಮಾಡಿಕೊಂಡಿರುವೆವು! ಆದರೆ ಶ್ರೀಯುತದಾಸರ ದಾರಿಯೇ ಬೇರೆ. ಅವರು ಅಸಂಬದ್ಧ ಪ್ರಲಾಪಗಳ ಗೋಜಿಗೆ ಹೋಗದೆ ಶುದ್ಧ ಕೀರ್ತನ ಶ್ರವಣದಿಂದ ಜನರಲ್ಲಿ ತತ್ವಜ್ಞಾನವು ಹರಡುವಂತೆ ಮಾಡುವರು. ಅದೇ ಅವರ ಧ್ಯೇಯವೆನ್ನಬೇಕು. ಈ ತತ್ವಜ್ಞಾನದ ಪ್ರಚಾರದಲ್ಲಿ ಉದ್ಯುಕ್ತರಾದ್ದು ಕನ್ನಡಿಗರ ಪರಮ ಭಾಗ್ಯವೆನ್ನಬಹುದು. ದಾಸರು ಕೀರ್ತನೆಯಿಂದ ಒಮ್ಮೆಲೆ ಅವರ ಕಥೆಯ ಗೂಢಾರ್ಥವು ಮನಸ್ಸಿಗೆ ಹೊಳೆಯದು. 'ಸುಭದ್ರಾಹರಣ'ದಲ್ಲಿನ ತತ್ವವೇನು? ಸುಲಭವಾಗಿ ತಿಳಿಸಿಂದ ಹೇಳುವದಾದರೆ ಅರ್ಜುನನೆಂಬ ಜೀವಾತ್ಮನು ಪ್ರಪಂಚದ ಕಾಮ ಕ್ರೋಧ ಲೋಭಾದಿಗಳನ್ನು ಜಯಿಸಿ ಆತ್ಮರನ ಏಕ ಧ್ಯಾನದಿಂದ ಕೊನೆಯಲ್ಲಿ ಪರಬ್ರಹ್ಮವನ್ನು ಅಂದರೆ ಸುಭದ್ರೆಯನ್ನು ಹೊಂದಿದನೆಂದು.

ನವನಾಗರೀಕತೆಯ ಎಲ್ಲೆಯನ್ನು ವಿಶದ ನಾವು ಈಗಿನ ಸ್ವಪ್ನಾವಸ್ಥೆಯಿಂದ ಜಾಗೃತರಾಗಿ ನಮ್ಮ ಪುರಾಣಗಳಿಗೆ ತಕ್ಕ ಪೂಜ್ಯತೆಯನ್ನು ಕೊಡದೆ ಹೋದರೆ ಹಿಂದೂ ಧರ್ಮವೇ ಒಂದಾನೊಂದು ಕಾಲದಲ್ಲಿ ಶಿಥಿಲವಾಗಿ ಹೋಗುವುದರಲ್ಲಿ ಸಂಶಯವಿಲ್ಲ. ಕೃತಯುಗದಲ್ಲಿ ಧರ್ಮವು ನಾಲ್ಕು ಕಾಲುಗಳಿಂದ ನಿಂತದ್ದರಿಂದ ಆಗ ಜನರಲ್ಲಿ ಸುಖಶಾಂತಿಗಳು ನೆಲೆಗೊಂಡಿದ್ದುವೆಂದು ಪುರಾಣಗಳು ಸಾರಿ ಹೇಳುತ್ತವೆ. ನಂತರ ತ್ರೇತಾ, ದ್ವಾಪರ, ಕಲಿಯುಗಗಳಲ್ಲಿ ಜನರಲ್ಲಿಯ ನಂಬಿಕೆಯೂ ಸಹಕಾರವೂ ಕುಗ್ಗುತ್ತಾ ಬಂದಂತೆ ಧರ್ಮವು ಕಾಲೊಂದೊಂದಾಗಿ ಕಳೆದುಕೊಳ್ಳುತ್ತಾ ಬಂದು ಕಡೆಗೆ ಈ ಕಲಿಯುಗದಲ್ಲಿ ಧರ್ಮವು ಒಂದು ಕಾಲಿನಿಂದ ನಿಂತರೂ ಆ ಕಾಲೂ ಕುಂಟು ಬಿದ್ದಿರುವುದಂತೆ! ಇದಕ್ಕೆ ಕಾರಣರಾರು? ಅದಕ್ಕೆ ಮುಂದಾಗಿ ಕಣ್ಣು ಬೇಕೆ?

ಅಂತ್ಯದಲ್ಲಿ ಮಿ. ಐ ಕರುಂಬಯ್ಯನವರು ಸಂಘದ ಪರವಾಗಿ, ಬಂದಿದ್ದ ಅತಿಥಿಗಳಿಗೆ ವಂದಿಸಿದರು. ಮಂಗಳಾರತಿಯಾದ ಬಳಿಕ ಪ್ರಸಾದ ಹಂಚಲ್ಪಟ್ಟು ರಾತ್ರಿ ಒಂಬತ್ತು ಗಂಟೆಗೆ ಎಲ್ಲವೂ ಮುಕ್ತಾಯವಾಯಿತು.

ಕೋಳಿಗಳ ವ್ಯವಸಾಯ.

(ಶ್ರೀ ಎ. ಯಂ. ಮುತ್ತಪ್ಪ, ಪಾಲಿಬೆಟ್ಟ ಶೋಲ್ಸ್, ಫ್ರೇಸರ್‌ಪೇಟೆ)

ಪಾಶ್ಚಾತ್ಯ ದೇಶಗಳಲ್ಲಿ ಈ ಕಸಬು ಅನೇಕರನ್ನು ಐಶ್ವರ್ಯವಂತರನ್ನಾಗಿ ಮಾಡಿದೆಯೆಂಬುದು ನಾವೆಲ್ಲರೂ ತಿಳಿದಿರುವ ವಿಷಯವು. ಆದರೆ ನಾವು, ಇನ್ನೂ ಹಿಂದುಳಿದಿರುವ ನಿವಾಸಿಗಳು, ಕೋಳಿ ಸಾಕುವುದರಿಂದ ಪಡೆಯಬಹುದಾದ ಉತ್ಪತ್ತಿಯನ್ನು, ಪ್ರಯೋಜನವನ್ನು ಇನ್ನೂ ಗಣನೆಗೆ ತಂದಿರುವುದಿಲ್ಲ. ಈ ವೃತ್ತಿಯನ್ನು ಕೈಕೊಂಡರೆ ಇದರಿಂದ ಈಗ ಯಾವ ಪ್ರಯೋಜನಕ್ಕೂ ಉಪಯೋಗಿಸದ, ಹಾಗೆಯೇ ಬಂಜರಾಗಿರುವ ಪ್ರದೇಶಗಳನ್ನು, ಕೋಳಿಗಳ ಪೋಷಣಾಲಯಗಳನ್ನಾಗಿ ಮಾಡಿಕೊಂಡು, ಇತರ ಫಲದಾಯಕ ಪ್ರದೇಶಗಳಿಂದ ಪಡೆಯಬಹುದಾದ ಲಾಭವನ್ನು ಹೊಂದಬಹುದು. ಕೆಲವು ಕಡೆ, ಬೀಗು ತೋಟಗಳನ್ನೂ ಸಹ ಬಹಳ ಸಾಕಲು ಉಪಯೋಗಿಸಿ ಲಾಭವನ್ನು ಪಡೆಯಬಹುದು. ಚೀನಾ, ಇಟಲಿ, ದಕ್ಷಿಣ ಆಫ್ರಿಕ, ಆಸ್ಟ್ರೇಲಿಯಾ ಮೊದಲಾದ ನಮ್ಮ ದೇಶದ ಹವಾಗುಣವುಳ್ಳ ರಾಷ್ಟ್ರದವರು ಈ ಕೋಳಿ ಸಾಕುವುದನ್ನು ತಮ್ಮ ಜೀವನೋಪಾಯದ ಒಂದು ವೃತ್ತಿಯನ್ನಾಗಿ ಕೈಕೊಂಡಿರುವರು. ಆದರೆ ಆ ವಿಚಾರದಲ್ಲಿ ನಾವು ಭಾರತೀಯರು, ಅದರಲ್ಲೂ ನಮ್ಮ ಈ ಕೊಡಗು ದೇಶದ ನಿವಾಸಿಗಳು, ಇನ್ನೂ ನಿದ್ರೆಯಲ್ಲೇ ಇರುವೆವು.

ಈ ವೃತ್ತಿಯೂ ಕೊಡಗಿನಲ್ಲಿ ಎಲ್ಲಾದರೂ ಇದ್ದ ಪಕ್ಷದಲ್ಲಿ ಅದು ಇತ್ತೀಚೆಗೆ ಹೊರಗಿನಿಂದ ಬಂದು ನೆಲಸಿದ ಕೆಲವು ಗೋಸ್ವಾಮಿ ವಣಿಕರಲ್ಲಿ ಮಾತ್ರ. ಇವರು ಸಾಕುವ ಈ ಉತ್ತಮ ತಳಿ ಕೋಳಿಗಳನ್ನು ನೋಡಿ, ಕಲವರು ತಾವೂ ಸಹ ಆ ಜಾತಿಯ ಕೋಳಿಗಳನ್ನು ಸಾಕುವ ಅಭಿಲಾಷೆಯಲ್ಲಿ ಈಗೀಗ ಈ ದೇಶದ ಕೆಲವು ಮಹನೀಯರು ತಮ್ಮ ಸಣ್ಣ ಜಾತಿಯ ಕೋಳಿಗಳಿಂದ ಆ ರೀತಿಯ ಉತ್ತಮ ಜಾತಿಯವುಗಳನ್ನು ಪಡೆಯಬಹುದಾದ ಹುಂಜಗಳನ್ನು ತಂದು, ಹಿಡಿಯುವ ಪ್ರಯತ್ನದಲ್ಲಿರುವರು. ಆದರೆ ಈ ಯುವರಾಗೇ, ಸರಕಾರದವರಾಗಲೀ ಈ ಕಸಬನ್ನು ಅಭಿವೃದ್ಧಿಗೊಳಿಸುವ ವಿಚಾರದಲ್ಲಿ ಯಾವುದೊಂದು ತರಹದ ಸಹಾಯ ಮಾಡದಿರುವುದು ವ್ಯಸನಕರವಾಗಿದೆ. ಇಂಥಾ ಕೋಳಿ ಪ್ರದರ್ಶನವು ಅಲ್ಪಸ್ವಲ್ಪ ಪ್ರಯೋಜನಕಾರಿಯಾಗಬಹುದು. ಇದು ಜನರಲ್ಲಿ ತಾವೂ ಸಹ ಆ ಜಾತಿಯ ಉತ್ತಮ ಕೋಳಿಗಳನ್ನು ಸಾಕಿ ಆ ಲಾಭ ಪ್ರಯೋಜನವನ್ನು ಹೊಂದುವ ಕ್ರಮವನ್ನು ವಹಿಸಲು ಉತ್ತೇಜನ ಕೊಡುವುದು. ಆದರೆ ಕೋಳಿಗಳ ಒಂದು ವ್ಯವಸಾಯ ಕ್ಷೇತ್ರ (Poultry farms) ವನ್ನು ಏರ್ಪಡಿಸುವುದು ಬಹು ಅಗತ್ಯ. ಅಲ್ಲಿ ಆಯಾ ಜಾತಿಯ ಕೋಳಿಗಳನ್ನು ಸಾಕುವ ಕ್ರಮ, ಸಣ್ಣ ಜಾತಿಯ ದೇಶೀಯ ಕೋಳಿಗಳನ್ನು ಅಭಿವೃದ್ಧಿಗೊಳಿಸುವ ರೀತಿ, ಆಯಾ ಜಾತಿಯ ಕೋಳಿಗಳಿಗಿರುವ ಮೊಟ್ಟೆ ಇಕ್ಕುವ ಶಕ್ತಿ, ಅದರಿಂದ ಜನಸಾಮಾನ್ಯರಿಗೆ ದೊರೆಯಬಹುದಾದ ಲಾಭ ಇತ್ಯಾದಿ ವಿಚಾರಗಳನ್ನು ನಮ್ಮ ದೇಶಿಯರಲ್ಲಿ ಪ್ರಚುರಪಡಿಸಬೇಕು. ಆದುದರಿಂದ ಇನ್ನಾದರೂ ಈ ದೇಶದ ಅನುಕೂಲತೆ ಇರುವಲ್ಲಿ ವ್ಯವಸಾಯ ಕ್ಷೇತ್ರಗಳನ್ನು ಸ್ಥಾಪಿಸಿ, ಅಲ್ಲಲ್ಲಿ ಪ್ರದರ್ಶನಗಳನ್ನು ಏರ್ಪಡಿಸಿ, ಆ ಮೂಲಕ ಇಲ್ಲಿನ ಪ್ರದೇಶಕ್ಕೆ ಇದರ ಪ್ರಯೋಜನವನ್ನು ಮನಗಾಣಿಸುವಂತೆ ಮಾಡಿ ಆ ಕಸಬಿಗೆ ಉತ್ತೇಜನ ಕೊಡುವ ಕೆಲಸ ಮಾಡಬೇಕಾಗಿ ಎಲ್ಲರಲ್ಲಿಯೂ ಪ್ರಾರ್ಥನೆ.

1919 ನೇಯ ಇಸವಿಯಲ್ಲಿ ಸಂಯುಕ್ತ ಪ್ರಾಂತ್ಯದ ಲಕ್ನೋ ನಗರದಲ್ಲಿ ಆ ಸರಕಾರವು ಸ್ಥಾಪಿಸಿದ ಕೋಳಿಗಳ ವ್ಯವಸಾಯ ಕ್ಷೇತ್ರವು ದೇಶೀಯ ಚಿಕ್ಕ ಜಾತಿಯ ಕೋಳಿಗಳನ್ನೂ ಸಹ ಅವುಗಳ ಗಾತ್ರದಲ್ಲಿಯೂ, ಮೊಟ್ಟೆ ಇಕ್ಕುವ ಶಕ್ತಿಯಲ್ಲಿಯೂ, ಮೊಟ್ಟೆಯ ಗುಣದಲ್ಲಿಯೂ ಉತ್ತಮಗೊಳಿಸಬಹುದೆಂಬ ಸಂಗತಿಯನ್ನು ಸಾರುತ್ತಿರುವುದು. ಅಲ್ಲಿ 1922 ನೇಯ ಇಸವಿಯಲ್ಲಿ ಒಂದು ದೇಶೀಯ ಹೇಟೆಯು ಲೆಗ್ ಹಾರ್ನ್ ಎಂಬ ವಿದೇಶೀಯ ಹುಂಜದ ಸಂಪರ್ಕದಿಂದ 66 ದಿನಗಳಲ್ಲಿ 61 ಮೊಟ್ಟೆಗಳನ್ನು ಇಟ್ಟಿರುವುದು. ಆ ಕಾರಣ, ಆ ವಿಚಾರದಲ್ಲಿ ಅತ್ಯಂತ ಉಪಯುಕ್ತವಾದ ಹುಂಜವೆಂದರೆ ಲೆಗ್ ಹಾರ್ನ್. ಶೀತ ಪ್ರದೇಶಗಳಲ್ಲಿ ರೋಡ್ ಐಲೆಂಡ್ ರೆಡ್, ಲೈಟ್ ಸಸ್ಸೆಕ್ಸ್ ಇಲ್ಲವೇ ಬಫ್ ಆರ್ಪಿಂಗ್ಟನ್ ಈ ಜಾತಿಯ ಹುಂಜಗಳಿಂದ ಉತ್ತಮ ಫಲವನ್ನು ಪಡೆಯಬಹುದು. ಒಟ್ಟಾರೆ ಹೇಳುವುದಾದರೆ ಅನುಕೂಲ ಇರುವವರೆಲ್ಲರೂ ಈ ಕಸಬನ್ನು ಕೈಕೊಂಡು ಅದನ್ನು ಉತ್ತಮ ರೀತಿಯಿಂದ ನಡೆಸಿಕೊಂಡು ಬಂದುದೇ ಆದರೆ, ಒಳ್ಳೆಯ ಫಲವನ್ನು ಪಡೆಯಬಹುದು.

ಇನ್ನು ಅವುಗಳಿಗೆ ಒದಗಬಹುದಾದ ರೋಗಗಳ ವಿಚಾರ. ಇತ್ತೀಚೆಗೆ ಅವುಗಳ ಪರಿಹಾರೋಪಾಯಗಳನ್ನು ಕಂಡು ಹಿಡಿಯುವ ಕ್ರಮವನ್ನು ಅನೇಕರು ವಹಿಸಿರುವರು. ಈ ಗಾರಡೀ ದುಃಶ್ಯೋತ್ಸವ (ವೆಟರ್ನರಿ ಇನ್‌ಸ್ಟಿಟ್ಯೂಟ್) ದ ಶೋಧನಾಲಯದ ... ಅನೇಕ ನಿವಾರಣೋಪಾಯಗಳನ್ನು ಕಂಡುಹಿಡಿದಿರುವರು. ದೇಶೀಯರು ಸ್ಪರ್ಧೆ ಇರಿಸುವವರು ಸಹ ನಾಯಕತ್ವದ ಪರಿಶೋಧನೆ ಸಹಾಯದಿಂದ ಅಂಟುರೋಗ ಬಾಧ್ಯವನ್ನು ಪರಿಹರಿಸುವುದಲ್ಲದೆ ಇನ್ನು ಮುಂದೆ ಯಾವ ತರಹ ಅಂಟುರೋಗವು ಬಾರದಂತೆ ಹುಂಜಗಳನ್ನು ಕಂಡುಹಿಡಿಯುವುದರಲ್ಲಿ ... ನಗರದ ... ಇದೆ ...

ಮೊಟ್ಟೆಯ ವಿಚಾರ ಅವಶ್ಯವಾಗಿ ಎಚ್ಚರವಿಡಬೇಕಾದ ಕೆಲವು ಅಂಶಗಳು

1 ಕೆಲವು ವೇಳೆ ಕೆಲವು ಕೋಳಿಗಳು ವಿಕಾರವಾದ ಮೊಟ್ಟೆಗಳನ್ನಿಡುವುವು. (ಬಾವಟೆ) ಇದಕ್ಕೆ ಅದರಲ್ಲಿರುವ ಅತಿಯಾದ ಕೊಬ್ಬೇ ಕಾರಣ. ಇಂತಹ ಸಂದರ್ಭದಲ್ಲಿ ಮೂರ್ಛೆಗೊಳಗಾಗಿ ಅದು ಅವಸ್ಥೆಯೆಂದು ಭಾವಿಸಿ, ಕೆಲ್ಲುವುದರ ಬದಲು, ಆಹಾರವನ್ನು ಕಡಿಮೆ ಮಾಡಿ ಕೊಡುವುದು ಉತ್ತಮ.

2 ಮೊಟ್ಟೆಯ ಒಳಗೆ 'ಸುಣ್ಣದ ಕೈವಶ ಸಾಲ್ಟ್' ಕಡಿಮೆಯಾದರೆ ಮೆದುವಾಗುವುದು. (ಕೋಮಲ)

3 ಮರಿ ಮಾಡಲು ಅತಿ ಉತ್ತಮವಾದ ಮೊಟ್ಟೆಯು ಆರಕ್ಕೆ ಏಳು ದಿನಗಳೊಳಗಿನ ಮೊಟ್ಟೆಗಳು. ತಾಪ ಕೊಟ್ಟು ಮರಿ ಮಾಡಲು ಬಹು ಪ್ರಯೋಜನಕಾರಿ.

4 ಒಳ್ಳೆ ಮೊಟ್ಟೆಗಳನ್ನು ಬಹು ಕಾಲದವರೆಗೆ ಕಾದಿಡಬಹುದು. ಒಂದು ಅತಿ ದಪ್ಪವಾದ ಪಾತ್ರೆಯ ಅರ್ಧದಷ್ಟು ಸ್ವಲ್ಪ ಉಪ್ಪು ಮಿಶ್ರ ಮಾಡಿದ ನೀರನ್ನು ಹಾಕಿ, ಅದರಲ್ಲಿ ಮೊಟ್ಟೆಗಳನ್ನು ಹಾಕಿದರೆ, ಉತ್ತಮವಾದವುಗಳು ತಳದಲ್ಲಿ ಅಡ್ಡವಾಗಿ ನಿಲ್ಲುವುವು, ಹಾಳಾದವುಗಳು ತೇಲುತ್ತಿರುವುವು.

5, ಕೆಲವು ವೇಳೆ ಉತ್ತಮ ಮರಿಗಳು ಮೊಟ್ಟೆಗಳೊಳಗೆ ಸತ್ತಿರುವುದನ್ನು ಕಾಣಬಹುದು. ಅದಕ್ಕೆ ಬಹು ಮಂದವಾಗಿರುವುದೇ ಕಾರಣ. ಇಂತಹ ಮೊಟ್ಟೆಗಳನ್ನು 19 ನೆಯ 20 ನೆಯ ಮತ್ತು 21 ನೆಯ ದಿನಗಳಲ್ಲಿ ಒಂದೊಂದು ನಿಮಿಷದ ಕಾಲ ಉಗುರು ಬಿಸಿ ನೀರಿನಲ್ಲಿ ಇಡುವುದು ಉತ್ತಮ. ಬಟ್ಟೆಯನ್ನು ಒದ್ದೆಗಿಟ್ಟು, ಅದರಿಂದ ಮೊಟ್ಟೆಯನ್ನು ಒರೆಸುವುದು ಶ್ರೇಷ್ಠವಾದ ಉಪಾಯ.

6, ಸ್ವಾಭಾವಿಕವಾಗಿ ಮೊಟ್ಟೆಯೊಡೆದು ಪ್ರಥಮ ಹೊರಬರುವುದು ಹುಂಜಮರಿಗಳು.

ಮರಿಗಳ ವಿಚಾರ ಎಚ್ಚರವಿಡಬೇಕಾದ ವಿಷಯ.

1, ಮೊಟ್ಟೆಯೊಡೆದ ಅನಂತರ 24 ಇಲ್ಲವೇ 36 ಘಂಟೆಗಳ ಕಾಲ ಮರಿಗಳಿಗೆ ಯಾವ ಆಹಾರವನ್ನೂ ಕೊಡುವ ಅವಶ್ಯಕತೆಯಿಲ್ಲ. ಕೊಡಲೂ ಬಾರದು.

2 ಮರಿಗಳಿಗೆ 6 ವಾರಗಳ ವರೆಗೆ ಸಾಧ್ಯವಾದರೆ ಕಸಕೆಗೆದ ಹಾಲನ್ನ, ಇಲ್ಲವೇ ಮಜ್ಜಿಗೆಯನ್ನು ಕುಡಿಯಲಿಕ್ಕೆ ಕೊಡುವುದು.

3, ಮರಿಗಳು ಆಗಾಗ್ಗೆ ಬಾಯಿ ಬಿಡುತ್ತಿದ್ದರೆ ಒಂದು ಗರಿಯನ್ನು ಟರ್ಪೆಂಟೈನ್‌ನೊಳಗೆ ಅದ್ದಿ, ಅದನ್ನು ಶ್ವಾಸನಾಳಕ್ಕೆ ಹಾಕಿ, ಉಜ್ಜಿ ತೆಗೆದರೆ, ಕ್ರಿಮಿಗಳು ನಾಶಹೊಂದಿ, ಬಾಯಿ ಬಿಡುವುದನ್ನು ಬಿಡುವುವು (gapes)

4 ಲಿಂಗಭೇದವನ್ನು ಗುರುತಿಸುವ ಸಮಯ ಒಂದೊಂದನೆ ಹುಂಜ ಹೇಟೆಗಳನ್ನು ಬೇರ್ಪಡಿಸಬೇಕು. ಹುಂಜಗಳ ಬೀಜ ತೆಗೆಯುವುದು ಒಳ್ಳೆಯದು. ಹಾಗೆ ತೆಗೆದವುಗಳು ಭಾರದಲ್ಲಿ ಶೇಕಡ 50 ರಿಂದ 70 ರಷ್ಟು ಹೆಚ್ಚಿರುವುವು.

ಬಾತು ಮರಿಗಳು.

1, ಮೊಟ್ಟೆಯೊಡೆದು 36 ಇಲ್ಲವೇ 48 ಘಂಟೆಗಳ ವರೆಗೆ ಯಾವ ಆಹಾರವನ್ನೂ ಕೊಡಕೂಡದು,

2 ಅನಂತರ ಒಂದೆರಡು ದಿನ ಬ್ರೆಡ್ಡಿನ ಒಳಭಾಗದ ಮೃದು ಪದಾರ್ಥವನ್ನು ಹಾಲಿನಲ್ಲಿ ಅದ್ದಿ ಕೊಡಬೇಕು.

3, ಅಲ್ಲಿಂದ ಬ್ರೆಡ್ಡು, ಹಾಲಿನೊಡನೆ ಗೋಧಿ ಹೊಟ್ಟು ಮತ್ತು ಸ್ವಲ್ಪ ಮೀನು ಮಿಶ್ರವಾದ ಅಕ್ಕಿ ಹುಡಿಯನ್ನು ಕೊಡಬಹುದು. ದಿನ ದಿನಕ್ಕೆ ಕ್ರಮವಾಗಿ ಬ್ರೆಡ್ಡು ಹಾಲನ್ನು ಕಡಿಮೆ ಮಾಡುತ್ತಿದ್ದು 10 ದಿನಗಳ ನಂತರ ಅದನ್ನು ನಿಲ್ಲಿಸಿ ಗೋಧಿ ಹೊಟ್ಟು ಮತ್ತು ಅಕ್ಕಿ ಹುಡಿಯನ್ನು ಮಾತ್ರ ನೀರಿನಲ್ಲಿ ಮಿಶ್ರಮಾಡಿ ಕೊಡಬಹುದು,

ನಾಪೋಕ್ಲು ಶಾಲೆಯ ಮಣಿಮಹೋತ್ಸವ.

(ನಮ್ಮ ವಾರ್ತಾದಾರನಿಂದ)

(ನಾಪೋಕ್ಲು ವೆಂಡರ್ ಶಾಲೆ)

ತಾ 15 ರಲ್ಲು ನಾಪೋಕ್ಲು ಶಾಲೆಯ ಮಣಿಮಹೋತ್ಸವವು ಕೊಡಗು ಶಾಲೆಗಳ ಶ್ರೀ, ಶ್ರೀ, ರಾವ ಮೆ. ಪಿ ಯುಸ್, ಕುಂತಾಲಪ್ಪ ಬಿ, ಎ, ಟಿ, ಇ. (ಲಂಡನ್) ಇವರ ಅಧ್ಯಕ್ಷತೆಯಲ್ಲಿ ವಿಜೃಂಭಣೆಯಿಂದ ನಡೆಯಿತು,

ಕಾರ್ಯಕ್ರಮದಂತೆ ಬೆಳಿಗ್ಗೆ 9 ಘಂಟೆಗೆ ಬಾಲಕರಿಗೂ ಪಬ್ಲಿಕ್‌ನವರಿಗೆ ಆಟ ಓಟಗಳ ಸ್ಪರ್ಧೆಗಳು ನಡೆದವು. ಶಾಲಾ ಮೈದಾನವು ಜನರಿಂದ ತುಂಬಿತ್ತು. ಒಂದು ಘಂಟೆಯ ವರೆಗೂ ಸ್ಪರ್ಧೆಗಳು ನಡೆದವು. ಚಿಕ್ಕ ಮತ್ತು ದೊಡ್ಡ ಬಾಲಕ ಬಾಲಕಿಯರಿಗೆ ಓಟಗಳು ಮಾತ್ರವಿದ್ದುದಲ್ಲದೆ ಮಹನೀಯರಿಗೂ ಮುದುಕರಿಗೂ ಓಟಗಳು ಇದ್ದವು. ಒಂದು ಮೈಲು ಓಟದಲ್ಲಿ ಮೆ, ಯಂ, ಸಿ, ಸೋಮಯ್ಯನವರು ಚೆನ್ನಾಗಿ ಓಡಿ ಮುಂದೆ ಬಂದರು,

ಒಂದು ಗಂಟೆಗೆ ಚಪ್ಪರದಲ್ಲಿ ಶ್ರೀ ಶಾರದಾಪೂಜೆಯು ಬಾಲಕಿಯರ ಪ್ರಾರ್ಥನೆಯೊಂದಿಗೆ ಪ್ರಾರಂಭವಾಯಿತು. ಪ್ರಸಾದವಿನಿಯೋಗವನ್ನು ಶಾಲೆಯಲ್ಲಿ ಏರ್ಪಡಿಸಿದ್ದರು, ಬ್ರಾಹ್ಮಣರಿಗೆ ಊರು ದೇವಸ್ಥಾನದಲ್ಲೂ ಮಹಮ್ಮದೀಯರಿಗೆ ಪೇಟೆಯಲ್ಲೂ ಬೇರೆ ಬೇರೆಯಾಗಿ ಏರ್ಪಡಿಸಿದ್ದರು. ಊಟಕ್ಕೆ ಮೂರು ಪಂಕ್ತಿಗಳಲ್ಲಿ ಒಟ್ಟು ಎರಡು ಸಾವಿರ ಜನರಿಗಿಂತ ಹೆಚ್ಚಿದ್ದರು.

ಮೂರು ಘಂಟೆಗೆ ಕೆಂಗಸರಾಯರಿಗೆ ಗದ್ದೆ ಉಳುವ ಸ್ಪರ್ಧೆಯನ್ನು ಪ್ರಾರಂಭಿಸಿದರು. ನಾಲ್ಕು ಘಂಟೆಗೆ ಅಧ್ಯಕ್ಷರನ್ನು ಓಂಕಾರದಿಂದ ಮೆರವಣಿಗೆಯಲ್ಲಿ ಶಾಲಾ ಮೈದಾನದಲ್ಲಿ ಹಾಕಿದ್ದ ಚಪ್ಪರಕ್ಕೆ ಕರಕೊಂಡು ಬಂದರು. ಜನರು ತುಂಬಾ ನೆರೆದಿದ್ದರು. ಶಾಲೆಯ ಹೆಡ್ ಮಾಸ್ಟರರು ಆರ್ಥಿಕವನ್ನು ಸಭೆಗೆ ಪರಿಚಯವನ್ನು ಮಾಡುತ್ತಾ, ಬೇರೆ ಬೇರೆ ಭಾಗಗಳಲ್ಲಿ ಎಂದರೆ ರೆವಿನ್ಯೂ ಸಂಘದಲ್ಲಿ, ಸಾರ್ವಜನಿಕ ಸೇವೆಯಲ್ಲಿ ಮೊದಲಾದ ಸಂಸ್ಥೆಗಳಲ್ಲಿ ಕೆಲಸ ಮಾಡಿ ಶಾಲೆಗೆ ದಕ್ಷಿಣ ಕ್ರಮವನ್ನು ಹೇಗೆ ಜನರ ಹಿತಕ್ಕಾಗಿ ಕಟ್ಟುತ್ತಿರುವ ಎಂಬುದನ್ನು ಒತ್ತಿ ಹೇಳಿದರು.

ಅಧ್ಯಕ್ಷರು ತಮ್ಮ ಸ್ಥಾನವನ್ನು ಸ್ವೀಕರಿಸಿದ ನಂತರ ... ...

... ...

ದಲ್ಲಿ ಇದರ ಜ್ಞಾಪಕಾರ್ಥವಾಗಿ ಈ ಮಣಿಮಹೋತ್ಸವವನ್ನು (Diamond Jubilee) ಆಚರಿಸುತ್ತಿರುವೆವೆಂದೂ ಇದರ ಜ್ಞಾಪಕಾರ್ಥವಾಗಿ ಶಾಲೆಯಲ್ಲಿ ಬಡ ಹುಡುಗರ ನಿಧಿ, ಸ್ಕೌಟ್ಸ್ ಟೀಮು ಕೋಳಿ ಸಾಕುವಿಕೆ ಮೊದಲಾದ ಸಂಸ್ಥೆಗಳನ್ನು ಸ್ಥಾಪಿಸಿರುವೆವೆಂದೂ ಹೇಳಿ ಶಾಲೆಯ ವಿಧವಿಧ ಚಟುವಟಿಕೆಗಳನ್ನು ವಿವರಿಸಿದರು. ಬಾಲಕರ ಕೊಟಡ ಕಾರ್ಯದರ್ಶಿಯು ತಂಪಾದ ವರದಿಯನ್ನು ಸಭೆಯ ಮುಂದಿಟ್ಟನು. ಅನಂತರ ಅಧ್ಯಕ್ಷರು ಶಾಲೆಯ ತರಗತಿಗಳಲ್ಲೂ, ಆಟಗಳಲ್ಲೂ ಮುಂದೆ ಬಂದವರಿಗೆ ಬಹುಮಾನಗಳನ್ನು ಹಂಚಿದರು,

ಆ ಮೇಲೆ ಶಾಲೆಯ ಹಳೇ ವಿದ್ಯಾರ್ಥಿಯೂ 'ಉದಯ' ಪತ್ರಿಕೆ ಸಂಪಾದಕರೂ ಆದ ಮೆ ಬಿ ಯಂ, ತಿಮ್ಮಯ್ಯನವರು ಶಾಲೆಯ 'ಹಿಸ್ಟರಿ'ಯನ್ನು ಹೇಳಿದರು. ಇನ್ನೊಬ್ಬ ಹಳೇ ವಿದ್ಯಾರ್ಥಿಯಾದ ಮೆ, ಕೆ ಅಚ್ಚಪ್ಪನವರು ಮಾತನಾಡಿದರು,

ಇವರ ಭಾಷಣಗಳಾದ ನಂತರ ಬೇರೆ ಕಡೆಗಳಿಂದ ಬಂದ ಅಭಿನಂದನಾ ಪತ್ರಗಳಲ್ಲಿ ಕೆಲವನ್ನು ಸಭೆಯ ಮುಂದೆ ಶಾಲಾ ಹೆಡ್ ಮಾಸ್ಟರರು ಓದಿ ಹೇಳಿದರು. ಅಪ್ಪನೆರವಂಡ ಕುರದಾಸ ಅಪ್ಪಚ್ಚು ಕವಿಗಳು ಮುದ್ದು ಬಾಲಕರಿಗೆ ಇನಾಂ ಹಂಚಲು ತನ್ನ 25 ಪುಸ್ತಕಗಳನ್ನು ಕಳುಹಿಸಿರುವರೆಂದೂ ಓದಿ ಹೇಳಿದರು,

ನಾಪೋಕ್ಲು ಗವರ್ನ್‌ಮೆಂಟ್ ಮೋಡೆಲ್ ಶಾಲೆಯ ಮಣಿಮಹೋತ್ಸವದ ಜ್ಞಾಪಕಾರ್ಥವಾಗಿ ಶಾಲೆಯವರು ತಯಾರಿಸಿದ ಶಾಲೆಯ ಅಥವಾ ವಿಶೇಷ ಸಂಚಿಕೆಯೊಂದು ಪುಸ್ತಕವನ್ನು ಅಧ್ಯಕ್ಷರಿಗೆ ಹೆಡ್ ಮಾಸ್ಟರರು ಒಪ್ಪಿಸಿದರು. ಅನಂತರ ಅಧ್ಯಕ್ಷರು ತಮ್ಮ ಭಾಷಣವನ್ನು ಮಾಡುತ್ತಾ, ಶಾಲೆಗೂ ಗ್ರಾಮದವರಿಗೂ ಇರುವ ಸಂಬಂಧವನ್ನು ಇನ್ನೂ ಇತರ ಗ್ರಾಮೋದ್ಧಾರದ ವಿಷಯಗಳನ್ನು ವಿವರವಾಗಿ ತಿಳಿಸಿ ಬೋಧಿಸಿದರು. ವಂದನೆಗಳೊಡನೆ ಸಭೆ ಮುಗಿಯಿತು.

ಸಂಜೆ ಆರೂವರೆ ಗಂಟೆಗೆ ಶಾಲೆಯ ಹಾಲಿನಲ್ಲಿ ಇಂಗ್ಲಿಷ್ ಮತ್ತು ಕನ್ನಡ ನಾಟಕಗಳು ಅಭಿನಯಿಸಲ್ಪಟ್ಟವು. '... ... ನಾಟಕವನ್ನು ಶಾಲೆಯ ಬಾಲಕಿಯರೇ ಅಭಿನಯಿಸಿ ... ... ಘಂಟೆ ... ...

Reg. No. M. 1550 21—2—1936

KODAGU

IF NOT delivered please return to "KODAGU" OFFICE, MERCARA.

ಕೊಡಗು

ಅಚ್ಚುಮೆಚ್ಚು ಮುದ್ರಣ ಕೆಲಸಕ್ಕೆ "ಕೊಡಗು" ಪ್ರೆಸ್ಸು ಮಡಿಕೇರಿ.
—
ಹೆಚ್ಚಿನ ವಿಷಯಕ್ಕೆ ಕೂಡಲೆ ವಿಚಾರಿಸಿ.

[illegible]

ಪ್ರತಿ ಶುಕ್ರವಾರ ಪ್ರಕಟಿಸಲ್ಪಡುವದು.

ವಾರ್ಷಿಕ ಚಂದಾ ರೂ. ೩—೮—೦. ಸಂಪಾದಕ—ಸಂದ್ಯಂಡ ಬಿ. ಬೆಳ್ಯಪ್ಪ.

ಸಂಪುಟ ೧೫] ಮಡಿಕೇರಿ, ಸನ್ ೧೯೩೬ನೇ ಇಸವಿ ಫೆಬ್ರವರಿ ತಾರೀಕು ೨೧ ನೇ ಶುಕ್ರವಾರ. [ಸಂಚಿಕೆ ೩೩

Telephon: 3145

By Appointment
To H. E. The Governor of Madras.

Telegrams: 'PRECIOUS.'



V. SUBRAMANIA IYER.

Jeweller, & Diamond Merchant,

52–13 2 & 3 Kuppumuthu Street Tiruvateswaranpet. POST BOX 423 TRIPLICANE P. O., MADRAS.

Catalogue & special designs with quotations (free) on enquiry

೧೯೦೬ರಲ್ಲಿ ಸ್ಥಾಪಿತವಾದದ್ದು.

ದಿ ಕೆನರಾ ಬ್ಯಾಂಕಿಂಗ್ ಕೊರ್ಪರೇಷನ್ ಉಡುಪಿ—ಲಿಮಿಟೆಡ್.

(ಬ್ರಿಟಿಷ್ ಇಂಡಿಯದಲ್ಲಿ ರಿಜಿಸ್ಟರ್ ಆದದ್ದು.)

ಹೆಡ್ ಆಫೀಸು—ಉಡುಪಿ

ಶಾಖೆಗಳು.

(1) ಉಡುಪಿ
(2) ಕುಂದಾಪುರ
(3) ಮಂಗಳೂರು—ರಥಬೀದಿ
(4) ಮಂಗಳೂರು—ಬಂದರ್
(5) ಮದರಾಸು
(6) ಶಿವಮೊಗ್ಗ
(7) ಮಡಿಕೇರಿ
(8) ವೀರರಾಜೇಂದ್ರಪೇಟೆ

ಬ್ಯಾಂಕರರು.

(1) ಬೊಂಬಾಯಿ
(2) ಕಲ್ಕತ್ತಾ
(3) ಕರಾಚಿ
4) ಕೊಚ್ಚಿನ್
) ಮೈಸೂರು
) ಬೆಂಗಳೂರು ಇಂಪೀರಿಯಲ್ ಬ್ಯಾಂಕುಗಳಲ್ಲಿ

ನಿಮ್ಮ ಸೇವೆಯೇ ನಮ್ಮ ಧ್ಯೇಯ.

ತಾ. 15–1–1936ರಿಂದ ಚಿನ್ನಾಭರಣಗಳ ಮೇಲಣ ಸಾಲಗಳ ಬಡ್ಡಿಯ ದರವನ್ನು ಅತೀ ಕಡಿಮೆ ದರಕ್ಕೆ ಇಳಿಸಲಾಗಿದೆ.

ನಿರಖು ಠೇವಣಾತಿಗಳನ್ನು ಶೇಕಡ 5ರ ವರೆಗಿನ ಬಡ್ಡಿಯಲ್ಲಿ ಈಗ ಸ್ವೀಕರಿಸಲಾಗುತ್ತದೆ.

ಚಾಲ್ತಿ, ಸೇವಿಂಗ್ಸ್ ಬ್ಯಾಂಕ್, ಕ್ಯುಮಿಲೇಟಿವ್ ಠೇವಣಾತಿಗಳನ್ನು ಅತೀ ಲಾಭದಾಯಕವಾದ ಬಡ್ಡಿಯಲ್ಲಿ ತೆರೆಯಲಾಗುತ್ತವೆ;

ಅಲ್ಲದೆ

ಎಲ್ಲಾ ತರದ ಬ್ಯಾಂಕಿಂಗ್ ವಹಿವಾಟುಗಳು ನಡಿಸಲ್ಪಡುತ್ತವೆ.

ಹೆಚ್ಚಿನ ಮಾಹಿತಿ ನಮ್ಮ ಯಾವುದೇ ಆಫೀಸಿನಿಂದ ಪಡೆಯಬಹುದು.

52—14

ಜನರಲ್

ಅಷ್ಯೂರೆನ್ಸ್ ಸೊಸೈಟಿ, ಲಿಮಿಟೆಡ್.

(ಸ್ಥಾಪಿತವಾದದ್ದು 1907 ರಲ್ಲಿ)

ಜೀವವಿಮೆಯಲ್ಲಿನ ಅತ್ಯುತ್ತಮ ಸೌಲಭ್ಯಗಳನ್ನೆಲ್ಲ ಕೊಡುತ್ತದೆ.

ಬೋನಸ್ಸು ಅತೀ ಹೆಚ್ಚು.

ಜೀವಾವಧಿ ಪಾಲಿಸಿಗಳ ಮೇಲೆ ವರ್ಷಕ್ಕೆ ರೂ. 25%o
ಎಂಡೋವ್ಮೆಂಟ್ ಪಾಲಿಸಿಗಳ ಮೇಲೆ ವರ್ಷಕ್ಕೆ " 20%o
ಪಾಲಿಸಿಯ ಶರತ್ತುಗಳು ಅತೀ ಸುಲಭ
ಎಷ್ಯೂರೆನ್ಸ್ ಯೋಜನೆಗಳು ಎಲ್ಲರಿಗೂ ಹಿತಕರವಾಗಿದೆ.
ಏಜೆನ್ಸಿ ನಿಯಮಗಳು ಅತೀ ಲಾಭದಾಯಕವಿದ್ದು ಸಂಕವಾರಂಪರ್ಯ ಕಮಿಶನ್ ದೊರೆಯುವಂತಿದೆ.
ಹೆಚ್ಚಿನ ವಿವರಗಳಿಗೆ ಕೂಡಲೇ ಬರೆಯಿರಿ.

ಟಿ. ಡಿ. ಭಾಗರ್ವ, ಎಫ್. ಎಸ್. ಎಸ್. (ಲಂಡನ್).
ಜನರಲ್ ಮೇನೇಜರ್. ದಿ ಜನರಲ್ ಅಷ್ಯೂರೆನ್ಸ್ ಸೊಸೈಟಿ ಲಿಮಿಟೆಡ್, ಅಜ್ಮೀರ್. ಅಥವಾ:—

ಎ. ಎಸ್ ಎಸ್ ಅಯ್ಯಂಗಾರ್,

ಸುಪರಿಂಟೆಂಡೆಂಟ್, ಜನರಲ್ ಅಷ್ಯೂರೆನ್ಸ್ ಬಿಲ್ಡಿಂಗ್
ಚಾಮರಾಜಪೇಟೆ, 3ನೇ ರೋಡು,
52—37 ಬೆಂಗಳೂರು

ಪ್ರಕಟಣೆ.

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್, ಲಿಮಿಟೆಡ್, ಕೋ-ಆಪರೇಟಿವ್ ಸೊಸೈಟೀಸ್ ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ.

(ಸ್ಥಾಪಿತವಾದದ್ದು 192 ರಲ್ಲಿ)

	ರೂ.
ಶೇರ್ ಬಂಡವಾಳ	— 50,000— 0—0
ವಸೂಲಾದ ಶೇರ್ ಮೊಬಲಗು	— 36,977— 0—0
ಒಟ್ಟು ಠೇವಣಾತಿ	— 2,58,909—6—10
ವಸೂಲಾದ ಕ್ಷೇಮನಿಧಿ	— 1,03,541— 4—0

ಈ ಬ್ಯಾಂಕಿನಿಂದ ಕೊಡಗು ದೇಶದ ಸಹಕಾರಿ ಸಂಘಗಳಿಗೆ ಸಾಲ ಕೊಡಲ್ಪಡುತ್ತದೆ.

ಒಂದು ವರ್ಷ ವಾಯಿದೆ ಅಥವ ಹೆಚ್ಚಿನ ವಾಯಿದೆಯ ಠೇವಣಾತಿಗಳಿಗೆ ಶೇಕಡ ವಾರ್ಷಿಕ ರೂ. 4-8-0ರ ದರದಲ್ಲಿಯೂ ಒಂದು ವರ್ಷದ ಠೇವಣಾತಿಗಳಿಗೆ ಶೇಕಡ ವಾರ್ಷಿಕ 4ರ ದರದಲ್ಲಿಯೂ ಬಡ್ಡಿ ದೊರೆಯುತ್ತೆ.

ವರ್ತಕ್ಕೊಂದಾವರ್ತಿ ಕೋಆಪರೇಟಿವ್ ರಿಜಿಸ್ಟ್ರಾರವರು ಲೆಕ್ಕ ಪರಿಶೋಧನೆ ಮಾಡುತ್ತಾರೆ

ಪ್ರೆಸಿಡೆಂಟರು,	ಟ್ರೆಷರರ್
ಪಂದ್ಯಂಡ ಬಿ. ಬೆಳ್ಳಿಯಪ್ಪನವರು.	ರಾ. ಸಾ. ಪಾಂಡಂಡ ಚಂಗಪ್ಪನವರು.

ಸೆಕ್ರೆಟರಿ

ಮಣವಟ್ಟೀರ ಬೆಳ್ಯಪ್ಪನವರು.

ಮಡಿಕೇರಿ 1—11—1935

ಶಿಕಾರಿಗೆ ಬೇಕಾಗುವ ನಾನಾ ವಿಧದ

ಕೋವಿ, ರೈಫಲು, ರಿವಾಲ್ವರು, ತೋಟಾಗಳು, ಬೇಟೆಯಾಡಲು ಮತ್ತು ಮೀನು ಹಿಡಿಯಲು ಆವಶ್ಯಕವಾದ ಎಲ್ಲಾ ಸಲಕರಣಗಳ ವಿಶೇಷ ಅನುಭವವುಳ್ಳವರು.



ಕೆಟಲಾಗು ಉಚಿತ.] [CURRENT CATALOGUE FREE.

The Bombay Armoury,
329–331, Abdul Rehman Street,
BOMBAY, 3.

26–36

ಪಂಡಿತ ಜವಾಹೀರಲಾಲ್ ನೆಹರೂ ಬಂದಾಗ್ಗೆ ಹುಬ್ಬಳ್ಳಿ ಪ್ರದರ್ಶನದಲ್ಲಿ ಸುವರ್ಣ ಪದಕವನ್ನು ಪಡೆದ,

ಒಂದೇ ಸಮನಾಗಿ ಮೂವತ್ತೈದು ವರ್ಷದ ಅನುಭವದಿಂದ ಹಿಂದುಸ್ಥಾನದ ಸಾವಿರಾರು ಜನರಿಂದ ವರ್ಣಿಸಲ್ಪಟ್ಟ ಆಯುರ್ವೇದೋಕ್ತ ತಾಜಾ ಮತ್ತು ವಾಶಿಕ ವನಸ್ಪತಿಗಳಿಂದ ತಯಾರಿಸಿರುವ ಮತ್ತು ಇದರ ಗುಣಕ್ಕಾಗಿ ಅನೇಕ ಸರ್ಟಿಫಿಕೇಟುಗಳು ಮತ್ತು ಬಂಗಾರದ ಮೆಡಲುಗಳನ್ನು ಪಡೆದು ಸಂದೇಹವಿಲ್ಲದೆ ಧಾರಾಳವಾಗಿ ಖರ್ಚಾಗುವ

ಶಕ್ತಿವರ್ಧಕ ಉತ್ತಮ ತರಗತಿಯ ಟಾನಿಕ್

ದ್ರಾಕ್ಷಾಮೃತ

ಶುದ್ಧ ವನಸ್ಪತಿ ರಸಾಯನಗಳಿಂದ ಶಾಸ್ತ್ರೋಕ್ತವಾಗಿ ಸ್ವದೇಶೀ ಯಂತ್ರೋಪಕರಣದಿಂದ ತಯಾರಿಸಿದ ಮಧುರ ದ್ರಾಕ್ಷಾಮೃತ ಇದರ ಸೇವನೆಯಿಂದ ಉಷ್ಣ (ಗರಮಿ), ಧಾತುನಾಶ, ಸ್ವಪ್ನದೋಷ, ಕೈಕಾಲು, ಕಣ್ಣೊಳಗೆ ಉರಿ, ಮಲಬದ್ಧತೆ ಮುಂತಾದವು ಗುಣವಾಗುವದಲ್ಲದೆ ಜೀರ್ಣಶಕ್ತಿಯು ಹೆಚ್ಚಿ ದೇಹದಾರ್ಢ್ಯವುಂಟಾಗುವುದು. ಇದರಿಂದ ನಪುಂಸಕತ್ವವಿದ್ದಲ್ಲಿ ಅದು ಹೋಗಿ ವೀರ್ಯ ವೃದ್ಧಿಯಾಗುವದು. ಹೆಂಗಸರಿಗೂ ಗಂಡಸರಿಗೂ ಇದು ಗುಣಕಾರಿ ಇದೆ. ಮುಟ್ಟಿನ ಗರ್ಭದ ಮತ್ತು ಉಷ್ಣ (ಗರಮಿ) ರೋಗಗಳಿದ್ದರೆ ಅವೆಲ್ಲವೂ ಗುಣವಾಗಿ ಹೆಂಗಸರಿಗೆ ಸಂತತಿ ವೃದ್ಧಿಯಾಗುವದು. ಈ ಔಷಧದ 3 ಬಾಟ್ಲಿಗಳ ಸೇವನೆಯಿಂದ ಪೂರ್ಣ ಗುಣ ಆಗುತ್ತದೆ. 1 ಬಾಟ್ಲಿಯನ್ನು ಸೇವಿಸುವದರಲ್ಲೇ ಇದರ ಗುಣ ಕಂಡು ಬರುವದು. ಪ್ರಮಾಣ:—ಬೆಳಗಿನಲ್ಲಿ ಒಂದು ತೊಲೆ ಮತ್ತು ಸಂಜೆಗೆ ಒಂದು ತೊಲೆ ತಕ್ಕೊಳ್ಳಬೇಕು.

ಬೆಲೆ—1 ಬಾಟ್ಲಿಗೆ ರೂ. 1—4—0, 3 ಬಾಟ್ಲಿಗೆ ರೂ. 3—8—0, 1 ಡಜನ್ ಬಾಟ್ಲಿಗಳಿಗೆ ರೂ. 12—0—0;

ಮ್ಯಾನೇಜರ್:—ದ್ರಾಕ್ಷಾಮೃತ ಡಿಪೊ ಪೋಸ್ಟ್ ನಿಪ್ಪಾಣಿ ಜಿಲ್ಲಾ (ಬೆಳಗಾವ್)

52—23

ಕೊಡಗಿನ ಏಜಂಟರು:—ನಾವೆಲ್ಲಿ ಸ್ಟೋರ್ಸ್, ಮಡಿಕೇರಿ
ಪುಟ್ಟಯ್ಯ ಶೆಟ್ಟಿ & ಸನ್ಸ್, ಸೋಮವಾರಪೇಟೆ
ಎ. ಎನ್. ಮುತ್ತಯ್ಯ, ಮರ್ಚಂಟ್, ಗೋಣಿಕೊಪ್ಪಲು.

ಭಗವಾನ್ ಪ್ರೆಸ್, ಶಹಾಪುರ ಬೆಳಗಾವು]

ಓರಿಯಂಟಲ್ ಗವರ್ನಮೆಂಟ್ ಸೆಕ್ಯೂರಿಟಿ ಜೀವ ವಿಮೆ ಕಂಪೆನಿ ಲಿಮಿಟೆಡ್.

(1874ರಲ್ಲಿ ಇಂಡಿಯಾದಲ್ಲಿ ಸ್ಥಾಪಿತವಾದದ್ದು) (ಹೆಡ್ ಆಫೀಸು—ಬೊಂಬಾಯಿ.

1934ನೇ ಇಸವಿಯ ಕಂಪೆನಿಯ ಕೆಲಸದ ಫಲಿತಾಂಶ—

ಹೊಸ ಪಾಲಿಸಿಗಳ ಪ್ರಿಮಿಯಂ	ರೂ.	7,62,42,761
ವಾರ್ಷಿಕ ಉತ್ಪತ್ತಿ	ರೂ.	3,14,01,970
ಚಾಲ್ತಿಯಲ್ಲಿರುವ ಒಟ್ಟು ಪಾಲಿಸಿಗಳು	ರೂ.	54,20,38,518
ಕ್ಲೇಯಿಮ್ಸ್‌ಗಳಿಗೆ ಕೊಟ್ಟ ಒಟ್ಟು ಹಣ	ರೂ.	16,29,88,814
ಫಂಡ್ಸ್ ಹೆಚ್ಚಿದ್ದು	ರೂ.	15,53,88,843

ಈ ಮೇಲಿನ ಫಲಿತಾಂಶಗಳು 'ಓರಿಯಂಟಲ್' ಕಂಪೆನಿಯ ಸುಸಂಘಟನೆಯನ್ನೂ ಮತ್ತು ಪ್ರಸಿದ್ಧಿಯನ್ನೂ ವಿಶದಗೊಳಿಸುತ್ತವೆ.

ಈ ಪ್ರಸಿದ್ಧಿಗೊಂಡಿರುವ ಮತ್ತು ಅಭಿವೃದ್ಧಿಯಲ್ಲಿರುವ ಇಂಡಿಯನ್ ಜೀವ ವಿಮಾ ಕಂಪೆನಿಯಲ್ಲಿ ವಿಮೆ ಇಳಿಸಲು ತಾವೆಲ್ಲರೂ ಮರೆಯಬೇಡಿ.

ಹೆಚ್ಚಿನ ಮಾಹಿತಿಗೆ ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳತಕ್ಕದ್ದು:—

ಮೇನೇಜರ್, ಓರಿಯಂಟಲ್ ಬಿಲ್ಡಿಂಗ್ಸ್, ಬೊಂಬಾಯಿ.

ಅಥವಾ ಕಂಪೆನಿಯ ಈ ಕೆಳಗಿನ ಯಾವ ಆಫೀಸಿಗಾದರೂ ಬರೆಯಬಹುದು.

ಆಗ್ರಾ	ಕಲ್ಲಿಕೋಟೆ	ಕರಾಚಿ	ಮೊಂಬಾಸ	ರಂಗೂನು
ಅಹ್ಮದಾಬಾದು	ಕಲ್ಕತ್ತಾ	ಕೌಲಾಲಂಪೂರು	ನಾಗಪೂರು	ರಾವಲ್‌ಪಿಂಡಿ
ಅಜ್ಮೀರ್	ಕೊಲಂಬೊ,	ಲಾಹೋರ್	ಪಾಟ್ನ	ಸಿಂಗಪೂರು
ಅಲಹಾಬಾದು	ಢಾಕ್ಕಾ	ಲಕ್ನೋ	ಪೂನ	ಸುಕ್ಕೂರು
ಅಂಬಾಲಾ	ಡೆಲ್ಲಿ	ಮದ್ರಾಸು	ರಾಯಪೂರ	ತಿರುಚಿನಾಪಳ್ಳಿ
ಬಳ್ಳಾರಿ	ಗೌಹಾತಿ	ಮಂಡಲೆ	ರಾಜಶಾಹಿ	ತಿರುವೆಂದ್ರಮ್
ಬರೇಲಿ	ಜಲಗಾಂ	ಮಡಿಕೇರಿ	ರಾಂಚಿ	ವಿಶಾಖಪಟ್ಣ
ಕೊಯಂಬತ್ತೂರು	ಗುಂಟೂರು	ಬೆಲ್‌ಗಾಂ	ಜಬ್ಬಲ್‌ಪುರ	ಮಧುರೆ & ಮೈಸೂರು

ಓರಿಯಂಟಲ್ ಬಿಲ್ಡಿಂಗ್ಸ್, ಡಾಂಟ್ ಪೇಟೆ, ಬೆಂಗಳೂರು, }

52—5

ಯಂ. ವಿ. ವೆಂಕಟ್ರಕೃಷ್ಣ ನಾಯುಡು,
(ಬ್ರಾಂಚ್ ಸೆಕ್ರೆಟರಿ)

ಭಾರತದ ಮುಂದಿನ ಜನಾಂಗದ ಆರೋಗ್ಯ ಮತ್ತು ಕ್ಷೇಮ ವರ್ಧನೆಯು ಇಂದಿನ ಅನೇಕ ರಾಜಕೀಯ ಮತ್ತು ಸಾಮಾಜಿಕ ಮುಂದಾಳುಗಳ ದೃಷ್ಟಿಯಲ್ಲಿರುವ ಒಂದು ದೊಡ್ಡ ಸಮಸ್ಯೆಯಾಗಿರುತ್ತದೆ. ತಮ್ಮ ಮಕ್ಕಳ ದೇಹವು ಪುಷ್ಟಿಯಾಗಿಯೂ ಸುದೃಢವಾಗಿಯೂ ಇರಲಿಕ್ಕೆ ದೇಶದ ಒಂದು ಅಪೂರ್ವವಾದ ಸಂಜೀವಿನಿಯನ್ನು ಎಲ್ಲರೂ ತಿಳಿದದ್ದಾಗಿದ್ದರೆ ಈ ವಿಚಾರವು ಇಷ್ಟು ಕಠಿಣವಾಗಿರುತ್ತಿದ್ದಿಲ್ಲ. ಈ ಸಂಜೀವಿನಿಯಂತಿರುವ ಔಷಧವನ್ನು ಹೆಚ್ಚು ಸಫಲತೆಯಿಂದ ಅನೇಕರು ಭಾರತದ ಉದ್ದಗಲಕ್ಕೂ ಕಳೆದ 50 ವರ್ಷಗಳಿಂದ ಉಪಯೋಗಿಸುತ್ತಿರುವರು. ಮಗುವು ಹೆಚ್ಚು ಕ್ಷೀಣವಾಗಿ, ದುರ್ಬಲತೆಯಿಂದ ಕೂಡಿ ಹಾಲನ್ನು ಸಹ ಜೀರ್ಣಿಸಿಕೊಳ್ಳಲಶಕ್ಯವಾಗಿ, ಆಗಿಂದಾಗ್ಗೆ ಶೀತ, ಕೆಮ್ಮು ಮೊದಲಾದ ರೋಗಗಳಿಗೀಡಾಗಿರುವದಾದರೆ ಒಡನೆ ಪ್ರಸಿದ್ಧಿ ಹೊಂದಿರುವ

ಡೋಂಗರೆ ಬಾಲಾಮೃತವನ್ನು

ಕೊಡಬೇಕು. ಡೋಂಗರೆ ಬಾಲಾಮೃತವು ಒಂದು ಟಾನಿಕ್. ಎಲ್ಲೆಡೆಗಳಲ್ಲೂ ದೊರೆಯುವುದು.

ಪ್ರೊಪ್ರಾಯಿಟರ್ಸ್—

ಕೆ. ಟಿ. ಡೋಂಗರೆ ಕಂಪೆನಿ,

(52–50) ಗಿರಿಗಾಂವ್, ಬೊಂಬಾಯಿ.

Printed & published by P. I. Pelliappa at "Kodagu" Press, Mercara for "Kodagu" Ltd.

ಕರ್ನಾಟಕ ಪ್ರಾಂತೀಯ ಕಾಂಗ್ರೆಸ್ ಕಮಿಟಿಯ ಪ್ರಕಟಣೆ.

ರಾಷ್ಟ್ರಪತಿ ಬಾಬು ರಾಜೇಂದ್ರ ಪ್ರಸಾದರು 1936-37ನೇ ವರ್ಷದ ಸಲುವಾಗಿ ಈಗಿನಿಂದಲೇ ಕಾಂಗ್ರೆಸ್ ಸದಸ್ಯರನ್ನು ಮಾಡಲು ಅಪ್ಪಣೆ ಕೊಟ್ಟಿದ್ದಾರೆ. ಹಳ್ಳಿಗಳು ನಗರಗಳಲ್ಲಿ ಎಲ್ಲಾ ಕಡೆಯಿಂದ ಸಾಧ್ಯವಾದಷ್ಟು ಹೆಚ್ಚು ಸದಸ್ಯರಾಗಲು ಈಗ ಅವರಿಗೆ ವಿಶೇಷ ಬೋಧಿಸಬೇಕಾಗಿದೆ.

ಆದ್ದರಿಂದ ಕರ್ನಾಟಕದೊಳಗಿನ ಎಲ್ಲಾ ಕಾಂಗ್ರೆಸ್ ಕಮಿಟಿಗಳು ಈಗಿನಿಂದಲೇ ಈ ಕಾರ್ಯವನ್ನು ಕೈಕೊಳ್ಳಬೇಕು. ಈ ಸಲ ಕನಿಷ್ಟ 1 ಲಕ್ಷ ಸದಸ್ಯರನ್ನಾದರೂ ಮಾಡಬೇಕು. ಇದಕ್ಕಾಗಿ ಈಗಿನಿಂದಲೇ ಒಳ್ಳೇ ಉತ್ಸಾಹದಿಂದ ಕಾರ್ಯ ಪ್ರಾರಂಭಿಸಿದಲ್ಲಿ ಆದೇಶದ ಅವಶ್ಯಕವಾದ ಮೊತ್ತ [illegible] ಗಳನ್ನು ಲಕ್ಷ್ಯದಲ್ಲಿಡಬೇಕು.

(1) ಈಗ ಮಾಡುವ ಸದಸ್ಯರು 1936-37 ವರ್ಷದ ಸದಸ್ಯರು. (1936 ನೇ ಏಪ್ರಿಲ್ 1ರಿಂದ 37ನೇ ಮಾರ್ಚಿ 31ರ ವರೆಗೆ)

(2) ಕಳೆದ ವರ್ಷದ ರಸೀತಿಗಳೂ, ಈ ವರ್ಷದ ಪುಸ್ತಕಗಳೂ ಗೊಂದಲ ಬಾರದಂತೆ ಹೊಸ ವರ್ಷದ ಪುಸ್ತಕಗಳನ್ನು ಬೇರೆಯಾಗಿಡಬೇಕು.

(3) ಹಣ ಕೊಡುವಂಗ್ಯೆ ಅಥವಾ ಬೇರೆ ಕಾರಣಗಳಿಂದ ಈ ಸದಸ್ಯರು 1936 ನೇ ಏಪ್ರಿಲ್ 1 ರಿಂದ ಸದಸ್ಯರಾಗುವರೆಂದು ಎಣಿಸಬೇಕು.

ಧಾರವಾಡ, ರಂಗನಾಥ ದಿವಾಕರ,
ತಾ. 9-2-1936. ಅಧ್ಯಕ್ಷರು, ಕ. ಪ್ರಾ. ಕಾ. ಕ.

ಪತ್ರವ್ಯವಹಾರ.

[ಪತ್ರಗಳಲ್ಲಿ ಬರುವ ಅಭಿಪ್ರಾಯಗಳಿಗೆ ಪತ್ರಿಕೆಯವರು ಜವಾಬ್ದಾರರಲ್ಲ. ಸಂ]

ತಲೆ ಹೊಡೆದು ಅಳತೆ ಮಾಡಬೇಕೆಂಬುದು ಕಾನೂನಿಗೆ ಬಂಧಕ ವಿರೋಧವಲ್ಲ

ಅಯ್ಯಾ ಸಂಪಾದಕರೇ,

ನಿಮ್ಮ ತಾ. 7-2-36ರ ಪತ್ರಿಕೆಯಲ್ಲಿ ಅಳತೆ ಕುರಿತ ವಿಷಯ ಬಂದ ಹೇಳಿಕೆಯನ್ನು ನೋಡಿ ಆಶ್ಚರ್ಯ ಪಟ್ಟೆನು. ಕಾನೂನಿಗೆ ಅನುಗುಣವಾಗಿ ವರ್ತಿಸುವ ಬದಲು ವಿರೋಧ ಮಾಡುವವರ ಘಂತಾಂತರವೇನಾಗುತ್ತದೆಂಬುದು ಎಲ್ಲರಿಗೂ ಗೊತ್ತೇ ಇದೆ. 1931ನೇ ಇಸವಿಯ ಅಳತೆ ತೂಕಗಳ ಕಾನೂನು ಮೇರೆ ಚೀಫ್ ಕಮಿಷನರ್ ಸಾಹೇಬರವರ ನೋಟಿಫಿಕೇಶನ್ ಮೇರೆ ಪ್ರತಿಯೊಬ್ಬರೂ ತಲೆ ಹೊಡೆದೇ ಅಳತೆ ಮಾಡಬೇಕು. ಆ ರೂಲ್ಸ್ ಹೀಗಿದೆ:—

'ಅಕ್ಟಿನ 3 (c) ಪ್ರಕರಣದಲ್ಲಿ ಹೇಳಿರುವ ಅಳತೆಯ ಪಾತ್ರೆಗಳಲ್ಲಿ ಯಾವುದಾದರೊಂದರಿಂದಾದರೂ ಒಂದು ಪದಾರ್ಥವನ್ನು ಅಳೆಯಬೇಕಾದರೆ, ಸದರಿ ಅಳತೆಯ ಪಾತ್ರೆಗೆ ಆ ಪದಾರ್ಥವನ್ನು ತುಂಬಿ ಪಾತ್ರೆಯ ಮೇಲೆ ಗುಪ್ಪೆಯಂತೆ ನಿಲ್ಲಿಸಕೂಡದೆಂದೂ, ಅದರ ಗುಂಡಗಿರುವ ಮತ್ತು ನೆಟ್ಟಗೂ ಕೊನೆಯಿಂದ ಕೊನೆಗೆ ಒಂದೇ ಅಡ್ಡಳತೆಯ ವ್ಯಾಸವುಳ್ಳದ್ದಾಗಿಯೂ ಇರುವ ಒಂದು ಕೋಲಿನಿಂದ ಅಥವಾ ಒಂದು ದೊಣ್ಣೆಯಿಂದ ಅಳತೆಯ ಪಾತ್ರೆಯನ್ನು ತಲೆ ಸವರತಕ್ಕದ್ದು, ಅಥವಾ ಸೂಕ್ತವಾಗಿ ಹೊಡೆದು ತಲೆ ಸವರಿ ಅಳೆಯಲು ಅನುಕೂಲವಾಗಿಲ್ಲದಂಥದಾಗಿದ್ದ ಪಕ್ಷಕ್ಕೆ ಅದು ಗಾತ್ರದಿಂದಲೂ ಆಕಾರದಿಂದಲೂ ಸಾಧ್ಯವಾಗುವ ಮಟ್ಟಿಗೂ ಆ ಅಳತೆಯ ಪಾತ್ರೆಯೊಳಕ್ಕೆ ಎಲ್ಲಾ ಕಡೆಗಳಿಗೂ ಅದನ್ನು ಆ ಪಾತ್ರೆಯ ಅಂಚಿನ ವರೆಗೂ ಭರ್ತಿಯಾಗುವಂತೆ ತುಂಬಿಯೇ ಆಗಲಿ ಅಳೆಯತಕ್ಕದ್ದು.'

ಅಂದರೆ ಅಳೆಯತಕ್ಕ ಪದಾರ್ಥವು ಧಾನ್ಯವಾಗಿದ್ದರೆ ಅದನ್ನು ಯಾವಾಗಲೂ ಗುಂಡಗಿರುವ ಕೋಲು ದೊಣ್ಣೆಯಿಂದ ಅದರ ತಲೆಯನ್ನು ಸವರಿ ಅಳೆಯತಕ್ಕದ್ದು.

(ಈ ತಿದ್ದುಪಡಿಯು 1934ನೇ ಇಸವಿ ನವೆಂಬರು 1ನೇ ತಾರೀಖಿನಿಂದ ಜಾರಿಯಲ್ಲಿರತಕ್ಕದ್ದು.)

ದೇಶದ ನ್ಯಾಯವಿಧಾಯಕ ಸಭೆಯು ಸಬ್ ಕಮಿಟಿಯಿಂದ ಮಸೂದೆಯನ್ನು ಅವಲೋಕಿಸಿ ಅನಂತರ ಕಾನೂನು ಮಾಡಲಾಗಿದೆ. ಆದುದರಿಂದ ಸರ್ಕಾರದ ಮೇಲೆ ಬಂಧಕ ದೂರು ಹೊರಿಸಿ ಪ್ರಯೋಜನವಿಲ್ಲ. ಉತ್ತರ ಕೊಡಗಿನಲ್ಲಿ ತಲೆ ಹೊಡೆದು ಮಾಡುತ್ತಾರೆ. ಹೀಗಾಗಿ ಏನೂ ಸಾಮಾನುಗಳನ್ನು ವ್ಯಾಪಾರಿಗಳಿಂದ ದುಬಾರಿ ಆಗಿ ತರುವದಾಗಿದೆ. ಅಲ್ಲಿ ತಲೆ ಹೊಡೆದು ಇಲ್ಲಿ ತಲೆ ತುಂಬಿ ಹೀಗೆ ಕೂಡುವುದು ಕಾನೂನು ದೇಶದ ಎಲ್ಲಾ ಕಡೆ ಒಂದೇ ತರವಾಗಿರಬೇಕು. 265ನೇ ಮೆನರ್ ಕೋಡಿನ ಸೆಕ್ಷನ್‌ನಲ್ಲಿ ಸ್ಥಳೀಕ ಸರ್ಕಾರದ ಕಾನೂನಿಗೆ ವಿರೋಧವಾಗಿ ಮಾಡಬೇಕೆಂದು ಹೇಳಿರುವದಿಲ್ಲ. ಆದುದರಿಂದ ವರ್ತಕರೇ ಮೋಸಹೋಗಬೇಡಿ. ಆಗಾಗಲೇ ಇನ್ಸ್ಪೆಕ್ಟರು 10-12 ಕೇಸು ಮಾಡಿ 3-4 ಜನರಿಗೆ ದಂಡ ವಿಧಿಸಲಾಗಿದೆ. ಅಳತೆ ತೂಕಗಳ ಇನ್ಸ್ಪೆಕ್ಟರು ಅವರ ಕೆಲಸವನ್ನು ಕಾನೂನಿಗೆ ಸರಿಯಾಗಿ ನಡಿಸಬೇಕು. ಅವರಿಗೆ ಕಾನೂನಿನಲ್ಲಿ ಸರಿಯಾದ ಅಧಿಕಾರ ಕೊಟ್ಟಿದ್ದರಿಂದಲೇ ಇನ್ಸ್ಪೆಕ್ಟರು ನಿರ್ಬಂಧಿಸುವವರಾಗಿದೆ. ಬರೇ ತರ್ಕವಾಡಿಕೊಂಡು ಕೇಸಿನಲ್ಲಿ ಸಿಕ್ಕಿ ನರಳಬೇಡಿ.

ಕೆ. ಬಿ

ಸನ್ 1882ನೇ ಇಸವಿ ಇಂಡಿಯನ್ ಟ್ರಸ್ಟ್ ಆಕ್ಟಿಗೆ ಒಳಪಟ್ಟು ಸರಕಾರದ ಭರವಸೆಯುಳ್ಳ

ದಿ ಬೋಂಬೆ ಲೈಫ್ ಎಶ್ಯೂರೆನ್ಸ್ ಕಂಪೆನಿ ಲಿಮಿಟೆಡ್,

ಅಧ್ಯಕ್ಷರು—ಮಾನನೀಯ ಸರ್ ಲಲ್ಲುಭಾಯಿ ಸಾಮಲದಾಸ್,
ಕೆ. ಟಿ. ಸಿ. ಐ. ಇ., ಜೆ. ಪಿ. ಯವರು.

ಕೋಚ್ಚಿಕಾರ್ ಬ್ರದರ್ಸ್ ಮದ್ರಾಸು ಬ್ರಾಂಚ್ ಸೆಕ್ರೆಟರಿಗಳು.

ಕಳೆದ ಲಾಭ ಹಂಚುವಿಕೆಯಲ್ಲಿ ರೂ. 18ರಿಂದ 23ರ ವರೆಗೆ ಬೋನಸು ಡಿಕ್ಲೇರಾಗಿರುತ್ತೆ.
ಹಿಂದಿಯಿಂದ ಸ್ಥಾಪಿಸಲ್ಪಟ್ಟು ಹಿಂದೂದೇಶದವರಿಗಾಗಿ ಜೀವವಿಮೆಗೆ ಸಮ್ಮತಿಸಲ್ಪಟ್ಟಿರುವ ಅತ್ಯುತ್ತಮ ತರದ ಲಕ್ಷಣಗಳಿಂದ ಕೂಡಿ ಕಮ್ಮಿ ಪ್ರೀಮಿಯಮ್ ದರದಲ್ಲಿ ಪಾಲಿಸಿ ಕೊಡುವ ಕಂಪನಿ ಇದೊಂದು ಮುಂಚೂಣಿ ನಂಬರು.
ಪತಿ ಪತ್ನಿಯರು ಮತ್ತು ವ್ಯಾಪಾರಸ್ಥರು ವಗೈರೆಯವರಿಗೆ ವಿಶೇಷವಾಗಿ (ಜಾಯಿಂಟ್ ಲೈಫ್)
ಪಾಲಿಸಿ ಕಮ್ಮಿ ಪ್ರೀಮಿಯಮ್ ದರದಲ್ಲಿ ಕೊಡುವ ಈ ಕಂಪೆನಿಯು ಹೆಸರುಗೊಂಡಿದೆ.
ಪಾಲಿಸಿದಾರರು ಅಕಸ್ಮಾತಾಗಿ ಅಂಗಹೀನರಾದರೆ ಅಂಥವರಿಗೆ ಪಾಲಿಸಿಯ ಮೊಬಲಗನ್ನು ಮುಂದಕ್ಕೆ
ಪ್ರೀಮಿಯಮ್ ಪಡೆಯದೆ ಇಲ್ಲದೆ ಪೆನ್ಶನ್ ರೀತಿಯಲ್ಲಿ ಉದಾರತ್ವದಿಂದ ಕೊಡಲು
ಈ ಕಂಪೆನಿಯು ಏರ್ಪಡಿಸಿದೆ ಎಂದು ನೆನಪಿಡಿ.
ಮನಃಪೂರ್ವಕವಾಗಿ ಕೆಲಸ ಮಾಡಲು ಇಚ್ಛಿಸುವ ಗಂಡಸರು ಮತ್ತು ಹೆಂಗಸರಿಗೆ
ಉತ್ತಮ ತರಹದ ಕಮಿಶನ್ ವಗೈರೆಯಿಂದ ಏಜೆನ್ಸಿ ಕೊಡಲಾಗುತ್ತೆ.

ಹೆಚ್ಚಿನ ಮಾಹಿತಿಗೆ—ಬಿ. ಎಸ್. ಐಯ್ಯಪ್ಪ,
ಕೊಡಗು ಚೀಫ್ ಏಜೆಂಟ್,
26—10 ಮಹದೇವಪೇಟೆ, ಮಡಿಕೇರಿ.

ಉತ್ತಮ ಪ್ರತಿಫಲ ಯಾವುದರಲ್ಲಿ?



501 ಸಾಬೂನು — ಅತ್ಯಲ್ಪ ಕ್ರಯದಿಂದ ಕೂಡಿದ, ಒಳ್ಳೇ ಘಟ್ಟಿ ಸಾಬೂನು



ಅರ್ಧಾಂಶಕ್ಕಿಂತ ಹೆಚ್ಚು ನೀರು ಬೆರೆಸಿದ್ದು, ನೋಟಕ್ಕೆ ಒಳ್ಳೇ ಸಾಬೂನಿನಂತೆ ಕಾಣುವ ಇತರ ಸಾಬೂನು.

ಅಗ್ಗವಾದ—ಸಾಬೂನುಗಳನ್ನು ಕೊಂಡುಕೊಳ್ಳುವುದು ಹೆಚ್ಚು ಖರ್ಚಿಗೆ ಕಾರಣ. 'ಬೂತಕ್ಕೆಂದೇ ಸಾಬೂನಾಗಿ ನೀವು ಹಣಕೊಟ್ಟು ಅರ್ಧ ತುಂಡು ಸಾಬೂನನ್ನು ಮಾತ್ರ ಪಡೆಯಿರಿ' ಈ ಸಾಬೂನುಗಳಲ್ಲಿ 501ರಷ್ಟು ನೀರೇ. 501 ಸಾಬೂನು ಚೆನ್ನಾಗಿ ನೊರೆಯನ್ನು ತೆಗೆಯುತ್ತದೆ ಮತ್ತು ಹೆಚ್ಚು ಬಾಳಿಕೆ ಬರುವದರಲ್ಲಿ ಅರಿಯರು!

501 Soap

ವೆಚ್ಚ ಕಡಿಮೆ.
ವಸ್ತ್ರ ಬಾಳಿಕೆ.
ಶ್ರಮ ಅತೀ ಕಡಮೆ!

ಟಾಟಾ ಕಂಪೆನಿ ಏಜಂಟರ ಮೂಲಕ, ೧. ಸೆಂಟ್ರಲ್ ಸ್ಟ್ರೀಟ್, ಬೆಂಗಳೂರು ದಂಡು.

ತಯಾರಿಸುವವರು—ಟಾಟಾ ಆಯಿಲ್ ಮಿಲ್, ಕಂಪೆನಿ. ಲಿಮಿಟೆಡ್. ಬೊಂಬಾಯಿ, ಮತ್ತು ಟಾಟಾಪುರ.

52—38. ಕೊಡಗಿನ ಡಿಸ್ಟ್ರಿಬ್ಯೂಟರ್—ಬಿ ಎಸ್ ಸುಬ್ಬಣ್ಣ, ಸಂತೆಪೇಟೆ, ಮೈಸೂರು.

ನೂತನ! ಮನೋಲ್ಲಾಸಕರ!! ಶುಚಿಕರ!!! ಅದರ್ಶ ವಿಶ್ರಾಂತಿಗೃಹ!!!!

ಬೊಂಬಾಯಿ ರೆಸ್ಟೋರೆಂಟ್

ಇದೇ ತಾ. 19—12—1935ರಲ್ಲಿ ಮಡಿಕೇರಿ ಚೌಕದಲ್ಲಿರುವ
ಹೊಸ ಕಟ್ಟಡದಲ್ಲಿ ತೆರೆಯಲ್ಪಟ್ಟಿದೆ.

ಆರೋಗ್ಯಕರವೂ ಅಗ್ಗವೂ ಆದ ಉಪಹಾರ ಗೃಹವೊಂದನ್ನು ನಿರೀಕ್ಷಿಸುವ ಮಹನೀಯರುಗಳ
ಸೌಕರ್ಯಕ್ಕಾಗಿ ತೆರೆಯಲಾಗುವುದು.

ಶುದ್ಧವೂ, ತೃಪ್ತಿಕರವೂ, ಆರೋಗ್ಯಕರವೂ ಆದ ತಿಂಡಿತಿನಸುಗಳನ್ನೂ

ಕಾಫಿ—ಚಹಾ—ಕೋಕೋ—ಶರ್ಬತ್ತು ಇತ್ಯಾದಿ ಪಾನೀಯಗಳೂ—
ಕೇವಲ ಹಲವು ವರ್ಷಗಳ ಅನುಭವಿಕರಿಂದ ತಯಾರಿಸಲ್ಪಡುವುವು.

ಗಿರಾಕಿಗಳ ಸೌಕರ್ಯವನ್ನು ಲಕ್ಷಿಸಿ, ಆಸನಗಳ—ವಿಶಾಲ ಕೊಠಡಿಗಳ—ಕಾರ್ಯೋತ್ಸಾಹೀ
ವಿನೀತ ಸೇವಕರ ಏರ್ಪಾಡು ಇದೆ.

ಆಯಕ್ಕೆ ತಕ್ಕ ವ್ಯಯ ಮಾಡುವವರು, ನ್ಯಾಯಕ್ಕೆ ತಕ್ಕ ಆಯವನ್ನು ಹೊಂದಬೇಕಾದ ಅತ್ಯಾಧುನಿಕ
ಈ ವಿಶ್ರಾಂತಿಗೃಹದಲ್ಲಿ—

ನೀವು ಅಪೇಕ್ಷಿಸಿದ—ನೀವು ನಿರೀಕ್ಷಿಸಿದ—ನೀವು ಹೊಂದಲೇಬೇಕಾದ—
ಸಕಲ ಅನುಕೂಲತೆಗಳನ್ನು ಕಂಡು, ಪೂರ್ಣ ತೃಪ್ತಿಹೊಂದಿರಿ.

ಮದುವೆ ಮತ್ತು ಉಪನಯನ ಸಮಾರಂಭಗಳಲ್ಲಿಯೂ ಮತ್ತು "ಟೀ"ಪಾರ್ಟಿ—
"ಎಟ್-ಹೋಮ್"ಗಳಲ್ಲಿಯೂ ನಮ್ಮನ್ನು ಮರೆಯಬೇಡಿ.

52—9 ಪ್ರೊಪ್ರೈಟರ್:—ವಾಮನ ರಾವ್, ಗಾಯತೊಂಡೆ.

ವಿವಿಧ ವಾರ್ತಾವಳಿ.

ಕಾಂಗ್ರೆಸ್ಸನ್ನು ಅಹಮ್ಮದಾಬಾದಿಗೆ ಆಹ್ವಾನಿಸುವವರು

ಅಹಮ್ಮದಾಬಾದು ಜಿಲ್ಲಾ ಕಾಂಗ್ರೆಸ್ ಕಮಿಟಿಯವರು ಸರದಾರ ವಲ್ಲಭಭಾಯಿಯವರನ್ನು ತಮ್ಮ ಕಮಿಟಿಗೆ ಅಧ್ಯಕ್ಷರನ್ನಾಗಿ ಆರಿಸಿ ಮುಂದಿನ ಕಾಂಗ್ರೆಸ್ಸನ್ನು ಅಹಮ್ಮದಾಬಾದಿಗೆ ಕರೆಯಲು ಅವರಿಗೆ ಅಧಿಕಾರಕೊಟ್ಟಿದ್ದಾರೆ.

—೦೦೦—

ಧೂಳಿದ್ದರೇನೇ ಮಳೆ.

ಲಂಡನ್ನು ವಿಶ್ವವಿದ್ಯಾಲಯದ ಪ್ರೊಫೆಸರಾದ ಆಲ್ಬರ್ಟ್ ಗಿಲ್ಲಿಗನ್ನರು ಹೇಳುವುದೇನು:

"ಗಾಳಿಯ ಆವಿಯು ಒಂದುಗೂಡಿ ಮೋಡಗಳಾಗಲು ಪ್ರತಿಯೊಂದು ಹನಿಗೂ ಕೇಂದ್ರವಾಗಿ ಧೂಳಿನ ಅಣುವೊಂದು ಬೇಕು. ಅದಿಲ್ಲದಿದ್ದಲ್ಲಿ ಮಳೆಯಾಗುವುದು ಅಸಾಧ್ಯ. ಆ ಧೂಳಿನ ಭಾಗವು ಹೀಗೆ ಇವೆಲ್ಲವೂ ಸಮುದ್ರದಿಂದಲೇ ಮೇಲೆ ಏರುವುದು."

ಅಂತೂ ಧೂಳಿಗೂ ಒಂದು ಉಪಯೋಗವಿದೆ ಎಂದಾಯಿತು.

—೦೦೦—

ನೀರಿನಲ್ಲಿ ತೇಲುವ ವಿಚಿತ್ರ ಕಲ್ಲು!

ನಾಗಪುರದ ಸೆಂಟ್ರಲ್ ಮ್ಯೂಸಿಯಮ್ಮಿಗೆ ಹೊಸದಾಗಿ ಒಂದು ಕಲ್ಲನ್ನು ತಂದಿರಿಸಿದ್ದಾರೆ. ಇದನ್ನು ನೀರಿನಲ್ಲಿ ಬಿಟ್ಟರೆ ಮುಳುಗುವುದಿಲ್ಲ. ತೇಲುವುದು!

ಇದೊಂದು ಹಳೆಯ ಮುರುಕು ಮನೆಯಲ್ಲಿ ಸಿಕ್ಕಿತ್ತಂತೆ. ವರ್ಣವು ಕಂದು ಮತ್ತು ಕಪ್ಪು ಮಿಶ್ರವಿದ್ದಂತಿದೆ. ದೊಡ್ಡ ಬಿಸ್ಕಿಟ್ಟಿನಂತಿದ್ದು ಇಟ್ಟಿಗೆಯ ಆಕಾರದಲ್ಲಿದೆ.

ತಜ್ಞರು ಇದು 'ಪ್ಯೂಮಿಸ್' ಜಾತಿಯ ಶಿಲೆ ಎಂದು ಊಹಿಸುತ್ತಾರೆ.

—೦೦೦—

ಫ್ರಾನ್ಸಿನಲ್ಲಿ ಪೋಕರ್ ಕೂಡದು

ಫ್ರಾನ್ಸಿನ ಮುನ್ಸಿಪಾಲಿಟಿಯವರು ಒಂದು ಹೊಸ ಕಾನೂನನ್ನು ಜಾರಿಗೆ ತಂದಿದ್ದಾರೆ.

ಇನ್ನು ಮೇಲೆ ಪುರಜನರು 'ಪೋಕರ್' ಆಟ್ಟೆಗಳನ್ನು ಧರಿಸಕೂಡದಂತೆ. ಜನರಿಗೆ ಅನುಕೂಲವಾಗಿಯೂ, ಅಸಹ್ಯವಲ್ಲದುದೂ ಆದ ಬಟ್ಟೆಗಳನ್ನೂ ಮಾತ್ರ ಹಾಕಿಕೊಳ್ಳಬೇಕಂತೆ.

ಹೋದ ವಾರ ಪೋಲೀಸರು ಅನೇಕ ದರ್ಜಿಯರ ಅಂಗಡಿಗಳಿಗೆ ಹೋಗಿ 'ಪೋಕರ್' ಬಟ್ಟೆಗಳೆಲ್ಲವನ್ನೂ ಮುಟ್ಟುಗೋಲು ಹಾಕಿಕೊಂಡು ಹೋದರಂತೆ.

—೦೦೦—

ಗಂಡಿಲ್ಲದ ಮದುವೆ.

ಈ ಕಾಲದಲ್ಲಿ ಕೇಳರಿಯದ ವಿಚಿತ್ರ ಮದುವೆಯೊಂದು ಟ್ರಿಚನಾಪಳ್ಳಿ ಹತ್ತಿರದ ಅಯಂಕೆ ಎಂಬ ಹಳ್ಳಿಯಲ್ಲಾಯಿತು. ಮದುವೆಗೆ ಹುಡುಗಿಯೊಬ್ಬಳಿದ್ದಳು. ವರನಿರಲಿಲ್ಲ.

ವರನು ಸಿಂಗಪುರದಲ್ಲಿದ್ದಾನೆ. ಮದುವೆಯ ದಿನ ಆ ಊರಿನ ದೊಡ್ಡ ಮನುಷ್ಯರೆಲ್ಲ ಸೇರಿದರು. ಅವನ ಫೋಟೋ ತರಿಸಿ ಅದನ್ನು ಪೀಠದ ಮೇಲೆ ಇಟ್ಟು ಅದಕ್ಕೂ ಹುಡುಗಿಗೂ ಮದುವೆ ಮಾಡಿದರು.

ಇನ್ನು ಕೆಲವು ದಿನಗಳಲ್ಲಿಯೇ ಹುಡುಗಿಯು ಸಿಂಗಪುರಕ್ಕೆ ಗಂಡನ ಮನೆಗೆ ಹೋಗುವಳು. ತನ್ನ ಗೈರುಹಾಜರಿನಲ್ಲಿ ಮದುವೆಯು ಈ ರೀತಿ ನಡೆಯಬೇಕೆಂದು ಗಂಡನೇ ಬರೆದಿದ್ದನಂತೆ.

—೦೦೦—

ಯುದ್ಧದ ತಯ್ಯಾರಿ ಹೀಗಿದೆ!

ಜೆಕೋಸ್ಲೋವಾಕಿಯದ ಗಡಿನಾಡಿನ ಹತ್ತಿರ ಜರ್ಮನಿಯವರು ಭೂಮಿಯ ಒಳಗೆ ಲೆಕ್ಕವಿಲ್ಲದಷ್ಟು ಇಲಿಗಳನ್ನು ಸಾಕಿದ್ದಾರೆ. ಅವುಗಳ ಸಂಖ್ಯೆಯೂ ಇನ್ನೂ ಬೆಳೆಯುತ್ತಲೇ ಇದೆ. ಯುದ್ಧವೇನಾದರೂ ಆರಂಭವಾದರೆ ಈ ಇಲಿಗಳಿಗೆ ಪ್ಲೇಗ್ ಜಾಡ್ಯ (ಕ್ರಿಮಿಗಳು)ಗಳ ಇಂಜಕ್ಷನ್ ಕೊಟ್ಟು ಶತ್ರು ಪ್ರಾಂತಗಳಿಗೆ ಓಡಿಸಿಬಿಡುವುದಕ್ಕಾಗಿ ಈ ಏರ್ಪಾಡಂತೆ.

—೦೦೦—

ಇದೇನು ಯುದ್ಧದ ಪೀಠಿಕೆಯೋ?

ಮ್ಯಾಂಚೂಕೋ ರಾಜ್ಯದಲ್ಲಿ ಏನೋ ಗುಪ್ತ ಸಂಗತಿಗಳು ನಡೆಯುತ್ತಿವೆ. ಅದರ ಪೂರ್ವಭಾಗದಲ್ಲಿ ಜಪಾನಿ ಸೈನಿಕರಿಗೂ ಯು.ಎಸ್.ಎಸ್.ಆರ್. ಸೈನಿಕರಿಗೂ ಹೋರಾಟವಾಯಿತಂತೆ. ಎರಡು ಕಡೆಗಳಲ್ಲಿಯೂ ಅನೇಕ ಜನರು ಸತ್ತರು. ಇದರ ಹಿಂದೆ ರಷ್ಯದೇಶದವರು ಕೈ ಕೆಲಸ ಮಾಡುತ್ತಿದೆಯೆಂದು ಜಪಾನಿಗಳ ಹೇಳಿಕೆ. ಮುಂದೆ ಸಂಭವಿಸಬಹುದಾದ ರಷ್ಯ-ಜಪಾನುಗಳ ಯುದ್ಧದ ಪೀಠಿಕೆಯೋ ಇದು?

—೦೦೦—

ಮಹಾತ್ಮರ ಹಿರಿಯ ಮಗನು ಕ್ರಿಸ್ತಿಯನ್ನಾಗುವನು.

ಮಹಾತ್ಮ ಗಾಂಧಿಯವರ ಹಿರಿಯ ಮಗನಾದ ಹರಿಲಾಲ್ ಗಾಂಧಿಯು 'ಡೇಲಿ ನ್ಯೂಸ್' ಪತ್ರಿಕೆಗೆ ಪತ್ರ ಬರೆದು ತಾನು ಕ್ರಿಸ್ತಿಯನ್ನನಾಗಲು ನಿರ್ಧರಿಸಿರುವುದಾಗಿ ಜಾಹೀರು ಮಾಡಿದ್ದಾನೆ. ಇದರ ವಿಷಯ ಹೆಚ್ಚಿನ ವಿವರಗಳು ತಿಳಿದಿಲ್ಲ.

—೦೦೦—

ಕ್ರಿಕೆಟ್ ಟೆಸ್ಟ್ ಮ್ಯಾಚಿನಲ್ಲಿ ಆಸ್ಟ್ರೇಲಿಯನರ ಪರಾಭವ

ಮದ್ರಾಸಿನಲ್ಲಿ ತಾ. ೩ರಲ್ಲಿ ಆಸ್ಟ್ರೇಲಿಯನರಿಗೂ, ಭಾರತೀಯರಿಗೂ ಕೊನೆಯದಾದ ಮೂರನೇ ಟೆಸ್ಟ್ ಮ್ಯಾಚ್ ನಡೆಯಿತು. ಆಸ್ಟ್ರೇಲಿಯನರು ಎರಡನೇ ಇನಿಂಗ್ಸಿನಲ್ಲಿ ಎಲ್ಲ 107 ಓಟಗಳಿಗೆ ಔಟು ಆದರು. ಹೀಗಾಗಿ ಹಿಂದೀ ಜನರು 33 ಓಟಗಳಿಂದ ವಿಜಯವನ್ನು ಸಂಪಾದಿಸಿದರು.

—೦೦೦—

ಜೋಗೇಶ ಚಟರ್ಜಿಯವರ ಪ್ರಾಣತ್ಯಾಗದ ನಿರ್ಧಾರ.

ಅಖಿಲ ಪಕ್ಷಗಳಿಗೆ ಕಂತಿ.

ಲಕ್ನೋ ಸೆಂಟ್ರಲ್ ಜೈಲಿನಲ್ಲಿ ಅನ್ನತ್ಯಾಗ ಕೈಕೊಂಡಿರುವ ಜೋಗೇಶ ಚಟರ್ಜಿಯವರು ಅಖಿಲ ಪಕ್ಷಗಳ ಸಂಧಾನದ ಉತ್ತರ ದೊರಕದಾಗಿ, ತಮ್ಮ ಬೇಡಿಕೆಗಳು ಪೂರ್ಣವಾಗದೆ ಸಾವು ಅನ್ನತ್ಯಾಗ ನಿಲ್ಲಿಸುವುದಿಲ್ಲವಾಗಿ ತಿಳಿಸಿರುವರೆಂದು ಗೊತ್ತಾಗುತ್ತದೆ. ಜೋಗೇಶರು ಈಗ ಬಹಳ ಅಶಕ್ತರಾಗಿರುವರು.

—೦೦೦—

ಲಾಹೋರು ಸತ್ಯಾಗ್ರಹ

ಲಾಹೋರು ಶಹೀದ್‍ಗಂಜ್ ಮಸೀದಿಯ ವಿವಾದದ ಬಗ್ಗೆ ಮಹಮ್ಮದೀಯರು ಸತ್ಯಾಗ್ರಹವನ್ನು ಹೂಡಿರುವರಷ್ಟೆ. ಅದರ ವಿಭಾಗವೇ ಮತ್ತು ... ಸರ್ವಾಧಿಕಾರಿಗಳಾದ (ಡಿಕ್ಟೇಟರುಗಳು) ... ಮತ್ತು ... ಹುಸೇನ್ ಎಂಬುವರು ಬಾದಶಾಹಿ ಮಸೀದಿಯೊಳಗಿರುವರು. ಪೋಲೀಸರು ಆ ಮಸೀದಿಯ ದ್ವಾರದಲ್ಲಿ ಅವರನ್ನು ದಸ್ತಗಿರಿ ಮಾಡಲೋಸುಗ ಕಾಯುತ್ತಿರುವರು.

—೦೦೦—

ಧನದ ಬದಲು ಧಾನ್ಯ.

ಕಾಂಗ್ರೆಸ್ಸಿನ ಸದಸ್ಯರಾಗಲು ಈಗಿರುವ ನಿಬಂಧನೆಗಳ ಪ್ರಕಾರ ವರ್ಷಕ್ಕೆ ನಾಲ್ಕಾಣೆ ಫೀಯನ್ನು ಕೊಡಬೇಕು.

ಪಂಜಾಬಿನ ಕಾಂಗ್ರೆಸ್ ಕಮಿಟಿಯವರು ನಾಲ್ಕಾಣೆಯ ಹಣದ ಬದಲು ಧಾನ್ಯವನ್ನೇ ತೆಗೆದುಕೊಳ್ಳತಕ್ಕದ್ದೆಂದು ಸೂಚಿಸಿರುವರು. ಇದರಿಂದ ಹಳ್ಳಿಗರಿಗೆ ಅನುಕೂಲಿಸುವುದಂತೆ.

—೦೦೦—

ಪುತ್ರ ಸಂಪತ್ತು ಎಷ್ಟಾಗುವದು?

ಟೂಟಿಂಗ್ ಎಂಬಲ್ಲಿ ನೂರು ವರ್ಷಗಳ ಹಿಂದೆ ಸಾರ್ ಏನ್ ಎಂಬಾಕೆ ಇದ್ದಳು. 23 ವರ್ಷಗಳಲ್ಲಿ 25 ಮಕ್ಕಳನ್ನು ಪಡೆದಳು. 15 ನೆಯ ಶತಮಾನದಲ್ಲಿ ಮಿಸೆಸ್ ಲಿಂಗ್ ಎಂಬ ಒರ್ಪಿಂಗ್‌ಟನ್ ಮಹಿಳೆ 53 ಮಕ್ಕಳ ತಾಯಿಯಾಗಿದ್ದಳು. ಫ್ರಾಂಕ್ ಫರ್ಟ್ ಸ್ಟೈನ್ ಬರ್ಗ್ ಎಂಬಾಕೆ ಅವಳಿಗಿಂತಲೂ ಪ್ರವೀಣೆ. 56 ನೆಯ ವರ್ಷದಲ್ಲಿ 69 ಮಕ್ಕಳನ್ನು ಪಡೆದು ವೈಧವ್ಯಾಧೀನಳಾದಳು. ಅವಳು ಮಕ್ಕಳನ್ನು ಪಡೆದ ಕ್ರಮ ಹೀಗೆ:—ಒಂದು ಬಾರಿಗೆ 4 ರಂತೆ 4 ಸೇಳೆ ಮಕ್ಕಳು (16), ಬಾರಿಗೆ ಮೂರರಂತೆ 7 ಬಾರಿಗೆ 21 ಮಕ್ಕಳಾದುವು. ಅವಳ ಮಕ್ಕಳು 16 ಬಾರಿ ಎರಡರಂತೆ 32 ಮಂದಿ. ಒಟ್ಟು 69 ಮಕ್ಕಳು.

—೦೦೦—

ಅಬಿಸೀನಿಯಾ ಚಕ್ರವರ್ತಿಯ ಸಿಂಹಾಸನ,

ಭಾರತೀಯನಿಂದ ರಚಿತವಾದದ್ದು.

ಅಬಿಸೀನಿಯಾ ಚಕ್ರವರ್ತಿಯಾದ ಹೈಲೆ ಸೆಲಾಸಿಯವರ ಸಿಂಹಾಸನವು ಒಬ್ಬ ಭಾರತೀಯನಿಂದ ರಚಿತವಾದದ್ದು ಗೊತ್ತಾಗಿದೆ. ಗಾಂಧಿ ಟೋಪಿ ಧರಿಸಿದ ಮೋಹನಲಾಲ್ ಪ್ರಾಣನಾಥನೆಂಬ ಈ ಶಿಲ್ಪಿಯು ಅಹಮ್ಮದಾಬಾದು ನಿವಾಸಿಯಾಗಿರುವನು. ಇವನಿಗೆ ಸಿಂಹಾಸನವನ್ನು ತಯಾರು ಮಾಡುವುದಕ್ಕೆ ಸುಮಾರು ಹತ್ತು ತಿಂಗಳ ಕೆಲಸ ಹಿಡಿಯಿತು. ಸಿಂಹಾಸನದಲ್ಲಿ ತೋರಿಸಿದ ಅದ್ಭುತ ಕಲಾಚಾತುರ್ಯವನ್ನು ಕಂಡು ಅನೇಕ ಪರೀಕ್ಷಕರು ಆತನನ್ನು ಕೊಂಡಾಡಿರುವರು. ಸಿಂಹಾಸನದ ಒಟ್ಟು ಬೆಲೆ 8 000 ರೂಪಾಯಿ. ಅದಕ್ಕೆ ಉಪಯೋಗಿಸಿದ ಬೆಳ್ಳಿಯು ಹಿಂದೂಸ್ಥಾನದಿಂದಲೂ, ದಂತ ಸಾಮಗ್ರಿಗಳು ಆಫ್ರಿಕಾದಿಂದಲೂ ಸಂಗ್ರಹವಾದಂಥವುಗಳು. ಮೋಹನಲಾಲನಿಗೆ 1,500 ಬಹುಮಾನ ದೊರಕಿದೆ. ಆತನು ಚಕ್ರವರ್ತಿಗೆ ಒಂದು ಪೀಠವನ್ನು ಸಮರ್ಪಿಸಿಕೊಟ್ಟಿರುವನು. ಆದ್ದರಿಂದ ದೇಶದಂತೆ ಮಲಗುವ ಕುರ್ಚಿಯಾಗಿಯೂ ಕವಾಟಾಗಿಯೂ ಉಪಯೋಗವಾಗುವಂತೆ ರಚಿತವಾಗಿದೆ.

—೦೦೦—

ಹೊಸತೊಂದು ಪಕ್ಷ.

ಡಾ. ಸಭೆಯನ್ನು ದೇಶದಿಂದ ಉಚ್ಚಾಟಿಸಬೇಕೆಂಬ ಉದ್ದೇಶವುಳ್ಳ ಹೊಸತೊಂದು ಪಕ್ಷವು ಬೇಗನೆ ತಲೆದೋರುವುದಂತೆ. ನಾಸಿಕ ನಗರದಲ್ಲಿ ಅದರ ಉದ್ಭವ. ಇಸ್ಪೀಸ್ ಸಂಘದ ಜಾತೀಯ ಪ್ರೇಮ, ಉದಾರಪಕ್ಷಗಳ ರಾಜಕೀಯ ಧ್ಯೇಯ ಇವುಗಳನ್ನು ಆದರ್ಶವಾಗಿಟ್ಟುಕೊಂಡು ಹೊಸ ಸಂಘವನ್ನು ರಚಿಸುವುದಂತೆ. ದಕ್ಷಿಣ ಭಾರತದ ಜಸ್ಟೀಸರು ಉತ್ತರಕ್ಕೆ ಕಾಲಿಡಲು ಪ್ರಯತ್ನಿಸಿದಂತೆ ತೋರುತ್ತದೆ. ನಾಸಿಕ ನಗರವನ್ನು ಆರಿಸಿದುದೇಕೋ? ಅಂಬೇಡಕರರು ಈ ನಗರದಲ್ಲಿ ಸ್ವಧರ್ಮತ್ಯಾಗದ ದೀಕ್ಷೆಯನ್ನು ಕೈಕೊಂಡು ದೇಶದಲ್ಲಿ ಖ್ಯಾತಿಯನ್ನು ಪಡೆದರು. ಹಾಗೆಯೇ ತಮಗೂ ಖ್ಯಾತಿ ಬರುವುದೆಂದು ಈ ಹೊಸ ಪಕ್ಷದವರ ಅಭಿಪ್ರಾಯವೇ?

—೦೦೦—

ಅಬಿಸೀನಿಯಾ ಬೆಕ್ಕುಗಳು.

ಅಬಿಸೀನಿಯಾ ದೇಶದ ಹೆಸರನ್ನು ಕೇಳದವರಿಗೆ ಈಗ ಅದರ ಸಂಪೂರ್ಣ ಪರಿಚಯವಾಗಿದೆ. ಯುದ್ಧವೇ ಅದಕ್ಕೆ ಕಾರಣ. ಈ ದೇಶದ ಬೆಕ್ಕುಗಳು ಬಹಳ ಚೆಲುವಾಗಿರುವುವಂತೆ. ಅನೇಕ ಬೆಕ್ಕುಗಳನ್ನು ಮಹಾಯುದ್ಧದಿಂದ ಪಾರಾದ ಸೈನಿಕರು ಅಲ್ಲಿಂದ ಹಿಡಿದುಕೊಂಡು ಬರುತ್ತಿದ್ದಾರೆ.

ಲಂಡನ್ನಿನಲ್ಲಿ ಬೆಕ್ಕುಗಳ ಪ್ರದರ್ಶನವೊಂದಾಯಿತು. ಆ ಪ್ರದರ್ಶನಕ್ಕೆ ಎಲ್ಲ ದೇಶದ ಬೆಕ್ಕುಗಳೂ ಬರುತ್ತವೆ. ಅಬಿಸೀನಿಯಾ ದೇಶದ ಬೆಕ್ಕುಗಳು ಮಾತ್ರ ಈ ವರೆಗೆ ಅಲ್ಲಿಗೆ ಪ್ರವೇಶ ಮಾಡಿರಲಿಲ್ಲ. ಈ ಸಾರೆ ಅವುಗಳ ಪ್ರವೇಶವಾಯಿತು. ಅಬಿಸೀನಿಯಾ ಬೆಕ್ಕುಗಳೇ ಅಲ್ಲಿ ಬಹು ಜನರ ಮೆಚ್ಚುಗೆಯನ್ನು ಪಡೆದುವು. ಎಲ್ಲರೂ ಅವನ್ನು ಕೊಳ್ಳುವವರೇ ಆಗಿದ್ದರು. ಬೆಕ್ಕುಗಳ ವಿಷಯದಲ್ಲಿ ನಿಪುಣರಾದವರು ಈ ಬೆಕ್ಕುಗಳ ಮಿಶ್ರ ಸಂತಾನಗಳು ಮನೋಹರವಾದವುಗಳೆಂದು ಅಭಿಪ್ರಾಯಪಡುತ್ತಿದ್ದಾರೆ.

—೦೦೦—

ಸಿರಿಯಾದಲ್ಲಿ ಕ್ರಾಂತಿ.

ಈ ಅಂತರರಾಷ್ಟ್ರೀಯ ಅಶಾಂತಿ ಚಿಂತನಾಮಯವಾದ ಸಮಯದಲ್ಲಿ ಪ್ರೆಂಚರ ಆಳ್ವಿಕೆಯಲ್ಲಿರುವ ಸಿರಿಯಾದಲ್ಲಿ ಹೊಸ ಕ್ರಾಂತಿಯೆದ್ದಿದೆ. ಸಿರಿಯಾವು ಮಹಾಯುದ್ಧವಾದನಂತರ ಪರಕೀಯರ ಆಡಳಿತದಿಂದ ಯಾರಾದರೂ ಜನಾಂಗ ಸಂಘದ ಹಿತಚಿಂತಕರ ಆಜ್ಞೆಯಂತೆ ಸರ್ವ ವಿಧದಲ್ಲೂ ಅಭಿವೃದ್ಧಿಯನ್ನು ಹೊಂದುವ ತನಕ ಫ್ರೆಂಚ್ ಸರಕಾರಕ್ಕೊಳಪಟ್ಟಿರಬೇಕಾದದ್ದು. ಆಂತರಿಕ ಸ್ವಾತಂತ್ರ್ಯ ನಾಮ ಮಾತ್ರ ಲೋಪ.

ಪ್ರಪಂಚವೇ ಸ್ವಾತಂತ್ರ್ಯ ಸಮಭಾವಗಳ ಹೆಸರಲ್ಲಿ ಹೋರಾಡುತ್ತಿರುವಾಗ ಜೀವಂತವಾಗಿರುವ ಯಾವ ಜನಾಂಗವು ತಾನೇ ಸುಮ್ಮನಿದ್ದೀತು! ಸಿರಿಯವೂ ಈಗ ಕಣ್ತೆರೆದಿದೆ. ಫ್ರೆಂಚರ ಮೇಲ್ವಿಚಾರಣೆಯಲ್ಲಿ ತನ್ನ ಸರ್ವ ಹಾನಿಯೂ ಆಯಿತೆಂದು ಕೂಗಾಡಲು ಪ್ರಾರಂಭಿಸಿದೆ. ಡಮಾಸ್ಕಸ್, ಅಲೆಪ್ಪೋ ಮುಂತಾದ ಪ್ರಾಂತ್ಯಗಳಲ್ಲಿ ಭೀಕರವಾದ ದಂಗೆಗಳಾಗುತ್ತಿವೆ. ಜನರು 'ಫ್ರೆಂಚರು ಹೋಗಬೇಕು. ನಮಗೆ ಸ್ವಾತಂತ್ರ್ಯ ಬೇಕು.' ಎಂದು ಬೊಬ್ಬೆಯಿಡುತ್ತಿದ್ದಾರೆ. ದಂಗೆಯು ಶಮನವಾಗಿಲ್ಲ. ಅಶಾಂತಿಯು ಹೆಚ್ಚುತ್ತಿದೆ. ಮುಂದೇನೋ ಗೊತ್ತಿಲ್ಲ.

—೦೦೦—

ಬೊಂಬಾಯಿಯಲ್ಲಿ ಹಿಟ್ಲರನ ನಿಷೇಧ.

ಜರ್ಮನ್ ರಾಯಭಾರಿಯ ಕಚೇರಿಗೆ ಮುತ್ತಿಗೆ.

ಹರ್ ಹಿಟ್ಲರನು ಮೊನ್ನೆ ತನ್ನದೊಂದು ಭಾಷಣದಲ್ಲಿ ಹಿಂದೂಸ್ಥಾನದ ಮೇಲೆ ವಿನಾಕಾರಣ ಟೀಕೆ ಮಾಡಿ ಭಾರತೀಯರನ್ನು ಅವಮಾನಗೊಳಿಸಿದ್ದರಿಂದ ಆ ಬಗ್ಗೆ ನಿಷೇಧ ವ್ಯಕ್ತಮಾಡಲು ತಾ 8 ರಲ್ಲಿ ಬೆಳಗ್ಗೆ ಕಮ್ಯೂನಿಸ್ಟರು, ಸೋಶಲಿಸ್ಟರು, ಕಾರ್ಮಿಕರು ಇವರೇ ಮೊದಲಾದ ನೂರಾರು ಜನರು ಕೂಡಿ ಜರ್ಮನ್ ರಾಯಭಾರಿಯ ಕಚೇರಿಗೆ ಮುತ್ತಿಗೆ ಹಾಕಿ ತಮ್ಮ ವಿರೋಧ ಪ್ರದರ್ಶಿಸಿದರು. ಈ ಜನರು ತಮ್ಮ ಕೈಯಲ್ಲಿ ಕೆಂಪು ನಿಶಾನಿ, ಗುದ್ದಲಿ, ಕುರುಪಿಗಳನ್ನು ಹಿಡಿದುಕೊಂಡು ಹಿಟ್ಲರನಿಗೆ ಧಿಕ್ಕಾರವಿರಲಿ ಎಂದು ಜಯ ಜಯಕಾರ ಮಾಡುತ್ತ ಬಂದಿದ್ದರು. ಪೋಲೀಸರಿಗೆ ಇದರ ಮುಂಗಡ ಸುದ್ದಿ ಎಳ್ಳಷ್ಟೂ ಇರಲಿಲ್ಲ. ಕೂಡಲೇ ಅವರು ಅಲ್ಲಿ ಬಂದು ವಿರೋಧ ಪ್ರದರ್ಶಕರಿಗೆ ಚದುರಿ ಹೋಗಲು ತಿಳಿಸಿದರು. ಅದರಂತೆ ಅವರು ಶಾಂತ ರೀತಿಯಿಂದ ತಿರುಗಿ ಹೋದರು. ಈಗ ಜರ್ಮನ್ ರಾಯಭಾರಿಯ ಕಚೇರಿಯ ಮುಂದೆ ಕಾವಲಿಗೆ ಪೋಲೀಸ್ ದಳವು ನಿಲ್ಲಿಸಲ್ಪಟ್ಟಿರುತ್ತದೆ. ರಾಯಭಾರಿಯು ಈ ಸಂದರ್ಭದಲ್ಲಿ ಬೊಂಬಾಯಿ ಸರ್ಕಾರಕ್ಕೆ ನಿಷೇಧವ್ಯಕ್ತ ಮಾಡಿ ಪತ್ರ ಬರೆದಿರುವನೆಂದು ತಿಳಿಯುತ್ತದೆ.

—೦೦೦—

ಕೊಡಗು

ಫೆಬ್ರವರಿ ೨೨. ೧೯ನೇ ಶುಕ್ರವಾರ ೧೯೩೪.

ರಾಜಕೀಯ ಕೈದಿಗಳ ಸ್ಥಿತಿ.

ಕೆಲವು ವರ್ಷಗಳ ಹಿಂದೆ ಹಿಂದೂ ದೇಶದಲ್ಲಿ ಕಾಸಲಿ, ದರೋಡೆ, ಕಳ್ಳತನ ಮೋಸ ಮುಂತಾದ ತಕ್ಸೀರುಗಳನ್ನು ಮಾಡಿದವರೇ ಜೈಲುಗಳಲ್ಲಿ ಬಂಧನಕ್ಕೆ ಗುರಿಯಾಗುತ್ತಿದ್ದರು ಆದರೆ ಇತ್ತೀಚಿಗೆ ವಿದ್ಯೆಯುಳ್ಳವ ಭಾರತೀಯರು ಎಚ್ಚತ್ತು ತಮ್ಮ ಮಾತೃಭೂಮಿಯ ಗುಲಾಮಗಿರಿಯನ್ನು ಹೋಗಲಾಡಿಸಲು ಸೊಂಟಕಟ್ಟಿದಂದಿನಿಂದ ಹಲವರು ರಾಜದ್ರೋಹದ ರಾಜಕೀಯ ತಕ್ಸೀರುಗಳಿಗಾಗಿ ಸೆರೆಮನೆಯಲ್ಲಿ ಬಂಧಿಸಲ್ಪಡುತ್ತಿರುವರು. ಕೆಲವು ಸಂದರ್ಭಗಳಲ್ಲಿ ನ್ಯಾಯಸ್ಥಾನಗಳಲ್ಲಿ ವಿಚಾರಣೆಯೂ ನಡಿಸದೇನೇ ಹಲವರು 'ಡಿಟೆನ್ಯೂ'ಗಳಾಗಿ ಬಂದಿಖಾನೆಯಲ್ಲಿ ದೀರ್ಘಕಾಲ ಇಡಲ್ಪಟ್ಟಿರುವರು. ಇತ್ತೀಚೆಗೆ ಮಹಾತ್ಮ ಗಾಂಧಿಯವರ ಮುಂದಾಳುತನದಲ್ಲಿ ಕಾಂಗ್ರೆಸು ಸಂಸ್ಥೆಯು ನಡೆಸಿದ ಅಹಿಂಸ ಪ್ರಸಿದ್ಧವಾದ ಸವಿನಯ ಕಾಯಿದೆಭಂಗ ಚಳವಳಿಯಲ್ಲಂತೂ ಸಾವಿರಗಟ್ಟಲೆ ಜನರು ಶಿಕ್ಷಿತರು ವಿದ್ಯಾವಂತರು, ಶ್ರೀಮಂತರು, ಮಹಿಳೆಯರು ಮತ್ತು ಮಕ್ಕಳು ಸಹ—ಸಿಕ್ಕಿಬಿದ್ದು ಸೆರೆಮನೆಯೊಳಗೆ ನುಗ್ಗಿದ್ದು ಎಲ್ಲರಿಗೂ ತಿಳಿದ ಸಂಗತಿಯಾಗಿದೆ. ಬಂಗಾಳದಂಥ ಪ್ರಾಂತ್ಯದಲ್ಲಿ ರಾಜಕೀಯ ಕೊಲೆಗಳಲ್ಲಿ ಜನರು ಸ್ವತಃ ಹಲವು ವರ್ಷಗಳಿಗಿಂತ ಮುಂಚಿತವಾಗಿಯೇ ಬಂಧನಕ್ಕೊಳಗಾಗುತ್ತಿದ್ದಾರೆ. ನಮ್ಮ ಪುಟ್ಟ ಪ್ರಾಂತ್ಯದಲ್ಲಾದರೋ 1930 ನೇ ಇಸವಿಯ ವರೆಗೆ ರಾಜಕೀಯ ಕೈದಿಗಳೇ ಇರಲಿಲ್ಲ. ಸತ್ಯಾಗ್ರಹ ಚಳವಳಿಯ ನಂತರ ರಾಜಕೀಯ ಬಂದಿಗಳಾಗಿದ್ದವರು ಇಲ್ಲಿದ ಜೆಲ್ಲಿಯೋ ಇನ್ನೆಲ್ಲಿಯೋ ಅತಿಕಷ್ಟ ಅನುಭವಿಸಿದರು.

ರಾಜಕೀಯ ಕೈದಿಗಳಿಗೂ ಸನಸಿಕ್ಕ ಹಾಸಿಕರವಾದ ತಕ್ಸೀರುಗಳನ್ನು ಮಾಡಿದ ಸಾಧಾರಣ ಕೈದಿಗಳಿಗೂ ತುಂಬಾ ವ್ಯತ್ಯಾಸವಿದೆ. ರಾಜಕೀಯ ಬಂದಿಯಾದರೋ ಉಚ್ಚಧ್ಯೇಯವಾದ ತನ್ನ ದೇಶದ ಸ್ವಾತಂತ್ರ್ಯಕ್ಕಾಗಿ ತನ್ನ ಸ್ವಾರ್ಥವನ್ನು ಬಿಟ್ಟು, ಆಳರಸರ ಆಜ್ಞೆಗಳಿಗೆ ತಲೆಬಾಗದೆ ದೃಢತೆಯಿಂದ ಕಷ್ಟ ನಷ್ಟಗಳನ್ನು ಅನುಭವಿಸುವವನು. ಸಾಧಾರಣದ ಕೈದಿಯಾದರೋ ಘೋರವಾದ ಕೊಲೆ, ದರೋಡೆ, ವಿಶ್ವಾಸ ಘಾತಕ ಮೊದಲಾದ ಮಹಾಅಪರಾಧಗಳನ್ನು ಸ್ವಾರ್ಥಕ್ಕಾಗಿ ಮಾಡಿದವನು. ಇವರಿಬ್ಬರನ್ನು ಬಂದಿಖಾನೆಯಲ್ಲಿ ಒಂದೇ ರೀತಿ ಎಣಿಸುವುದು ಎಂದೂ ನ್ಯಾಯವಲ್ಲ.

ಸರ್ಕಾರದವರ ಈ ರೀತಿಯ ವರ್ತನೆಯನ್ನು ಸಹಿಸಲಾರದೆ ಕೆಲವು ವರ್ಷಗಳ ಹಿಂದೆ ಶ್ರೀಯುತ ಜತೀಂದ್ರದಾಸರವರು ಕಾರಾಗೃಹದಲ್ಲಿ ದೀರ್ಘಕಾಲ ಉಪವಾಸವನ್ನು ಕೈಕೊಂಡು ಜೀವವನ್ನು ಅಂತ್ಯಗೊಳಿಸಿದ ವಿಷಯವು ಜನರಿಗೆ ಮರೆತು ಹೋಗಿರುವುದಿಲ್ಲ. ಅದರ ಪರಿಣಾಮವೆಂಬ ಫಲಿತಾಂಶವಾಗಿ ಸರ್ಕಾರದವರು ಜೈಲು ಜೀವನದ ಕ್ರಮದಲ್ಲಿ ಸ್ವಲ್ಪ ಬದಲಾವಣೆಗಳನ್ನು ಮಾಡಿದರು. ಅದುತಿ ಕೈದಿಗಳನ್ನು ಅವರ ಜೀವನದ ಕುಗತಿ, ವಿದ್ಯೆ, ಸಂಸ್ಕೃತಿ ಮುಂತಾದವುಗಳನ್ನನುಸರಿಸಿ ಎ, ಬಿ, ಸಿ ವರ್ಗಗಳಾಗಿ ವಿಂಗಡಿಸಲುಪಕ್ರಮಿಸಿದರು. ಆದರೆ ಕಳೆದ ಶಾಸನಭಂಗ ಚಳವಳಿಯಲ್ಲಿ ಈ ಪದ್ಧತಿಯನ್ನು ಜಾರಿಗೆ ತರುವುದರ ಬದಲು ಹಲವು ಸತ್ಯಾಗ್ರಹಿಗಳನ್ನು 'ಸಿ' ತರಗತಿಗೆ ಸಾಕಿದ್ದರಿಂದ ಅವರು ಪಟ್ಟಂಥಾ ಕಷ್ಟಗಳು ಗುಟ್ಟಿನ ಸಂಗತಿಯೇನೂ ಅಲ್ಲ. ಅಗ್ಗೆ ಈ ವಿಚಾರವಾಗಿ ಸ್ವಲ್ಪ ಪಟ್ಟಿಗೆ ಚಳವಳಿಯೂ ಎದ್ದಿತ್ತು.

ಆದರೆ ಸವಿನಯ ಕಾಯಿದೆ ಭಂಗ ಚಳವಳಿಯು ನಿಲ್ಲಿಸಲ್ಪಟ್ಟಂದಿನಿಂದೀಚೆಗೆ ಸೆರೆ ಮನೆಯಲ್ಲಿ ರಾಜಕೀಯ ಬಂದಿಗಳ ಸಂಖ್ಯೆಯು ಕಡಿಮೆಯಾಗುತ್ತಾ ಬಂದಿದೆ. ಆದರೂ ಕಡಿದ ಜೈಲಿನಲ್ಲಿರುವ ಕೆಲವು ರಾಜಕೀಯ ಕೈದಿಗಳನ್ನು ಯೋಗ್ಯ ರೀತಿಯಲ್ಲಿ ಕಾಣುವುದಿಲ್ಲವೆಂಬ ಪುಕಾರು ಆಗಾಗ್ಗೆ ಕೇಳಿ ಬರುತ್ತಿದೆ. ಇಂಥಾ ಅಯೋಗ್ಯ ವರ್ತನೆಯನ್ನು ಸಹಿಸಲಾರದೆ ಅವನ್ನು ನಿವಾರಿಸಲಿಕ್ಕಾಗಿ 'ಕಾಕೋರಿ ಒಳಸಂಚಿ'ನ ಕೇಸಿನ ಕೈದಿಯಾದ ಶ್ರೀ ಚೆಂಗೀಶ ಚಟರ್ಜಿಯವರು ಉಪವಾಸ ವ್ರತವನ್ನು ಕೈಕೊಂಡು ಮೃತ್ಯು ಮುಖದಲ್ಲಿರುವರು. ಅವರ ಕೋರಿಕೆಗಳನ್ನು ಸರ್ಕಾರದವರು ನೆರವೇರಿಸದ ಹೊರತು ಅವರು ಆಹಾರವನ್ನು ತೆಗೆದುಕೊಳ್ಳುವಂತಿಲ್ಲ. ಇದು ಅವರ ಸ್ವಾರ್ಥ ಲಾಭದ ವಿಷಯವಲ್ಲ. ರಾಜಕೀಯ ಕೈದಿಗಳ ಸ್ಥಿತಿಯನ್ನು ಉತ್ತಮಗೊಳಿಸಲಿಕ್ಕಾಗಿಯೇ ಅವರು ಪ್ರಾಣವನ್ನಾದರೂ ಕಳಕೊಳ್ಳಲು ಸಿದ್ಧರಿರುವರಾಗಿದೆ. ಇವರ ಸ್ಥಿತಿಯ ಕಡೆಗೆ ಎಲ್ಲಾ ಸಹಾನುಭೂತಿಯು ಹರಿಯುವುದು ಅತ್ಯವಶ್ಯ. ಈ ರೀತಿ ಕರಗುವಂಥ ಪರಿಸ್ಥಿತಿಯನ್ನು ನೋಡಿ ಕಾಂಗ್ರೆಸಿನ ಅಧ್ಯಕ್ಷರಾದ ಬಾಬು ರಾಜೇಂದ್ರ ಪ್ರಸಾದರವರು ಜನರ ಪ್ರತಿನಿಧಿಗಳಲ್ಲಿ ಒಂದು ಕೋರಿಕೆಯನ್ನು ಮಾಡಿರುವರು. ರಾಜಕೀಯ ಕೈದಿಗಳ ಸ್ಥಿತಿಯನ್ನು ಉತ್ತಮಗೊಳಿಸಲು ಎಡೆಬಿಡದೆ ಪ್ರಯತ್ನಿಸುವ ಠರಾವುಗಳನ್ನು ಶಾಸನ ಸಭೆಗಳಲ್ಲಿ ಎರ್ಪಡಿಸಬೇಕೆಂಬ ಅವರ ಸೂಚನೆಗೆ ಹಲವರ ಪ್ರೋತ್ಸಾಹವು ದೊರೆತಿರುತ್ತಿದೆ. ದೇಶಕ್ಕೆ ಸಂಪೂರ್ಣ ಸ್ವಾತಂತ್ರ್ಯವು ದೊರೆಯುವ ವರೆಗೆ ರಾಜಕೀಯ ಕೈದಿಗಳು ಹೆಚ್ಚಾಗಿ ಇರುವರು. ಆದುದರಿಂದ ಅವರ ಜೈಲು ಜೀವನವು ಕಷ್ಟ ಪಟ್ಟಿಗಳಿಲ್ಲದೆ ಇರುವಂತೆ ನೋಡಲು ಸರ್ಕಾರದವರು ಯೋಗ್ಯ ಕ್ರಮ ನಡೆಸಿ, ಜನಾಭಿಪ್ರಾಯದ ಬಲದಿಂದ ಸರ್ಕಾರದವರ ಈಗಿನ ವರ್ತನೆಯನ್ನು ಬದಲಾಯಿಸುವಂತೆ ಮಾಡುವುದು ಅತ್ಯಗತ್ಯವಾಗಿದೆ.

ಜನಸಂಘದ ಸಂಘದ ಆಶ್ರಯದಲ್ಲಿ

ಸಾರ್ವಜನಿಕ ಸಭೆಗಳು

ಕಂದಾಯ ಕಡಿತ ಭೂಮಿ ಗಿರವಿ ಬ್ಯಾಂಕು ಮತ್ತು ರಾಜಕೀಯ ಸುಧಾರಣೆ—ಈ ಮೂರು ವಿಷಯಗಳನ್ನು ಚರ್ಚಿಸಲು ಕೊಡಗಿನ ಜನಸಂಘದ ಸಂಘದ ಆಶ್ರಯದಲ್ಲಿ ಕೊಡಗಿನ ಸ್ಥಳಗಳಲ್ಲಿ ಸಾರ್ವಜನಿಕ ಮೀಟಿಂಗುಗಳು ನಡೆಸಲ್ಪಟ್ಟವು. ಈ ಮೀಟಿಂಗುಗಳಲ್ಲಿ ಮಾಡಿದ ಠರಾವುಗಳ ಪ್ರತಿಗಳು ಆಯಾ ಮೀಟಿಂಗಿನ ಅಧ್ಯಕ್ಷರಿಂದ ಕಮಿಷನರವರಿಗೆ ಕಳುಹಿಸಲ್ಪಟ್ಟಿದೆ.

ಮಡಿಕೇರಿ.

1. ಇದೇ ಫೆಬ್ರವರಿ ತಾ. 10 ನೇ ಸೋಮವಾರ ಮಧ್ಯಾಹ್ನದ ವೇಳೆ ಮಡಿಕೇರಿ ಸಂತೆಮಾಳ ಒಳ ಒಂದು ಸಾರ್ವಜನಿಕ ಸಭೆ ಸೇರಿತು. ಮ. ರಾ. ಬಿಟ್ಟಿಕುಟ್ಟಿರ ಸುಬ್ಬಯ್ಯನವರು ಸಭೆಯ ಅಧ್ಯಕ್ಷತೆಗೆ ಆರಿಸಲ್ಪಟ್ಟರು. ಜನಸಂಘದ ಸಂಘದ ಉಪಾಧ್ಯಕ್ಷರಾದ ಮ. ಶಾಂತೆಯಂಡ ಕರಿಯಪ್ಪನವರು ಭೂಮಿ ಗಿರವಿ ಬ್ಯಾಂಕಿನ ಲಾಭ ನಷ್ಟಗಳನ್ನು ಕುರಿತು ಭಾಷಣ ಮಾಡಿ ಈ ಕೆಳಗಿನ ಗೊತ್ತುವಳಿಯನ್ನು ಸಭೆಯ ಮುಂದಿಟ್ಟರು '

'ಕೊಡಗಿನಲ್ಲಿ ಭೂಮಿ ಗಿರವಿ ಬ್ಯಾಂಕನ್ನು ಪ್ರತ್ಯೇಕವಾಗಿ ಸ್ಥಾಪಿಸುವುದರ ಬದಲು ದೀರ್ಘ ಕಾಲದ ಸಾಲ ಕೊಡುವ ಏರ್ಪಾಡನ್ನು ಸಹಕಾರ ಸೆಂಟ್ರಲ್ ಬ್ಯಾಂಕಿನಲ್ಲೇ ಮಾಡುವುದು ಉತ್ತಮವೆಂದು ಈ ಸಭೆಯ ಅಭಿಪ್ರಾಯವಾಗಿದೆ.' ಮ. ಗಳಾಡ ಚೇಂದಿರ ತಮ್ಮಯ್ಯನವರು ಮತ್ತು ಪಿ ಜಿ. ಮುದ್ದಪ್ಪಯ್ಯನವರು ಠರಾವಿಗೆ ಅನುಮೋದನೆ ಮಾಡಿದರು. ಠರಾವು ಸರ್ವಸಮ್ಮತದಿಂದ ಪಾಸಾಯಿತು

2. 'ಈ ವರ್ಷದ ಬೆಳೆ ಫಸಲು ಉತ್ತಮವಾಗಿಲ್ಲದ್ದರಿಂದಲೂ, ಬೆಲೆಯು ಕಡಿಮೆಯಾಗಿರುವುದರಿಂದಲೂ ಈ ಸಾರಿಯ ಕಂದಾಯದಲ್ಲಿ ಮೂರರಲ್ಲಿ ಒಂದು ಭಾಗವನ್ನು ಮಾಫಿ ಮಾಡಬೇಕೆಂದೂ, ಕಳೆದ ಎರಡು ವರ್ಷಗಳಲ್ಲಿ ಕೊಡಲಿದ ತಾತ್ಕಾಲಿಕ ಕಂದಾಯ ರಿಯಾಯಿತಿಯನ್ನು ಖಾಯಂ ಮಾಫಿ ಮಾಡಬೇಕೆಂದೂ ಈ ಸಭೆಯವರ ಕೋರಿಕೆಯಾಗಿದೆ.' ಎಂಬ ಠರಾವನ್ನು ಮ. ಅಜ್ಜಮಾಡ ಮಂದಪ್ಪನವರು ಸೂಚಿಸಿ ಕೆಲವು ಮಾತುಗಳನ್ನಾಡಿದ ಮೇಲೆ ಅದು ಏಕೋಭಾವದಿಂದ ಮಂಜೂರಾಯಿತು

3 'ಕೊಡಗಿಗೆ ರಾಜಕೀಯ ಸುಧಾರಣೆಗಳನ್ನೇನೂ ಕೊಡಲು ಏರ್ಪಾಡು ಮಾಡದಿರುವುದು ತುಂಬಾ ಅತೃಪ್ತಿಕರವಾಗಿ, ಅಸಮಂಜಸವಾಗಿ. ಆದುದರಿಂದ ಪೂರ್ಣ ಜವಾಬ್ದಾರಿ ಸರ್ಕಾರ ಪದ್ಧತಿಯನ್ನು ಕೊಡಲು ಕೂಡಲೇ ಏರ್ಪಾಡು ಮಾಡತಕ್ಕದ್ದು' ಎಂಬ ಗೊತ್ತುವಳಿಯನ್ನು ಸಭೆಯ ಮುಂದಿಟ್ಟು ಮ. ಕೆ. ಸಿ. ಕರುಂಬಯ್ಯನವರು ಸುಧಾರಣೆಯ ವಿಷಯದಲ್ಲಿ ಸರ್ಕಾರದವರ ವರ್ತನೆಯನ್ನು ಖಂಡಿಸಿ ಮಾತಾಡಿದರು. ಠರಾವು ಯಾರ ವಿರೋಧವೂ ಇಲ್ಲದೆ ಪಾಸಾಯಿತು.

ಕಕ್ಕಬೆ ಬಾಣೆ ಮೀಟಿಂಗು.

1. ಈ ತಾ. 10 ನೇ ಸೋಮವಾರ ಮಧ್ಯಾಹ್ನದ ವೇಳೆ ನಾಲ್ಕು ಗಂಟೆಗೆ ಅಮ್ಮತ್ತಿನಾಡಿನವರ ಸಭೆಯೊಂದು ಕಕ್ಕಬೆ ಬಾಣೆ ಕೋಲು ಮಂದಿನಲ್ಲಿ ನೆರೆದಿತ್ತು. ಮ. ಬಿನಂಡ ಅಯ್ಯಪ್ಪನವರು ಅಧ್ಯಕ್ಷರಾಗಿದ್ದರು ಜನಸಂಘದ ಸಂಘದ ಅಧ್ಯಕ್ಷರಾದ ಮ. ರಾ. ಪಿ ಐ ಬೆಳ್ಯಪ್ಪನವರು, ಮೀಟಿಂಗಿನ ಉದ್ದೇಶವನ್ನು ಸೂಕ್ಷ್ಮವಾಗಿ ತಿಳಿಸಿ, ಹೊಸ ವಿಷಯವಾದ ಭೂಮಿ ಗಿರವಿ ಬ್ಯಾಂಕಿನ ಪ್ರಯೋಜನಗಳನ್ನೂ, ಅದಕ್ಕಿಂತಲೂ ಹೆಚ್ಚಾದ ದೋಷಗಳನ್ನೂ ಕುರಿತು ವಿಸ್ತಾರವಾಗಿ ಭಾಷಣ ಮಾಡಿದರು. ಪ್ರತ್ಯೇಕ ಭೂಮಿ ಅಡಮಾನದ ಬ್ಯಾಂಕಿನ ಸ್ಥಾಪನೆಯನ್ನು ವಿರೋಧಿಸಿ ಮ. ಗಳಾಡ ಮಂದೆಯಂಡ ಬೆಳ್ಯಪ್ಪನವರು, ಕುಟ್ಟಪ್ಪನವರು, ಮಾಡಿಮಂಡ ಸುಬ್ಬಯ್ಯನವರು ಮತ್ತು ಮಂಡೆಯಂಡ ಪೊನ್ನಪ್ಪನವರು ಮಾತಾಡಿದರು. ಮ. ಮಾಚಿಮಂಡ ನಂಜುಂಡನವರು ಕೆಲವು ಪ್ರಶ್ನೆಗಳನ್ನು ಕೇಳಿದಕ್ಕೆ ಮ. ಪಿ ಬೆಳ್ಯಪ್ಪನವರು ಸಮಾಧಾನ ಕೊಟ್ಟನು. ನಂತರ ಬ್ಯಾಂಕನ್ನು ಕುರಿತ ಠರಾವು ಮೇಲಿನ ಕೋರಿಸಿದ ರೂಪದಲ್ಲಿ ಸರ್ವಾನುಮತದಿಂದ ಸ್ವೀಕರಿಸಲಾಯಿತು.

2 ಆ ಮೇಲೆ ಕಂದಾಯ ಮಾಫಿಯ ಠರಾವನ್ನು ನೋಟ್ಟಕ್ಕೆ ಸಾಗಿಸದಾಕೆ ಶ್ರೀ. ಪಿ. ಬೆಳ್ಯಪ್ಪನವರು ಸಭೆಯ ಮುಂದಿಟ್ಟರು ಕಂದಾಯದ ಅರ್ಧದಷ್ಟು, ಹಾಗೆಯೇ ಡಿಸ್ಟ್ರಿಕ್ಟ್ ಬೋರ್ಡ್ ಸೆಸ್ಸಿನ ಅರ್ಧವೂ ಮಾಫಿ ಮಾಡಲ್ಪಡಬೇಕೆಂದು ಮ. ಎ ಪಿ ಮಂದಪ್ಪನವರು ಸೂಚಿಸಿದರು. ಡಿಸ್ಟ್ರಿಕ್ಟ್ ಬೋರ್ಡ್ ಸೆಸ್ಸನ್ನು ವಿನಾಯಿಸಬೇಕೆಂದು ಅಧ್ಯಕ್ಷರೂ, ಮ. ಪಿ ಬೆಳ್ಯಪ್ಪನವರೂ ವಿವರಿಸಿದ ಮೇಲೆ ಈ ಸಂಬಂಧದ ಠರಾವು ವಿರೋಧವಿಲ್ಲದೆ ಮಂಜೂರಾಯಿತು.

3 ನೇದು ರಾಜಕೀಯ ಸುಧಾರಣೆಗಳನ್ನು ಕುರಿತ ಠರಾವನ್ನು ಜನಸಂಘದ ಸಂಘದ ಅಧ್ಯಕ್ಷರು ಮೀಟಿಂಗಿನ ಮುಂದಿಟ್ಟು ಒಂದು ಚಿಕ್ಕ ಭಾಷಣ ಮಾಡಿದರು. ಈ ವಿಷಯ ಮಡಿಕೇರಿ ಮೀಟಿಂಗಿನಲ್ಲಿ ಪಾಸಾದಂಥಾ ಠರಾವೇ ಇಲ್ಲಿಯೂ ಸರ್ವಸಮ್ಮತದಿಂದ ಮಂಜೂರಾಯಿತು. ಅಧ್ಯಕ್ಷರು ಸಭಿಕರನ್ನು ವಂದಿಸಿದ ನಂತರ ಸಭೆಯು ಮುಗಿದಾಯಿತು.

ಅಮ್ಮತ್ತಿ.

1. ಈ ಫೆಬ್ರವರಿ ತಾ. 11 ನೇ ಮಂಗಳವಾರ ಅಮ್ಮತ್ತಿ ಪೇಟೆಯ ಒಳ ಶ್ರೀ ದೇವಾಲಯದಲ್ಲಿ ಮ. ನೆಲ್ಲಮಕ್ಕಡ ಅಚ್ಚಯ್ಯನವರ ಅಧ್ಯಕ್ಷತೆಯಲ್ಲಿ ಒಂದು ಪಬ್ಲಿಕ್ ಮೀಟಿಂಗು ನಡೆಯಿತು. ಮ. ರಾ. ಪಿ. ಐ. ಬೆಳ್ಯಪ್ಪನವರು ಕೊಡಗಿನಲ್ಲಿ ಕೊಡಲಾಗಿ ಸ್ಥಾಪಿಸಬೇಕೆಂದು ಅಧಿಕ ಬಡ್ಡಿಯಾದ ಭೂಮಿ ಅಡಮಾನದ ಬ್ಯಾಂಕಿನ ಸಾಧಕ ಬಾಧಕಗಳನ್ನು ಕುರಿತು ದೀರ್ಘ ಭಾಷಣ ಮಾಡಿ ಇದನ್ನು ಕುರಿತ ಠರಾವನ್ನು ಮೇಲೆ ಹೇಳಿದ ರೀತಿ ಸಭೆಯ ಮುಂದಿಟ್ಟರು. ಮ. ಐ ಪಿ ಮಂದಪ್ಪನವರು ಅನುಮೋದಿಸಿದ ಈ ಠರಾವಿಗೆ ವಿರೋಧವಾಗಿ ಮ. ಪುಲಿಯಂಡ ಮಾದಪ್ಪನವರು ಮಾತಾಡಿದರು. ಜನಸಂಘದ ಸಂಘದ ಸೆಕ್ರಟರಿಯಾದ ಮ. ಐ ಪಿ. ಕಾರ್ಯಪ್ಪನವರು ಠರಾವಿನ ಔಚಿತ್ಯವನ್ನು ತಿಳಿಸುತ್ತಾ, ಮ. ಪಿ. ಮಂದಪ್ಪನವರ ಭಾಷಣಕ್ಕೆ ಉತ್ತರವನ್ನಿತ್ತರು. ಭೂಮಿ ಗಿರವಿ ಬ್ಯಾಂಕು ಹಾಗೂ ಹಿತುವಳಿದಾರರಿಗೆ ಪ್ರಯೋಜನವಾಗುವದೆಂದು ಮ. ಅಬ್ದುಲ್ ಗಫೂರ್‌ಖಾನರವರು ಮಾತಾಡಿದರು ಮ. ನೆಲ್ಲಮಕ್ಕಡ ದೇವಯ್ಯನವರು ಕೆಲವು ಪ್ರಶ್ನೆಗಳನ್ನು ಕೇಳಿದರು. ಪ್ರಶ್ನೆಗಳಿಗೂ, ಆಕ್ಷೇಪಗಳಿಗೂ ಮ. ಪಿ. ಬೆಳ್ಯಪ್ಪನವರು ಜವಾಬನ್ನಿತ್ತ ಮೇಲೆ ಗೊತ್ತುವಳಿಯು ಒಬ್ಬರ ವಿರೋಧವಿಲ್ಲದೆ ಪಾಸಾಯಿತು.

2. ಬೇರೆ ಮೀಟಿಂಗುಗಳಲ್ಲಿ ಆದಂತೆಯೇ ಶೇಕಡ 33⅓ ರಷ್ಟು ಕಂದಾಯ ಮಾಫಿ ಮಾಡಬೇಕೆಂಬ ಠರಾವು ಏಕ ಮತದಿಂದ ಮಂಜೂರಾಯಿತು.

3 ಕೆಲವು ಮಾತುಗಳಿಂದ ಮ. ಪಿ. ಬೆಳ್ಯಪ್ಪನವರು ರಾಜಕೀಯ ಸುಧಾರಣೆಗಳನ್ನು ಕುರಿತ ಗೊತ್ತುವಳಿ ಯನ್ನು ಸೂಚಿಸಿದರು. ಇದನ್ನು ಶ್ರೀ ಅಬ್ದುಲ್ ಗಫೂರ್‌ಖಾನರು ಅನುಮೋದಿಸಲಾಗಿ ಸರ್ವಸಮ್ಮತದಿಂದ ಪಾಸಾಯಿತು. ಜನಸಂಘದ ಸಂಘದ ಸೆಕ್ರಟರಿಯವರು ಸಭೆಯ ಅಧ್ಯಕ್ಷರನ್ನೂ, ನೆರೆದಿದ್ದ ಸಭಿಕರನ್ನೂ ವಂದಿಸಿದರು ಮೀಟಿಂಗಿನ ಅಧ್ಯಕ್ಷರು ಜನಸಂಘದ ಸಂಘದ ಪ್ರೆಸಿಡೆಂಟರು ಮತ್ತು ಸೆಕ್ರಟರಿಯವರ ಕೃತಜ್ಞತೆಯನ್ನು ಸೂಚಿಸಿದ ಮೇಲೆ ಮೀಟಿಂಗು ವಿಸರ್ಜನೆಯಾಯಿತು.

ವೀರಾಜಪೇಟೆ.

1. ಈ ತಾ. 12 ನೇ ಬುಧವಾರ ಮಧ್ಯಾಹ್ನ 1½ ಗಂಟೆಗೆ ವೀರಾಜಪೇಟೆ ವಿಕ್ಟೋರಿಯಾ ಕ್ಲಬ್ಬಿನ ಎದುರುಗಡೆ ವೈದ್ಯರ ಸರ್ವಜನಿಕ ಕಾರ್ಯಕ್ರಮ ಸೇರಿತ್ತು. ಮ. ವಾಟೇರಿರ ಅಯ್ಯಪ್ಪನವರು ಸಭೆಯ ಅಧ್ಯಕ್ಷರಾಗಿ ಆರಿಸಲ್ಪಟ್ಟರು ಜನಸಂಘದ ಸಂಘದ ಪ್ರೆಸಿಡೆಂಟರು ಮೀಟಿಂಗಿನ ಉದ್ದೇಶವನ್ನು ವಿವರಿಸಿ, ಭೂಮಿ ಅಡಮಾನದ ಬ್ಯಾಂಕಿನ ಲಾಭ ನಷ್ಟಗಳನ್ನೂ, ಅದು ಕೊಡಗಿನಲ್ಲಿ ಬೇಕಿಲ್ಲದವೆಂದಿರುವ ಕಾರಣಗಳನ್ನೂ ಕುರಿತು ವಿವರವಾಗಿ ಉಪನ್ಯಾಸ ಮಾಡಿದರು. ಮ. ಕುಂಡ ಮುತ್ತಣ್ಣನವರು ಕೆಲವು ಪ್ರಶ್ನೆಗಳನ್ನು ಕೇಳಿದಕ್ಕೆ ಮ. ಐ. ಪಿ ಕಾರ್ಯಪ್ಪನವರು ಉತ್ತರವನ್ನಿತ್ತು ಸಮಾಧಾನಪಡಿಸಿದರು. ಮ. ಬಿದ್ದಂಡ ಬೋಪಯ್ಯನವರು ಠರಾವನ್ನು ಅನುಮೋದನೆ ಮಾಡಿದ ಮೇಲೆ ಅದು ಮೇಲಿನ ರೂಪದಲ್ಲಿಯೇ ಸರ್ವಸಮ್ಮತದಿಂದ ಮಂಜೂರಾಯಿತು.

2. ಈ ವರ್ಷ ಮೂರರಲ್ಲಿ ಒಂದು ಭಾಗ ಕಂದಾಯವನ್ನು ಮಾಫಿ ಮಾಡಬೇಕೆಂಬ ಸೂಚನೆಯನ್ನು ಜನಸಂಘದ ಸಂಘದ ಕಾರ್ಯದರ್ಶಿಯವರು ಸಭೆಯ ಮುಂದಿಟ್ಟರು. ಇದು ಏಕಾಭಿಪ್ರಾಯದಿಂದ ಪಾಸಾಯಿತು.

3. ಕೊಡಗಿಗೆ ಪೂರ್ಣ ಜವಾಬ್ದಾರಿ ಸರ್ಕಾರವನ್ನು ಕೊಡುವ ಏರ್ಪಾಡು ಕೂಡಲೇ ಮಾಡಬೇಕೆಂಬ ಗೊತ್ತುವಳಿಯನ್ನು ಸೂಚಿಸಿ ಶ್ರೀ ಪಟ್ಟಮಂಡ ಬೆಳ್ಯಪ್ಪನವರು ಚಿಕ್ಕ ಭಾಷಣ ಮಾಡಿದ ಮೇಲೆ ಠರಾವು ವಿರೋಧವಿಲ್ಲದೆ ಮಂಜೂರಾಯಿತು. ಮೀಟಿಂಗಿನ ಅಧ್ಯಕ್ಷರಿಗೂ, ಜನಸಂಘದ ಸಂಘದ ಮಂದಿಗೂ, ಸಭಿಕರಿಗೂ ವಂದನೆಗಳೊಂದಿಗೆ ಸಭೆಯು ಮುಕ್ತಾಯವಾಯಿತು.

ಮೈಸೂರು ದೇಶ.

ಮೈಸೂರು ಕುದುರೆ ಜೂಜುಗಳು ಈ ತಾ 21 ಮತ್ತು 28 ರಲ್ಲಿ ನಡೆಯುವುವು.

ಈ ವಾರ ಮೈಸೂರಿನಲ್ಲಿ ರೂ. 130 ರಿಂದ 133 ರ ವರೆಗೆ ಕಾಫಿ ಖಂಡಿಗೆ ಬೆಲೆ ಇರುವುದೆಂದೂ ಮಣಿಕ್ಕೆ ಮಣಕ್ಕೆ ರೂ. 34—35 ಬೆಲೆ ಇರುವುದೆಂದೂ ತಿಳಿಯುತ್ತೇವೆ.

ಮೈಸೂರಿನಲ್ಲಿ ಮಾರ್ಚಿ ತಾ. 1 ರಿಂದ ಸ್ಥಾಪಿಸಲ್ಪಡಲಿರುವ ಮುನ್ಸಿಫ್ ಕೋರ್ಟಿಗೆ ಮಿ. ಪುಟ್ಟವೀರ ಪ್ರಾಣಯ್ಯ ಬಿ. ಎ., ಬಿ. ಎಲ್. ರವರು ಮುನ್ಸಿಫರಾಗಿ ನೇಮಿಸಲ್ಪಟ್ಟಿರುವರು.

ಹಲವು ವರ್ಷಗಳಿಂದ ಪ್ರೆಸಿಡೆನ್ಸಿ ಕಾಲೇಜಿನಲ್ಲಿ ಲೆಕ್ಚರರಾಗಿದ್ದ ಮಿ. ಚೆನ್ನವೀರ ಅಪ್ಪಣ್ಣನವರು ಫೆಬ್ರವರಿ ವ್ಯಾರಂಭದಿಂದ ಕಾಫಿ ಗ್ರೋವರ್ಸ್ ಅಸೋಸಿಯೇಷನ್ನಿನವರ ಪ್ರೊಪಗಾಂಡಿಸ್ಟರಾಗಿ ನೇಮಿಸಲ್ಪಟ್ಟಿರುವರು.

ಮೈಸೂರು ವಿಶ್ವವಿದ್ಯಾನಿಲಯದ 8ನೇ ಪ್ರೈಸ್ ಡೇ ಕೆಲವು ದಿವಸಗಳ ಹಿಂದೆ ಶ್ರೀಸ್ವಾಮಿಗಳ ವಾಲಿ ಅಂಗರಕ್ಷಕ ದಳದವರು ಕಡಲಿ ಶೇಷರ್ಕೋರ್ಟಿನಲ್ಲಿ ಈ ತಾ. 11ರಂದ ಮೂರು ದಿವಸ ಪ್ರದರ್ಶನ ನಡೆಯಿತು.

ದಕ್ಷಿಣ ಕೆನರಾ, ಮಲಬಾರ್, ತಂಜಾವೂರು, ಕೊಚ್ಚಿ ಮತ್ತು ತಿರುವಾಂಕೂರು ಪ್ರದರ್ಶನವು ತಾ. 9 ಕ್ಕೆ ಗೋಖಲೆ ಹಾಲ್‌ನಲ್ಲಿ ಕೊನೆಗೊಂಡಿತು. ಆ ಪ್ರದರ್ಶನಗಳಲ್ಲಿ ಬಹು ಜನರು ಬಹುಮಾನಗಳನ್ನು ಪಡೆದರು. ಆ ದಿನವೇ ಹಂಚಿದರು.

ಮಿರ್ಜಾ ಪೇಟೆಯಲ್ಲಿ 111 ನಂಬರಿನಲ್ಲಿ ಇರುತ್ತಿದ್ದ ಪುಟ್ಟರಂಗ ಎಂಬುವನು ತಾ. 10 ರಲ್ಲಿ ರಾತ್ರಿ ಮನೆಯಲ್ಲಿ ಆಕಸ್ಮಾತ್ತಾಗಿ ಒಂದು ಕೋಣೆಗೆ ಬೆಂಕಿ ಬಿದ್ದು ಸುಟ್ಟು ಹೋಗಿ ಅಲ್ಲಿ ಮೃತನಾದನೆಂದು ವರ್ತಮಾನ.

ಈ ವಾರ ಬೆಂಗಳೂರಿನಲ್ಲಿ ನಡೆದ ಕೋಳಿ ಕಾಳಗ ಪಂದ್ಯದಲ್ಲಿ ಕೋಳಿಗಳು ಕೆಲಸ ಮಾಡುತ್ತಿದ್ದ 15 ವರ್ಷ ಪ್ರಾಯದ ಬಾಲಕನು ಆಕಸ್ಮಾತ್ ಕಾಲು ಜಾರಿ ಕೆರೆಯಲ್ಲಿ ಬಿದ್ದು ಮೃತಪಟ್ಟನೆಂದು ವರ್ತಮಾನ.

ವಿವಿಧ ಧರ್ಮ ಸಮ್ಮೇಳನ ಧರ್ಮ ಸ್ಥಳ ಇವರು ಸಂಸ್ಕೃತ ಪಂಡಿತರು ಮೈಸೂರಿನ ಸಂಸ್ಕೃತ ಪಾಠಶಾಲೆಯ ಶ್ರೀ ಒಬ್ಬ ಮನೆ ಅಕ್ಕರಾಮ ಶಾಸ್ತ್ರಿಗಳವರಿಗೆ ಅವರ ಅದ್ವೈತ ಮತದ ರೀತಿಯಿಂದ ಅಕ್ಷರ ಚಕ್ರ ಎಂಬ ಪ್ರಭಂದಕ್ಕೆ ಒಂದು ಸುವರ್ಣ ಪದಕವನ್ನು ಬಹುಮಾನವಾಗಿ ಕೊಟ್ಟಿರುವರೆಂದು ಸಂತೋಷಪಡುತ್ತೇವೆ.

ಕೊಡಗಿನ ಕಾಲೇಜಿನ ಹೆಡ್ ಮಾಸ್ಟರಾದ ಮಿ. ಸಿ. ಎ. ಬಸಪ್ಪನವರನ್ನು ವಿರಾಜಪೇಟೆ ಹೈಸ್ಕೂಲಿಗೆ, ಸೋಮವಾರಪೇಟೆಯಲ್ಲಿ ಅಸಿಸ್ಟೆಂಟ್ ಮಾಸ್ತರಾಗಿದ್ದ ಮಿ. ಎನ್. ಎಸ್. ಕಾಳಪ್ಪನವರನ್ನು ಕೊಡಗಿನ ಶಾಲೆಯ ಹೆಡ್ ಮಾಸ್ತರಾಗಿ ನಿಯಮಿಸಿ ಮಿ. ನಾಯುಡ ಬೆಂಗಪ್ಪನವರನ್ನು ಸೋಮವಾರಪೇಟೆ ಸ್ಕೂಲಿನ ಅಸಿಸ್ಟೆಂಟ್ ಮಾಸ್ತರಾಗಿಯೂ ನೇಮಿಸಲಾಗಿದೆ.

ಹಿಂದೂ ದೇಶ.

ಮಹಾತ್ಮ ಗಾಂಧಿಯವರು ಇದೇ ತಾ. 13 ರಲ್ಲಿ ದಿಲ್ಲಿಗೆ ಹೊರಡುವರೆಂದೂ ಅಲ್ಲಿ ಮುಸ್ಲಿಂ ಮುಖಂಡರೊಂದು ಸಭೆ ಸೇರಿ ಹೊಸ ರಾಜ್ಯಾಂಗವನ್ನು ಕುರಿತು ಸಮಾಲೋಚಿಸುವರೆಂದೂ ಪ್ರಕಟವಾಗಿದೆ.

ಅಹಮ್ಮದಾಬಾದಿನ ಕಾಟೇರಾವ ಮಿಲ್ಲಿನ ಮಾಲೀಕ ಸೇಟ್ ಕಸ್ತೂರ್ ಭಾಯ್ ಲಾಲಾ ಭಾಯಿಯವರು ಅಲ್ಲಿನ ಇಂಜಿನಿಯರಿಂಗ್ ಕಾಲೇಜಿನ ಸ್ಥಾಪನೆಗಾಗಿ 15 ಲಕ್ಷ ರೂಪಾಯಿಗಳ ದಾನ ಮಾಡಿರುವರು ಸ್ತುತ್ಯ.

ಗ್ವಾಲಿಯರ್ ಸಂಸ್ಥಾನದ ಸಿಪ್ರಿ ಎಂಬ ಗ್ರಾಮದಲ್ಲಿ ಠಾಕೂರ್ ರಘುವೀರ ಸಿಂಗ್ ಎಂಬುವರು ಪತ್ನಿ ಸುಮಾರು 60 ವರ್ಷದವಳು, ಮೃತನಾದ ಪತಿಯ ಚಿತೆಯಲ್ಲಿ ಸಹಗಮನ ಮಾಡಿದಳು. ಈ ಸಂಬಂಧ 3 ಜನರ ವಿಚಾರಣೆ ನಡೆದಿದೆ.

ಮಲಬಾರಿನ ಡಾಕ್ಟರ್ ಎಲಿಮೆಂಟರಿ ಶಾಲೆಗಳ ವಿದ್ಯಾರ್ಥಿಗಳಲ್ಲಿ ನಡೆದ ದಾನ್ಸ್ ಸ್ಪರ್ಧೆಯಲ್ಲಿ ಕಣ್ಣಾನೂರು ಬಾಲಿಕಾ ಶಾಲೆಯ ಮಾಧವಿ ಎಂಬ ಹರಿಜನ ಬಾಲಿಕೆ ಪ್ರಥಮ ಸ್ಥಾನವನ್ನು ಹೊಂದಿ, ಒಂದು ಬಂಗಾರದ ಮೆಡಲನ್ನು, ಬೆಳ್ಳಿಯ ಬಟ್ಟಲನ್ನೂ ಬಹುಮಾನವಾಗಿ ಪಡೆದಳು.

'ಜಾಂಬೂಸ್' ಎಂಬ ಒಂದು ಗುಜರಾಥಿ ವಾರಪತ್ರಿಕೆಯಲ್ಲಿ ಅಕ್ಷೇಪಕರವಾದುದೊಂದು ಲೇಖನವು ಪ್ರಕಟಿಸಲ್ಪಟ್ಟಿದೆ ಎಂಬ ಆರೋಪದ ಮೇಲೆ, ಬೊಂಬಾಯಿಯ ಚೀಫ್ ಪ್ರೆಸಿಡೆನ್ಸಿ ಮ್ಯಾಜಿಸ್ಟ್ರೇಟರು, ಆ ಪತ್ರದ ಸಂಪಾದಕರಿಗೆ 3 ತಿಂಗಳ ಕಠಿನ ಶಿಕ್ಷೆಯನ್ನೂ 300 ರೂಪಾಯಿಗಳ ಜುಲ್ಮಾನೆಯನ್ನೂ ವಿಧಿಸಿರುವರು.

ಕಲ್ಕತ್ತಾ, ಒಂದನೆ ಪೋಲೀಸಿನವರು ಕಳೆದ ವಾರ ದಿಢೀರ್ ಒಂದು ಸೇರಿದ ಸಿಟಿ ಆಫ್ ಕ್ಯಾಸ್ಸೆ ಡಾಕ್ ಎಂಬ ಹಡಗನ್ನು ಶೋಧಿಸಿ ಮಾವಿ ಸಿಕ್ಕಿದ ಸ್ಟೀಮರ್ ದೇಶದಲ್ಲಿ ತಯಾರಾದ 40 ಬಂದೂಕಗಳನ್ನೂ, 3,000 ತೋಟಾಗಳನ್ನೂ ಸ್ವಾಧೀನಪಡಿಸಿಕೊಂಡರು. ಆ ಹಡಗಿನ ಅಧಿಕಾರಿ ವಿಚಾರಣೆಗಾಗಿ [illegible]

ಪಂಡಿತ ಜವಾಹರಲಾಲರು ಲಂಡನಿಗೆ ಚಿಕಿತ್ಸೆ ಅಲ್ಲಿ ಅತ್ಯಂತ ಪ್ರೇಮಪೂರ್ವಕವಾದ ಸ್ವಾಗತ ದೊರೆಯಿತು. ಗಾಂಧಿಯವರ ಸಂದರ್ಶನದ ಬಳಿಕ ಇಷ್ಟು ದೊಡ್ಡ ಹಿಂದೀಯರ ಗುಂಪು ಎಂದೂ ಅಲ್ಲಿ ನೆರೆದಿರಲಿಲ್ಲ. ಪಂಡಿತರು ಇಂಡಿಯಾ ಲೀಗಿನ ಕುರಿತು ಒಂದು ಭಾಷಣ ಕೊಟ್ಟು, ಇಂಡಿಯಾದ ಸಮಸ್ಯೆಗಳ ಕುರಿತಾದ ಹಲವು ವ್ಯಕ್ತಿಗಳಿಗೆ ಸವಿವರ ಉತ್ತರ ಕೊಟ್ಟಿರುವರು.

ಕೊಚ್ಚಿನ್ ಸಂಸ್ಥಾನದಲ್ಲಿ ಪ್ರಕಟವಾಗುವ 'ವಿಟಲ್' ಎಂಬ ಪತ್ರಿಕೆಯಲ್ಲಿ ಪ್ರಕಟವಾದ ಒಂದು ಲೇಖನವು ರಾಜದ್ರೋಹಕರವಾಗಿದ್ದಿತೆಂಬ ಆಪಾದನೆಯ ಮೇಲೆ ಮ್ಯಾಜಿಸ್ಟ್ರೇಟರು ಸಂಪಾದಕರಾದ ಮಿ. ಸನ್ನು ಮೇನನ್ ಪ್ರಿಂಟರ್ ರಾಮಕೃಷ್ಣನ್ ಮತ್ತು ಲೇಖನ ಬರೆದ ಪಿ. ರಾಮಚಂದ್ರನ್ ಇವರು ಮೂವರಿಗೂ ತಲಾ ನಾಲ್ಕು ತಿಂಗಳ ಕಠಿನ ಸಜಾ ಶಿಕ್ಷೆಯನ್ನು ವಿಧಿಸಿದ್ದಾರೆ.

ಹಲವು ದಿನಗಳಿಂದ, ಲಕ್ನೋ ಪ್ರೈಸಿನಲ್ಲಿ ಉಪವಾಸ ವ್ರತವಾಚರಿಸುತ್ತಿರುವ ಜೋಗೇಶ್ ಚಂದ್ರ ಚಟರ್ಜಿ ಎಂಬ ರಾಜಕೀಯ ಖೈದಿಯ ವಿಷಯದಲ್ಲಿ ಸಹಾನುಭೂತಿಯನ್ನು ತೋರಿಸಲು, ಲಕ್ನೋ ಕಾಂಗ್ರೆಸ್ ಮಂದಿ ಒಂದು ಮೆರವಣಿಗೆಯನ್ನೂ, ಸಾರ್ವಜನಿಕ ಸಭೆಯನ್ನೂ ನಡೆಸಿದರು. ಉಪವಾಸ ನಿಲ್ಲಿಸಬೇಕೆಂದು ಸಭೆಗೂ ಆ ಖೈದಿಯ ಕೋರಿಕೆಗಳನ್ನು ಮನ್ನಿಸುವಂತೆ ಸರಕಾರವನ್ನು ಪ್ರಾರ್ಥಿಸಿಕೊಂಡಿರುವರು.

ಎಸೆಂಬ್ಲಿ ಮೆಂಬರರಾದ ಪಂಡಿತ ಕೃಷ್ಣಕಾಂತ ಮಾಳವ್ಯರು ಎಸೆಂಬ್ಲಿಯಲ್ಲಿ ಕೊಟ್ಟ ಭಾಷಣವೊಂದನ್ನು—ಪತ್ರಿಕೆಗಳು ಪ್ರಕಟಿಸಬಾರದೆಂಬ ಎಚ್ಚರಿಕೆ ಕೊಟ್ಟಿದ್ದರೂ—'ಅಭ್ಯುದಯ' ಪತ್ರಿಕೆ ಪ್ರಕಟಿಸಿ ದ್ದರಿಂದ ಆ ಪತ್ರಿಕೆಯಿಂದ 2500 ರೂಪಾಯಿಗಳ ಭದ್ರತೆ ಕೇಳಲಾಗಿದೆ. ಈ ಸಂಬಂಧ ಪಂಡಿತರು ತಾವೇ ಆ ಭದ್ರತೆ ಕಟ್ಟಿ, ಈ ಕುರಿತು ನ್ಯಾಯಸ್ಥಾನದಲ್ಲಿ ಇದರ ನ್ಯಾಯವನ್ನು ಪರೀಕ್ಷಿಸಿಕೊಳ್ಳಲು ಆಲೋಚಿಸುವರೆಂದು ತಿಳಿಯಬರುತ್ತದೆ.

ಲಕ್ನೋ ಕಾಂಗ್ರೆಸ್ಸಿನ ಸಮಯದ ನಿಕ್ಕಿ ಪ್ರದರ್ಶನಕ್ಕಾಗಿ ಪೂರ್ವ ಸಿದ್ಧತೆಯು, ಅನೇಕ ಏರ್ಪಾಡುಗಳು ನಡೆದಿವೆ. ಪ್ರದರ್ಶನಗಳಲ್ಲಿ ಅತಿ ದೊಡ್ಡದೆಂದು ಹೇಳಲಾಗುತ್ತಿದೆ. ಇದರ ವಿಸ್ತಾರ 1230 ನೇ ಹುಲ್ಲು ಎಕರೆ 10 ಸಾವಿರ ಬೆಲೆ ಮತ್ತು 14 ಮಂದಿ ಇರುವುದಾಗಿ ತಿಳಿಸಲಾಗಿದೆ. ಇನ್ನೊಂದು ಕೈ. ಪಿ. ರನ್ ಕಲಕೂರದ ಪುಸ್ತಕದ ಒಂದು ಪುಸ್ತಕ

ವಿದೇಶ.

ಇಂಗ್ಲೆಂಡಿನಲ್ಲಿ ಬ್ರಿಟಿಷರ ವ್ಯಾಪಾರ ವರ್ಷ ವರ್ಷ ಕಡಿಮೆಯಾಗುತ್ತಿದೆ. ಜಪಾನರು ಜರ್ಮನರು; ಅವರು ಅಲ್ಲಿ ಬ್ರಿಟಿಷರ ವ್ಯಾಪಾರವನ್ನು ಹೊಡೆಯುತ್ತಿದ್ದಾರೆ.

ಲಂಡನ್ ವಿಶ್ವವಿದ್ಯಾಲಯದ ಹೂವನ್ನು ಗ್ರಾಮಕರಿಂದ ಸ್ವೀಕರಿಸಿ ಬೆಳೆಸುವ ಪಾಕ್ಟರಿ ಕಲೆಯ ಒಂದು ಹೊಸ ಯಂತ್ರಸಾಧನ ಸಿದ್ಧವಾಗಿದೆಯೆಂದು ಬರುತ್ತದೆ.

ಟ್ರಾನ್ಸ್ ವಾಲ್ ಪ್ರಾಂತ್ಯದಲ್ಲಿ ಫೆಬ್ರವರಿ ತಾ. 11 ರಂದು ಮುಂಜಾನೆ ಗಾಳಿ ತೆಂಗಿನ ಕಾಯಷ್ಟು ದೊಡ್ಡವು ಅರ್ಧ ಗಂಟೆಯಲ್ಲಿ ಬಿದ್ದವೆ. ಒಟ್ಟಿಗೆ ಅಲ್ಲಿ 15 ನಿಮಿಷಗಳಲ್ಲಿ 15 ಇಂಚು ಮಳೆ. 19 ಮಂದಿ ನಿವಾಸಿಗಳು ಸತ್ತಿದ್ದಾರೆಂದು ವಾರ್ತೆ.

ಗ್ರಾಮಫೋನಿನಂತೆ ಮಾತಾಡುವ ಪತ್ರಿಕೆಗಳು. ಇದು ಅರ್ಜೆಂಟೈನಿನ ಒಬ್ಬ ಇಂಜಿನಿಯರನ 9 ವರ್ಷದ ಅವಿಶ್ರಾಂತ ಶ್ರಮದ ಫಲ. ದಕ್ಷಿಣ ಅಮೇರಿಕದ ಕೆಲವು ಪತ್ರಿಕೆಗಳಾಗಲೇ ಹೀಗೆ ಮಾತಾಡಲು ಪ್ರಾರಂಭಿಸಿವೆ. ಮಾತಾಡುವ ಈ ಪತ್ರಿಕೆಗಳ ರೆಕಾರ್ಡುಗಳೂ ಕಾಗದವೇ. ಅದರ ಆಕಾರ 17 ಮತ್ತು 20 ಅಂಗುಲ. ಇದರಲ್ಲಿ ಕಿರಣಗಳ ಪ್ರಯೋಗವಾಗುವುದಿದೆ.

ಯುದ್ಧ ವಾರ್ತೆ.

ಫೆಬ್ರವರಿ ತಾ. 9.

ಚಕ್ರವರ್ತಿಗಳನ್ನು ಕೊಲ್ಲಲು ಎತ್ನ ಪ್ರಯತ್ನ

ಚಕ್ರವರ್ತಿಗಳನ್ನು ದೆಸ್ಸಿಯಲ್ಲಿ ಧ್ವಂಸ ಮಾಡಬೇಕೆಂದು ಇಟಲಿಯ ಏಳು ವಿಮಾನಗಳು ದೆಸ್ಸಿಯ ಮೇಲೆ ಒಂದು ಗಂಟೆಯ ವರೆಗೆ ಬಾಂಬುಗಳನ್ನು ಸುರಿದವು. ಚಕ್ರವರ್ತಿಗಳು ಧೈರ್ಯದಿಂದ ಬಳಕೊಳ್ಳದ ಅರಮನೆಯ ಹೊರಗೆ ನಿಂತು ಅವುಗಳಿಗೆ ಗುಂಡು ಹೊಡೆಸುತ್ತಿದ್ದರು. ಅನೇಕ ವಿಮಾನಗಳಿಗೆ ಕೋವಿ ಗುಂಡು ತಾಗಿರುವುದಾದರೂ ಒಂದೂ ನೆಲಕ್ಕುರುಳಿದುದಿಲ್ಲ.

ಫೆಬ್ರವರಿ ತಾ. 10.

ದೆಸ್ಸಿ ಬಾಂಬಿನ ಪರಿಣಾಮ,

ಸಿಸ್ಟರಿಯ ಬಾಂಬಿನಿಂದ ಇಬ್ಬರು ಮೃತರಾದರು. ನಾಲ್ಕು ಮಂದಿ ಜಖಂಗೊಂಡರು. ಅಲ್ಲದೆ ಅನೇಕ ಗುಡಿಸಲುಗಳು ಬೆಂಕಿ ಹತ್ತಿ, ನಾಶವಾದವು.

ಮುಕಾಲೆಯನ್ನು ಹಿಡಿಯುವ ಪ್ರಯತ್ನ.

ಮುಕಾಲೆಯನ್ನು ಹಿಡಿವ ಬಲ ರಾಸ್ ಸಮೀಪದ ದಳ ನ್ನ ಮುಂದೆ [illegible]

ಗಳಿಂದ ಆರು ಅಡಿ ಎತ್ತರದ ಬೇಲಿಗಳ ಮೂರು ಸಾಲುಗಳನ್ನು ಹೊಂದಿರುವುದರಿಂದ ಅಬಿಸೀನಿಯಾ ಸೈನಿಕರಿಗೆ ಫಲ್ಲಿಸಿ ನುಗ್ಗಿಕೊಳ್ಳಲು ಸಾಧ್ಯವಾಗಲಿಲ್ಲ. ಆದರೂ ಅಬಿಸೀನಿಯರು ಬೇಲಿಯ ಮೇಲಿಂದ ಹತ್ತಲು ಪ್ರಯತ್ನಿಸಲು ಮೆಷಿನ್‌ಗನ್ನುಗಳ ಗುಂಡಿನ ಹೊಡೆತಕ್ಕೆ ಸಿಕ್ಕಿ ಹಿಂದಿರುಗಬೇಕಾಯಿತು.

ಫೆಬ್ರವರಿ ತಾ. 1.

ಕೊರಂ ಮೇಲೆ ಬಾಂಬು.

ದೆಸ್ಸಿಯಲ್ಲಿ ಚಕ್ರವರ್ತಿಗಳಿರುವರೆಂದೂ, ಅಲ್ಲಿ ಸುತ್ತಮುತ್ತಲಿನ ಹಳ್ಳಿಗಳಲ್ಲಿ ಸೈನ್ಯ ಸಂಗ್ರಹವಾಗುತ್ತದೆಂದೂ, ಆ ಪ್ರದೇಶವನ್ನೆಲ್ಲ ಇಟಲಿಯವರು ಬಾಂಬಿನಿಂದ ಧ್ವಂಸಗೈಯುತ್ತಲಿರುವರು. ತಾ. 9 ರಲ್ಲಿ ಕೊರೆಂ, ಅಶಾಂಗಿ ಮತ್ತು ಮಕೆಲೆ ಎಂಬ ಗ್ರಾಮಗಳ ಮೇಲೆ ಬಾಂಬುಗಳನ್ನು ಸುರಿಸುವರು. ಆದರೆ ಹೆಚ್ಚು ಹಾನಿಯಾಗಿರುವುದಿಲ್ಲ.

ಒಗಾಡೆನಿನಲ್ಲಿ ಕದನ.

ನೆಸ್ಸಾಬೆಸ್ಸೆ ಎಂಬಲ್ಲಿಂದ 50 ಮೈಲು ದಕ್ಷಿಣದಲ್ಲಿರುವ ಕರಾಟಿಯಿಂದ ಇಟಲಿಯನರನ್ನು ಅಬಿಸೀನಿಯರು ಓಡಿಸಿದರು. ಇಕ್ಕೆಡೆಗಳಲ್ಲೂ ಅಪರಿಮಿತ ಪ್ರಾಣಹಾನಿಯಾಗಿರುವದು. ಆದರೂ ಇಟಲಿಯವರು ಹಿಮ್ಮೆಟ್ಟಬೇಕಾಯಿತು.

ಇಟಲಿಯ ಸೈನ್ಯ ರವಾನೆ.

ಜನವರಿ 25 ರಿಂದ ಫೆಬ್ರವರಿ 7 ರ ವರೆಗೆ ಸುಮಾರು 30,000 ಸೈನ್ಯವು ಇಟಲಿಯಿಂದ ಅಬಿಸೀನಿಯಾದ ಕಡೆ ಬಂದಿದೆ. ಈ ಸೈನ್ಯದೊಡನೆ 2300 ಟನ್ನು ಗುರುತಿನ ಸಾಮಗ್ರಿಗಳೂ 4000 ಟನ್ನು ಎಂಜಿನುಗಳೂ ಬಂದಿವೆ.

ಹಾಗೆಯೇ 7000 ಮಂದಿ ಇಟಲಿ ಸೈನಿಕರು ರೋಗಪೀಡಿತರಾಗಿ ಇಟಲಿಗೆ ಹಿಂತಿರುಗಿರುವರು.

ಇಟಲಿಯ ಪ್ರಕಟಣೆ.

ಕಳೆದ ಜನವರಿ ತಿಂಗಳಲ್ಲಿ ಇಟಲಿಯ ಬಿಳಿ ಸೈನಿಕರಲ್ಲಿ 241 ಮಂದಿ ಯುದ್ಧದಲ್ಲಿ ಮಡಿದರೆಂದೂ, 4 ಮಂದಿ ಘಾಯಗೊಂಡು ಮಡಿದರೆಂದೂ, ರೋಗದಿಂದ 92 ಮಂದಿ ಮೃತರಾದರೆಂದೂ ಮೂವರು ಕಾಣೆಯಾಗಿರುವರೆಂದೂ ಇಟಲಿಯ ಪ್ರಕಟಣೆಯೊಂದು ತಿಳಿಸುತ್ತದೆ. ಈ ವರೆಗೆ ಇಟಲಿಯ ಬಿಳಿ ಸೈನಿಕರು 814 ಮಂದಿ ಸತ್ತಿರುವರಂತೆ.

ಜಮೀನ್ದಾರರ ಸಂಘದ ಕಮಿಟಿ ಮೀಟಿಂಗು.

ಈ ಸಂಘದ ಕಾರ್ಯಕಾರಿ ಮಂಡಳಿಯ ಮೀಟಿಂಗು ಈ ತಾ. 9 ರಲ್ಲಿ ಗೋಣಿಕೊಪ್ಪಲಲ್ಲಿ ನಡೆಯಿತು. ಸಂಘದ ಪ್ರೆಸಿಡೆಂಟರಾದ ಮಿ. ಸಿ. ಬಿ. ಬೆಳ್ಯಪ್ಪನವರು ಅಧ್ಯಕ್ಷರಾಗಿದ್ದರು. ಈ ಕೆಳಗಿನ ವಿಷಯಗಳು ಚರ್ಚಿಸಿ ತೀರ್ಮಾನಿಸಲ್ಪಟ್ಟವು.

1 'ಕೊಡಗಿನ ಅರ್‌ಬಿಡೀಸು' ಜಾಗದಲ್ಲಿರುವ ಗಂಧದ ಮರಗಳಿಗೆ ಬೇಲಿಯನ್ನು ಕೊಡಲು ಮಾಡಿರುವ ಕರಡು ನಿಬಂಧನೆಗಳನ್ನು ತಿದ್ದುಪಡಿ ಮಾಡುವ ವಿಷಯ ಕಮಿಷನರರೊಂದಿಗೆ ಸಂಭಾಷಣೆ ನಡೆಸಲು ಈ ಸಂಘದ ಪರವಾಗಿ ಮೈಗಳಾದ ಬಿ. ಸಿ. ಕಾರ್ಯಪ್ಪನವರು, ನಿಡ್ಯದ ಸುಬ್ಬಣಯ್ಯನವರು, ಯುಸ್. ಯುನ್. ರಾಮಶೆಟ್ಟಿಯವರು, ಕೂಡಂಡ ಚಂಗಪ್ಪನವರು ಮತ್ತು ಬಿದ್ದಂಡ ಕಾರ್ಯಪ್ಪನವರು ಸೇರಿ ಕಮಿಷನರವಲ್ಲಿಗೆ ಡೆಪ್ಯುಟೇಶನ್ ಹೋಗಬೇಕೆಂದು ತೀರ್ಮಾನಿಸಲಾಯಿತು.

2. 'ಮೇಲ್ಕಂಡ ನಿಬಂಧನೆಗಳನ್ನು ತಿದ್ದುಪಡಿ ಮಾಡಲು ಸರಕಾರದವರು ಉದ್ಯೋಗಸ್ಥರಲ್ಲದ ಮೆಂಬರುಗಳ ಬಹುಮತವಿರುವ ಒಂದು ಕಮಿಟಿಯನ್ನು ನೇಮಿಸಬೇಕೆಂತಲೂ, ಆ ಕಮಿಟಿಯಲ್ಲಿ ಸಂಘದ ಪರವಾಗಿ ಡೆಪ್ಯುಟೇಶನ್ ಹೋಗುವ ಮಹನೀಯರುಗಳನ್ನೇ ಜನರ ಪ್ರತಿನಿಧಿ ಮೆಂಬರುಗಳಾಗಿ ಸೇರಿಸಿಕೊಳ್ಳಬೇಕೆಂತಲೂ ಡೆಪ್ಯುಟೇಶನಿನವರು ಕಮಿಷನರವರನ್ನು ಕೇಳಿಕೊಳ್ಳುವಂತೆ ನಿಶ್ಚಯಿಸಲಾಯಿತು.'

3. 'ಕೊಡಗಿನ ಕಾಫಿ, ಭೂಮಿಗಿರವಿ ಬ್ಯಾಂಕು ಮತ್ತು ರಾಜಕೀಯ ಸುಧಾರಣೆಗಳನ್ನು ಕುರಿತು ಸಂಘದ ಅಧ್ಯಕ್ಷರು ಮತ್ತು ಕಾರ್ಯದರ್ಶಿಯವರು ದೇಶದ ಹಲವು ಭಾಗಗಳಲ್ಲಿ ನಡೆಸುತ್ತಿರುವ ಮೀಟಿಂಗುಗಳ ಕಾರ್ಯಕ್ಕೆ ಕಮಿಟಿಯವರು ಸಮ್ಮತಿಯನ್ನೀಯುವಂತೆ ತೀರ್ಮಾನಿಸಲಾಯಿತು.

ಸಿ. ಬಿ. ಬೆಳ್ಯಪ್ಪ,
(ಅಧ್ಯಕ್ಷರು)

ನಾಪೋಕ್ಲು ಗವರ್ನಮೆಂಟು ಮೋಡೆಲ್ ಶಾಲೆಯ ಮಣಿಮಹೋತ್ಸವದ ಕಾಣಿಕೆ.

ಕಥೆ ಮೊದಲಾದ ವಿವಿಧ ಲೇಖನಗಳಿಂದಲೂ ಶಾಲೆಯ ಚಟುವಟಿಕೆಗಳ ವಿಷಯಗಳಿಂದಲೂ ಕೂಡಿದ ಪುಸ್ತಕ. ಕೊಡಗಿನ ಪ್ರತಿಯೊಬ್ಬ ಮನೆಯಲ್ಲಿಯೂ ಇರತಕ್ಕ ಪುಸ್ತಕ.

ಅಚ್ಚಾದುದು ಪುಸ್ತಕ. ಬೆಲೆ ಆಣೆ 0—2—0 ಮಾತ್ರ.

ಮಾರ್ಚಿ ಕಳೆದು ಉಳಿಕೆಯಾದ ಹಣವೆಲ್ಲವೂ ಶಾಲೆಯ ಬಡ ಹುಡುಗರ ಫಂಡಿಗೆ ಸೇರುತ್ತದೆ.

ಪುಸ್ತಕ ದೊರೆಯುವ ಸ್ಥಳ:—

ಕಾರ್ಯದರ್ಶಿ, ಬಾಲಕರ ಸಹಕಾರ ಸ್ಟೋರ್ಸ್, ಲಿಮಿಟೆಡ್, ನಾಪೋಕ್ಲು.

ಏಜೆಂಟರು, 'ವಿಶ್ವಕರ್ನಾಟಕ,' ಮಡಿಕೇರಿ.

NOTICE.

Mr. C. P. Appachu has been appointed by the Coffee Growers Association of India to recruit members (both full and associate) for the association.

Sunticoppa,
1–2–1936.

W. A. DAVIES
(Secretary)

ಬೇಕಾಗಿದ್ದಾರೆ.

'ಕೊಡಗು' ಪತ್ರಿಕೆಯ ಚಂದಾ ಹಣವನ್ನು ವಸೂಲು ಮಾಡಲು ... ಉತ್ತಮ ... ಕೆಲಸ ... ನಮಗೆ ಬರೆಯಿರಿ.

ಮ್ಯಾನೇಜರು,
"ಕೊಡಗು" ಆಫೀಸು.

ಡಾಕ್ಟರ್ ಮೋತಮ್ಮಾಸ್ ಎಂ ಪ್ರಭಾಕರ್.

ದಂತ ವೈದ್ಯರು.

ಗೀತಾಂಜಲಿ ಬಂಗ್ಲೆ.

(ಪೋಸ್ಟಾಫೀಸು ಎದುರುಗಡೆ)

ಕೆಟ್ಟ ಹಲ್ಲು ಮುಂತಾದವುಗಳನ್ನು ಶೀಘ್ರವಾಗಿ ಗುಣಪಡಿಸುವ ... ಕೃತಕ ಹಲ್ಲುಗಳನ್ನು ... ವಿವರ ... [52–17]

... ವರ್ಷಗಳಿಂದ ಅನುಭವದಿಂದ ಪ್ರಖ್ಯಾತಿ ಹೊಂದಿದ

ಕರ್ಕಿ ಕಂಪನಿ

ಜ್ವರದ ಗುಳಿಗೆಗಳು.

ಚಳಿಜ್ವರ, ಚಾತುರ್ಥಿ ಜ್ವರ, ದಿನಬಿಟ್ಟು ದಿನ ಬರುವ ಜ್ವರ, ಮಲೇರಿಯಾ ಜ್ವರ ಇತ್ಯಾದಿ ಜ್ವರಗಳ ... ಬಾಟ್ಲಿಗೆ ... ಬರೆದು ತರಿಸಿಕೊಳ್ಳಿ.

ಗಣೇಶ ರಾಮಚಂದ್ರ ಕರ್ಕಿ,
(25–19) ಮತ್ತು ಕಂಪನಿ,
ಗಿರಗಾಂವ, ಮುಂಬಯಿ.

HIROMANI NARAYANACHARYA

Choukhamba Benares City

ಶಾಸ್ತ್ರಿಗಳೇ, ಪೂರ್ವಕರು ಆರೋಗ್ಯ ... ರಿದ್ದರು? ... ಆರೋಗ್ಯ ... ಬುದ್ಧಿಶಕ್ತಿ, ವಿದ್ಯಾಭ್ಯಾಸ ... ರುದ್ರಾಕ್ಷಿ ... ನಾರಾಯಣಾಚಾರ್ಯ ... ರುದ್ರಾಕ್ಷಿ ...

1 ಮುಖ ರುದ್ರಾಕ್ಷಿ 1ಕ್ಕೆ ರೂ. 25 ... 100 ರುದ್ರಾಕ್ಷಿಗಳಕ್ಕೆ ... ರೂ. 25 ... ರೂ. 50 ... 3–4–5–6–7–8 ಮುಖಗಳ ... 10, ... 9–10–11 ಮುಖಗಳ ... 12–13, 14 ಮುಖದ ...

ಶಿರೋಮಣಿ ನಾರಾಯಣಾಚಾರ್ಯ,
52–26 ಚೌಖಂಬಾ ಬನಾರಸ್, (ಯು.ಪಿ.)

ಗುಂಡು ಹೊಡೆಯುವ ಶಸ್ತ್ರಗಳು.

ಉಪಯುಕ್ತ ಸೂಚನೆಗಳು.

ಶಿಕಾರಿಗಳಿಗೆ:— ನಮ್ಮ ಕೋವಿ ಮತ್ತು ತೋಟಾಗಳು ... (Our arms and ammunition GUIDE 3) ಇದರಲ್ಲಿ ಗುಂಡು ಹೊಡೆಯುವ ... ಉಪಯುಕ್ತ ಸೂಚನೆಗಳಿವೆ.

Goolamhusain Allibhoy & Sons, Ltd.,

26–19 210, Abdulrehman Street, BOMBAY 3.

ಧಾತುಪುಷ್ಟಿ ಲೇಹ

ಸ್ವರ್ಣ ಕಲ್ಪದ ಸಾಲಾವಿ ... ಮಿಶ್ರಿತ.

ಇದು ಬಲಹೀನರಿಗೆ ಅದ್ಭುತವಾದ ಶಕ್ತಿವರ್ಧಕ ರಸಾಯನ ... ಧಾತು ... ಮುಂತಾದವುಗಳನ್ನು ... ಶಕ್ತಿಯನ್ನೂ ... ವೀರ್ಯ ವೃದ್ಧಿಯನ್ನು ... ಶರೀರಕ್ಕೆ ಆರೋಗ್ಯವನ್ನು, ದಿವ್ಯ ಶಕ್ತಿಯನ್ನು, ಕಾಂತಿಯನ್ನು ಉಂಟುಮಾಡುವುದು.
ಡಬ್ಬಿ 1ರ ರೂ. 2–8–0 3ಕ್ಕೆ ರೂ. 7–0–0

ಮಲೇರಿಯಾ ನಿವಾರಿಣಿ.

... ಜ್ವರ, ... ಜ್ವರ, ಪುರಾಣ ಜ್ವರ, ... ಜ್ವರ, ... ಜ್ವರ, ಕಫ ... ಮುಂತಾದವುಗಳನ್ನು ... ಶಕ್ತಿಯನ್ನು ಉಂಟುಮಾಡುವುದು.
ಬಾಟ್ಲಿ 1ರ ರೂ. 1–8–0 ಸಣ್ಣ ಬಾಟ್ಲಿಗೆ 0–13–0.

ಅಶೋಕಾರಿಷ್ಟ ಮತ್ತು ಸೂತ್ರ

ಇದು ಸ್ತ್ರೀಯರಿಗೆ ಉತ್ತಮವಾದ ಟಾನಿಕ್. ... ಮುಟ್ಟು ... ಗರ್ಭಪಾತ ... ಸ್ತ್ರೀಯರಿಗೆ ಸಂಬಂಧಪಟ್ಟ ಇತರ ಎಲ್ಲಾ ರೋಗಗಳನ್ನು ... ಸೌಂದರ್ಯವನ್ನು ... ಉಂಟುಮಾಡುತ್ತದೆ. ಬಾಟ್ಲಿ 1ರ ರೂ. 2–4–0

ರಕ್ತಶೋಧಕ.

ದೇಹದೊಳಗಿನ ರಕ್ತವು ಕೆಟ್ಟುಹೋದ ... ಗುಣ ... ಬಾಟ್ಲಿ 1ರ ರೂ. 1–2–0, 3 ಬಾಟ್ಲಿಗಳಿಗೆ 3–4–0.

ಕೆಟಲಾಗ ಬರೆದು ... ರೋಗಕ್ಕೆ ತಕ್ಕದಾದ ಔಷಧ ...

ಎಂ. ಗಣಪತಿ, ಎಂಡ್ ಸನ್ಸ್, ಆಯುರ್ವೇದಿಕ್ ಫಿಜಿಸಿಯನ್ಸ್, ರಥಬೀದಿ, ಮಂಗಳೂರು.

(1) ... ಮಹದೇವಪೇಟೆ, ಮಡಿಕೇರಿ (ಕೊಡಗು).
(52–31) (2) ... ಸುಂಟಿಕೊಪ್ಪ.

ಎರಡು ಕೆಲಸಕ್ಕೊಂದೇ ಸಾಬೂನು

"ಮೈಸೂರು ಗಂಧದ ಸಾಬೂನು."

ಈ ಸಾಬೂನು ಸಾಬೂನಿನಂತೆ ಚರ್ಮವನ್ನು ಶುಭ್ರಗೊಳಿಸುವುದು ಮಾತ್ರವಲ್ಲ, ಹಂದಣಿಗೆಯನ್ನೂ ಮಾಡುತ್ತದೆ, ಯಾರು ಯಾರು ತಮ್ಮ ಆರೋಗ್ಯದ ಕಡೆ ಗಮನವಿರುವರೋ ಯಾರು ಯಾರು ತಮ್ಮ

ಚರ್ಮವನ್ನು ಎಚ್ಚರಿಕೆಯಿಂದ ನೋಡುವರೋ ಅವರೆಲ್ಲರೂ ಉಪಯೋಗಿಸುವುದು ಮೈಸೂರು ಗಂಧದ ಸಾಬೂನು.

ಎಲ್ಲಾ ಅಂಗಡಿಗಳಲ್ಲೂ ಸಿಕ್ಕುತ್ತವೆ.

ಗವರ್ನಮೆಂಟ್ ಸೋಪ್ ಫ್ಯಾಕ್ಟರಿ.

ಬೆಂಗಳೂರು.

52–50



ಪಂಡಿತ ತಾರಾನಾಥರ ಡೈರಿ.

(ಸಂಗ್ರಹಕಾರರ – ಪತ್ರಿಕೋದ್ಯಮ ಶಾಲೆಯವರು.

[illegible]

೧.

[illegible]

೨.

[illegible] (The result is the Phenomena of senses lost the natural restraint over them found in the lower Kingdom of nature and have not yet developed the Scientific ones incumbent on man) [illegible]

ಲಕ್ನೋವಿಗೆ ಸ್ವಯಂ ಸೇವಕರ ಅಗತ್ಯವಿಲ್ಲ.

(ಡಾ. ಯನ್. ಯಸ್. ಹರ್ಡೀಕರ್‌ರವರಿಂದ)

ಸ್ವಯಂ ಸೇವಕರಾಗಿ ಅನೇಕ ಸಲ ಕಾರ್ಯನಿರ್ವಹಿಸಿದ ನನ್ನ ಅನೇಕ ಸ್ನೇಹಿತರಿಂದ ಲಕ್ನೋ ಕಾಂಗ್ರೆಸ ಅಧಿವೇಶನ ಸಮಯಕ್ಕೆ ಅವರನ್ನು ಸ್ವಯಂ ಸೇವಕರನ್ನಾಗಿ ಲಕ್ನೋವಿಗೆ ಕರೆದುಕೊಂಡು ಹೋಗಬೇಕೆಂದು ಬರೆದ ಪತ್ರಗಳು [illegible]

[illegible]

EMPIRE OF INDIA LIFE ASSURANCE CO:, LTD.

ESTD. 1897.

TEN YEARS' PROGRESS.

	1925 Rs.	1935 Rs.
Income	45,50,127	73,28,467
New Assurances	78,07,000	1,47,57,880
Total Assets	2,46,08,120	4,50,03,372
Assurances in force	6,95,93,793	11,56,12,828

Form of proposal and other particulars will be sent on Application.

Head office.— Empire of India Life Building, BOMAY. 52—12 Branch Office:— 152/3—Commercial Street, BANGALORE.

ಪ್ರಸಿದ್ಧ ಔಷಧಗಳು.

ಮಲೇರಿಯಾಕ್ಕೆ ಒಂದೇ ಸಿದ್ಧೌಷಧ.

[illegible]

“ನವರತ್ನ ಅಲ್ಯಾರಿಯಾ”

[illegible]

ಇದರಲ್ಲಿರುವ ಔಷಧಗಳು.

1. Andrographis Paniculate
2. Cocculas Cordifolius
3. Berriberies Aristata
4. Vernonis Cinerarea
5. Evolvulas Alsinoides
6. Dashmoola
7. Aconitum Heterophylum
8. Alstonia Scholaris

[illegible]

52—37 [illegible]

Reg. No. M. 1550 | 14—2—1936

KODAGU

IF NOT delivered please return to "KODAGU" OFFICE, MERCARA.

ಕೊಡಗು

ಪ್ರತಿ ಶುಕ್ರವಾರ ಪ್ರಕಟಿಸಲ್ಪಡುವದು.

ವಾರ್ಷಿಕ ಚಂದಾ ರೂ. ೩—೮—೦. | ಸಂಪಾದಕ—ಪಂದ್ಯಂಡ ಐ. ಬೆಳ್ಯಪ್ಪ.

ಸಂಪುಟ [illegible]] ಮಡಿಕೇರಿ, ೧೯೩೬ನೇ ಇಸವಿ ಫೆಬ್ರವರಿ ತಾರೀಕು ೧೪ ನೇ ಶುಕ್ರವಾರ. [ಸಂಚಿಕೆ [illegible]

Telephon: 3145

By Appointment
To H. E. The Governor of Madras.

Telegrams 'PRECIOUS.'



V. SUBRAMANIA IYER.

Jeweller, & Diamond Merchant,

2 & 3 Kuppumuthu Street Tiruvateswaranpet POST BOX 473 TRIPLICANE P. O., MADRAS.

52—12 Catalogue & special designs with quotations (free) on enquiry

೧೯೦೬ರಲ್ಲಿ ಸ್ಥಾಪಿತವಾದದ್ದು.

ದಿ ಕೆನರಾ ಬ್ಯಾಂಕಿಂಗ್ ಕೊರ್ಪರೇಷನ್ ಉಡುಪಿ—ಲಿಮಿಟೆಡ್.

(ಬ್ರಿಟಿಷ್ ಇಂಡಿಯದಲ್ಲಿ ರಿಜಿಸ್ಟರ್ ಆದದ್ದು.)

ಹೆಡ್ ಆಫೀಸು—ಉಡುಪಿ.

ಶಾಖೆಗಳು.

(1) ಉಡುಪಿ
(2) ಕುಂದಾಪುರ
(3) ಮಂಗಳೂರು—ಕಾರಬೀದಿ
(4) ಮಂಗಳೂರು—ಬಂದರ್
(5) ಮೂಡಬಿದ್ರಿ
(6) ಶಿವಮೊಗ್ಗ
(7) ಮಡಿಕೇರಿ
(8) [illegible]

[illegible]

(1) [illegible]
(2) [illegible]
(3) [illegible]
(4) [illegible]
( ) [illegible]
( ) [illegible]

ನಿಮ್ಮ ಸೇವೆಯೇ ನಮ್ಮ ಧ್ಯೇಯ.

ತಾ. 15—1—1936ರಿಂದ [illegible] ಬಡ್ಡಿಯ ದರವನ್ನು [illegible] ಇಳಿಸಲಾಗಿದೆ.

[illegible] ಶೇಕಡ 5ರ [illegible] ಬಡ್ಡಿಯಲ್ಲಿ [illegible]

ಕರೆಂಟ್, ಸೇವಿಂಗ್ಸ್ ಬ್ಯಾಂಕ್, ಕ್ಯುಮುಲೇಟಿವ್ [illegible] ಲಾಭದಾಯಕವಾದ ಬಡ್ಡಿಯಲ್ಲಿ [illegible]

ಇಲ್ಲದೆ

ಎಲ್ಲಾ ತರದ ಬ್ಯಾಂಕಿಂಗ್ [illegible]

[illegible]

52—13

ಜನರಲ್

ಅಷ್ಯೂರೆನ್ಸ್ ಸೊಸೈಟಿ, ಲಿಮಿಟೆಡ್.

(ಸ್ಥಾಪಿತವಾದದ್ದು 1907 ರಲ್ಲಿ)

[illegible]

ಕೊಡುತ್ತದೆ.

[illegible]

[illegible] 25%o
ಎಂಡೋಮೆಂಟ್ ಪಾಲಿಸಿಗಳ ಮೇಲೆ ವರ್ಷಕ್ಕೆ 20%o
[illegible]
[illegible]

[illegible] (ಅಜ್ಮೀರ್)
ಜನರಲ್ ಮೆನೇಜರ್. ದಿ ಜನರಲ್ ಅಷ್ಯೂರೆನ್ಸ್ ಸೊಸೈಟಿ ಲಿಮಿಟೆಡ್, ಅಜ್ಮೀರ್. [illegible]

[illegible]

ಸುಪರಿಂಟೆಂಡೆಂಟ್, ಜನರಲ್ ಅಷ್ಯೂರೆನ್ಸ್, [illegible] 3ನೇ [illegible]

52—36

ಪ್ರಕಟಣೆ.

ಕೆನರಾ ಸೆಂಟ್ರಲ್ ಸಹಕಾರಿ ಬ್ಯಾಂಕ್, ಲಿಮಿಟೆಡ್, ಕೋ ಆಪರೇಟಿವ್ ಸೊಸೈಟೀಸ್ ಆಕ್ಟ ಪ್ರಕಾರ ರಜಿಸ್ಟರಾಗಿದೆ.

(ಸ್ಥಾಪಿತವಾದದ್ದು 1922ರಲ್ಲಿ)

		ರೂ.
ಶೇರ್ ಬಂಡವಾಲ	—	50,000— 0—0
ವಸೂಲಾದ ಶೇರ್ ಮೊಬಲಗು	—	36,997— 0—0
ಜನರಿಂದ ಠೇವಣಿ	—	2,58 909—6—10
ವಸೂಲಾದ ಕ್ಷೇಮನಿಧಿ	—	1,03,511— 4—0

ಈ ಬ್ಯಾಂಕಿನಿಂದ ಕೆನರಾ ಜಿಲ್ಲೆಯ ಸಹಕಾರಿ ಸಂಘ[illegible] ಸಾಲ ಕೊಡಲಾಗುತ್ತದೆ.

ಒಂದು ವರ್ಷ [illegible] ಠೇವಣಿಗಳಿಗೆ ಶೇಕಡಾ [illegible] ರೂ. 4-8-0ರ ದರದಲ್ಲಿಯೂ ಒಂದು ವರ್ಷದ ಠೇವಣಿಗಳಿಗೆ ಶೇಕಡಾ [illegible] 4ರ ದರದಲ್ಲಿಯೂ ಬಡ್ಡಿ ದೊರೆಯುತ್ತದೆ.

ಹೆಚ್ಚಿನ ವಿವರಗಳಿಗಾಗಿ [illegible] ಸೆಕ್ರೆಟರಿ [illegible]

ಪ್ರೆಸಿಡೆಂಟರು, [illegible]

ಮ್ಯಾನೇಜರ್ [illegible]

ಸೆಕ್ರೆಟರಿ [illegible]

ದಿನಾಂಕ 1-11-1935.

ಶಿಕಾರಿಗೆ ಬೇಕಾಗುವ ನಾನಾ ವಿಧದ

ಕೋವಿ, ರೈಫಲು, ರಿವಾಲ್ವರು, ಕಾಡತೂಸುಗಳು, ಬೇಟೆಯ [illegible] ಮತ್ತು ಮೀನು ಹಿಡಿಯಲು ಅವಶ್ಯಕವಾದ ಎಲ್ಲಾ ಸಲಕರಣೆಗಳ ವಿಶೇಷ [illegible] [illegible]



ಕೇಟಲಾಗು ಉಚಿತ.] [CURRENT CATALOGUE FREE.

The Bombay Armoury,
329-331, Abdul Rehman Street,
BOMBAY, 3.

26—35

ಪಂಡಿತ ಜವಾಹಿರಲಾಲ್ ನೆಹರೂ ಬಂದಾಗ್ಗೆ ಹುಬ್ಬಳ್ಳಿ ಪ್ರದರ್ಶನದಲ್ಲಿ ಸುವರ್ಣ ಪದಕವನ್ನು ಪಡೆದ,

ಒಂದೇ ಸಮನಾಗಿ ಮೂವತ್ತೈದು ವರ್ಷದ ಅನುಭವದಿಂದ ಹಿಂದುಸ್ಥಾನದ ಸಾವಿರಾರು ಜನರಿಂದ ವರ್ಣಿಸಲ್ಪಟ್ಟ ಆಯುರ್ವೇದೋಕ್ತ ತಾಜಾ ಮತ್ತು ಶಾಸ್ತ್ರೀಯ ವನಸ್ಪತಿಗಳಿಂದ ತಯಾರಿಸಿರುವ ಮತ್ತು ಇದರ ಗುಣಕ್ಕಾಗಿ ಅನೇಕ ಸರ್ಟಿಫಿಕೇಟುಗಳು ಮತ್ತು ಭಂಗಾರದ ಮೆಡಲುಗಳನ್ನು ಪಡೆದು ಪರದೇಶದಲ್ಲಿ ಧಾರಾಳವಾಗಿ ಖರ್ಚಾಗುವ

ಶಕ್ತಿವರ್ಧಕ ಉತ್ತಮ ತರಗತಿಯ ಟಾನಿಕ್

ದ್ರಾಕ್ಷಾಮೃತ

[illegible] ವನಸ್ಪತಿ ರಸಾರ್ಕಗಳಿಂದ ಶಾಸ್ತ್ರೋಕ್ತವಾಗಿ ಸ್ವದೇಶೀ ಯಂತ್ರೋಪಕರಣದಿಂದ ತಯಾರಿಸಿದ ಮಧುರಾಮೃತ.

ಇದರ ಸೇವನೆಯಿಂದ ಉಷ್ಣ (ಗರಮಿ), ಧಾತುನಾಶ, ಸ್ವಪ್ನಾವಸ್ಥೆ, [illegible], ಕಣ್ಣುಗಳ ಉರಿ, ಮಲಬದ್ಧತೆ ಮುಂತಾದವು ಗುಣವಾಗುವದಲ್ಲದೆ ಜೀರ್ಣಶಕ್ತಿಯು ಹೆಚ್ಚಿ ದೇಹದಾರ್ಢ್ಯವುಂಟಾಗುವುದು. ಇದರಿಂದ ನಪುಂಸಕತ್ವವಿದ್ದಲ್ಲಿ ಅದು ಹೋಗಿ ವೀರ್ಯ ವೃದ್ಧಿಯಾಗುವದು. ಹೆಂಗಸರಿಗೂ, ಗಂಡಸರಿಗೂ ಇದು ಗುಣಕಾರಿ ಇದೆ. ಮುಟ್ಟಿನ ಗಡಿಬಿಡಿ ಮತ್ತು ಉಷ್ಣ (ಗರಮಿ) ರೋಗಗಳಿದ್ದರೆ ಅವೆಲ್ಲವೂ ಗುಣವಾಗಿ ಹೆಂಗಸರಿಗೆ ಸಂತತಿ ವೃದ್ಧಿಯಾಗುವದು. ಈ ಔಷಧದ 3 ಬಾಟ್ಲಿಗಳ ಸೇವನೆಯಿಂದ ಪೂರ್ಣ ಗುಣ ಆಗುತ್ತದೆ. 1 ಬಾಟ್ಲಿಯನ್ನು ಸೇವಿಸುವದರಲ್ಲೇ ಇದರ ಗುಣ ಕಂಡು ಬರುವದು. ಪ್ರಮಾಣ:—ಬೆಳಗಿನಲ್ಲಿ ಒಂದು ತೊಲೆ ಮತ್ತು ಸಂಜೆಗೆ ಒಂದು ತೊಲೆ ತಕ್ಕೊಳ್ಳಬೇಕು.

ಬೆಲೆ—1 ಬಾಟ್ಲಿಗೆ ರೂ. 1—4—0, 3 ಬಾಟ್ಲಿಗೆ ರೂ 3—8—0, 1 ಡಜನ್ ಬಾಟ್ಲಿಗಳಿಗೆ ರೂ. 12—0—0;

ಮ್ಯಾನೇಜರ್:—ದ್ರಾಕ್ಷಾಮೃತ ಡಿಪೋ ಪೋಸ್ಟ್ ನಿಪ್ಪಾಣಿ ಜಿಲ್ಲಾ (ಬೆಳಗಾಮ್.)

52—22 ಕೊಡಗಿನ ಏಜಂಟರು.—ಸಾವೆಲ್ಲಿ ಸ್ಟೋರ್ಸ್, ಮಡಿಕೇರಿ
ಬಿ ಪುಟ್ಟಯ್ಯ ಶೆಟ್ಟಿ & ಸನ್ಸ್, ಸೋಮವಾರಪೇಟೆ.
ಭಾಸ್ಕರ್ ಬ್ರದರ್ಸ್, ಕಾಸರಗೋಡು] ಎ ಎಸ್ ಹುಚ್ಚಯ್ಯ, ಮರ್ಚೆಂಟ್, ಗೋಣಿಕೊಪ್ಪಲು.

ಭಾರತದ ಮುಂದಿನ ಜನಾಂಗದ ಆರೋಗ್ಯ ಮತ್ತು ಕ್ಷೇಮ ವರ್ಧನೆಯು ಇಂದಿನ ಅನೇಕ [illegible] ಮತ್ತು ಸಾರ್ವಜನಿಕ ಮುಂದಾಳುಗಳ ದೃಷ್ಟಿಯಲ್ಲಿರುವ ಒಂದು ದೊಡ್ಡ ಸಮಸ್ಯೆಯಾಗಿರುತ್ತದೆ. ತನ್ನ ಮಕ್ಕಳ ದೇಹವು ಪುಷ್ಟಿಯಾಗಿಯೂ ಸುದೃಢವಾಗಿಯೂ ಇರಲಿಕ್ಕೆ ಬೇಕಾದ ಒಂದು ಅಪೂರ್ವವಾದ ಸಂಜೀವಿನಿಯನ್ನು ಎಲ್ಲರೂ ತಿಳಿದದ್ದಾಗಿದ್ದರೆ ಈ ವಿಚಾರವು ಇಷ್ಟು ಕಠಿಣತರವಾಗಿರುತ್ತಿದ್ದಿಲ್ಲ. ಈ ಸಂಜೀವಿನಿಯಂತಿರುವ ಔಷಧವನ್ನು ಹೆಚ್ಚು ಸಫಲತೆಯಿಂದ ಅನೇಕರು ಭಾರತದ ಉದ್ದಗಲಕ್ಕೂ ಕಳೆದ 50 ವರ್ಷಗಳಿಂದ ಉಪಯೋಗಿಸುತ್ತಲಿದ್ದಾರೆ. ಮಗುವು ಹೆಚ್ಚು ಕೃಶವಾಗಿ, ನಿರ್ಬಲತೆಯಿಂದ ಕೂಡಿ ಹಾಲನ್ನು ಸಹ ಜೀರ್ಣಿಸಿಕೊಳ್ಳಲಶಕ್ಯವಾಗಿ, ಆಗಿಂದಾಗ್ಗೆ ಶೀತ, ಕೆಮ್ಮು ಮೊದಲಾದ ರೋಗಗಳಿಗೀಡಾಗುತ್ತಿದ್ದರೆ ಒಡನೆ ಪ್ರಸಿದ್ಧಿ ಹೊಂದಿರುವ

ಡೋಂಗರೆ ಬಾಲಾಮೃತವನ್ನು

ಕೊಡಬೇಕು. ಡೋಂಗರೆ ಬಾಲಾಮೃತವು ಒಂದು ಟಾನಿಕ್. ಎಲ್ಲಿ ಬೇಕಲ್ಲಿ ದೊರೆಯುವುದು.

ತಯಾರಕರು—
ಕೆ. ಟಿ. ಡೋಂಗರೆ ಕಂಪೆನಿ
(52-49) ಗಿರಿಗಾಂವ್, ಮುಂಬಯಿ.

ಓರಿಯಂಟಲ್ ಗವರ್ನಮೆಂಟ್ ಸೆಕ್ಯೂರಿಟಿ ಜೀವ ವಿಮೆ ಕಂಪೆನಿ ಲಿಮಿಟೆಡ್.

(1874ರಲ್ಲಿ ಹಿಂದುಸ್ಥಾನದಲ್ಲಿ ಸ್ಥಾಪಿತವಾದದ್ದು) (ಹೆಡ್ ಆಫೀಸು—ಮುಂಬಯಿ.

1934ನೇ ಇಸವಿಯ ಕಂಪೆನಿಯ ಕೆಲಸದ ಫಲಿತಾಂಶ—

ಹೊಸ ಪಾಲಿಸಿಗಳ ಪ್ರಿಮಿಯಂ	ರೂ.	7,62,42,761
ವಾರ್ಷಿಕ ಉತ್ಪತ್ತಿ	ರೂ.	3,14,01,970
ಚಾಲ್ತಿಯಲ್ಲಿರುವ ಒಟ್ಟು ಪಾಲಿಸಿಗಳು	ರೂ.	54,20,38,518
ಕ್ಲೇಮ್ಸ್‌ಗಳಿಗೆ ಕೊಟ್ಟ ಒಟ್ಟು ಹಣ ...	ರೂ.	16 29,88 814
ಫಂಡ್ಸ್ ಹೆಚ್ಚಿದ್ದು	ರೂ.	15,53,88 843

ಈ ಮೇಲಿನ ಫಲಿತಾಂಶಗಳು 'ಓರಿಯಂಟಲ್' ಕಂಪೆನಿಯ ಸುಸಂಘಟನೆಯನ್ನು ಮತ್ತು ಪ್ರಸಿದ್ಧಿಯನ್ನು ವಿಶದಗೊಳಿಸುತ್ತವೆ.

ಈ ಪ್ರಸಿದ್ಧಿಗೊಂಡಿರುವ ಮತ್ತು ಅಭಿವೃದ್ಧಿಯಲ್ಲಿರುವ ಇಂಡಿಯನ್ ಜೀವ ವಿಮಾ ಕಂಪೆನಿಯಲ್ಲಿ ವಿಮೆ ಇಳಿಸಲು ಸಾವಕಾಶ ಮಾಡಬೇಡಿ.

ಹೆಚ್ಚಿನ ಮಾಹಿತಿಗೆ ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳತಕ್ಕದ್ದು:—

ಮ್ಯಾನೇಜರ್, ಓರಿಯಂಟಲ್ ಬಿಲ್ಡಿಂಗ್ಸ್, ಮುಂಬಯಿ.

ಅಥವಾ ಕಂಪೆನಿಯ ಈ ಕೆಳಗಿನ ಯಾವ ಆಫೀಸಿಗಾದರೂ ಬರೆಯಬಹುದು.

ಆಗ್ರಾ	ಕಲ್ಲಿಕೋಟೆ	ಕರಾಚಿ	ಮೊಂಬಾಸ	ರಂಗೂನು
ಅಹ್ಮದಾಬಾದು	ಕಲ್ಕತ್ತಾ	ಕೋಲಾಲಂಪೂರು	ನಾಗಪೂರ	ರಾವಲ್‌ಪಿಂಡಿ
ಅಜ್ಮೀರ್	ಕೊಲಂಬೊ	ಲಾಹೋರ್	ಪಾಟ್ನಾ	ಸಿಂಗಪೂರ
ಅಲ್ಲಾಹಾಬಾದು	ಡಕ್ಕಾ	ಲಕ್ನೋ	ಪೂನ	ಸುಕ್ಕೂರು
ಅಂಬಾಲಾ	ಡೆಲ್ಲಿ	ಮದ್ರಾಸು	ರಾಯಪೂರ	ತಿರುಚಿನಾಪಳ್ಳಿ
ಬಳ್ಳಾರಿ	ಗೌಹಾತಿ	ಮಂಡಲೆ	ರಾಜಶಾಹಿ	ತಿರುವೆಂಡ್ರಮ್
ಬರೇಲಿ	ಜಲಗಾಂವ	ಮೀರತ	ರಾಂಚಿ	ವಿಶಾಖಪಟ್ಣ
ಬೆಂಗಳೂರು	ಗುಂಟೂರು	ಜಲ್‌ಪೇಗುರಿ	ಜಬ್ಬಲ್‌ಪೂರ	ಮಧುರೆ & ಮೈಸೂರು

ಓರಿಯಂಟಲ್ ಬಿಲ್ಡಿಂಗ್ಸ್, ಸ್ಟೇಷನ್ ರೋಡ್, ಬೆಂಗಳೂರು, } 52—4

ಎಂ. ವಿ. ವೆಂಕಟಕೃಷ್ಣ ನಾಯುಡು, (ಬ್ರಾಂಚ್ ಸೆಕ್ರೆಟರಿ.)

Printed & published by [illegible] at '[illegible]' Press, [illegible] for '[illegible]' Ltd.

ಡಾಕ್ಟರ್ ಮೋತ್ಸುಸ್ ಎಬ್ರಹಾಮ್.

ದಂತ ವೈದ್ಯರು.

[illegible] ಬಂಗ್ಲೆ.

([illegible])

[illegible] ಹಲ್ಲು ನೋವುಗಳನ್ನು ಶೀಘ್ರವಾಗಿ ಗುಣಪಡಿಸುತ್ತಾರೆ, ಸುಂದರವಾದ ಕೃತ್ರಿಮ ಹಲ್ಲುಗಳನ್ನು ಮನಃ ಒಪ್ಪುವಂತೆ ಕಟ್ಟುವರು. ಒಮ್ಮೆ ಪರೀಕ್ಷಿಸಿ ತಿಳಿಯುವುದು [52—16]

[illegible] ವರ್ಷಗಳಿಂದ ಅನುಭವಪಟ್ಟು ಪ್ರಖ್ಯಾತಿ ಹೊಂದಿದ

ಕರ್ಕಿಕಂಪನಿ

ಜ್ವರದ ಗುಳಿಗೆಗಳು.

ಚಳಿಜ್ವರ, ಚಾತುರ್ಥಿ ಜ್ವರ, ದಿನಬಿಟ್ಟು ಬರುವ ಜ್ವರ, ಮಲೇರಿಯಾ ಜ್ವರ ಇತ್ಯಾದಿ ಜ್ವರಗಳ ಮೇಲೆ ರಾಮ ಬಾಣದಂತೆ ಇವೆ. ಬಾಟ್ಲಿಗೆ ರೂ. [illegible] ಆಣೆ. ಬರೆದು ತರಿಸಿಕೊಳ್ಳಿ.

ಗಣೇಶ ರಾಮಚಂದ್ರ ಕರ್ಕಿ,

(2;—18) ಮತ್ತು ಕಂಪನಿ,

ಗಿರ್ಗಾಂವ, ಮುಂಬಯಿ,

SHIROMANI NARAYANACHARYA

Choukhamba Benares City.

ಶಾಸ್ತ್ರಗಳೇ, ಪೂರ್ವಿಕರು ಆರೋಗ್ಯರೇ ಆದರ [illegible] ರೇ? ರಾಮಕೃಷ್ಣಯ್ಯನವರೇ [illegible] ಶರೀರ ಆರೋಗ್ಯವೇ [illegible] ದ ಆರೋಗ್ಯ ಅವರ [illegible] ರಹಸ್ಯವೇನು? ಅವರು ರುದ್ರಾಕ್ಷಿಯನ್ನು ಬರದ ಯಾವಾಗಲೂ ಧರಿಸುತ್ತಿದ್ದರು. ಅದರಿಂದ ಏನು ಫಲ? ಅದನ್ನು ಧರಿಸಿದರೆ ಜೀವನಶಕ್ತಿ, ಬುದ್ಧಿಶಕ್ತಿ, ವಿದ್ಯಾಭಿವೃದ್ಧಿ, ಹಿಂದ್ಯವೃದ್ಧಿ ಸಂಪತ್ತು, [illegible] ಇವುಗಳೆಲ್ಲಾ ಆಗುವ [illegible] ನಮಗೆ ಅಂತಹ ರುದ್ರಾಕ್ಷಿ ಎಲ್ಲಿ ದೊರೆಯುವುದು? ಅದು [illegible] ಹೊಂದಿದ ನಮ್ಮ ಕಾಶೀ ಚೌಖಂಬಾ ಶಿರೋಮಣೀ ನಾರಾಯಣಾಚಾರ್ಯರಲ್ಲಿಯೇ ಯೋಗ್ಯವಾದ ಕ್ರಯಕ್ಕೆ ಉತ್ತಮ ತರದ ರುದ್ರಾಕ್ಷಿ ದೊರೆಯುವುದು.

ಸಣ್ಣ ಅಡ್ಡ ಪ್ರಮಾಣದ ಕಂಠಸರ 1ಕ್ಕೆ ಆಣೆ 1 ರಿಂದ ರೂ 25ರ ವರೆಗೆ. 108 ರುದ್ರಾಕ್ಷಿಗಳುಳ್ಳ ಸರ 1ಕ್ಕೆ ಆಣೆ 30ರಿಂದ ರೂ 25ರ ವರೆಗೆ. ಗೌರೀಶಂಕರ ರುದ್ರಾಕ್ಷಿ 1ಕ್ಕೆ ರೂ 3ರಿಂದ ರೂ 50ರ ವರೆಗೆ. ಮತ್ತು 3—4—5—6—7—8 ಮುಖಗಳ ಕಾಳು 1ಕ್ಕೆ ಆಣೆ 4 ರಿಂದ ರೂ 10. ಮತ್ತು 9—10—11 ಮುಖಗಳುಳ್ಳ ಕಾಳು 1ಕ್ಕೆ ರೂ. 10ರಿಂದ 30ರ ವರೆಗೆ. 12—13—14 ಮುಖದ ಕಾಳು 1ಕ್ಕೆ ರೂ 40ರಿಂದ 100ರ ವರೆಗೆ. ಸಣ್ಣ ರುದ್ರಾಕ್ಷಿ ಅವರ ಕಾಳಿಗಿಂತ ಸಣ್ಣದಾಗುತ್ತ ಕ್ರಯ ಜಾಸ್ತಿ. ದೊಡ್ಡ ರುದ್ರಾಕ್ಷಿ ಅದಕ್ಕಿಂತ ದೊಡ್ಡದಾಗುತ್ತ ಕ್ರಯ ಜಾಸ್ತಿ ಆಗುವದು. (ಐದು ರೂ. [illegible] ಆರ್ಡರಿಗೆ ಬರೆದರೆ ಇನಾಮವಾಗಿ ಕಳುಹಿಸುತ್ತೇವೆ. 1 ಆಣೆ ಸ್ಟಾಂಪು ಕಳುಹಿಸಿದರೆ 3 ಇನಾಮುಗಳು— 1 ವಿಶ್ವೇಶ್ವರ ಪಟ, 1 ಕಾಶೀ ನಕ್ಷೆ 1 ಕಾಶೀ ಚಿತ್ರಂಬರ [illegible] ಈ 3 ಇನಾಮುಗಳು)

ಶಿರೋಮಣಿ ನಾರಾಯಣಾಚಾರ್ಯರ್,

52—23 ಚೌಖಂಬಾ ಬೆನಾರಸ್, (ಕಾಶೀ)

ಮಾರಾಟಕ್ಕೆ ಸಿದ್ಧವಾಗಿವೆ.

ಸಹಕಾರ ಸಂಘಗಳ ಮತ್ತು ದಿನದ ಭಂಡಾರಗಳ ಪ್ರತಿ [illegible] ಮೈಸೂರಿನಲ್ಲಿಯೂ ಇಂಡಿಯಾದ ಅಮಿತ [illegible] ಪರಸ್ಪರ ಸಹಾಯಕ ಸಂಘದ ಮತ್ತು ದವಸ ಭಂಡಾರದ ಉಪನಿಬಂಧನೆಗಳೂ, ಪಾಸ್ ಬುಕ್ಕುಗಳೂ, ಎಲ್ಲಾ ಸಹಕಾರ ಸಂಘಗಳ ಮತ್ತು ದವಸ ಭಂಡಾರಗಳ ಕೆಲಸಗಳನ್ನು ಕ್ರಮಪ್ರಕಾರ ನಡಿಸಲು ಅತ್ಯವಶ್ಯವಾಗಿರುವ, ರಿಜಿಸ್ಟ್ರಾರವರಿಂದ ಗೊತ್ತುಮಾಡಲ್ಪಟ್ಟಿರುವ ದಾವಾ ಫಾರಮುಗಳೂ, [illegible] ಫಾರಮುಗಳೂ, [illegible] ಫಾರಮುಗಳೂ, [illegible] ಒಪ್ಪಿಗೆ ಫಾರಮುಗಳೂ, [illegible] ಫಾರಮುಗಳೂ, ಮೆಂಬರ್ ಶೇರ್ [illegible] ಫಾರಮುಗಳೂ [illegible] ಪುಸ್ತಕಗಳೂ, ರಶೀತಿ ಪುಸ್ತಕಗಳೂ, [illegible] ರಿಜಿಸ್ಟರ್ ಪುಸ್ತಕಗಳೂ, ಮತ್ತು ಚೆಕ್ ಪುಸ್ತಕಗಳೂ ನಮ್ಮಲ್ಲಿ ಕಡಿಮೆ ಕ್ರಯದಲ್ಲಿ ದೊರೆಯುತ್ತವೆ. [illegible] ಅರ್ಡರು ಕೊಟ್ಟಲ್ಲಿ ವಿ. ಪಿ. ಮೂಲಕ ಕಳುಹಿಸಲಾಗುವುದು.

ಮ್ಯಾನೇಜರ್

"ಕೊಡಗು ಪ್ರೆಸ್‌ಲಿಮಿಟೆಡ್",

ಮಡಿಕೇರಿ.

ಗುಂಡು ಹೊಡೆಯುವ ಶಸ್ತ್ರಗಳು.

ಉಪಯುಕ್ತ ಸೂಚನೆಗಳು.

ಶಿಕಾರಿಗಳಿಗೆ:—

ನಮ್ಮ ಶಸ್ತ್ರ ವಸ್ತು ಕೋಶವನ್ನು ಓದಿರಿ (Our arms and ammunition GUIDE 3) ಇದರಲ್ಲಿ ಗುಂಡು ಹೊಡೆಯುವ ನೂತನ ವಿಧಾನಗಳ ವಿಷಯ ಅತೀ ಉಪಯುಕ್ತ ಸೂಚನೆಗಳಿವೆ

Goolamhusain Allibhoy & Sons. Ltd.,

26—18 210, Abdulrehman Street, BOMBAY 3.

ಧಾತುಪುಷ್ಟಿ ಲೇಹ

ಸ್ವರ್ಣ ಕಲ್ಪದ ಸಾಮಗ್ರಿ ಮಿಶ್ರಿತ.

ಇದು ಬಲಹೀನರಿಗೆ ಅದ್ಭುತವಾದ ಶಕ್ತಿವರ್ಧಕ ರಸಾಯನ. ಸ್ವಪ್ನಾವಸ್ಥೆ, ಶರೀರದ ಉಷ್ಣತೆ, ಧಾತು ದೌರ್ಬಲ್ಯದೊಡನೆ ತಲೆ ಸುತ್ತುವಿಕೆ, ಸೊಂಟನೋವು, ಕೈಕಾಲು ಜಡ್ಡು, ಮಲಬದ್ಧತೆ, ಒಳಜ್ವರ ಅಶಕ್ತತೆ, ಇವುಗಳನ್ನೆಲ್ಲಾ ಹೋಗಲಾಡಿಸಿ ಹಸಿವನ್ನೂ, ಜೀರ್ಣ ಶಕ್ತಿಯನ್ನೂ ಹೆಚ್ಚಿಸುವುದು. ಅದಲ್ಲದೆ ನರಗಳ ದೌರ್ಬಲ್ಯವನ್ನು ಹೋಗಲಾಡಿಸಿ ವೀರ್ಯವೃದ್ಧಿಯನ್ನು, ಸಂಭೋಗ ಶಕ್ತಿಯನ್ನು ಮತ್ತು ಜ್ಞಾಪಕ ಶಕ್ತಿಯನ್ನು ವೃದ್ಧಿ ಮಾಡುವುದು. ಶರೀರಕ್ಕೆ ಆರೋಗ್ಯವನ್ನೂ, ದಿವ್ಯ ಶಕ್ತಿಯನ್ನೂ, ಕಾಂತಿಯನ್ನೂ, ಉಂಟುಮಾಡುವುದು.

ಡಬ್ಬಿ 1ರ ರೂ 2—8—0. 3ಕ್ಕೆ ರೂ 7—0—0

ಮಲೇರಿಯಾ ನಿವಾರಿಣಿ.

ಮಲಬದ್ಧತೆ, ಚಳಿಜ್ವರ, ದಿನಬಿಟ್ಟು ಬರುವ ಜ್ವರ, ಚಾತುರ್ಥಿಕ ಜ್ವರ, ಗಡ್ಡೆ ಬರುವ ಜ್ವರ, ಪುರಾಣ ಜ್ವರ, ವಾತಾದಿ ಜ್ವರ, ಯಕೃತ್ ಪ್ಲೀಹಂ, ಸಿಪೋಸಿಯಾ ಜ್ವರ, ಕಫಜ್ವರ, ದಾಹಜ್ವರ, ಇವುಗಳನ್ನೆಲ್ಲಾ ಹೋಗಲಾಡಿಸಿ ಶಕ್ತಿಯನ್ನುಂಟುಮಾಡುವದು.

ಬಾಟ್ಲಿ 1ರ ರೂ 1—8—0 ಸಣ್ಣ ಬಾಟ್ಲಿಗೆ 0—13—0.

ಅಶೋಕಾರಿಷ್ಟ ಮತ್ತು ಮಾತ್ರೆ

ಇದು ಸ್ತ್ರೀಯರಿಗೆ ಉತ್ತಮವಾದ ಟಾನಿಕ್, ಮುಟ್ಟುಕಟ್ಟು, ಕಷ್ಟವಾಗಿ ಮುಟ್ಟಾಗುವಿಕೆ, ಅತಿರೇಕ ಅಥವಾ ಅಕಾಲ ಸ್ರಾವ, ಮುಟ್ಟು ಸಂಪೂರ್ಣವಾಗಿ ನಿಲ್ಲುವದು, ಬಿಳುಪು ಹೋಗುವುದು, ಬಾಣಂತನ ಸಮಯದ ನೋವು ರಕ್ತಹೀನತೆ, ಒಳಜ್ವರ ಕಶನೋವು, ಮಲಬದ್ಧತೆ ಕೈಕಾಲು ಜಡ್ಡುವದು, ಅಕಾಲದಲ್ಲಿ ಗರ್ಭಪತನವಾಗುವಿಕೆ ಮತ್ತು ಸ್ತ್ರೀಯರಿಗೆ ಸಂಬಂಧಪಟ್ಟ ಇತರ ಎಲ್ಲಾ ರೋಗಗಳನ್ನು ಹೋಗಲಾಡಿಸಿ ಸೌಂದರ್ಯವನ್ನೂ ತೇಜಸ್ಸನ್ನೂ ಉಂಟುಮಾಡುತ್ತದೆ ಬಾಟ್ಲಿ 1ರ ರೂ. 2—4—0

ರಕ್ತಶೋಧಕ.

ದೇಹದೊಳಗಿನ ರಕ್ತವು ಕೆಟ್ಟುಹೋದ ಕಾರಣದಿಂದ ಉಂಟಾಗುವ ತುರಿ, ಕಜ್ಜಿ, ನೈತುರಿಕೆ, ಕೆರೆ, ವ್ರಣ, ಫರಂಗಿ ಇಂದ್ರುದು ಸಂಕು ರೋಗ, ಮೇಹ, [illegible] ದವುಗಳ ಮೇಲೆ ದಿವ್ಯ ಔಷಧ

ಬಾಟ್ಲಿ 1ರ ರೂ. 1—2—0, 3 ಬಾಟ್ಲಿಗಳಿಗೆ 3—4—0.

ಕ್ಯಾಟಲಾಗಿಗೆ ಬರೆರಿ. ಕಾಯಿಲೆ ಸಂಗತಿ ಬರದಲ್ಲಿ ರೋಗಕ್ಕೆ ತಕ್ಕುದಾದ ಔಷಧಿ ಬೇಕಾದ ರವಾನಿಸಲಾಗುವದು.

ಎಂ. ಗಣಪಯ್ಯ ಎಂಡ್ ಸನ್ಸ್, ಆಯುರ್ವೇದಿಕ್ ಫಿಜಿಶಿಯನ್ಸ್, ರಥಬೀದಿ, ಮಂಗಳೂರು.

(1) ಎ. ಬಿ. ಕಾಮತ್, ಮಹದೇವಪೇಟೆ, ಮಡಿಕೇರಿ (ಕೊಡಗು)

(52—30) (2) ಎ. ಎಸ್. ಮಂಜಯ್ಯ, ಶೆಟ್ಟಿ ವ್ಯಾಪಾರಿ, ಸುಂಟಿಕೊಪ್ಪ.

GOVERNMENT SOAP FACTORY,

Bangalore.

ವಿಶ್ವಾಸಾರ್ಹತೆ.

ಅತ್ಯುತ್ತಮವಾದ ಟಾಯಿಲೆಟ್ ಸಾಬೂನಿನಲ್ಲಿ ಯಾವ

ಯಾವ ಗುಣಗಳು ಅವಶ್ಯಕವೆಂದು ನೀವು

ತಿಳಿದಿರುವಿರೋ ಆ ಗುಣಗಳೆಲ್ಲ

ಮೈಸೂರು ಸ್ಯಾಂಡಲ್ ಸಾಬೂನಿನಲ್ಲಿವೆ.

[illegible]

ಎಲ್ಲಾ ಕಡೆಯಲ್ಲಿಯೂ ದೊರೆಯುತ್ತವೆ.

ಗವರ್ನಮೆಂಟ್ ಸೋಪ್ ಫ್ಯಾಕ್ಟರಿ.

52—49 ಬೆಂಗಳೂರು.

[illegible]

(3ನೇ ಪುಟದಿಂದ ಮುಂದುವರಿದುದು)

death trap' ಎಂಬ ಪುಸ್ತಕವನ್ನು (೧—2—9 [illegible]) [illegible]

[illegible]

... 'ಬರ್ತ್ ಕಂಟ್ರೋಲ್' (ಸಂತಾನ ನಿರೋಧತೇ) ... (1935) ... 'ಬರ್ತ್ ಕಂಟ್ರೋಲ್ ಇಂಟರ್‌ನ್ಯಾಶನಲ್ ಇನ್‌ಫರ್ಮೇಶನ್ ಸೆಂಟರ್' ... 'ಏಷ್ಯಾ ಖಂಡದಲ್ಲಿ ಸಂತಾನ ನಿರೋಧ' ಎಂಬ ವಿಷಯ ... [illegible]

... ನೋಡಿ 'Birth control in Asia' edited by Michael Fielding (Birth Control International Information Centre London, price 5 sh) [illegible]

ಪತ್ರವ್ಯವಹಾರ.

[illegible]

[illegible]

ದೇಶಬಾಂಧವರೇ,

[illegible]

(1839 ...) [illegible]

[illegible]

EMPIRE OF INDIA LIFE ASSURANCE CO., LTD.

ESTD. 1897.

TEN YEARS' PROGRESS.

	1925 Rs.	1935 Rs.
Income	45,50,127	73,28,467
New Assurances	78,07,060	1,47,57,880
Total Assets	2,46,08,120	4,50,03,372
Assurances in force	6,95,93,793	11,56,12,828

Form of proposal and other particulars will be sent on Application.

Head office:— **Empire of India Life Building, BOMBAY.** 52—12 Branch Office:— **152/3—Commercial Street, BANGALORE.**

[illegible]

|| ೧ || ... || ೨ || ... || ೩ || ... || ೪ || ... || ೫ || ... || ೬ || ... || ೭ || ... || ೮ || ... || ೯ || ... || ೧೦ || ... || ೧೧ || ... || ೧೨ || ... || ೧೩ || ... || ೧೪ || ... || ೧೫ ||

[illegible]

ಪತ್ರವ್ಯವಹಾರ.

[ಪತ್ರವ್ಯವಹಾರದಲ್ಲಿ ಪ್ರಕಟವಾಗುವ ಅಭಿಪ್ರಾಯಗಳಿಗೆ ಪತ್ರಿಕಾ ಕರ್ತರು ಜವಾಬ್ದಾರರಲ್ಲ. ಸಂ.]

[illegible]

ಅಯ್ಯಾ,

ಕೊಡಗಿನಲ್ಲಿ [illegible] [illegible]

[illegible]

ಇಂಡಿಯನ್ ಪೀನಲ್ ಕೋಡಿನ 265ನೆಯ [illegible] [illegible]

[illegible] ಸರ್ಕಾರದವರು ಅವರಿಗೆ ಆ ಅಧಿಕಾರವನ್ನು ಕೊಡಬಾರದಲ್ಲ; ಕೊಡುವುದಕ್ಕೂ ಆಗುವುದಿಲ್ಲ.

'ಕೆ. ಎಸ್.'

ನೋಟೀಸು.

ಈ ಕೆಳಗಿನ ಮಹನೀಯರು "ಕೊಡಗು" ಪತ್ರಿಕೆಯ ಚಂದಾ ಹಣವನ್ನು ವಸೂಲ್ ಮಾಡಲು ಒಪ್ಪಿಕೊಂಡದ್ದರಿಂದ, ಅವರನ್ನು ಏಜೆಂಟರುಗಳಾಗಿ ನೇಮಿಸಿ ಅವರಿಗೆ ನಮ್ಮ ರಶೀತಿ ಪುಸ್ತಕಗಳು ಕೊಡಲಾಗಿವೆ. ಕೆಳಗಿನ ಸಬ್ ಏಜೆಂಟರುಗಳಿಗೆ ಜೆಂಟ್‌ಗಳ ಜವಾಬ್ದಾರಿ ಮೇಲೆ ರಶೀತಿ ಪುಸ್ತಕಗಳು ಕೊಡಲಾಗಿವೆ. ದಯವಿಟ್ಟು ಚಂದಾದಾರರೆಲ್ಲರೂ ಅವರಿಗೆ ಸಮೀಪವಿರುವ ಸ್ಥಳದಲ್ಲಿ ತಮ್ಮ ಚಂದಾವನ್ನು ಪಾವತಿ ಮಾಡಿ ರಶೀತಿ ಪಡೆಯಬೇಕಾಗಿ ಕೋರಿದೆ.

ಸಬ್ ಏಜೆಂಟರುಗಳು.

ರಾಜಪೇಟೆ—ಮೆ. ಮಂಡೇಪಂಡ ಸೋಮಯ್ಯನವರು,
ವೀರಾಜಪೇಟೆ—ಸಿದ್ಧಾಪುರ—ಮೆ. ಬಸಂಡ ಮಾದಪ್ಪನವರು,
ಶ್ರೀಮಂಗಲ—ಪೊನ್ನಂಪೇಟೆ—ಮೆ. ಪಿ. ಜಿ. ಮುದ್ದಪ್ಪಯ್ಯನವರು,
ಬಾಳೆಲೆ & ತಿತಿಮತಿ—ಮೆ. ಬಿ. ಮಾದಪ್ಪಯ್ಯನವರು,
ಸುಂಟಿಕೊಪ್ಪ—ಮೆ. ಅಪ್ಪಚೆಟ್ಟೋಳಂಡ ಮಾಚಯ್ಯನವರು,
ಸೋಮವಾರಪೇಟೆ—ಮೆ. ಕೆ. ಪೊಂಗಪ್ಪನವರು
ಗೋಣಿಕೊಪ್ಪ—ಮೆ. ಬೆಳ್ಳಿಯಂಡ ಎಂ. ಪೂಣಚ್ಚನವರು,
(ನಾಪೋಕ್ಲು ಸ್ಟೋರ್ಸ್)

ಸೂಚನೆ.—ಪ್ರಿಂಟು ಆದ ರಶೀತಿ ಹೊಂದಿಕೊಳ್ಳದೆ ಯಾರೂ ಚಂದಾ ಕೊಡಬಾರದಾಗಿ ಈ ಮೂಲಕ ತಿಳಿಸಲಾಗಿದೆ.

ಮ್ಯಾನೇಜರ್,
"ಕೊಡಗು" ಲಿಮಿಟೆಡ್
ಮಡಿಕೇರಿ.

ಸನ್ 1871ನೇ ಇಸವಿ [illegible] ಭರವಸೆಯುಳ್ಳ

ದಿ ಬೊಂಬೆ ಲೈಫ್ ಎಶ್ಯೂರೆನ್ಸ್ ಕಂಪೆನಿ ಲಿಮಿಟೆಡ್.

ಅಧ್ಯಕ್ಷರು—ಮಾನನೀಯ ಸರ್ ಲಲ್ಲುಭಾಯಿ ಸಾಮಲದಾಸ್,
ಕೆ. ಟಿ. ಸಿ. ಐ. ಇ., ಜೆ. ಪಿ. ಯವರು.

ಕೋಟ್ಟಿಕಲ್ ಬ್ರದರ್ಸ್ ಮದ್ರಾಸು ಬ್ರಾಂಚ್ ಸೆಕ್ರೆಟರಿಗಳು.

ಕಳೆದ ಲಾಭ ಹಂಚುವಿಕೆಯಲ್ಲಿ ರೂ. 18ರಿಂದ 23ರ ವರೆಗೆ ಬೋನಸು ಡಿಕ್ಲೇರಾಗಿರುತ್ತೆ.

[illegible]

ಹೆಚ್ಚಿನ ವಿವರಗಳಿಗೆ—ಬಿ. ಎಸ್. ಐಯ್ಯಪ್ಪ,
ಕೊಡಗು ಚೀಫ ಏಜೆಂಟ್,
ಮಹದೇವಪೇಟೆ, ಮಡಿಕೇರಿ.

16—9

"[illegible] ನಿನ್ನ ವಸ್ತ್ರಗಳ ವಿಷಯದಲ್ಲಿ ಹೆಚ್ಚು ಜಾಗರೂಕಳಾಗಿರುವೆ."

"ಹೌದು, ಆದ್ದರಿಂದಲೇ ನಾನು ಅವನ್ನು 501 ಸಾಬೂನಿನಿಂದ ಒಗೆಯುವುದು."

ಟಾಟಾ ಕಂಪೆನಿ ಮಾರಾಟದ ಮಳಿಗೆ,
೧, ಸೆಂಟ್ರಲ್ ಸ್ಟ್ರೀಟ್, ಬೆಂಗಳೂರು ದಂಡು.

501 Soap

ನೊರೆ ಹೆಚ್ಚು.
ವಸ್ತ್ರ ಬಾಳಿಕೆ.
ಕ್ರಯ ಅತೀ ಕಡಮೆ!

ತಯಾರಿಸುವವರು—ಟಾಟಾ ಆಯಿಲ್ ಮಿಲ್ಸ್, ಕಂಪೆನಿ, ಲಿಮಿಟೆಡ್, ಬೊಂಬಾಯಿ, ಮತ್ತು ತಾತಾಪುರ.

52—37.　　ಕೊಡಗಿನ ಡಿಸ್ಟ್ರಿಬ್ಯೂಟರ್—ಬಿ. ಎಸ್. ಸುಬ್ಬಣ್ಣ, ಸಂತೆಪೇಟೆ, ಮೈಸೂರು.

ನೂತನ!　ಮನೋಲ್ಲಾಸಕರ!!　ರುಚಿಕರ!!! 　ಅವಶ್ಯ ವಿಶ್ರಾಂತಿಗೃಹ!!!!

ಬೊಂಬಾಯಿ ರೆಸ್ಟೋರೆಂಟ್

ಇದೇ ತಾ. 19—12—1935ರಲ್ಲಿ ಮಡಿಕೇರಿ ಚೌಕದಲ್ಲಿರುವ
ಹೊಸ ಕಟ್ಟಡದಲ್ಲಿ ತೆರೆಯಲ್ಪಟ್ಟಿದೆ.

ಆರೋಗ್ಯಕರವೂ ಅಧಿಕ ರುಚಿಯೂ ಆದ ಉಪಹಾರ ಗೃಹವೊಂದನ್ನು ಸಿರೀಕ್ಷಿಸುವ ಮಹನೀಯರುಗಳ ಸೌಕರ್ಯಕ್ಕಾಗಿ ತೆರೆಯಲಾಗುವುದು.

ಶುದ್ಧವೂ, ಪುಷ್ಟಿಕರವೂ, ಆರೋಗ್ಯಕರವೂ ಆದ ತಿಂಡಿತಿನಸುಗಳನ್ನೂ

ಕಾಫಿ—ಚಹಾ—ಕೋಕೋ—ಶರಬತ್ತು ಇತ್ಯಾದಿ ಪಾನೀಯಗಳೂ—
ಕೇವಲ ಹಲವು ವರ್ಷಗಳ ಅನುಭವಿಕರಿಂದ ತಯಾರಿಸಲ್ಪಡುವುವು.

ಗಿರಾಕಿಗಳ ಸೌಕರ್ಯವನ್ನು ಲಕ್ಷಿಸಿ, ಆಸನಗಳ—ವಿಶಾಲ ಕೊಠಡಿಗಳ—ಶಾಯೊಗ್ಯವಾದ ವಿನೀತ ಸೇವಕರ ಏರ್ಪಾಡು ಇದೆ.

ಆಯಕ್ಕೆ ತಕ್ಕ ವ್ಯಯ ಮಾಡುವವರು, ವ್ಯಯಕ್ಕೆ ತಕ್ಕ ರುಚಿಯನ್ನು ಹೊಂದಬೇಕಾದ ಅತ್ಯಾಧುನಿಕ ಈ ವಿಶ್ರಾಂತಿಗೃಹದಲ್ಲಿ—

ನೀವು ಅಪೇಕ್ಷಿಸಿದ—ನೀವು ನಿರೀಕ್ಷಿಸಿದ—ನೀವು ಹೊಂದಲೇಬೇಕಾದ—
ಸಕಲ ಅನುಕೂಲತೆಗಳನ್ನು ಕಂಡು, ಪೂರ್ಣ ತೃಪ್ತಿಹೊಂದಿರಿ.

ಮದುವೆ ಮತ್ತು ಉಪನಯನ ಸಮಾರಂಭಗಳಲ್ಲಿಯೂ ಮತ್ತು "ಟೀ"ಪಾರ್ಟಿ—
"ಎಟ್-ಹೋಮ್"ಗಳಲ್ಲಿಯೂ ನಮ್ಮನ್ನು ಮರೆಯಬೇಡಿ.

52—8　　ಪ್ರೊಪ್ರೈಟರ್:—ವಾಮನ ರಾವ್, ಗುಂಡುಕೊಂಡೆ.

ಪ್ರದೇಶ.

1935 ನೇ ಡಿಸೆಂಬರು ತಿಂಗಳಲ್ಲಿ ಕೊಡಗಿನಲ್ಲಿ 309 ಮರಣಗಳೂ, 277 ಜನನಗಳೂ ಸಂಭವಿಸಿದವು.

ಮಡಿಕೇರಿ ಮುನಿಸೀಫರ ಉದ್ಯೋಗವು ಇಂಡಿಯಾ ಸರಕಾರದಿಂದ ಮಂಜೂರಾಗಿದೆಯೆಂದು ತಿಳಿಯುತ್ತದೆ.

ಕಳೆದ ವಾರ ಫ್ರೇಜರ್‌ಪೇಟೆ ಹೋಟೆಲಿಯ ಕೊಠಡಿಯಲ್ಲಿ ಒಬ್ಬರಿಗೆ ಪ್ಲೇಗು ಅಂಟಿತೆಂದು ತಿಳಿಯುತ್ತದೆ.

ಈ ವಾರ ಮಡಿಕೇರಿಯಲ್ಲಿ ಕಾಫಿ ಬೀಜಕ್ಕೆ ರೂ. 132 ಮತ್ತು ವೀರರಾಜಪೇಟೆಯಲ್ಲಿ ಭತ್ತ ಗಾಡಿಗೆ ರೂ. 35 ಕ್ರಯವಿತ್ತೆಂದು ತಿಳಿಯಬರುತ್ತದೆ.

ನಾಪೋಕ್ಲು ಹೈಸ್ಕೂಲ್ ಎಲಿಮೆಂಟರಿ ಶಾಲೆಯ 60 ನೇ ವರ್ಷದ ಪಟ್ಟಿಯೂ ಈ ತಾ. 15 ನೇ ಶನಿವಾರ ನಡೆಯುವದೆಂದು ತಿಳಿಯಬರುತ್ತದೆ.

ಮಡಿಕೇರಿಯವರು ಬೆಟ್ಟಗೇರಿ ಗ್ರಾಮದ ಮಾ. ರಾ. ಕುಟ್ಟೇಟಿರ ಅಪ್ಪಣ್ಣನವರು ಈ ತಾ. 4 ರಂದು ಸ್ವರ್ಗಸ್ಥರಾದರೆಂದು ತಿಳಿಯುತ್ತೇವೆ.

ಹಿಂದೀ ಪ್ರಾಥಮಿಕ, ಮಾಧ್ಯಮಿಕ ಮತ್ತು ರಾಷ್ಟ್ರಭಾಷಾ ಪರೀಕ್ಷೆಯು ಈ ತಾ. 9 ನೇ ಆದಿತ್ಯವಾರ ಮಡಿಕೇರಿ ಸೆಂಟ್ರಲ್ ಹೈಸ್ಕೂಲು ಹಾಲ್‌ನಲ್ಲಿ ನಡೆಯುವುದು.

ಈ ತಾ. 4 ರಲ್ಲಿ ಕೊಡಗಿನ ಹಲವು ಕಡೆಗಳಲ್ಲಿ ಜೋರಾದ ಮಳೆ ಬಿದ್ದು ಭತ್ತಕ್ಕೂ, ರಾಗಿಗೂ, ಕಾಫಿಗೂ ನಷ್ಟ ಸಂಭವಿಸಿದೆ. ಆ ದಿನ ಮಡಿಕೇರಿಯಲ್ಲಿ 24 ಸೆಂಟು ಮಳೆಯಾಯಿತು.

ಕೊಡಗು ಶಾಲಾ ಇನ್‌ಸ್ಪೆಕ್ಟರಾದ ಮಿ. ಎಡ್ಮಂಡ್ಸ್‌ರವರು ತಮ್ಮ ಹೊಸ ಹುದ್ದೆಯಿಂದ ಬಂದು ವಿದ್ಯಾಭ್ಯಾಸ ಕಮಿಟಿಯ ಸೆಕ್ರೆಟರಿತನವನ್ನು ಮುಗಿದ ಕೂಡಲೆ ಎಂಟು ತಿಂಗಳು ರಜೆ ತೆಗೆದುಕೊಳ್ಳುವರು.

ರಾಜಮಹೇಂದ್ರಿ ಸರಕಾರಿ ಟ್ರೈನಿಂಗ್ ಕಾಲೇಜಿನ ಪ್ರಿನ್ಸಿಪಾಲರಾದ ಮಿ. ಯಂ. ಯಸ್. ಹಚ್. ಥಾಮ್ಸನ್‌ರವರು ಈ ತಾ. ೬ ರಿಂದ ಕೊಡಗು ಮತ್ತು ಬೆಂಗಳೂರು ಶಾಲೆಗಳ ಹಂಗಾಮಿ ಇನ್‌ಸ್ಪೆಕ್ಟರಾಗಿ ನೇಮಿಸಲ್ಪಟ್ಟಿರುವರು.

ಈ ತಾ. 21 ರಲ್ಲಿ ಶ್ರೀಮಂಗಲ ನಾಡು ಕುಟ್ಟ ಗ್ರಾಮದಲ್ಲಿ ನಡೆಸುವ ಮಹಾ ಶಿವರಾತ್ರಿಯ ಜಾತ್ರೆ ಸಂದರ್ಭದಲ್ಲಿ ಮೈಸೂರು ಸಂಸ್ಥಾನದಿಂದ ಬರುವ ಜನರು ಕಾಲರಾ ರೋಗ ಹರಡಿದ ಪ್ರದೇಶಗಳಿಂದ ಜನರು ಬರುವುದನ್ನು ಚೀಫ್ ಕಮಿಷನರು ನಿರೋಧಿಸಿರುವರು.

ಮಹಾಪ್ರಳಯ ಬಸ್ಸಿಯ ಮೇಲುಕೋಟೆಯಲ್ಲಿರುವ ಒಂದು ಒಂಟಿಗ ಕೊಂಬಿನಾನೆಯು 'ರೋಗ್' (ಕಳ್ಳ) ಎಂದು ಕರೆಯಲ್ಪಟ್ಟಿದೆಯೆಂದೂ, ಅದನ್ನು ಕೊಲ್ಲಲು ಇಚ್ಛಿಸುವವರು ಲೈಸನ್ಸಿಗೆ ಅರ್ಜಿ ಹಾಕಬಹುದೆಂದೂ ಕಮಿಷನರವರು ಪ್ರಕಟಿಸಿರುವರು.

ಕೊಡಗಿನ ಕಮಿಷನರಾಗಿರುವ ಮಿ. ಜೆ. ಯಸ್. ಬಾಸ್ ವೆಲ್‌ರವರು ಇಂಡಿಯಾ ಸರಕಾರದ ವಿದ್ಯಾ, ಆರೋಗ್ಯ ಮತ್ತು ಜಮೀನು ಇಲಾಖೆಯ ಡೆಪ್ಯುಟಿ ಸೆಕ್ರೆಟರಿಯವರಾಗಿ ನೇಮಿಸಲ್ಪಟ್ಟಿರುವರು. ಇವರು ಬರುವ ಏಪ್ರಿಲ್ ತಿಂಗಳ ಸುಮಾರಿನಲ್ಲಿ ಡೆಲ್ಲಿಗೆ ಹೋಗುವರಾಗಿ ತಿಳಿಯಬರುತ್ತದೆ.

ಮಡಿಕೇರಿ ಮುನಿಸೀಫ್ ಕೋರ್ಟಿಗೆ ಉತ್ತರ ಕೊಡಗು ಪೂರ್ತಿ ಮತ್ತು ನಾಪೋಕ್ಲು ನಾಡಿನ ನಾಲಡಿ, ಅಯ್ಯಂಗೇರಿ, ಪಾಲಿಕೋಟು, ಬಲ್ಲಮಾವಟಿ, ಪೇರೂರು, ನೆಲಜಿ, ಯವಕಪಾಡಿ, ನಾಪೋಕ್ಲು, ಕೊಳಕೇರಿ, ಕುಂಜಿಲ ಮತ್ತು ಬೇತು ಗ್ರಾಮಗಳು ಸೇರುತ್ತವೆ. ವೀರರಾಜಪೇಟೆ ಮುನಿಸೀಫ್ ಕೋರ್ಟಿಗೆ ನಾಪೋಕ್ಲು ನಾಡಿನ ಮೇಲಿನ 11 ಗ್ರಾಮಗಳ ವಿನಹ ಇಡೀ ದಕ್ಷಿಣ ಕೊಡಗು ಸೇರುತ್ತದೆ ಎಂದು ಗಜೆಟಿನಲ್ಲಿ ಪ್ರಕಟವಾಗಿದೆ.

ಮೈಸೂರು ಸ್ಕೌಟ್ಸರಲ್ಲಿ ಕ್ರೀಡೆಯ ಆಫೀಸರಾಗಿರುವ ಮಿ. ಕೊಡಂದ ಯಂ. ಚಂಗಪ್ಪನವರು ಕಳೆದ ಜನವರಿ ತಿಂಗಳಲ್ಲಿ ನಡೆದ ಮೈಸೂರು ಸಂಸ್ಥಾನದ 'ಒಲಿಂಪಿಕ್ ಸ್ಪೋರ್ಟ್ಸ್'ನಲ್ಲಿ 220 ಗಜ, 440 ಗಜ, 880 ಗಜ ಮತ್ತು 1 ಮೈಲು ಓಟಗಳಲ್ಲಿ ಅಲ್ಲ (1933—34 ರ ತಮ್ಮ 'ರೆಕಾರ್ಡ್'ಗಳನ್ನೆಲ್ಲಾ ಮೀರಿ) ಒಂದನೇ ಇನಾಮುಗಳನ್ನು ಪಡೆದರೆಂದೂ, ಅವರ ಆಕ್ಷೇಪ ಇಲ್ಲದೆ ಅವರು ಒಲಿಂಪಿಕ್ ಕಮಿಟಿಯವರು ಈ ತಾ. 14 ಮತ್ತು 15 ರಲ್ಲಿ ಲಾಹೋರಿನಲ್ಲಿ ನಡೆಯುವ ಅಖಿಲ ಭಾರತ 'ಒಲಿಂಪಿಕ್ ಸ್ಪೋರ್ಟ್ಸ್'ಗೆ ಅವರನ್ನು ಮೈಸೂರು ಸಂಸ್ಥಾನದ ಪ್ರತಿನಿಧಿಯಾಗಿ ಆರಿಸಿರುವರೆಂದೂ ಕೇಳಿ ಸಂತೋಷಪಡುತ್ತೇವೆ.

ಹಿಂದೂದೇಶ.

ಮದರಾಸು ಸರಕಾರವು ಈ ವರ್ಷದ ಭೂಕಂದಾಯದಲ್ಲಿ ಕಳೆದ ವರ್ಷದ ಹಾಗೆ ಶೇಕಡ 12½ ಗೆ ಏನಿಂದ ಮಾಫಿ ಕೊಡಲು ನಿರ್ಧರಿಸಿದೆ.

ದಕ್ಷಿಣ ಜಾವಳಿಗಳನ್ನು ಪಡೆದಿರುವವರಿಗೂ ಕಾಂಗ್ರೆಸ್ ಸದಸ್ಯರಾಗಲು ಹಕ್ಕೆಂದು ಕಲಕತ್ತೆಯಲ್ಲಿ ನಡೆದ ಆಖಿಲ ಭಾರತ ಕಾಂಗ್ರೆಸ್ಸಿನ ಸಮ್ಮೇಳನದಲ್ಲಿ ತೀರ್ಮಾನವಾಗಿದೆ.

ಗುರುಕುಲ ಕಾಂಗ್ರಿ ಪ್ರಧಾನಾಚಾರ್ಯ ಸಮಿತಿಯ ಶ್ರೀ ನಾರಾಯಣ ಸ್ವಾಮಿಗಳು ಹರಿಜನೋದ್ಧಾರಕ್ಕಾಗಿ 3 ಲಕ್ಷ ರೂಪಾಯಿಗಳನ್ನು ದಾನ ಕೊಟ್ಟಿರುವರು.

ಸಮಿತಿಯವರು ಪ್ರಾಂತೀಯ ಕಾಂಗ್ರೆಸ್ ಕಮಿಟಿಗೆ ಪುನಃ ಶ್ರೀ ಸತ್ಯಮೂರ್ತಿಯವರೇ ಅಧ್ಯಕ್ಷರಾಗಿ ಚುನಾಯಿತರಾಗಿದ್ದಾರೆ. ಶ್ರೀಮತಿ ರುಕ್ಮಿಣಿ ಲಕ್ಷ್ಮೀಪತಿಯವರು ಉಪಾಧ್ಯಕ್ಷರಾಗಿರುವರು.

ಪಂ. ಜವಾಹರಲಾಲರು ಕಲಕತ್ತೆಗೆ ಬಂದಾಗ ಸತ್ಕಾರವಾಗಿ 3 ಲಕ್ಷ ರೂ. ಖರ್ಚಿನಿಂದ ಕಟ್ಟಿಸುವ ಹಿಂಗ ವ್ಯಾಪಾರ ಸಂಘದ ಕಟ್ಟಡದ ಪ್ರವೇಶೋತ್ಸವವನ್ನು ಮಾಡುವರಾಗಿ ತಿಳಿದು ಬರುತ್ತದೆ.

ಲಾಹೋರಿನಲ್ಲಿ ಸ್ವದೇಶಿ ಪಿಕೆಟಿಂಗುಗಳನ್ನು ಮಾಡುವ ಸ್ವಯಂಸೇವಕರನ್ನು ಪೊಲೀಸರು ದಸ್ತಗಿರಿ ಮಾಡಿದ್ದಾರೆ. ಇನ್ನೂ ಕೆಲವು ಸ್ವದೇಶಿ ಪಿಕೆಟಿಂಗುಗಳು ಕಂಡು ಹಿಡಿಯಲ್ಪಟ್ಟಿವೆಯಂತೆ.

ಗೋವಿಂದಲಾಲ್ ಘೋಷ್ ಎಂಬವರು ಕಳೆದ ಜನವರಿ ತಾ. 18ರಲ್ಲಿ ಬಂಗಾಳದ ಪ್ರಧಾನ ನ್ಯಾಯಾಧೀಶರ ಆಸನದಲ್ಲಿ ಕುಳಿತ ಅಪರಾಧದ ಮೇಲೆ ಅವನಿಗೆ ಒಂದು ವರ್ಷ ಕಠಿಣ ಸಜೆ ವಿಧಿಸಲ್ಪಟ್ಟಿರುವರು.

ರಾಜ್ಯದ ನ್ಯಾಯಸ್ಥಾನಗಳ ಕೆಲವರಿಗೆ ಪಕ್ಷದವರು ವೇದಾವನ ಚೆಲ್ಲಿಗೆ ಸೇರಿದ ಮದರಾಸ್ ನಗರ ಸಭೆಯ ಚುನಾವಣೆಗೆ ತಮ್ಮ ಕಡೆಯ ಉಮೇದ್ವಾರರನ್ನು ನಿಲ್ಲಿಸುವುದಕ್ಕೆ ನಿರ್ಧರಿಸಿದ್ದಾರೆ. ಎಂಟು ಸ್ಥಾನಗಳ ಪೈಕಿ ಏಳಕ್ಕೆ ಇವರು ತಮ್ಮ ಪ್ರತಿನಿಧಿಗಳನ್ನು ನಿಲ್ಲಿಸುವರು.

ವೇದಾಂತ ವಿಷಯದಲ್ಲಿ ಅನ್ವೇಷಿಯ ಪಂಡಿತರೂ, ಪ್ರಕೃತ ಆಂಧ್ರ ವಿಶ್ವವಿದ್ಯಾಲಯದ ವೈಸ್ ಚಾನ್ಸಲರೂ ಆಗಿರುವ ಡಾ. ಸರ್ ರಾಧಾಕೃಷ್ಣನ್‌ರವರು ಆಕ್ಸ್‌ಫೋರ್ಡ್ ವಿಶ್ವವಿದ್ಯಾಲಯದ ಪ್ರೊಫೆಸರಾಗಿ ನೇಮಕಹೊಂದಿರುವರೆಂದು ವರದಿ ತಿಳಿಸಿದೆ. ಡಾ. ರಾಧಾಕೃಷ್ಣನವರು ಪ್ರೊಫೆಸರ್ ಆಫ್ ಈಸ್ಟರ್ನ್ ರಿಲಿಜನ್ಸ್ ಆಗಿ ಕೆಲಸ ಮಾಡುವರು.

ಬೊಂಬಾಯಿಯ ಸುಪ್ರಸಿದ್ಧ ಕಾಂಗ್ರೆಸ್ ಮಹಿಳೆಯಾದ ಮಿಸ್ ಸೋಫಿಯಾ ಸೋಮ್‌ಜಿಯವರ ಮತ್ತು ಡಾಕ್ಟರ್ ಖಾನ್ ಸಾಹೇಬ್ ಎ. ಎಸ್. ಎ. ಮಿರ್ಜಾ ಪುತ್ರ ಎ. ಸಾದಿಕ್ ಖಾನರ ವಿವಾಹವು ಕಳೆದ ತಾ. 25ರಲ್ಲಿ ಬೊಂಬಾಯಿಯಲ್ಲಿ ಹಲವು ರಾಷ್ಟ್ರ ಮುಖಂಡರ ಸಮಕ್ಷದಲ್ಲಿ ವಿಧಿಪೂರ್ವಕ ನೆರವೇರಿತು.

ಕಳೆದ ಒಂದು ವಾರದಲ್ಲಿ 76,93,967 ರೂ. ಗಳ ಬೆಲೆ ಬಾಳುವಷ್ಟು ಚಿನ್ನವು ಮುಂಬಯಿಯಿಂದ ವಿದೇಶಗಳಿಗೆ ಹೋಯಿತು. ಐರೋಪ್ಯಯುದ್ಧ ಪ್ರಾರಂಭವಾದಂದಿನಿಂದ ಈ ವರೆಗೆ ಭಾರತದಿಂದ 2,59,92,52,473 ರೂ. ಗಳ ಬೆಲೆ ಬಾಳುವ ಚಿನ್ನವು ಹೊರಟು ಹೋಗಿದೆ.

ಹಿಂದುಸ್ಥಾನದಲ್ಲಿ ದೇಶ ರಕ್ಷಣೆಯನ್ನು ಸಮುದ್ರದ ಮೇಲಾಗಲಿ, ಭೂಮಿಯ ಮೇಲಾಗಲಿ ಬ್ರಿಟಿಷ್ ಇಂಗ್ಲೆಂಡಿನಿಂದ ಹೊರಡುವ ಸೈನ್ಯಕ್ಕೆ 28 ಬ್ರಿಗೇಡ್ ಖರ್ಚಕ್ಕೆ ಎಂದಾಗುತ್ತದೆ ಮತ್ತು ವಸೂಲುಮಾಡಬೇಕೆಂದು ಇಂಡಿಯಾ ಸರಕಾರದವರು ಪ್ರಕಟಿಸಿದ್ದಾರೆ.

ಮ. ಗಾಂಧಿಯವರು ದಿನ ದಿನಕ್ಕೆ ಗುಣಹೊಂದುತ್ತಿರುವರಾಗಿಯೂ, ಆದರೂ ವಿಶ್ರಾಂತಿಯನ್ನು ಅವರು ಹೊಂದಬೇಕೆಂದು ಡಾಕ್ಟರು ಅಭಿಪ್ರಾಯಪಟ್ಟಿರುತ್ತಾರೆ. ಮ. ಗಾಂಧಿಯವರು ಅನತಿದಿವಸದಲ್ಲಿ ಗುಜರಾತ್ ವಿದ್ಯಾಪೀಠದಲ್ಲಿ ವಿಶ್ರಾಂತಿ ತೆಗೆದುಕೊಳ್ಳಲಿದ್ದಾರೆ. ಅವರು ಪೂರ್ಣ ಗುಣಹೊಂದಬೇಕಾದಲ್ಲಿ ಇನ್ನೂ ಕೆಲವು ವಾರಗಳು ವಿಶ್ರಾಂತಿ ತೆಗೆದುಕೊಳ್ಳಬೇಕೆಂದು ವೈದ್ಯರು ತಿಳಿಸುತ್ತಾರೆ.

ಕಾನ್‌ಪುರದಿಂದ 40 ಮೈಲು ದೂರದಲ್ಲಿರುವ ಮಹಾರಾಜಪುರ ಪೋಲೀಸ್ ಸ್ಟೇಷನಿನಲ್ಲಿ ಅಕಸ್ಮಾತ್ ಬೆಂಕಿ ಹತ್ತಿ 20 ಬಂದೂಕುಗಳೂ 2.0 ತೋಟಗಳೂ ಕೆಲವು ಪತ್ರಗಳೂ ಪೋಲೀಸರ ಉಡುಪುಗಳೂ ಸುಟ್ಟು ಹೋದವು. ಆಗ ಬೀಸಿದ ಗಾಳಿಯಿಂದ ಬೆಂಕಿಯು ಹರಡಿ ಆ ಊರಿನ ಕೆಲವು ಪೋಲೀಸರ ಮನೆಗಳ ವರೆಗೆ ಸುಟ್ಟು ಹೋಗಿವೆಯಂತೆ.

ಪೂನಾದಲ್ಲಿ ಜರಗಿದ ಶುದ್ಧಿ ಮತ್ತು ಸಂಘಟನೆ ಪರಿಷತ್ತುಗಳಿಗೆ ಅಧ್ಯಕ್ಷರಾಗಿದ್ದ ಜಗದ್ಗುರು ಶ್ರೀ ಶಂಕರಾಚಾರ್ಯರು (ಡಾ. ಕುರ್ತಕೋಟಿಯವರು) ಅಸ್ಪೃಶ್ಯತಾ ನಿವಾರಣ ಸಂಘದಿಂದ ಒಂದು ಹೊಸ ಸಂಘವನ್ನೇರ್ಪಡಿಸಿ ಹರಿಜನರ ಉದ್ಧಾರಕ್ಕಾಗಿ ಬೇಕಾದ ಕೆಲಸಗಳನ್ನು ಮಾಡುತ್ತಿರುವರು. ಇವರ ಸಂಘದವರ ಯತ್ನದಿಂದ ಹರಿಜನ ಮತ್ತು ಇತರ ಹಿಂದುಗಳಲ್ಲಿದ್ದ ವೈಷಮ್ಯವು ಕಡಿಮೆಯಾಗುತ್ತಿದೆ.

ಕಾಶ್ಮೀರ ಸೀಮೆಯ ಹೃದಯಪಾದ ಜೋಗೇಶ ಚಟರ್ಜಿಯವರು 86 ದಿನಗಳಿಂದ ನಿರಾಹಾರ ವ್ರತವನ್ನು ಕೈಕೊಂಡಿರುವರು. ಅವರ ಪ್ರಕೃತಿಯು ಕಳವಳಕ್ಕೀಡಾಗಿರುವುದರಿಂದ ಭಾರತದ ಅನೇಕ ಕಡೆಗಳಲ್ಲಿ ಸಭೆಗಳು ಕೂಡಿ ಅವರ ಬೇಡಿಕೆಗಳನ್ನು ಒಡನೆ ಮನ್ನಿಸಬೇಕೆಂದು ಸರಕಾರದವರಿಗೆ ಅಪೀಲು ಮಾಡಿರುವರು. ಈ ವಿಷಯದ ಒಂದು ಠರಾವನ್ನು ಅಖಿಲ ಬಂಗಾಲ ಸಭೆಯಲ್ಲಿ ಎಸೆಂಬ್ಲಿಯಲ್ಲಿ ತರಬೇಕೆಂದುದಕ್ಕೆ ಸರಕಾರದ ಅನುಮತಿ ದೊರೆಯಲಿಲ್ಲ.

ಅಲ್ಲಾಹಾಬಾದಿನ ಕುಂಭಮೇಳಕ್ಕೆ ಹಿನ್ನ ಯಾತ್ರಿಕನಾದ ಒಬ್ಬ ಸಾಧುವಿನಿಂದಾಗಿ ಅಕನು ಸಾಕಿದ ಒಂದು ಹುಲಿಯ ಬಂದಿತ್ತು. ಅದರ ಆ ಪ್ರಾಣಿ ಸ್ವಾಧೀನದಲ್ಲಿ, ಸಾಧು ವಿನಷ್ಟೇ ಸಾಧು. ಅದರ ಆಹಾರ ಶಾಕಾಹಾರಿಗಳು ಇರುವ ಮಠದೊಳಗೆ ನಡೆಯುವಲ್ಲೆಲ್ಲಾ ಹೋಗಿ ಅದನ್ನು ನೋಡಲು ಜನರು ಕೂಡುತ್ತಿತ್ತು. ಗ್ರಾಮಾಧಿಕಾರಿಯಿಂದ ಅಪ್ಪಣೆಯಲ್ಲಿ ಇದು ಬಂತು.

ವಾಗಲೂ ಯಜಮಾನನೊಂದಿಗೆ ಹಾಜರು. ಇದು ಯಜಮಾನ ಸಾಧುವು ದೊರೆಯಿಂದ ಬಹಳ ಕೃತಜ್ಞನಾದ.

ಸರ್ ಸಿ. ವಿ. ರಾಮನ್‌ರವರು, ಸರ್ ಪಿ. ಸಿ. ರೇ ಯವರಾಗಲಿ ಡಾಕ್ಟರ್ ಆಫ್ ಸೈನ್ಸ್ (ವಿಜ್ಞಾನ ಆಚಾರ್ಯ), ಬಂಗಾಳದ ಮಾಜಿ ಗವರ್ನರ್ ಸರ್ ಜಾನ್ ಎಂಡರ್‌ಸನ್‌ರವರಿಗೂ, ಎಸೆಂಬ್ಲಿ ಪ್ರೆಸಿಡೆಂಟ್ ಸರ್ ಅಬ್ದುಲ್ ರಹೀಮರಿಗೂ ಡಾಕ್ಟರ್ ಆಫ್ ಲಾ (ನ್ಯಾಯಶಾಸ್ತ್ರ ಪಂಡಿತ), ಅಲ್ಲದೆ ಸರ್ ಬಾಬಾ ನಾಥ್ ಸರ್ಕಾರ್, ಕವಿವರ್ಯ ರವೀಂದ್ರನಾಥ್ ಟಾಗೋರ್, ಬಂಗಾಳಿ ನಾವೆಲುಗಳ ಸುಪ್ರಸಿದ್ಧ ಲೇಖಕ ಶ್ರೀ ಶರತ್‌ಚಂದ್ರ ಚಟರ್ಜಿ, ಸರ್ ಮಹಮ್ಮದ್ ಇಕ್ಬಾಲ್‌ರವರಿಗೆ ಡಾಕ್ಟರ್ ಆಫ್ ಲಿಟರೇಚರ್ (ಸಾಹಿತ್ಯ ಆಚಾರ್ಯ) — ಈ ರೀತಿ ಗೌರವಾರ್ಹದ ಪದವಿಗಳನ್ನು ಢಾಕಾ ಯೂನಿವರ್ಸಿಟಿ ಕೊಡುತ್ತಿದೆ ಎಂದು ವರದಿಯಾಗಿದೆ.

ಬೆಂಗಳೂರು ಎಕ್ಸ್‌ಚೇಂಜ್ ಬ್ಯಾಂಕ್ ಹಣದ ಧರ್ಮವಾಗಿ ತಿರುಗಿ ಕೆಲವು ತೀರ್ಮಾನಗಳನ್ನು ಕಳೆದ ಶನಿವಾರ ಸಿಟಿ ಮ್ಯಾಜಿಸ್ಟ್ರೇಟ್ ಮಿ ಬಿ. ಎಸ್. ನಾಗರಾಜರಾವ್ ತೀರ್ಪು ಹೇಳಿದರು. ಆ ಬ್ಯಾಂಕಿನ ಮ್ಯಾನೇಜರ್ ಎಸ್. ವೆಂಕಟಸುಬ್ಬಯ್ಯನು ತನ್ನ ದೋಷವನ್ನು ಒಪ್ಪಿದನೆಂದು ಎರಡು ವರ್ಷ ಕಠಿಣ ಸಜಾ ಶಿಕ್ಷೆಯನ್ನು, 1,000 ರೂಪಾಯಿ ಜುಲ್ಮಾನೆ ಶಿಕ್ಷೆಗಳನ್ನು ತಪ್ಪಿದರೆ ಆರು ತಿಂಗಳಿನ ಇನ್ನೂ ಎರಡು ವರ್ಷ ಕಠಿಣ ಸಜಾ ಶಿಕ್ಷೆ. ಈ ಎರಡು ಶಿಕ್ಷೆಗಳೂ ಏಕಕಾಲದಲ್ಲಿಯೇ ಅನುಭವಿಸತಕ್ಕದ್ದು. ಜುಲ್ಮಾನೆ ವಸೂಲಾಗದಿದ್ದಲ್ಲಿ ಇನ್ನೂ ಆರು ತಿಂಗಳ ಕಠಿಣ ಶಿಕ್ಷೆ ಅನುಭವಿಸಬೇಕೆಂತಲೂ, ಜುಲ್ಮಾನೆ ವಸೂಲಾದಲ್ಲಿ 500 ರೂ. ಬ್ಯಾಂಕಿಗೆ ಪರಿಹಾರ ದ್ರವ್ಯ ಕೊಡಬೇಕೆಂದೂ ತೀರ್ಮಾನಿಸಿರುತ್ತಾರೆ.

ವಿದೇಶ.

ಈಗ ಹೊಸ ನಮೂನೆಯ ಯಂತ್ರವೊಂದು ತಯಾರಾಗಿದೆ. ಹಾಳು ನಾಣ್ಯಗಳನ್ನು ಕೊಟ್ಟರೆ ಆ ಯಂತ್ರವು ಅವುಗಳನ್ನು ಹಿಂದೆಕೊಡುತ್ತದೆ. 'ನಮ್ಮವರು ಒಳ್ಳೆ ನಾಣ್ಯಗಳನ್ನು ಕೊಡಿ ಸ್ವಾಮಿ' ಎನ್ನುತ್ತದೆ.

ಸ್ವಿಟ್ಜರ್ಲೆಂಡಿನ ಜನರಲ್ ನಾಜೀ ಪಕ್ಷದ ಮುಖಂಡರಾದ ಹರ್ ಗಸ್ಟ್ಲೋಫ್ ಎಂಬವರನ್ನು ಡೇವಿಡ್ ಫ್ರಾಂಕ್‌ಫರ್ಟ್ ಎಂಬ ಯಹೂದಿ ಗುಂಡು ಹೊಡೆದು ಕೊಂದಿರುವನು. ಆತನು ಅನಂತರ ಪೋಲೀಸರಿಗೆ ಶರಣಾದನು. ಹರ್ ಹಿಟ್ಲರು ಈ ವಿಷಯದಲ್ಲಿ ತನ್ನ ಸಮಾಧಾನವನ್ನು ಗಸ್ಟ್ಲೋಫ್ ಪತ್ನಿಯವರಿಗೆ ತಿಳಿಸಿರುವನು.

ಆಸ್ಟ್ರೇಲ್ಯ ತಿಂಗಳಲ್ಲಿ ಬಾತ್ ನಲ್ಲಿ ವಿಶೇಷವಾದ ಕಿರಿಯರು, ಬಿಸಿಲಿನ ಇದರಿಂದ ಟೈನ್ ಕೊಪ್ಪೆ ಮರಗಳಿಗೆ ಒಳ್ಳೆಯ ಲಾಭವಾಯಿತು. ಬಸ್ಸುಗಳಲ್ಲಿ ಮೂರು ಟ್ರಾಮ್‌ಗಳಲ್ಲಿ ಎರಡು ಸೆಂಟರಿರುವ ಜನರು ಅವರಿಂದಲ್ಲಿ ಹೋಗುವಾಗ ಕೂಡೆಗಳನ್ನು ಹಿಡಿದು ಬಿಟ್ಟದ್ದರಿಂದ ಒಂದೇ ವಾರದೊಳಗೆ 1158 ಕೊಡೆಗಳು ಕಂಪೆನಿಯವರಿಗೆ ದೊರೆತವಂತೆ!

ಜಪಾನ್ ಸೈನಿಕರಿಗೂ ಮಂಗೋಲಿಯದ ಸೈನಿಕರಿಗೂ ಕಳೆದವಾರ ಮಂಗೋಲಿಯಕ್ಕೆ ಪೂರ್ವದಿಕ್ಕಿನಲ್ಲಿ ಯುದ್ಧವಾಗಿ ಎರಡು ಕಡೆಯ ಸೈನಿಕರು ಸತ್ತರು ಎಂದು ವರದಿಯಾಗಿದೆ. ಸೋವಿಯಟ್ (ರಷ್ಯಾ) ಸರಕಾರದವರು ಮಂಗೋಲಿಯದವರಿಗೆ ಬೆಂಬಲವಾಗಿ ನಿಂತು ಈ ಕಲಹ ನಡೆಸುತ್ತಾರೆಂದು ಜಪಾನಿನವರು ಆಕ್ಷೇಪಿಸುತ್ತಾರೆ.

ಜರ್ಮನಿಗೆ ಸೇರಿದ ಸಿಲೇಶ್ಯ ಎಂಬಲ್ಲಿ ಒಂದು ಮನೆಗೆ ಬೆಂಕಿ ಹತ್ತಿತು. ಆ ಊರಿನಲ್ಲಿ ಬಾವಿಗಳಿಲ್ಲ. ಬತ್ತಿಹೋದುದರಿಂದ ಬೆಂಕಿ ಆರಿಸುವ ರೀತಿಯು ಗ್ರಾಮಸ್ಥರಿಗೆ ತೋರದೆ ಹೋಯಿತು. ಕೊನೆಗೆ ಆ ಊರಿನ ತಪ್ಪಲಲ್ಲಿದ್ದ ಹಾಲಿನ ಪಿಪಾಯಿಗಳು ಬಂದವು. ಹಾಲನ್ನು ಸುರಿದು ಅಗ್ನಿದೇವನ ಮೇಲೆ ಸುರಿದರು. ಅಗ್ನಿದೇವನು ಶಾಂತನಾದನು. ಹಾಲೇನೋ ಖರ್ಚಾದ ನಷ್ಟವಾಯಿತು.

ವಿಜ್ಞಾಪನೆ.

ಕಂದಾಯ ಮಾಫಿ ಭೂಮಿ ಗಿರಿ ಬ್ಯಾಂಕು, ಮತ್ತು ಕೊಡಗಿನ ರಾಜಕೀಯ ಸುಧಾರಣೆ—ಈ ವಿಷಯಗಳನ್ನು ಚರ್ಚಿಸಲಿಕ್ಕಾಗಿ ಕೊಡಗು ಜಮೀನ್ದಾರರ ಸಂಘದ ಆಶ್ರಯದಲ್ಲಿ ಈ ಕೆಳಗಿನ ಸ್ಥಳಗಳಲ್ಲಿ ಸಾರ್ವಜನಿಕ ಸಭೆಗಳು ನಡೆಯಲಿರುವವು. ಸರ್ವರೂ ದಯಮಾಡಿ ಸಭೆಗೆ ಬರಬೇಕಾಗಿ ಕೋರಲಾಗಿದೆ.

ಸ್ಥಳ.	ತಾರೀಖು.
ಹುದಿಕೇರಿ	10—2—'36 ಮಧ್ಯಾಹ್ನ
ಅಮ್ಮತ್ತಿ	11—2—'36 ,,
ವೀರರಾಜಪೇಟೆ	12—2—'36 ,,
ನಾಪೋಕ್ಲು	17—2—'36 ,,
ಮಡಿಕೇರಿ	20—2—'36 ,,

ಜಮೀನ್ದಾರರ ಸಂಘ, ತಾ. 5—2—'36. — ಬಿ. ಡಿ. ಕಾರ್ಯಪ್ಪ (ಗೌ. ಕಾರ್ಯದರ್ಶಿ)

ಪ್ರದೇಶದಲ್ಲಿ 50 ಮಂದಿ ವಿದ್ಯಾರ್ಥಿಗಳಿಗೂ, ಕೆಲವು ಮಂದಿ ಪ್ರೊಫೆಸರುಗಳಿಗೂ ಹಾಗೂ ಸುಮಾರು 100 ಮಂದಿಗೆ ಗಾಯಗಳಾಗಿವೆ. ವಿದ್ಯಾರ್ಥಿಗಳ ಮುಷ್ಕರವೀಗ ದೇಶದಲ್ಲೆಲ್ಲಾ ಹರಡುತ್ತಿದೆ.

ಜರ್ಮನಿಯ ಇಂಜಿನಿಯರರೊಬ್ಬರು ಒಂದು ಯಂತ್ರದ ಮನುಷ್ಯನನ್ನು ತಯಾರಿಸಿದ್ದಾರೆ. ಅದು ಬೆಂಕಿಬಿದ್ದರೆ ಇಂತಹ ಕಟ್ಟಡದಲ್ಲಿಯೇ ಬೆಂಕಿಬಿದ್ದಿದೆ ಬೆಂಕಿ ಆರಿಸುವ ಇಲಾಖೆಯವರಿಗೆ ಟೆಲಿಫೋನಿನಲ್ಲಿ ತಿಳಿಸುವುದಂತೆ. ಕಳ್ಳತನವಾಗುವ ಸಂಭವದಲ್ಲಿ ಪೋಲೀಸರಿಗೆ ತಿಳಿಸುವುದಂತೆ. ಹೆಚ್ಚಿನ ಅನಾಹುತಗಳೇನಾದರೂ ಸಂಭವಿಸಿದರೆ ಪೋಲೀಸರಿಗೂ ಫಯರ್ ಬ್ರಿಗೇಡಿನವರಿಗೂ ಒಟ್ಟಿಗೆ ವರ್ತಮಾನ ಕಳುಹಿಸುವುದಂತೆ.

NOTICE.

Mr C P Appachu has been appointed by the Coffee Growers Association of India to recruit members (both full and Associate) for the association.

Sunticoppa, W. A DAVIES
1-2-1936 (*Secretary*)

ಯುದ್ಧ ವಾರ್ತೆ.

ಜನವರಿ ತಾ. 29

ಇಟಲಿಯವರನ್ನು ಹಿಮ್ಮೆಟ್ಟಿದರು

ಮಕೇಲಿನ ಬಳಿ ಒಂದು ಇಟಲಿಯ ಸೈನ್ಯದ ಮೇಲೆ ಅಬಿಸೀನಿಯಾದ ಚಿಕ್ಕ ದಳವೊಂದು ಬಿದ್ದು 35 ಸೈನಿಕರನ್ನು ಕೊಂದಿರುವದಲ್ಲದೆ 5 ಅರ್ಮರ ಕಾರುಗಳನ್ನು 13 ಲಾರಿ ಮತ್ತು 25 ಮೆಷಿನ್ ಗನ್ನುಗಳನ್ನು ವಶಪಡಿಸಿಕೊಂಡಿರುವರು. ಅಲ್ಲದೆ ಟೆಂಬಿಯನ್ ಪ್ರಾಂತ್ಯದಲ್ಲಿನ ಅಪ್ಪಿ ಅಡ್ಡಿಗೆ ಇಟಲಿಯ ವಿಮಾನಗಳು ಬಾಂಬುಗಳನ್ನು ಸುರಿಸುತ್ತಿದ್ದಾಗ ಅಬಿಸೀನಿಯಾ ಸೈನಿಕರು ಗುಂಡು ಹೊಡೆದು ಒಂದು ವಿಮಾನವನ್ನು ನೆಲಕ್ಕುರುಳಿಸಿದರು.

ಜನವರಿ ತಾ 30.

ದಕ್ಷಿಣದಲ್ಲಿ ಯುದ್ಧ.

ದಕ್ಷಿಣದಲ್ಲಿ ಯುದ್ಧವು ದಿನಂಪ್ರತಿಯಾಗುತ್ತಲಿದೆ. ರಾಸ್ ದೆಸ್ಟಾರವರ ನಾಯಕತ್ವವು ಅವೆಲ್ಲಿಂದು ಪ್ರಸ್ಪಿಲ್ಲದ್ದರಿಂದ ಅವರನ್ನು ಬದಲಾಯಿಸುವ ವಿಚಾರಗಳಾಗುತ್ತಿವೆ. ರಾಸ್ ಸೆಯೂಮರು ದೊಡ್ಡ ತಮ್ಮನಿಕ್ಕೆ ಆಸ್ಪದ ಕೊಡದೆ ಅಲ್ಲಲ್ಲಿ ಇಟಲಿಯವರನ್ನು ಹಿಮ್ಮೆಟ್ಟುವ ವಿಚಾರದ ಮಾಡುವ ಯತ್ನದಲ್ಲಿರುವರು. ರಾಸ್ ದೆಸ್ಟಾರವರ ಸೈನ್ಯಕ್ಕೆ ಹೆಚ್ಚು ಸೈನಿಕರನ್ನು ಕಳುಹಿಸುವ ವಿಚಾರದಲ್ಲಿದೆ.

ಜನವರಿ ತಾ 31

ಪಡಾರದ ಬಳಿ ಯುದ್ಧ

ಇಟಲಿಯವರ ಸೈನ್ಯವು ಮುಂದುವರಿಯುತ್ತಿದ್ದುದನ್ನು ಅಬಿಸೀನಿಯಾದ ಸೈನ್ಯವು ಪಡಾರದಲ್ಲಿ ಎದುರಿಸಿ ತಡೆಗಟ್ಟಿದರು. ಅಲ್ಲದೆ ಇಟಲಿ ವಿಮಾನಗಳು ಚೆಲ್ಲಾ ಎಂಬಲ್ಲಿ ಬಾಂಬುಗಳನ್ನು ಹಾಕಿದವು.

ಫೆಬ್ರವರಿ ತಾ 2.

3000 ಇಟಲಿಯನರ ಕೊಲೆ!

ಟೆಂಬಿಯನ್ ಪ್ರಾಂತ್ಯದಲ್ಲಿ ಜನವರಿ 19ರಿಂದ 30ರ ವರೆಗೆ ಒಂದು ಮಹಾ ಯುದ್ಧವು ನಡೆಯಿತು. ಅಂಥಾ ಯುದ್ಧವು ಈ ವರೆವಿಗೂ ಆಗಿರಲಿಲ್ಲ. ಅದರಲ್ಲಿ 3000 ಮಂದಿ ಇಟಲಿಯ ಸೈನಿಕರು ಹತರಾದಲ್ಲದೆ 29 ಫಿರಂಗಿಗಳೂ, 175 ಮೆಷಿನ್ ಗನ್ನುಗಳೂ, 2654 ರೈಫಲುಗಳೂ ಮತ್ತು ಅನೇಕ ಕೋವಿಗಳೂ ಅಬಿಸೀನಿಯರ ಕೈವಶವಾಗಿದೆ. ಇಟಲಿಯವರಿಗೆ ಮಹತ್ವಾದ ಸೋಲು ಉಂಟಾಗಿದೆ.

ನಾಯಕರ ಬದಲಾವಣೆ

ಪಡಾರದ ಪಾರ್ಶ್ವದಲ್ಲಿ ಸೇನಾ ನಾಯಕರಾದ ರಾಸ್ ದೆಸ್ಟಾರವರ ಬದಲಿಗೆ ಸಿಡಾಮೋ ಪ್ರಾಂತ್ಯದ ಗವರ್ನರಾಗಿದ್ದ ಡೆಡ್ಜಾಸ್ ಮೇಕಾಷ್ ಬಾಲ್ಚಾರವರ ನೇಮಕವಾಗಿದೆ.

ಫೆಬ್ರವರಿ ತಾ 4.

ಪುನಃ 1700 ಮಂದಿ ಹತರಾದರು.

ದಕ್ಷಿಣದಲ್ಲಿ ಅಬಿಸೀನಿಯರ ಸೈನ್ಯವನ್ನು ಎದುರಿಸಲು ಇಟಲಿಯವರ ಹಲವು ಪ್ರಯತ್ನಿಸಿದುದರ ಫಲವಾಗಿ 1700 ಇಟಲಿ ಸೈನಿಕರು ಮಡಿದರು.

ಅಡಿಗ್ರಾಟಿನ ಬಳಿ ಯುದ್ಧ.

ರಾಸ್ ಸೆಯೂಮರ ನಾಯಕತ್ವದಲ್ಲಿ ಅಬಿಸೀನಿಯಾ ಸೈನಿಕರು ಮಕೇಲನ್ನು ವಶ ಪಡಿಸುವ ಹವಣಿಕೆಯಲ್ಲಿರುವರು. ಎರಡು ದಿವಸಗಳಿಂದಲೂ ಅಲ್ಲಿ ಕೈ ಕೈ ಕಾಳಗಗಳಾಗುತ್ತಲಿವೆ. ಅವರಲ್ಲಿ ಅಬಿಸೀನಿಯರೇ ಜಯಶಾಲಿಗಳಾಗಿರುವರು.

ಸಾರ್ವಜನಿಕ ಸಭೆಗಳು

(4ನೇ ಪುಟದಿಂದ ಮುಂದುವರಿದುದು)

ಫ್ರೇಜರ್‌ಪೇಟೆ.

ಸದ್ಯ ಈಸಮಯಕ್ಕೆ ಇದುವರೆಗೆ 4000 ಶೇರುಗಳ ಪೈಕಿ 1500 ಶೇರುಗಳಿಗೆ ನಗದು ಹಣವನ್ನು ಪಾವತಿಸಲಾಗಿದೆ. ಮೊದಲು 3000 ಶೇರುಗಳ ಪೈಕಿ ಶೇರು ತೆಗೆದುಕೊಂಡವರಿಗೆ ಶೇರು ಒಂದಕ್ಕೆ ಕಂಪನಿ ಸರ್ವೀಸುಗಳಲ್ಲಿ ಪ್ರಯಾಣ [illegible] ಮೇಲೆ ಉಪಯೋಗಿಸಿಕೊಳ್ಳಬಹುದಾದ 0–4–0 [illegible] ಟಿಕೇಟುಗಳನ್ನು ಕೊಡುವುದರ ಮೂಲಕ ಮುಂದೆ [illegible] ಕೊಡುತ್ತೇವೆ. ಶೇರು ಒಂದರ ದರವನ್ನು ಅರ್ಜಿಯೊಟ್ಟಿಗೆ ರೂ 2–0–0 ನಂತರ [illegible] ರೂ 3–0–0, ಸರ್ಟಿಫಿಕೇಟ್ [illegible]

ಹೆಚ್ಚಿನ ವಿವರಗಳಿಗೆ ಕೆಳಗಿನ ವಿಳಾಸಕ್ಕೆ ಬರೆಯಿರಿ:—

ಪ್ರೆಸಿಡೆಂಟ್,
ಆದಿ ಶ್ರೀ ಕಾವೇರಿ ಬಸ್ ಸರ್ವಿಸ್
ಮಡಿಕೇರಿ.

6–5

ಡಾಕ್ಟರ್ ಮೋತ್ಯಾಸ್ ಎಬ್ರಹಾಮ್.
ದಂತ ವೈದ್ಯರು.

ಗಾಂಧೀನಗರ ಬೀದಿ.

(ಪೋಸ್ಟಾಫೀಸು ಎದುರುಗಡೆ)

ಕೆಟ್ಟ ಹಲ್ಲು ನೋವುಗಳನ್ನು ಶೀಘ್ರವಾಗಿ ಗುಣಪಡಿಸುವದಲ್ಲದೆ, ಸುಂದರವಾದ ಕೃತ್ರಿಮ ಹಲ್ಲುಗಳನ್ನು ಮನ ಒಪ್ಪುವಂತೆ ಕಟ್ಟುವರು. ಒಮ್ಮೆ ಪರೀಕ್ಷಿಸಿದಲ್ಲಿ ತಿಳಿಯುವುದು. [52–14]

[illegible] ಅನುಭವಪಟ್ಟು ಪ್ರಖ್ಯಾತಿ ಹೊಂದಿದ

ಕರ್ಕಕಂಪನಿ ರವರ

ಜ್ವರದ ಗುಳಿಗೆಗಳು.

ಚಳಿಜ್ವರ, ಚಾತುರ್ಥಿ ಜ್ವರ, ದಿನಬಿಟ್ಟು ಬರುವ ಜ್ವರ, ಮಲೇರಿಯಾ ಜ್ವರ ಇತ್ಯಾದಿ ಜ್ವರಗಳ ಮೇಲೆ ರಾಮ ಬಾಣದಂತೆ ಇವೆ. ಬಾಟ್ಲಿಗೆ ರೂ. [illegible] ಅಂಚೆ ಖರ್ಚು ಪ್ರತ್ಯೇಕ.

ಗಣೇಶ ರಾಮಚಂದ್ರ [illegible]

(25–15) **ಕರ್ಕ ಕಂಪನಿ,**
ಗಿರಗಾಂವ್, ಮುಂಬಯಿ.

SHIROMANI NARAYANACHARYA

Choukhamba Benares City.

ಶಾಸ್ತ್ರಗಳೇ, ಪೂರ್ವಿಕರು ಆರೋಗ್ಯದ ಆಧಾರ ಏನೆನ್ನುವರೇ? ರಾಮಣ್ಣಯ್ಯನವರೇ, ಶರೀರದ ಆರೋಗ್ಯವೇ [illegible] ಆರೋಗ್ಯ ಅದಕ್ಕೆ [illegible] ಏನು? ಅದು ರುದ್ರಾಕ್ಷಿಯನ್ನು ಬಿಡದೆ ಯಾವಾಗಲೂ ಧಾರಣೆಮಾಡುತ್ತಿದ್ದರು. ಅದರಿಂದ ಏನು ಫಲ? ಅದನ್ನು ಧರಿಸಿದರೆ [illegible], ಬುದ್ಧಿಶಕ್ತಿ, ವಿದ್ಯಾಭಿವೃದ್ಧಿ, ಸೌಖ್ಯವೃದ್ಧಿ ಸಂಪತ್ತು, [illegible] ಆಗುವವು. ಹಾಗಾದರೆ ನಮಗೆ ಅಂಥ ರುದ್ರಾಕ್ಷಿ ಎಲ್ಲಿ ದೊರೆಯುವುದು? ಅದು [illegible] ಶಿರೋಮಣಿ ನಾರಾಯಣಾಚಾರ್ಯರಲ್ಲಿಯೇ ಯೋಗ್ಯವಾದ ಕ್ರಯಕ್ಕೆ ಉತ್ತಮ ತರದ ರುದ್ರಾಕ್ಷಿ ದೊರೆಯುವುದು.

[illegible] 1ಕ್ಕೆ ಅಥವಾ 1 ರಿಂದ ರೂ 25ರ ವರೆಗೆ 108 ರುದ್ರಾಕ್ಷಿಗಳುಳ್ಳ ಸರ 1ಕ್ಕೆ ಅಥವಾ 30ರಿಂದ ರೂ 25ರ ವರೆಗೆ. ಗೌರೀಶಂಕರ ರುದ್ರಾಕ್ಷಿ 1ಕ್ಕೆ ರೂ 30ರಿಂದ ರೂ 50ರ ವರೆಗೆ. ಮತ್ತು 3–4–5–6–7–8 ಮುಖಗಳ [illegible] 1ಕ್ಕೆ [illegible] 4 ರಿಂದ ರೂ 10. ಮತ್ತು 9–10–11 ಮುಖಗಳುಳ್ಳ [illegible] 1ಕ್ಕೆ ರೂ 10ರಿಂದ [illegible] ವರೆಗೆ. 12–13–14 ಮುಖದ [illegible] 1ಕ್ಕೆ ರೂ 40ರಿಂದ 100ರ ವರೆಗೆ. [illegible] ರುದ್ರಾಕ್ಷಿ [illegible] ರುದ್ರಾಕ್ಷಿ [illegible] (ಮ.ಆ. [illegible] 1 [illegible] 3 [illegible]— 1 [illegible] 1 [illegible] 1 [illegible] 3 [illegible])

ಶಿರೋಮಣಿ ನಾರಾಯಣಾಚಾರ್ಯರ್,

52—20 ಚೌಖಂಬಾ ಬೆನಾರಿಸ್, (ಕಾಶಿ)

ಗುಂಡು ಹೊಡೆಯುವ ಶಸ್ತ್ರಗಳು, ಉಪಯುಕ್ತ ಸೂಚನೆಗಳು.

ಶಿಕಾರಿಗಳಿಗೆ:—

ನಮ್ಮ [illegible] ಕೆಟಲಾಗನ್ನು ತರಿಸಿ (Our arms and ammunition GUIDE 3) ಇದರಲ್ಲಿ ಗುಂಡು ಹೊಡೆಯುವ ಶಸ್ತ್ರಗಳ ವಿಷಯ ಅತೀ ಉಪಯುಕ್ತ ಸೂಚನೆಗಳಿವೆ

Goolamhusain Allibhoy & Sons. Ltd.,

26–15 210, Abdulrehman Street, BOMBAY 3

ಧಾತುಪುಷ್ಟಿ ಲೇಹ

ಸ್ವರ್ಣ ಕಲ್ಪದ ಸಾಂತಾನಿತ್ರ ಮಿಶ್ರಿತ.

ಇದು ಬಲಹೀನರಿಗೆ ಅದ್ಭುತವಾದ ಶಕ್ತಿವರ್ಧಕ ರಸಾಯನ. ಸ್ವಪ್ನಾವಸ್ಥೆ ಶರೀರದ ಉಷ್ಣತೆ, ಧಾತು [illegible] ಹೊರ ಹೋಗುವಿಕೆ, ಸೊಂಟ ನೋವು, ಕೈಕಾಲು ಜಡ್ಡು, ಮಲಬದ್ಧತೆ, ಒಳಜ್ವರ ಅಶಕ್ತಿ, ಇವುಗಳನ್ನೆಲ್ಲಾ ಹೋಗಲಾಡಿಸಿ ಹಸಿವನ್ನೂ, ಜೀರ್ಣ ಶಕ್ತಿಯನ್ನೂ ಹೆಚ್ಚಿಸುವುದು ಅಲ್ಲದೆ ನರಗಳ ದೌರ್ಬಲ್ಯವನ್ನು ಹೋಗಲಾಡಿಸಿ ವೀರ್ಯವೃದ್ಧಿಯನ್ನು, ಸಂಭೋಗ ಶಕ್ತಿಯನ್ನು ಮತ್ತು ಜ್ಞಾಪಕ ಶಕ್ತಿಯನ್ನು ವೃದ್ಧಿ ಮಾಡುವುದು. ಶರೀರಕ್ಕೆ ಆರೋಗ್ಯವನ್ನೂ ದಿವ್ಯ ಶಕ್ತಿಯನ್ನೂ, ಕಾಂತಿಯನ್ನೂ ಉಂಟುಮಾಡುವುದು.

ಡಬ್ಬಿ 1ರ ರೂ 2–8–0. 3ಕ್ಕೆ ರೂ 7–0–0

ಮಲೇರಿಯಾ ನಿವಾರಿಣಿ.

ಮಲಬದ್ಧತೆ, ಚಳಿಜ್ವರ, ದಿನಬಿಟ್ಟು ಬರುವ ಜ್ವರ, ಚಾತುರ್ಥಿಕ ಜ್ವರ, ಗಿಡ್ಡ ಬರುವ ಜ್ವರ, ಪುರಾಣ ಜ್ವರ ವಾಯಿದೆ ಜ್ವರ ನ್ಯುಮೋನಿಯಾ, ಇನ್‌ಫ್ಲುಯೆಂಜಾ, ಸನ್ನಿಪಾತ ಜ್ವರ, ಕಫಜ್ವರ, ವಾತಜ್ವರ, ಇವುಗಳನ್ನೆಲ್ಲಾ ಹೋಗಲಾಡಿಸಿ ಶಕ್ತಿಯನ್ನುಂಟುಮಾಡುವದು.

ಬಾಟ್ಲಿ 1ರ ರೂ 1–8–0. ಸಣ್ಣ ಬಾಟ್ಲಿಗೆ 0–13–0.

ಅಶೋಕಾರಿಷ್ಟ ಮತ್ತು ಸೂತ್ರ.

ಇದು ಸ್ತ್ರೀಯರಿಗೆ ಉತ್ತಮವಾದ ಟಾನಿಕ್. ಮುಟ್ಟಿನಲ್ಲಿ, ಹೊಟ್ಟೆ ನೋವು ಮುಟ್ಟಾಗುವಿಕೆ, ಅತಿಶಯ ಅಥವಾ ಅಲ್ಪ ಸ್ರಾವ ಮುಟ್ಟು ಸಂಪೂರ್ಣವಾಗಿ ನಿಲ್ಲುವುದು, [illegible] ಹೋಗುವುದು, ಬಂಜೆತನ ನಡುವಿನ ನೋವು ರಕ್ತಹೀನತೆ, ಒಳಜ್ವರ ತಲೆನೋವು ಮಲಬದ್ಧತೆ ಕೈಕಾಲು [illegible] ಅಕಾಲದಲ್ಲಿ ಗರ್ಭಪಾತವಾಗುವಿಕೆ ಮತ್ತು ಸ್ತ್ರೀಯರಿಗೆ ಸಂಬಂಧಪಟ್ಟ ಇತರ ಎಲ್ಲಾ ರೋಗಗಳನ್ನು ಹೋಗಲಾಡಿಸಿ ಸೌಂದರ್ಯವನ್ನೂ ತೇಜಸ್ಸನ್ನೂ [illegible] ಕೊಡುತ್ತದೆ. ಬಾಟ್ಲಿ 1ರ ರೂ. 2–4–0

ರಕ್ತಶೋಧಕ.

ದೇಹದೊಳಗಿನ ರಕ್ತವು ಕೆಟ್ಟುಹೋದ ಕಾರಣದಿಂದ ಉಂಟಾಗುವ ಹುಣ್ಣು, ಕಜ್ಜಿ [illegible] ಕಲೆ [illegible] ಫರಂಗಿ [illegible] ಮೊದಲಾದ ರೋಗಗಳ ಮೇಲೆ ದಿವ್ಯ ಔಷಧ ಬಾಟ್ಲಿ 1ರ ರೂ. 1–2–0, 3 ಬಾಟ್ಲಿಗಳಿಗೆ 3–4–0;

ಕೆಟಲಾಗಿಗೆ ಬರೆರಿ. [illegible] ರೋಗಕ್ಕೆ ತಕ್ಕದಾದ ಔಷಧ ಚುನಾಯಿಸಿ ರವಾನಿಸಲಾಗುವುದು

ಎಂ. ಗಣಪಯ್ಯ ಎಂಡ್ ಸನ್ಸ್, ಆಯುರ್ವೇದಿಕ್ ಫಿಸಿಶಿಯನ್ಸ್, ರಥಬೀದಿ, ಮಂಗಳೂರು.

(1) ಎ ಬಿ [illegible] ಮಹದೇವಪೇಟೆ, ಮಡಿಕೇರಿ (ಕೊಡಗು).

(52–27) (2) ಎ ಎಸ್. ಮಹಾಬಲಯ್ಯ, ಚೆಟ್ಟಿ ವ್ಯಾಪಾರಿ, ಸುಂಟಿಕೊಪ್ಪ

GOVERNMENT SOAP FACTORY,

Bangalore.

ವಿಶ್ವಾಸಾರ್ಹತೆ.

ಅತ್ಯುತ್ತಮವಾದ ಟಾಯಿಲೆಟ್ ಸಾಬೂನಿನಲ್ಲಿ ಯಾವ ಯಾವ ಗುಣಗಳು ಅವಶ್ಯಕವೆಂದು ನೀವು ತಿಳಿದಿರುತ್ತೀರೋ ಆ ಗುಣಗಳೆಲ್ಲಾ ಮೈಸೂರು ಸ್ಯಾಂಡಲ್ ಸಾಬೂನಿನಲ್ಲಿವೆ.

ಸಾಬೂ [illegible] ಧರವಸೆಯುಳ್ಳುದಾಗಿದೆ.

ಎಲ್ಲಾ ಕಡೆಯಲ್ಲಿಯೂ ದೊರೆಯುತ್ತವೆ.

ಗವರ್ನಮೆಂಟ್ ಸೋಪ್ ಫ್ಯಾಕ್ಟರಿ.

52–46 ಬೆಂಗಳೂರು.

ಡಿಸ್ಟ್ರಿಕ್ಟ್ ಬೋರ್ಡ್ ಮೀಟಿಂಗು.

(ಮುಂದುವರಿದದ್ದು.)

43. ವೆ. ಎ. ಪಿ. ಕಾರ್ಯದರ್ಶಿಗಳವರ ಠರಾವುಗಳು:—

(1) ಕಲ್ಲಂಗಾಲ ಪ್ರೈವೇಟ್ ಶಾಲೆಗೆ ರೂ. 10 ಗ್ರಾಂಟ್ ಕೊಡಬೇಕೆಂಬುದನ್ನು ಮುಂದಿನ ಬಜೆಟ್ ವಿಚಾರಕ್ಕಾಗಿ ಇಡಲಾಯಿತು.

(2) ಸಿದ್ದಾಪುರ ಬೋ. ಹುಡುಗರ ಶಾಲೆಯ ಕಟ್ಟಡಕ್ಕಾಗಿ ರೂ. 150 ಗ್ರಾಂಟು ಕೊಡಬೇಕೆಂಬುದನ್ನು ಹಣ ದೊರೆತಾಗ ಆಲೋಚಿಸುವಂತೆ ನಿರ್ಧರಿಸಲಾಯಿತು.

(3) ಅರಮೇರಿ ಹುಡುಗರ ಶಾಲೆಗೆ ರೂ. 10 ಗ್ರಾಂಟು ಕೊಡಬೇಕೆಂಬುದನ್ನು ಮುಂದಿನ ಬಜೆಟ್ ವಿಚಾರಕ್ಕಾಗಿ ಇಡಲಾಯಿತು.

(4) ರೂ. 300 ಕ್ಕಿಂತ ಹೆಚ್ಚು ಮೊಬಲಗು ದೊರೆಯುವ ಕಂಟ್ರಾಕ್ಟುಗಳ ಹರಾಜಿನ ವಿಷಯ ಈ ಮೊದಲೇ 36 ನೇ ಠರಾವಿನಲ್ಲಿ ತೀರ್ಮಾನಿಸಲಾಗಿದೆ.

(5) ಸಬ್-ಅಸಿಸ್ಟೆಂಟ್-ಸರ್ಜನರುಗಳನ್ನು 3 ವರ್ಷಕ್ಕೆ ಮೇಲ್ಪಟ್ಟು ಒಂದು ಕಡೆಯಲ್ಲಿ ಇಡಬಾರದೆಂಬ ವಿಷಯ ಮುಂದರಿಸಲಾಯಿತು.

(6) ಸಂಪಾಜೆಯಿಂದ ಸಿದ್ದಾಪುರಕ್ಕೆ ಬರುವ ಶಾಖಾ ರಸ್ತೆಯನ್ನು ಗೊತ್ತುಹಚ್ಚಿ ಅದನ್ನು ಬೇಗನೆ ಪೂರೈಸಬೇಕೆಂಬ ಠರಾವು ಪಾಸಾಯಿತು.

(7) ಶಾಂತಳ್ಳಿಯಿಂದ ಕಳತ್‌ಮಾಡಿಗೆ ಹೋಗುವ ರಸ್ತೆಯನ್ನು ಬೋರ್ಡಿನವರು ವಹಿಸಿಕೊಂಡು ಅದರ ದುರಸ್ತಿ ಬಗ್ಗೆ ಬರುವ ಬಜೆಟ್ಟಿನಲ್ಲಿ ಹಣ ಇಡಬೇಕೆಂಬ ವಿಷಯದಲ್ಲಿ ತಕ್ಕ ತನಿಖೆ ನಡೆಸುವಂತೆ ತೀರ್ಮಾನವಾಯಿತು.

(8) ಚೆನ್ನಯನ ಕೋಟೆಯಲ್ಲಿನ ಬಾವಿಯ ರಿಪೇರಿಗೆ ರೂ. 40 ಕೊಡಬೇಕೆಂಬ ವಿಷಯದಲ್ಲಿ ಒಂದು ರಿಪೋರ್ಟ್ ಮಾಡುವಂತೆ ತೀರ್ಮಾನವಾಯಿತು.

(9) ಕೊಡಗಿನ ನಿರಕ್ಷರತೆಯನ್ನು ನಿರ್ಮೂಲ ಮಾಡುವ ಕಲುವಾಗಿ, ಬೋರ್ಡಿನವರು ವಿದ್ಯಾಭ್ಯಾಸಕ್ಕಾಗಿ ಎಷ್ಟು ವೆಚ್ಚ ಮಾಡುತ್ತಾರೋ ಅಷ್ಟೇ ಮೊಬಲಗನ್ನು ಸರಕಾರದವರೂ ಈ ಬಾಬಿಗೆ ಕೊಡಬೇಕೆಂಬ ವಿಷಯದಲ್ಲಿ ಕಳೆದ ಸೆಪ್ಟೆಂಬರಿನಲ್ಲಿ ಡೆಪ್ಯುಟೇಶನ್ ಹೋಗಿ ಅರಿಕೆ ಮಾಡಿಕೊಂಡದ್ದಕ್ಕೆ ಉತ್ತರ ಬರುವ ವರೆಗೆ ಕಾಯುವಂತೆ ತೀರ್ಮಾನವಾಯಿತು.

(10) ಹಾತೂರು ರೋಡಿನಲ್ಲಿ ಹಾತೂರಿನ ಬಳಿ ಹೊಳೆಗೆ ಸೇತುವೆ ಕಟ್ಟುವ ವಿಷಯ ಮುಂದರಿಸಲಾಯಿತು.

44. ರೆ. ಫಾ. ಲೂಯಿಸ್ ಪಾಸ್ಕೋಲಿಯುಸ್‌ರವರು ಕಳುಹಿಸಿದ 12 ಠರಾವುಗಳು ಅವರು ಗೈರುಹಾಜರಾದ ಕಾರಣದಿಂದ ಹಿಂತೆಗೆಯಲ್ಪಟ್ಟವೆಂದು ಭಾವಿಸಲಾಯಿತು.

45. ಮೆ. ಅಡಿಯಂಡ ಮಾಚಯ್ಯನವರ ಠರಾವುಗಳು:

(1) 1886 ರಲ್ಲಿ ಕಟ್ಟಿಸಿದ ಹಳೇ ಕಕ್ಕಬೆ ಶಾಲೆಯು ಬಿದ್ದು ಹೋಗಿರುವುದರಿಂದ ಅದನ್ನು ರೂ. 4000 ಖರ್ಚಿನ ಮೂಲಕ ಕಟ್ಟಿಸಬೇಕೆಂಬ ವಿಷಯ ಮುಂದಿನ ಬಜೆಟ್ಟು ವಿಚಾರಕ್ಕಾಗಿ ಇಡಲಾಯಿತು.

(2) ಕಡನೂರು ನಾಲ್ಕುನಾಡು ರಸ್ತೆಯಲ್ಲಿ 2/6 ಮೈಲಿನಿಂದ ಅರಮನೆ ವರೆಗಿನ ರಸ್ತೆಯನ್ನು ಇಂಪೀರಿಯಲ್ ಹಣದಿಂದ ರಿಪೇರಿ ಮಾಡಿಸುವ ಬಗ್ಗೆ ಸರಕಾರದವರನ್ನು ಕೇಳಿಕೊಳ್ಳುವ ವಿಷಯ ಒಪ್ಪಲಾಯಿತು.

(3) ಗ್ರಾಮಾಂತರಗಳಲ್ಲಿನ ರಸ್ತೆಗಳ ಚಿಕ್ಕ ಸೇತುವೆಗಳ ರಿಪೇರಿಯು ಸ್ಥಳಿಕ ಪಂಚಾಯತಿ ಸಂಘಗಳಿಂದ ಮಾಡಿಸಬೇಕೆಂದಿರುವ ವಿಷಯವನ್ನು ರೆವಿನ್ಯೂ ಅಧಿಕಾರಿಗಳ ಶಿಫಾರಸಿಗೆ ಬಿಡುವಂತೆ ತೀರ್ಮಾನವಾಯಿತು.

(4) ನಾಪೋಕ್ಲಿನಲ್ಲಿ ಒಂದು ದನಗಳ ಪ್ರದರ್ಶನವು ಮಂಜೂರು ಮಾಡಲ್ಪಟ್ಟಿರುವುದರಿಂದ ರೂ. 200 ಅದರ ಖರ್ಚಿಗಾಗಿ ಕೊಡುವ ವಿಷಯ ಚರ್ಚೆಯಾಗಿ ರೂ. 50 ಮಂಜೂರಾಯಿತು.

(5) ಕೊಡಗು ನ್ಯಾಯವಿಧಾಯಕ ಸಭೆಯು ಒಂದು ವರ್ಷದ ಮಟ್ಟಿಗೆ ಮುಂದರಿಸಲ್ಪಟ್ಟಂತೆಯೇ ಈ ಬೋ. ಚುನಾವಣೆಯನ್ನು ಸಹ ಈಗಿನ ಹಣದ ಅಭಾವದ ದೃಷ್ಟಿಯಿಂದ ಒಂದು ವರ್ಷದ ಮಟ್ಟಿಗೆ ಮುಂದರಿಸುವ ವಿಷಯ ಹಿಂತೆಗೆಯಲ್ಪಟ್ಟಿತು.

(6) ನಾಲ್ಕುನಾಡು—ಅರಮನೆ—ಕಡನೂರು ರೋಡಿನಲ್ಲಿ 5/7, 6/3 ಮತ್ತು 8/3 ಮೈಲುಗಳಲ್ಲಿಂದ ಒಡೆದು ಹೋಗುವ ರಸ್ತೆಗಳನ್ನು ಬೋರ್ಡಿನ ಗ್ರಾಮಾಂತರ ರಸ್ತೆಗಳ ಪಟ್ಟಿಯಲ್ಲಿ ಸೇರಿಸಬೇಕೆಂಬ ವಿಷಯ ರಿಪೋರ್ಟ್ ಮಾಡುವಂತೆ ತೀರ್ಮಾನವಾಯಿತು.

(7) ಚೆಯ್ಯಂಡಾಣೆ ಶಾಲೆಯನ್ನು ಬೋರ್ಡಿನವರು ತೆಗೆದುಕೊಂಡಿರುವ ಠರಾವಿನ ನಂಬರು ಮತ್ತು ತಾರೀಕನ್ನು ತಿಳಿಸುವ ವಿಷಯ ಅವರಿಗೆ ಬರೆಯಲಾಗಿರುವದು.

46. ಮೆ. ಸಿ. ಕೆ. ತಮ್ಮಯ್ಯನವರು ಕಳುಹಿಸಿದ ಠರಾವುಗಳು:—

(1) ಬಂಟವಾಳದಿಂದ ಮಡಿಕೇರಿಯ ಕ್ಯಾಂಪಿಂಗ್ ಸ್ಥಳದ ವರೆಗೂ ಮತ್ತು ಚೆಟ್ಟಳ್ಳಿಯಿಂದ ಅಮ್ಮತ್ತಿ ವರೆಗೂ ಇರುವ ರಸ್ತೆಗಳನ್ನು ಗ್ರಾಮಾಂತರ ರಸ್ತೆಗಳ ಪಟ್ಟಿಯಲ್ಲಿ ಸೇರಿಸಬೇಕೆಂಬ ವಿಷಯ ಚರ್ಚಿಸಿ ಆ ರಸ್ತೆಗಳನ್ನು ಪಟ್ಟಿಯಲ್ಲಿ ಸೇರಿಸಬೇಕೆಂದೂ ಮತ್ತು ಅವುಗಳ ಕೆಲಸವನ್ನು ಹಣ ದೊರೆತಲ್ಲಿ ಮಾಡುವಂತೆಯೂ ತೀರ್ಮಾನವಾಯಿತು.

(2) ಫ್ರೀಶಿಪ್ಪಿಗೆ ಅರ್ಜಿಹಾಕಿ ಅವರ ಅರ್ಜಿಗಳನ್ನು ಆಯಾ ಹೆಡ್ಮಾಸ್ಟರುಗಳು ಶಿಫಾರಸು ಮಾಡಿರುವ ಮಕ್ಕಳಿಂದ ಫೀಸು ವಸೂಲು ಮಾಡಬಾರದೆಂಬ ವಿಷಯ ಶಾಲಾ ಇ. ಇನ್ಸ್‌ಪೆಕ್ಟರವರ ತೀರ್ಮಾನಕ್ಕೆ ಬಿಡುವಂತೆ ನಿಶ್ಚಯಿಸಲಾಯಿತು.

47. ಪಿ. ಎ. ನಂಜಪ್ಪನವರ ಠರಾವುಗಳು.

(1) ಮತ್ತು (2) ಗವರ್ನಮೆಂಟ್ ಶ್ರೀಮಂಗಲ ಮತ್ತು ಕುಂಟಿಕೊಪ್ಪ ಶಾಲೆಗಳಲ್ಲಿ ಹೆಚ್ಚಿಗೆ ಉಪಾಧ್ಯಾಯರನ್ನಿಡುವ ವಿಷಯ ಬಜೆಟ್ ವಿಚಾರಕ್ಕಾಗಿ ಇಡಲಾಯಿತು.

(3) ಹಾಲೇರಿ ಶಾಲೆಗೆ ರೂ. 10 ಗ್ರಾಂಟು ಕೊಡಬೇಕೆಂಬ ವಿಷಯ ಬಜೆಟ್ ವಿಚಾರಕ್ಕಾಗಿ ಇಡಲಾಯಿತು.

(4) ಬಂಟೂರು—ಸೂರ್ಲಬ್ಬಿ ರೋಡನ್ನು ರಿಪೇರಿ ಮಾಡಿ ಒಳ್ಳೆ ಸ್ಥಿತಿಗೆ ತರಲು ನಾಲ್ಕನೆ ಹಣ ಕೊಡಬೇಕೆಂಬ ಮತ್ತು ಆ ಬಗ್ಗೆ ಅಪ್ಪಣೆ ಮಾಡುವಂತೆ ಧನ ಸಹಾಯ ಕೊಡುವಂತೆ ವಿನಂತಿ ಮಾಡಬೇಕೆಂಬ ವಿಷಯದಲ್ಲಿ ಸರಕಾರದವರನ್ನು ಕೇಳಿಕೊಳ್ಳುವಂತೆ ತೀರ್ಮಾನವಾಯಿತು.

(5) ಅಂಬಟ್ಟಿಮಾಡು ಗ್ರಾಮದಿಂದ ಸಂಟಿಕೊಪ್ಪಕ್ಕೆ ರಸ್ತೆ ಇರುವ ಬಗ್ಗೆ ತನಿಖೆ ನಡೆಸುವಂತೆ ತೀರ್ಮಾನವಾಯಿತು.

(6) ಮಡಿಕೇರಿ ಸಿದ್ದಾಪುರ ರಸ್ತೆಯಲ್ಲಿ ಅಸ್ಪತ್ರೆಯೊಂದು ನ ವಿಷಯ ಹಣ ದೊರೆತಾಗ ಇಡುವಂತೆ ತೀರ್ಮಾನವಾಯಿತು.

49. ಮೆ. ಕಾಳ್ಯಮಾಡ ಪೆಮ್ಮಯ್ಯನವರ ಠರಾವುಗಳು:—

(1) ಕೊಪ್ಪಗೇರಿ, ಬಿಟ್ಟಂಗಾಲ ಮತ್ತು ನಿಟ್ಟೂರು ಗ್ರಾಮಗಳಲ್ಲಿನ ಸ್ಕೂಲಿಗೆ ಕಳೆದ ಮೂರು ನಾಲ್ಕು ವರ್ಷಗಳಿಂದ ಭತ್ಯ ಕಳಿಸದೆ ಕಡಿಮೆಯಾಗಿ ಹೋಗಿ ಅವರು ಬಹಳ ಕಷ್ಟದಲ್ಲಿರುವುದರಿಂದ ಅಲ್ಲಿ ಅಂದಾಜು 800 ರೂ. ವೆಚ್ಚ ಮಾಡಿ ಒಂದು ಶಾಲೆ ಕಟ್ಟಿಸುವ ವಿಷಯ ಮುಂದಿನ ಬಜೆಟ್ ವಿಚಾರಕ್ಕಾಗಿ ಇಡಲಾಯಿತು.

(2) ತಿರುಗಾಡು ಬಾಡಗ ಶಾಲೆಯನ್ನು ಬೋರ್ಡಿನವರು ತೆಗೆದುಕೊಳ್ಳುವ ವಿಷಯ ಬಜೆಟ್ ವಿಚಾರಕ್ಕಾಗಿ ಇಡಲಾಯಿತು.

(3) ತಿತಿಮತಿ—ಮಾಯಮುಡಿ ರೋಡನ್ನು ರೂ. 150 ಖರ್ಚು ಮಾಡಿ ಸೇರಿಸುವ ವಿಷಯ ಬಜೆಟ್ ವಿಚಾರಕ್ಕಾಗಿ ಇಡಲಾಯಿತು.

(4) ಹಳೇ ಪೊನ್ನಂಪೇಟೆಯಲ್ಲಿ ಖಾಯಂ ವಾಸಮಾಡುವ ಮುಸಲ್ಮಾನರಿಗಾಗಿ ಒಂಟಿಯಾಗಿ ಮತ್ತು ದಿಳಾರನಲ್ಲಿ ಬಾವಿ ತೋಡಲು ಹಣ ಕೊಡಬೇಕೆಂಬ ವಿಷಯದಲ್ಲಿ ಸರಕಾರದವರನ್ನು ಕೇಳಿಕೊಳ್ಳುವಂತೆ ತೀರ್ಮಾನವಾಯಿತು.

(5) 15 ವರ್ಷಗಳಿಗಿಂತ ಮೇಲ್ಪಟ್ಟು ಒಂದೇ ಶಾಲೆಯಲ್ಲಿರುವ ಉಪಾಧ್ಯಾಯರುಗಳ ವರ್ಗಾವರ್ಗಿ ವಿಷಯದ ಠರಾವು ಹಿಂತೆಗೆಯಲಾಯಿತು.

(6) ಗೋಣಿಕೊಪ್ಪಲು ದನಗಳ ಪ್ರದರ್ಶನಕ್ಕೆ ರೂ. 150 ಕೊಡುವ ವಿಷಯ ಚರ್ಚಿಸಿ ರೂ. 75 ಮಂಜೂರು ಮಾಡಲಾಯಿತು.

(7) ಮಾಯಮುಡಿ ಮತ್ತು ತಿತಿಮತಿಯಲ್ಲಿ ಬಾವಿ ತೋಡಿಸಬೇಕೆಂಬ ವಿಷಯ ಸರ್ಕಾರದವರನ್ನು ಕೇಳಿಕೊಳ್ಳುವಂತೆ ತೀರ್ಮಾನವಾಯಿತು.

(8) ಗೋಣಿಕೊಪ್ಪಲು ಮಾರ್ಕೆಟ್ ಜಾಗವನ್ನು ಅನೇಕರು ಅಕ್ರಮಿಸುವಂತಿರುವುದರಿಂದ 1878—79ರಲ್ಲಿನ ಜಮಾಬಂದಿಯಲ್ಲಿ ಕಾಣಿಸಿದಂತೆ ಅದರ ಸರಹದ್ದು ನಿಶ್ಚಯ ಮಾಡಿ ಅದಕ್ಕೆ ಸಂಬಂಧಪಟ್ಟ ಆಫೀಸಿನಿಂದ ಕಾಣುವ ವಿಷಯ ಕಮಿಶನರವರನ್ನು ಕೇಳಿಕೊಳ್ಳುವಂತೆ ತೀರ್ಮಾನವಾಯಿತು.

(9) ಬೋಣಾಗುಂಡಿ ಎಂಬಲ್ಲಿ ಕುತ್ತನಾಡು ಹೊಳೆಗೆ ಮತ್ತು ಸಲಾಪುರ ಹೊಳೆಗೆ ಕಬ್ಬಿಣದ ಸೇತುವೆ ಕಟ್ಟುವ ವಿಷಯ ಹಣ ದೊರೆತಾಗ ಆಲೋಚಿಸುವಂತೆ ತೀರ್ಮಾನವಾಯಿತು.

(10) ಪೆರುಮ್ಮ ಹೊಳೆಗೆ ಮತ್ತು ಸುಗ್ಗಿಗೋಡು ಗ್ರಾಮದ ಬಳಿ ಹೊಳೆಗೆ ಪಾಲಗಳನ್ನು ಹಾಕಲು ಹಣ ಕೊಡುವ ವಿಷಯ ತನಿಖೆ ನಡೆಸುವಂತೆ ತೀರ್ಮಾನವಾಯಿತು.

49. ಮಿಸ್ ಯು. ನ. ರಾವ ಶಿಷ್ಯರ ಎರಡು ಠರಾವುಗಳು ಅವರು ಬಾರದ್ದರಿಂದ ಹಿಂತೆಗೆಯಲ್ಪಟ್ಟಂತೆ ಭಾವಿಸಲಾಯಿತು.

50. ರಾಮಸ್ವಾಮಿ ನಾಯಕರು ಕಂಟ್ರಾಕ್ಟು ದಾರನು ಪ್ಲೇಗಿನ ಬೆಳೆಯ ನಷ್ಟ ಪಟ್ಟೆನೆಂದು ರೂ. 22 ನಷ್ಟ ಕೇಳಿದ್ದು ತಿರಸ್ಕರಿಸಲ್ಪಟ್ಟಿತು.

51. ಶ್ರೀಮಂಗಲದಲ್ಲಿ ತಿಂಗಳಿಗೆ ರೂ. 65 ಪ್ರಕಾರ ಒಬ್ಬ ಡಾಕ್ಟರನ್ನಿರಿಸಬೇಕೆಂಬ ಅಸಿಸ್ಟೆಂಟ್ ಕಮಿಷನರವರ ಶಿಫಾರಸು ತಿರಸ್ಕರಿಸಲ್ಪಟ್ಟಿತು.

52. ಅಂತ್ಯದಲ್ಲಿ ಅಧ್ಯಕ್ಷರು ಮೆಟ್ಕಾಲ್ಫ್ ಪ್ಲೇಗ್ ಕ್ಯಾಂಪಿನಲ್ಲಿ ಮಲೇರಿಯಾ ಕಾಯಿಲೆಯು ಹೆಚ್ಚಾದ್ದರಿಂದ ವಾರ್ಡಿನ್ನ ಅಸ್ಪತ್ರೆಯನ್ನಿಟ್ಟ ವಿಷಯ ಸಭೆಯವರಿಗೆ ತಿಳಿಸಿದರು.

ಪ್ರಶ್ನೆಗಳು

ಮೆ. ಸಿ. ಕೆ. ತಮ್ಮಯ್ಯನವರ ಪ್ರಶ್ನೆ—ಅನೇಕ ಶಾಲಾ ಉಪಾಧ್ಯಾಯರುಗಳು ಸುಳ್ಳು ಸರ ಹಾಳೆ ಮಡಿಕೇರಿಗೆ ಬಂದು ಅವರ ವರ್ಗಾವರ್ಗಿಯನ್ನು ಬದಲು ಮಾಡಿಕೊಳ್ಳುವುದು. ಇನ್ಸ್‌ಪೆಕ್ಟರನ್ನು ಕಾಣುತ್ತಿರುವ ವಿಷಯ ಪ್ರೆಸಿಡೆಂಟರಿಗೆ ತಿಳಿದಿರುವದೋ ? ಸ್ಕೂಲು ನಡೆಯುತ್ತಿರುವಾಗಲೇ ಇದು ನಡೆಯುವುದೋ ?

ಉತ್ತರ—ಪ್ರಶ್ನೆಯು ಅಸ್ಪಷ್ಟವಾದದ್ದು. ಸಂಭವಗಳನ್ನು ಎತ್ತಿ ಹೇಳಿದಲ್ಲಿ ಅವುಗಳನ್ನು ಪರೀಕ್ಷಿಸಲಾಗುವುದು.

ಗೋಣಿಕೊಪ್ಪಲು ದನಗಳ ಪ್ರದರ್ಶನ.

(ಅಲ್ಲಿ ಹುಣ ಹುಡುಲು, ತರಕಾರಿ, ಹೆಣಿಗೆ, ಹೊಲಿಗೆ ಬಟ್ಟೆ ಮತ್ತು ಕೋಳಿಗಳ ಪ್ರದರ್ಶನವೂ ನಡೆಯುತ್ತದೆ.)

ಈ ಜಾತ್ರೆಯು 1936ನೇ ಇಸವಿ ಫೆಬ್ರವರಿ ತಿಂಗಳ 5ನೇ ತಾರೀಕಿನಿಂದ ಪ್ರಾರಂಭವಾಗಿ 9ನೇ ಆದಿತ್ಯವಾರ ದಿನ ಅಂತವಾಗುವುದು.

ಫೆಬ್ರವರಿ 5ನೇ ತಾರೀಕು—ವ್ಯಾಪಾರಶಾಲ ಪೂಜೆ ಮತ್ತು ಪ್ರದರ್ಶನ ತೆರೆಯುವದು

,,	6ನೇ	,,	ಹೆಣಿಗೆ, ಹೊಲಿಗೆ ಮತ್ತು ತರಕಾರಿ ಪ್ರದರ್ಶನ.
,,	7ನೇ	,,	ಕೋಳಿಗಳ ಪ್ರದರ್ಶನ.
,,	8ನೇ	,,	ದನಗಳ ಪ್ರದರ್ಶನ ಪ್ರಾರಂಭ.
,,	9ನೇ	,,	ಬಹುಮಾನ ಹಂಚುವದು & ಅಂತ್ಯ

ಸೂಚನೆ—(1) ಹೆಣಿಗೆ, ಹೊಲಿಗೆ ಸಾಮಾನುಗಳು ಪ್ರದರ್ಶನಕ್ಕೆ 5ನೇ ತಾರೀಕಿನಲ್ಲಿ ಬಂದು ತಲುಪತಕ್ಕದ್ದು.

(2) ಪ್ರದರ್ಶಿಸಲ್ಪಡುವ ಪ್ರತಿಯೊಂದು ಬಟ್ಟೆ, ಕೋಳಿ ಮತ್ತು ತರಕಾರಿ ಇವೇ ಮೊದಲಾದವುಗಳಿಗೆ ಪಡು 16 ರಾಶಿಸ ಮೇರೆ ಪ್ರವೇಶ ಧನ ಕೊಡತಕ್ಕದ್ದು.

(3) ಪ್ರವೇಶ ಧನವಿಲ್ಲದೆ ಈ ಮೇಲ್ಕಂಡ ವಸ್ತುಗಳು ಪ್ರದರ್ಶನಕ್ಕೆ ಬಿಡಲಾಗುವದಿಲ್ಲ.

(4) ಒಂದು ಸಲ ಪ್ರದರ್ಶಿಸಲ್ಪಟ್ಟ ಸಾಮಾನುಗಳಿಗೆ ಪುನಃ ಬಹುಮಾನ ಕೊಡಲಾಗುವದಿಲ್ಲ. ಕೋಳಿಗಳ ವಿನಹ ಇತರ ಸಾಮಾನುಗಳು 9ನೇ ತಾರೀಕಿನಲ್ಲಿ ಮಾತ್ರ ವಾಪಸು ಕೊಡಲಾಗುವದು.

5ನೇ ತಾರೀಕಿನಿಂದ 9ರ ವರೆಗೆ ಪ್ರತಿ ದಿನ ಮಧ್ಯಾಹ್ನದ ಮೇಲೆ ಪೆಟರನರಿ, ವ್ಯವಸಾಯ ಖಾತೆ ಮತ್ತು ವೈದ್ಯ ಇಲಾಖೆಯವರಿಂದ ಉಪನ್ಯಾಸಗಳು ಕೊಡಲ್ಪಡುತ್ತವೆ.

ಎಲ್ಲರೂ ಪ್ರೋತ್ಸಾಹ ಕೊಡಬೇಕಾಗಿ ಕೋರಲಾಗಿದೆ.

ಯಂ. ಯಂ. ಸೋಮಯ್ಯ,
(ಪ್ರೆಸಿಡೆಂಟ್),
4—3 **(ದನಗಳ ಕೋಳಿ ಮುಂತಾದ ಪ್ರದರ್ಶನ ಕಮಿಟಿ)**

ಅತೀ ಸುಲಭ ದರದಲ್ಲಿ ನಿಮಗೆ ಉತ್ಕೃಷ್ಟವಾದ ಕೋವಿ ಮತ್ತು ತೋಟಾಗಳು.

ಗ್ಯಾರಂಟೀಡ್ ಇದ್ದ ಕೋವಿ ತೋಟಾಗಳು.

ಬರೆದುಕೊಳ್ಳುವ ಹೆಸರು ನಮೂದ್ ಆಗಿ.

ASHOO TOSH DAW & CO.,

GUN MAKERS,

"DAW BUILDING" 184, DHARMTALA ST., CALCUTTA.

ಒಮ್ಮೆ ಪರೀಕ್ಷಿಸಿ ನೋಡಿ.] [ಹಿಂದುಮುಂದು ಬರೆದ್ದರಿಂದ

[illegible]

ಮಲೇರಿಯಾಕ್ಕೆ ಒಂದೇ ಸಿದ್ಧೌಷಧ.

[illegible]

1 Andrographis Paniculate
2 [illegible] Cordifolius
3. Berriberis Aristata
4 Vernonis Cinerarea
5. Evolvulas Alsinoides
6 Dashmoola
7 Aconitum Heterophylum
8 Alstonia Scholaris

[illegible]

52—35

ಪತ್ರವ್ಯವಹಾರ.

[illegible]

EMPIRE OF INDIA LIFE ASSURANCE CO., LTD.

INCREASE IN INTERIM BONUSRATES.

We are pleased to announce the following increase in the INTERIM RATES of BONUS payable on With Profit Policies becoming claims by death or maturity from 1st March, 1935 to 28th February 1937 when the next valuation will be made:—

Rs. 18 per annum per Rs. 1,000 Assured on WHOLE LIFE ASSURANCES.
Rs. 16 per annum per Rs. 1,000 Assured on ENDOWMENT ASSURANCES.

In Respect of each Year's Premium Due and Paid During the aboves Period

The premium rates charged by this company are very moderate and are prepared with the object of providing the **largest possible immediate assurances** consistent with safety. At most of the insuring ages the average premium at present charged by other offices for a policy of Rs 1,000 with Profits will secure in this Company a With Profit assurance **for much a larger amount**. Thus for the same premium an additional amount of assurance can be obtained in this Company which is equivalent to an **immediate and certain Bonus** as large as can be looked for in other Life Offices only after very many years. This additional assurance **also** shares in the future profits of the Company.

The increase in the interim rates of Bonus coupled with the low rates of premiums **charged by the Company** has considerably enhanced the value of our Policies. It is really **a splendid record** showing the results of economical management, sound investments and **careful selection** of lives.

Ask for our leaflet 'Why is a Policy in the Empire of India Life Assurance Company, Limited of Special Interest? **and convince yourself that a policy in the Company is decidedly to your benefit.**

Active Agents wanted in all important places of Mysore State, Coorg etc., on attractive terms.

Branch Secretary,
EMPIRE OF INDIA LIFE ASSURANCE CO., LTD.,
15/3, Commercial Street Bangalore

52—10

[illegible]

ಈ ಸಂಚಿಕೆಯ ಪುರವಣಿ.

For Every kind of PRINTING go to "KODAGU" PRESS, MERCARA.

Prompt Execution and Neat Workmanship.

ಕೊಡಗು

ಹೃದಯಂಗಮ ವಾದ ಹೊಸ ಒಪ್ಪದ ಮುದ್ರಣ ಕೆಲಸಕ್ಕೆ ಒಪನೆ "ಕೊಡಗು" ಪ್ರೆಸ್ಸಿಗೆ ಹೋಗಿರಿ.

ಉಜ್ವಲ ರಾಷ್ಟ್ರೀಯ ವಾರ ಪತ್ರಿಕೆ.

ದೇಶದ ಕಲ್ಯಾಣವೇ ನಮ್ಮ ಧ್ಯೇಯ. ಜನಹಿತವೇ ನಮ್ಮ ಗುರಿ.

ವಾರ್ಷಿಕ ಚಂದಾ ಬರೀ ರೂ. ೩—೮—೦.

೧೯೩೬ ಕ್ಯಾಲೆಂಡರು. ೧೯೩೬

ಸರಕಾರಿ ರಜಾ ದಿನಗಳು.

ಜನವರಿ—೧ ಬು. ಹೊಸ ವರ್ಷಾರಂಭ
೧೪ ಮ. ಮಕರ ಸಂಕ್ರಮಣ
೨೫ ತಾ. ಕಡೇ ಶನಿವಾರ
ಫೆಬ್ರವರಿ—೨೧ ಶು. ಶಿವರಾತ್ರಿ
೨೯ ತಾ. ಕಡೇ ಶನಿವಾರ
ಮಾರ್ಚ್—೫ ಗು. ಬಕ್ರೀದ್
೨೪ ಮ. ಯುಗಾದಿ
೨೮ ತಾ. ಕಡೇ ಶನಿವಾರ
ಏಪ್ರಿಲ್—೩ ಶು. ಮೊಹರಂ ಕಡೇ ದಿನ
೯ರಿಂದ ೧೪ರ ವರೆಗೆ ಈಸ್ಟರ್ ರಜ
೨೫ ತಾ. ಕಡೇ ಶನಿವಾರ
ಮೇ—೩೦ ತಾ. ಕಡೇ ಶನಿವಾರ
ಜೂನ್—೩ ಬು. [illegible]
೨೭ ತಾ. ಕಡೇ ಶನಿವಾರ
ಜುಲೈ—೨೫ ತಾ. ಕಡೇ ಶನಿವಾರ
ಆಗೋಸ್ಟ್—೩ ಸೋ. ಉಪಕರ್ಮ
೨೯ ತಾ. ಕಡೇ ಶನಿವಾರ
ಸೆಪ್ಟಂಬರ್—೩ ಗು. ಕೈಲ್‌ಮುಹೂರ್ತ
೧೯ ತಾ. ಗೌರೀ ಹಬ್ಬ
೨೬ ತಾ. ಕಡೇ ಶನಿವಾರ
ಅಕ್ಟೋಬರ್—೧೫ರಿಂದ ೧೭ರ ವರೆಗೆ ಕಾವೇರಿ ಸಂಕ್ರಮಣ
೨೪ ತಾ. ಆಯುಧ ಪೂಜಾ
೩೧ ತಾ. ಕಡೇ ಶನಿವಾರ
ನವಂಬರ್—೨೮ ತಾ. ಹುತ್ತರಿ ಹಬ್ಬ
ಡಿಸೆಂಬರ್—೧೬ ಬು. ರಂಜಾನ್
೧೯ ತಾ. ಸುಬ್ರಮಣ್ಯ ಷಷ್ಠಿ
೨೪ರಿಂದ ೩೧ರ ವರೆಗೆ ಕ್ರಿಸ್‌ಮಸ್

ಹಿಂದೂಗಳಿಗೆ ಹೆಚ್ಚು ರಜೆ.

ಮಾರ್ಚ್—೭ ಶ. ಹೋಳಿ ಹಬ್ಬ
೩೧ ಮ. ಶ್ರೀ ರಾಮನವಮಿ
ಸೆಪ್ಟಂಬರ್—೨೯ ಮ. ಅನಂತ ಚತುರ್ದಶಿ

ಮಹಾತ್ಮಾಜೀ

ಕೊಡವರಿಗೆ ಹೆಚ್ಚು ರಜೆ.

ನವಂಬರ್ ೩೦ರಿಂದ ಡಿಸೆಂಬರ್ ೫ರ ವರೆಗೆ—ಹುತ್ತರಿ ಹಬ್ಬ

ಮುಸಲ್ಮಾನರಿಗೆ ಹೆಚ್ಚು ರಜೆ.

ಮಾರ್ಚ್ ೩೧ರಿಂದ ಏಪ್ರಿಲ್ ೨ರ ವರೆಗೆ } ಮೊಹರಂ
ಅಕ್ಟೋಬರ್—೩೦ ಶು. ಷಬ್-ಎ-ಬರಾತ್
ಮೇ—೨೦ ಬು. ಅಖಿರಿ ಚಾರ್ಷಂಬ

ಕ್ರೈಸ್ತರಿಗೆ ಹೆಚ್ಚು ರಜೆ.

ಫೆಬ್ರವರಿ—೨೬ ಬು. ಆಷ್ ವೆಡ್ನೆಸ್ಡೆ
ಆಗೋಸ್ಟ್—೧೫ ಶ. ಎಸಂಷನ್ ಡೆ
ಮೇ—೨೧ ಗು. ಎಸೆನ್ಷನ್ ಡೆ (ರೋಮನ್ ಕೆಥೋಲಿಕರಿಗೆ)

ಗ್ರಹಣಗಳು.

೧. ಜನವರಿ ತಾರೀಕು ೮ನೇ ಬುಧವಾರ ರಾತ್ರಿ ೯-೫೮ ಗಂಟೆಯಿಂದ ೧೧-೨೧ ಗಂಟೆ ವರೆಗೆ ಚಂದ್ರಗ್ರಹಣವಾಗುವುದು.

೨. ಜುಲೈ ತಾರೀಕು ೪ನೇ ಶನಿವಾರ ರಾತ್ರಿ ೯-೫೬ ಗಂಟೆಯಿಂದ ೧೧-೫೪ ಗಂಟೆ ವರೆಗೆ ಚಂದ್ರಗ್ರಹಣವಾಗುವುದು. ಚಂದ್ರನು [illegible] ಪ್ರಜ್ವಲಿಸುವನು

ಪೂರ್ಣಿಮಾ ಮತ್ತು ಅಮಾವಾಸ್ಯೆ ದಿನಗಳು.

ತಿಂಗಳು.	ಪೂರ್ಣಿಮಾ.	ಅಮಾವಾಸ್ಯೆ.	ತಿಂಗಳು.	ಪೂರ್ಣಿಮಾ.	ಅಮಾವಾಸ್ಯೆ.
ಜನವರಿ	೮ ಬು	೨೪ ಶು	ಆಗೋಸ್ಟ್	೩ ಸೋ	೧೭ ಸೋ
ಫೆಬ್ರವರಿ	೭ ಶು	೨೨ ಶ	ಸೆಪ್ಟಂಬರ್	೧ ಮ	೧೫ ಮ
ಮಾರ್ಚ್	೮ ಆ	೨೩ ಸೋ		೩೦ ಬು	
ಏಪ್ರಿಲ್	೬ ಸೋ	೨೧ ಮ	ಅಕ್ಟೋಬರ್	೩೦ ಶು	೧೫ ಗು
ಮೇ	೬ ಬು	೨೦ ಬು	ನವಂಬರ್	೨೮ ಶ	೧೪ ಶ
ಜೂನ್	೪ ಗು	೧೯ ಶು	ಡಿಸೆಂಬರ್	೨೮ ಸೋ	೧೩ ಆ
ಜುಲೈ	೪ ಶ	೧೮ ಶ			

ರಾಹುಕಾಲ	ವಾರ	ಗುಳಿಕಕಾಲ
ಮಧ್ಯಾಹ್ನ ೪½ ಅಂದರೆ ೬ ವರೆಗೆ	ಆದಿತ್ಯವಾರ	ಮಧ್ಯಾಹ್ನ ೩ ಅಂದರೆ ೪½ ವರೆಗೆ
ಪ್ರಾತಃಕಾಲ ೭½ ,, ೯ ,,	ಸೋಮವಾರ	ಮಧ್ಯಾಹ್ನ ೧ ,, ೩ ,,
ಮಧ್ಯಾಹ್ನ ೩ ,, ೪½ ,,	ಮಂಗಳವಾರ	ಮಧ್ಯಾಹ್ನ ೧೨ ,, ೧ ,,
ಮಧ್ಯಾಹ್ನ ೧೨ ,, ೧½ ,,	ಬುಧವಾರ	ಪ್ರಾತಃಕಾಲ ೧೦ ,, ೧೨
ಮಧ್ಯಾಹ್ನ ೧½ ,, ೩ ,,	ಗುರುವಾರ	ಪ್ರಾತಃಕಾಲ ೯ ,, ೧೦½ ,
ಪ್ರಾತಃಕಾಲ ೧೦½ ,, ೧೨ ,,	ಶುಕ್ರವಾರ	ಪ್ರಾತಃಕಾಲ ೭½ ,, ೯ ,
ಪ್ರಾತಃಕಾಲ ೯ ,, ೧೦½ ,,	ಶನಿವಾರ	ಪ್ರಾತಃಕಾಲ ೬ ,, ೭½ ,,

	ಜನವರಿ	ಫೆಬ್ರವರಿ	ಮಾರ್ಚ್	ಏಪ್ರಿಲ್	ಮೇ	ಜೂನ್	
ಆದಿತ್ಯವಾರ ...	೫ ೧೨ ೧೯ ೨೬	೨ ೯ ೧೬ ೨೩	೧ ೮ ೧೫ ೨೨ ೨೯	೫ ೧೨ ೧೯ ೨೬	೩ ೧೦ ೧೭ ೨೪ ೩೧	೭ ೧೪ ೨೧ ೨೮	ಆದಿತ್ಯವಾರ
ಸೋಮವಾರ ...	೬ ೧೩ ೨೦ ೨೭	೩ ೧೦ ೧೭ ೨೪	೨ ೯ ೧೬ ೨೩ ೩೦	೬ ೧೩ ೨೦ ೨೭	೪ ೧೧ ೧೮ ೨೫	೧ ೮ ೧೫ ೨೨ ೨೯	ಸೋಮವಾರ
ಮಂಗಳವಾರ ...	೭ ೧೪ ೨೧ ೨೮	೪ ೧೧ ೧೮ ೨೫	೩ ೧೦ ೧೭ ೨೪ ೩೧	೭ ೧೪ ೨೧ ೨೮	೫ ೧೨ ೧೯ ೨೬	೨ ೯ ೧೬ ೨೩ ೩೦	ಮಂಗಳವಾರ
ಬುಧವಾರ ...	೧ ೮ ೧೫ ೨೨ ೨೯	೫ ೧೨ ೧೯ ೨೬	೪ ೧೧ ೧೮ ೨೫	೧ ೮ ೧೫ ೨೨ ೨೯	೬ ೧೩ ೨೦ ೨೭	೩ ೧೦ ೧೭ ೨೪	ಬುಧವಾರ
ಗುರುವಾರ ...	೨ ೯ ೧೬ ೨೩ ೩೦	೬ ೧೩ ೨೦ ೨೭	೫ ೧೨ ೧೯ ೨೬	೨ ೯ ೧೬ ೨೩ ೩೦	೭ ೧೪ ೨೧ ೨೮	೪ ೧೧ ೧೮ ೨೫	ಗುರುವಾರ
ಶುಕ್ರವಾರ ..	೩ ೧೦ ೧೭ ೨೪ ೩೧	೭ ೧೪ ೨೧ ೨೮	೬ ೧೩ ೨೦ ೨೭	೩ ೧೦ ೧೭ ೨೪	೧ ೮ ೧೫ ೨೨ ೨೯	೫ ೧೨ ೧೯ ೨೬	ಶುಕ್ರವಾರ
ಶನಿವಾರ ...	೪ ೧೧ ೧೮ ೨೫	೧ ೮ ೧೫ ೨೨ ೨೯	೭ ೧೪ ೨೧ ೨೮	೪ ೧೧ ೧೮ ೨೫	೨ ೯ ೧೬ ೨೩ ೩೦	೬ ೧೩ ೨೦ ೨೭	ಶನಿವಾರ

	ಜುಲೈ	ಆಗೋಸ್ಟ್	ಸೆಪ್ಟಂಬರ್	ಅಕ್ಟೋಬರ್	ನವಂಬರ್	ಡಿಸೆಂಬರ್	
ಆದಿತ್ಯವಾರ ..	೫ ೧೨ ೧೯ ೨೬	೩೦ ೨ ೯ ೧೬ ೨೩	೬ ೧೩ ೨೦ ೨೭	೪ ೧೧ ೧೮ ೨೫	೧ ೮ ೧೫ ೨೨ ೨೯	೬ ೧೩ ೨೦ ೨೭	ಆದಿತ್ಯವಾರ
ಸೋಮವಾರ ...	೬ ೧೩ ೨೦ ೨೭	೩೧ ೩ ೧೦ ೧೭ ೨೪	೭ ೧೪ ೨೧ ೨೮	೫ ೧೨ ೧೯ ೨೬	೨ ೯ ೧೬ ೨೩ ೩೦	೭ ೧೪ ೨೧ ೨೮	ಸೋಮವಾರ
ಮಂಗಳವಾರ ...	೭ ೧೪ ೨೧ ೨೮	೪ ೧೧ ೧೮ ೨೫	೧ ೮ ೧೫ ೨೨ ೨೯	೬ ೧೩ ೨೦ ೨೭	೩ ೧೦ ೧೭ ೨೪	೧ ೮ ೧೫ ೨೨ ೨೯	ಮಂಗಳವಾರ
ಬುಧವಾರ ...	೧ ೮ ೧೫ ೨೨ ೨೯	೫ ೧೨ ೧೯ ೨೬	೨ ೯ ೧೬ ೨೩ ೩೦	೭ ೧೪ ೨೧ ೨೮	೪ ೧೧ ೧೮ ೨೫	೨ ೯ ೧೬ ೨೩ ೩೦	ಬುಧವಾರ
ಗುರುವಾರ ...	೨ ೯ ೧೬ ೨೩ ೩೦	೬ ೧೩ ೨೦ ೨೭	೩ ೧೦ ೧೭ ೨೪	೧ ೮ ೧೫ ೨೨ ೨೯	೫ ೧೨ ೧೯ ೨೬	೩ ೧೦ ೧೭ ೨೪ ೩೧	ಗುರುವಾರ
ಶುಕ್ರವಾರ	೩ ೧೦ ೧೭ ೨೪ ೩೧	೭ ೧೪ ೨೧ ೨೮	೪ ೧೧ ೧೮ ೨೫	೨ ೯ ೧೬ ೨೩ ೩೦	೬ ೧೩ ೨೦ ೨೭	೪ ೧೧ ೧೮ ೨೫	ಶುಕ್ರವಾರ
ಶನಿವಾರ ...	೪ ೧೧ ೧೮ ೨೫	೧ ೮ ೧೫ ೨೨ ೨೯	೫ ೧೨ ೧೯ ೨೬	೩ ೧೦ ೧೭ ೨೪ ೩೧	೭ ೧೪ ೨೧ ೨೮	೫ ೧೨ ೧೯ ೨೬	ಶನಿವಾರ

"ಕೊಡಗು" ಪ್ರೆಸ್ಸ್, ಮಡಿಕೇರಿ

ಸೂಚನೆ.

ಸರ್ಕಾರಿ ಕಚೇರಿ ಜನಗಳ ಪಟ್ಟಿ ಮತ್ತು ಇನ್ನಿತರ ಉಪಯುಕ್ತ ವಿಚಾರಗಳನ್ನೊಳಗೊಂಡಿರುವ ೧೯೪೨ನೇ ಇಸವಿಯ ಕ್ಯಾಲೆಂಡರು ಮಾರಾಟಕ್ಕೆ ಸಿದ್ಧವಾಗಿದೆ. ಕೇವಲ ಕೆಲವೇ ಪ್ರತಿಗಳಿರುವುದರಿಂದ ಬೇಗನೆ ತರಿಸಿರಿ. ಬೆಲೆ ಪ್ರತಿ ಒಂದಕ್ಕೆ ಐದೇ ಆಣೆ.

ಸ್ವದೇಶ.

ಕಳೆದ ವಾರ ಮಡಿಕೇರಿ ಕಸ್ಬಾದಲ್ಲಿಯೂ ಮತ್ತು ಬ್ರಹ್ಮಗಿರಿ ಕೆಳಭಾಗದಲ್ಲಿಯೂ ಮಳೆಗಳು ಬಿದ್ದವೆಂದು ತಿಳಿದು ಬಂದಿದೆ.

ಈ ವಾರ ವೀರರಾಜಪೇಟೆಯಲ್ಲಿ ಭತ್ತ ಗಂಡಿಗೆ ರೂ. 36 ಮತ್ತು ಮಡಿಕೇರಿಯಲ್ಲಿ ಕಾಫಿ ಖಂಡಿಗೆ ರೂ. 128ರ ವರೆಗೆ ಕ್ರಯ ವಿತ್ತೆಂದು ತಿಳಿಯಬರುತ್ತದೆ.

ಮಡಿಕೇರಿ ಸೆಂಟ್ರಲ್ ಹೈಸ್ಕೂಲಿನಲ್ಲಿ 39 ವಿದ್ಯಾರ್ಥಿಗಳಿಗೆ ಈ ತಿಂಗಳಿನಿಂದ ನಡೆಯುವ ಸೆಕೆಂಡ್ ಫೋರಂ ಪರೀಕ್ಷೆಗೆ ಹೋಗಲು ಅನುಮತಿ ಕೊಡಲ್ಪಟ್ಟಿರುವದಾಗಿ ತಿಳಿಯುತ್ತೇವೆ.

ಒಂದು ವರ್ಷ ಕಾಂಗ್ರೆಸ್ ಮಹಾ ಸಭೆಗೆ ಕೊಡಗಿನ ಕಾಂಗ್ರೆಸ್ ಕಮಿಟಿಯವರು ಕೊಡಗಿನ ಪರ ಪ್ರತಿನಿಧಿಯಾಗಿ ಶ್ರೀಯುತ ಸಿ. ಎ. ಬೆಳ್ಯಪ್ಪನವರನ್ನು ಆರಿಸಿದರು.

ಕೊಡಗು ಕ್ರಿಕೆಟ್ ಕ್ಲಬ್ಬಿನವರ ಟೀಮು ಈ ತಾ. 12 ರಲ್ಲಿ ಕಣ್ಣಾನೂರಿನಲ್ಲಿ ಅಲ್ಲಿಯ ಟೀಮಿನವರೊಂದಿಗೆ ಪಂದ್ಯವಾಡಿ ಪಕ್ಷಾತ ಜಯವನ್ನು ಹೊಂದಿದರಾಗಿ ತಿಳಿಯಬರುತ್ತದೆ.

ಕೊಡಗು ಬ್ರಾಹ್ಮಣ ವಿದ್ಯಾರ್ಥಿವೃತ್ತಿ ನಿಧಿಯ ವಾರ್ಷಿಕ ಮಹಾಸಭೆಯು ಈ ತಾ. 25 ರಲ್ಲಿ ಅಪರಾಹ್ನ 3 ಗಂಟೆಗೆ ಮಡಿಕೇರಿ ಬ್ರಾಹ್ಮಣ ವಿದ್ಯಾರ್ಥಿ ಭವನದಲ್ಲಿ ನಡೆಯುವುದು.

ಮಡಿಕೇರಿನಾಡು ಮೇಕೇರಿ ಗ್ರಾಮದಲ್ಲಿನ ಮೆ ಪೂಜಾರಿರ ರಾಮಪ್ಪನವರ ಮನೆಯಲ್ಲಿ ಒಂದು ಎಮ್ಮೆ ಎರಡು ತೋಳದ ಕರಗಳನ್ನು ಹಾಕಿ ಎರಡೂ ಚೆನ್ನಾಗಿರುವುದೆಂದು ಸುದ್ದಿ.

ಮಡಿಕೇರಿ ಸೆಂಟ್ರಲ್ ಬ್ಯಾಂಕಿನ ಶೇರುದಾರರ ಮಹಾಸಭೆಯು ಈ ತಾ. 25 ನೇ ಶನಿವಾರ ಬೆಳಿಗ್ಗೆ 11 ಗಂಟೆಗೆ, ಮಾ ಶ್ರೀಮಿಚನ್ ಬೋರ್ಡಿನ ಮೀಟಿಂಗು ಮಧ್ಯಾಹ್ನ 2 ಗಂಟೆಗೂ ಬ್ಯಾಂಕಿನ ಆಫೀಸಿನಲ್ಲಿ ನಡೆಯುವುದು.

ಈ ತಾ. ಕೊಡಗಿನ ಯಂ. ಅಪ್ಪಚ್ಚನವರು ಈ ತಾ. 16 ನೇ ಗುರುವಾರ ಬೆಳಿಗ್ಗೆ ಅವರ 'ಕಾರು' ಅಪ್ಪಚ್ಚನಿಗೆ ಸ್ವರ್ಗಸ್ಥರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಇವರ ಶವ ಮಡಿಕೇರಿಗೆ ತಂದು ಇಲ್ಲಿ ದಹನ ಮಾಡಲ್ಪಟ್ಟಿತು.

ಕೊಡಗಿನ ರೆಡ್‌ಕ್ರಾಸ್ ಸಂಸ್ಥೆಗೆ ಚಿತ್ರಪ್ರದರ್ಶನದ ಮೂಲಕ ಜಾತ್ರೆ ಮುಂತಾದವುಗಳಿಂದ ಸುಮಾರು ರೂ. 4600 ಧನ ಸಹಾಯ ದೊರೆತಿದೆಯಾಗಿಯೂ, ಮತ್ತು ಈ ಜಾತ್ರೆಯು ತಿರುಪತಿಯಲ್ಲಿ ಬರುವ ಫೆಬ್ರವರಿ ತಾ. 28 ಮತ್ತು ಮಾರ್ಚ್ ತಾ 1 ರಲ್ಲಿ ನಡೆಯುವದಾಗಿಯೂ ವರ್ತಮಾನ.

ಶ್ರೀಮಂಗಲನಾಡು ಕುಟ್ಟ ಗ್ರಾಮದ ಶ್ರೀಯುತ ಕೈಬಲಿರ ಅಪ್ಪಣ್ಣನವರು ಕಳೆದ ತಾ 27 ರಲ್ಲಿ ದೈವಾಧೀನರಾದರೆಂದು ತಿಳಿಯಲು ವ್ಯಸನಪಡುತ್ತೇವೆ. ಕೊಡಗಿನ ವೀರ ಪುತ್ರರಲ್ಲಿ ಇವರೊಬ್ಬರು. ಕಳೆದ ಸತ್ಯಾಗ್ರಹ ಚಳವಳಿಯಲ್ಲಿ ದೇಶದ ಸ್ವಾತಂತ್ರ್ಯಕ್ಕಾಗಿ ಎರಡು ಸಾರಿ ಸಜೆಗೆ ಗುರಿಯಾಗಿ, 6 ತಿಂಗಳು ಜೈಲು ವಾಸವನ್ನು ಅನುಭವಿಸಿದವರು ಇವರು.

ಕೊಡಗಿನಲ್ಲಿದ್ದ ಆರತಿ ಮತ್ತು ತಹಶೀಲ್‌ದಾರ ಕಚೇರಿಗಳನ್ನು ಇಟ್ಟುಕೊಂಡು ಹೊಸದಾಗಿ ನೀರಾವರಿ ಸಾಸಕ್ತ ಮೆ ಕೊಆಪರೇಟಿವ್ ಇನ್ಸ್‌ಪೆಕ್ಟರರು, ಮುಕ್ಕಾಡು, ಉಪ್ಪಿನಂಗಡಿ, ವೀರರಾಜಪೇಟೆ, ಮತ್ತು ಅಮ್ಮತ್ತಿಯಲ್ಲಿ ಒಬ್ಬೊಬ್ಬ ಪ್ಯಾರಾಗಳ ಮೇಲೆ ಕೆಲಸ ನಡೆಸುತ್ತಿದ್ದಾರಾಗಿಯೂ, ಒಂದು ಸಾಲಗಾರರಿಗೆ ಒಟ್ಟಿಗೆ ರೂ. 35 ಬಂಡವಾಳ ವಿಧಿಸಲ್ಪಟ್ಟಿರುವದಾಗಿಯೂ ತಿಳಿಯಬರುತ್ತದೆ.

ಪೊನ್ನಂಪೇಟೆ ನಾಡಿನವರೊಬ್ಬರಿಗೆ ಗುರುವಾರ ಸಂಜೆ ಬೀ. ಸಿ. ಕೊಡಗಿನ ಸಂಬಣ್ಣನವರು ತಮ್ಮ ಹಣವನ್ನು ಬರುವಾಗ ಕಳೆದುಕೊಂಡರೆಂದು ಅವರಿಗೆ ಒಟ್ಟು ಮತ್ತು ಫಸ್ಟ್‌ಕ್ಲಾಸ್ ಮ್ಯಾಜಿಸ್ಟ್ರೇಟರು 1 ವರ್ಷ 3 ತಿಂಗಳ ಸಜೆಯನ್ನೂ, ರೂ 300 ಜುಲ್ಮಾನೆಯನ್ನೂ ವಿಧಿಸಿದ್ದರ ಮೇಲೆ ಸೆಷನ್ ಜಡ್ಜರಿಗೆ ಅಪ್ಪೀಲು ಮಾಡಲಾಗಿ, ಅಲ್ಲಿಯೂ ಕೆಳ ಕೋರ್ಟಿನ ತೀರ್ಪೇ ಕಾಯಂ ಮಾಡಲ್ಪಟ್ಟಿತು.

ಈ ತಾ 14 ರಲ್ಲಿ ಮಡಿಕೇರಿಯಲ್ಲಿ ನಡೆದ ಇಂಡಿಯನ್ ರೆಡ್‌ಕ್ರಾಸ್ ಸಂಘದ ಕೊಡಗು ಶಾಖೆಯ ಜನರಲ್ ಮೀಟಿಂಗಿನಲ್ಲಿ ಶ್ರೀ ಸಿ.ಜೀತನವರು ಅದರ ಅಧ್ಯಕ್ಷರಾಗಿಯೂ, ಸಿವಿಲ್ ಸರ್ಜನರು ಮತ್ತು ಮಿಸೆಸ್ ಪಟ್ನಿ, ಡಬ್. ಲೈಟವರು ಉಪಾಧ್ಯಕ್ಷರುಗಳಾಗಿಯೂ, ಡಿ. ಡಿ. ಯಸ್. ಕೆ. ತಿಮ್ಮಪ್ಪನವರು ಮತ್ತು ಡಾ. ಬಿ. ಪಿ. ದೇವಯ್ಯನವರು ಜಂಟಿ ಕಾರ್ಯದರ್ಶಿಗಳಾಗಿಯೂ, ವಿನಾ ಜನರು ಕಮಿಟಿ ಮೆಂಬರುಗಳಾಗಿಯೂ ಆರಿಸಲ್ಪಟ್ಟರೆಂದು ತಿಳಿಯುತ್ತೇವೆ.

ಹಿಂದೂ ದೇಶ.

ಬಂಗಾಳ ಸರ್ಕಾರದವರು ತಮ್ಮ ಆಡಳಿತ ವರದಿಯಲ್ಲಿ ಪಂಚಕ ಜನಾಂಗದವರ ವಿಶೇಷ ವಿಷಯಾಗಿ ಮನೆಯ ಬೇಗನೆ ಗಾಗಿ ಕ್ಷಮಾಪಣೆಯನ್ನು ಕೇಳಿದರು.

ಕಾಶೀಪುರ ಒಳಪಂಚಿನ ಕೇಸಿನ ಕೈದಿ ಶ್ರೀ ಜೋಗೇಶಚಂದ್ರ ಚಟರ್ಜಿ ಎಂಬವರು ಬಿ ಟು ಲಕ್ನೋ ಸೆಂಟ್ರಲ್ ಜೈಲಿನಲ್ಲಿ 68 ದಿವಸಗಳಿಂದ ಉಪವಾಸವನ್ನು ಮಾಡುತ್ತಿದ್ದಾರೆ.

ಸಂಯುಕ್ತ ಪ್ರಾಂತದ ಅಚಾರು ಫೆಬ್ರವರಿ ತಿಂಗಳಲ್ಲಿ ಕಾಶಿಯ ಸ್ವದೇಶಕ್ಕೆ ಹಿಂತಿರುಗುವ ಪಂಡಿತ, ಮದನಮೋಹನ ಮಾಳವೀಯರ ಸಭೆಯು ಅಧ್ಯಕ್ಷಸ್ಥಾನವನ್ನು ವಹಿಸುವ ವೆಂದೂ ಒಪ್ಪಿ ಮಿತ್ರನಿಗೆ ತಿಳಿಸಿರುವರು.

ಮಹಾತ್ಮಜೀಯವರು ನಿಧಾನವಾಗಿ ಗುಣಹೊಂದುತ್ತಿದ್ದಾರೆ. ಅವರ ಎರಡು ಹಲ್ಲುಗಳು ಕೀಳಲ್ಪಟ್ಟಿವೆ. ಡಾಕ್ಟರು ಅವರು ಸಂಪೂರ್ಣ ವಿಶ್ರಾಂತಿಯನ್ನು ಪಡೆಯಬೇಕೆಂದು ಹೇಳಿದರು. ಅವರ ರಕ್ತದ ಒತ್ತಡ ಕಡಿಮೆಯಾಗಿ ಕೊಂಚ ಸುಧಾರಿಸಿದೆ.

ತಿರುಚಿನಾಪಳ್ಳಿ ಜಿಲ್ಲಾ ಬೋರ್ಡಿನ ಅಧ್ಯಕ್ಷರಾಗಿ, ಪ್ರಸಿದ್ಧ ಕಾಂಗ್ರೆಸ್ ನಾಯಕರುಗಳಾದ ಶ್ರೀ ರತ್ನವೇಲು ಥೇವರ್ ಇವರು ಬಹುಮತದಿಂದ ಆರಿಸಲ್ಪಟ್ಟಿರುವರು. ಶ್ರೀ ಥೇವರ್‌ರವರಿಗೆ 28 ಮತಗಳೂ, ಜಸ್ಟಿಸ್ ಶ್ರೀ ಸಮ್ಮಯ್ಯ ರೆಡ್ಡಿಯವರಿಗೆ 21 ಮತಗಳೂ ದೊರೆತವು.

ಬೆಂಗಾಳ ಗ್ರಾಮದಲ್ಲಿ ಇಂಗ್ಲಿಷ್ ರೆಜಿಮೆಂಟಿನ ಮತ್ತು ಮಂದಿ ಸಿಪಾಯಿಗಳು ನಡೆಸಿದ ಅತ್ಯಾಚಾರಕ್ಕಾಗಿ ಅವರಿಗೆ ಶಿಕ್ಷೆ ವಿಧಿಸಲ್ಪಟ್ಟಿತು. ಅವರು ಪೋಲೀಸ ಠಾಣೆಗೆ ಆಪೀಲು ಮಾಡಲಾಗಿ, ಕಲ್ಕತ್ತೆಯ ಹೈಕೋರ್ಟಿನವರು ಅಪೀಲನ್ನು ವಜಾ ಮಾಡಿದರು. ತನ್ನ ಕಾಪಿನಲ್ಲಿ ಒಬ್ಬರು ಸಿಪಾಯಿಗಳನ್ನು ಕರೆದು ಅವರು ತನ್ನ (ಸಿಪಾಯಿಗಳ) ಉಡುಪಿನ ಗಾತ್ರವನ್ನು ನಾಶಪಡಿಸಿರುವುದಾಗಿ ತಿಳಿಸಿದರು.

ಬಂಗಾಳ ಸರ್ಕಾರದವರು ವಿವಾಹಕ್ಕೆ ಒಳಪಡುವ (ಹೆಣ್ಣಿನ) ಪ್ರೌಢಿಗೆ ಶೃಂಗಾರಕಗಳನ್ನು ಪ್ರದರ್ಶಿಸುವ ನಿರ್ದಿಷ್ಟ ಹಣದ ಹಾಗೂ ಶಿಕ್ಷಣದ ಕ್ರಮಗಳನ್ನು ಕಳಿಸಿದ್ದಾರೆ. 85 ಮಂದಿ ಹೆಣ್ಣುಗಳು ಈ ಶಿಕ್ಷಣ ಹೊಂದುತ್ತಿದ್ದಾರೆ. ಹಣ್ಣು ಹಂಪಲು ಕರಕಾರಿ ಇವುಗಳನ್ನು ಬೆಳೆಯುವ ವಿಧಾನವನ್ನೂ, ಕಾಯಿ ಮುರಬ್ಬಗಳು, ಜಾಮ್, ಚಟ್ನಿಗಳು, ಹಿತ್ತಾಳೆ ಪದಾರ್ಥಗಳು, ಫ್ಲೈ ಕಿಯರು ಮಾಡುವುದು, ಈ ಕೈಗಾರಿಕೆಗಳನ್ನು ಪ್ರಾರಂಭದಲ್ಲಿ ಹೇಳಿ ಕೊಡುತ್ತಾರೆ. ಈ ಶಿಕ್ಷಣಕ್ಕೆ ಹಣ ಬೇಕಾದ ವೆಚ್ಚವನ್ನೆಲ್ಲಾ ಸರ್ಕಾರದವರೇ ವಹಿಸಿಕೊಳ್ಳುತ್ತಾರೆ.

ಇಂಡಿಯಾ ದೇಶದಲ್ಲಿ ಮೋಟಾರ್ ಕಾರು ತಯಾರ ಮಾಡುವ ಕಾರ್ಖಾನೆಯೊಂದನ್ನು ಸ್ಥಾಪಿಸಬೇಕೆಂಬ ಉದ್ದೇಶದಿಂದ ಈ ವಿಷಯದಲ್ಲಿ ಹೆಚ್ಚು ಪರಿಶ್ರಮ ವಹಿಸಿರುವ ಹಿಂದೂಸ್ಥಾನ ಮತ್ತು ದೇಶಗಳಿಗೆ ಹೋಗಿದ್ದ ಸರ್. ಎಂ. ವಿಶ್ವೇಶ್ವರಯ್ಯನವರು ಅಮೇರಿಕಾ ಯೂರೋಪ್ ದೇಶಗಳಲ್ಲಿರುವ ಕಾರು ಮೋಟಾರು ಕಾರ್ಖಾನೆಗಳಿಗೆ ಹೋಗಿ ಅಲ್ಲಿ ಕೆಲವು ದಿವಸಗಳನ್ನು ಪರಿಶ್ರಮ ವಹಿಸಿ ಕಳೆದು ಬಂದು ಅದರ ಬಗ್ಗೆ ಒಂದು ವರದಿಯನ್ನು ಪ್ರಕಟಿಸಿರುತ್ತಾರೆ. ಅವರು ಅಭಿಪ್ರಾಯ ಪಟ್ಟಿರುವುದೇನೆಂದರೆ—ಹಿಂದೂಸ್ಥಾನದ ಈಗಿನ ಪರಿಸ್ಥಿತಿಯಲ್ಲಿ ಮೋಟಾರ್ ಕೈಗಾರಿಕೆಯನ್ನು ನಮ್ಮ ದೇಶದಲ್ಲಿ ಪ್ರಾರಂಭಿಸಬೇಕಾಗಿರುವುದು ಅತ್ಯಾವಶ್ಯಕ. ಅದರಿಂದ ದೇಶಕ್ಕೆ ವಿಶೇಷ ಪ್ರಯೋಜನ ಉಂಟು ಎಂಬುದು ನನಗೆ ಅನುಭವ ಪ್ರಮಾಣಕವಾಗಿದೆ. ತಡಮಾಡುವುದು ಅಪಾಯಕರ.'

ಗ್ರೇಟ್ ಬ್ರಿಟನ್ನಿನಲ್ಲಿ ಬಾಲಕರು 15 ವರ್ಷ ತುಂಬುವ ವರೆಗೂ ಸ್ಕೂಲುಗಳಲ್ಲಿ ವಿದ್ಯಾಭ್ಯಾಸ ಮಾಡುತ್ತಿರಬೇಕೆಂದು ಹೊಸ ನಿಯಮ ಮಾಡಿರುತ್ತಾರೆ. ಈ ಚಿಕ್ಕ ಹಸ್ತದ ವರೆಗೆ ವಿದ್ಯಾಭ್ಯಾಸ ಮಾಡಿದರೆ ಸಾಕಾಗಿತ್ತು. ಈ ಹೊಸ ನಿಯಮದ ದೆಸೆಯಿಂದ ಹಾಲಿ ಇರುವ ಪ್ರಾಥಮಿಕ ಸ್ಕೂಲುಗಳಲ್ಲಿಯೂ ಹೆಚ್ಚಿಗೆ ವಿದ್ಯಾರ್ಥಿಗಳಿಗೆ ಶಿಕ್ಷಣ ಕೊಡಲು ಅನುಕೂಲ ಮಾಡಬೇಕಾಗಿದೆ. ಸರಕಾರದ ಸಹಾಯದಿಂದ ಯೂನಿವರ್ಸಿಟಿಯ ವರೆಗೂ ಹತ್ತುವ ವಿದ್ಯಾರ್ಥಿಗಳಿಗೆ ಸಿಗುತ್ತಿದ್ದ ಸ್ಕಾಲರ್‌ಶಿಪ್ಪಿನ ಸಂಖ್ಯೆಯನ್ನು ಹೆಚ್ಚಿಸಿದ್ದಾರೆ. ಅಂದರೆ ಯೂನಿವರ್ಸಿಟಿಗಳಲ್ಲಿ ಒಂದು ಸಾವಿರ ವಿದ್ಯಾರ್ಥಿಗಳಿಗೆ ಸರಕಾರದ ಸ್ಕಾಲರ್‌ಶಿಪ್ ಕೊಡಲಾಗುವುದು. ಸ್ತ್ರೀಶಿಕ್ಷಣ ವಿಷಯ ಮತ್ತು ಕಲಾ ವಿದ್ಯೆಗೆ ಶಿಕ್ಷಣವೂ ವಿಶೇಷ ರೀತಿಯಲ್ಲಿ ನಡೆಯುವ ಏರ್ಪಾಡುಗಳ ಮಾಡಲಾಗಿದೆ.

ಯುದ್ಧ ವಾರ್ತೆ.

ಜನವರಿ ತಾರೀಖು 8.

ಟಿಮಿಯನ್ ಪ್ರಾಂತವು ಪೂರ್ತಿ ಹಿಡಿಯಲಾಯಿತು.

ಮಳೇಶಿನ ಪಶ್ಚಿಮ ತೀರದ ಟಿಮಿಯನ್ ಜಿಲ್ಲೆಯನ್ನು ಸಂಪೂರ್ಣವಾಗಿ ಆಕ್ರಮಿಸಿರುವ ಬಗೆ ಪಡೆದಿರುವರು.

ಜುಲೈ ಆಸ್ಟ್ರಿಯ ವರೆಗೆ ಯುದ್ಧ.

ಜುಲೈ ಆಸ್ಟ್ರಿಯದೊಳಗೆ ಯುದ್ಧವು ನಡೆಯುತ್ತದೆಂದು ಜಪಾನ್ ಶತ್ರುಪಕ್ಷದ ಮುಖ್ಯಾಧಿಕಾರಿಯು ಹೇಳುತ್ತಾರೆ. ಈ ದೇಶವನ್ನು ಆಕ್ರಮಿಸುವವರು ಶತ್ರುಗಳ ವಶದಲ್ಲಿರುವ ಪ್ರಾಂತಗಳನ್ನು ಹಿಡಿಯಲು ಇನ್ನು ಆರು ತಿಂಗಳು ಬೇಕಾಗುವುದು.

ಜನವರಿ ತಾರೀಖು ೯

ಮುತ್ತಿನಂಥ ದುಷ್ಕೃತ್ಯ

ಟೋಕಿಯೋದಲ್ಲಿ ಸ್ತ್ರೀಯರ ನೇತೃತ್ವದ ಮೇಲೆ ಬಾಂಬ್ ಹಾಕಿದಕ್ಕೆ ಸುಮಾರು ಪ್ರತಿಭಟನೆ ನಡೆಯಿತು. ಈಗ ಮಕ್ಕಳನ್ನು ಆಸ್ಪತ್ರೆಯ ಮೇಲೆ ಎಂಟು ವಿಮಾನಗಳು ಬಾಂಬುಗಳನ್ನು ಎಸೆದು ನಷ್ಟ ಮಾಡಿದರು. ಅಸ್ಪತ್ರೆಯವರು ಇದಕ್ಕೆ ಪ್ರತಿಭಟಿಸಿದರು.

ಜನವರಿ ತಾರೀಖು 11.

ಚಂದ್ರ ಗ್ರಹಣದ ಫಲ

ಕಳೆದ ಚಂದ್ರ ಗ್ರಹಣ ಕಾಲದಲ್ಲಿ ಇಂಡೋನೇಶಿಯದಲ್ಲಿ ಚಂದ್ರನು ಪೂರ್ಣವಾಗಿ ಮುಚ್ಚಲ್ಪಟ್ಟಿದ್ದನು. ಇದು ಅಪಶಕುನವೆಂದೂ ಅನರ್ಥಕರವಾದುದೆಂದೂ ಹೇಳಿದರು. ಭೂಮಿಯ ನೆರಳು ಚಂದ್ರನ ಪೂರ್ಣ ಪ್ರಕಾಶವನ್ನು, ಅದ್ದರಿಂದ ಇದು ಜನರ ಭಯವೆಂದು ಈಗ ಭಾವಿಸುವರು. ಜಪಾನ್ ವಿರುದ್ಧ ಎರಡು ಸಿದ್ಧ ಪಡೆಯನ್ನು ಒಯ್ದು ಆಸ್ಟ್ರೇಲಿಯದ ನೌಕೆ ಜಪಾನಿನ ನೌಕೆಯನ್ನು ಅದು ಬ್ರಿಟಿಷರು ನಡೆಸಲಿಲ್ಲ. ಇಡೀ ದಿವಸ ಕಾಲ ಕತ್ತಲು ಕವಿದಿತ್ತು. ಅವರು ಬಹಳ ಜನರು ಅನೇಕ ಟ್ಯಾಂಕು ಮತ್ತು ಮೋಟಾರುಗಳನ್ನು ಆಕ್ರಮಿಸಿದರು. ಜಪಾನಿನ ಸೈನ್ಯದ ಶಕ್ತಿಯನ್ನು ಕುಗ್ಗಿಸುತ್ತಿರುವರು.

ಅಬಿಸೀನಿಯಾದಲ್ಲಿ ಎಚ್ಚರಿಕೆ.

ಜನವರಿ ತಾರೀಖು 20ರಿಂದ 22ರ ವರೆಗೆ ಅಬಿಸೀನಿಯಾದಲ್ಲಿ ಒಂದು ಮಹಾ ಸಮಾರಂಭ ನಡೆಯಿತು. ಆ ಸಮಯದಲ್ಲಿ ಅಬಿಸೀನಿಯಾ ಚಕ್ರವರ್ತಿ ಪ್ರಕಟಣೆ ಹೊರಡಿಸಿದರು.

ಎಂಟಿಸೆಲ್ಸ್ಕಿಯಲ್ಲಿ ಕದನ

ಎಂಟಿಸೆಲ್ಸ್ಕಿ ಎಂಬಲ್ಲಿ 1600 ಜರ್ಮನಿಯನ್ನರನ್ನು ಆಕ್ರಮಿಸಿ ರಷ್ಯನ್ ಸೈನಿಕರು ಸುತ್ತುಗಟ್ಟಿ ಅವರನ್ನು ಸೋಲಿಸಿ ಅನೇಕರನ್ನು ಸೆರೆಹಿಡಿದು ಅನೇಕರನ್ನು ಕೊಂದರು. ಕೆಲವು ಟ್ಯಾಂಕುಗಳನ್ನು ವಶಪಡಿಸಿಕೊಂಡರು.

ಜನವರಿ ತಾರೀಖು 14.

ಮನಿಲೆಯ ಮೇಲೆ ಪ್ರಬಲ ಆಕ್ರಮಣ

ಮನಿಲೆಯ ಮೇಲೆ ಪ್ರಬಲ ವಿಮಾನ ದಾಳಿ ನಡೆಯಿತು. ಮನಿಲೆಯಲ್ಲಿ ಜಪಾನ್ ಭಾಗದಲ್ಲಿ ಭಾಗವಹಿಸುತ್ತಿದ್ದವರಿಗೆ ಆದಷ್ಟು ವಿಮಾನಗಳಿಂದ ಅಪಾಯವಾಯಿತು. ಪಟ್ಟಣದ ಮೇಲೆ ಬಾಂಬು ಬಿದ್ದು ವ್ಯಾಪಾರಕ್ಕೆ ಆಘಾತವಾಯಿತು. ಜಪಾನೀಯರು ಅಪಾರ ನಷ್ಟ ಹೊಂದಿದರು.

ಹಿಂದೀ ಸ್ವಾತಂತ್ರ್ಯ ದಿನ.

ಜನವರಿ ತಾರೀಖು 26ನೇ ಆದಿತ್ಯವಾರ

ಕೊಡಗಿನಲ್ಲಿ ಆಚರಿಸಲ್ಪಡುವ ಸ್ಥಳಗಳು

ಮಡಿಕೇರಿ, ಮೂರ್ನಾಡು, ವೀರರಾಜಪೇಟೆ, ಪೊನ್ನಂಪೇಟೆ, ಹುದಿಕೇರಿಯಲ್ಲಿ ಧ್ವಜಾರೋಹಣ ಮತ್ತು ಧ್ವಜ ವಂದನೆಯೂ ಮತ್ತು ಗೋಣಿಕೊಪ್ಪಲಲ್ಲಿ ಧ್ವಜಾರೋಹಣ ಮತ್ತು ಧ್ವಜ ವಂದನೆ, ಮಧ್ಯಾಹ್ನ 1.½ ಗಂಟೆಗೆ ಸಾರ್ವಜನಿಕ ಸಭೆ. ಸಾಯಂಕಾಲ 6 ಗಂಟೆಗೆ ಶ್ರೀ ರಾಮ ಮಂದಿರದಲ್ಲಿ ಭಜನೆಯೂ ಅನ್ನಸಂತರ್ಪಣೆಯೂ.

ದೇಶದ ಸ್ವಾತಂತ್ರ್ಯ ದಿನದ ಈ ಪವಿತ್ರ ದಿನಾಚರಣೆಯನ್ನು ದೇಶೀಯರೆಲ್ಲರೂ ಸಕ್ರಿಯವಾಗಿ ನೆರವೇರುವಂತೆ ಸಹಾಯಕರಾಗಬೇಕೆಂದು ಪ್ರಾರ್ಥನೆ.

ಸಿ. ಯಂ. ಪೂಣಚ್ಚ,
(ಕಾರ್ಯದರ್ಶಿ)
ಜಿ. ಕಾ. ಕಮಿಟಿ

ವಿನಂತಿ.

ಕೊಡಗಿನ ಬಂಧುಗಳೇ,

ನಾನು ಬೆಂಗಳೂರಿಗೆ ಬರಲು ಸ್ವಲ್ಪ ತಡವಾದುದರಿಂದ ಹರಿಜನ ಸೇವಾ ಸಂಘದ ಇನ್ಸ್‌ಪೆಕ್ಟರ್ ಮೆ. ಬಿ. ಕೆ. ಭಂಡಾರಿಯವರ ಕೊಡಗಿನ ಪ್ರವಾಸದ ಕಾರ್ಯಕ್ಕೆ ಸ್ವಲ್ಪ ಬದಲಾವಣೆಗೆ ವ್ಯಸನಪಡುತ್ತೇನೆ. ಅವರು ಈಗ ತಿರುಗಿ ಹರಿಜನ ಸೇವಾ ಸಂಸ್ಥೆಗಳು ಕೊಡಗಿನವರ ಸಹಾಯಕ್ಕಾಗಿ ಬರುತ್ತಾರೆ.

ಗಾಂಧೀಜಿ ವರ್ಷ ಪೂರ್ತಿ ನಿರೀಕ್ಷಿಸುವ ದಿ ವರ್ಷಗಳ ವರೆಗೆ ಹರಿಜನ ಸೇವಾ ಸಂಸ್ಥೆಗಳಿಗೆ ಧನ ಸಹಾಯ ಕೊಡಬೇಕಾಗುವದೆಂದು ಹೇಳಿದ ಪ್ರಕಾರ ಒಂದು ವಿಧಾನ ನೋಡಿದರೆ ಈಗ ಅಂಥಾ ಸಹಾಯವು ಎಷ್ಟು ಮುಖ್ಯ ಎಂಬುದನ್ನು ಮನಗಂಡ ಸರ್ಕಾರದವರು ಸಹಾ ಸಂಸ್ಥೆಗಳಿಗೆ ಸಹಾಯ ಮಾಡುತ್ತಿದ್ದಾರೆ. ಸರ್ಕಾರದ ಹಣ ಸಾಕಾಗದ್ದರಿಂದ ನಮ್ಮ ಕಡೆಯಿಂದಲೂ ಹರಿಜನ ಸೇವಾ ಸಂಘಕ್ಕೆ ಸಹಾಯ ಮಾಡಬೇಕಾಗಿದೆ. ಅದರಿಂದ ಭಂಡಾರಿ ಅವರ ಸಂದರ್ಶನ ಕಾಲದಲ್ಲಿ ಮಹನೀಯರು ಹಣ ಸಹಾಯ ಮಾಡಬೇಕಾಗಿ ಪ್ರಾರ್ಥಿಸುತ್ತೇನೆ.

ಹರಿಜನ ಸೇವಾ ಸಂಘದ ಕಾರ್ಯದರ್ಶಿ. ಬಿ. ಬಿ. ಪಾಟೀಲ್,
(ಅಧ್ಯಕ್ಷ)

[illegible]

ನೋಟೀಸು.

[illegible] 1936ನೇ [illegible] 1937ನೇ [illegible] 7ನೇ [illegible] 12ನೇ [illegible]

ಟಿ. ಎ. [illegible],
ಪ್ರೆಸಿಡೆಂಟ್,
ಕೊಡಗು ಡಿಸ್ಟ್ರಿಕ್ಟ್ ಬೋರ್ಡ್.

ಟೆಂಡರು ನೋಟೀಸು.

ಕೊಡಗು [illegible]

[illegible] 45 [illegible] 25 [illegible] 70 [illegible]

[illegible] (ಪ್ರೆಸಿಡೆಂಟ್)

[illegible] 33—1—'36.

ಸನ್ 1882ನೇ ಇಸವಿ [illegible]

ದಿ ಬೊಂಬೆ ಲೈಫ್ ಎಶ್ಯೂರೆನ್ಸ್ ಕಂಪೆನಿ ಲಿಮಿಟೆಡ್.

ಅಧ್ಯಕ್ಷರು—[illegible]
[illegible]

[illegible] 18ರಿಂದ 23ರ [illegible]

[illegible]

ಹೆಚ್ಚಿನ ವಿವರಗಳಿಗೆ—ಬಿ. ಎಸ್. [illegible],
[illegible] ಏಜೆಂಟ್,
[illegible]

26—6

ಅನೇಕ [illegible]



[illegible]

501 [illegible]

501 Soap

[illegible]

52—34

ಸಾಹಸ! [illegible]

ಬೊಂಬಾಯಿ ರೆಸ್ಟೋರೆಂಟ್

ಇದೇ ತಾ. 19—12—1935ರಲ್ಲಿ ಮಡಿಕೇರಿ [illegible]
ಹೊಸ ಕಟ್ಟಡದಲ್ಲಿ [illegible]

[illegible]

ಕಾಫಿ—ಟೀ—[illegible]
ಕೇವಲ [illegible]

[illegible]

52—5

[illegible] ರಾವ್, [illegible]

ಕೊಡಗು

ಜನವರಿ ೩೦ ೧೯ನೇ ಡಿಸ್ಪ್ಯಾಚ್ ೧೯೩೬.

ಕೊಡಗಿನಲ್ಲಿ ಭೂಮಿ ಗಿರವಿ ಬ್ಯಾಂಕು ಜಯಪ್ರದವಾಗುವುದೇ ?

[illegible]

ಕೊಡಗಿನಲ್ಲಿ ಹರಿಜನ ಸೇವಾ

[illegible]

ಅರಮೇರಿ ಶಾಲೆ.

[illegible]

ವೀರಾಜಪೇಟೆ ಮತ್ತು ಮಗ್ಗುಲ ಬಾವಿ.

[illegible]

[illegible]

ಕಾರಾಗ್ರಹದ ಕೆಲವು ದೃಶ್ಯಗಳು.

(ಮಿಸೆಸ್ ಮಾರ್ಗರೆಟ್ ಇ ಕಸಿನ್ಸ್ ರವರಿಂದ.)

(ಈಚಿನ ಸತ್ಯಾಗ್ರಹ ಸಮರದಲ್ಲಿ ಹಿಂದೀಯರ ಸ್ವಾತಂತ್ರ್ಯದ ಹಕ್ಕನ್ನು ಅರಿತು, ಅದರಲ್ಲಿ ಭಾಗವಹಿಸಿ ಕಾರಾಗೃಹವಾಸವನ್ನನುಭವಿಸಿದ ಯುರೋಪಿಯನ್ ಸ್ತ್ರೀಯರಾದ ಮಾರ್ಗರೆಟ್ ಕಸಿನ್ಸ್ ರವರು ಹಿಂದೂಸ್ಥಾನದ ಜೈಲುಗಳ ಅನುಭವವನ್ನು 'ಸ್ತ್ರೀ ಧರ್ಮ'ದ ಸುವರ್ಣಮಹೋತ್ಸವದ ಸಂಚಿಕೆಯಲ್ಲಿ ಬರೆದಿದ್ದನ್ನು ನಾವು ಇಲ್ಲಿ ಉದ್ಧರಿಸುತ್ತೇವೆ. ಕೃತಿಯೆಂದು ಅಂಕದ ಅರ್ಥಗರ್ಭಿತವಿರುವ ಭಾಗಗಳ ಸಾರಾಂಶವನ್ನು ಹೊರ ಸಂಕುಚಿತವಾದ್ದರಿಂದ ಅವಕಾಶ ಒದಗದಾದದ್ದಾಗಿದೆ)

ಎತ್ತರವಾದ ಗೋಡೆಗಳ ಮಧ್ಯೆ ಇದ್ದ ಪುಟ್ಟ ಗವಾಕ್ಷದಿಂದ ಜೈಲ್ ವಾರ್ಡರೊಬ್ಬನು ನಿಧಾನವಾಗಿ ತೆರೆದನು. ಎತ್ತರಗೋಡೆಯ ಚಿಕ್ಕ ಅಂಗಳ. ಒಂದೊಂದು ಪಕ್ಕದಲ್ಲಿಯೂ ಸಾಲುಸಾಲಾಗಿ ಅನೇಕ ಕೋಣೆಗಳಿದ್ದುವು. ನಾನು ಅಂಗಳದಲ್ಲಿ ಕಾಲಿಟ್ಟೊಡನೆಯೇ 'ಧಡ್' ಎಂದು ಶಬ್ದ ಒಂದು ಕೇಳಿಸಿತು. ತಿರುಗಿ ನೋಡಲು ಕಬ್ಬಿಣದ ಬಾಗಿಲನ್ನು ಬಲವಾಗಿ ಹಾಕಿ ಬೀಗಮುದ್ರೆಯಿಂದ ಭದ್ರಪಡಿಸಿದೆಂದು ತಿಳಿಯಿತು. ಇನ್ನು ಮೃಗಾಲಯಕ್ಕೆ ಹೋಗುವ ಇದ್ದ ಪೂರ್ವೇತಿಹಾಸ ಇಂದಿಲ್ಲ. ನನಗೆ ಜೈಲಿನಲ್ಲಿ ಸಂಪೂರ್ಣ ಸ್ವಾತಂತ್ರ್ಯವಿದ್ದಿತು ಯಥೇಚ್ಛವಾಗಿ ಹೋಗಬಹುದಿತ್ತು.

ಮುಂದಕ್ಕೆ ಹೊರಟೆನು. ಅಂಗಳದಲ್ಲಿದ್ದುದು ಒಂದೇ ಒಂದು ಮಾವಿನ ಮರ. ಅದರ ನೆರಳಿನಲ್ಲಿ ಕುಳಿತಿದ್ದ ಒಬ್ಬ ಮನುಷ್ಯನಿದ್ದುದರಿಂದ ನನ್ನ ಮನಸ್ಸು ಕಾತುರಗಳೂ ನಷ್ಟವಾಗಿ ಎಳೆದುಬಿಟ್ಟುವು. ಆ ಮಾವಿನ ಮರದ ಬುಡವೇ ಆ ಮನುಷ್ಯನ ಆಶ್ರಯ; ಹರಿಹರಿಸೋದ್ದಾರ ಆಶ್ರಯಕ್ಕಾಗಿ ಯುಗಯುಗಗಳಿಂದ ತಮ್ಮ ಜನ್ಮವನ್ನು ಧಾರೆ ಎರೆದ ಅನೇಕ ಮಹಾತ್ಮರ ಜನ್ಮದಂತೆಯೇ ಇದು. ಕಾಣಿಸಿದ್ದುದು ಬಂಧನದಲ್ಲಿ. ಅದೂ ಪ್ರಜೆಗಳಿಗೆ ಹಿಂದೂ ನೆರವಾದ ಶಿವಾಜಿಯ ಕೃಷ್ಣನ ಕಾರಾಗೃಹಗಳನ್ನು ನೆನೆದು ಬಂಧವಿಮೋಚನ ಮಾಡಲು ತೊಡಗಿದ್ದರು ಆ ಮಹಾತ್ಮರು. ಮನಸ್ಸಿನಲ್ಲಿ ಪ್ರಶಾಂತರು ಏಕಾಂತಿಯಾಗಿರುವುದೆ ನನಗೆ ಭಾಸವಾಯಿತು. ರಾಬಿನ್‌ಸನ್ ಕ್ರೂಸೋವು ಮಹಾತ್ಮರ ದ್ವೀಪದಲ್ಲಿಯೂ, ಫ್ರೈಡೇ ಎಂಬ ಅವನ ಅನುಚರನ ಸಂಗದಿಂದ ದೇವದೂತನಂತೆ ದ್ವೀಪದಲ್ಲಿಯೂ ನನ್ನದಾಗಿ ಒಂಟಿ ಕೋಣೆ. ಅವರು ಏಕಾಂತವಾಗಿಯೂ ಏಕಾಕಿಯಾಗಿಯೂ ಅವರಿಗೆ ಜತೆಯಾಗಿ ಹೋಲಿಸಲು ಇನ್ನೊಬ್ಬರಿಲ್ಲದುದರಿಂದ ಸ್ವಭಾವಿಕವಾಗಿ ಏಕಾಕಿಯಾಗಿದ್ದರೂ ಅವರೊಳಗಿರುವ ಲೋಕಪ್ರೇಮದಿಂದ ಅನೇಕಾನೇಕ ಜನಗಳನ್ನು ಅವರು ತಮ್ಮದೇ ಒಂದು ಪ್ರೇಮಮಯ ಜಗತ್ತನ್ನು ಸೃಷ್ಟಿಸಿರುವರು ಇವರು. ಇವರ ಅಕ್ಕನೇ ಇವರೊಬ್ಬ ಸಹಾಯಕಿ. ಸೆರೆಯವರು ಕೂಡ ಆ ಮಹಾತ್ಮರ ಸಹಾಯವನ್ನು ಸಂಪೂರ್ಣವಾಗಿ ನೆಚ್ಚಿ ನಮ್ಮ ಸಂಭಾಷಣೆಗೆ ಗುರುಭಾವದಿಂದ ಬೇಡಿಲ್ಲವೆಂದು ನಿಷೇಧಿಸಿದಂತಿತ್ತು. ನಮ್ಮ ಮಾತಿಗೆ ಸಾಕ್ಷಿಯಾಗಿದ್ದುದು ಆ ಅಕ್ಕನೊಬ್ಬಳೇ. ಮಹಾತ್ಮರು ಅದಕ್ಕೆ ತಿಳಿಸದೆ ದೊರೆಕಿದ ನಾವು ಪರಿಚಯೋದ್ದೇಶವಾಗಿ ಏನೂ ಇನ್ನೇನೂ ಪ್ರಸ್ತಾಪಿಸಲಿಲ್ಲವೆಂದು ಅದೇ ಹೇಳುವುದು

ಮಹಾತ್ಮರ ವಚನವೇ ಅವರ ಸಂತೋಷ. ಪ್ರಸನ್ನ ಸತ್ಯಾಗ್ರಹ ಮೂರ್ತಿಯೇ ಅವರು

....

ಸಮ್ಮತಿಸಲಾರದ್ದಾಗಿದ್ದ ಒಬ್ಬ ರಾಜಕೀಯ ಬಂದಿಯನ್ನು ಇಂದು ಹೊರಕ್ಕೆ ಬಿಡಲು ಸಮಯವು ಬಂದಿದೆ. ಎಲ್ಲರೂ ಒಟ್ಟಿಗೆ ಸೇರಿದೆವು ಆಕೆಯನ್ನು ಬೀಳ್ಕೊಡಲು. ನಮ್ಮ ವಿಶ್ವಾಸಪಾತ್ರವಾದ 'ಜನಗಣಮನ ಅಧಿನಾಯಕ' ಮಂತ್ರವನ್ನು ಹಾಡಿದೆವು. ಕಾಂಗ್ರೆಸ್ ವಚನಗಳನ್ನು ಘೋಷಿಸಿದೆವು. ನಮ್ಮ ಭಗಿನಿಯೂ ಒಂದೆರಡು ಮಾತನ್ನು ಹೇಳಲು ಕೂಡಲಿಲ್ಲ.

ಆಕೆಯು ಹೊರಟಳು. ನಾನು ಆಕೆಯನ್ನು ಬಿಟ್ಟಾಗ ನನ್ನ ಜೈಲಿಗೆ ಕಾಲಿಟ್ಟ 'ಹಳೇ ಹುಲಿ' ಆಗಿರಲಿಲ್ಲ. ಆಕೆಯು ಬಿಟ್ಟುಹೋದ ಭಗಿನಿಯನ್ನು ಆದರಿಸಿದ ಬಗೆ, ಅಲ್ಲಿನ ಆತ್ಮೀಯ ಭಾವಪ್ರಕಾಶನಗಳು—ಇವೆಲ್ಲವೂ ನನಗೆ ಅಚ್ಚರಿಯನ್ನುಂಟುಮಾಡಿತು. 'ಕಾರಾಗೃಹವಾಸವೇ ಇಲ್ಲಿನ ಪರಿಗಿನ ಸತ್ಯ ಜೀವನದಲ್ಲಿ ಅತ್ಯಾನಂದದಾಯಕವಾದುದು. 'ದೇಶವಾತ್ಸಲ್ಯ, ಮಹಾತ್ಮರ ಅನುಯಾಯಿ ಎಂದೆಂಬ ಹೆಮ್ಮೆ, ಗೆಳತಿಯರಿಗೆ ತೋರಿಸುತ್ತಿದ್ದ ದೃಢ ಪ್ರೇಮ ಇವು ನನಗೆ ಸುಖಕರವಾಗಿದ್ದುವು' ಎಂದವಳು ಹೇಳಿದಳು. ಅವಳ ಆನಂದಕ್ಕೆ ಕಾರಣವು ತಿಳಿಯಿತು ಅವಳು ಹೊರಕ್ಕೆ ಹೊರಟು ಹೋದ ಮೇಲೆ.

ಹಾ! ಅವಳು 'ದೇವದಾಸಿ' ಕುಲದವಳಂತೆ.

....

ಅಂಗಳದ ಪೈಕಿಗಳಲ್ಲಿನ ಕೆಲವರು ಪೈಕಿಗಳನ್ನು ನನ್ನ ಅಕ್ಕಯನ್ನು ನೆನೆಯಲು ಕಳುಹಿಸಿದ್ದರು. ಅವರು ಕಾಲುಗಳಿಂದ ಮಾಡುತ್ತಿರುವಾಗ 'ನಾನು ಗಾಂಧಿಭಾಗಿ'ಕ್ಕೆ [illegible] ಆಗ ಮೆಲ್ಲನೆ ಹೊರಟರು. ಇದು ನನಗೆ ಕೇಳಿಸಿತು. ಆ ಅಕ್ಕನಲ್ಲಿ ಶಕ್ತಿ ಇಲ್ಲ, ಉತ್ಸಾಹವಿಲ್ಲ, ಕೇವಲ ಸಂತಾಪ ಮಾತ್ರ.

'ಪಡಿಸಲು ಅಶಕ್ಯ' ಎಂದೆನು.

'ಏನು ಕೆಲಸಮಾಡುವು; ಕಾಯಿಲೆ ಇವಳಿಗೆ ಮಗ ಸತ್ತು'

'ಅಯ್ಯೋ! ಇವ್ಯಾಕೆ ಇಲ್ಲವೇ ಅವ್ವ ಧೈರ್ಯಗೆ ಬಿಟ್ಟು?

'ಅವಳ ಗಂಡ ಮಕ್ಕಳನ್ನು ಎಲ್ಲಾ ಹೋದರು. ಇದ್ದವನೊಬ್ಬ. ಅವನೂ ನನ್ನಂತೆ ಮರಣನು ಆಸ್ಪತ್ರೆಯಲ್ಲಿ'

ಈ ಮಹಿಳೆಗೆ ಕಾರಾಗೃಹವಾಸ ಏತಕ್ಕಾಗಿ ಆಯಿತೆಂಬುದು ನನಗೆ ತಿಳಿಯಲಿಲ್ಲ. ಕಡುಘೋರವಾದುದೇನೂ ತಪ್ಪು ಇರಲಾರದು. ಅವಳ ಮುಖವೇ ಹೇಳುತ್ತಿತ್ತು ಅದನ್ನು

ಒಬ್ಬ ದುಂದುವೆಚ್ಚ ಇರಬೇಕು ಪಾಪ.

....

"ಬಂಧನದ ಆನಂದ" (Joy of the Jail) ಎಂದು ಆಗ್ಗೆ ಹೆಸರು ನನ್ನ ಒತ್ತಾಯದ್ದಿದ್ದ ಒಂದು ವರ್ಷದ ಕಂದನಿಗೆ ಕಲ್ಲಿನ ಕೋಟೆಯಲ್ಲಿ [illegible] ಮಕ್ಕಳ ಕಾಲದ ಬಂಧನದ ಕಾಯಿಗೆ ವಿಧಿಸಿದರು ಎಂಬ ಸಂದರ್ಭವನ್ನು ಈಗಲೂ ನನಗೆ ಆ [illegible] ಆ ಮಗುವಿನ ನಲಿದಾಟ. ಚಿಕ್ಕ ಪುಟ್ಟ ಪೆಂಡಾಟಗಳು, ಮನಸೆಳೆವ ಕಣ್ಣಾಟಗಳು—ಇವುಗಳು ಆಹೇವ ಪರ್ಯಂತ ಕಾರಾಗೃಹಕ್ಕೆ ಕಟ್ಟಲ್ಪಟ್ಟ ಕಾವಲಗಾರರಿಗೆ ಕೂಡ ಸಂತೋಷವನ್ನು ಕೊಡುತ್ತಿದ್ದಿತು. ಆ ಶಿಶು ಜೈಲಿಗೆ ಬಂದುದು ಎರಡನೇ ತಿಂಗಳಿನಲ್ಲಿ. ಅದರ ತಾಯಿಗೆ ಬಂಧನವೆಂಬುದೇ ತಿಳಿಯದು.

ಸಾಯಂಕಾಲ ಐದುವರೆ ಘಂಟೆ. ಕೋಣೆಗಳಲ್ಲಿ ಇವರ 'ಕವಾಟ ಬಂಧನ'ವಾಯಿತು. ಆಗ ನಾನು ಇನ್ನೊಂದು ಚಿಕ್ಕ ಮಗುವನ್ನು 'ಆನಂದ'ದ ಹತ್ತಿರ ಕಂಡೆಯಿದ್ದೆ. 'ಗೆಳತಿ ಏನು ಸಿಕ್ಕಿದಳು' ಎಂಬಾಕೆಯ ಆ ಮಗುವು, ಓಡಿ ಬಂದಿತು. ಆಶ್ಚರ್ಯದಿಂದ ಕಬ್ಬಿಣದ ಸರಳುಗಳು—ನಿರ್ದಯವಾಗಿ ಸಜೀವದ ಕುಂದಿಸಿದ ಬಾಗಿಲುಗಳು. ಪೀಠವನ್ನು ಎಳೆದಳು, ಬಡಿದಳು, ಅತ್ತಳು ಆಚೆಗೆ ನಿಂತು ನೋಡಿದ ನಮ್ಮ ಹಿರಿಯರು ದೆಂದೂ ಆಗಾತವು ಬಾಲೆಯನ್ನು ಕರೆದುಕೊಂಡು ಹೋದರು ಇದರೇನು? ರಾತ್ರಿ ಎಂಟು ಘಂಟೆಯ ವರೆಗೂ ಕೇಳಿತು ನನಗೆ ಆ ಮಗುವಿನ ಅಳುವು

ಕಬ್ಬಿಣದ ಸರಳುಗಳು ಅಂದು ಆ ಮಗುವಿನ ಕೋಮಲ ಹೃದಯದಲ್ಲಿ ಇರಿದವು. ಅಂದು ರಾತ್ರಿ ಅದಕ್ಕೆ ತಾನು ಬಂದಿ ಎಂದು ತಮ್ಮ ತಾಯಿಯೂ ಬಂದಿ ಎಂದು.

ಭಾರತೀಯ ಮಗುವಿನಂತೆ ಇದೀಗ ಸಂಕೋಲೆಗಳನ್ನು ಕಾಣದಿದ್ದಾಳೆಯಲ್ಲವೇ ?

....

ಹುಚ್ಚಿಯೆಂದೆನಿಸಿಕೊಂಡಿದ್ದಳು. ಆಕೆಯು ಮಗುವನ್ನೊಂದನ್ನು ಕೊಂದಳಂತೆ. ಆದುದರಿಂದ ಪರ್ಯಂತ ಕಾರಾಗೃಹವು ಇವಳಿಗೆ ವಿಧೀತವಾಗಿದೆ. ಆದರೂ ಇವಳನ್ನು ಕಂಡರೆ ಮಕ್ಕಳಿಗೆ ಬಹಳ ಪ್ರೀತಿ. ಒಳ್ಳೆಯ ಮಾತುಗಳಿಂದ ಇವರನ್ನು ಸಂತೋಷಗೊಳಿಸಲು ಒಳ್ಳೆ ನಿಪುಣೆ. ಅದಕ್ಕೋಸ್ಕರ ಇವಳನ್ನು ಹುಡುಗರುಳ್ಳ ತಾಯಂದಿರಾದ ಪೈದಿಗಳನ್ನು ಕಾಯಲು ನೇಮಿಸಿದ್ದಾರೆ. ಇವಳ ಕೈಲಿ ಯಾವಾಗಲೂ ಚಿಕ್ಕದೊಂದು ಚಿತ್ರ. ಅದಕ್ಕೆ ಉಪಯೋಗ ಮಾತ್ರ ಇಲ್ಲವೇ ಇಲ್ಲ.

ಇವಳ ಅಂಗಳದ ಮೂಲೆಯೊಂದರಲ್ಲಿ ಮಾಡಿಸಿದ್ದಾಳೆ ತೋಟ ಒಂದನ್ನು. ಅದರಲ್ಲಿ ತರಕಾರಿ ಬೆಳೆಯುವಳು. ಅಲ್ಲಿಯೇ ಒಂದು ಬೇವಿನ ಸಸಿಯನ್ನು ನೆಟ್ಟಿದ್ದಾಳೆ. ಅದಕ್ಕೆ ಮೇಲೆ ಬೇರೆ ಮಕ್ಕಳ ಕಾಟದ ಸಲುವಾಗಿ. ಇಷ್ಟು ಕೆಲಸವಿದ್ದರೂ ಸಮಾಜ ಮಾತ್ರ ಬಿಟ್ಟಿಲ್ಲ. ದಿನಕ್ಕೆ ಎರಡು ಬಾರಿ ಹರಳು ಬಟ್ಟೆಯೊಂದನ್ನು ಹಾಸಿ, ಮುಖ್ಯ ಕಡೆಗೆ ತಿರುಗಿ, ಮಂತ್ರವನ್ನು ಒಪ್ಪಿಸುವಳು.

ತಪಸ್ಸಿನಿಂದಲೂ, ಪಶ್ಚಾತ್ತಾಪದಿಂದಲೂ ನೀಗಲುಬೇಕಾಗಿರುವಳು ತನ್ನ ಪಾಪವನ್ನು ಈ ಭಗಿನಿ.

....

ಪ್ರತಿ ದಿನ ಬೆಳಗ್ಗೆ ಒಂದು 'ಮೆರವಣಿಗೆ' ನನಗೆ ಕಾಣುತ್ತಿತ್ತು. ಇದರ ಪಾತ್ರಗಳೆಲ್ಲಾ ವೃದ್ಧೆಯರು. ಇವರೂ 'ಆಜೀವಿ'ಗಳು. ಪ್ರತಿಯೊಬ್ಬಳ ಕಂಕುಳಲ್ಲಿಯೂ ಒಂದೊಂದು ಮಗು. ಅವರದಲ್ಲ. ಕೆಲಸ ಮಾಡುವ ಸತ್ಯ ಸ್ತ್ರೀಯರದು.

ಹೋಗಲಿ. ಎಷ್ಟೇ ಕಷ್ಟ ಪಟ್ಟಿದ್ದರೂ ಅವರ ಮುಪ್ಪಿನ ಕಾಲದಲ್ಲಿಯಾದರೂ ಇವರಿಗೆ ಸ್ವಲ್ಪ ಆರೋಗ್ಯವಿದೆ. ಈ ಮಕ್ಕಳಿಂದ. ಬಂಧನದಲ್ಲೀಗ ಕಳೆಯುವರು ಎಷ್ಟು ಕಾಲ ಬದುಕುವರು. ಎಷ್ಟು ಕಾಲವೂ ಬದುಕಿರಲು ಶಕ್ತರಾಗಿರುವರು. ಅಲ್ಲಿ ನ್ಯಾಯಾಧೀಶರೂ, ನ್ಯಾಯವಾದಿಗಳೂ—ಇವರು ಶಿಕ್ಷೆ ವಿಧಿಸುವುದೂ ಇಲ್ಲಿಯೇ. ನ್ಯಾಯ ಶಾಸ್ತ್ರವಿಲ್ಲದ ಸಂಘಕ್ಕೆ ಹಾನಿಕರವಾದ ಕೆಲಸಗಳನ್ನು ಮಾಡಿದವರು, ನ್ಯಾಯ ಶಾಸ್ತ್ರವನ್ನು ತಿಳಿದು ಅನ್ಯಾಯವೆಂದು 'ನ್ಯಾಯ'ವೆಂಬುದನ್ನು ಅಲ್ಲಗಳೆದವರೂ—ಇಷ್ಟರೂ ಇಲ್ಲಿ ಕಳೆಯುವರು.

....

ಅಂಗಳದಲ್ಲಿ ಇಬ್ಬರು ಹರೆಯದ ಹುಡುಗಿಯರು ಆಟವಾಡುತ್ತಿದ್ದಾರೆ. ಇವರಿಗೆ ಅಧಿಕಾರವು ಬೇರೆ ಸಿಕ್ಕಿದೆ. ಇವರು 'ಅತ್ಯಾಯ ಪಾಪಿಷ್ಠ ವರ್ಗ' (ಕ್ರಿಮಿನಲ್ ಟ್ರೈಬ್ಸ್)ಕ್ಕೆ ಸೇರಿದವರಂತೆ. ಅವರ ಅಧಿಕಾರದ ಚತುಷ್ಕ್ರಿಯೆಯು ಹೊರ ಹರಡಿಸಿದೆ ಸನ್ನಿಸ್ಸು. ಕಂಠದಲ್ಲಿ ಸೇರಿಕೊಂಡಿತು ನನಗೆ.

'ಬಾಕು, ಎಲ್ಲಿಗೆ?' ಎಂದು ಕೂಗಿದ. ಏಕೆ ಗೊತ್ತೇ? ಪಹರೆಯವರು ನೋಡಿದರೆ ಅಗುವುದು ಶಿಕ್ಷೆ. 'ಇವನ್ನು ಕೂರ್ವಿರಂತೆ. ಆಗ ಬೇಡ' ಎಂಬ ಸಮಾಧಾನ ಮಾಡಿದೆ.

ಮುತ್ತಿನಂತ್ರ ಅವರಲ್ಲಿ ಒಬ್ಬಳನ್ನು ನೋಡಿದಾಗ ಆಗ ಸರ' ಕೆಲಸಕ್ಕೆ ಇವಳನ್ನು ಹಾಗೆ ಹಾಕಿದ್ದರು. ಉಚ್ಚವರ್ಗದ ಅಧಿಕಾರವು ಒಟ್ಟಿ ಒಗೆಯುವುದಂತೆ. ಮರಕೆಲಸ ವೃತ್ತಿಗೆ ಕಾರದ ಶಕ್ತಿ ಉಪಯೋಗಿಸುವುದೇ ?

....

ನಾನು ಸಾವಿರಾರು ಉತ್ಸವಗಳನ್ನು ನೋಡಿದ್ದೇನೆ ಆದರೂ ಜೈಲಿನಲ್ಲಿ ನೋಡಿದಂತಹುದು ಎಲ್ಲಿಯೂ ಇಲ್ಲ. ಇಪ್ಪತ್ತು ಹಸು ಮಕ್ಕಳು ಇಷ್ಟಪೂರ್ವಕವಾಗಿ ಶುಭ್ರ ವಸ್ತ್ರಗಳನ್ನು ಟ್ಟು ಕಣ್ಣು ಹಚ್ಚಿಕೊಂಡು ಸಂತೋಷದಿಂದಲೂ, ಗಾಂಧೀಯವರಿಂದಲೂ ಹೋಗುತ್ತಿದ್ದುದನ್ನು ಇಲ್ಲಿ ನೋಡಿದೆನು. ಈ ಕಂದಮ್ಮಗಳಿಗೆ ಹಾಲು ಕೊಡುವುದನ್ನು ತಪ್ಪಿಸಿ ಜೈಲ್ ಊಟವನ್ನು ಕೊಡಬೇಕೆಂದು 'ಹುಕುಂ' ಆಗಿದ್ದಿತು. ಆ ಹುಕುಂ ನಿಲ್ಲಿಸಲು ವಿಚಾರಣೆ ಮಾಡಬೇಕೆಂದು ಡೆಪ್ಯುಟೇಷನ್ ಹೊರಟಿದ್ದರು ಈ ಮಕ್ಕಳು.

ಅವರ ಅರ್ಜಿ ಮಾತುಗಳ ಮಾಡಾರಂತವಲ್ಲ. ಅವರು ಹೋದದ್ದೇ ಅರ್ಜಿಯಾಯಿತು

ಜೈಲ್ ಸೂಪರಿಂಟೆಂಡೆಂಟರಿಗೆ ಆ ಮಾತಿಲ್ಲದ ಅರ್ಜಿಯನ್ನು ನಿರಾಕರಿಸಲಾಗಲಿಲ್ಲ.

....

ಅಲ್ಲಿ ನೋಡಿ. ಅಲ್ಲಿ ಕುಳಿತಿರುವ ಮುದುಕಿಯು ಅನೇಕ ಮಕ್ಕಳ ಮುತ್ತಜ್ಜಿ. ಈ ಮಹಿಳೆಯು ಜೈಲಿಗೆ ಬಂದುದೆ ಒಂದು ಕಥೆ. ಇವಳು ತನ್ನ ಮಗಳೊಡನೆ ಕಬ್ಬಿನ ಗದ್ದೆಯಲ್ಲಿ ಕೂಲಿಯಾಗಿ ಕೆಲಸ ಮಾಡುತ್ತಿದ್ದಳು ಮಾತನಾಡುತ್ತಾ ಗಾಂಧಿಯವರ ಸಮಾಚಾರ ಬಂತು 'ಅವರು ಜೈಲಿನಲ್ಲಿದ್ದಾರೆ. ನಾವು ಹೊರಗಿದ್ದು ಏನು ಫಲ. ನಾವು ಕೆಲಸ ಮಾಡುವುದು ಬೇರೊಬ್ಬರು ಫಲವನ್ನುಣ್ಣುವುದಕ್ಕಾಗಿ ಆದುದರಿಂದ ನಾವೂ ಹೋಗೋಣ ಜೈಲಿಗೆ' ಎಂದಳು ಒಬ್ಬಳು. 'ಆಗಲಿ' ಎಂದಳಿನ್ನೊಬ್ಬಳು ಹೊರಟರು ಆಗಲೇ ಜೈಲಿಗೆ ಸೇರುವುದಕ್ಕೆ.

ತನ್ನ ಹಳ್ಳಿಯ ದೇವಾಲಯಕ್ಕೆ ಹೋದರು. ದೇವರನ್ನು ಮನಸ್ಸಿನಿಂದ ಕೂಡೆಂದು ಬೇಡಿದರು. ಅಲ್ಲಿಂದ ನಡೆದುಕೊಂಡು ಪಟ್ಟಣಕ್ಕೆ ಹೊರಟರು ದಾರಿಯಲ್ಲಿ ಯಾರಾದರೂ ಸಿಕ್ಕಿ, ಬೇಡವೆಂದರೂ ಎಂದು ಅವಸರವಸರವಾಗಿ ಹೇಳಿ ಜಟಕಾಗಾಡಿಯನ್ನು ಗೊತ್ತುಮಾಡಿಕೊಂಡು ಹೋದರು. ಅಲ್ಲಿಂದ ಪರದೇಶಿ ವಸ್ತ್ರದಂಗಡಿಗೆ ಬಂದು ಅಲ್ಲಿ ಪಿಕೆಟಿಂಗ್ ನಡೆಸಿ ಪ್ರವೇಶಿಸಿದರು ಕಾರಾಗೃಹವನ್ನು ಈ ಪಟ್ಟ ಪೂರ್ವಯದ ಹಳ್ಳಿಯ ಮುದುಕಿಯರು.

ಅವರಿಗೆ ವಿಧಿಸಿರುವುದು 6 ತಿಂಗಳು. ಭಾರತ ಸ್ತ್ರೀಯರಲ್ಲಿ ಇಂದು ಉದ್ಭವಿಸಿರುವ ಜಾಗೃತಿಯ ಫಲವೇ ಅವರಾಚರವದ ಕೆಲಸಗಳಲ್ಲವೇ ?

....

ನನಗೆ ನನ್ನ ಭಗಿನಿಯರೂ, ಮಕ್ಕಳೂ ಇಟ್ಟಿದ್ದ ಅಡ್ಡ ಹೆಸರು 'ಗಾಂಧೀ ದೊರೆಸಾನಿ' ಎಂದು. ಪ್ರತಿ ದಿನವೂ ನನ್ನ ಕಾರ್ಯಕ್ರಮದಲ್ಲಿ ಜೈಲಿನ ಒಳಭಾಗದಲ್ಲಿ ಸುತ್ತಲೂ 8 ಬಾರಿ ತಿರುಗಾಡುವುದೊಂದು. ಅದಕ್ಕೆ ನಿರ್ಮಲಗಾಳಿಯನ್ನು ಹೊಂದಲು, ನಾನು ಪಾಶ್ಚಾತ್ಯ ರೀತಿಯಲ್ಲಿ ಖಾದೀ ಬಟ್ಟೆಯನ್ನು ಧರಿಸಿ ಹೊರ ಹೊರಟರೆ ಒಬ್ಬೆಯವರಂತೆ ತೋರುತ್ತಿದ್ದೆನಂತೆ. ಆದರೆ ನನ್ನ ಸುತ್ತಲೂ ಹಗಲಿರುಳೂ ಇರುತ್ತಿದ್ದಿತು ಒಂದು ಹುಡುಗರ ಗುಂಪು. ಅವರಿಗೆ ನಾನು ಪರದೇಶದವಳಂತೆ ತೋರಲಿಲ್ಲ, ತಮ್ಮವಳೆಂದೇ ಭಾವಿಸಿದರು

ನನ್ನ ಬೆರಳೊಂದೊಂದನ್ನು ಒಂದೊಂದು ಮಗುವು ಹಿಡಿದುಕೊಂಡಿರುವಾಗ, ಇನ್ನು ಹಲವರಿಗೆ ಬೆರಳು ಯಾವುದೂ ಸಿಕ್ಕದಿರಲು ಅವರ ಮುಖ ನೋಡಿ 'ಇನ್ನೆರಡು ಕೈಗಳಿದ್ದರೆ ಚೆನ್ನಾಗಿರುತ್ತಲ್ಲ' ಎಂದು ಎಷ್ಟೋ ಬಾರಿ ನಾನು ಹಂಬಲಿಸಿದ್ದೇನೆ.

....

ಗಲ್ಲು !

ನನಗೆ ಆ ಗಲ್ಲು ಗಂಭೀರ ತೋರಿತೆ, ಹಗ್ಗ, ಎಲ್ಲವೂ ಕಂಣಿಗೆ ಈಗಲೂ ಪ್ರತ್ಯಕ್ಷವಾಗಿವೆ. ನಮ್ಮ ಸ್ತ್ರೀ ಕಾರಾಗೃಹವನ್ನು ನಿರ್ಮಿಸಿ ಇನ್ನೂ ಮೂರು ವರ್ಷ ಮಾತ್ರವಾಗಿದೆ. ಅದರೇ ಈ ಗಲ್ಲು ಮರಕ್ಕೆ ಮೂರು ಜನ ಹೆಂಗಸರು ಬಲಿಯಾಗಿದ್ದಾರೆ.

ಗಲ್ಲುಮರವೇನೂ ಗಾಬರಿ ಮಾಡುವ ಆಕಾರದಲ್ಲ. ಅದಿರುವ ಪಾಕಶಾಲೆಯಲ್ಲಿನ ಸಾಲುಸಾಲಾದ ಕಂಭಗಳು ಅದಕ್ಕೆ ದೇವಾಲಯದ ಗಂಭೀರತೆಯನ್ನು ಕೊಡುತ್ತದೆ. ಇದನ್ನು ನೋಡುತ್ತಿರುವಾಗಲೇ ಮನಸ್ಸಿನಲ್ಲಿ ಉದ್ಭವಿಸುವವು ಅನೇಕಾನೇಕ ಅಂಶಗಳು. ಶಾಸ್ತ್ರದಲ್ಲಿ ನಿನ್ನೆ ಇಲ್ಲದ, ಕಂಡ ಕಂಡವರನ್ನು ಬೇಕಾದಷ್ಟು ಇಲ್ಲದೇ

(7ನೇ ಪುಟ ನೋಡಿ)

ವಿವಿಧ ವಾರ್ತಾವಳಿ.

ಅಮೇರಿಕೆಯಿಂದ 'ಮೊದಲನೇ' ಪತ್ರಿಕೆ.

ಅಮೇರಿಕೆಯ ದೇಶದ ವಿಷಯವಾಗಿ ಬಂದ ಮೊದಲನೇ ಪತ್ರಿಕವು ಕ್ರಿ. ಶ. 1522ರಲ್ಲಿ ಪೋರ್ಚುಗೀಸರ ರಾಜಧಾನಿಯಾದ ಲಿಸ್ಬನ್ ನಗರದಲ್ಲಿ ಪ್ರಕಟವಾಯಿತು. ಅದನ್ನು ಈಗ ಒಬ್ಬ ಲಂಡನ್ ವ್ಯಾಪಾರಿಯು 1070 ಪೌ. ಗಳಿಗೆ ಕೊಂಡುಕೊಂಡಿದ್ದಾನೆ.

—೦೦—

ಮೇಜಿಸ್ಟ್ರೇಟರ ಕಡೆಗೆ ಪಾದರಕ್ಷೆ!

ಕಲ್ಕತ್ತೆಯ ಮೇಜಿಸ್ಟ್ರೇಟರ ಕೋರ್ಟಿನೊಳಗೆ ಕಳೆದ ಸೋಮವಾರ ಒಂದು ಮೊಕದ್ದಮೆ ನಡೆಯುತಾಗಿ ಬಂದೂವರೆ ತಿಂಗಳ ಶಿಕ್ಷೆಯ ತೀರ್ಪು ಹೊರಟಾಗ ಸೋನಾಲಾಲ್ ಖತ್ರಿ ಎಂಬ ಕೈದಿಯು ತನ್ನ ಪಾದರಕ್ಷೆಯನ್ನು ತೆಗೆದು ಮೇಜಿಸ್ಟ್ರೇಟರ ಕಡೆಗೆ ಬಿಸುಡಿದನು! ಪಾದರಕ್ಷೆಯು ಮೇಜಿಸ್ಟ್ರೇಟರಿಗೆ ತಗಲಲಿಲ್ಲ.

—೦೦—

ಹೊಟೇಲುಗಳ ಸ್ತ್ರೀಯರು ಹೇಗಿರಬೇಕು!

ಚೀನದ ಸಾರ್ವಜನಿಕ ಹೊಟೇಲುಗಳಲ್ಲಿ ಕೆಲಸಕ್ಕಿರುವ ಸ್ತ್ರೀಯರು ಬಣ್ಣ ಬಣ್ಣದ ವಸ್ತ್ರಗಳನ್ನು ಧರಿಸಬಾರದೆಂದೂ ಆಭರಣಗಳನ್ನಿಟ್ಟುಕೊಳ್ಳಬಾರದೆಂದೂ, ಸೌಂದರ್ಯವರ್ಧಕ ಮುಲಾಮುಗಳನ್ನು ಹಚ್ಚಿಕೊಳ್ಳಬಾರದೆಂದೂ ಅಧಿಕಾರಿಗಳು ಕಟ್ಟಪ್ಪಣೆ ಮಾಡಿರುವರು!

—೦೦—

ಮುಸ್ಲಿಮರಿಗೆ ಕಾಂಗ್ರೆಸ್ ಭಕ್ತಿ.

ನಾಮದಾರ ಶ್ರೀನಿವಾಸ ಶಾಸ್ತ್ರಿಗಳು ಕಳೆದ ವಾರ ಮದ್ರಾಸಿನಲ್ಲಿ ಸಾರ್ವಜನಿಕ ಸಭೆಯೊಂದರಲ್ಲಿ 'ಹಿಂದೂದೇಶದಲ್ಲಿ ದೇಶದ ಏಳಿಗೆಗಾಗಿ ಕಾರ್ಯೋತ್ಸುಕವಾಗಿರುವ ಮಹಾಶಕ್ತಿಗಳಲ್ಲಿ ಕಾಂಗ್ರೆಸ್ಸಿಗೆ ಅಗ್ರಸ್ಥಾನ ಸಲ್ಲುತ್ತದೆ' ಎಂಬ ಅರ್ಥದ ವಾಕ್ಯದಿಂದ ತಮ್ಮ ಭಾಷಣವನ್ನು ಆರಂಭಿಸಿ ಕಾಂಗ್ರೆಸ್ ಧ್ಯೇಯವೇ ಪ್ರಾಮುಖ್ಯವಾಗಿ ಗೋಚರಿಸುತ್ತಿರುವಂತೆ ಕಾಂಗ್ರೆಸಿಗೂ ಜನತೆಗೂ ಬುದ್ಧಿವಾದ ಹೇಳಿರುವರು.

—೦೦—

ಸಿಂಧದಲ್ಲಿ ಭಯಂಕರ ಚಳಿ.

ಅನಿರೀಕ್ಷಿತವಾದ ಭಯಂಕರ ಮಳೆ ಮತ್ತು ಅಸಹನೀಯವಾದ ಭಯಂಕರ ಚಳಿ—ಇವುಗಳಿಂದ ಸಿಂಧ ಪ್ರಾಂತ್ಯವು ಸಂಕಷ್ಟಪಡುತ್ತಿದೆ.

ನವಾಬ್‌ಶಾ ಮತ್ತು ಸಕ್ಕರ್ ಜಿಲ್ಲೆಗಳಲ್ಲಿ ಬೆಳೆಯು ವಿಶೇಷವಾಗಿ ನಾಶವಾಗಿದೆ. ಚಳಿಗೆ ಮುದುಡಿ ಬಿದ್ದ ಪಕ್ಷಿಗಳ ಮೃತ ದೇಹಗಳಿಂದ ಹೊಲಗಳು ತುಂಬಿವೆ!

ನವಾಬ್‌ಶಾ ಜಿಲ್ಲೆಯಲ್ಲಿ ಇಬ್ಬರು ಭಿಕ್ಷುಕರು ಚಳಿಗೆ ಸಿಕ್ಕು ಹೆಪ್ಪುಗಟ್ಟಿ ಮರಣಪಟ್ಟಿರುವರು!

—೦೦—

40,000,000 ಮಂದಿ ನಾಸ್ತಿಕರು

ರಷ್ಯಾ ದೇಶದ ಸೋವಿಯಟ್ ಯೂನಿಯನ್‌ಗೆ ಒಳಪಟ್ಟ ಜನಸಂಖ್ಯೆಯೊಳಗೆ ಇಂದೀಗ 40 ಮಿಲ್ಲಿಯನ್ನಿಗೆ ಕಡಿಮೆಯಿಲ್ಲದಷ್ಟು ಶುದ್ಧ ನಾಸ್ತಿಕರು (ದೇವರಿಲ್ಲವೆಂಬುವವರು) ಇರುವರೆಂದು ತಿಳಿದು ಬಂದಿದೆ. ಯೂರೋಸ್ಲಾವ್ಸ್ಕಿ ಎಂಬ ನಾಸ್ತಿಕ ಸಂಘದ ಮುಂದಾಳುವೊಬ್ಬನ ಹೇಳಿಕೆ ಏನೆಂದರೆ-ಈಗ ಮೇಲೆ ಕೊಟ್ಟಿರುವ ಸಂಖ್ಯೆಯಲ್ಲಿ ಧರ್ಮ ವಿಷಯದಲ್ಲಿ ಶ್ರದ್ಧೆ ಇಲ್ಲ ಎಂಬವರು ಸೇರಿರುವುದಿಲ್ಲ. ನಾಸ್ತಿಕರ ಸಂಘವು ದಿನೇ ದಿನೇ ವೃದ್ಧಿಯಾಗುತ್ತಿದೆ.

—೦೦—

ಐಕ್ಯಕ್ಕೆ ಜಾತಿಯಡ್ಡಿಯೇ?

ಚೀನದ ಜನಸಂಖ್ಯೆಯು ನಮ್ಮ ದೇಶದ ಜನಸಂಖ್ಯೆಯ ಮೂವತ್ತನೇ ಒಂದು ಅಂಶಕ್ಕಿಂತಲೂ ಕಡಿಮೆಯಾಗಿದೆ. ಅಲ್ಲಿ 53 ಜಾತಿಗಳಿವೆ 187 ಬೇರೆ ಬೇರೆ ಉಪಜಾತಿಗಳಿವೆ. ಆದರೂ ಅದು 70 ವರ್ಷಗಳಿಂದ ತನ್ನ ರಾಜ್ಯದ ಆಡಳಿತವನ್ನು ತಾನೇ ನೋಡಿಕೊಳ್ಳುತ್ತಿದೆ. ಅಂದ ಮೇಲೆ ಅನೇಕ ಜಾತಿ ಮತಗಳಿಂದ ಒಡಗೂಡಿದ ಹಿಂದೂ ದೇಶವು ಐಕ್ಯತೆಯ ಅಭಾವದಿಂದ ಸ್ವಾತಂತ್ರ್ಯವನ್ನು ಪಡೆಯಲು ಯೋಗ್ಯವಾಗಲಾರದು ಎಂದು ಹೇಳುವರು. ಎಂಥಹ ತಪ್ಪು ಗ್ರಹಿಕೆಯಿದು ಎಂಬುದು ವ್ಯಕ್ತವಾಗುವುದು.

—೦೦—

"ಕಣ್ಣೀರು ಸುರಿಸುವ ಕ್ರಾಸ್"

ಸ್ಪೇನ್ ದೇಶದಲ್ಲಿರುವ ಅಂಡಲೂಸ್ [illegible]ದಲ್ಲಿ ಒಂದು 'ಕ್ರಾಸ್' ಇದೆ. ಇದರ ಎದುರಿನಲ್ಲಿ ತಲೆಬಾಗಿದ [illegible] ಅನೇಕರಿಗೆ ಅನುಭವವಾಯಿತು.

ಅವರಿಗೆ ಅದನ್ನು ನೋಡುವಾಗ ಎದುರಿಗೆ ಕ್ರಿಸ್ತನು ಕಾಣುವನಂತೆ! ಅವನ ಕಣ್ಣುಗಳಲ್ಲಿ ನೀರೂ ಕಣ್ಣೆಯ ಮೇಲೆ ರಕ್ತವೂ ಹರಿಯುತ್ತಿರುವುದಂತೆ!!

ಹರ್ಷೋನ್ಮತ್ತರಾದ ಅನೇಕ ವ್ಯಕ್ತಿಗಳು ಈ ದೃಶ್ಯವು ಗೋಚರವಾಯಿತೆನ್ನುವರು. ಜನರು ತಂಡೋಪತಂಡವಾಗಿ ನೋಡಲು ಬರುತ್ತಿರುವರು.

—೦೦—

ಅಬಿಸೀನಿಯಕ್ಕೆ ಜಯವಾಗುವುದು.

ಭವಿಷ್ಯವಾದಿನಿಯ ಹೇಳಿಕೆ

ಮೇಡಮ್ ಕ್ರೈಲ್ ಎಂಬ ಲೋಕ ಪ್ರಸಿದ್ಧಳಾದ ಭವಿಷ್ಯವಾದಿಯೊಬ್ಬಳು ಇತ್ತೀಚೆಗೆ ಪತ್ರಿಕೆಯಲ್ಲಿ ಹೀಗೆಂದಿರುವಳು:— ಹಿಂದೂ ಮುಸಲ್ಮಾನರ ಸಮಸ್ಯೆಯು ಬೇಗನೆ ಕೊನೆಗೊಳ್ಳುವುದು. ಹಿಂದೂದೇಶವು ಇನ್ನು ಎರಡು ವರ್ಷಗಳ ತರುವಾಯ ಉತ್ಕರ್ಷದ ಅಭಿವೃದ್ಧಿಯನ್ನು ಹೊಂದುವುದು. ಅಬಿಸೀನಿಯವು ಇಟಲಿಯನ್ನು ಲೋಕವೆಲ್ಲಾ ಬೆರಗುಗೊಳ್ಳುವಂತೆ ಆಕಸ್ಮಿಕವಾಗಿ ಥಟ್ಟನೆ ಸೋಲಿಸುವುದು. ಮುಸಲೋನಿಯು ಇನ್ನೆರಡು ವರ್ಷಗಳೊಳಗೆ ಸ್ವಾಭಾವಿಕವಾದ ಮರಣವನ್ನು ಹೊಂದುವನು ಹಿಟ್ಲರನು ಹತ್ಯಾಕಾರರ ಕತ್ತಿಗೆ ಬಲಿ ಬೀಳುವನು.

—೦೦—

ಅಮೇರಿಕದಲ್ಲಿ ಮಾನವ ಜೀವನದ ಬೆಲೆ

ಜಗತ್ತಿನ ಎಲ್ಲಾ ರಾಜ್ಯಗಳಿಗಿಂತಲೂ ಯುನೈಟೆಡ್ ಸ್ಟೇಟ್ಸಿನಲ್ಲಿ ಖೂನಿ, ಕಳವು, ಮೋಸ ಮೊದಲಾದುವು ಹೆಚ್ಚು. ವರ್ಷದಲ್ಲಿ ಅಪಘಾತದಲ್ಲಿ 1 ಲಕ್ಷ ಸಾವಾಗುತ್ತವೆಂದೂ, 20,000 ಆತ್ಮಹತ್ಯೆ, 12,000 ಕೊಲೆಗಳಾಗುತ್ತವೆಂದೂ ಮೆಟ್ರೊಪಾಲಿಟನ್ ಲೈಫ್ ಇನ್ಷೂರೆನ್ಸ್ ಕಂಪೆನಿಯ ವರದಿಯು ತಿಳಿಸುತ್ತದೆ.

ಯುನೈಟೆಡ್ ಸ್ಟೇಟ್ಸ್ ದೇಶವು ಅತೀ ನಾಗರೀಕವಾದ ದೇಶವೆಂದು ಹೆಸರು. ಅದರಲ್ಲಿ ಮಾನವ ಜೀವನಕ್ಕಿರುವ ಅಲ್ಪ ಬೆಲೆಯನ್ನು ನೋಡಿದರೆ ಪಾಶ್ಚಾತ್ಯ ನಾಗರೀಕತೆಯಲ್ಲಿ ಇಷ್ಟೇನೇ ಬಂಡವಾಳ ಎಂದು ಅನ್ನಿಸುತ್ತದೆ.

—೦೦—

ಇಂಗ್ಲೆಂಡು-ಇಟಲಿ ಯುದ್ಧವಾದೀತೇ?

ಇಟಲಿಯಲ್ಲೆಲ್ಲಾ ಅದೇ ವಾರ್ತೆ.

ಅನೇಕ ವರ್ಷಗಳು ಇಟಲಿಯಲ್ಲಿ ನಿವಾಸಮಾಡುತ್ತಿದ್ದು ಈಗ ತಾನೇ ಮಾತೃಭೂಮಿಗೆ ಹಿಂತಿರುಗಿರುವ ಮಿಸೆಸ್ ಸಿಲ್ವಿಯಾ ಸ್ಯಾಂಡರ್ಸ್ ಎಂಬ ಪ್ರಸಿದ್ಧ ಆಂಗ್ಲ ಮಹಿಳೆಯೊಬ್ಬಳು "ನ್ಯೂಸ್ಟೇಟ್ಸ್ ಮನ್ ಅಂಡ್ ನೇಷನ್" ಎಂಬ ಪತ್ರಿಕೆಯಲ್ಲಿ 'ಇಟಲಿಯ ಅಂತರಿಕ ಸ್ಥಿತಿಯು ಬಹು ಗಂಭೀರವಾಗಿದೆ' ಎಂದು ಬರೆಯುತ್ತಾಳೆ.

ಇಟಲಿಯಲ್ಲಿ ಎಲ್ಲಿ ನೋಡಿದರೂ ಇಂಗ್ಲೆಂಡ್ ಇಟಲಿ ಯುದ್ಧದ ಮಾತೇ ಅಂತೆ.

'ಮುಸಲೋನಿಯು ಹಿಂದು ಮುಂದು ನೋಡದೆ ವರ್ತನೆಯನ್ನವಲಂಬಿಸಿದರೂ ಪ್ರಜೆಗಳು ಅವನನ್ನೇ ಹಿಂಬಾಲಿಸಲು ಸಿದ್ಧರಾಗಲಿರುವರು. ಇಟಲಿಯಲ್ಲಿ ಎಲ್ಲರೂ ಯುದ್ಧೋನ್ಮತ್ತರಾಗಿದ್ದಾರೆ' ಎಂದು ಈ ಮಹಿಳೆಯು ಬರೆಯುತ್ತಾಳೆ.

—೦೦—

ಹರಿಜನರ ಪಾದಪೂಜೆ.

ಶಂಕರಾಚಾರ್ಯರ ಸ್ವೀಕಾರ!

ಕಳೆದ ಶುಕ್ರವಾರ ಕರವೀರ ಪೀಠದ ಶಂಕರಾಚಾರ್ಯರು ಪೂನಾ ನಗರದ ಹರಿಜನ ಕೇರಿಗೆ ಹೋಗಿ ಅಲ್ಲಿನ ಹರಿಜನ ಭಕ್ತಾದಿಗಳಿಂದ ಪಾದಪೂಜೆಯನ್ನು ಸ್ವೀಕರಿಸಿದರು. ಇಂಥ ಪೂಜೆಯು ನಡೆದುದು ಇದೇ ಮೊದಲನೇ ಬಾರಿ.

ಶಂಕರಾಚಾರ್ಯರ ಜೊತೆಯಲ್ಲಿ ಡಾ. ಮೂಂಜೆ, ಮಹಾಶಯ ಕೇಳ್ಕರ್ ಮುಂತಾದ ಪ್ರಮುಖ ಹಿಂದುಗಳನೇಕರು ಹೋಗಿದ್ದರು.

ಹರಿಜನರು ಆಚಾರ್ಯರ ಪಾದ ಪದ್ಮಂಗಳನ್ನು ತೊಳೆದು ಪೂಜಿಸಿದರು.

ಈ ರೀತಿಯಾಗಿ ಯಾವ ಹಿಂದುಗಳಿಂದಲೂ ಸಹ ಮುಟ್ಟಿಸಿಕೊಳ್ಳದಂಥಾ ಆಚಾರ್ಯರವರು ಹರಿಜನರಿಂದ ಪಾದಪೂಜಾದಿಗಳನ್ನು ಸ್ವೀಕರಿಸಿದರು.

ಈ ಪೂಜೆಯು ಹರಿಜನೋದ್ಧಾರಣ ಸಭೆಯವರಿಂದ ನೆರವೇರಿತು. ಇದಕ್ಕಾಗಿ ಹಿಂದೂ ಮಹಾ ಸಭೆಯವರು 250 ರೂಪಾಯಿಗಳನ್ನೂ, ಆರ್ಯ ಸೇವಾಸಂಘದವರು 25 ರೂಪಾಯಿಗಳನ್ನೂ, ಹೀರಾಚಂದರು 25 ರೂಪಾಯಿಗಳನ್ನೂ ಕೊಟ್ಟರು.

—೦೦—

ಕಾಂಗ್ರೆಸ್ ಅಧಿವೇಶನದ ಸಿದ್ಧತೆಗಳು.

ಲಕ್ನೋ ಕಾಂಗ್ರೆಸ್ ಅಧಿವೇಶನವು ಮಾರ್ಚ ತಿಂಗಳ 19ರಿಂದ 26ರ ವರೆಗೆ ನಡೆಯುವದೆಂದು, ಕಾಂಗ್ರೆಸ್ ಅಧ್ಯಕ್ಷರಾದ ರಾಜೇಂದ್ರ ಬಾಬುಗಳು ನಿರ್ಧರಿಸಿರುವಂತೆ,

ಈ ದಿನಗಳನ್ನು ಸಂಯುಕ್ತ ಪ್ರಾಂತ್ಯದ ಕಾಂಗ್ರೆಸ್ ಕೆಲಸಗಾರರು ಒಪ್ಪಿದ್ದಾರೆ. ಏಕೆಂದರೆ ಆಗ ಲಕ್ನೋ ನಗರದ ಹವೆ ಬಹಳ ಉತ್ತಮವಾಗಿರುತ್ತದೆ. ದಕ್ಷಿಣ ದೇಶದವರಿಗೂ ಉತ್ತರ ದೇಶದವರಿಗೂ ಸಹ ಅನುಕೂಲವಾಗಿರುತ್ತದೆ.

ಅಧಿವೇಶನವು ಮೂರೆ ಇಲ್ಲದ ದೊಡ್ಡ ಚಪ್ಪರದಲ್ಲಿ ನಡೆಯುವುದು.

ಅಧಿವೇಶನ ನಡೆಯುವ ಚಪ್ಪರ, ಪ್ರದರ್ಶನ ಶಾಲೆ, ಪ್ರತಿನಿಧಿಗಳ ಬಿಡದಿ ಇವೆಲ್ಲವೂ ಒಂದು ದೊಡ್ಡ ಪ್ರದೇಶದಲ್ಲಿ ನಿರ್ಮಾಣ ಮಾಡಿ, ಆ ಪ್ರದೇಶಕ್ಕೆ ದಿವಂಗತ ಮೋತಿಲಾಲರ ಹೆಸರನ್ನಿಟ್ಟು ಅದನ್ನು ಮೋತಿ ನಗರವೆಂದು ಕರೆಯಲಾಗುವುದು.

ಪ್ರದರ್ಶನದ ವ್ಯವಸ್ಥೆಯು ಅಖಿಲ ಭಾರತ ಚರಕಾ ಸಂಘ ಮತ್ತು ಅಖಿಲ ಭಾರತ ಗ್ರಾಮ ಕೈಗಾರಿಕೆ ಸಂಘದವರಿಗೆ ಸೇರಿದ್ದರಿಂದ, ಇವೆರಡು ಸಂಸ್ಥೆಗಳ ಕಾರ್ಯದರ್ಶಿಗಳಾದ ಮಿ. ಶಂಕರಲಾಲ ಬ್ಯಾಂಕರ್‌ರು ಸಕಲ ಏರ್ಪಾಡುಗಳನ್ನು ಮಾಡಲು ಲಕ್ನೋ ನಗರದಲ್ಲಿ ಮೊಕ್ಕಾಂ ಮಾಡಿಕೊಂಡಿದ್ದಾರೆ.

ಈ ಅಧಿವೇಶನಕ್ಕೆ ಒಂದು ಲಕ್ಷ ರೂಪಾಯಿ ಖರ್ಚಾಗುವುದೆಂದು ಸ್ವಾಗತ ಸಮಿತಿಯವರು ಅಂದಾಜು ಮಾಡಿದ್ದಾರೆ. ಈ ಹಣವನ್ನು ವಸೂಲು ಮಾಡಲು ಆಗಾಗಲೇ ಒಂದು ಸಮಿತಿಯು ನೇಮಕ ಮಾಡಲ್ಪಟ್ಟಿದೆ.

ಇದಲ್ಲದೆ ಮಿ. ಮೋಹನಲಾಲ್ ಸಕ್ಸೇನರು, ಸ್ಪೆಷಲ್ ವಿಸಿಟರ್ಸ್—ಮಾನ್ಯ ಪ್ರೇಕ್ಷಕರಾಗಿ ಮೂರು ತರಹೆ ಎ. ಬಿ. ಸಿ. ಎಂದು 500, 100, ಮತ್ತು 50 ರೂಪಾಯಿಗಳ ಟಿಕೇಟುಗಳನ್ನು ಏರ್ಪಡಿಸಿರುವರು. ಈ ಟಿಕೇಟುಗಳಲ್ಲಿ 1ನೇ ತರಗತಿಯ 30 ಟಿಕೇಟುಗಳು, 2ನೇ ತರಗತಿಯ 100 ಮತ್ತು 3ನೇ ತರಗತಿಯ 250 ಟಿಕೇಟುಗಳನ್ನು ಮಾತ್ರ ಮಾರಲಾಗುವುದೆಂದು ಪ್ರಕಟಿಸಿರುವರು.

—೦೦—

ಸತ್ತವರು ಎದ್ದು ಬಂದು ಮಾತಾಡುವುದು ಇದೆಯೋ?

ಇಲ್ಲವೆಂದು ಎಲ್ಲರೂ ಹೇಳುವರು. ಪ್ರೇತಗಳು ಮೈಮೇಲೆ ಬರುವುದೆಂಬುವನ್ನು ನಾವು ಕಾಣುತ್ತೇವೆ. ಪ್ಲೆಂಚೆಟ್ ಮೊದಲಾದ ಉಪಾಯಗಳಿಂದ ಪ್ರೇತಗಳೊಡನೆ ವಾರ್ತಾಲಾಪ ಬೆಳೆಸುವುದೂ ಇದೆ. ಕೆಲವೊಮ್ಮೆ ಕೆಲವು ಸ್ಥಳಗಳಲ್ಲಿ ಪ್ರೇತಗಳು ಕಣ್ಣ ಮುಂದೆ ನಿಂತು ಚಲಿಸುವಂತೆ ತೋರುವುದೂ ಇದೆಯೆಂದು ಕೆಲವರು ಹೇಳುವರು. ಆದರೆ ಸತ್ತ ಒಬ್ಬ ಮನುಷ್ಯನನ್ನು ದಹನಮಾಡಿ ಕೆಲವು ವರ್ಷಗಳು ಕಳೆದು ಹೋದ ಮೇಲೆ ಪುನಃ ಆ ಮನುಷ್ಯನು ಪೂರ್ವಶರೀರದಲ್ಲಿ ಕಾಣಿಸಿಕೊಂಡು ಬಂಧುಬಳಗದವರೊಡನೆ ಜೀವ ಸಮಾಚಾರ ಕೇಳುವದೆಂದರೆ ಇದು ವರೆಗೆ ಯಾರೂ ಕಾಣದ ಅಥವಾ ಕೇಳದ ಘಟನೆಯಾಗಿದೆ. ಇಂಥ ಆಶ್ಚರ್ಯಕರ ಘಟನೆಯೊಂದು ಪಾಟ್ನಾ ನಗರದ ಪ್ರತಿಷ್ಠಿತ ವ್ಯಕ್ತಿಗಳಾದ ರಾಯಬಹದ್ದೂರ್ ಶ್ರೀ ವಿನೋದವಿಹಾರಿ ಮುಜುಮದಾರ ಯಂ. ಎ., ಬಿ. ಎಲ್., ರವರ ಮನೆಯಲ್ಲಿ ನಡೆದಿದ್ದು ಆ ಸಂಬಂಧ ಅಲಹಾಬಾದಿನ 'ಸರಸ್ವತಿ' ಪತ್ರಿಕೆಯ ಸಂಪಾದಕೀಯ ಟಿಪ್ಪಣಿಯ ಅನುವಾದವನ್ನು ವಾಚಕರ ಮನೋರಂಜನೆಗಾಗಿ ನಾವು ಇಲ್ಲಿ ಕೊಡುತ್ತಿದ್ದೇವೆ.

ರಾಯಬಹದ್ದೂರ್ ಮುಜುಮದಾರರ ಹುಡುಗನು 1924ರಲ್ಲಿ ಸ್ವರ್ಗವಾಸಿಯಾಗಿದ್ದನು. ಅವನಿಗೆ ಒಬ್ಬ ಮಗಳಿದ್ದಳು. ಕಳೆದ ಮಾರ್ಚ ತಿಂಗಳಲ್ಲಿ ಅವಳ ವಿವಾಹ ನಿಶ್ಚಯವಾಗಿತ್ತು. ವಿವಾಹವಾಗುವ ಕಾಲದಲ್ಲಿ ರಾಯಬಹದ್ದೂರರು ಮಾತ್ರವಲ್ಲ, ಅಲ್ಲಿ ಉಪಸ್ಥಿತರಾಗಿದ್ದ ಎಲ್ಲರೂ ಹುಡುಗಿಯೊಂದಿಗೆ ಸ್ವರ್ಗೀಯ ಹುಡುಗನು ಕೂತುಕೊಂಡಿರುವುದನ್ನು ಕಂಡರು. ಅವನ ಸಂಗಡ ಬೇರೆ ಆರು ವ್ಯಕ್ತಿಗಳಿದ್ದರು. ಆದರೆ ಅವರು ಯಾರೆಂದು ಗುರುತಿಸಲಿಕ್ಕೆ ಯಾರಿಂದಲೂ ಆಗಲಿಲ್ಲ. ಪ್ರಾಯಶಃ ಅವರು ಅವನ ಪರಲೋಕದ ಸಂಗಡಿಗರಾಗಿದ್ದಿರಬಹುದು. ಇಷ್ಟು ಮಾತ್ರವಲ್ಲ. ವಿವಾಹ ಮಂಟಪದ ಬೇರೊಂದು ಕಡೆಯಲ್ಲಿ ಕೂತುಕೊಂಡಿದ್ದ ತನ್ನ ತಾಯಿಯನ್ನು ಕಂಡು ಆ ಸ್ವರ್ಗವಾಸಿ ಹುಡುಗನು 'ಅಮ್ಮಾ' ಎಂದು ಬಾಯೆತ್ತಿ ಕರೆದಿದ್ದನು.

'ಉಪಸ್ಥಿತರಾಗಿದ್ದ ಎಲ್ಲರ ಕಣ್ಣುಗಳಿಂದಲೂ ಆನಂದಾಶ್ರುಗಳು ಹರಿದುಹೋಗುವ ರೀತಿಯಲ್ಲಿ ರಾಯಬಹದ್ದೂರರು ಕರುಣೋದ್ಗಾರಕ ಶಬ್ದಗಳಲ್ಲಿ ಈ ಘಟನೆಯ ವರ್ಣನೆ ಮಾಡಿದರು.

'ರಾಯಬಹದ್ದೂರರು ಒಬ್ಬ ಜವಾಬುದಾರಿ ವ್ಯಕ್ತಿಗಳಾಗಿದ್ದಾರೆ. ಅವರ ಅವಿಶ್ವಾಸ ಮಾಡಲಿಕ್ಕಾಗುವುದಿಲ್ಲ. ವೃದ್ಧಾಪ್ಯರೋಗದಿಂದ ಪೀಡಿತರಾದ ಅವರು ಇಂಥ ಕನಸು ಕಾಣುವ ಸಂಭವ ಇರಬಹುದು; ಅವರ ಹೆಂಡತಿಯು ಹಾಗೆಯೇ ಸ್ವಪ್ನ ಕಾಣಬಹುದು. ಆದರೆ ವಿವಾಹ ಮಂಟಪದಲ್ಲಿ ಉಪಸ್ಥಿತರಾಗಿದ್ದ ಎಲ್ಲರಿಗೂ ಆ ಮೃತ ಯುವಕನು ಹೇಗೆ ಕಾಣಿಸಿಕೊಂಡನು. ಅವನು ಮಾಡಿದ ಧ್ವನಿ ಎಲ್ಲರಿಗೂ ಹೇಗೆ ಕೇಳಬಹುದು?—ಎಂಬ ಪ್ರಶ್ನೆಗಳಿಗೆ ಮನೋವೈಜ್ಞಾನಿಕರು ಮತ್ತು ಪರಲೋಕದಲ್ಲಿ ವಿಶ್ವಾಸವನ್ನಿಡುವ ವೈಜ್ಞಾನಿಕರು ವಿಚಾರ ಮಾಡಿ ಉತ್ತರ ಕೊಡಬೇಕಾಗಿದೆ.

ವೈಜ್ಞಾನಿಕರೂ ಮನೋವೈಜ್ಞಾನಿಕರೂ ಅಲ್ಲದೆ ಇತರರು ಕೂಡ ಈ ಸಂಬಂಧ ವಿಚಾರವೂ ಮಾಡಬಹುದಲ್ಲವೇ? ನಾವು ಕೇಳಲಿಕ್ಕೆ ಉತ್ಸುಕರಾಗಿರುವೆವು. 'ಪ್ರ'